ಸ್ಥಾಪನೆ : ೧೮೬೫

ಸಂಸ್ಥಾಪಕರು



ಜೀವನ ಶಿಕ್ಷಣ ಪತ್ರಿಕೆಯ

ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ೧೯೮೯

ಶತಮಾನೋತ್ತರ ಬೆಳ್ಳಿ ಹಬ್ಬ
(ಎಪ್ರಿಲ್ ೧೯೮೯ - ೯೦)
ವರ್ಷ 1915

ಡೆ. ಚನ್ನಬಸಪ್ಪನವರು
(೧೮೩೩-೧೮೮೧)
ನೆನಪು ಸಂಪುಟ

ಕನ್ನಡ ಶಾಲಾ ಪತ್ರಿಕೆ

ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯುಟಿ ಚೆನ್ನಬಸಪ್ಪ ವೃತ್ತ, ರೋವ್ಸ್ ರಸ್ತೆ, ಧಾರವಾಡ - ೮

ಸಿದ್ಧನಾಥ ವಾಚನ ಮಂದಿರ.
ಹೊರಬ. ಜಿ ಧಾರವಾಡ.

ಶಾಲಾಪತ್ರಕ.

ಪುಸ್ತಕ ೪೧. } ಜನೆವರಿ ೧೯೧೩. { ಸಂಚಿಕೆ ೧.

ಸ್ಫುಟವಿಷಯಗಳು.

೧. ಶಿಕ್ಷಣದ ವಿಷಯವಾಗಿ ಸುಧಾರಿಸಿದ ರಾಷ್ಟ್ರದವರು ಏನು ಆಲೋಚನೆ ಮಾಡುತ್ತಿರುವರು?

ಸುಧಾರಣೆಯ ಶಿಖರವನ್ನೇರಿದ ರಾಷ್ಟ್ರಗಳು ಶಿಕ್ಷಣದ ವಿಷಯವಾಗಿ ಆಗಾಗ್ಗೆ ಸಮ್ಮೇಲನಗಳನ್ನು ನೆರೆಯಿಸುತ್ತಿರುವವು; ಆ ಸಮ್ಮೇಲನದಲ್ಲಿ ಶಿಕ್ಷಕರೂ, ಶಿಕ್ಷಣಾಭಿಮಾನಿಗಳೂ, ಮಕ್ಕಳ ತಾಯಿ ತಂದೆಗಳೂ ಮಿಲಿತರಾಗುವರು. ಸ್ಕಾಟಲಂಡದೊಳಗಿನ ಡಂಡೀ ಎಂಬಲ್ಲಿಯ ಬ್ರಿಟಿಶ ಅಸೋಶಿಯೇಶನ್‌ದ ಶಿಕ್ಷಣದ ಶಾಖೆಯವರು ನೆರೆಯಿಸಿದ ಸಮ್ಮೇಲನದಲ್ಲಿ ಆಲೋಚನೆಗಾಗಿ ಇಟ್ಟ ಪ್ರಶ್ನಗಳು ಕೆಳಗೆ ಬರೆದ ಪ್ರಕಾರ ಇರುವವು.

(೧) ಯಾವ ವಿದ್ಯಾರ್ಥಿಗಳಿಗೆ ಯಾವ ವಿಷಯವು ಚನ್ನಾಗಿ ಬಂದೀತೆಂಬದನ್ನು ಅವನ ಸಾಧಾರಣ ಬುದ್ಧಿಯಿಂದ ಅಂದಾಜು ಮಾಡುವದು ಶಕ್ಯವದೆಯೋ ಹ್ಯಾಗೆ? ಶಕ್ಯವಿದ್ದರೆ ಯಾವ ಉಪಾಯಗಳಿಂದ ಮಾಡಬಹುದು?

(೨) ಶಾಲೋಪಯೋಗಿ ಪುಸ್ತಕಗಳ ವಾಚನದಿಂದ ಹುಡುಗರ ದೃಷ್ಟಿಯಮೇಲೆ ಆಗುವ ಪರಿಣಾಮಗಳು.

(೩) ಮಧ್ಯಮತರದ ಸಾಲೆಗಳಲ್ಲಿ ಸಿಗತಕ್ಕ ಶಿಕ್ಷಣದ ಸಲುವಾಗಿ ಉಚ್ಚತರದ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳ ವೇಳೆಯನ್ನು ವೆಚ್ಚ ಮಾಡುವದು ಯೋಗ್ಯವೋ ಹ್ಯಾಗೆ?

(೪) ತಾತ್ವಿಕ ಅಥವಾ ಉದಾರ, ಅಂದರೆ ಬುದ್ಧಿಗೆ ಪ್ರಗಲ್ಭತೆಯನ್ನುಂಟುಮಾಡತಕ್ಕ ಶಿಕ್ಷಣವನ್ನು ಎಷ್ಟರ ಮಟ್ಟಿಗೆ ಕೊಡತಕ್ಕದ್ದು?

(ಆ) ಸರ್ವಸಾಧಾರಣ ಲೌಕಿಕ ವ್ಯವಹಾರಕ್ಕೆ ಬೇಕಾಗುವಂ
ಉದ್ಯೋಗಗಳ ಜ್ಞಾನವನ್ನು ಮಾಡಿಕೊಡಲಿಕ್ಕೆ ಎಂದಿನಿಂ
ಸಾರ್ವಜನಿಕ...

---

೨. ವೈದ್ಯಕೀಯಲ್ಲಿ ರೇಡಿಯಮ್ ಧಾತುವಿನ ಉಪಯೋಗವು.

ಇತ್ತಿತ್ತಲಾಗಿ ರೇಡಿಯಮ್ ಎಂಬದೊಂದ ಧಾತುವು ಶೋಧಿಸಲ್ಪಟ್ಟಿರುವದು. ಅದರ ಅತಿ ಯವಾದ ತೇಜಸ್ಸೂ, ಉಷ್ಣತೆಯೂ ಬಹುಶಃ ಜನರಿಗೆ ಕೇಳಿ ಗೊತ್ತಾಗಿರುವವು. ಅದು ಅಪ ರೂಪವಾಗಿ ದೊರೆಯುವದು. ಹಿಂದಕ್ಕೆ ಟ್ರೇನಿಂಗ ಕಾಲೇಜದಲ್ಲಿ ಶಾಸ್ತ್ರೀ ಯ ಪ್ರಯೋಗಗಳ ದೊಡ್ಡ ಪ್ರದರ್ಶನವಾದಾಗ ಪುಣೆಯ ಫರ್ಗ್ಯೂಸನ್ ಕಾಲೇಜದ ಶಾಸ್ತ್ರೀಯ ವಿಷಯದ ಶಿಕ್ಷಕರು ಅದನ್ನು ತಂದು ಪ್ರೇಕ್ಷ ಕರಿಗೆ ಅದರ ದರ್ಶನಲಾಭವನ್ನು ಮಾಡಿಕೊಟ್ಟಿರುವರು. ಈ ಧಾತುವು ಅತ್ಯಂತ ದುರ್ಲಭವಾಗಿರುವದರಿಂದಲೂ, ಬೆಲೆಯು ಹೆಚ್ಚು ಬೀಳುವ ದರಿಂದಲೂ ಭೂಮಂಡಲದೊಳಗಿನ ನವಕೋಟಿ ನಾರಾಯಣರು ಅದರ ಬಾಹ್ಯ ಸ್ವರೂಪದಲ್ಲಿ ಸೌಂದರ್ಯವು ಇಲ್ಲದೆ ಇದ್ದಾಗ್ಯೂ ಅದನ್ನು ತಮ್ಮ ಶರೀರಕ್ಕೆ ಅಲಂಕಾರವಾಗುವಂತೆ ಮಾಡಿಕೊಳ್ಳುವದರ ಸಲುವಾಗಿ ಆದರಿಸುತ್ತಿದ್ದರು. ಆದರೆ ಅದರ ಪ್ರಖರವಾದ ಉಷ್ಣತೆಯ ಮೂಲಕ ವಾಗಿ ಅವರ ಇಚ್ಛೆಯು ಸಫಲವಾಗುವಂತಿಲ್ಲ. ಆದರೆ ಅನೇಕ ಉಪಾ ಯಗಳಿಂದ ಅದರಲ್ಲಿ ತೀವ್ರತೆಯನ್ನುಂಟುಮಾಡಿ ಅದರ ಕಿರಣಗಳ ಪ್ರವಾ ಹವು ಶರೀರದೊಳಗಿನ ರುಗ್ಣ ಭಾಗದಲ್ಲಿ ಪ್ರವೇಶವಾಗುವಂತೆ ಮಾಡಿ ದರೆ ಶರೀರಕ್ಕೆ ಆಗುತ್ತಿರುವ ನಾನಾ ಪ್ರಕಾರದ ವೇದನೆಗಳು ನಷ್ಟವಾಗು ವವು. ಸಂಧಿವಾತದ ಮೇಲೆ ಇದರ ಪರಿಣಾಮವು ಇನ್ನೂ ಅನಿಶ್ಚಿತವಾ ದದ್ದಿರುವದು. ಆದಾಗ್ಯೂ ಬೇರೆ ಯಾವ ಉಪಾಯಗಳಿಗೂ ಹಣಿಯ ದಂಥ ಅನೇಕ ರೋಗಗಳು ಈ ಧಾತುವಿನ ವಶವಾಗತೊಡಗಿರುವವು. ಈ ವಿಷಯವಾಗಿ ಆಧುನಿಕ ವೈದ್ಯ ಶಾಸ್ತ್ರವನ್ನು ಅರಿತ ಕೆಲವು ವಿದ್ವ ನ್ಮಣಿಗಳು ಕೇವಲ ಪರೋಪಕಾರ ಬುದ್ಧಿಯಿಂದ ಅನೇಕ ಪ್ರಯೋಗ ಗಳನ್ನು ಮಾಡಿ ನೋಡುತ್ತಿರುವರು. ಇದಕ್ಕಾಗಿ ಲಂಡನದಲ್ಲಿಯೂ ಪಾರೀಸದಲ್ಲಿಯೂ ಒಂದೊಂದು ವೈದ್ಯಕೀಯ ಸಂಸ್ಥೆಗಳು ಸ್ಥಾಪಿಸಲ

ಟ್ಟಿರುವವು. ಲಂಡನದ ಸುಸ್ಸೈಯು ಪ್ರಯೋಗಶಾಲೆಯಲ್ಲಿ ಒಂದು ಗ್ರ್ಯಾಮು ಅಂದರೆ ೧೫|| ಗ್ರೇನು ಇದಕ್ಕಿಂತ ತುಸು ಹೆಚ್ಚು ರೇಡಿಯಮ್ ಧಾತುವು ಇರುವದೆಂದು ಹೇಳುತ್ತಾರೆ. ಅಷ್ಟರದೇ ಕಿಮ್ಮತ್ತು ೨,೧೧,೧೨೫ ರೂಪಾಯಿ ಇರುವದು.

---

೩. ಗರಜುಗಳು ಶೋಧಗಳ ತಾಯಿಯು. ಸದ್ಯಕ್ಕೆ ಯುರೋಪಖಂಡದಲ್ಲಿ ಮಹಾ ಯುದ್ಧವು ನಡೆದಿರುವದರಿಂದ ಆಸ್ಟ್ರಿಯಾ ದೇಶದವರಿಗೆ ಚಹಾವು ದೊರೆಯದಂತಾಗಿದೆ. ಈ ಕೊರತೆಯನ್ನು ಬ್ಲ್ಯಾಕ ಬೇರಿ ಎಂಬ ಗಿಡದ ಎಲೆಗಳಿಂದ ದೂರ ಮಾಡಬಹುದೋ ಹ್ಯಾಗೆ ಎಂಬದನ್ನು ಪ್ರಯೋಗಗಳಿಂದ ಕಂಡು ಹಿಡಿಯುವದಕ್ಕಾಗಿ ಅಲ್ಲಿಯ ಹೋಮ ಡಿಪಾರ್ಟಮೆಂಟಿನವರು ಶಾಸ್ತ್ರಜ್ಞರಿಗೆ ಹುಕುಮು ಮಾಡಿದ್ದಾರೆ. ಚಹಾದಿಂದಾಗುವ ಕಾರ್ಯವು ಈ ಬ್ಲಾಕಬೇರಿಯ ಗಿಡದ ಎಲೆಗಳಿಂದ ಹ್ಯಾಗೆ ಆದೀತೆಂದು ಎಷ್ಟೋ ಜನರಿಗೆ ಆಶ್ಚರ್ಯವಾಗಬಹುದು. ಅದರೆ ಚಹಾದಲ್ಲಿರುವ ಟ್ಯಾನಿನ್ ಎಂಬವೊಂದು ದ್ರವ್ಯವು ಈ ಎಲೆಗಳಲ್ಲಿ ಇದ್ದದ್ದು ಕಂಡು ಬರುವದು. ಆದರಿಂದಲೇ ಚಹಾದಿಂದಾಗುವ ಕಾರ್ಯವು ಈ ಎಲೆಗಳಿಂದ ಆಗಬಹುದೆಂಬ ಆಶೆಯು ಉತ್ಪನ್ನವಾಗಿರುವದು. ಈ ಆಶೆಯು ಸಫಲವಾದರೆ ಬ್ಲಾಕಬೇರಿ ಗಿಡದ ಎಲೆಗಳ ಭಾಗ್ಯೋದಯವು ಸದ್ಯದ ಘನಘೋರ ಯುದ್ಧದ ದಾರಿಯನ್ನೇ ನೋಡುತ್ತ ಕುಳಿತಿತ್ತೆಂದು ಅನ್ನಬೇಕಾಗುವದು.

---

೪. ಮಲೇರಿಯಾ. ಸದ್ಯಕ್ಕೆ ಎಷ್ಟೋ ರೋಗಗಳು ಮಲೇರಿಯಾದಿಂದ ಸಂಭವಿಸುವವೆಂದು ಶೋಧದಿಂದ ಗೊತ್ತಾಗಿದೆ. ಈ ಮಲೇರಿಯಾ ರೋಗದ ಬೀಜಗಳಿಗೆ ಒಳ್ಳೇ ಪ್ರಬಲವಾದ ಶತ್ರುವನ್ನು ಹುಡುಕಿ ತೆಗೆದು ಅದರ ಸಹಾಯದಿಂದ ಆ ರೋಗ ಬೀಜಗಳನ್ನು ನಿರ್ಮೂಲ ಮಾಡಬೇಕೆಂದು ಎಷ್ಟೋ ದಿವಸಗಳಿಂದ ಅನೇಕ ಪ್ರಯತ್ನಗಳು ನಡೆದಿರುವವು. ಪೆನ್ಸಿಲ್‌ವ್ಹಾನಿಯಾ ಎಂಬಲ್ಲಿಯ ಆರೋಗ್ಯ ಕಮಿಶನರ ಡಾ. ಸಾಮ್ಯುಯಲ ಜೆ. ಡಿಕ್ಸನ್ ಎಂಬವರು ಈ ಕೆಲಸದಲ್ಲಿ ನೀರಗೋಳಿಗಳ ಉಪಯೋಗವು ಚನ್ನಾಗಿ ಆಗುವದೆಂದು ಶೋಧ ಮಾಡಿರುತ್ತಾರೆ. ಈ ನೀರಗೋಳಿಗಳು ಗುಂಗಾಡಿಗಳ ಜೀವ ಮೊಟ್ಟೆಗಳನು.

ತಿನ್ನುವದರಲ್ಲಿ ಒಳ್ಳೇ ಮಿಗಿಲಾಗಿರುತ್ತವೆ. ಮೀನಗಳಾದರೂ ಈ ಕೆಲಸವನ್ನು ಮಾಡುವವು. ಆದರೆ ಗುಂಗಾಡಿಗಳನ್ನು ನಿರ್ಮೂಲ ಮಾಡುವ ಯುಕ್ತಿಯು ನೀರಗೋಳಿಗಳಷ್ಟು ಅವುಗಳಿಗೆ ಸಾಧಿಸುವದಿಲ್ಲ. ಮೇಲೆ ಹೇಳಿದ ಸದ್ಗೃಹಸ್ಥನು ಹದಿನಾಲ್ಕುನೂರುಚಚ್ಚೌಕು ಫೂಟು ವಿಸ್ತಾರವಾದ ಒಂದು ಕೆರೆಯನ್ನು ಸಿದ್ಧಮಾಡಿ ಅದರಲ್ಲಿ ಹತ್ತು ನೀರಗೋಳಿಗಳನ್ನು ಬಿಡಲು ಅವು ೨೪ ತಾಸುಗಳಲ್ಲಿ ಗುಂಗಾಡಿಗಳ ತತ್ತಿಗಳನ್ನೆಲ್ಲ ತಿಂದು ಬಿಟ್ಟವು.

೫. ಚಹ. ಚಹವು ಚೀನದೇಶದಲ್ಲಿಯೇ ಎಲ್ಲಕ್ಕೂ ಮೊದಲು ಉಪಯೋಗಿಸಲ್ಪಟ್ಟಿತು. ಕನ್‌ಫ್ಯೂಶಿಯಸ ಗ್ರಂಥದಲ್ಲಿ (ಕ್ರಿ. ಪೂ. ೫ ನೆಯ ಶತಕ) ಚಹದಂಥ ಗಿಡದೆಲೆಯ ಗುಣವರ್ಣನೆಯುಂಟು. ಕೆಲವರು ಹೇಳುವದೇನಂದರೆ—ಕ್ರಿ. ಶ. ೫೪೩ ರಲ್ಲಿ ಬೋಧಿಧರ್ಮನೆಂಬ ಒಬ್ಬ ಬೌದ್ಧಸನ್ಯಾಸಿಯು ಹಿಂದುಸ್ಥಾನದಿಂದ ಚೀನಕ್ಕೆ ಹೋಗಿ ಚಹದ ಉಪಯೋಗವನ್ನು ಆರಂಭಿಸಿದನು. ಜಪಾನದಲ್ಲಿಯೂ ಈ ಪ್ರವಾದವಿರುವದು. ೧೬ ನೆಯ ಶತಕಕ್ಕಿಂತ ಮುಂಚೆ ಯುರೋಪಖಂಡದಲ್ಲಿ ಚಹದ ಉಪಯೋಗವು ಗೊತ್ತಿದ್ದಿಲ್ಲ. ಮುಂದೆ ಸಹ ಎಷ್ಟೋ ದಿವಸಗಳವರೆಗೆ ಅದು ವಿಲಾಸಿಗಳಾದ ಶ್ರೀಮಂತರ ವಿಲಾಸ ಸಾಮಗ್ರಿಯಾಗಿಯೇ ಇತ್ತು. ಆಗ ಒಂದು ಪೌಂಡಿನ ಬೆಲೆ ೯೦ ರಿಂದ ೧೫೦ ರೂ. ಗಳವರೆಗೆ ಇತ್ತು.

ಶಾಸ್ತ್ರಜ್ಞರು ಆಸಾಮಪ್ರಾಂತದ ಅಡವಿಯ ಚಹವೇ ಪೃಥ್ವಿಯ ಎಲ್ಲ ದೇಶಗಳ ಚಹದ ಆದಿಯೆಂದು ಹೇಳುತ್ತಾರೆ. ಆಸಾಮದ ಹೊರತು ಬೇರೆ ಯಾವ ದೇಶದಲ್ಲಿಯೂ ಅಡವಿಯ ಚಹದ ಗಿಡಗಳು ಕಂಡುಬರುವದಿಲ್ಲ.

ಚಹದ ಗಿಡಗಳು ೩ ರಿಂದ ೬ ಫೂಟುಗಳ ವರೆಗ ಎತ್ತರವಾಗಿರುವವು. ಅವಕ್ಕೆ ೩|೪ ಇಂಚು ಉದ್ದವಾದ ಎಲೆಗಳಾಗುವವು. ಅಡವಿಯ ಚಹದ ಗಿಡಗಳು ೧೫|೨೦ ಫೂಟು ಎತ್ತರವಾಗಿರುವವು. ಅವುಗಳ ಎಲೆಗಳು ೯ ಇಂಚಿಗಿಂತ ಹೆಚ್ಚು ಉದ್ದವಾಗಿರುವವು.

೧೭೪೦ ನೆಯ ಇಸ್ವಿಯಲ್ಲಿ ಡಾ. ಕಿಡ್ ಎಂಬವನು ಚೀನದ ಚಹದ

ಗಿಡವನ್ನು ಕಲಕತ್ತೆಯ ವನಸ್ಪತಿಶಾಸ್ತ್ರಶೋಧದ ತೋಟದಲ್ಲಿ ಮೊದಲು ಹಚ್ಚಿದನು. ೧೮೧೯ ನೆಯ ಇಸ್ವಿಯ ತರುವಾಯ ಆಸಾಮುದ ಅಡವಿಯ ಚಹವನ್ನು ಮೇಜರ್ ಕ್ರುಸ್ ಎಂಬವನು ಕಂಡು ಹಿಡಿದನು. ೧೮೩೫ ನೆಯ ಇಸ್ವಿಯಲ್ಲಿ ಎಲ್ಲಕ್ಕೂ ಮೊದಲು ಆಸಾಮುದಲ್ಲಿ ಚೀನದ ಚಹದ ಪೈರು ಮಾಡುವದಕ್ಕೆ ಆರಂಭವಾಯಿತು. ಈಗ ಆಸಾಮುದಲ್ಲಿ ೧೦ ಲಕ್ಷ ಬಿಘೆ ಭೂಮಿಯಲ್ಲಿ ಚಹದ ಪೈರಾಗುವದು. ಹಿಂದುಸ್ತಾನದಲ್ಲಿ ಚಹದ ಪೈರಾಗುವ ಒಟ್ಟು ಭೂಮಿಯು ೧೫।೧೬ ಲಕ್ಷ ಬಿಘೆ ಆಗುವದು. ಆಸಾಮುದಲ್ಲಿ ಪ್ರತಿ ಎಕರೆಗೆ ೪೦೦ ಪೌಂಡು ಚಹವು ಉತ್ಪನ್ನವಾಗುವದು. ಹಿಂದುಸ್ತಾನದ ಬೇರೆ ಬೇರೆ ಪ್ರದೇಶಗಳಲ್ಲಿ ಎಕರೆಗೆ ೩೦೦।೩೫೦ ಪೌಂಡು ಚಹವು ಉತ್ಪನ್ನವಾಗುವದು. ಇಡಿ ಹಿಂದುಸ್ತಾನದಲ್ಲಿ ೩೪ ಕೋಟಿ ಪೌಂಡು ಚಹವು ಉತ್ಪನ್ನವಾಗುವದು. ಅದರಲ್ಲಿ ೧೬॥ ಕೋಟಿ ಪೌಂಡು ಚಹವು ಅಸಾಮುವೊಂದರಲ್ಲಿಯೇ ಬೆಳೆಯುವದು.

ಚಹದ ಬೆಳೆಗೆ ಹಾಕಿದ ಬಂಡವಲವೆಲ್ಲ ಬಹುತರ ವಿಲಾಯತಿಯದು. ಆಸಾಮುದ ಚಹದ ತೋಟಗಳಲ್ಲಿ ೮ ಲಕ್ಷ ಕೂಲಿಕಾರರು ಕೆಲಸ ಮಾಡುವರು. ಈಗ ಆಸಾಮುದ ಚಹವು ಕ್ರಮವಾಗಿ ಚೀನಿಚಹವನ್ನು ಪೇಟೆಯಿಂದ ಹೊರದೂಡುತ್ತಿರುವದು.

ಚಹದ ಕೋಮಲವಾದ ಎಲೆಗಳು ವಿಶೇಷಪ್ರಕಾರದ ಉಪಾಯದಿಂದ ಒಣಗಿಸಲ್ಪಟ್ಟಮೇಲೆ ನಾವು ಉಪಯೋಗಿಸುವ ಚಹವಾಗುವದು. ಕೋಮಲವಾದ ಎಲೆಗಳೂ, ಮುಗುಳುಗಳೂ ಯಾವದರಲ್ಲಿ ಹೆಚ್ಚಾಗಿ ಇರುವವೊ ಆ ಚಹವು ಉತ್ತಮವಾಗಿಯೂ ಸುಗಂಧವಾಗಿಯೂ, ರುಚಿಕರವಾಗಿಯೂ ಆಗುವದು.

ಚಹವು ಉತ್ತೇಜಕವಿರುವದರಿಂದ ಅದರಿಂದ ದೇಹದ ಕ್ಷಯವು (ಸವಕಳಿಯು) ತುಂಬಿಬರುವದಿಲ್ಲವೆಂಬದಂತೂ ನಿಶ್ಚಯವೇ. ತಿರುಗಿ ಅದು ಹೆಚ್ಚೇ ಆಗುತ್ತದೆ, ಎಂದು ಡಾಕ್ಟರ್ ಸ್ಮಿಥ್ ಎಂಬವರು ಹೇಳುತ್ತಾರೆ. ಆದರೂ ಅದು ಉಂಡ ಆಹಾರವು ಸುಲಭವಾಗಿ ಅರಗುವದಕ್ಕೆ ಉಪಯೋಗಿಸುತ್ತದೆ. ಚಹವನ್ನು ತೆಗೆದುಕೊಳ್ಳುವದಾದರೆ ತಕ್ಕಷ್ಟು ಸಾರವುಳ್ಳ ಆಹಾರವನ್ನು ತೆಗೆದುಕೊಳ್ಳುವದು ಅವಶ್ಯವು. ಚಹವನ್ನು ಅಧಿಕಪ್ರಮಾಣದಿಂದ ತೆಗೆದುಕೊಂಡರೆ ಅಜೀರ್ಣವೂ ಬದ್ಧ ಕೋಷ್ಠ

ವೂ ಆಗುವವು. ಚಹದೊಳಗಿನ ಟ್ಯಾನಿನ್ ವಿಷವು ಹೃದ್ರೋಗ, ಹಿಸ್ಟೀರಿಯ ಮೊದಲಾದ ವಾಯುರೋಗಗಳು, ಇವುಗಳಿಗೆ ಅತ್ಯಂತ ಅಪಕಾರಕವಿರುವವು. ನಿರ್ಮಲವಾದ ನೀರು ದೊರೆಯುವ ಪ್ರದೇಶಗಳಲ್ಲಿ ಚಹದ ನೀರನ್ನು ತೆಗೆದುಕೊಂಡರೆ ನೀರಿನ ದೋಷವು ಬಹುತರ ಇಲ್ಲದಂತಾಗುವದು. ಊಟದ ಸಮಯದಲ್ಲಿ ಚಹ ಕುಡಿಯುವದು ಯೋಗ್ಯವಲ್ಲ.

---

೬. ನೀತಿಯ ಮಾತುಗಳು.

(೧) ನಿಯಮಿತತನವು ಸದ್ಗುಣಗಳೆಂಬ ಮುತ್ತುಗಳನ್ನು ಪೋಣಿಸುವ ರೇಶಿಮೆಯ ದಾರವೆನ್ನಬಹುದು.

(೨) ಮಿತಿಯುಳ್ಳ ಮನುಷ್ಯನ ಸುಖಗಳು ನಿಯಮಿತವಿರುವದರಿಂದಲವು ಕಡೆಪೂರೈಸುತ್ತವೆ.

(೩) ಶತ್ರುವಿನಿಂದ ಸ್ತೋತ್ರಮಾಡಿಸಿಕೊಳ್ಳುವದು ಭೂಷಣವಾಗಿರುವದು. ಮಿತ್ರನು ಹ್ಯಾಗಿದ್ದರೂ ಸ್ತೋತ್ರಮಾಡುತ್ತಾನೆ.

(೪) ಮೇರೆಯೆಂಬದು ಪ್ರತಿಯೊಂದು ಮಾತಿನಲ್ಲಿಯೂ ಉಂಟು. ಸದ್ಗುಣಗಳು ಮೇರೆದಪ್ಪಿದರೂ ಅಪಾಯಕರವಾಗಿ ಪರಿಣಮಿಸುತ್ತವೆ.

(೫) ನಿಜವಾದ ಅಂತಃಕರಣವುಳ್ಳ ಮನುಷ್ಯನಲ್ಲಿ ಸ್ವದೇಶಾಭಿಮಾನವು ಇದ್ದೇ ಇರುತ್ತದೆ.

(೬) ಜಗತ್ತೆಲ್ಲ ಅಪ್ರಾಮಾಣಿಕವೆಂದು ಅನ್ನುವವನು, ತಾನು ಅಪ್ರಾಮಾಣಿಕನಿರಲೇ ಬೇಕು.

(೭) ಜ್ಞಾನವನ್ನು ಹೊರಗೆಡವುವಂತೆ ಅಜ್ಞಾನವನ್ನು ಮುಚ್ಚಿಕೊಳ್ಳುವದೂ ಜಾಣತನದ ಭಾಗವೇ.

(೮) ಪ್ರತಿಯೊಬ್ಬನು ದೀರ್ಘಾಯುಷಿಯಾಗಬೇಕೆಂದು ಬಯಸುತ್ತಾನೆ. ಆದರೆ ಮುಪ್ಪು ಯಾರಿಗೂ ಬೇಕಾಗಿರುವದಿಲ್ಲ.

(೯) ಸ್ತುತಿಯನ್ನು ಕೇಳಿ ಆನಂದಬಡುವದಕ್ಕೆ ಮುಂಚೆ ಅದನ್ನು ಮಾಡುವವನ ಯೋಗ್ಯತೆಯನ್ನು ಅರಿತುಕೊಳ್ಳಬೇಕು.

(೧೦) ನಿಜವಾದ ಜ್ಞಾನಿಯು ಸದ್ಗುಣಗಳ ಸ್ತೋತ್ರವನ್ನೇ ಮಾಡುತ್ತಾನೆ. ಉಳಿದವರೆಲ್ಲ ಲಕ್ಷ್ಮೀಪುತ್ರರ ಸ್ತೋತ್ರಮಾಡುತ್ತಾರೆ

(೧೧) ಎರಡನೆಯವರಿಂದ ದೊರೆತಜ್ಞಾನದಿಂದ ಮನುಷ್ಯನು ಪಂಡಿತನಾಗಬಹುದು. ಆದರೆ ಜಾಣನಾಗಲಿಕ್ಕೆ ಸ್ವಂತ ಜ್ಞಾನದ ಅವಶ್ಯಕತೆಯುಂಟು.

(೧೨) ಯಾವದೊಂದು ಅಧಿಕಾರವು ವಂಶಪರಂಪರೆಯಾಗಿ ಬಂದರೂ ಅದನ್ನು ದೊರಕಿಸಿದ ಪೂರ್ವಜರ ಗುಣಗಳು ಹಾಗೆ ಬರುವದಿಲ್ಲ.

(೧೩) ಜಾಣನಾದ ಮನುಷ್ಯನು ತನ್ನ ಆಯುಷ್ಯದ ಉತ್ತರಭಾಗದಲ್ಲಿ ಪೂರ್ವದಲ್ಲಿ ಮಾಡಿದ ತಪ್ಪುಗಳನ್ನು ತಿದ್ದಿಕೊಳ್ಳುತ್ತಾನೆ.

(೧೪) ಸತ್ಯವನ್ನಾಡುವದಕ್ಕೆ ಎಂದೂ ಶ್ರಮವಾಗುವದಿಲ್ಲ. ಅದು ನಮ್ಮ ತುಟಿಯಮೇಲೆಯೇ ಇರುತ್ತದೆ. ಅದು ನಮಗೆ ತಿಳಿಯದಂತೆ ಸಹ ಹೊರಬೀಳುತ್ತದೆ.

(೧೫) ಅಯೋಗ್ಯ ಮನುಷ್ಯನಿಗೆ ಬಹುಮಾನದ ಪದವಿಗಳನ್ನು ಕೊಡುವದು, ಹೀನಲೋಹದ ತಗಡಿನಮೇಲೆ ರಾಜಮುದ್ರೆಗಳನ್ನು ಮುದ್ರಿಸಿದಂತೆಯೇ ಸರಿ.

(೧೬) ಉತ್ತಮವಾದ ಹಣ್ಣುಗಳನ್ನು ಎಲ್ಲ ಪಕ್ಷಿಗಳು ಕುಕ್ಕುವಂತೆ ನಿಜವಾದ ವಿದ್ವಾಂಸನನ್ನು ನಿಂದಕರು ಯಾವಾಗಲು ತೊಂದರೆಬಡಿಸುವರು.

(೧೭) ಮಹತ್ವದ ಅಪೇಕ್ಷೆಯಿಂದ ಸಣ್ಣಕೆಲಸಗಳನ್ನು ಮಾಡುವಾಗಲೂ ಬಹಳ ಎಚ್ಚರಪಡಬೇಕು. ಯಾವ ಜಾಣಮನುಷ್ಯನಿಗಾದರೂ ತಾನು ಅಲ್ಪನಾಗಬೇಕೆಂದೆನಿಸುವದಿಲ್ಲ.

(೧೮) ಸುಖವೆಂಬ ಹಣ್ಣು ನಮ್ಮ ತೋಟದಲ್ಲಿಲ್ಲದಿದ್ದರೆ ಅದನ್ನು ಎರಡನೆಯವರ ತೋಟದಿಂದ ತರಲಾಗುವದಿಲ್ಲ. ಅದನ್ನು ಸ್ವತಃ ಕೃಷಿ ಮಾಡಿ ಸಂಪಾದಿಸಬೇಕಾಗುವದು.

(೧೯) ಯಾವದೊಂದು ಖಸ್ಥಗ್ರಹದ ಶೋಧಕ್ಕಿಂತ ಜಗತ್ತಿನೊಳಗಿನ ಸುಖದ ಅಭಿವೃದ್ಧಿಯನ್ನು ಮಾಡುವ ಯಾವದೊಂದು ಶೋಧವು ಹೆಚ್ಚು ಮಹತ್ವದ್ದು.

(೨೦) ಆಸ್ತಿಯಂತೆ ವಿದ್ವತ್ತೆಯನ್ನೂ ಸದ್ಗುಣವನ್ನೂ ವಾರಸದಾರರಿಗೆ ಕೊಡಬಹುದಾಗಿದರೆ ನಾಮಾಂಕಿತ ವಂಶದಲಿ ಹುಟ್ಟುವದು

ಈಶ್ವರನಿಂದ ಕೊಡಲ್ಪಟ್ಟ ಒಂದು ಅಮೂಲ್ಯವಾದ ವರವೆಂದು ಎಣಿಸಲ್ಪಡುತ್ತಿತ್ತು.

(೨೧) ತಮ್ಮ ಕೈಯಿಂದಾದ ತಪ್ಪನ್ನು ಒಪ್ಪಿಕೊಳ್ಳುವದಕ್ಕೆ ಎಂದೂ ನಾಚಬಾರದು; ಯಾಕೆಂದರೆ ತಪ್ಪನ್ನು ಒಪ್ಪುವದರಿಂದ ನಿನ್ನೆಗಿಂತ ಈವೊತ್ತು ಜಾಣನಿರುತ್ತೇವೆಂಬದನ್ನು ಅಪ್ರತ್ಯಕ್ಷ ರೀತಿಯಿಂದ ಸಿದ್ಧ ಮಾಡಿದಂತೆ ಇರುತ್ತದೆ.

(೨೨) ಸದ್ಗುಣಗಳಿಲ್ಲದವನ ದೊಡ್ಡಿಸ್ತನವು ವ್ಯರ್ಥವಾದದ್ದು.

---

೭. ಸಾಲ.

ಸಾಲದ ವಿಷಯವಾಗಿ ಡಾ. ಜಾನ್ಸನ್ನನು ತನ್ನ ಮಿತ್ರನಾದ ಬಾಸ್ವೆಲನಿಗೆ ಕೆಳಗೆ ಕೊಟ್ಟ ಉತ್ತಮವಾದ ವಿಚಾರಗಳನ್ನು ಹೇಳಿದ್ದನಂತೆ.

"ಮಿತ್ರಾ, ನೀನು ಎಂದೂ ನಿನ್ನ ಮನಸಿಗೆ, ಸಾಲವು ಅಪ್ಪರ ಪೂರ್ತೆ ಅಡಚಣಿಯನ್ನು ನೀಗಿಕೊಳ್ಳುವ ಒಂದು ಕ್ಷಣಿಕ ಅನುಕೂಲತೆಯಾಗಿರುವದೆಂದು ತಿಳಕೊಳ್ಳುವ ರೂಢಿಯನ್ನು ಹಚ್ಚಿಕೊಳ್ಳಬೇಡ"

"ಸಾಲವು ದೊಡ್ಡದೊಂದು ವಿಪತ್ತು ಆಗಿರುವದು; ಈ ಮಾತನ್ನು ಯಾವಾಗಲೂ ಲಕ್ಷ್ಯದಲ್ಲಿಟ್ಟು, ಯಾವ ಬಳಿಯಲ್ಲಿಯೂ ಸ್ವಲ್ಪಾದರೂ ಸಾಲ ತೆಗೆಯಲಿಕ್ಕಿಲ್ಲೆಂದು ಎಚ್ಚರ ಪಡತಕ್ಕದ್ದು."

"ಉತ್ಪನ್ನಕ್ಕಿಂತ ಹೆಚ್ಚು ವೆಚ್ಚವನ್ನು ಮಾಡದಿರುವದು, ಖರ್ಚಿನ ಬಾಬುಗಳನ್ನು ಉತ್ಪನ್ನದ ಬಾಬುಗಳಿಗಿಂತ ಕಡಿಮೆ ಇಡುವದು, ವ್ಯವಹಾರದಲ್ಲಿ ಆದಷ್ಟು ಮಟ್ಟಿಗೆ ಮಿತವ್ಯಯದ ಧೋರಣವನ್ನು ಕಾಯುವದು, ಈ ಸಂಗತಿಗಳಿಂದ ಸಾಲ ತೆಗೆಯುವ ಪ್ರಸಂಗವು ಬರುವದಿಲ್ಲ."

"ಸಾಲದಿಂದ ಶಾಂತಿ, ಸುಖ ಸ್ವಾತಂತ್ರ್ಯಗಳು ನಾಶವಾಗುತ್ತವೆ. ಸಾಲಗಾರರಿಗೆ ಈ ಮೂರರ ಅನುಭವವು ಎಂದೂ ದೊರೆಯುವದಿಲ್ಲ."

ಈ ಸಂಗತಿಗಳನ್ನು ತಿಳಕೊಂಡು ಸಾಲದ ವಿಷಯವಾಗಿ ಇರುವ ಮೇಲಿನ ಸೂಚನೆಗಳನ್ನು ಪ್ರತಿಯೊಬ್ಬ ಪ್ರಾಪಂಚಿಕ ಮನುಷ್ಯನು ಯಾವಾಗಲು ಲಕ್ಷ್ಯದಲ್ಲಿಡತಕ್ಕದ್ದು.

ಹಳ್ಳಿಯ ಶಾಲೆಗಳ ಅಭ್ಯಾಸಕ್ರಮ

(ಒಬ್ಬ ಅನುಭವಿಕರಾದ ಶಿಕ್ಷಕರಿಂದ ಬರೆದು ಬಂದದ್ದು)

ಪತ್ರಿಕಾಕರ್ತರೆ,

ನಮ್ಮ ಈ ಮುಂಬಯಿ ಇಲಾಖೆಯೊಳಗಿನ ಹಳ್ಳಿಯ ಶಾಲೆಗಳ ಉಪಯೋಗಕ್ಕಾಗಿ ಹೊಸದಾಗಿ ಗೊತ್ತುಪಡಿಸಿದ ಅಭ್ಯಾಸಕ್ರಮದ ಸಂಬಂಧದ ಈ ಕೆಳಗಿನ ಅಭಿಪ್ರಾಯಗಳಿಗೆ ತಮ್ಮ ಮಾಸ ಪತ್ರಿಕೆಯಲ್ಲಿ ಇಂಬುಗೊಡುವಿರೆಂದು ತುಂಬಾ ನಂಬಿರುವೆನು.

ಸದ್ಯಕ್ಕೆ ಹೊಸದಾಗಿ ಪ್ರಚಾರದಲ್ಲಿ ಬಂದಿರುವ ಹಳ್ಳಿಯ ಶಾಲೆಗಳ ಅಭ್ಯಾಸ ಕ್ರಮವನ್ನು ಗೊತ್ತುಪಡಿಸುವಾಗ ಸರಕಾರೀ ಅಧಿಕಾರಿಗಳು ಈ ಇಲಾಖೆಯಲ್ಲಿ ಕಳೆದ ಇಪ್ಪತ್ತು ವರುಷಗಳಲ್ಲಿ ಆದ ಪ್ರಾಥಮಿಕ ವಿದ್ಯಾಭಿವೃದ್ಧಿಯ ಸ್ಥಿತಿಗತಿಗಳನ್ನು ಅವಲೋಕಿಸಿ, ಸಾಮಾನ್ಯವಾಗಿ ಒಕ್ಕಲಿಗರು ತಮ್ಮ ಮಕ್ಕಳು ತಮ್ಮ ಉದ್ಯೋಗವನ್ನು ಕೈಕೊಳ್ಳುವಷ್ಟು ದೊಡ್ಡವರಾದ ಕೂಡಲೆ ಅವರ ಅಭ್ಯಾಸ ಕ್ರಮವನ್ನು ನಿಲ್ಲಿಸಿ ಬಿಡುವ ರೆಂಬದನ್ನು ಅನುಭವದಿಂದ ಕಂಡು ಹಿಡಿದಿರಬಹುದು. ಇಂತಹ ಜನರ ಮಕ್ಕಳು ಶಾಲೆಯಲ್ಲಿ ಕಲಿಯತಕ್ಕ ಅವಧಿಯು ಸ್ವಲ್ಪವೇ ಇರುವದರಿಂದ ಅಂಥವರ ಸಲುವಾಗಿ ನಿತ್ಯದ ವ್ಯವಹಾರಕ್ಕೆ ಅವಶ್ಯವಿರುವಷ್ಟೇ ಲೇಖನ, ವಾಚನ, ಗಣಿತ ಇವೇ ಮುಖ್ಯ ವಿಷಯಗಳಾಗಿರುವ ಒಂದು ಹೊಸ ಇಯತ್ತಾ ಪತ್ರಿಕೆಯನ್ನು ಅವರು ಗೊತ್ತುಪಡಿಸಬೇಕಾಯಿತು.

ಈ ಬಗೆಯ ಹೊಸ ಸುಧಾರಣೆಯು ಸದುದ್ದೇಶಪೂರ್ವಕವಾದ ದ್ದೆಂಬದೇನೋ ನಿಜ. ಆದರೆ ನೂತನ ಶಿಕ್ಷಣ ಪದ್ಧತಿಯ ದೃಷ್ಟಿಯಿಂದ ನೋಡಿದರೆ ಇದರಲ್ಲಿ ಕೆಲವು ನ್ಯೂನತೆಗಳಿರುವವೆಂಬದು ಸಹಜವಾಗಿ ಕಂಡು ಬರುವದು.

ಹುಡುಗರ ಮಾನಸಿಕ ನೈತಿಕ, ಶಾರೀರಿಕ ಶಕ್ತಿಗಳನ್ನು ವಿಕಾಸ ಗೊಳಿಸುವದೇ ಶಿಕ್ಷಣದ ಮುಖ್ಯೋದ್ದೇಶವೆಂಬದನ್ನು ಸಾಂಪ್ರತ ಕಾಲದ ಪ್ರತಿಯೊಬ್ಬ ವಿದ್ಯಾವಂತನು ಒಪ್ಪಿಕೊಳ್ಳುವನು. ಈ ಧ್ಯೇಯವನ್ನು ಲಕ್ಷ್ಯಕ್ಕೆ ತಂದರೆ ಈಗಿನ ಹಳ್ಳಿಯ ಶಾಲೆಗಳ ಅಭ್ಯಾಸಕ್ರಮವು ಏಕ

ದೇಶೀಯವಾದದ್ದಿರುವದೆಂಬದು ತಾನೇ ಕಂಡು ಬರುವದು. ಈ ಅಭ್ಯಾಸಕ್ರಮದಿಂದ ಹುಡುಗರು ನೈತಿಕ ಹಾಗು ಶಾರೀರಿಕ ಶಕ್ತಿಗಳ ವಿಕಾಸವನ್ನು ಹೊಂದದೆ ಕೇವಲ ಮಾನಸಿಕ ಉನ್ನತಿಯೊಂದನ್ನೇ ಪಡೆಯಲು ಅನುಕೂಲವಾಗಿರುವದು. ಇದರಿಂದ ವಿದ್ಯಾಭ್ಯಾಸದ ಮುಖ್ಯ ಉದ್ದೇಶಗಳನ್ನೇ ದುರ್ಲಕ್ಷಿಸಿದಂತಾಗುವದೆಂದರೆ ಅತಿಶಯೋಕ್ತಿಯಾಗಲಾರದು.

ಹಳ್ಳಿಯ ಶಾಲೆಗೆ ಬರತಕ್ಕ ಹುಡುಗರು ಶಹರಗಳೊಳಗಿನ ಹುಡುಗರಿಗಿಂತ ಸ್ವಾಭಾವಿಕವಾಗಿ ಮಂದದರಿರುವರೆಂದು ಧಾರಾಳವಾಗಿ ಹೇಳಬಹುದಾಗಿದೆ. ಇದಕ್ಕೆ ಅನೇಕ ಕಾರಣಗಳಿರುವವು. ಹಳ್ಳಿಯ ಹುಡುಗರ ಪಾಲಕರು ಅಶಿಕ್ಷಿತರಿರುವರು. ಅವರ ಗೃಹವ್ಯವಸ್ಥೆಯು ತೀರ ಸಾಮಾನ್ಯವಾದದ್ದಿರುವದು; ಅಂಶತಃ ದುಷ್ಪರಿಣಾಮಕರವಾದದ್ದೇ ಎಂದರೂ ಅಡ್ಡಿಯಿಲ್ಲ. ಅವರ ನಿರೀಕ್ಷಣ ಪಥದಲ್ಲಿ ಬಂದಿರುವ ವಸ್ತುಗಳಾದರೂ ಅಷ್ಟೇ ಇರುವವು. ಅವರನ್ನು ತಿದ್ದಿ ಸನ್ಮಾರ್ಗಕ್ಕೆ ಹಚ್ಚುವಂಥ ಪರಿಸ್ಥಿತಿಯಂತೂ ತೀರ ದುರ್ಲಭವು. ಒಟ್ಟಿನ ಮೇಲೆ ಬಹುಶಃ ಶಿಕ್ಷಣ ಕ್ರಮಕ್ಕೆ ವಿರುದ್ಧವಾದ ಪರಿಸ್ಥಿತಿಯೇ ಎಲ್ಲ ಕಡೆಗೆ ಕಂಡು ಬರುವದು.

ಈ ಸ್ವಾಭಾವಿಕವಾದ ಅನನುಕೂಲತೆಗಳ ಮೂಲಕವಾಗಿ ಹಳ್ಳಿಯ ಹುಡುಗರಿಗೆ ಈಗ ಗೊತ್ತುಪಡಿಸಿರುವ ಅಭ್ಯಾಸ ಕ್ರಮವನ್ನು ಸರಿಯಾಗಿ ಮುಗಿಸಲಿಕ್ಕೆ ತಕ್ಕಷ್ಟಕ್ಕಿಂತ ಹೆಚ್ಚು ಕಾಲವು ಹತ್ತುವದೆಂದು ನಾವು ಒಪ್ಪಿಕೊಳ್ಳಲಿಕ್ಕೆಬೇಕು. ಸಾಂಪ್ರತಕ್ಕೆ ಅವರಿಗೆ ಗೊತ್ತುಪಡಿಸಿರುವ ಅಭ್ಯಾಸಕ್ರಮವನ್ನು ಸಾಂಗವಾಗಿ ಮುಗಿಸಲಿಕ್ಕೆ ಹಳ್ಳಿಯ ಹುಡುಗರಿಗೆ ಕನಿಷ್ಠ ೭ ವರುಷಗಳು ಬೇಕಾಗುವವೆಂದು ಹೇಳಬಹುದು.

ಸಾಧಾರಣವಾಗಿ ಹಳ್ಳಿಯ ಹುಡುಗರು ೫ ವರುಷದವರಾದಾಗ ಸಾಲೆಗೆ ಬರುವರೆಂದು ಕಲ್ಪಿಸಿದರೆ ಅವರು ಹನ್ನೊಂದು ವರುಷಗಳವರೆಗೆ ಶಾಲೆಯಲ್ಲಿ ಉಳಿಯಬೇಕಾಗುವದು. ಚನ್ನಾಗಿ ವಿಚಾರಮಾಡಿ ನೋಡಿದರೆ ಇಷ್ಟು ಚಿಕ್ಕ ಬಾಲಕರು ಹೊಲಮನೆಯ ಕೆಲಸಕ್ಕೆ ಉಪಯೋಗ ಬೀಳುತ್ತಿರುವದಿಲ್ಲ. ಒಕ್ಕಲತನದ ಕೆಲಸಕ್ಕೆ ಉಪಯೋಗವಾಗಬೇಕಾದರೆ ಹುಡುಗರು ಕನಿಷ್ಠ ೧೪ ವರುಷದವರಾಗಬೇಕಾಗುವದು. ಅದ

ರಿಂದ ಅವರು ೧೪ ವರುಷಗಳವರೆಗೆ ಶಾಲೆಯಲ್ಲಿ ಕಲಿಯಲಿಕ್ಕೆ ಏನೂ ಅಡ್ಡಿಯಿರುವದಿಲ್ಲವೆಂದು ಗ್ರಹಿಸಬಹುದಾಗಿದೆ.

ಈ ರೀತಿಯಾಗಿ ಹಳ್ಳಿಯ ಹುಡುಗರು ಶಾಲೆಗೆ ಬರತಕ್ಕ ಕಾಲಾವಧಿಯು ಸಾಧಾರಣವಾಗಿ ೭-೮ ವರುಷಗಳಿಗಿಂತ ಹೆಚ್ಚು ಇರುವದೆಂದು ತಿಳಿಯಲಿಕ್ಕೆ ಏನೂ ಅಡ್ಡಿ ಇರುವದಿಲ್ಲ. ಅದರಿಂದ ಅವರ ಅಭ್ಯಾಸಕ್ರಮದಲ್ಲಿ ಕೇವಲ ನಿತ್ಯದ ವ್ಯವಹಾರಕ್ಕೆ ಬೇಕಾಗುವಷ್ಟೇ ಲೇಖನ, ವಾಚನ, ಗಣಿತಗಳಲ್ಲದೆ ಇನ್ನು ಕೆಲವು ಹೆಚ್ಚಿನ ವಿಷಯಗಳನ್ನು ಸೇರಿಸಬಹುದಾಗಿದೆ. ಹಾಗು ಅವುಗಳನ್ನು ಹೆಚ್ಚು ಸಾವಕಾಶವಾಗಿಯೂ ಯೋಗ್ಯವಾಗಿಯೂ ಕಲಿಸಲಿಕ್ಕೆ ಬರುವಂತಿದೆ.

ಒಂದು ಇಯತ್ತೆಗೆ ಗೊತ್ತುಪಡಿಸಿದ ವಿಷಯವನ್ನು ಒಂದು ವರುಷದಲ್ಲಿಯೇ ಕಲಿಸಿ ಮುಗಿಸತಕ್ಕದ್ದೆಂದು ದೇಶಭಾಷೆಯ ಶಾಲೆಗಳ ಶಿಕ್ಷಕರು ಸಾಮಾನ್ಯವಾಗಿ ನಂಬುವರು. ಆದರಿಂದ ಅವರು ಹ್ಯಾಗಾದರೂ ಮಾಡಿ ಅವಸರವಸರದಿಂದ ಒಂದು ಇಯತ್ತೆಯ ಅಭ್ಯಾಸವನ್ನು ಒಂದೇ ವರುಷದಲ್ಲಿ ಮುಗಿಸಿ ಹುಡುಗರನ್ನು ಮೇಲಿನ ಇಯತ್ತೆಗೆ ನುಗಿಸಿ ಬಿಡುವರು. ಪರೀಕ್ಷೆಯನ್ನು ತೆಗೆದುಕೊಳ್ಳುವ ಅಧಿಕಾರಿಗಳಿಂದಲೂ ಇದಕ್ಕೆ ಉತ್ತೇಜನವು ದೊರೆಯುವದು. ಹಳ್ಳಿಯ ಹುಡುಗರು ೯-೧೦ ವರುಷದವರಾದಾಗ ಏನೇನೋ ಕಲಿತು ಶಾಲೆಯನ್ನು ಬಿಡುವರು. ಹಾಗು ಈ ಬಾಲ್ಯದ ಅಲ್ಪ ಅವಧಿಯಲ್ಲಿ ಕಲಿತ ಅಲ್ಪಸ್ವಲ್ಪ ವಿಷಯವನ್ನು ಅವರು ಮುಂದೆ ತುಸು ದಿವಸಗಳಲ್ಲಿಯೇ ಮರೆತುಬಿಡುವರು. ಹಾಗು ಹಳ್ಳಿಯ ಶಾಲೆಯ ಅಭ್ಯಾಸಕ್ರಮವನ್ನು ಮುಗಿಸಿದ ಹುಡುಗನು ಎರಡನೇ ಪಟ್ಟಣದ ಶಾಲೆ (Urban School) ಗೆ ಹೋಗಬೇಕೆಂದು ಬಯಸಿದರೆ ಅವನಿಗೆ ಆ ತರದ ಅನುಕೂಲವಿರುವದಿಲ್ಲ. ಯಾಕೆಂದರೆ, ಇಂತಹ ಪಟ್ಟಣದ ಶಾಲೆಗಳು ಪ್ರತಿಯೊಂದು ತಾಲೂಕಿಗೆ ಇಷ್ಟೇ ಎಂದು ಗೊತ್ತಾಗಿದ್ದು ಅವುಗಳ ಸಂಖ್ಯೆಯು ತೀರ ಕಡಿಮೆಯಿರುವದು. ಮೇಲಾಗಿ ಈಗಿರುವ ಅಭ್ಯಾಸಕ್ರಮದ ರಚನೆಯಿಂದಲೂ ಸಹ ಹಳ್ಳಿಯ ಶಾಲೆಯಲ್ಲಿ ಕಲಿತ ಹುಡುಗರು ಪಟ್ಟಣದ ಶಾಲೆಗೆ ಹೋಗಲಿಕ್ಕೆ ಅನುಕೂಲವಿಲ್ಲದಂತಾಗಿರುವದು.

ಹಳ್ಳಿಯ ಶಾಲೆಗಳ ಮೂರು ಇಯತ್ತೆಗಳ ಅಭ್ಯಾಸಕ್ರಮವನ್ನೆ ಚನ್ನಾಗಿ ನಿರೀಕ್ಷಿಸಿದರೆ ಅದು ಆ ಚಿಕ್ಕ ಬಾಲಕರ ಯೋಗ್ಯತೆಯನ್ನು ಮೀರಿರುವದೆಂಬದು ಗೊತ್ತಾಗದಿರದು. ಅವರು ದೇಶೀ ಜಮಾ ಖರ್ಚಿನ ಪದ್ಧತಿಯನ್ನೂ ಕಿರ್ದಿ ಖತಾವಣಿಗಳನ್ನೂ ಬರೆಯುವ ಕ್ರಮವನ್ನು ಕಲಿಯಬೇಕಾಗಿರುವದು. ಈ ಜಮಾಖರ್ಚಿನ ಪದ್ಧತಿಯು ಅನುಭವ ವುಳ್ಳ ಪ್ರಬುದ್ಧರಿಗೆ ಅಷ್ಟೊಂದು ಕಠಿಣವಿಷಯವಲ್ಲದೆ ಇದ್ದರೂ ಆ ಚಿಕ್ಕ ಮಕ್ಕಳು ಅದನ್ನು ಸುಲಭವಾಗಿ ಕಲಿತುಕೊಳ್ಳಲಾರರು. ಹಳ್ಳಿಯ ಶಾಲೆಗಳ ಹುಡುಗರು ಸುಲಭ ಕಾಗದ ಪತ್ರಗಳನ್ನೂ, ರಿಪೋರ್ಟು ಖರೀದಿಪತ್ರ, ಲಾವಣೀಪತ್ರ, ಮುಂತಾದ ವ್ಯವಹಾರದ ಕಾಗದ ಪತ್ರಗ ಳನ್ನೂ ಸ್ವಭಾಷೆಯಲ್ಲಿ ಬರೆಯಲಿಕ್ಕೆ ಕಲಿಯಬೇಕಾಗುವದು. ಚಿಕ್ಕ ಬಾಲಕರ ಅನುಭವಜ್ಞಾನವೂ ಶಬ್ದಭಾಂಡಾರವೂ ತೀರ ಸ್ವಲ್ಪವೆ ಇರುವದರಿಂದ ಅವರ ಬರಹವು ಕೇವಲ ಶಿಕ್ಷಕನು ಕಲಿಸಿರುವ ಮಾತ ಗಳಷ್ಟೇ ಇರುವ ಒಂದು ನಕಲಿನಂತಾಗುವದು. ಆದ್ದರಿಂದ ಈ ವಿಷ ಗಳು ೯-೧೦ ವರುಷದ ವಯಸ್ಸಿನ ಹುಡುಗರ ಯೋಗ್ಯತೆಯನ್ನೇ ಮೀರಿ ವಿಷಯಗಳಾಗಿರುವವು.

ಒಟ್ಟಿನ ಮೇಲೆ ವಿಚಾರಿಸಿ ನೋಡಲಾಗಿ, ಸದ್ಯಕ್ಕೆ ಅಮಲಿನಲ್ಲಿ ರುವ ಶಿಕ್ಷಣ ಕ್ರಮದಿಂದ ಹಳ್ಳಿಯ ಶಾಲೆಗಳ ವಿದ್ಯಾರ್ಥಿಗಳಿಗೆ ಹೇಳ ಕೊಳ್ಳುವಷ್ಟು ಶಿಕ್ಷಣವು ದೊರಕಲಿಕ್ಕೆ ಆಸ್ಪದವಿರುವದಿಲ್ಲೆಂಬದನ್ನು ನಾವು ಒಪ್ಪಿಕೊಳ್ಳಬೇಕಾಗುವದು. ಈ ಕಾರಣದಿಂದ ಹಳ್ಳಿಯ ಶಾಲೆಗಳ ಅಭ್ಯಾಸಕ್ರಮದಲ್ಲಿ ಕಂಡು ಬರುವ ನ್ಯೂನತೆಗಳನ್ನು ಆದಷ್ಟು ಬೇಗ ಬೈಲಿಗೆ ತರುವದು ಶಿಕ್ಷಣ ಕೆಲಸದಲ್ಲಿ ತೊಡಗಿಕೊಂಡಿರುವ ಶಿಕ್ಷಕ ಆದ್ಯಕರ್ತವ್ಯವಾಗಿದೆ. ಹಳ್ಳಿಯ ಶಾಲೆಗಳ ಶಿಕ್ಷಣವು ಫಲದ್ರೂಪವಾ ಗಬೇಕಾದರೆ, ಈಗಿರುವ ಅಭ್ಯಾಸಕ್ರಮವನ್ನು ಬದಲು ಮಾಡಿ ಆ ಹುಡು ಗರ ಅಭ್ಯಾಸಕ್ರಮದ ಕಾಲಾವಧಿಯನ್ನು ಬೆಳಿಸಬೇಕು ಹಾಗು ಮೇಲಿನ ಇಯತ್ತೆಗಳಿಗಾಗಿ ಸ್ವತಂತ್ರ ವಾಚನಪುಸ್ತಕಗಳನ್ನು ತಯಾರಿ ಸಬೇಕು, ಎಂಬ ಸಂಗತಿಯು ಸರ್ವಸಮ್ಮತವಾದದ್ದಿರುವದು. ಇನ್ನು ಹಳ್ಳಿಯ ಶಾಲೆಗಳ ಅಭ್ಯಾಸಕ್ರಮವು ಹೆಚ್ಚು ಉಪಯುಕ್ತವಾದದ್ದೂ ಯೋಗ್ಯವಾದದ್ದೂ ಆಗಬೇಕಾದರೆ ಅದರಲ್ಲಿ ಅವಶ್ಯವಾಗಿ ಮಾಡಬೇ

ಾಗಿರುವ ಕೆಲವು ಸೂಚನೆಗಳನ್ನು ಹೇಳಿ ವಿಷಯವನ್ನು ಮುಗಿಸು ತೇನು. ಅಂಥ ಸೂಚನೆಗಳು ಯಾವವೆಂದರೆ: —

(೧) ಹಳ್ಳಿಯ ಶಾಲೆಗೆ ಬರತಕ್ಕ ಹುಡುಗರು ಶಾಲೆಯಲ್ಲಿ ಕಲಿಯ ಕ್ಕ ಕಾಲಾವಧಿಯು ಸುಮಾರು ೭-೮ ವರುಷ ಇರತಕ್ಕದ್ದು.

(೨) ಹಳ್ಳಿಯ ಶಾಲೆಗಳಲ್ಲಿ ಬಿನ್ ಇಯತ್ತೆಯನ್ನು ಬಿಟ್ಟು ಐದು ಇಯತ್ತೆಗಳನ್ನು ಕಲಿಸುವ ವ್ಯವಸ್ಥೆಯನ್ನು ಮಾಡಬೇಕು.

(೩) ಈಗಿನ ಇಯತ್ತೆಗಳ ಅಭ್ಯಾಸಕ್ರಮವನ್ನು ಬದಲು ಮಾಡಿ ಅನುಕ್ರಮವಾಗಿ ಒಂದೊಂದು ವರುಷದಲ್ಲಿ ಕಲಿಸಬಹುದಾದಷ್ಟೇ ವಿಷ ಯಗಳನ್ನು ಆಯಾ ಇಯತ್ತೆಗೆ ಗೊತ್ತು ಪಡಿಸಬೇಕು.

(೪) ಮೊದಲಿನ ನಾಲ್ಕು ಇಯತ್ತೆಗಳ ಅಭ್ಯಾಸಕ್ರಮವು ಹಳ್ಳಿಯ ಶಾಲೆಗಳಲ್ಲಿಯೂ ಪಟ್ಟಣದ ಶಾಲೆಗಳಲ್ಲಿಯೂ ಒಂದೇ ಆಗುವಂತೆ ಮಾಡ ಬೇಕು. ಇದರಿಂದ ಹಳ್ಳಿಯ ಶಾಲೆಯ ಅಭ್ಯಾಸಕ್ರಮವನ್ನು ಮುಗಿ ಸಿದ ಹುಡುಗರು ತಮ್ಮ ಇಚ್ಛಾನುಸಾರವಾಗಿ ಪಟ್ಟಣದ ಶಾಲೆಗಳಿಗೆ ಹೋಗಲಿಕ್ಕೆ ಅನುಕೂಲವಾಗುವದು. ಹಳ್ಳಿಯ ಶಾಲೆಯ ಐದನೇ ಇಯತ್ತೆಯ ಅಭ್ಯಾಸವನ್ನಷ್ಟೇ ಅವರ ಸ್ಥಿತಿಗತಿಗಳಿಗನುಗುಣವಾಗಿ ಬದಲು ಮಾಡಬೇಕು.

(೫) ಹಳ್ಳಿಯ ಶಾಲೆಗಳ ಐದನೇ ಇಯತ್ತೆಯ ವಾಚನಪುಸ್ತಕ ದಲ್ಲಿ ಒಕ್ಕಲತನ, ಆಧುನಿಕ ಸುಧಾರಣೆಗಳು, ರಿಪೋರ್ಟುಗಳನ್ನೂ ವ್ಯವ ಹಾರದ ಇತರ ಕಾಗದ ಪತ್ರಗಳನ್ನೂ ಬರೆಯತಕ್ಕ ಮಾದರಿ, ಹಾಗು ಆರೋಗ್ಯ ಶಾಸ್ತ್ರದ ಸಂಬಂಧದ ಕೆಲವು ವಿಚಾರಗಳು ಎಂಬ ವಿಷಯ ಗಳ ವಿವರಣೆಯುಳ್ಳ ಕೆಲ ಕೆಲವು ಪಾಠಗಳನ್ನು ಸೇರಿಸಬೇಕು.

ಮೇಲಿನ ಸೂಚನೆಗಳಿಗೆ ಅನುಗುಣವಾಗಿ ಸುಧಾರಣೆಗಳನ್ನು ಮಾ ಡಿದ ಪಕ್ಷದಲ್ಲಿ ಕಿಂಡರಗಾರ್ಟನ್, ಡ್ರಾಯಿಂಗ, ಡ್ರಿಲ್ಲು, ವಸ್ತುಪಾಠ ಗಳು, ಮುಂತಾದ ನೂತನ ಶಿಕ್ಷಣ ಪದ್ಧತಿಯೊಳಗಿನ ಅತಿ ಮಹತ್ವಾ ದ ವಿಷಯಗಳಿಗೆ ಹಳ್ಳಿಯ ಶಾಲೆಗಳ ಅಭ್ಯಾಸ ಕ್ರಮದಲ್ಲಿ ಯೋಗ್ಯ ಸ್ಥಾನವು ದೊರೆತಂತಾಗುವದು.

ಮೇಲಿನ ವಿಷಯದ ಸಂಬಂಧದಿಂದ ಈ ಭಾಗದಲ್ಲಿರುವ ವ್ಯಾಯಸಾಯ ಬಂಧುಗಳು ತಮಗಿರುವ ಅನುಭವವನ್ನು ಈ ತಮ್ಮ ಶಾಳಾಪತ್ರಿಕದಲ್ಲಿ ಸಾದ್ಯಂತವಾಗಿ ಚರ್ಚಿಸುವರೆಂದು ಪೂರಾ ನಂಬಿರುವ.

ಧಾರವಾಡ. | ತಮ್ಮ,
ತಾ|| ೧೪-೧೨-೧೯೧೪. | " ಶಿಕ್ಷಕ.

ನೀತಿಪಾಠಮಾಲಾ.

ದೂರದೃಷ್ಟಿಯೂ ಮುಂಜಾಗ್ರತೆಯೂ.

೧ನೇ ಪಾಠ.

ಮಕ್ಕಳಿರಾ, ನೀವು ಇರುವೆಗಳು ಬಾಯೊಳಗೆ ಗೋದಿ ಅಕ್ಕಿ ಮುಂತಾದ ಕಾಳುಗಳನ್ನು ಹಿಡಕೊಂಡು ಹೋಗುವದನ್ನು ನೋಡಿರಬಹುದಲ್ಲವೆ? ಅವು ಆ ಕಾಳುಗಳನ್ನು ಏತಕ್ಕೆ ಒಯ್ಯುವವು? ಎಲ್ಲಿಗೆ ಒಯ್ಯುವವು? ಹುತ್ತಿಗೆ ಒಯ್ದು ಏನು ಮಾಡುವವು? ಅದೇಕೆ ಸಂಗ್ರಹಿಸಿಡುವವು?

ಮಳೆಗಾಲದಲ್ಲಿ ಅವುಗಳಿಗೆ ಆಹಾರವು ದೊರೆಯುವದಿಲ್ಲಾದ ಕಾರಣ ಸುಗ್ಗಿಯ ಕಾಲದಲ್ಲಿ ಅವು ತಮ್ಮ ಆಹಾರವನ್ನು ಸಂಗ್ರಹಿಸಿಡುವವು. ಹಾಗೆ ಮಾಡದಿದ್ದರೆ ಮಳೆಗಾಲದಲ್ಲಿ ಅವುಗಳ ಗತಿಯು ಏನಾಗುವದು? ಇರುವೆಯ ಈ ಕಾರ್ಯಗಳಿಂದ ನಾವು ಕಲಿಯತಕ್ಕ ಸಂಗತಿಯು ಯಾವದು?

ಇರುವೆಯು ತನಗೆ ಮಳೆಗಾಲದಲ್ಲಿ ಆಹಾರವು ದೊರೆಯಲಿಕ್ಕಿಲ್ಲೆಂದು ದೂರದೃಷ್ಟಿಯಿಂದ ಆಲೋಚಿಸಿ ಅದಕ್ಕಾಗಿ ಮುಂಜಾಗ್ರತೆಯಿಂದ ಪ್ರಯತ್ನಮಾಡುವದು. ದೂರದೃಷ್ಟಿ ಹಾಗು ಮುಂಜಾಗ್ರತೆ ಈ ಗುಣಗಳನ್ನು ನಾವು ಇರುವೆಯಿಂದ ಕಲಿಯತಕ್ಕದ್ದು. ಆದರೆ ನಾವು ಯಾವ ಯಾವ ಸಂಗತಿಗಳ ಬಗ್ಗೆ ದೂರದೃಷ್ಟಿಯುಳ್ಳವರಾಗಿ ಮುಂಜಾಗ್ರತೆ ಪಡಬೇಕೆಂಬ ಬಗ್ಗೆ ಇಲ್ಲಿ ಆಲೋಚಿಸುವಾ.

೧. ನಿಮ್ಮ ತಾಯಿತಂದೆಗಳು ನಿಮಗೆ ಸಾವಕಾಶವಾಗಿ ನುರಿಸಿ ಉಣ್ಣಲಿಕ್ಕೆ ಹೇಳುವರು; ಜಡಪದಾರ್ಥಗಳನ್ನು ಬಹಳ ಉಣ್ಣಬೇಡಿರೆಂದು

ಹೇಳುವದು; ಚಳಿಮಳಿಗಳಲ್ಲಿ ಓಡಾಡಬೇಡಿರೆಂದು ಆಗಾಗ್ಗೆ ಎಚ್ಚರಗೊಳಿಸುವದು; ರಾತ್ರಿಯಲ್ಲಿ ಬಹಳ ಹೊತ್ತು ಎಚ್ಚತ್ತು ಕೂಡ್ರಬೇಡಿರೆಂದು ತಿಳಿಹೇಳುವದು. ನಾವು ಎಂದಾದರೂ ಮಳೆಯಲ್ಲಿ ತೊಯಿಸಿಕೊಂಡು ಬಂದರೆ ಕೂಡಲೆ ತೊಯ್ದ ಅರಿವೆಗಳನ್ನೆಲ್ಲ ತೆಗಿಸಿ ಬೆಚ್ಚನ್ನ ಅರಿವೆಗಳನ್ನು ಉಡತೊಡಲಿಕ್ಕೆ ಕೊಡುವದು.

ನಿಮ್ಮ ತಾಯಿತಂದೆಗಳು ಹೀಗೆ ಮಾಡುವ ಕಾರಣವೇನು? ನೀವು ಜಡ್ಡಿಗೆ ಬೀಳಬಾರದು. ನೀವು ಆರೋಗ್ಯವಂತರೂ ಸಶಕ್ತರೂ ಆಗಿರಬೇಕು, ಎಂದು ನಿಮ್ಮ ತಾಯಿತಂದೆಗಳು ಅದಷ್ಟು ಮುಂಜಾಗ್ರತೆಯುಳ್ಳವರಾಗಿರುವದು.

ನಿಮ್ಮ ಶರೀರಪ್ರಕೃತಿಯ ವಿಷಯವಾಗಿ ನಿಮ್ಮ ತಾಯಿತಂದೆಗಳು ಈ ಪ್ರಕಾರ ಎಚ್ಚರಪಡಲಿಕ್ಕೆ ಇನ್ನೊಂದು ಕಾರಣವುಂಟು. ಅದು ಯಾವದೆಂದರೆ: —

ಅಕಸ್ಮಾತ್ತಾಗಿ ನಿಮಗೆ ಮಧ್ಯರಾತ್ರಿಯಲ್ಲಿ ಜಡ್ಡಾಯಿತೆಂದು ತಿಳಿಯಿರಿ. ಆಗ ಮನೆಯವರೆಲ್ಲರೂ ಜಾಗರಣೆಯನ್ನು ಮಾಡಬೇಕಾಗುವದು; ನಿಮ್ಮ ಶುಶ್ರೂಷೆಯ ಸಲುವಾಗಿ ಒಬ್ಬರು ನಿಂತುಕೊಳ್ಳಬೇಕಾಗುವದು; ಮತ್ತೊಬ್ಬರು ಕತ್ತಲೆಯೊಳಗೆ ಡಾಕ್ಟರನನ್ನು ಕರೆಯಲಿಕ್ಕೆ ಓಡಿ ಹೋಗಬೇಕಾಗುವದು; ಇನ್ನೊಬ್ಬರು ಔಷಧವನ್ನು ಮಾಡಿಕೊಡುವ ಕೆಲಸದಲ್ಲಿ ತೊಡಗಬೇಕಾಗುವದು. ಈ ಪ್ರಕಾರ ಒಬ್ಬರ ಸಲುವಾಗಿ ಕುಟುಂಬದೊಳಗಿನ ಎಲ್ಲ ಜನರೂ ಕಷ್ಟಪಡಬೇಕಾಗುವದು. ಒಮ್ಮೊಮ್ಮೆ ಆ ರೋಗವು ಓಣಿಯೊಳಗೂ, ಊರೊಳಗೂ ಹಬ್ಬಿ, ಊರ ಜನರೇ ದುಃಖಕ್ಕೆ ಗುರಿಯಾಗುವದು. ಪ್ಲೇಗು, ಮೈಲಿ ಮುಂತಾದ ರೋಗಗಳು ಹೀಗೆ ಊರತುಂಬ ಹಬ್ಬಬಾರದೆಂದು ಸರಕಾರದವರು ಜನರಿಗೆ ಮೈಲಿ ತೆಗೆಯಿಸಿಕೊಳ್ಳಲಿಕ್ಕೂ ಪ್ರತಿಯೊಬ್ಬರಿಗೆ ಮನೆಯನ್ನೂ ಮನೆಯ ಸುತ್ತುಮುತ್ತಲಿನ ಸ್ಥಳವನ್ನೂ ಸ್ವಚ್ಛವಾಗಿಡಲಿಕ್ಕೂ ಹೇಳುವದು. ನಿಮ್ಮ ತಾಯಿತಂದೆಗಳು ನಿಮ್ಮ ಆರೋಗ್ಯತೆಯ ಬಗ್ಗೆ ದೂರದೃಷ್ಟಿಯಿಂದ ಮುಂಜಾಗ್ರತೆಪಡುವಂತೆ ಸರಕಾರದವರು ಪ್ರಜೆಗಳ ಆರೋಗ್ಯತೆಯ ಸಲುವಾಗಿ ಬಹಳ ದೂರದೃಷ್ಟಿಯುಳ್ಳವರಾಗಿ ಮುಂಜಾಗ್ರತೆ ಪಡಬೇಕಾಗುವದು.

ಸಾರಾಂಶ, ನಾವು ನಮ್ಮ ಸ್ವಂತ ಆರೋಗ್ಯತೆಯ ಸಲುವಾಗಿಯೂ, ನಮ್ಮ ಕುಟುಂಬದೊಳಗಿನ ಜನರ ಹಾಗು ನೆರೆಹೊರೆಯ ಜನರ ಆರೋಗ್ಯತೆಯ ಸಲುವಾಗಿಯೂ ದೂರದೃಷ್ಟಿಯುಳ್ಳವರಾಗಿ ಮುಂಜಾಗ್ರತೆಪಡಲಿಕ್ಕೆಬೇಕು.

ಇನ್ನು ಎನೇ ಸಂಗತಿಯನ್ನು ಕುರಿತು ಆಲೋಚಿಸುವಾ. ಅಮೇರಿಕಾಖಂಡದ ಮೂಲ ನಿವಾಸಿಗಳಿಗೆ ಇಂಡಿಯನ್ನರೆಂದು ಅನ್ನುತ್ತಾರೆ. (ಅವರ ಚಿತ್ರಗಳನ್ನು ತೋರಿಸುವದು.) ಅವರು ಬೇಟೆಯಿಂದ ಉಪಜೀವಿಸುವರು. ಅವರು ವಾಸಿಸುವ ಭೂಮಿಯು ಒಳ್ಳೇ ಬೆಳೆಯುಳ್ಳದ್ದಿದ್ದರೂ ಅವರು ಒಕ್ಕಲತನವನ್ನು ಮಾಡುವದಿಲ್ಲ. ಇದರಿಂದ ನೀವು ಅವರು ಸೋಮಾರಿಗಳಿದ್ದರೆಂದು ತಿಳಿಯಬಹುದು. ಹಾಗಲ್ಲ, ಅವರು ನಿತ್ಯದಲ್ಲಿಯೂ ಮುಂಜಾನೆ ಬೆಳಗಿನಲ್ಲಿ ಎದ್ದು ಕಾಡಿಗೆ ಹೋಗಿ ಬೇಟೆಯನ್ನು ಹೊಡೆದು ತಂದು ಹೊಟ್ಟೆಹೊರಕೊಳ್ಳುವರು. ಭೂಮಿಯನ್ನು ಸಾಗು ಮಾಡಿ, ಬೀಜಗಳನ್ನು ಬಿತ್ತಿ, ಬೆಳೆಯು ಬರುವತನಕ ನಿರೀಕ್ಷಣ ಮಾಡುವಷ್ಟು ಮಾನಸಿಕ ಸಾಮರ್ಥ್ಯವು ಅವರಲ್ಲಿ ಇರುವದಿಲ್ಲ. ಆದರಿಂದ ಅವರಿಗೆ ಒಕ್ಕಲತನದ ಕೆಲಸವು ಸೇರುವದಿಲ್ಲ. ಆದರೆ ಒಂದಾನೊಂದು ದಿವಸ ಅವರಿಗೆ ಬೇಟೆಯು ದೊರಕದಿದ್ದಾಗ್ಗೆ, ಆ ದಿವಸವನ್ನು ಅವರು ಉಪವಾಸದಿಂದ ಕಳೆಯಬೇಕಾಗುವದು. ಮುಪ್ಪಿನ ಕಾಲಕ್ಕೆ ಅವರ ಬೇಟೆಯಾಡುವ ಸಾಮರ್ಥ್ಯವು ಕುಗ್ಗುವದು ಅದರಿಂದ ಅವರು ತೀರ ಪರಾಧೀನರಾಗಿ ಇರಬೇಕಾಗುವದು.

ಇಂಗ್ಲಂಡದ ಕಾರಖಾನೆಗಳಲ್ಲಿ ಕೆಲಸ ಮಾಡುವ ಕೂಲಿಕಾರರು ತಮಗೆ ಸಿಗತಕ್ಕ ಕೂಲಿಯ ಹಣದೊಳಗಿಂದ ಪೋಸ್ಟ ಆಫೀಸಿನಲ್ಲಿ ಒಂದು ಪೇನಸು ಕೊಟ್ಟು ಒಂದು ಟಿಕೀಟು ಕೊಂಡು ಒಂದು ಕಾಗದದ ಮೇಲೆ ಹಚ್ಚಿಡುವರು. ಇದೇ ಪ್ರಕಾರ ಹನ್ನೆರಡು ಟಿಕೀಟುಗಳು ಆದವೆಂದರೆ ೧ ಶಿಲಿಂಗನ್ನು ಅವರ ಹೆಸರಿನಿಂದ ಸೇವ್ಹಿಂಗ ಬ್ಯಾಂಕಿನಲ್ಲಿ ಇಡುವರು. ಮತ್ತು ಅದಕ್ಕೆ ಬಡ್ಡಿಯನ್ನು ಕೊಡುವರು. ಈ ರೀತಿಯಿಂದ ಒಬ್ಬೊಬ್ಬ ಕೂಲಿಕಾರನು ಒಂದೊಂದೇ ಪೇನಸಿನಂತೆ ಕೂಡಹಾಕಿ ಬಹಳ ಹಣವನ್ನು ಮಾಡಿಕೊಳ್ಳುತ್ತಾರೆ. ಈ ಹಣವು ಅವರಿಗೆ ಯಾವಾಗ

ಉಪಯೋಗಿಸುವದು? ಜಡ್ಡಿಗೆ ಬಿದ್ದಾಗ ಅಥವಾ ಮುಪ್ಪಿನಲ್ಲಿ ಅವರ ಕೈಯಲ್ಲಿ ಹಣವಿಲ್ಲದಿದ್ದರೆ ಅವರ ಗತಿ ಏನಾಗುವದು?

ಹಾಗಾದರೆ ಅಮೇರಿಕದ ಇಂಡಿಯನ್ನರು, ಇಂಗ್ಲೇಂಡದ ಕೂಲಿಕಾರರು ಇವರೊಳಗೆ ಯಾರು ದೂರದೃಷ್ಟಿಯುಳ್ಳವರು? ಯಾರಿಗೆ ಈ ಲೋಕದಲ್ಲಿ ಹೆಚ್ಚು ಸುಖವಾಗುವದು?

ಮುಂದಿನ ಕಾಲದಲ್ಲಿ ನಮಗೆ ಯಾತರ ಕೊರತೆ ಬಿದ್ದೀತೆಂಬದನ್ನು ನಾವು ಮುಂದಾಗಿಯೇ ಆಲೋಚನೆ ಮಾಡುವದು ತಕ್ಕದ್ದು.

ವಿದ್ಯಾರ್ಥಿಗಳೇ, ನಿಮ್ಮ ಈಗಿನ ಆಯುಷ್ಯದಲ್ಲಿ ನೀವು ಮುಂದಿನ ಆಯುಷ್ಯದ ಸಲುವಾಗಿ ಸಿದ್ಧತೆಯನ್ನು ಮಾಡತಕ್ಕದ್ದಿರುವದು. ಈಗ ನೀವು ದೂರದೃಷ್ಟಿಯಿಂದ ವಿಚಾರಮಾಡಿ ಮುಂದಿನ ಆಯುಷ್ಯವನ್ನು ಸುಖದಿಂದ ಕಳೆಯಲಿಕ್ಕೆ ಯಾವ ಯಾವ ಸಿದ್ಧತೆಯನ್ನು ಮಾಡಿಕೊಳ್ಳುವದರಲ್ಲಿ ಜಾಗ್ರತೆ ಪಡಬೇಕೆಂಬದನ್ನು ಯಾವಾಗಲೂ ಆಲೋಚನೆ ಮಾಡಿರಿ. ಮುಖ್ಯವಾಗಿ ನೀವು ನಿಮ್ಮ ಶರೀರಪ್ರಕೃತಿಯು ಸುದೃಢವಾಗುವಂತೆ ಮಾಡಿಕೊಳ್ಳಿರಿ. ಅದರಿಂದ ನೀವು ಸಶಕ್ತರೂ ಆರೋಗ್ಯವಂತರೂ ಆಗಿ ನಿಮ್ಮ ಕೆಲಸಗಳನ್ನು ಮಾಡಿಕೊಳ್ಳುವದಲ್ಲದೆ ಪರರಿಗೆ ಸಹ ನೆರವಾಗಬಹುದು. ಬುದ್ಧಿಸಾಮರ್ಥ್ಯವನ್ನು ಸಂಪಾದನ ಮಾಡಿರಿ. ಅದರಿಂದ ನೀವು ಅನೇಕ ಸ್ವಪರಹಿತದ ಕೆಲಸಗಳನ್ನು ಮಾಡಲಿಕ್ಕೆ ತಕ್ಕವರಾಗಬಹುದು; ಮತ್ತು ನಿಮಗೆ ಒಳ್ಳೇ ಚಟಗಳು ಹತ್ತಿ ಒಳ್ಳೇ ನಡತೆಯುಳ್ಳವರಾಗುವಂತೆ ಯತ್ನಮಾಡಿರಿ. ಅದರಿಂದ ನೀವು ಮುಂದಿನ ಆಯುಷ್ಯದಲ್ಲಿ ಲೋಕಪ್ರಿಯರಾಗಿ ಕೀರ್ತಿಯನ್ನು ಪಡೆಯುವಿರಿ. ಇಂಥ ಉತ್ಕೃಷ್ಟವಾದ ಚಟಗಳನ್ನು ಹಚ್ಚಿಕೊಳ್ಳುವಲ್ಲಿಯೂ ದೂರದೃಷ್ಟಿಯು ಅವಶ್ಯವಾದದ್ದು. ಅದು ಹ್ಯಾಗೆಂಬದನ್ನು ಮುಂದಿನ ಪಾಠದಲ್ಲಿ ಹೇಳುವೆನು.

ದೂರದೃಷ್ಟಿಯೂ ಮುಂಜಾಗ್ರತೆಯೂ.

೨ನೇ ಪಾಠ.

ಹಿಂದಿನ ಪಾಠದಲ್ಲಿ ನಿಮಗೆ ಎರಡು ಸಂಗತಿಗಳ ಬಗ್ಗೆ ಮುಂಜಾಗ್ರತೆಪಡಬೇಕೆಂದು ಹೇಳಿದ್ದೇನೆ. ಆ ಸಂಗತಿಗಳು ಯಾವವು? ಹೇಳಿರಿ.

(೧) ಆರೋಗ್ಯತೆಯ ಸಲುವಾಗಿಯೂ,

(೨) ಮುಂದಿನ ಕಾಲದಲ್ಲಿ ಯಾವ ತರದ ಕೊರತೆಯೂ ಬೀಳಬಾರದೆಂದೂ ನಾವು ದೂರದೃಷ್ಟಿಯುಳ್ಳವರೂ ಮುಂಜಾಗ್ರತೆಯುಳ್ಳವರೂ ಆಗಿರಲಿಕ್ಕೆಬೇಕು. ನಾವು ನಮ್ಮ ಆಯುಷ್ಯವನ್ನು ಸುಖದಿಂದ ಕಳೆಯಬೇಕಾದರೆ, ಇನ್ನೂ ಎಷ್ಟೋ ಸಂಗತಿಗಳ ಬಗ್ಗೆ ದೂರದೃಷ್ಟಿಯುಳ್ಳವರಾಗಲಿಕ್ಕೆಬೇಕು.

ಒಬ್ಬ ವಿದ್ಯಾರ್ಥಿಯು ಇದ್ದನು; ಅವನ ಬುದ್ಧಿಯು ಒಳ್ಳೇ ಚುರುಕಾಗಿತ್ತು. ಪ್ರತಿಯೊಂದು ವಿಷಯವನ್ನು ಅವನು ಚನ್ನಾಗಿ ವಿಚಾರ ಮಾಡಿ ಕಲಿಯುತ್ತಿದ್ದನು; ಕೇಳಿದ ಪ್ರಶ್ನಕ್ಕೆ ಸಮಂಜಸ ಉತ್ತರವನ್ನು ಕೊಡುತ್ತಿದ್ದನು. ಆದರೆ ಅವನು ಕೂತಲ್ಲಿಯೇ ವಿಚಾರ ಮಾಡುತ್ತ ಕೂತುಬಿಡುತ್ತಿದ್ದನು. ಯಾರಾದರೂ ಮಾತಾಡಿಸಿದರೆ ಅವರ ಸಂಗಡಲೇ ತಾಸು ತಾಸು, ಎರಡೆರಡು ತಾಸು ಮಾತಾಡುತ್ತ ಕುಳಿತುಬಿಡುತ್ತಿದ್ದನು. ಕೈಯೊಳಗಿನ ಜೀನಸುಗಳನ್ನು ಮಾತಿನ ಭರದಲ್ಲಿ ಅಲ್ಲಿಂದಲ್ಲಿಯೇ ಮರೆತು ಬಿಡುವನು. ಒಮ್ಮೆ ಮಾತಾಡಲಿಕ್ಕೆ ಪ್ರಾರಂಭಿಸಿದನೆಂದರೆ ಕಾಲನಿಯಮವು ಉಳಿಯುತ್ತಿದ್ದಿಲ್ಲ. ಅದರಿಂದ ಅವನು ಹೊತ್ತಿಗೆ ಊಟ ಮಾಡುತ್ತಿದ್ದಿಲ್ಲ. ಹೊತ್ತಿಗೆ ಸಾಲೆಗೆ ಬರುತ್ತಿದ್ದಿಲ್ಲ. ಈ ಕಾರಣಗಳ ಮೂಲಕವಾಗಿ ಅವನು ಬುದ್ಧಿವಂತನಾದಾಗ್ಯೂ ಶಿಕ್ಷಕರಿಂದ ಆಗಾಗ್ಗೆ ಬಯ್ಯಿಸಿಕೊಳ್ಳುತ್ತಿದ್ದನು.

ಹೀಗಿರುತ್ತಿರಲು, ಅವನ ಪರೀಕ್ಷೆಯು ಬಂತು; ಅಂಕಗಣಿತದ ಪ್ರಶ್ನದ ಕಾಗದವು ಕೊಡಲ್ಪಟ್ಟಿತು. ಅದರಲ್ಲಿ ಎಲ್ಲಕ್ಕೂ ಮೊದಲನೇ ಪ್ರಶ್ನವು ಒಳ್ಳೇ ಕಠಿಣವಾದದ್ದಿತ್ತು. ಮುಂದಿನ ಎಷ್ಟೋ ಪ್ರಶ್ನಗಳು ಅದಕ್ಕೂ ಸುಲಭವಾದವುಗಳು ಇದ್ದವು. ಆದರೆ ಆ ವಿದ್ಯಾರ್ಥಿಯು ಪ್ರಶ್ನದ ಕಾಗದವನ್ನು ಕೈಯಲ್ಲಿ ತಕ್ಕೊಂಡು ಮೊದಲನೇ ಪ್ರಶ್ನವನ್ನು ಓದಿ ಅದನ್ನೇ ಬಿಡಿಸಲಿಕ್ಕೆ ಪ್ರಾರಂಭಿಸಿದನು. ಅದು ಕಠಿಣವಾಗಿದ್ದದರಿಂದ ಬಹಳ ಹೊತ್ತಿನವರೆಗೆ ಅದೊಂದೇ ಉದಾಹರಣವನ್ನು ಬಿಡಿಸಲಿಕ್ಕೆ ಪ್ರಯತ್ನ ಮಾಡಿದನು. ಇಡೀ ಮೂರು ತಾಸು ಅವಧಿಯು ಮುಗಿಯಲಿಕ್ಕೆ ಬಂತು; ಆದರೆ ಇವನ ಲೆಖ್ಖವು ಮುಗಿಯಲಿಲ್ಲ. ಉಳಿದ ಪ್ರಶ್ನಗಳನ್ನಂತೂ ಅವನು ಒಮ್ಮೆ ಸಹ ಓದಿ ನೋಡಲಿಲ್ಲ. ಅದೊಂದೇ

ಉದಾಹರಣವನ್ನು ಮುಕ್ಕಾಲು ಪಾಲುಮಾಡಿ ಉತ್ತರದ ಕಾಗದವನ್ನು ಕೊಟ್ಟು ಮನೆಗೆ ಬಂದನು. ಅದರಿಂದ ಅವನು ಗಣಿತದಲ್ಲಿ ನಾಪಾಸಾದನು. ಅವನಿಗಿಂತ ದಡ್ಡ ಹುಡುಗರು ಎಷ್ಟೋ ಉದಾಹರಣಗಳನ್ನು ಬಿಡಿಸಿ ಪಾಸಾದರು. ಆ ಹುಡುಗನ ಯಾವ ಕೆಟ್ಟ ರೂಢಿಗಳ ಮೂಲಕವಾಗಿ ಅವನಿಗೆ ಈ ಗತಿಯಾಯಿತು ಹೇಳಬಲ್ಲಿರಾ?

ದೂರದೃಷ್ಟಿಯು ಇಲ್ಲದ್ದರಿಂದಲೇ ಆ ವಿದ್ಯಾರ್ಥಿಯು ನಾಪಾಸಾದನು. ಮಾತಾಡುವ ಸಂಬಂಧದಿಂದಲೂ, ವ್ಯವಸ್ಥೆಯಿಂದ ನಡೆಯುವ ಸಂಬಂಧದಿಂದಲೂ, ಹೊತ್ತುಹೊತ್ತಿಗೆ ಕೆಲಸಗಳನ್ನು ಮಾಡುವ ಸಂಬಂಧದಿಂದಲೂ, ಕೊಟ್ಟ ವಚನಗಳನ್ನು ಪಾಲಿಸುವ ಸಂಬಂಧದಿಂದಲೂ, ನಾವು ಒಳ್ಳೇ ಚಟಗಳನ್ನು ಹಚ್ಚಿಕೊಳ್ಳಲಿಕ್ಕೆ ಬೇಕು. ಇಂಥ ಚಟಗಳನ್ನು ಹಚ್ಚಿಕೊಳ್ಳುವ ಬಗ್ಗೆ ನಾವು ಬಹು ದೂರದೃಷ್ಟಿಯುಳ್ಳವರಾಗಲಿಕ್ಕೆಬೇಕು.

ನಿಮಗೆ ನಡೆಯುವ ಚಟವು ಹ್ಯಾಗೆ ಹತ್ತಿತು? ನಿಮಗೆ ಕಾಲುಗಳ ಉಪಯೋಗವನ್ನು ಮಾಡಲಿಕ್ಕೆ ಬರುವ ಮೊದಲು ಹೊಟ್ಟೆಯನ್ನು ಹೊಸೆಯುತ್ತಿದ್ದಿರಿ; ಮುಂದೆ ಕ್ರಮವಾಗಿ ಅಂಬೇಗಾಲು ಹಚ್ಚಹತ್ತಿದಿರಿ. ಆ ಬಳಿಕ ಕ್ರಮಕ್ರಮವಾಗಿ ದಟ್ಟಿಡಿಗಳನ್ನಿಕ್ಕುತ್ತ ನಡೆಯಲಿಕ್ಕೆ ಕಲಿತಿರಿ. ಈಗ ನೀವೆಲ್ಲರೂ ವಿಚಾರ ಮಾಡದೆ ಬೇಕಾದಾಗ ಸಾವಕಾಶವಾಗಿಯೂ ಬೇಕಾದಾಗ ತೀವ್ರವಾಗಿಯೂ, ನಡೆಯುವಿರಿ. ಇದೇ ಪ್ರಕಾರ ನಿಮಗೆ ಸ್ವಚ್ಛತ್ವದ ಚಟ, ಓದುವ ಚಟ, ಬರೆಯುವ ಚಟ ಇವೇ ಮುಂತಾದ ಉಪಯುಕ್ತ ಚಟಗಳು ಹತ್ತಿರುವವು.

ಕೆಟ್ಟ ಚಟಗಳಾದರೂ ಇದೇ ಪ್ರಕಾರ ಹತ್ತುವವು. ಕೆಲಸಗಳನ್ನು ಆಗಿಂದಾಗಲೇ ಮಾಡುತ್ತ ಹೋಗುವದರ ಬದಲು, ಒಂದುಸಾರೆ ಇಂದಿನ ಕೆಲಸವನ್ನು ನಾಳಿಗೆ ಹಾಕುವೆವು. ಮುಂದೆ ಇದೇ ಪ್ರಕಾರ ಎರಡು ಸಾರೆ, ಮೂರುಸಾರೆ ಮಾಡಿದೆವೆಂದರೆ ನಮ್ಮಿಂದ ಕೆಲಸವೇನೂ ಆಗದಂತೆ ಆಗುವದು. ಆಗ ಜನರು ನಮಗೆ ಸೋಮಾರಿಯೆಂದು ಅನ್ನುವರು. ಇದರಂತೆ, ಒದರಿ ಮಾತಾಡುವ ಚಟವು. ತೀರ ಸಮೀಪದಲ್ಲಿರುವ ಮನುಷ್ಯರ ಸಂಗಡ ಮಾತಾಡುವದಿದ್ದಾಗ ಸಹ ಕೆಲವರು ಒಳ್ಳೇ ಒದರಿ ಮಾ

ತಾಡುತ್ತಿರುತ್ತಾರೆ. ಅವರಿಗೆ ಅದೊಂದು ಚಟವೇ ಹತ್ತಿಬಿಟ್ಟಿರುವದು. ಹೀಗೆ ಒದರಿ ಮಾತಾಡುವವರು ಎಂದಾದರೂ ನಾಲ್ಕುಜನ ತಿಳುವಳಿಕೆಯುಳ್ಳವರ ಸಂಗಡ ಕುಳಿತಾಗ ಹೀಗೆ ಒದರಿಮಾತಾಡಿದರೆ, ಅವರು "ಎಂಥ ಕಾಡುಮನುಷ್ಯನಿವನು" ಎಂದು ತಿರಸ್ಕಾರಮಾಡುವರು. ಮನೆಯಲ್ಲಿ ಪ್ರತಿಯೊಂದು ಜೀನಸಿಗೆ ಒಂದೊಂದು ಸ್ಥಳವು ಗೊತ್ತಾದದ್ದು ಇರಲಿಕ್ಕೆಬೇಕು. ಉಪಯೋಗವು ತೀರಿದ ಕೂಡಲೆ ಆ ಜೀನಸನ್ನು ಪುನಃ ಅದರ ಸ್ಥಳಕ್ಕೆ ಒಯ್ದು ಇಡಲಿಕ್ಕೆಬೇಕು. ಎಷ್ಟೋ ಜನರು ಉಪಯೋಗಿಸಿದ ಜೀನಸುಗಳನ್ನು ಪುನಃ ಅವುಗಳ ಸ್ಥಳದಲ್ಲಿ ಒಯ್ದು ಇಡುವದಿಲ್ಲ. ಹೀಗೆಯೇ ಅನೇಕಸಾರೆ ನಡೆಯುವದರಿಂದ ಅವರಲ್ಲಿ ಅವ್ಯವಸ್ಥೆಯ ಚಟವು ನೆಲೆಗೊಳ್ಳುವದು. ಅದರಿಂದ ಅವರ ಮನೆಯು ಹಳೇ ಬಣಜಿಗರ ಅಂಗಡಿಯ ಸ್ವರೂಪವನ್ನು ಹೊಂದುವದು. ಅದರಿಂದ ಜನರು ಅವರಿಗೆ ಅವ್ಯವಸ್ಥಿತ ಮನುಷ್ಯರೆಂದು ಹೆಸರಿಡುವರು.

ಈ ಮೇರೆಗೆ ಒಳ್ಳೇ ಚಟಗಳಾಗಲಿ, ಕೆಟ್ಟ ಚಟಗಳಾಗಲಿ ಹತ್ತುವಾಗ ನಾವು ಬಹಳ ಎಚ್ಚರದಿಂದ ಇರಲಿಕ್ಕೆಬೇಕು.

ಹಿಂದಕ್ಕೆ ಒಬ್ಬ ಮನುಷ್ಯನನ್ನು ಬಹುಕಾಲವವರೆಗೆ ಕತ್ತಲೆಕೋಣೆಯಲ್ಲಿ ಸೆರೆಯಲ್ಲಿಟ್ಟಿದ್ದರಂತೆ. ಕಾಲಾಂತರದಿಂದ ಅವನನ್ನು ಹೊರಗೆ ತೆಗೆಯಲು ಅವನು ಹೊರಗೆ ಬರಲಿಕ್ಕೆ ಒಪ್ಪಿಕೊಳ್ಳದೆ "ನಾನು ಈ ಕತ್ತಲೆಯ ಕೋಣೆಯಲ್ಲಿಯೇ ಇದ್ದರೆ ನನ್ನ ಮನಸಿಗೆ ಸೊಗಸಾಗುವದು." ಎಂದು ಹೇಳಿ, ಪ್ರಾಣಾಂತ್ಯದ ವರೆಗೆ ಅಲ್ಲಿಯೇ ಉಳಿದನಂತೆ. ಇದರ ತಾತ್ಪರ್ಯವನ್ನು ಲಕ್ಷದಲ್ಲಿಟ್ಟು, ಒಳ್ಳೇ ಚಟಗಳನ್ನು ಹಚ್ಚಿಕೊಳ್ಳಲಿಕ್ಕೆ ಯತ್ನಮಾಡಲಿಕ್ಕೆಬೇಕು.

ನಮ್ಮ ಆಯುಷ್ಯವು ಸುಖದಿಂದ ಹೋಗುವದಕ್ಕಾಗಿ, ನಾವು ನಮ್ಮ ಸಲುವಾಗಿ ಒಳ್ಳೇಚಟಗಳ ಒಂದು ಇಮಾರತಿಯನ್ನು ಕಟ್ಟಲು ಚಿಕ್ಕಂದಿನಿಂದಲೇ ಪ್ರಾರಂಭಿಸತಕ್ಕದ್ದು. ಬೆಳಗಿನಲ್ಲಿ ಬೇಗನೆ ಏಳುವದು, ಹೊತ್ತುಹೊತ್ತಿಗೆ ಕೆಲಸಗಳನ್ನು ಮಾಡುವದು, ಆಪ್ತಮಿತ್ರರಿಗೆ ಭೆಟ್ಟಿಯಾಗಿ ಒಳ್ಳೇ ಮಾತಾಡುವದು, ಇವೇ ಮೊದಲಾದವುಗಳು ಆ ಇಮಾರತಿಯನ್ನು ಕಟ್ಟಲಿಕ್ಕೆ ಬೇಕಾಗುವ ನಾನಾಪ್ರಕಾರದ ಸಾಧನಗಳಾಗಿರು

ವವು. ಈ ಸಾಧನಗಳಿಂದ ಕ್ಷಣಶಃ ನೀವು ನಿಮ್ಮ ಸುಸ್ವಭಾವವೆಂಬ ಇಮಾರತಿಯನ್ನು ಕಟ್ಟಿಕೊಂಡರೆ ಮುಂದಿನ ಆಯುಷ್ಯವು ಸುಖಕರ ವಾಗುವದು.

ಅಮೇರಿಕಾಖಂಡದಲ್ಲಿ ಬೆಂಜಾಮಿನ್ ಫ್ರಾಂಕ್ಲಿನ್‌ನೆಂಬ ಒಬ್ಬ ದೊಡ್ಡ ಮನುಷ್ಯನು ಆಗಿಹೋದನು. ಅವನು ಚಿಕ್ಕವನಿದ್ದಾಗ ಒಮ್ಮೆ ಅವನು ಹುಟ್ಟಿದ ದಿವಸದ ಸಮಾರಂಭವು ಮಾಡಲ್ಪಟ್ಟಿತು. ಆಗ ಅವನಿಗೆ ಐದು ವರ್ಷಗಳು ತುಂಬಿದ್ದವು. ಆ ಸಮಾರಂಭಕ್ಕೆ ಅನೇಕ ಜನ ಬಂಧು ಬಳಗದವರು ನೆರೆದಿದ್ದರು. ಅವರೆಲ್ಲರು ಅವನಿಗೆ ಮಿಠಾಯಿಗಾಗಿ ರೊಕ್ಕಕೊಟ್ಟರು. ಒಟ್ಟಿಗೆಅವನ ಬಳಿಯಲ್ಲಿ ಸಾಲ್ಕೈದು ರೂಪಾಯಿಗಳ ರೊಕ್ಕವು ಕೂಡಿತು. ಅವನು ಆ ರೊಕ್ಕವನ್ನು ತಕೊಂಡು ಪೇಟೆಗೆ ಹೋಗಿ ಒಬ್ಬ ಅಂಗಡಿಕಾರನಿಗೆ ಕೊಟ್ಟು ಒಂದು ಊದುವ ಗುಬ್ಬಿಯನ್ನು ಕೊಂಡು ಕೊಂಡು ಬಂದು ಎಲ್ಲರ ಮುಂದೆ ಊದಿ ತೋರಿಸಿ ಕುಣಿದಾಡಹತ್ತಿದನು. ನೆರೆದವರೆಲ್ಲರು ಮಗುವೆ ಇದಕ್ಕೇನು ಕೊಟ್ಟೆ ಎಂದು ಕೇಳಹತ್ತಿದರು. ಅದಕ್ಕೆ ಅವನು ನನ್ನ ಹತ್ತರ ಇದ್ದ ರೊಕ್ಕವನ್ನೆಲ್ಲ ಕೊಟ್ಟೆನು, ಎಂದು ಉತ್ತರಕೊಟ್ಟನು. ಅದಕ್ಕೆ ಅವರು "ಛೀ ಹುಚ್ಚಾ ಇದಕ್ಕೇಕೆ ಇಷ್ಟು ರೊಕ್ಕ? ದುಡ್ಡಿಗೊಂದು ಗುಬ್ಬಿ ಬೇಕಾದಲ್ಲಿ ಸಿಗುವದು," ಎಂದು ಅಂದರು. ಆ ಮಾತಿನ ಪರಿಣಾಮವು ಫ್ರಾಂಕ್ಲಿನ್ನನ ಮನಸಿನ ಮೇಲೆ ಆಯಿತು. ನಾನು ವಿಚಾರಮಾಡದೆ ಎಲ್ಲ ರೊಕ್ಕವನ್ನು ಕೊಟ್ಟಿದ್ದು ತಪ್ಪಾಯಿತೆಂದು ಅವನ ಮನಸಿಗೆ ಹೊಳೆಯಿತು. ಈ ಸಂಗತಿಯನ್ನು ಅವನು ಎಂದೂ ಮರೆಯಲಿಲ್ಲ. ಮುಂದೆ ಇಂಥ ಪ್ರಸಂಗಗಳು ಬಂದಾಗ "ಇದಕ್ಕೇಕೆ ಇಷ್ಟು ರೊಕ್ಕ? ದುಡ್ಡಿಗೊಂದು ಗುಬ್ಬಿ ಬೇಕಾದಲ್ಲಿಸಿಗುವದು." ಎಂದು ಅನ್ನುತ್ತಿದ್ದನು. ಅದರಿಂದ ಅವನ ವಿಚಕ್ಷಣತನವು ಬೆಳೆದು ದೂರದೃಷ್ಟಿಯುಳ್ಳ ಜಾಣಮನುಷ್ಯನಾದನು. ಅವನೇ ಮುಂದೆ ಅಮೇರಿಕಾಖಂಡದ ಸ್ವತಂತ್ರ ಸಂಸ್ಥಾನಗಳಿಗೆ ಅಧ್ಯಕ್ಷನಾಗಿ ಲೋಕೋಪಕಾರದ ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

ಪತ್ರವ್ಯವಹಾರ.

ದೊಡ್ಡಬಳ್ಳಾಪುರದಲ್ಲಿ

ವಿದ್ಯಾರ್ಥಿಗಳ ತಾಯಿತಂದೆಗಳು ನವೀನ ಪಾಠಕ್ರಮಗಳನ್ನು ಪರಾಮರ್ಶಿಸಲು ಏರ್ಪಡಿಸಿದ್ದ ಸಂತೋಷಕೂಟವು:—

ದೊಡ್ಡಬಳ್ಳಾಪುರದ ಟವನಿನ ಪ್ರಜಾಸಂಖ್ಯೆಯು 7-8 ಸಾವಿರ ಮಾತ್ರವೇ ಆಗಿದ್ದರೂ ಇಲ್ಲಿಯ ಸ್ಕೂಲುಗಳಲ್ಲೆಲ್ಲ ಸೇರಿ ಸುಮಾರು ಒಂದುಸಾವಿರ ವಿದ್ಯಾರ್ಥಿಗಳು ವಿದ್ಯೆಯನ್ನು ಕಲಿಯುತ್ತಿರುವುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ಸಂಗತಿಯೇ ಆಗಿರುತ್ತದೆ. ಈ ಅಂಶವನ್ನು ಪುರಸ್ಕರಿಸಿಯೇ ಬಲಾತ್ಕಾರ ವಿದ್ಯಾಭ್ಯಾಸದ ಕಾನೂನನ್ನು ಈ ಊರಿನಲ್ಲಿಯೂ ಜಾರಿಗೆ ತರತಕ್ಕದ್ದೆಂದು ಸರಕಾರದವರು ಅಪ್ಪಣೆ ದಯಪಾಲಿಸಿರುವುದು. ಈ ರೀತಿ ಪ್ರಾಥಮಿಕ ವಿದ್ಯಾಭ್ಯಾಸವು ವಿಶೇಷ ಪ್ರಾಚುರ್ಯದಲ್ಲಿರುವುದನ್ನು ಕಂಡು ಸುತ್ತುಮುತ್ತಣ ಗ್ರಾಮಾಂತರದವರೂ ಸಹ ಇಲ್ಲಿಯ ಸ್ಕೂಲುಗಳಲ್ಲಿ ನಡೆಯುತ್ತಿರುವ ನವೀನ ಪಾಠಕ್ರಮಗಳನ್ನು ಪರಾಮರ್ಶಿಸುವುದರ ಮೂಲಕ ತಮ್ಮ ತಮ್ಮ ಗ್ರಾಮಗಳಲ್ಲಿ ವಿದ್ಯೆಯನ್ನು ಹೆಚ್ಚು ಹೆಚ್ಚಾಗಿ ಹರಡುತ್ತಾ ಬರುವ ವಿಷಯದಲ್ಲಿ ಪ್ರಯತ್ನಶೀಲರಾಗಲು ಪ್ರೋತ್ಸಾಹವುಂಟಾಗಲೆಂಬ ಮುಖ್ಯೋದ್ದೇಶದೊಡನೆ ಇಲ್ಲಿ ಕಳೆದ ಅಗಸ್ಟ ತಿಂಗಳ 19 ನೆಯ ತಾರೀಖು ಬುಧವಾರ ಒಂದು ವಿದ್ಯಾಭ್ಯಾಸದ ಪ್ರದರ್ಶನವು ನಡೆಸಲ್ಪಟ್ಟಿತು. ಇದನ್ನು ತೃಪ್ತಿಕರವಾಗಿಯೂ, ಸಾಂಗವಾಗಿಯೂ, ನೆರವೇರಿಸುವ ವಿಚಾರದಲ್ಲಿ ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳಿಂದ ಪ್ರೇರಿತರಾಗಿ ಈ ಪ್ರಾಂತದ ಉಪಾಧ್ಯಾಯರುಗಳಿಗೆಲ್ಲ ಆದರ್ಶಪ್ರಾಯರಾಗಿಯೂ, ವಿಶೇಷ ಸರ್ವಿಸ್‌ದಾರರಾಗಿಯೂ ಇರುವ ಇಲ್ಲಿಯ ಎ. ವಿ. ಸ್ಕೂಲ್ ಹೆಡ್‌ಮಾಸ್ತರ ಡಿ. ಕೊಂಗಾಡಿಯಪ್ಪನವರು ಮುಂದಾಳುಗಳಾಗಿದ್ದರು. ಇದೇ ಸ್ಕೂಲುಗಳ ಮಾಸ್ತರುಗಳೂ ಇವರ ಸಹಾಯಕರಾಗಿದ್ದುದಲ್ಲದೆ ಈ ಊರಿನ ಅಮಲದಾರರು, ಮುನಸೀಫರು, ಸಬ್‌ರಿಜಿಸ್ಟ್ರಾರವರು ಮೊದಲಾದ ಸ್ಥಳೀಯಾಧಿಕಾರಿಗಳೂ, ಅಡ್ವೋಕೇಟರು, ಮ್ಯುನಿಸಿಪಲ್ ಕೌನ್

ಟಿಲ್ ಮುಂತಾದ ಪುರಪ್ರಮುಖರೂ, ಸೇರಿ ಒಂದು ಕಮಿಟಿಯನ್ನೇರ್ಪ ಡಿಸಿಕೊಂಡಿದ್ದರಿಂದಲೂ, ಈ ಊರಿನ ಮತ್ತು ಬೆಂಗಳೂರು, ಉರುವ ಕೊಂಡೆ ಮೊದಲಾದ ಕೆಲವು ಪ್ರಾಂತಗಳ ದೊಡ್ಡ ಮನುಷ್ಯರುಗಳು ಉದಾರವಾಗಿ ದ್ರವ್ಯ ಸಹಾಯಮಾಡಿದುದರಿಂದಲೂ, ಸಹ ಸಕಲಕಾ ರ್ಯಗಳೂ ಬಹಳ ವಿತರಣೆಯಿಂದ ನಡೆಯಲು ಅನುಕೂಲವಾಯಿತು.

ಇಲ್ಲಿಯ ಎ. ವಿ. ಸ್ಕೂಲಿನ ಕಟ್ಟಡದಲ್ಲಿ ಏರ್ಪಡಿಸಿದ್ದ ವಿದ್ಯಾ ಭ್ಯಾಸದ ಪ್ರದರ್ಶನದಲ್ಲಿ ಈ ಊರಿನಲ್ಲಿನ ಎಲ್ಲಾ ಸ್ಕೂಲುಗಳ ವಿದ್ಯಾ ರ್ಥಿಗಳ ಮತ್ತು ವಿದ್ಯಾರ್ಥಿನಿಯರ ಬಟ್ಟೆನ ಕೆಲಸ, ಬರವಣಿಗೆ, ಚಿತ್ರದ ಕೆಲಸ, ಮರಗೆಲಸ, ಬೆತ್ತದ ಹೆಣಿಗೆ, ನೇಯಿಗೆ, ಮುಂತಾದ ಕೈಗಾರಿಕೆ ಯ ಕೆಲಸ, ಇವುಗಳು ಮಾತ್ರವೇ ಅಲ್ಲದೆ ಬೇರೆ ಸ್ಕೂಲುಗಳ ಕೆಲಸಗ ಳೂ ಪ್ರದರ್ಶಿಸಲ್ಪಟ್ಟಿದ್ದವು. ಬೆಂಗಳೂರು ತಾತಾಸಿಲ್ಕು ಫಾರಂ ಎಂಬ ರೇಷ್ಮೆ ಕಾರಖಾನೆಯ ಮ್ಯಾನೆಜರ ಮೆ|| ಜಾಕ್‌ಸನ್‌ರವರು ರೇಷ್ಮೆಯ ಗೂಡು, ಬಟ್ಟೆ ಮುಂತಾದವುಗಳನ್ನೂ, ಮೆಕ್ಯಾನಿಕಲ್ ಇಂಜನಿಯರಿಂಗ ಸ್ಕೂಲ ಪ್ರಿನ್ಸಿಪಲರಾದ ಮೆ|| ಎಸ್. ವಿ. ಶೆಟ್ಟಿರವರು ತಮ್ಮ ಸ್ಕೂಲಿ ನಲ್ಲಿ ನಡೆಯುವ ಕಬ್ಬಿಣ ಮತ್ತು ಮರಗೆಲಸದ ಮಾದರಿಗಳನ್ನೂ, ಮೈ ಸೂರು ಟ್ರೇನಿಂಗ ಕಾಲೇಜ ಪ್ರಿನ್ಸಿಪಲ್‌ರಾದ ಮೆ|| ಡಿ. ವೆಂಕಟರಾಮ ಯ್ಯನವರೂ, ಅದೇ ಕಾಲೇಜಿನ ಕಿಂಡರ ಗಾರ್ಟನ್ ಸೆಕಶನ್ನ ಸುಪೆರಿಂ ಟೆಂಡೆಂಟರಾದ ಮೆ|| ಎಂ. ವೆಂಕಟ ಸುಬ್ಬಯ್ಯನವರೂ, ಮತ್ತು ತಮ್ಮ ವಿ ಧ್ಯಾರ್ಥಿಗಳು ಮಾಡಿದ್ದ ಕಿಂಡರ ಗಾರ್ಟನ್ ಮುಂತಾದಕ್ಕೆ ಸಂಬಂಧ ಪ ಟ್ಟ ಸಾಮಗ್ರಿಗಳನ್ನೂ, ಪ್ರದರ್ಶಿಸಿದ್ದರು. ಅಲ್ಲದೆ ಬೆಂಗಳೂರು ಹೈಸ್ಕೂ ಲಿನಲ್ಲಿ ಸೈನ್‌ಸ ಎಂಬ ಶಾಸ್ತ್ರ ಭೋಧಕರಾದ ಮೆ|| ಅನಂತ ಪದ್ಮನಾಭ ಯ್ಯನವರೂ, ಮೆ|| ನಾರಾಯಣಮೂರ್ತಿಯವರೂ ತಮ್ಮ ಸ್ಕೂಲಿನ ಕೆ ಲವರು ವಿಧ್ಯಾರ್ಥಿಗಳನ್ನು ಕರೆದುಕೊಂಡು ಬಂದು ಶಾಸ್ತ್ರಪಾಠಗಳ ಲ್ಲಿ ಕೆಲವು ಮುಖ್ಯಾಂಶಗಳನ್ನು ನಿದರ್ಶನ ಪೂರ್ವಕವಾಗಿ ಬೋಧಿಸು ತ್ತಿದ್ದದ್ದು ಅನೇಕರಿಗೆ ಕೌತುಕವನ್ನು ಹುಟ್ಟಿಸುವದಾಗಿತ್ತು. ಇಷ್ಟೇ ಅ ಲ್ಲದೆ ಸ್ಲಾಯ್ಡು ಸುಪರವೈಜರ ಮೆ|| ಡಿ. ಆದಿನಾರಾಯಣಯ್ಯನವ ರಿಂದ ಸ್ಲಾಯ್ಡು ವಿದ್ಯೆಗೆ ಸಂಬಂಧ ಪಟ್ಟ ಸಾಮಗ್ರಿಗಳೂ ವಿದ್ಯಾಭ್ಯಾ ಸದ ಇಲಾಖೆಯ ಇನ್‌ಸ್ಪೆಕ್ಟರ ಜನರಲ್‌ಸಾಹೇಬರವರ ಆಫೀಸಿನಿಂದ

ವಿಲಾಯತಿಯ ಸ್ಕೂಲುಗಳಿಗೆ ಸಂಬಂಧ ಪಟ್ಟ ವಿದ್ಯಾಭ್ಯಾಸದ ಸಾಮ ಗ್ರಿಗಳೂ ಬಂದಿದ್ದವು. ಮತ್ತು ಇದೇ ತಾಲೂಕಿಗೆ ಸೇರಿದ ಗ್ರಾಮಾಂತರದ ಸ್ಕೂಲುಗಳವರೂ, ಬೆಂಗಳೂರು ಚಾಮರಾಜಪೇಟೆ ಗರ್ಲ್ಸ ಸ್ಕೂಲ, ಮಾಡಲ ಇನ್‌ಫೆಂಟ ಸ್ಕೂಲ, ಯಲಹಂಕ, ದೇವನಹಳ್ಳಿ, ಗುಡಿಬಂಡೆ, ಗೋರಿಬಿದನೂರು, ಶ್ರೀನಿವಾಸಪೂರ, ತ್ಯಾಮಗೊಂಡ್ಲು, ಕ್ಲೋಸಪೇಟ, ಬೌರಿಂಗಪೇಟ, ಮಳ್ಳೇಶ್ವರ, ಆನೆಕಲ್ಲು, ನೆಲಮಂಗಲ, ವಡಿಗೇನಹಳ್ಳಿ, ಹಿಂದೂಪುರದ ತಾಲೂಕ ಪೂಲಕುಂಟೆ ಈ ಮುಂತಾದ ಸ್ಕೂಲುಗಳವರೂ ಸಾಮಗ್ರಿಗಳನ್ನು ಪ್ರದರ್ಶಿಸಿದ್ದರು. ಮೆ॥ ಬಿ. ಎಲ್. ಲಕ್ಷ್ಮಣರಾಯರೆಂಬುವರು ಎಲೆಕ್ಟ್ರಿಕದೀಪ, ಎಲೆಕ್ಟ್ರಿಕಬೆಲ, ಮುಂತಾದ ವಿದ್ಯುಚ್ಛಕ್ತಿಯ ಸಾಮಗ್ರಿಗಳನ್ನು ಎಲ್ಲರಿಗೂ ಪ್ರದರ್ಶಿಸಿ ವಿವರಿಸುತ್ತಿದ್ದರು. ಇವುಗಳೆಲ್ಲವೂ ವಿದ್ಯಾವರ್ಧನಕಗಳಾಗಿಯೂ, ಹಸ್ತಕೌಶಲ್ಯ ಪ್ರದರ್ಶಕಗಳಾಗಿಯೂ, ಇದ್ದುವಲ್ಲದೆ, ಪೂರ್ವಕಾಲದ ಹಳೇ ತರಹೆಯ ವಿದ್ಯಾಭ್ಯಾಸಕ್ಕೂ ಈಗಿನ ಕಾಲದ ವಿದ್ಯಾಭ್ಯಾಸಕ್ಕೂ ಇರತಕ್ಕ ತಾರತಮ್ಯಗಳನ್ನು ಪ್ರದರ್ಶಿಸಲು ಸಾಧಕಗಳಾಗಿದ್ದವು.

ಪ್ರಾತಃಕಾಲ 9 ಗಂಟೆಯ ಟ್ರೈನಿನಲ್ಲಿ ಬೆಂಗಳೂರಿನಿಂದ ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ರಾವ್‌ಬಹದ್ದೂರ ಮ॥ ಎಂ. ಶಾಮರಾಯರವರೂ, ಡೆಪ್ಯುಟಿ ಇನಸ್ಪೆಕ್ಟರ ಜನರಲ್ ಮ॥ ಸಿ. ಕೃಷ್ಣರಾಯರವರೂ, ಸರ್ಕಲ್ ಇನಸ್ಪೆಕ್ಟರ ಮ॥ ಬಿ. ದಾಸಪ್ಪನವರೂ, ಡೆಪ್ಯುಟಿಇನಸ್ಪೆಕ್ಟರ ಮ॥ ಎಚ್. ಎಸ್. ವೆಂಕಟರಮಣಯ್ಯನವರೂ, ಅಸಿಸ್ಟಂಟಡೆಪ್ಯುಟಿ ಇನಸ್ಪೇಕ್ಟರ ಮ॥ ಟಿ. ವಿ. ಕೃಷ್ಣರಾಯರವರೂ, ಆನರೆರಿಬೆಂಚ ಮೇಜಿಸ್ಟ್ರೇಟ ಮ॥ ಡಿ. ಆದೆಪ್ಪನವರೂ ದಯಮಾಡಿಸಿದರು. ಅವರುಗಳನ್ನು ಊರಿನ ಪ್ರಮುಖರೆಲ್ಲರೂ ಸೇರಿ ಉಚಿತ ಮರ್ಯಾದೆಯೊಡನೆ ಇದಿರುಗೊಂಡನಂತರ ಎ. ವಿ. ಸ್ಕೂಲಿನ ಎದುರಿನಲ್ಲಿ ಅಲಂಕರಿಸಿದ್ದ ಚಪ್ಪರದ ಬಳಿ ಗರ್ಲ್ಸಸ್ಕೂಲಿನ ವಿದ್ಯಾರ್ಥಿನಿಯರೂ, ಎ. ವಿ. ಸ್ಕೂಲ್ ಹಿಂದುಸ್ಥಾನಿಸ್ಕೂಲುಗಳ ವಿದ್ಯಾರ್ಥಿಗಳೂ ಸಹ ಸೇರಿ ಸ್ವಾಗತ ಪೂರ್ವಕವಾಗಿ ಬರಮಾಡಿಕೊಂಡರು.

ಮಧ್ಯಾಹ್ನ 1 ಗಂಟೆಯ ಟ್ರೈನಿನಲ್ಲಿ ಬೆಂಗಳೂರಿನಿಂದ ಹೈಸ್ಕೂಲು ಹೆಡ್ಡಮಾಸ್ತರ ಮ॥ ವಿ. ಸುಬ್ರಹ್ಮಣ್ಯಯ್ಯರವರೂ, ಅಡ್ವೋಕೇಟ

ಮ॥ ಡಿ. ವೆಂಕಟರಾಮಯ್ಯನವರೂ, ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರ್ ಮ॥ ಬಿ. ಕೆ. ಗರುಡಾಚಾರ್ಯರೂ, ಕಮಿರ್ಷಿಯಲ್ ಅಸೋಸಿಯೇಷನ್ ಸೆಕ್ರೆಟರಿ ಮ॥ ಕೆ. ಎಸ್. ಕೃಷ್ಣಯ್ಯರವರೂ, ಮ॥ ರಾ॥ ರಾಮಚಂದ್ರರಾವ್ ಸಿಂಧೆಯವರೂ, ದಿವಾನ್‌ಸಾಹೇಬರವರ ಕ್ಲಾರ್ಕ ಮ॥ ಡಿ. ಸಿ. ಸುಬ್ಬರಾಮಯ್ಯನವರೂ, ದೇವನಹಳ್ಳಿಯಿಂದ ಮೋಟರಿನಲ್ಲಿ ಡೆಪ್ಯುಟಿ ಕಮೀಷನರ ಮ॥ ಚಾಂಡಿಸಾಹೇಬರವರೂ, ದಯಮಾಡಿಸಿದರು.

ಸಾಯಂಕಾಲ 5 ಗಂಟೆಯವರೆಗೆ ಈ ಊರಿನವರೂ, ಪರಸ್ಥಳದವರೂ ಆಬಾಲವೃದ್ಧರಾದಿಯಾಗಿ ಸರ್ವರೂ ಪ್ರದರ್ಶನವನ್ನು ನೋಡಿ ದಣಿದರು. ಅನಂತರ ಸ್ಕೂಲ ಬಳಿ ಪ್ರಮುಖರಾದವರ ಭಾವಚಿತ್ರವು ತೆಗೆಯಲ್ಪಟ್ಟಿತು. ಆ ಮೇಲೆ ಸ್ಕೂಲಿನಲ್ಲಿ ಸಭೆಯು ಪ್ರಾರಂಭವಾಯಿತು. ರಾವ್‌ಬಹದೂರ ಮ॥ ಎಂ. ಶಾಮರಾಯರವರು ಅಗ್ರಾಸನವನ್ನು ವಹಿಸಿದ್ದರು. ಪ್ರೋಗ್ರಾಮಿನಂತೆ ಸುಮಾರು ಎರಡು ಗಂಟೆಗಳ ಕಾಲ ಕಾರ್ಯಗಳೆಲ್ಲವೂ ಸಾಂಗವಾಗಿ ನಡೆದುವು. ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ಕುಶಲಪ್ರಶ್ನೆ, ಸಂಭಾಷಣೆ, ಕಂಠಪಾಠ, ನಾಟಕಾಭಿನಯ ಮುಂತಾದವುಗಳೆಲ್ಲವೂ ಆನಂದದಾಯಕಗಳಾಗಿದ್ದುವು. ಮೂವರು ಪಂಡಿತಮಹನೀಯರುಗಳು ಕನ್ನಡದಲ್ಲಿಯೂ, ಸಂಸ್ಕೃತದಲ್ಲಿಯೂ ಸಭಾಧ್ಯಕ್ಷರ ಪರವಾಗಿ ರಚಿಸಿ ಓದಿ ಹೇಳಿದ ಕವನಗಳು ಶ್ಲಾಘ್ಯತರಗಳಾಗಿದ್ದುವು. ಇವೆಲ್ಲವೂ ಮುಗಿದನಂತರ ಡೆಪ್ಯುಟಿ ಇನ್‌ಸ್ಪೆಕ್ಟರ ಜನರಲ್ ಮ॥ ಸಿ. ಕೃಷ್ಣರಾಯರು. ಬಿ. ಎ. ಯವರು ವಿದ್ಯಾವಿಚಾರದಲ್ಲಿ ಸ್ವಾರಸ್ಯಕರವಾದ ಒಂದು ಉಪನ್ಯಾಸವನ್ನು ಅಪ್ಪಣೆ ಕೊಡಿಸಿದರು.

ಸಭಿಕ ಮಹಾಶಯರೇ!

ಈ ಹೊತ್ತು ಪಾಠಶಾಲೆಯ ಹೊರಗಿನ ಆವರಣದಲ್ಲಿಯೂ ಒಳಭಾಗದಲ್ಲಿಯೂ, ನಾನಾವಿಧವಾದ ವಸ್ತುಗಳನ್ನೂ, ನಿದರ್ಶನಗಳನ್ನೂ, ನೋಡಿದೆವು. ಇವು ಪ್ರಾಚೀನ ನವೀನ ಬೋಧನಾಕ್ರಮಗಳಿಗೆ ಇರುವ ತಾರತಮ್ಯಗಳನ್ನು ವ್ಯಕ್ತಗೊಳಿಸುವುವು. ಹಿಂದಿನ ಕಾಲದಲ್ಲಿ ಕೇವಲ ಪುಸ್ತಕ ಪರಿಚಯ, ಬರೀ ಅಕ್ಷರಗಳನ್ನು ಓದುವುದು, ಮತ್ತು ಗಣಿತವನ್ನು ಸಾಧಾರಣವಾಗಿ ಮಾಡುವುದು ಬಂದರೆ ಸಾಕೆಂದು ಭಾವಿಸಿದ್ದರು. ಈಗಲಾದರೋ ಅಂತಹ ವಸ್ತುಗಳನ್ನು ಒಂದರೊಂದಿಗೆ ಒಂದನ್ನು ಹೋ

ಓಸಿದರೆ ಪ್ರಥಮದಲ್ಲಿ ಪ್ರತಿಗೆ ಪ್ರತಿ ತೆಗೆಯುವುದನ್ನು ಅನುಷ್ಠಾನ ಮಾಡಬೇಕು. ಅನಂತರ ಬಣ್ಣ ಹತ್ತಿಸಬೇಕು. ಕಾಗದ ಜೇಡಿಮಣ್ಣು, ಕಬ್ಬಿಣ ಮುಂತಾದವುಗಳಿಂದ ಆಕೃತಿಗಳನ್ನು ನಿರ್ಮಿಸಬೇಕೆಂಬುವುದನ್ನು ತೋರಿಸುವುದು. ಮಕ್ಕಳ ಜ್ಞಾನೋದಯಕ್ಕೂ, ಮತ್ತು ಮೇಧೋ ಶಕ್ತಿಯ ವೃದ್ಧಿಗೂ, ಇವುಗಳು ಹೇತುವಾಗಿರುವುವು.

ಬೆಂಗಳೂರು ಗೌರ್ನಮೆಂಟ್ ಹೈಸ್ಕೂಲ ವಿದ್ಯಾರ್ಥಿಗಳಲ್ಲಿ ಕೆಲವರು ಇಲ್ಲಿಗೆ ಬಂದು ಭೌತಿಕ ಶಾಸ್ತ್ರದಲ್ಲಿನ ಕೆಲವು ಸುಲಭವಾದ ನಿದರ್ಶನಗಳನ್ನು ತೋರಿಸಿದರು. ಅದೇ ಹೈಸ್ಕೂಲ ವಿದ್ಯಾರ್ಥಿಗಳಾದ ಕೆಲವು ದೊಡ್ಡ ಮನುಷ್ಯರ ಮಕ್ಕಳು ಬಂದು ತಾವು ಮಾಡಿದ ಸ್ಲಾಯ್ಡ ಭಾಗವನ್ನು ಪ್ರದರ್ಶನಮಾಡಿದುದಲ್ಲದೆ ಕೈಗೆಲಸಗಳಿಂದ ಹೊಂದಬಹುದಾದ ವಿಶೇಷ ಗೌರವವನ್ನು ಪ್ರಜೆಗಳಿಗೆ ತೋರ್ಪಡಿಸಿರುವರು. ಹೀಗೆಯೇ ತಾಯಿತಂದೆಗಳು ತಂತಮ್ಮ ಮಕ್ಕಳನ್ನು ತಂಡೋಪತಂಡವಾಗಿ ಕಳುಹಿಸಿ ಇದೇ ವಿಧವಾದ ಉತ್ಸಾಹವನ್ನೂ, ಇತರರ ತಾಯಿತಂದೆಗಳಿಗೂ ಉಂಟು ಮಾಡಬೇಕೆಂದು ಹಾರೈಸುತ್ತೇನೆ.

ನಮ್ಮ ಮೈಸೂರು ಸಂಸ್ಥಾನದಲ್ಲಿ ವಿದ್ಯೆಯು ಹೀನಸ್ಥಿತಿಯಲ್ಲಿರುತ್ತೆ 100 ಮಕ್ಕಳಲ್ಲಿ 23 ಮಂದಿ ಸ್ಕೂಲಿಗೆ ಹೋದರೆ ಉಳಿದ 77 ಮಂದಿ ವಿದ್ಯಾವಲಂಬಿಗಳಾಗಿಲ್ಲ. ತಾಯಿ ತಂದೆಗಳಿಗೆ ವಿದ್ಯೆಯಲ್ಲಿ ಆಸಕ್ತಿ ಇಲ್ಲವೆಂದು ಇದರಿಂದ ಸೂಚಿತವಾಗುವುದು. ಬಹು ಮಟ್ಟಿಗೆ ತಾಯಿತಂದೆಗಳೇ ವಿದ್ಯಾವಿಹೀನರಾಗಿರುವುದರಿಂದ ವಿದ್ಯದ ಬೆಲೆಯು ಅವರ ಮನಸ್ಸಿಗೆ ಗೋಚರವಾಗಿಲ್ಲ.

ಜಪಾನ್ ದೇಶದಲ್ಲಾದರೋ ಸ್ಕೂಲಿಗೆ ಹೋಗಬಹುದಾದ ವಯಸ್ಸಿನ ಮಕ್ಕಳಲ್ಲಿ 25 ರಲ್ಲಿ 23 ಮಂದಿ ಸ್ಕೂಲಿಗೆ ಹೋಗುವರು. ನಮ್ಮ ಸಂಸ್ಥಾನದಲ್ಲಿ ಎಲ್ಲೆಲ್ಲಿಯೂ ಸ್ಕೂಲುಗಳಿರುವುವು ವಿದ್ಯೆ ಕಲಿಯುವುದನ್ನು ನಿರ್ಬಂಧವಾಗಿಯೂ, ಮಾಡಿರುವರು. ಈಗ ಮಕ್ಕಳಾಗಿರುವವರೇ ಮುಂದೆ ಪ್ರಜೆಗಳಾಗುವರು. ಪ್ರಜೆಗಳು ವಿದ್ಯಾವಂತರಾದ ಹೊರತು ಯಾವ ದೇಶವೂ ಊರ್ಜಿತಸ್ಥಿತಿಗೆ ಬರಲಾರದು. ಆದುದರಿಂದ ನಮ್ಮ ಶ್ರೀಮನ್ಮಹಾರಾಜ ಸರ್ಕಾರದವರು ತಮ್ಮ ಸಂಸ್ಥಾನದ ಮಕ್ಕಳ

ವಿದ್ಯಾಭ್ಯಾಸದ ವಿಷಯದಲ್ಲಿ ಬಹು ಶ್ರದ್ಧೆಯುಳ್ಳವರಾಗಿರುವರು. ಇದಕ್ಕಾಗಿಯೇ 4 ದರ್ಜೆಯ ಪಾಠಶಾಲೆಗಳನ್ನು ಕಲ್ಪಿಸಿರುವರು. ಗ್ರಾಮಾಂತರಗಳಲ್ಲಿ ಪ್ರೈಮರೀ ಸ್ಕೂಲುಗಳನ್ನೂ ತಾಲ್ಲೂಕ ಸ್ಥಳಗಳಲ್ಲಿ ಸೆಕೆಂಡರೀ ಸ್ಕೂಲುಗಳನ್ನೂ ಡಿಸ್ಟ್ರಿಕ್ಟ ಜಾಗಾಗಳಲ್ಲಿ ಹೈಸ್ಕೂಲುಗಳನ್ನೂ ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿ ಕಾಲೇಜುಗಳನ್ನೂ ಸ್ಥಾಪಿಸಿರುವರು. ಕಾಲೇಜುಗಳಲ್ಲಿ ಆನರೀಕೋರಸ ಎಂಬ ಭಾಗವನ್ನೂ ಈಚಿಗೆ ಏರ್ಪಡಿಸಿರುವರು. ಇದಲ್ಲದೆ ಪ್ರೌಢ ಶೋಧನಾಕಾರ್ಯ ನಿರ್ವಾಹಕಕ್ಕಾಗಿ ತಾತಾ ಸಾಹೇಬರ ಸೈನ್ಸ್ ಇನ್‌ಸ್ಟಿಟ್ಯೂಟ್ ಎಂಬ ಶಾಸ್ತ್ರಾಲಯವು ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿರುವುದು. ಷಾರ್ಟ ಹ್ಯಾಂಡ (ಸಂಕ್ಷಿಪ್ತಲಿಪಿ), ಟೈಪಿಂಗ್ ಮೊದಲಾದವುಗಳನ್ನು ಬೋಧಿಸುವದಕ್ಕೆ ಕಮರ್ಷಿಯಲ್ ಸ್ಕೂಲೊಂದು ನಿರ್ಮಿತವಾಗಿರುವುದು. ಅವಶ್ಯ ತೋರಿಬಂದಲ್ಲಿ ಈ ಪಾಠಶಾಲೆಗಳು ಇನ್ನೂ ಹೆಚ್ಚಿಸಲ್ಪಡುವುವು. ಯಂತ್ರ ವಿಷಯಗಳನ್ನು ಬೋಧಿಸಲು ಮೆಕಾನಿಕಲ ಇಂಜನೀರಿಂಗ್ ಸ್ಕೂಲನ್ನು ನೂತನವಾಗಿ ಬೆಂಗಳೂರಿನಲ್ಲಿ ಸ್ಥಾಪಿಸಿದ್ದಾರೆ.

ಈ ರೀತಿ ಅನೇಕ ವಿಧವಾದ ವಿದ್ಯಾಪ್ರಚಾರವನ್ನು ಸರ್ಕಾರದವರು ಮಾಡುತ್ತಿರುವರು. ಪಾಶ್ಚಾತ್ಯರಲ್ಲಿ ಜನಗಳೇ ಪಾಠಶಾಲೆಗಳನ್ನು ಕಟ್ಟಿಸಿ ಕೊಡುವರು. ಜಪಾನ್ ದೇಶದಲ್ಲಿರುವ 850 ಸ್ಕೂಲುಗಳಲ್ಲಿ 5 ಮಾತ್ರ ಸರ್ಕಾರದ್ದು ಉಳಿದವುಗಳೆಲ್ಲಾ ಖಾಸಗೀ ಜನಗಳದೇ! ನಮ್ಮ ಮೈಸೂರು ಸಂಸ್ಥಾನದ ಶ್ರೀಮಂತರು ಅವರ ಮೇಲುಪಂಙ್ತಿಯನ್ನು ಅನುಸರಿಸುವುದಕ್ಕಾಗಿ ತಮ್ಮ ಔದಾರ್ಯವನ್ನು ಪ್ರಕಟಗೊಳಿಸಬೇಕೆಂದು ಕೋರುತ್ತೇನೆ.

ನಮ್ಮ ಪ್ರಜೆಗಳಲ್ಲಿ ಅನೇಕರು ಬಡವರೆಂಬುವುದು ನಿಜ. ಆದರೆ ಅಶ್ರದ್ಧೆಯುಳ್ಳವರಾಗಿರಲು ಕಾರಣವಿಲ್ಲ. ಸರ್ಕಾರದವರೇ ಕಟ್ಟಡಗಳನ್ನು ಕಟ್ಟಿಸಲು ಸ್ವಲ್ಪಕಾಲಬೇಕು. ಪಶ್ಚಿಮದೇಶಗಳಲ್ಲಿ ಕಿವುಡ, ಮೂಕರೇ ಮೊದಲಾದ ಅಂಗಹೀನರಿಗೂ, ವಿದ್ಯೆ ಕಲಿಸುವುದಕ್ಕೆ ಏರ್ಪಾಡಾಗಿರುತ್ತೆ. ಹಾಗೆಯೇ ಅಪರಾಧಿಗಳೂ, ವಿದ್ಯೆ ಹೇಳಿಸುವುದಲ್ಲದೆ ಮೃಗಗಳರಿಗೂ, ಸರಿಯಾದ ವಿದ್ಯಾಭ್ಯಾಸಂಗಕ್ಕೆ ಅನುಕೂಲಪಡಿಸಿದ್ದಾರೆ.

ಮಕ್ಕಳ ಆರೋಗ್ಯಕ್ಕೆ ಹೆಚ್ಚು ಗಮನ ಕೊಡುವ ನಿಮಿತ್ತ ವೈದ್ಯರು ಆ ಗಾಗ್ಯೆ ಶಾಲೆಗಳಿಗೆ ಹೋಗಿ ವಿಚಾರಿಸುವಂತೆ ಮಾಡಿರುವರು. ನಮ್ಮ ಸಂಸ್ಥಾನದಲ್ಲಿಯೂ, ಆ ಮೇರಿಗೆ ನಡಿಸಬೇಕೆಂದು ಸರ್ಕಾರದವರು ಅ ಪ್ಪಣೆ ಮಾಡಿರುವುದು ತಮ್ಮಗಳಿಗೆಲ್ಲಾ ತಿಳಿದ ವಿಷಯವೇ! ಸರ್ಕಾರದ ವರಿಗೆ ಪ್ರಜೆಗಳು ಸಹಾಯಭೂತರಾದರೆ ಹೆಚ್ಚು ಪ್ರಯೋಜನವನ್ನು ಪಡೆ ಯಬಹುದು.

ಈ ರೀತಿ ಅಪ್ಪಣೆ ಕೊಡಿಸಿದರು. ಅನಂತರ ಮ|| ಅಡ್ವೋಕೇಟು ವೆಂಕಟರಾಮಯ್ಯನವರೂ ಸಹಾ ಮ|| ಕೃಷ್ಣರಾಯರ ಉಪನ್ಯಾಸ ವನ್ನೇ ಪುಷ್ಟೀಕರಿಸಿ ಯುಕ್ತಿಯುಕ್ತವಾದ ಭಾಷಣವನ್ನು ಮಾಡಿದರು:—

ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ತಾಯಿತಂದೆಗಳು ತಮ್ಮ ಜವಾಬ್ದಾರಿಯನ್ನು ಸಾರ್ಥಕಗೊಳಿಸಿಕೊಳ್ಳುವುದು ಅವಶ್ಯವೆಂಬ ವಿಷ ಯವನ್ನು ಕುರಿತು ಸಂಕ್ಷೇಪವಾಗಿ ಸಭಿಕರ ಮನಸ್ಸಿಗೆ ಹತ್ತುವಂತೆ ಅಪ್ಪಣೆ ಕೊಡಿಸಿ, ಮ|| ರಾ|| ಡಿ. ಕೊಂಗಾಡಿಯಪ್ಪನವರನ್ನೂ, ಮ|| ರಾ|| ಷೇಕ್ ಮೋಹದೀನ್ ಸಾಹೇಬರನ್ನೂ, ಕೊಂಡಾಡಿದರು.

ಆನಂದ ಘೋಷವು ಮೊಳಗುತ್ತಿರಲು ಹಜರತ್ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಾದ ಮಹಾರಾಜಶ್ರೀ ರಾವ್ ಬಹದೂರ ಎಂ. ಶಾಮರಾಯರು ಎಂ. ಎ. ಯವರು ಅಪ್ಪಣೆ ಕೊಡಿಸಿದುದೇನೆಂದರೆ:—

ಈದಿನ ನಡೆದ ಘನತರವಾದ ಕಾರ್ಯಗಳಿಂದ ದೊಡ್ಡ ಬಳ್ಳಾಪುರವು ತನ್ನ ಹೆಸರನ್ನು ಸಾರ್ಥಕಮಾಡಿಕೊಂಡಿತು. ಮ|| ಡಿ|| ಕೊಂಗಾಡಿಯ ಪ್ಪನವರೂ, ಕಮಿಟಿಯವರೂ, ತಮ್ಮ ಪ್ರಯತ್ನಗಳನ್ನೆಲ್ಲಾ ನಿರ್ವಿಘ್ನ ವಾಗಿ ಸಫಲ ಮಾಡಿಕೊಂಡದ್ದಕ್ಕಾಗಿ ಶ್ಲಾಘನೀಯರು, ನಾವು ಅವರು ಗಳಿಗೆ ನಮ್ಮ ಮನಃಪೂರ್ವಕವಾದ ವಂದನೆಗಳನ್ನು ಸಮರ್ಪಿಸುವೆವು.

ಪೂರ್ವದಲ್ಲಿ ಮಕ್ಕಳನ್ನು ನಿರ್ಬಂಧದಿಂದ ಸ್ಕೂಲಿಗೆ ಕರದೊಯ್ಯು ತ್ತಿದ್ದರು. ಪ್ರಸಕ್ತ ಸಮಯದಲ್ಲಿ ಮಕ್ಕಳೇ ತಾವಾಗಿ ಓಡಿಬರುವರು. ಬೆಂಗಳೂರು ಚಾಮರಾಜಪೇಟೆಯಲ್ಲಿ ಮಾಡಲ್ ಇನ್ಫೆಂಟ್ ಸ್ಕೂ ಲೆಂಬ ಮಕ್ಕಳ ಆದರ್ಶಕ ಪಾಠಶಾಲೆಯೊಂದುಂಟು. ಅಲ್ಲಿ ಪ್ರಾತಃ

ಕಾಲದ ಪಾಠಕ್ಕೆ ಗಾನವೇ ಆದಿ, ಇದು ಮಕ್ಕಳ ಮನಸ್ಸನ್ನು ಸೆಳೆಯುವುದು. ಅಂತಹ ಮಕ್ಕಳನ್ನು ಸ್ಕೂಲಿಗೆ ಕಳುಹಿಸುವಂತೆ ತಾಯಿತಂದೆಗಳಿಗೆ ಬಲಾತ್ಕರಿಸಬೇಕಾಗಿರುವುದು.

ಪ್ರಜೆಗಳಿಗೆ ತೊಂದರೆ ಕೊಡುವುದು ಸರ್ಕಾರದವರ ಅಭಿಮತವಲ್ಲ. ಪ್ರಜೆಗಳು ಯಾವಾಗಲೂ ಸರ್ಕಾರಕ್ಕೆ ವಿಧೇಯರಾಗಿಯೇ ಇರುವರು.

ಇಂಡಿಯನ್ ಪೆನಲ್‌ಕೋಡಿನಲ್ಲಿ ಕಳ್ಳರನ್ನು ಶಿಕ್ಷಿಸುವುದಕ್ಕಾಗಿ ಒಂದು ಪಙ್ತಿಯುಂಟು. ಆದರಿಂದಲೇ ಅನೇಕರು ಕಳ್ಳತನ ಮಾಡುವರೆಂದು ಊಹಿಸತಕ್ಕದಲ್ಲ. ಕಳ್ಳತನ ಮಾಡುವವರನ್ನು ದಂಡಿಸಿ ಅವರನ್ನು ಸನ್ಮಾರ್ಗಪ್ರವರ್ತಕರನ್ನಾಗಿ ಮಾಡಬೇಕೆಂಬುವುದೇ ಅದರ ಅಭಿಪ್ರಾಯ. ಅದೇಪ್ರಕಾರ ವಿದ್ಯಾಪ್ರಾಚುರ್ಯಕ್ಕಾಗಿ ಒಂದು ಕಾನೂನು ಅವಶ್ಯ. ತಮ್ಮ ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಅನಾದರಣೆ ಮಾಡುವವರಿಗೆ ಮೊದಲು ತಿಳಿಯಪಡಿಸುವುದು. ನಂತರ ಎರಡು ರೂಪಾಯಿಗಳ ದಂಡನೆ ವಿಧಿಸುವುದು. ಇನ್ನೂ ಉದಾಶೀನರಾಗಿದ್ದಲ್ಲಿ ದಂಡವು ಹತ್ತು ರೂಪಾಯಿಗಳವರಿಗೂ ಏರಿಸಲ್ಪಡುವುದು. ಹೀಗೆ ಮಾಡುವುದು ಪ್ರಜಾಹಿತಕ್ಕಾಗಿಯೇ ಹೊರತು ಸರ್ಕಾರದವರ ಪ್ರಯೋಜನಕ್ಕೆ ಅಲ್ಲ.

ಪ್ರಾಥಮಿಕ ವಿದ್ಯಾಭ್ಯಾಸವನ್ನು ಪ್ರಚುರಪಡಿಸಲು ಸರ್ಕಾರದವರು $3\frac{1}{4}$ ಲಕ್ಷ ರೂಪಾಯಿಗಳನ್ನು ದಯಪಾಲಿಸಿರುವರು. ಬೇಕಾಗಿ ಬಂದ ಪಕ್ಷದಲ್ಲಿ ಇನ್ನೂ ಹೆಚ್ಚಾಗಿ ಕೊಡಲು ಸಿದ್ಧರಾಗಿರುವರು. ಈ ಕಾನೂನಿನಿಂದ ಜನಗಳು ಪ್ರಯೋಜನವನ್ನು ಹೊಂದಬೇಕೆಂಬುವುದೇ ನನ್ನ ಕೋರಿಕೆ.

"ದುಷ್ಕೃತ್ಯವನ್ನು ನಿರ್ಮೂಲ ಮಾಡುವುದು ವಿದ್ಯವೇ ಎಂದು ನಮ್ಮ ಶ್ರೀಮನ್ಮಹಾರಾಜರವರು ಅಪ್ಪಣೆ ದಯಪಾಲಿಸಿರುವರು."

ಈ ಸಂಸ್ಥಾನೀಕರಾಗಿ ಈ ಪದವಿಗೆ ಬಂದವರಲ್ಲಿ ನಾನೇ ಮೊದಲನೇಯವನು. ಪುಷ್ಪಮಾಲಿಕೆಯಲ್ಲಿನ ಮನೋರಂಜಕವಾದ ಕುಸುಮಗಳ ಮಧ್ಯಸ್ಥವಾದ ನಾರಿನಂತೆ ಶೋಭಾಯಮಾನನಾಗಿರುವೆನು. ಪ್ರಜೆಗಳಾದ ತಾವುಗಳೆಲ್ಲರೂ ನನ್ನಿಂದ ಆಗಬಹುದಾದ ಸಂಪೂರ್ಣ ಫಲವನ್ನು ಪಡೆಯುವದು ತಮ್ಮಗಳ ಕರ್ತವ್ಯವಾಗಿರುವುದು.

ಈ ರೀತಿ ಅಪ್ಪಣೆ ಕೊಡಿಸಿದರು.

ಅನಂತರ ಅಡ್ವೋಕೇಟ ಮ॥ ರಾ॥ ರಾಜಗೋಪಾಲಯ್ಯಂಗಾರ್ಯರೂ, ಮ್ಯುನಿಸಿಪೆಲ್ ಕೌನ್ಸಿಲರ ಮ॥ ಆಲಂಪಲ್ಲಿ ವೆಂಕಟಸ್ವಾಮಯ್ಯನವರೂ, ಊರಿನ ಜನಗಳ ಪರವಾಗಿ ಸಭಾಧ್ಯಕ್ಷರವರಿಗೆ ವಂದನೆಗಳನ್ನು ಸಮರ್ಪಿಸಿದರು. ಗಂಧ ಪುಷ್ಪಗಳ ವಿನಿಯೋಗಾನಂತರ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆ, ಮಂಗಳ, ಮಂತ್ರಾದಪ್ರಗಳ ಸಮೇತ ಸಭೆಯು ಮುಕ್ತಾಯವಾಯಿತು. ಬೆಂಗಳೂರಿನಿಂದ ದಯಮಾಡಿಸಿದ್ದವರೆಲ್ಲರೂ ರಾತ್ರಿಯ ಟ್ರೇಯಿನಲ್ಲಿ ಹಿಂದಿರುಗಿದರು.

ಪ್ರದರ್ಶನವನ್ನು ಇರಿಸಿದ್ದ 5 ದಿನಗಳು ಸುಮಾರು 20 ಸಾವಿರ ಜನರು ಈ ಊರಿನವರೂ, ಸುತ್ತುಮುತ್ತಣ ಗ್ರಾಮಾಂತರದವರೂ, ಸ್ತ್ರೀಯರೂ ವಿಶೇಷವಾಗಿ ಬಂದು ನೋಡಿಕೊಂಡು ಹೋಗುತ್ತಿದ್ದರು. ಇದರಿಂದ ಇಲ್ಲಿಯವರೆಲ್ಲರಿಗೂ, ವಿದ್ಯೆಯ ವಿಚಾರದಲ್ಲಿ ವಿಶೇಷವಾದ ಆಸಕ್ತಿಯು ಹುಟ್ಟುವಂತಾಗಿರುತ್ತದೆ.

ಇದರಂತೆಯೇ ವರ್ಷೇವರ್ಷೇ ಪ್ರತಿಪಾಠ ಶಾಲೆಯಲ್ಲಿಯೂ, ಪ್ರದರ್ಶನಗಳನ್ನು ಏರ್ಪಡಿಸುತ ಬಂದುದೇ ಆದರೆ ಪಾಠಶಾಲೆಗಳ ಉಪಾಧ್ಯಾಯರುಗಳಿಗೂ ವಿದ್ಯಾರ್ಥಿಗಳ ಪೋಷಕರಿಗೂ, ಪರಸ್ಪರ ಸೌಹಾರ್ದ್ರವೂ ವೃದ್ಧಿಹೊಂದಿ ವಿದ್ಯಾಪ್ರಾಚುರ್ಯಕ್ಕೆ ವಿಶೇಷ ಅನುಕೂಲ್ಯ ಉಂಟಾದಂತಾಗುವುದು.

ಶ್ರೀಃ

ಸುಬಾಗಮನ ಪ್ರಶ್ನೆ.

ಇಂಗ್ಲಿಷ ನೋಟ್— ತ್ರಿಸ್ರಜಾತಿ ಏಕತಾಳ.

ಕ್ಷೇಮ ವೇ ಶ್ರೀ ರಾವ್‌ಬಹಾದುರ್ ಶ್ಯಾಮ ರಾಯ ರೇ
ಕಾಮ ಹರ ರೂಪ ಸಕಲ ಕಲಾ ಧಾಮರೇ ||೩||
ಸೋಮ ವಂಶ ಜಾತ ಕೃಷ್ಣ ಭೂಮಿ ಪಾಲನು |
ಪ್ರೇಮ ನಮ್ಮ ದಿಂದೆ ತಿಳಿದು ನಿಮ್ಮ ಗುಣವ ನು ||೧||

ಸೀಮೆ ಯೊಳಗೆ ವಿದ್ಯೆ ಗಳಿಗ ಧ್ಯಕ್ಷ ಪದವ ನು ।
ಪ್ರೇಮ ದಿಂದ ಲಿತ್ತು ನಿಮಗೆ ಯಶವ ಪಡೆದ ನು ॥೨॥
ಕ್ಷೇಮವೇ ಶ್ರೀ

ಕಲಿತ ವಿದ್ಯೆ ಗಳಲಿ ನಾವು ನಿಮ್ಮ ಬಳಿಯೊ ಳು ।
ಒಲಿವಿ ನಿಂದ ಲೆಮ್ಮ ತಾಯಿ ತಂದೆ ಯವಿರೊ ಳು ॥೩॥
ಪಲವು ಪರೀ ಕ್ಷೆಗಳ ನೀವು ತೆಮ್ಮ ತಿಳಿವ ನು ।
ತಿಳಿಸಿ ನಿಮ್ಮ ಬುದ್ಧಿ ವಾದ ಗಳನು ಶ್ರೇಷ್ಠ ವು ॥೪॥
ಕ್ಷೇಮವೇ ಶ್ರೀ.

ನಿಮ್ಮ ಯಾ ಗಮನ ದಿಂದ ಲೊಮ್ಮೆ ಗಾ ಪ್ಮಗೇ ।
ಸುಂ ಮಾನ ಪಾಂತು ನಾವು ಸುಖದೊ ಳಿರುವೆವು ॥೫॥
ಕ್ಷೇಮವೇ ಶ್ರೀ

ಶ್ರೇಯಃ ಪ್ರಾರ್ಥನೆ.

ಶಾರ್ದೂಲ ವಿಕ್ರೀಡಿತ.

ಶ್ರೀ ಮತ್ಕೃಷ್ಣನೃಪಾಲಕಂಗೆ ಯುವರಾಜಂಗಂ ಮಹಾರಾಜ್ಞಿಗಂ ।
ಧೀಮನ್ಮಂತ್ರಿ ಸಮೂಹಕಂ ಸಕಲ ರಾಜ್ಯಾಂಗ ಪ್ರಜಾವರ್ಗಕಂ ।
ಕ್ಷೇಮಾರೋಗ್ಯ ಸುಸಂಪದಂಗಳ ಬೃಹದ್ಬಳ್ಳಾಪುರ ಸ್ಥಾಪಿತಂ ।
ಶ್ರೀಮದ್ವೇಂಕಟನಾಯಕಂ ಕುಡುಗೆ ಮೇಣ್ ರಕ್ಷಿಕ್ಕೆ ದೀರ್ಘಾಯುವಿಂ ॥

ಶ್ರೀ.

ಸ್ವಾಗತಗೀತಂ.

ನಾಟಿ ಅಥವಾ ಕಲ್ಯಾಣಿ ರಾಗದಲ್ಲಿ ಹಾಡತಕ್ಕದ್ದು.

ಭವತು ತೇ ಸ್ವಾಗತಂ ಭಾಗ್ಯಸಂಪಾದಿ ತಂ ।
ಭವತು ತೇ ಮಂಗಳಂ ಭವ್ಯತೇಜೋ ಬಲಂ

ಜಯತು ತೇ ಶಾಸನಂ ಶ್ರೇಯಸೋ ಭಾಜನಂ ।
ಜನತತೇಃ ರಂಜಕಂ ಸೌಖ್ಯಸಂದಾಯಕಂ ॥ ೧ ॥
ಸ್ವಾಗತಂ ಹೇ ಪ್ರಭೋ ಮಾನ್ಯ ತೇ ಸ್ವಾಗತಂ ।
ಸ್ವಾಗತಂ ಭೂರಿಶೋ ಧೀರ ತೇ ಸ್ವಾಗತಂ ॥
ಜಯತು ತೇ ಧರ್ಮಧೀಃ ಪುಣ್ಯಜಾ ಸರ್ವದಾ ।
ಸರ್ವದಾ ಸರ್ವದಾ ಸಾಧಿಕಾ ಸಾಧಿಕಾ ॥ ೨ ॥
ಆಯುರಾರೋಗ್ಯಕಂ ರಾಜಸಮ್ಮಾನಕಂ ।
ದೇವದೇವೋ ದದಾ ತ್ವಾಗತಾ ಯಾತ್ರ ತೇ ॥
ಭವತು ತೇ ಕಾರ್ಯಗಾ ಚಾತುರೀ ಭೂತಲೇ ।
ಪ್ರೀತಿದಾ ಕೀರ್ತಿದಾ ಮಾನ್ಯದಾ ದಕ್ಷ್ಯದಾ ॥ ೩ ॥

ಶ್ರೀಮತ್ಕೃಷ್ಣಾತ್ತ ಪೂರ್ವಾವತರಣ ಪದಗೇ ಪ್ರೀತ ವಿಶ್ವೇಶ ಭಾವೇ ।
ವಿದ್ಯಾವರ್ಷ ಪ್ರಭಾವಾತ್ಸರಸ ಹಿತದೇ ಪ್ರಾರ್ಥನೀಯೇಪ್ಯಯಾಪಿ ॥
ಆನಂದಾಬ್ಧಿ ಪ್ರವೃತ್ತಾತ್ತ ನುತವಿಭವಮಹಾಪ್ರಸ್ಥ ಭೂಮಿಂ ಪ್ರವಿಷ್ಟೇ ।
ಮೇಘ ಶ್ಯಾಮೇಸ್ತು ರಾಮೇ ಪ್ರಕೃತಿ ಶುಭಕರೇ ಸಂತತಂ ತೇ ಸುಖಾಶಾ ॥

ಕೃಷ್ಣಾಖ್ಯಬುದ್ಧಿ ಹಲೇನ ಹೃತ್‌ಸ್ಥಲಮಲಂ ಜ್ಞಾನಾಂಬುನಾಕ್ಷಾಳಿತಂ ।
ಸದ್ವಾಗ್ಬೀಜಮನೂನ್ಯತತ್ರ ಬಹುಧಾ ಸಂಪೋಷ್ಯ ಪ್ರೀತಿಲತಾಂ ।
ವಿಶ್ವಾಸಾದ್ರ್ರಸೇನಹಾಸ ಕುಸುಮಂ ದೃಷ್ಟ್ವಾ ಫಲಾಸ್ವಾದನಾತ್ ।
ವಾಂಛಾಪೂರ್ತಿ ಸುಖಾದಿ ಭಾಂಜಿ ಹಿ ಮಿಥಸ್ಸಂತುಷ್ಯತಾ ಜೀವಿತಂ ।

ಕಲ್ಯಾಣೀ ಅಥವಾ ಸುರಟೀ ರಾಗದಲ್ಲಿ ಹಾಡತಕ್ಕದ್ದು.

ದೇವೋವೆಂಕಟರಮಣೋ ಜಯತಿ ಮಹಾಪ್ರಸ್ಥನಾಮ ನಗರೇಸ್ಮಿನ್ ।
ಶ್ಯಾಮಾರ್ಯಂ ಪಾತು ಸದಾಸೋಯಂ ವಿದ್ಯಾಧಿಕಾರಧೌರೇಯಂ ॥

By C. VENKATA RAMNAIYA Esq. B.A.,
General and Revenue Secretary.

ಶಾಲಾಪತ್ರಕ.

ಪುಸ್ತಕ ೫೭. | ಫೇಬ್ರುವರಿ ೧೯೧೫. | ಸಂಚಿಕೆ ೨.

ಸ್ಫುಟ ವಿಷಯಗಳು.

೧. ಬಹುರತ್ನಾವಸುಂಧರಾ.

ಪ್ರತಿಯೊಂದು ಪ್ರಾಣಿಯ ಜೀವನಕ್ಕೆ ಅನ್ನ ನೀರು ಹವೆ ಈ ಮೂರು ಪದಾರ್ಥಗಳು ಅತ್ಯವಶ್ಯವಾಗಿ ಬೇಕು. ಇವುಗಳಲ್ಲಿ ಯಾವದೊಂದು ಪದಾರ್ಥವು ಕಡಿಮೆಯಾದರೆ ಆ ಪ್ರಾಣಿಯು ಬದುಕುವದು ಅಶಕ್ಯವೆಂಬದು ನಮಗೆ ತಿಳಿಯುತ್ತದೆ. ಸೃಷ್ಟಿ ಶಾಸ್ತ್ರಜ್ಞರು ಸಹ ಇಂದಿನ ವರೆಗೆ ಇದೇ ತತ್ವವನ್ನು ಪ್ರತಿಪಾದಿಸುತ್ತ ಬಂದರು. ಆದರೆ ಇತ್ತಿತ್ತಲಾಗಿ ಈ ತತ್ವಕ್ಕೆ ಬಾಧೆಯು ಬರಹತ್ತಿರುವದು. ಆಧುನಿಕನಾದ ಒಬ್ಬ ಶಾಸ್ತ್ರಜ್ಞನು ಬಸವನ ಹುಳದಮೇಲೆ ಒಂದು ಪ್ರಯೋಗವನ್ನು ಮಾಡಿನೋಡಿದನು. ಆ ಪ್ರಯೋಗದಿಂದ ಅವನು ಕಂಡುಕೊಂಡದ್ದೇನಂದರೆ:—

ಹವೆಯಲ್ಲಿ ಅತಿಶಯ ಚಳಿಬಿದ್ದಾಗ ಬಸವನ ಹುಳವು ತನ್ನ ಬೆನ್ನ ಮೇಲಿನ ಮನೆಯಲ್ಲಿ ಶರೀರವನ್ನೆಲ್ಲ ಎಳಕೊಂಡು ಒಳಗೆ ಕೂಡ್ರುವದು; ಹಾಗು ಚಳಿ ಗಾಳಿಗಳ ತೊಂದರೆಯು ಆಗಬಾರದೆಂದು ಆ ಮನೆಯ ಬಾಯಿಗೆ ಒಂದು ಪ್ರಕಾರದ ಜಿಗಟು ಪದಾರ್ಥವನ್ನು ಹಚ್ಚಿ ಮುಚ್ಚಿಬಿಡುವದು. ಈ ಪದಾರ್ಥವು ರೇಶಿಮೆಯಂತೆ ಇರುವದು. ಒಮ್ಮೆ ಈ ಪದಾರ್ಥವು ಆ ಮನೆಯ ಬಾಯಿಗೆ ಕೂತಿತೆಂದರೆ ಅದು ಹವೆ ನೀರುಗಳನ್ನು ಒಳಗೆ ಬಿಡುವದಿಲ್ಲ. ಈ ಸ್ಥಿತಿಯಲ್ಲಿ ಆ ಬಸವನ ಹುಳವು ಎಷ್ಟೋ ದಿವಸಗಳ ವರೆಗೆ ಇರುವದು. ಈ ಅವಧಿಯಲ್ಲಿ ಅದಕ್ಕೆ ಅನ್ನದ ಅವಶ್ಯಕತೆಯೂ ಇಲ್ಲವೆಂಬಂತಾಯಿತು. ಈ ಪ್ರಯೋಗದಿಂದ ಎಲ್ಲ ಪ್ರಾಣಿಗಳಿಗೆ ಅವಶ್ಯವಾಗಿ ಬೇಕಾಗುವಂಥ ಅನ್ನ ನೀರು ಹವೆ ಈ

ಮೂರು ಪದಾರ್ಥಗಳಿಲ್ಲದೆ ಕೆಲವು ದಿವಸಗಳ ವರೆಗೆ ಬದುಕುವಂಥ ಬಸವನ ಹುಳದಂಥ ಕೆಲವು ಪ್ರಾಣಿಗಳು ಈ ಸೃಷ್ಟಿಯ ಮೇಲೆ ಉಂಟೆಂದು ಸಿದ್ಧವಾಗುತ್ತದೆ.

ವನಸ್ಪತಿಗಳ ಸಂಬಂಧವಾಗಿ ಎಷ್ಟೋ ಚಮತ್ಕಾರದ ಸಂಗತಿಗಳು ಶೋಧದಿಂದ ಗೊತ್ತಾಗಿರುತ್ತವೆ. ಕೆಲವು ವನಸ್ಪತಿಗಳು ಮಾಂಸ ಭಕ್ಷಕವಾಗಿರುತ್ತವೆ; ಕೆಲವು ನಗುತ್ತವೆ; ಕೆಲವು ಅಳುತ್ತವೆ. ಆದರೆ ಕೆಮ್ಮುವ ಗಿಡಗಳ ಬಗ್ಗೆ ಮಾತ್ರ ಇನ್ನೂವರೆಗೆ ಕೇಳಿದ್ದಿಲ್ಲ. ಒಬ್ಬ ಫ್ರೆಂಚ ವನಸ್ಪತಿ ಶಾಸ್ತ್ರಜ್ಞನು ಈ ಕೆಮ್ಮುವ ಗಿಡವನ್ನು ಶೋಧಿಸಿ ತೆಗೆದಿದ್ದಾನೆ. ಈ ಗಿಡವು ಉಷ್ಣ ದೇಶಗಳಲ್ಲಿ ದೊರೆಯುವದು. ಇದರ ಕಾಯಿಯು ದೊಡ್ಡ ಅವರಿಯ ಕಾಳಿನಷ್ಟು ಇರುವದು. ಈ ಗಿಡದ ಎಲೆಯ ಮೇಲಿನ ಬದಿಗೆ ಕೋಣೆಗಳಂತೆ ಪೊಳ್ಳು ಪ್ರದೇಶಗಳು ಇರುವವು. ಅವುಗಳ ಮೂಲಕವಾಗಿ ಆ ಗಿಡವು ಶ್ವಾಸೋಚ್ಛ್ವಾಸವನ್ನು ಮಾಡುವದು. ಈ ಗಿಡದ ಎಲೆಯ ಮೇಲೆ ಧೂಳಿಯ ಕಣವು ಬಿದ್ದಕೂಡಲೆ ಮೇಲೆ ಹೇಳಿದ ಕೋಣೆಗಳಲ್ಲಿ ವಾಯುವು ಉತ್ಪನ್ನವಾಗಿ ಅವು ಉಬ್ಬುವವು. ಮತ್ತು ಆ ವಾಯುವನ್ನು ಹೊರದೂಡುವವು. ಈ ವಾಯುವು ಹೊರಗೆ ಹೋಗುವಾಗ ಫಟ್ ಎಂದು ಸಪ್ಪಳವಾಗುವದು. ಈ ಸಪ್ಪಳವು, ಶೀತವಿಕಾರದಿಂದ ಕೆಮ್ಮುವ ಹುಡುಗನ ಧ್ವನಿಯಂತೆಯೇ ಕೇಳಿಸುವದು. ಮತ್ತು ನೋಡುವವರಿಗೆ ಬಹಳ ಆಶ್ಚರ್ಯವಾಗುವದು.

---

೨. ಕೃತ್ರಿಮ ಬಣ್ಣವು.

ರಸಾಯನ ಶಾಸ್ತ್ರದ ಪ್ರಗತಿಯಾದಂದಿನಿಂದ ರಾಸಾಯನಿಕ ರೀತಿಯಿಂದ ಎಷ್ಟೋ ಹೊಸ ಹೊಸ ಪದಾರ್ಥಗಳನ್ನು ನಿರ್ಮಾಣ ಮಾಡಲಿಕ್ಕೆ ಬರಹತ್ತಿರುವದು. ನೀಲಿಯು ಮೊದಲು ಒಂದು ಬಗೆಯ ವನಸ್ಪತಿಯಿಂದ ಹುಟ್ಟುತ್ತಿತ್ತು. ಇತ್ತಿತ್ತಲಾಗಿ ರಾಸಾಯನಿಕ ರೀತಿಯಿಂದ ಸಿದ್ಧಮಾಡಿದ ಕೃತ್ರಿಮ ನೀಲಿಯು ಹೊರಟಿದ್ದರಿಂದ ಮೊದಲಿನ ನೀಲಿಯನ್ನು ಬೆಳೆಯಿಸುವ ಉದ್ಯೋಗವು ನಷ್ಟವಾಗಹತ್ತಿರುವದು. ಆದೇ ಪ್ರಕಾರ ಕೃತ್ರಿಮ ರಬ್ಬರನ್ನು ಮಾಡುವ ಯುಕ್ತಿಯೂ ಹೊರಟಿರುವದು. ಇದರಂತೆಯೇ ಅನೇಕ ಉದ್ಯೋಗಗಳಲ್ಲಿ ಕ್ರಾಂತಿಯಾಗಹತ್ತಿರುವದು. ಮೊದ

ಲು ಎಷ್ಟೋ ಬಣ್ಣಗಳನ್ನು ಗಿಡಗಳಿಂದ ಮಾಡುತ್ತಿದ್ದರು. ಆದರೆ ಪರದೇಶದಿಂದ ರಾಸಾಯನಿಕ ಬಣ್ಣಗಳು ಈ ದೇಶಕ್ಕೆ ಬಂದು ಅಗ್ಗವಾಗಿ ಮಾರಲ್ಪಡಹತ್ತಿದ್ದರಿಂದ ನಮ್ಮ ದೇಶದ ಮೊದಲಿನ ಬಣ್ಣಗಳು ಹಿಂದೆ ಬಿದ್ದವು. ಈ ಹೊಸ ಬಣ್ಣಗಳಲ್ಲಿ ರಾಸಾಯನಿಕ ದ್ರವ್ಯಗಳು ಇರುವದರಿಂದ ಅರಿವೆಯ ನೂಲುಗಳ ಮೇಲೆ ಪರಿಣಾಮವಾಗಿ ಅವು ಬೇಗ ಹರಿಯುತ್ತವೆ. ಮತ್ತು ಈ ಬಣ್ಣಗಳು ಉದ್ಭಿಜ್ಜ ಬಣ್ಣಗಳಂತೆ ಸ್ಥಿರವಾಗಿ ನಿಲ್ಲುವದಿಲ್ಲ. ಈ ವಿಷಯವಾಗಿ ಒಬ್ಬ ಅನುಭವಿಕನು ಬರೆಯುವದೇನಂದರೆ:—

“ಈ ಬಣ್ಣಗಳು ತೋರಿಕೆಯಲ್ಲಿ ಬಹಳ ಎದ್ದು ಕಾಣುವವು; ಆದರೆ ಬೇಗ ಹಾರಿ ಹೋಗುವವು. ಇವು ಅಗ್ಗವಾಗಿ ಸಿಗುವದರಿಂದ ಜನರು ಇವುಗಳನ್ನೇ ಕೊಳ್ಳುವರು; ಆದರೆ ಒಟ್ಟಿನ ಮೇಲೆ ಅವರಿಗೆ ಹಾನಿಯೇ ಆಗುವದು. ಇದಲ್ಲದೆ ಈ ಬಣ್ಣಗಳ ಪ್ರಸಾರದಿಂದ ಉದ್ಭಿಜ್ಜ ಬಣ್ಣಗಳನ್ನು ಮಾಡುವ ಕಲೆಯು ನಷ್ಟವಾಗಿ ಹೋಗುವದು.”

---

೩. ನಿಯಮಿತ ವರ್ತನವೂ ದೀರ್ಘಾಯುಷ್ಯವೂ.

‘ಎಮಿಲ’ ಅಥವಾ ‘ಶಿಕ್ಷಣ’ ವೆಂಬ ಪುಸ್ತಕದಲ್ಲಿ ರೂಸೋ ಎಂಬ ಗ್ರಂಥಕಾರನು ಒಂದು ಸ್ಥಳದಲ್ಲಿ ಒಂದು ಟಿಪ್ಪಣಿಯನ್ನು ಬರೆದಿದ್ದಾನೆ. ಅದರ ಆಶಯವೇನಂದರೆ:—ದೀರ್ಘಾಯುಷ್ಯವುಳ್ಳವರೆಲ್ಲರೂ ಬಹುಶಃ ಬಹಳ ವ್ಯಾಯಾಮವನ್ನು ಮಾಡುವವರೂ, ದೀರ್ಘಪರಿಶ್ರಮದವರೂ, ಕಷ್ಟಗಳನ್ನು ತಾಳಿಕೊಳ್ಳುವವರೂ ಆಗಿರುತ್ತಾರೆ. ಈ ಮಾತಿಗೆ ಅವನು ಹಳೆಯದಾದ ಒಂದು ಇಂಗ್ಲಿಷ ವರ್ತಮಾನಪತ್ರದೊಳಗಿನ ಸಂಗತಿಯನ್ನು ಉದಾಹರಣೆಗಾಗಿ ಕೊಟ್ಟಿದ್ದಾನೆ. “ಪ್ಯಾಟ್ರಿಕ್ ಓನೇಲನೆಂಬ ಇಂಗ್ಲಿಷ ಗೃಹಸ್ಥನು ೧೬೪೭ ನೇ ಇಸವಿಯಲ್ಲಿ ಹುಟ್ಟಿದನು; ಈ ಗೃಹಸ್ಥನು ಮೊನ್ನೆ ಮೊನ್ನೆ ೧೭೬೦ ನೇ ಇಸವಿಯಲ್ಲಿ ೭ ನೇ ಮದುವೆಯನ್ನು ಮಾಡಿಕೊಂಡಿರುವನು. ೨ನೇ ಚಾರ್ಲಸನ ಆಳಿಕೆಯ ೭ ನೇ ವರ್ಷ (೧೬೭೭) ದಂಡಿನಲ್ಲಿ ನೌಕರಿಯನ್ನು ಹಿಡಿದು ಅಂದಿನಿಂದ ೧೭೪೦ ನೇ ಇಸವಿಯವರೆಗೆ ಕೆಲಸವನ್ನು ಮಾಡಿದನು. ೩ನೇ ಉಯಿಲ್ಯಮ ಹಾಗು ಮಾರ್ಲ

ಬರೋ ಇವರು ಮಾಡಿದ ಎಲ್ಲ ದಂಡಯಾತ್ರೆಗಳಲ್ಲಿ ಈ ಗೃಹಸ್ಥನು ಇದ್ದನು. ಇವನು ಅತ್ಯಂತ ಸ್ವಾವಲಂಬನವುಳ್ಳವನಾಗಿದ್ದಾನೆ. ಇವನು ಯಾವಾಗಲೂ ಶಾಕಾಹಾರವನ್ನು ಮಾಡುತ್ತಾನೆ. ಎಂದಾದರೂ ತನ್ನ ಇಷ್ಟಮಿತ್ರರಿಗೆ ಮೇಜವಾನಿಯನ್ನು ಮಾಡಿದಾಗ ಮಾತ್ರ ಮಾಂಸಾಹಾರವನ್ನು ಮಾಡುವ ಪ್ರಸಂಗವು ಅವನಿಗೆ ಬರುವದು. ಇದರ ಹೊರತು ಎಂದೂ ಅವನು ಮಾಂಸಕ್ಕೆ ಕೈ ಹಚ್ಚುವದಿಲ್ಲ. ನಿತ್ಯದಲ್ಲಿ ಅವನು ಸೂರ್ಯಾಸ್ತವಾಗುತ್ತಲೆ ಮಲಗಿ ಸೂರ್ಯೋದಯಕ್ಕೆ ಸರಿಯಾಗಿ ಏಳುವನು; ಈ ಕ್ರಮವು ಅವನು ದಂಡಿನೊಡನೆ ಪರದೇಶಗಳಲ್ಲಿ ತಿರುಗುತ್ತಿರುವಾಗ ಮಾತ್ರ ತಪ್ಪುವದು. ಸದ್ಯಕ್ಕೆ ಈ ಗೃಹಸ್ಥನು ೧೩೦ ವರ್ಷದ ವಯಸ್ಸಿನವನಿರುವನು ಇಷ್ಟು ಮುದುಕನಾದರೂ ವ್ಯರ್ಥವಾಗಿ ವೇಳೆಯನ್ನು ಕಳೆಯದೆ ಏನಾದರೂ ಉಪಯುಕ್ತ ಕೆಲಸದಲ್ಲಿ ತೊಡಗಿರುವನು. ಬಡಿಗೆಯ ಸಹಾಯದಿಂದ ಓಡಾಡುವನು. ಪ್ರತಿ ರವಿವಾರ ಕ್ಕೊಮ್ಮೆ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳೊಡನೆ ಪ್ರಾರ್ಥನಾಲಯಕ್ಕೆ ಹೋಗುವನು."

---

೪. ಸಾಲೆಯ ತೋಟಗಳೂ ಅವುಗಳ ಉಪಯುಕ್ತತೆಯೂ.

ಸಾಲೆಯಲ್ಲಿ ವಿದ್ಯಾರ್ಥಿಗಳಿಗೆ ಕೊಡಲ್ಪಡುವ ಎಲ್ಲ ಪ್ರಕಾರದ ಶಿಕ್ಷಣದ ಸಂಗಡ ಪ್ರತ್ಯಕ್ಷ ವ್ಯಾವಹಾರಿಕ ಶಿಕ್ಷಣದ ಲಾಭವೂ ಅವರಿಗೆ ಆಗಬೇಕೆಂದು ಇಂದಿಗೆ ಹತ್ತು ವರ್ಷಗಳ ಪೂರ್ವದಲ್ಲಿ ಸಿಲೋನದ ವಿದ್ಯಾಖಾತೆಯವರು ಸಾಲೆಗೆ ಹೊಂದಿ ಒಂದು ತೋಟವು ಇರಬೇಕೆಂದು ಗೊತ್ತು ಮಾಡಿದರು. ಆ ಪ್ರಕಾರ ಅಲ್ಲಿಯ ಎಷ್ಟೋ ಸರಕಾರಿ ಹಾಗು ಖಾಸಗಿ ಶಾಲೆಗಳಿಗೆ ಹೊಂದಿ ತೋಟಗಳ ಯೋಜನೆಯು ಮಾಡಲ್ಪಟ್ಟಿತು. ಮೊದಲು ಈ ಕೆಲಸಕ್ಕಾಗಿ ಹನ್ನೆರಡು ಸಾಲೆಗಳು ಆರಿಸಲ್ಪಟ್ಟವು. ಒಂದೊಂದು ಸಾಲೆಗೆ ತೋಟದ ಕೆಲಸವನ್ನು ಮಾಡಿಸುವದಕ್ಕಾಗಿ ಕೆಲವು ಭೂಪ್ರದೇಶವು ಕೊಡಲ್ಪಟ್ಟಿತು. ಮತ್ತು ಆ ಭೂಮಿಗೆ ನೀರಿನ ವ್ಯವಸ್ಥೆಯು ಮಾಡಲ್ಪಟ್ಟಿತು. ಅಲ್ಪಾರಂಭಃ ಕ್ಷೇಮಕರಃ ಎಂಬಂತೆ ಅಲ್ಪ ಪ್ರಮಾಣದಿಂದ ಪ್ರಾರಂಭಿಸಿದ ಈ ಕಾರ್ಯವು ಈಗ ಬೆಳೆದು ಈವೊತ್ತಿಗೆ ಸಿಲೋನದಲ್ಲಿ ೨೫೦ ಸಾಲೆಗಳಿಗೆ ಹೊಂದಿ

ತೋಟಗಳಾಗಿರುತ್ತವೆ. ಈ ತೋಟಗಳೊಳಗಿನ ಎಲ್ಲ ಕೆಲಸಗಳು ಸಾಲೆಯ ಅಭ್ಯಾಸಕ್ರಮದಲ್ಲಿ ಸೇರಿಸಲ್ಪಟ್ಟಿರುವವು. ಆ ದೇಶದಲ್ಲಿ ತೋಟದ ಕೆಲಸಗಳ ವ್ಯವಸ್ಥೆಯು ಕೆಳಗೆ ಬರೆದಂತೆ ಮಾಡಲ್ಪಟ್ಟಿರುವದು. ಶಾಲಾಗೃಹದ ಸಮೀಪದಲ್ಲಿ ಮೊದಲೇ ಒಂದು ಎಕರೆ ಭೂಮಿಯು ಕಾದಿಡಲ್ಪಡುತ್ತದೆ. ಇಂಥ ಸರಕಾರಿ ಭೂಮಿಯು ದೊರೆಯದಂಥ ಸಾಲೆಯ ಸಲುವಾಗಿ ಡಿಸ್ಟ್ರಿಕ್ಟ ಸ್ಕೂಲ ಕಮಿಟಿಯವರು ಅಂಥ ಭೂಮಿಯನ್ನು ಕೊಂಡುಕೊಡುತ್ತಾರೆ; ಅಥವಾ ಬಾಡಿಗೆಯಿಂದ ತೆಗೆದುಕೊಂಡು ಕೊಡುತ್ತಾರೆ. ಇದಕ್ಕಾಗಿ ಬೇಕಾಗುವ ಹಣವು ಲೋಕಲ್‌ಫಂಡಿನೊಳಗೆ ಖರ್ಚು ಹಾಕಲ್ಪಡುತ್ತದೆ. ಕಂಪೌಂಡಿನ ತಂತಿಯಬೇಲಿಯು ಸಲುವಾಗಿಯೂ ಒಕ್ಕಲತನದ ಮುಟ್ಟುಗಳ ಸಲುವಾಗಿಯೂ ಹತ್ತುವ ವೆಚ್ಚವನ್ನು ಸರಕಾರದವರು ಕೊಡುತ್ತಾರೆ. ಈ ಕೆಲಸಗಳಿಗೆ ಸುಮಾರು ಇಪ್ಪತ್ತೈದು ರೂಪಾಯಿಗಳು ಹಿಡಿಯುವವು; ಆವಾರದ ಗೋಡೆಯನ್ನು ಕಟ್ಟಲಿಕ್ಕೂ ನೀರಿನ ವ್ಯವಸ್ಥೆಯನ್ನು ಮಾಡುವದಕ್ಕೂ ಅವಶ್ಯವಾಗಿರುವ ಹಣವನ್ನು ಪ್ರಾಂತಿಕ ಸರಕಾರದವರು ಕೊಡುವರು. ಈ ತೋಟಗಳ ಮೇಲ್ವಿಚಾರಣೆಯನ್ನು ಸುಪರಿಂಟೆಂಡೆಂಟರೆಂಬ ಅಧಿಕಾರಿಗಳು ಮಾಡುವರು ಅವರ ಕೈಕೆಳಗೆ ಮೂವರು ಇನಸ್ಪೆಕ್ಟರರೆಂಬ ಅಧಿಕಾರಿಗಳು ತಮ್ಮ ತಮ್ಮ ಅಧಿಕಾರಕ್ಷೇತ್ರದಲ್ಲಿ ತೋಟದ ಕೆಲಸವು ಸರಿಯಾಗಿ ನಡೆಯುವದೋ ಇಲ್ಲವೋ ಎಂಬದನ್ನು ನೋಡುತ್ತ ತಿರುಗುವರು. ಸಾಲೆಯ ತೋಟಗಳಲ್ಲಿ ಮೂರು ವಿಭಾಗಗಳು ಮಾಡಲ್ಪಟ್ಟಿರುತ್ತವೆ.

(೧) ಶೋಭೆಯಭಾಗ (ಹೂದೋಟ). (೨) ಪಲ್ಲೆಕಾಯಿಗಳನ್ನು ಬೆಳೆಯುವ ಭಾಗ. (೩) ಹಣ್ಣುಹಂಪಲಗಳನ್ನು ಬೆಳೆಯುವ ಭಾಗ.

ಮೊದಲನೆಯದಾದ ಹೂದೋಟದ ಭಾಗವು ಸಾಲೆಯ ಮುಂಭಾಗದಲ್ಲಿ ಇರುವದು. ಅದರಿಂದ ಸಾಲೆಗೆ ಒಂದು ತರದ ಸೌಂದರ್ಯವು ಉಂಟಾಗುವದು. ಸಾಲೆಯ ಎರಡೂ ಮಗ್ಗಲುಗಳಲ್ಲಿ ಕಾಯಿಪಲ್ಲೆಗಳನ್ನು ಬೆಳೆಯುವ ತೋಟಗಳನ್ನು ಮಾಡುವರು. ಹಿಂದಿನ ಮಗ್ಗಲು ನಾನಾಪ್ರಕಾರದ ಹಣ್ಣುಹಂಪಲಗಳ ಗಿಡಗಳನ್ನು ಹಚ್ಚಿ ಸಾಲೆಯ ನಾಲ್ಕೂ ಮಗ್ಗಲು ತೋಟವು ಶೋಭಿಸುವಂತೆ ಮಾಡಿರುತ್ತಾರೆ. ಇಂಥ ಸಾಲೆಯ ತೋಟಗಳಿಗೆ ಬೇಕಾಗುವ ತರತರದ ಬೀಜಗಳೂ ಸಸಿಗಳೂ

ಕೋಲಂಬೋದಿಂದ ಪೂರಯಿಸಲ್ಪಡುವವು. ಎಲ್ಲ ಸಾಲೆಗಳಿಗೆ ಬೇಕಾಗುವಷ್ಟು ಬೀಜಗಳನ್ನೂ ಸಸಿಗಳನ್ನೂ ಅಲ್ಲಿಯ ಒಂದು ತೋಟದಲ್ಲಿ ಸಂಗ್ರಹಿಸುವರು. ಮತ್ತು ಅವುಗಳನ್ನು ಬೇರೆ ಸಾಲೆಗಳಿಗೆ ಕಳಿಸುವ ಪೂರ್ವದಲ್ಲಿ ಅವು ಚನ್ನಾಗಿರುವವೋ ಇಲ್ಲವೋ ಎಂಬದನ್ನು ಕೋಲಂಬೋದ ಸಾಲೆಯ ತೋಟದಲ್ಲಿ ಉಪಯೋಗಿಸಿ ಪರೀಕ್ಷಿಸುವರು.

ಈ ತೋಟದಲ್ಲಿ, ಅಗಿಯುವ, ನೀರು ಹಣಿಸುವ ಮೊದಲಾದ ಶಾರೀರಿಕ ಶ್ರಮದ ಕೆಲಸಗಳನ್ನು ವಿದ್ಯಾರ್ಥಿಗಳು ಸ್ವತಃ ಮಾಡುವರು. ಇದಕ್ಕಾಗಿ ಸಂಬಳದ ಮನುಷ್ಯನನ್ನು ನಿಯಮಿಸುವದಿಲ್ಲ. ಪ್ರತಿದಿವಸ ಮುಂಜಾನೆ ಸಾಲೆಯ ಬೇರೆ ಅಭ್ಯಾಸಕ್ರಮವು ಆರಂಭವಾಗುವ ಪೂರ್ವದಲ್ಲಿ ವಿದ್ಯಾರ್ಥಿಗಳು ತೋಟದಲ್ಲಿ ದುಡಿಯಬೇಕಾಗುವದು. ಈ ತೋಟಗಳಲ್ಲಿ ಇಯತ್ತೆಗಳಂತೆ ವಿಭಾಗಗಳು ಮಾಡಲ್ಪಟ್ಟಿರುವವು. ಪ್ರತಿಯೊಂದು ಇಯತ್ತೆಯ ವಿದ್ಯಾರ್ಥಿಗಳು ತಮ್ಮ ತಮ್ಮ ಭಾಗದಲ್ಲಿ ತಮ್ಮ ಶಿಕ್ಷಕರ ಅಥವಾ ಹಿರೇಮಣಿಗಳ ಮೇಲ್ವಿಚಾರಣೆಯ ಕೆಳಗೆ ತಮ್ಮ ಪಾಲಿಗೆ ಬಂದ ಕೆಲಸವನ್ನು ಮಾಡಬೇಕಾಗುವದು. ಈ ಪ್ರಕಾರ ಎಲ್ಲ ವಿದ್ಯಾರ್ಥಿಗಳು ಪ್ರಾತಃಕಾಲದ ತಂಪು ಹೊತ್ತಿನಲ್ಲಿ ತೋಟದೊಳಗೆ ಶಾರೀರಿಕ ಶ್ರಮದ ಕೆಲಸವನ್ನು ಮಾಡಿ ವ್ಯಾವಹಾರಿಕ ಜ್ಞಾನವನ್ನು ಸಂಪಾದಿಸುವರು. ಈ ತರದ ಶಿಕ್ಷಣದ ಉಪಕ್ರಮವನ್ನು ಮಾಡಿದಾಗ ಎರಡು ಪ್ರಕಾರದ ತೊಂದರೆಗಳು ಸಂಭವಿಸಿದವು. ಮೊದಲನೇ ತೊಂದರೆಯು ಯಾವದೆಂದರೆ ವಿದ್ಯಾರ್ಥಿಗಳಿಗೆ ಇಂಥ ಶಾರೀರಿಕ ಶ್ರಮದ ಕೆಲಸಗಳನ್ನು ಸಾಲೆಯಲ್ಲಿ ಮಾಡಿಸಹತ್ತಿದ್ದರಿಂದ ಅವರ ತಾಯಿ ತಂದೆಗಳು ತಪ್ಪುತಿಳುವಳಿಕೆಯಿಂದ ಸಿಟ್ಟಾದದ್ದು. ಶಿಕ್ಷಕರಿಗೆ ತೋಟದ ಕೆಲಸದಲ್ಲಿ ಅನುಭವವಿಲ್ಲದ್ದು ಎರಡನೇ ತೊಂದರೆಯು. ಹುಡುಗರು ನಿತ್ಯದಲ್ಲಿಯೂ ಶ್ರಮದ ಕೆಲಸವನ್ನು ಮಾಡಹತ್ತಿದ್ದರಿಂದ ಅವರ ಶರೀರ ಪ್ರಕೃತಿಯಲ್ಲಿ ಆರೋಗ್ಯ ದೃಷ್ಟಿಯಿಂದ ಪ್ರಶಂಸನೀಯವಾದ ಸುಧಾರಣೆಯಾದದ್ದನ್ನು ಕಂಡು. ತೋಟದ ಕೆಲಸದಿಂದ ಪ್ರಯೋಜನವುಂಟೆಂದು ತಾಯಿತಂದೆಗಳ ಮನವರಿಕೆಯಾಗಿ ಅವರ ತಪ್ಪುತಿಳುವಳಿಕೆಯು ಕ್ರಮಕ್ರಮವಾಗಿ ದೂರಾಗಹತ್ತಿತು. ಮತ್ತು ತೋಟಗಳ ಮೇಲ್ವಿಚಾರಣೆಯನ್ನು ಮಾಡುವ ತಜ್ಞಶಾಸ್ತ್ರಜ್ಞರು ಶಿಕ್ಷಕರಿಗೆ ಪ್ರತ್ಯಕ್ಷವಾಗಿ ಶಿಕ್ಷಣವ

ನ್ನೂ ಅನೇಕ ಉಪಯುಕ್ತ ಸೂಚನೆಗಳನ್ನೂ ಆಗಾಗ್ಗೆ ಕೊಟ್ಟದ್ದರಿಂದ ಆನನುಭವಿಕರಾದ ಶಿಕ್ಷಕರಿಗೆ ತಟ್ಟಿದ ತೊಂದರೆಗಳೂ ದೂರಾದವು. ವಿದ್ಯಾರ್ಥಿಗಳಿಗೆ ಹ್ಯಾಗೆ ಕಲಿಸಬೇಕೆಂಬ ಬಗ್ಗೆ ಟ್ರೇನಿಂಗಕಾಲೇಜದ ವಿಷಯಗಳಲ್ಲಿ ನಿಸರ್ಗದ ಹಾಗು ಆ ಶಾಸ್ತ್ರದ ಮೂಲತತ್ವಗಳ ಜ್ಞಾನ ವನ್ನು ಮಾಡಿಕೊಡುವ ವ್ಯವಸ್ಥೆಯಾದದ್ದರಿಂದ ಸದ್ಯಕ್ಕೆ ಆದೇಶದಲ್ಲಿ ಅತ್ಯುತ್ಕೃಷ್ಟವಾದ ತೋಟಗಳನ್ನು ಮಾಡಿಸುವ ಒಳ್ಳೇ ಶಿಕ್ಷಕರು ದೊರೆಯುತ್ತಿರುವರು. ವಿದ್ಯಾರ್ಥಿಗಳು ಪ್ರಾರಂಭದಿಂದ ಕಡೆತನಕ ತೋಟದಲ್ಲಿ ಕೆಲಸ ಮಾಡುತ್ತಿರುವದರಿಂದ ಅವರಿಗೆ ತರತರದ ಕಾಯಿಪಲ್ಲೆಗಳ, ಹಣ್ಣುಹಂಪಲಗಳ ಸಾಗುವಳಿಯ ಸಪ್ರಯೋಗ ಜ್ಞಾನ ವಾಗಹತ್ತಿರುವದು. ಅದರಿಂದ ಅವರಿಗೆ ಎಷ್ಟೋ ವ್ಯಾವಹಾರಿಕ ಸಂಗತಿಗಳು ತಿಳಿಯುತ್ತಿರುವವು. ಹಣ್ಣುಹಂಪಲಗಳನ್ನು ಬೆಳೆಯಿಸುವಂಥ ಹೂದೋಟಗಳನ್ನೂ ಒಕ್ಕಲತನವನ್ನೂ ಮಾಡುವಂಥ ಜನರ ಮಕ್ಕಳಿಗೆ ಈ ತರದ ಸಪ್ರಯೋಗವಾದ ತೋಟದ ಶಿಕ್ಷಣವು ದೊರೆಯುವದರಿಂದ ಅವರ ಉದ್ಯೋಗಕ್ಕೆ ಬಹಳ ಸಹಾಯವಾಗುತ್ತಿರುವದು. ಈ ತರದ ಶಾಲೆಯ ತೋಟಗಳಿಂದ ಉತ್ಪನ್ನವಾಗುವ ಹುಟ್ಟುವಳಿಯನ್ನು ಶಿಕ್ಷಕರಿಗೂ ಕುಶಲರಾದ ವಿದ್ಯಾರ್ಥಿಗಳಿಗೂ ಹಂಚಿಕೊಡುವರು. ಇದಲ್ಲದೆ ಉತ್ತಮರೀತಿಯಿಂದ ತೋಟದಕೆಲಸವನ್ನು ಮಾಡಿದವರಿಗೆ ಇನಾಮು ಇಡಲ್ಪಟ್ಟಿರುವದು. ಒಂದೊಂದು ಇನಾಮು ಒಂದೊಂದು ಇಯತ್ತೆಗೆ ದೊರೆಯುವದು. ಆ ಇನಾಮಿನಲ್ಲಿ ಎರಡುಭಾಗಮಾಡಿ, ಒಂದು ಭಾಗವನ್ನು ಆ ವರ್ಗಕ್ಕೆ ತೋಟದಕೆಲಸವನ್ನು ಕಲಿಸಿದ ಶಿಕ್ಷಕನಿಗೂ ಉಳಿದ ಅರ್ಧ ಇನಾಮನ್ನು ಆ ವರ್ಗದಲ್ಲಿ ತೋಟದ ಕೆಲಸವನ್ನು ಮಾಡುವಲ್ಲಿ ಒಳ್ಳೇ ಕುಶಲರಾದ ಮೂವರು ವಿದ್ಯಾರ್ಥಿಗಳಿಗೂ ಕೊಡುವರು. ಈ ಮೇರೆಗೆ ಶಾಲೆಯಲ್ಲಿ ತೋಟವನ್ನು ಮಾಡಿಸುವ ಕೆಲಸದ ವಿಷಯವಾಗಿ ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ಪ್ರೋತ್ಸಾಹನವನ್ನು ಕೊಡುವ ವ್ಯವಸ್ಥೆಯಾಗಿರುವದು. ಸಾರಾಂಶವೇನಂದರೆ, ತೋಟದ ಶಿಕ್ಷಣದಿಂದ ವಿದ್ಯಾರ್ಥಿಗಳಿಗೆ ಶಾರೀರಿಕ ಮಾನಸಿಕ ನೈತಿಕ ಶಿಕ್ಷಣದ ಲಾಭವಾಗಿ ಅವರು ತಮ್ಮ ಆಯುಷ್ಯವನ್ನು ಸುಖದಿಂದ ಕಳೆಯಲು ತಕ್ಕವರಾಗುವರೆಂಬದು ಸಿಲೋನದೊಳಗಿನ ತೋಟಗಳ ಶಿಕ್ಷಣದಿಂದ ಅನುಭವಕ್ಕೆ ಬರಹತ್ತಿದೆ.

೪. ಚೀನದ ಗೋಡೆಯು.

ಈ ಗೋಡೆಯು ಭೂಮಂಡಲದಲ್ಲಿ ಅದ್ಭುತವಾಗಿರುವದು. ಇದು ಚೀನಕ್ಕೂ ತಾರ್ತಾರಿಗೂ ನಡುವೆ ಕಟ್ಟಲ್ಪಟ್ಟಿರುವದು. ತಾರ್ತಾರಿಯವರ ಉಪದ್ರವು ತಮಗಾಗಬಾರದೆಂದು ಚೀನೀ ಜನರು ಕ್ರಿ. ಶ. ಪೂರ್ವದಲ್ಲಿ ೨೦೪ನೇ ವರ್ಷ ಈ ಗೋಡೆಯನ್ನು ಕಟ್ಟಿ ಮುಗಿಸಿರುವರು. ಇದು ಎಷ್ಟೋ ಕಡೆಗೆ ಗುಡ್ಡಗಳ ಮೇಲೆಯೂ, ಕಂದರಗಳೊಳಗೂ ನದಿಗಳ ಮೇಲೆಯೂ ಹಾಯ್ದಿರುವದು. ಇದು ಒಂದು ತುದಿಯಿಂದ ಮತ್ತೊಂದು ತುದಿಯವರೆಗೆ ೧೫೦೦ ಮೈಲು ಉದ್ದವಾಗಿಯೂ, ೨೦ ಫೂಟು ಎತ್ತರವಾಗಿಯೂ, ಬುಡದಲ್ಲಿ ೨೫ ಫೂಟು ಮೇಲ್ಭಾಗದಲ್ಲಿ ೧೫ ಫೂಟು ಅಗಲವಾಗಿಯೂ ಇರುವದು.

---

೫. ಸಹರಾ ಅರಣ್ಯವು.

ಆಫ್ರಿಕಾಖಂಡದೊಳಗಿನ ಈ ಅರಣ್ಯವು ಭೂಮಂಡಲದಲ್ಲಿ ಅತ್ಯಂತ ದೊಡ್ಡದಾಗಿರುವದು. ಈ ವಿಶಾಲವಾದ ಉಸುಬಿನ ಬೈಲಿನ ಉದ್ದಳತೆಯು ೩೦೦೦ ಮೈಲು ಇರುವದು; ಸರಾಸರಿ ಅಗಲಳತೆಯು ೯೦೦ ಮೈಲು ಇರುವದು. ಈ ಪ್ರದೇಶದಲ್ಲಿ ಐದು, ಹತ್ತು, ಇಪ್ಪತ್ತು ವರ್ಷಗಳಿಗೊಮ್ಮೆ ಮಳೆಯ ಶಳಕುಗಳು ಆಗುವವು. ಬೇಸಿಗೆಯಲ್ಲಿ ಅತಿಶಯ ಶಕೆಯಾಗುವದು. ಚಳಿಗಾಲದಲ್ಲಿ ಉಷ್ಣಮಾಪಕ ಯಂತ್ರದೊಳಗಿನ ಪಾರಜವು ಆಗಾಗ್ಗೆ ಶೂನ್ಯಕ್ಕೆ ಇಳಿಯುವದು.

---

೬. ಜಗತ್ತಿನೊಳಗಿನ ದೊಡ್ಡಗಂಟೆಯು.

ರಶಿಯಾದೇಶದ ಹಳೆ ರಾಜಧಾನಿಯಾದ ಮಾಸ್ಕೋಪಟ್ಟಣದಲ್ಲಿ ಭೂಮಂಡಲದಲ್ಲಿ ಅತಿಶಯ ದೊಡ್ಡದಾದ ಒಂದು ಗಂಟೆಯು ಇರುವದು. ಅದರ ಬುಡದ ಪರಿಘವು ೬೭ ಫೂಟು ಇರುವದು; ಬುಡದಿಂದ ಮೇಲ್ಭಾಗದ ವರೆಗೆ ೨೧ ಫೂಟು ಎತ್ತರವಾಗಿರುವದು; ೨೩ ಇಂಚು ದಪ್ಪವಾಗಿರುವದು. ಅದರ ತೂಕವು ೨೧೭ ಟನ್ನು ಇರುವದು. ಈ ಗಂಟೆಯನ್ನು ಎಂದೂ ತೂಗಗಟ್ಟಿರುವದಿಲ್ಲ.

ಶಿಕ್ಷಣದ ವಿಷಯದಲ್ಲಿ ಫ್ರೊಬೆಲನ ವಿಚಾರಗಳು.

ಫ್ರೊಬೆಲನ ಹೆಸರನ್ನು ಕೇಳಿದವರನ್ನು ಅಪರೂಪವಾಗಿ ಕಾಣಬಹುದು. ಕಿಂಡರಗಾರ್ಟನ್ ಅಥವಾ ಬಾಲೋದ್ಯಾನ ಎಂಬ ಶಿಕ್ಷಣದ ಪದ್ಧತಿಯನ್ನು ಇದೇ ಗೃಹಸ್ಥನು ಪ್ರಚಾರದಲ್ಲಿ ತಂದನು. ಇವನು ಜರ್ಮನಿ ದೇಶದೊಳಗಿನ ಕಿಲ್ಹೊ ಎಂಬ ಹೆಸರಿನ ಹಳ್ಳಿಯಲ್ಲಿ ಇ. ಸ. ೧೮೧೭ ನೇ ಇಸವಿಯಲ್ಲಿ ಒಂದು ಮಾದರಿಯ ಸಾಲೆಯನ್ನು ಸ್ಥಾಪಿಸಿದನು. ಮತ್ತು ಆ ಸಾಲೆಯಲ್ಲಿ ತನ್ನ ಹೊಸ ಪದ್ಧತಿಯ ಅನುಭವವನ್ನು ತಕ್ಕೊಂಡನು. ಕ್ರಿ. ಶ. ೧೮೨೬ ನೇ ವರ್ಷ ಈ ಜರ್ಮನ್ ವಿದ್ವಾಂಸನು ಶಿಕ್ಷಣವಿಷಯವಾಗಿ ಒಂದು ಗ್ರಂಥವನ್ನು ಬರೆದು ಪ್ರಸಿದ್ಧಮಾಡಿದನು. ಇದಲ್ಲದೆ ಅವನು ಇನ್ನೂ ಎಷ್ಟೋ ಪುಸ್ತಕಗಳನ್ನು ಬರೆದಿರುವನು. ಹೊಸ ವಿಚಾರಗಳನ್ನೂ ಹೊಸಮತಗಳನ್ನೂ ಪ್ರಸಾರಮಾಡುವವರಿಗೆ ಒದಗುವ ಕಷ್ಟಗಳೆಲ್ಲ ಫ್ರೊಬೆಲ್ಲನಿಗೂ ಸಂಭವಿಸಿದವು. ಮುಂದೆ ಕಾಲಾನುಕ್ರಮದಿಂದ ಫ್ರೊಬೆಲನ ಅಭಿಪ್ರಾಯಗಳು ಜನರಿಗೆ ತಿಳಿಯಹತ್ತಿದ್ದರಿಂದ ಅವರು ಅವನ ಪದ್ಧತಿಗೆ ವಿಶೇಷವಾಗಿ ಮಾನಕೊಡಹತ್ತಿದರು.

ಫ್ರೊಬೆಲನು ಶಿಕ್ಷಣವಿಷಯವಾಗಿ ಬರೆದ ಗ್ರಂಥದಲ್ಲಿ ಶಿಕ್ಷಣದ ಮೂಲ ಉದ್ದೇಶವೂ, ಬಾಲ್ಯಾವಸ್ಥೆಯು ಮುಗಿಯುವ ವರೆಗೆ ಬಾಲಕರ ಶಿಕ್ಷಣಕ್ರಮವು ಹ್ಯಾಗಿರಬೇಕೆಂಬದೂ ವಿವೇಚಿಸಲ್ಪಟ್ಟಿರುವದು. ಪ್ರಾಥಮಿಕ ಶಿಕ್ಷಕರಿಗೆ ಈ ವಿಷಯದ ಮಹತ್ವವು ಎಷ್ಟಿರುವದೆಂಬದನ್ನು ಬೇರೆ ವಿವರಿಸಿ ಹೇಳುವಕಾರಣವಿಲ್ಲ; ಆದಕಾರಣ ಶಿಕ್ಷಕರಿಗೆ ಆ ಗ್ರಂಥದ ಪರಿಚಯವಿರುವದು ಅವಶ್ಯವು. ಇದಲ್ಲದೆ ಫ್ರೊಬೆಲಸಾಹೇಬರು ತಮ್ಮ ಬಾಲೋದ್ಯಾನ ಶಿಕ್ಷಣಪದ್ಧತಿಯ ಎಲ್ಲ ವಿಚಾರಗಳನ್ನು ಈ ಗ್ರಂಥದಲ್ಲಿ ಹೇಳಿರುವದರಿಂದ ಇದು ಬಾಲೋದ್ಯಾನ ಶಿಕ್ಷಣಪದ್ಧತಿಯ ಮೂಲಭೂತ ಗ್ರಂಥವಾಗಿರುವದು. ಅದರ ಪರಿಚಯವನ್ನು ಮಾಡಿಕೊಡುವದು ಈ ಲೇಖದ ಉದ್ದೇಶವಿರುವದು.

ಗ್ರಂಥದ ಪ್ರಾರಂಭದಲ್ಲಿ ವಿಷಯೋಪನ್ಯಾಸವನ್ನು ಮಾಡುವಾಗ ಫ್ರೊಬೆಲ್‌ಸಾಹೇಬರು ಅಂದದ್ದು:—"ಇಡೀ ವಿಶ್ವದಲ್ಲಿ ಒಂದು

ನಿತ್ಯವಾದ ದೈವಿಕ ಸತ್ತೆಯು ವಾಸಮಾಡುತ್ತಿರುವದು. ಯಾವತ್ತು ವಿಶ್ವವನ್ನು ವ್ಯಾಪಿಸುವಂಥ, ಚೈತನ್ಯ ಯುಕ್ತವಾದಂಥ, ಆತ್ಮಜ್ಞ (Selfconscious) ವಾದಂಥ, ಅಂತೆಯೇ ನಿತ್ಯವಾದಂಥ ಈ 'एकमेवाद्वितीयम्' ಸತ್ತೆಯೇ ಈಶ್ವರನು." ಇಡೀ ವಿಶ್ವವು ಈ ಸತ್ತೆಯಿಂದಲೇ ಉತ್ಪನ್ನವಾಗಿರುವದು. ಪ್ರತಿಯೊಂದು ವಸ್ತುವಿನಲ್ಲಿ ಈ ದೈವಿಕ ಶಕ್ತಿಯು ಇರುವದರಿಂದಲೇ ಅವಕ್ಕೆ ಅಸ್ತಿತ್ವವುಂಟಾಗಿರುವದು; ಮತ್ತು ಈ ದೈವಿಕ ಶಕ್ತಿಯನ್ನು ಪ್ರಕಟಮಾಡುವದೂ ತನ್ನ ಅನಿತ್ಯವಾದ ಜೀವನಕ್ರಮದಲ್ಲಿ ಈ ನಿತ್ಯವಾದ ಸತ್ತೆಯನ್ನು ತೋರ್ಪಡಿಸಿ, ತನಗೂ ವಸ್ತುಮಾತ್ರಗಳಿಗೂ ಇರುವ ಐಕ್ಯವನ್ನು ಸ್ಥಾಪಿಸುವದೂ ಪ್ರತಿಯೊಂದು ವಸ್ತುವಿನ ಜೀವನ ಕರ್ತವ್ಯವಾಗಿರುವದು. ಜೀವಿತದ ಈ ಅಂತಿಮ ಸಾಧ್ಯವನ್ನು ಸಾಧಿಸಲಿಕ್ಕೆ ಶಿಕ್ಷಣವು ಮುಖ್ಯಸಾಧನವಾಗಿರುತ್ತದೆ. ಈ ವಿಚಾರದಿಂದ ಫ್ರೋಬೆಲಸಾಹೇಬರ ಶಿಕ್ಷಣದ ವ್ಯಾಖ್ಯೆಯು ಕೆಳಗೆ ಬರೆದಂತೆ ಆಗಿರುವದು.—

"ಮನಸ್ಸು-ಬುದ್ಧಿಗಳಿಂದ ಯುಕ್ತವಾದಂಥ, ಸಂವೇದನಾಶಕ್ತಿಯು ಜಾಗ್ರತವಾಗಿರುವಂಥ ವ್ಯಕ್ತಿಗೆ, ಪ್ರತಿಯೊಂದು ವಸ್ತುವಿನಲ್ಲಿ ಇರುವ ಈಶ್ವರೀಸತ್ತೆಯನ್ನು ಗೊತ್ತುಹಿಡಿದು, ಅದರ ಶುದ್ಧ ಸ್ವರೂಪವನ್ನು ಬಹಿರಂಗ ಪಡಿಸುವ ಮಾರ್ಗಗಳನ್ನೂ ಸಾಧನಗಳನ್ನೂ ಕಲಿಸುವದೇ ಶಿಕ್ಷಣವು."

ಶಿಕ್ಷಣದಿಂದ, ಮನುಷ್ಯಪ್ರಾಣಿಗೆ ಸೃಷ್ಟಿಯೊಳಗಿನ ವಸ್ತುಗಳ ಬಹಿರ್ವ್ಯಾಪಾರದಿಂದ ಆವಿಷ್ಕೃತವಾಗುತ್ತಿರುವಂಥ ಅಂತರ್ಗತವಾದ ಈಶ್ವರೀಶಕ್ತಿಯನ್ನು ಗೊತ್ತುಹಿಡಿದು, ಸೃಷ್ಟಿ ಹಾಗು ಈಶ್ವರ ಇವರೊಡನೆ ಐಕ್ಯಹೊಂದಲಿಕ್ಕೆ ಬರುತ್ತದೆ.

ತರುವಾಯು, ಆ ಗ್ರಂಥದಲ್ಲಿ ಶಿಕ್ಷಣದ ಮಾರ್ಗವು ಹೇಳಲ್ಪಟ್ಟಿರುವದು. ಅಂತಃಸ್ಥಿತವಾದ ದಿವ್ಯಾಂಶವನ್ನು ಪ್ರಕಟಮಾಡುವದೇ ಪ್ರತಿಯೊಂದು ವಸ್ತುವಿನ ಇತಿಕರ್ತವ್ಯವಾಗಿರುವದರಿಂದ ಸ್ವಯಂಸ್ಫೂರ್ತಿಯನ್ನು ಪೂರ್ಣವಾಗಿ ವಿಕಾಸಗೊಳಿಸುವದೇ ಶಿಕ್ಷಣದ ನಿಜವಾದ ಮಾರ್ಗವೆಂದು ನಿರ್ಣಯವಾಗುತ್ತದೆ. ಪ್ರತಿಯೊಬ್ಬ ಮನುಷ್ಯನು ಸ್ವಾಭಾವಿಕವಾದ ಸೃಷ್ಟಿನಿಯಮಗಳಿಗೆ ಅನುಸಾರವಾಗಿಯೇ ತನ್ನ ಅಂತಿಮ ಹೇತುವನ್ನು ಸಾಧಿಸುವ ಮಾರ್ಗದಲ್ಲಿ ಇರುವದರಿಂದ

ಶಿಕ್ಷಣವು ಬಹಳಮಟ್ಟಿಗೆ ನಿಷ್ಕ್ರಿಯ (Passive) ವಾಗಿರುತ್ತದೆ. ಅಂತ ಸ್ಫೂರ್ತಿಗೆ ಅಡ್ಡಬರುವ ತೊಂದರೆಗಳನ್ನು ದೂರಮಾಡುವದೇ ಶಿಕ್ಷಣವು. ಇದಕಾರಣ ಚಿಕ್ಕಮಕ್ಕಳ ಸಹಜ ಸ್ಫೂರ್ತಿಯು ಹತ್ತಿಕ್ಕಲ್ಪಡದೆ ಅದರ ಪೋಷಣವಾಗಿ ಅದು ಶುದ್ಧ ರೀತಿಯಿಂದ ಪ್ರಬಲವಾಗುವಂತೆ ಶಿಕ್ಷಣ ಕ್ರಮವು ಇರಲಿಕ್ಕೆ ಬೇಕು.

ಐಕ್ಯ, ವೈಶಿಷ್ಟ್ಯ, ವೈವಿಧ್ಯ (Unity, Individuality, Diversity) ಈ ಮೂರು ಭಾವನೆಗಳು ಮನುಷ್ಯನ ಪ್ರಗಮನದ ದರ್ಶಕವಾಗಿರುತ್ತವೆ. ನಿಸರ್ಗದ ಅವಲೋಕನದಿಂದ ವೈವಿಧ್ಯದ ಕಲ್ಪನೆಯು ಹುಟ್ಟುವದು. ಮತ್ತು ಸ್ವತಃದ ವೈಶಿಷ್ಟ್ಯವು ಸಂವೇದನಾಶಕ್ತಿಯಿಂದ ತಿಳಿಯಹತ್ತುತ್ತದೆ. ಐಕ್ಯ ಭಾವನೆಯು ವಿಚಾರದಿಂದ ಪರಿಣತಾವಸ್ಥೆಯನ್ನು ಹೊಂದುವದು. ಮನುಷ್ಯಪ್ರಾಣಿಯು ಹುಟ್ಟಿದಾಗ ಪ್ರಾರಂಭದಲ್ಲಿ ಅವನಿಗೆ ವೈಶಿಷ್ಟ್ಯದ ಹೊರತು ಬೇರೆ ಏನೂ ಗೊತ್ತಿರುವದಿಲ್ಲ. ಮುಂದೆ ಕ್ರಮ ಕ್ರಮವಾಗಿ ಅವನು ಇಂದ್ರಿಯಗಳ ಉತ್ಪತ್ತಿಗೆ ಅನುಸಾರವಾಗಿ ಜಗತ್ತಿನ ವೈವಿಧ್ಯವನ್ನು ಗ್ರಹಣಮಾಡುತ್ತ ಹೋಗುವನು. ತಾಯಿಯನ್ನು ನೋಡಿದಕೂಡಲೆ ನಗೆ ಬರೋಣವು ಬಾಲಕನ ಮನಸಿನಲ್ಲಿ ಸಾಧರ್ಮ್ಯಭಾವವು ಉತ್ಪನ್ನವಾದ ಚಿಹ್ನವಾಗಿರುತ್ತದೆ. ಮುಂದೆ ಈ ಐಕ್ಯಭಾವನೆಯು ಬೆಳೆಯುತ್ತ ಹೋಗುವದು. ಈ ಭಾವನೆಯು ಪ್ರಬಲವಾಗುವದೂ, ಸರ್ವಸಂಕಷವಾದದ್ದೂ ಆಗಬೇಕಾದರೆ ಫ್ರೊಬೆಲಸಾಹೇಬರ ಮತದಂತೆ ಶಿಕ್ಷಣದ ಸಹಾಯವು ದೊರೆಯುವದು ಅವಶ್ಯವು. ಈ ಪ್ರಸಂಗದಲ್ಲಿ ಫ್ರೊಬೆಲಸಾಹೇಬರು, ಕ್ರಿಸ್ತೀಧರ್ಮದಲ್ಲಿ ಹೇಳಿದ ತ್ರಿಪುಟಿಯು ಪ್ರತಿಯೊಂದು ಸಂಗತಿಯಲ್ಲಿ ನಮ್ಮ ಅನುಭವಕ್ಕೆ ಬರುವದೆಂದು ಬರೆಯುತ್ತಾರೆ. ಪ್ರತಿಯೊಂದು ಸಂಗತಿಯಲ್ಲಿ ಎರಡು ವಿರುದ್ಧ ತತ್ವಗಳೂ, ಅವುಗಳ ಪರಸ್ಪರ ಸಂಬಂಧವೂ ಈ ಮೂರರ ಯೋಗವು ದೃಷ್ಟಿಗೆ ಬೀಳುತ್ತದೆ.

(Trinity has become a cornerstone, which people had rejected, because they did not understand its meaning. To eyes that can see, the Trinity of god is manifest in all his works. Do we not every where see the Three in contrasts and their connections?)

ಕ್ರಿಯೆ, ಪ್ರತಿಕ್ರಿಯೆ, ಗತಿ, ಹಾಗು ಪ್ರಕೃತಿ (Matter), ಪುರುಷ (force) ಸೃಷ್ಟಿ ಇವೇ ಮೊದಲಾದ ತ್ರಿಪುಟಿಗಳನ್ನು ನಾವು ನೋಡುತ್ತೇವೆ. ಪ್ರತಿಯೊಂದು ಪದಾರ್ಥದ ಜ್ಞಾನದ ಸಂಗಡ ಅದರ ವ್ಯತಿರೇಕದ ಜ್ಞಾನವೂ ಆಗುವದು. ವಸ್ತು, ಹಾಗು ಅದರ ವ್ಯತಿರೇಕ ಇವುಗಳ ಸಂಬಂಧವು ಎಷ್ಟು ಪೂರ್ಣವಾಗಿ ತಿಳಿಯುವದೋ, ಅಷ್ಟೇ ಪೂರ್ಣಸ್ಥಿತಿಗೆ ಆ ಜ್ಞಾನವು ಹೋಗಿ ಮುಟ್ಟುವದು.

ಇಷ್ಟಾದ ಬಳಿಕ ಆ ಗ್ರಂಥದಲ್ಲಿ ಮನುಷ್ಯನ ಇಂದ್ರಿಯಗಳ ಧರ್ಮಗಳೂ, ಅವುಗಳ ಉದ್ಬೋಧನದ ಅನುಕ್ರಮವೂ ಹೇಳಲ್ಪಟ್ಟಿರುವವು. ಬಾಹ್ಯೇಂದ್ರಿಯಗೋಚರವಾದ ವಸ್ತುಗಳಲ್ಲಿ ಘನ, ದ್ರವ, ವಾಯುರೂಪ ಸ್ಥಿತಿಗಳು ಪ್ರಧಾನವಿರುವದರಿಂದ ಅವುಗಳ ಜ್ಞಾನ ಮಾಡಿಕೊಡುವದಕ್ಕಾಗಿ ನಮಗೆ ಬೇರೆ ಬೇರೆ ಇಂದ್ರಿಯಗಳು ಕೊಡಲ್ಪಟ್ಟಿರುವವು. ಅದೇ ಪ್ರಕಾರ ಪ್ರತಿಯೊಂದು ವಸ್ತುವಿಗೆ ಸ್ಥೈರ್ಯವು ಇಲ್ಲವೆ ಗತಿಯು ಇರುವದು. ಇದಕ್ಕಾಗಿ ಸ್ಥಿರ ಪದಾರ್ಥಗಳನ್ನು ಗ್ರಹಣಮಾಡುವದಕ್ಕಾಗಿ ಬೇರೆ ಇಂದ್ರಿಯಗಳನ್ನೂ ಚರಪದಾರ್ಥಗಳ ಜ್ಞಾನಕ್ಕಾಗಿ ಬೇರೆ ಇಂದ್ರಿಯಗಳನ್ನೂ ಈಶ್ವರನು ಯೋಜನೆಯನ್ನು ಮಾಡಿರುವನು. ಉದಾಹರಣಾರ್ಥವಾಗಿ ವಾಯುರೂಪ ಪದಾರ್ಥಗಳ ಗ್ರಹಣಶಕ್ತಿಯು,ನೇತ್ರ ಹಾಗು ಕರ್ಣ ಇವುಗಳಿಗೆ ಹಂಚಿಕೊಡಲ್ಪಟ್ಟಿರುವದು. ಪ್ರವಾಹಿ ಪದಾರ್ಥಗಳ ಜ್ಞಾನವು, ರಸನೆ ಹಾಗು ಘ್ರಾಣ ಈ ಇಂದ್ರಿಯಗಳಿಗೆ ಒಪ್ಪಿಸಲ್ಪಟ್ಟಿರುವದು. ಘನಪದಾರ್ಥಗಳ ಆಕಲನ ಮಾಡುವದಕ್ಕಾಗಿ ತ್ವಗಿಂದ್ರಿಯ ಹಾಗು ಸ್ಪರ್ಶೇಂದ್ರಿಯಗಳು (organs of feeling and touch) ಇರುವವು. ಫ್ರೋಬೆಲಸಾಹೇಬರ ಮತದ ಪ್ರಕಾರ ಶ್ರೋತ್ರ ನೇತ್ರ ಇತ್ಯಾದಿ ಅನುಕ್ರಮದಿಂದ ಇಂದ್ರಿಯಗಳ ಉದ್ಬೋಧನವಾಗುತ್ತದೆ. ಮುಂದೆ ಇಂದ್ರಿಯಗಳ ಬೆಳವಣಿಗೆಯು ಕಡಿಮೆ ಆಗುತ್ತ ಹೋಗುವದೆಂದು ಹೇಳಲ್ಪಟ್ಟಿರುವದು. ಆ ಪ್ರಸಂಗದಲ್ಲಿ ಫ್ರೋಬೆಲಸಾಹೇಬರು ಚಿಕ್ಕಮಕ್ಕಳ ಹಾಸಿಗೆಯ ಮೇಲೆ ಚಿತ್ರವಿಚಿತ್ರವಾದ ಬಣ್ಣದ ಕೃತ್ರಿಮ ಪದಾರ್ಥಗಳನ್ನು (ಗುಬ್ಬಿ ಚಂಡು ಮೊದಲಾದವುಗಳನ್ನು) ತೂಗಗಟ್ಟಬೇಕೆಂತಲೂ, ಅದರಿಂದ ಜಾಗ್ರತಾವಸ್ಥೆಯಲ್ಲಿ, ಹುಡುಗರ ಮನಸು ಹಾಗು ಇಂದ್ರಿಯಗಳು ಅವ್ಯಾಪೃತವಾಗಿ ಉಳಿಯುವದಿಲ್ಲೆಂತಲೂ ಸೂಚಿಸಿದ್ದಾರೆ.

ಅಂತರ್ವ್ಯಾಪಾರಗಳನ್ನು ಹೊರಗೆಡವುವ ಮುಖ್ಯ ಸಾಧನವೇ ಭಾಷೆಯು. ಹುಡುಗರು ಮಾತಾಡಹತ್ತಿದವೆಂದರೆ ಅವರ ಸ್ತನ್ಯಾವಸ್ಥೆಯು ಮುಗಿದು, ಶೈಶವಾವಸ್ಥೆಯು ಪ್ರಾರಂಭವಾಯಿತೆಂದು ತಿಳಿಯತಕ್ಕದ್ದು. ಇಲ್ಲಿ ಎರಡು ಮಹತ್ವದ ಸಂಗತಿಗಳನ್ನು ಲಕ್ಷದಲ್ಲಿಡತಕ್ಕದ್ದು:—

(೧) ಈ ಅವಸ್ಥಾಂತರಗಳೆಂದರೆ, ಸಾವಕಾಶವಾಗಿ ಬದಲಾಗುತ್ತ ಹೋಗುವ ಜೀವನ ಸ್ಥಿತ್ಯಂತರಗಳಾಗಿರುತ್ತವೆ. ವಿಶಿಷ್ಟವಾದ ಒಂದು ಕಾಲದಲ್ಲಿ ಒಂದು ಅವಸ್ಥೆಯು ಮುಗಿದು ಎರಡನೇ ಅವಸ್ಥೆಯು ಪ್ರಾರಂಭವಾಯಿತೆಂದು ಹೇಳುವದು ಅಶಾಸ್ತ್ರೀಯವಾದ ಸಂಗತಿಯು.

(೨) ಬೇರೆ ಬೇರೆ ಅವಸ್ಥೆಗಳಿಗೆ ಅನುರೂಪವಾದ ಮಕ್ಕಳ ವ್ಯಾಪಾರಗಳಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಡಲಿಕ್ಕೆ ಬೇಕು. ಕೂಸು ಗಾಂಭೀರ್ಯದಿಂದ ನಡೆಯುವದು ಶಕ್ಯವಲ್ಲ. ಹಾಗು ಇಷ್ಟವೂ ಅಲ್ಲ.

ಚಿಕ್ಕಮಕ್ಕಳ ಆಟಗಳು ಅವರ ಉತ್ಕ್ರಾಂತಿಯೊಳಗಿನ ಅತ್ಯಂತ ಮಹತ್ವದ ಸಂಗತಿಗಳಾಗಿರುತ್ತವೆ. ಆಟಗಳಲ್ಲಿ ಸೇರಿಕೆಯು ಇಲ್ಲದ ಹುಡುಗರ ಬೆಳವಣಿಗೆಯು ಸರಿಯಾಗಿ ಆಗಿರುವದಿಲ್ಲೆಂದು ಖಂಡಿತವಾಗಿ ತಿಳಿಯತಕ್ಕದ್ದು. ಹುಡುಗರ ಆಟಗಳು ಪ್ರೌಢರ ಆಟಗಳಂತೆ ಕೇವಲ ವಿನೋದಮೂಲಕವಾಗಿರದೆ ನಿಜವಾದ ಕ್ರಿಯಾಶಕ್ತಿಯ ದರ್ಶಕವಾಗಿರುತ್ತವೆ. ಅವರ ಆಟಗಳ ಬಾಹ್ಯ ಸ್ವರೂಪವು ಮಾತ್ರ ವಿನೋದದಂತೆ ಕಾಣುವದು. ಆಟಗಳು ಮನುಷ್ಯನ ಕಲ್ಪನಾಶಕ್ತಿಯ ಮೊದಲನೇ ಸ್ವರೂಪವಾಗಿರುತ್ತವೆ. ಶಾರೀರಿಕ ಮಾನಸಿಕ ಶಕ್ತಿಗಳನ್ನು ಪ್ರಕಟ ಮಾಡುವದೇ ಆಟಗಳ ಉದ್ದೇಶವಾಗಿರುವದು. ಈ ಕಾರ್ಯದಿಂದ ಉತ್ಪನ್ನವಾಗುವ ಫಲದ ಕಡೆಗೆ ದೃಷ್ಟಿಯನ್ನಿಟ್ಟು, ಆ ಉದ್ದೇಶವನ್ನೇ ಸಾಧಿಸುವ ಯತ್ನಮಾಡಿದರೆ, ಆಟಗಳೇ ಅಭ್ಯಾಸದಲ್ಲಿ ರೂಪಾಂತರವಾಗುವವು. ಶಿಕ್ಷಣ ಕ್ರಮವು ಒಳ್ಳೇ ರೀತಿಯಿಂದ ಸಾಗುತ್ತಿದ್ದಲ್ಲಿ, ಆಟ ಅಭ್ಯಾಸ ಇವುಗಳಲ್ಲಿ ಭೇದವೇನೂ ತೋರದೆ, ಇವೆರಡೂ ಆಟದ ವಿಶೇಷ ಪ್ರಕಾರಗಳೆಂದು ಹುಡುಗರ ಅನುಭವಕ್ಕೆ ಬರುವದು. ಫ್ರೋಬೆಲ್ಲನು ತನ್ನ ಶಿಕ್ಷಣಪದ್ಧತಿಯನ್ನು ಪ್ರಾರಂಭಿಸಿದ ಸಾಲೆಯನ್ನು ನೋಡಿ, ಒಬ್ಬ ಲೇಖಕನು:— ಒಮ್ಮೆ ನಾನು ಈ ಸಾಲೆಯನು, ನೋಡಲಿಕ್ಕೆ

ಹೋಗಿದ್ದೆನು. ಅದರಿಂದ ಚಿಕ್ಕ ಮಕ್ಕಳ ವರ್ಗದ ಶಿಕ್ಷಣವನ್ನು ಪ್ರಾರಂಭಿಸಲಿಕ್ಕೆ ಸ್ವಲ್ಪ ಹೊತ್ತಾಯಿತು. ಅದರಿಂದ ಆ ವರ್ಗದೊಳಗಿನ ಐದು ವರ್ಷದ ಹುಡುಗರು ಫ್ರೊಬೆಲನ ಬಳಿಗೆ ಬಂದು—"ಇಂದು ನಮಗೆ ಕಲಿಸುವದಿಲ್ಲೇನು? ದೊಡ್ಡವರಿಗಷ್ಟೇ ಕಲಿಸುವಿರೇನು?" ಎಂದು ಕೇಳುತ್ತಿದ್ದರು.

ಶೈಶವಾವಸ್ಥೆಯಲ್ಲಿ ಮಕ್ಕಳ ಶಿಕ್ಷಣದ ಜವಾಬದಾರಿಯು ತಾಯಿಯಮೇಲೆ ಇರುತ್ತದೆ. ಅವರ ಅನ್ನ, ವಸ್ತ್ರ, ಆಟ ಮುಂತಾದ ಎಲ್ಲ ಸಂಗತಿಗಳ ವಿಷಯವಾಗಿ ತಾಯಿಯು ಬಹಳ ಎಚ್ಚರಪಡತಕ್ಕದ್ದು. ಹುಡುಗರ ಜಿಜ್ಞಾಸೆಯೂ ಅಂತಸ್ಸ್ಫೂರ್ತಿಯೂ ಜಾಗ್ರುತವಾಗುವಂತೆ ಪ್ರಯತ್ನ ಮಾಡತಕ್ಕದ್ದು. ಚಿಕ್ಕ ಮಕ್ಕಳು ಭಾವೀರಾಷ್ಟ್ರವಾಗಿರುವದರಿಂದ ಈ ಕಾಲಕ್ಕೆ ಅವರ ಸಂಗೋಪನದ ಕಾರ್ಯವನ್ನು ತಾಯಿಯು ಸ್ವತಃ ಮೈಮೇಲೆ ತೆಗೆದುಕೊಳ್ಳುವದು ಅತ್ಯಾವಶ್ಯವು. ಆದರೆ ನಮ್ಮ ದೇಶದಲ್ಲಿ ಸ್ತ್ರೀಶಿಕ್ಷಣದ ಅಭಾವದ ಮೂಲಕವಾಗಿ ಎಷ್ಟೋ ತಾಯಂದಿರಲ್ಲಿ ಈ ಕಾರ್ಯವನ್ನು ನಿರ್ವಹಿಸಲು ಸಾಮರ್ಥ್ಯವಿರುವದಿಲ್ಲ. ಈ ವಯಸ್ಸಿನಲ್ಲಿ ಹುಡುಗರಿಗೆ ಗಾಯನದಲ್ಲಿ ವಿಶೇಷ ಪ್ರೀತಿ ಇದ್ದದ್ದು ಕಂಡು ಬರುವದು. ಅವರು ಹಾಡಿಕೆಯ ಮಾತುಗಳನ್ನು ಸಹ ತಾಳದಲ್ಲಿಯೂ ಸ್ವರದಲ್ಲಿಯೂ ಅನ್ನಲಿಕ್ಕೆ ಪ್ರಯತ್ನ ಮಾಡುವರು. ತಾಯಿಯು ಸ್ವತಃ ಹಾಡಿ ಮಕ್ಕಳ ಈ ಪ್ರವೃತ್ತಿಯನ್ನು ಬೆಳೆಯಿಸತಕ್ಕದ್ದು. ಇನ್ನೊಂದು ಮಹತ್ವದ ಸಂಗತಿಯು ಯಾವದೆಂದರೆ ಈ ಅವಸ್ಥೆಯಲ್ಲಿ ಹುಡುಗರು ನಾನಾ ತರದ ಪ್ರಶ್ನಗಳನ್ನು ಕೇಳುವರು; ಆ ಪ್ರಶ್ನಗಳನ್ನು ಒಮ್ಮೆಲೆ ತಿರಸ್ಕರಿಸುವದು, ಅಥವಾ ಅವುಗಳ ಉತ್ತರವನ್ನು ಹೇಳಿ ಬಿಡುವದು ಸರಿಯಲ್ಲ; ಶಕ್ಯವಿದ್ದಷ್ಟು ಮಟ್ಟಿಗೆ ಆ ಪ್ರಶ್ನಗಳ ಉತ್ತರವನ್ನು ಅವರೇ ಶೋಧಿಸಿ ತೆಗೆಯುವಂತೆ ಪ್ರಯತ್ನ ಮಾಡತಕ್ಕದ್ದು. ಈ ವಿಷಯವಾಗಿ ಫ್ರೊಬೆಲ ಸಾಹೇಬರು—"ನಾವು ಪುನಃ ಮನಸಿನಿಂದ ಶೈಶವಾವಸ್ಥೆಯನ್ನು ಹೊಂದಿ ಹುಡುಗರ ಸಂಗಡಿಗರಾಗಲಿಕ್ಕೆ ಬೇಕು. ಅಂದರೆ ಮಾತ್ರ ನಾವು ಅವರಿಗೆ ಕಲಿಸಲು ಸಮರ್ಥರಾಗುವೆವು" ಎಂದು ಹೇಳಿದ್ದಾರೆ.

ಶಬ್ದ ಹಾಗೂ ಅವರಿಂದ ಬೋಧವಾಗುವ ವಸ್ತು ಇವುಗಳಲ್ಲಿರುವ ಭೇದವು ತಿಳಿಯಹತ್ತಿತೆಂದರೆ ಶೈಶವಾವಸ್ಥೆಯು ಮುಗಿದು ಬಾಲ್ಯಾವಸ್ಥೆ (Boyhood)ಯು ಪ್ರಾರಂಭವಾಯಿತೆಂದು ತಿಳಿಯತಕ್ಕದ್ದು. ವಸ್ತು ಹಾ

ಗೂ ಅದರ ಹೆಸರು, ವಕ್ತಾ ಹಾಗು ವಾಕ್ಯ ಇವು ಬೇರೆ ಬೇರೆ, ಎಂಬದು ತಿಳಿಯಹತ್ತಿದರೆ, ಬಾಲ್ಯಾವಸ್ಥೆಯು ಪ್ರಾರಂಭವಾಯಿತೆಂದು ತಿಳಿಯತಕ್ಕದ್ದು. ಈ ಅವಸ್ಥೆಯಲ್ಲಿ ಮನುಷ್ಯನು ಜಿಜ್ಞಾಸುವಾಗಿರುತ್ತಾನೆ. ಯಾವದೊಂದು ಸಂಗತಿಯನ್ನು ತಿಳಕೊಳ್ಳಬೇಕೆಂಬ ಲವಲವಿಕೆಯು ಅವನ ಮನಸಿನಲ್ಲಿ ಉತ್ಪನ್ನವಾಗುವದು. ಈ ವಯಸ್ಸಿನಲ್ಲಿ ಅವನಿಗೆ ಶಿಕ್ಷಣವು ಅವಶ್ಯವಾಗಿರುತ್ತದೆ. ಇಚ್ಛಾಶಕ್ತಿಗೆ ಸ್ಥೈರ್ಯವನ್ನುಂಟುಮಾಡಿ, ಅದರ ಶಕ್ತಿಯನ್ನು ಬೆಳೆಯಿಸಿ, ಅದಕ್ಕೆ ಶುದ್ಧ ಸ್ವರೂಪವನ್ನು ಕೊಡುವದೇ, ಈ ವಯಸ್ಸಿನಲ್ಲಿ ಕೊಡತಕ್ಕ ಶಿಕ್ಷಣದ ಮುಖ್ಯೋದ್ದೇಶವಾಗಿರತಕ್ಕದ್ದು.

ಹುಡುಗರ ದೃಷ್ಟಿಗೆ ಅವರ ಮನೆಯು ಜಗತ್ತಿನ ಮಾದರಿಯಾಗಿ ತೋರುತ್ತದೆ. ಪವಿತ್ರತೆ, ಕಾರ್ಯಕ್ಷಮತೆ, ದಕ್ಷತೆ, ಐಕ್ಯ ಇವೇ ಮೊದಲಾದ ಗುಣಗಳು ಕುಟುಂಬದಲ್ಲಿ ಯಾವ ಪ್ರಮಾಣದಿಂದ ಕಂಡು ಬರುವವೋ, ಅದೇ ಪ್ರಮಾಣದಿಂದ ಆ ಕುಟುಂಬದಲ್ಲಿ ಬೆಳೆಯುವ ಹುಡುಗನ ಮನಸಿನ ಪ್ರವೃತ್ತಿಗಳಾಗುವವೆಂಬದು ಸ್ಪಷ್ಟವು. ಈ ಬಗ್ಗೆ ಫ್ರೊಬೆಲ ಸಾಹೇಬರು "ಜ್ಞಾನ (Light), ಪ್ರೇಮ (Love) ಸಂರಕ್ಷಣ (Life) ಇವು ಮನುಷ್ಯತ್ವದ ಮೂರು ಅಂಗಗಳಾಗಿರುತ್ತವೆ. ಇವೇ ಅನುಕ್ರಮವಾಗಿ ಕುಟುಂಬದೊಳಗಿನ ತಂದೆ, ತಾಯಿ, ಬಾಲಕ ಇವರ ಸ್ಥಾನವನ್ನು ಹೊಂದುವವು. ಇವುಗಳಲ್ಲಿ ಪ್ರೇಮವು ಹೆಚ್ಚು ಪ್ರಬಲವಾದದ್ದಿರುತ್ತದೆ. ಜ್ಞಾನದಿಂದ ವ್ಯಕ್ತಿಗೆ ದೊಡ್ಡಿಸ್ತನವು ಉಂಟಾಗಬಹುದು. ಆದರೆ ಪ್ರೇಮವು ಜೀವಿತದ ಸಾರವಾಗಿರುತ್ತದೆ. ಅಂತಃಕರಣವನ್ನು ಬಿಚ್ಚಿಬಿಟ್ಟು, ಶ್ರದ್ಧೆಯಿಂದಲೂ, ಅನನ್ಯಭಕ್ತಿಯಿಂದಲೂ ಅಗಾಧವೂ ಅನವಚ್ಛಿನ್ನವೂ ಆದ ಪರಮೇಶ್ವರನ ಚರಣದಲ್ಲಿ ಜೀವಿತವನ್ನು ಅರ್ಪಿಸಿ, ಅವನ ಆರಾಧನೆಯನ್ನು ಮಾಡಲಿಕ್ಕೆ ಶುದ್ಧವಾದ ಮಾತೃಪ್ರೇಮವೇ ಕಲಿಸುವದಲ್ಲದೆ ಬೇರೆಯಾವದೂ ಅದನ್ನು ಸರಿಗಟ್ಟಲಾರದು," ಎಂದು ಅಭಿಪ್ರಾಯಪಡುವರು.

ಬಾಲ್ಯಾವಸ್ಥೆಯಲ್ಲಿ ಚಿಕ್ಕಮಕ್ಕಳಿಗೆ ತಮ್ಮ ಕುಟುಂಬದೊಳಗಿನ ಹಿರೇ ಮನುಷ್ಯನಿಗೆ ಸಹಾಯ ಮಾಡುವ ಉತ್ಸಾಹವು ಕಂಡು ಬರುವದು. ಈ ಒಲವನ್ನು ಕುಗ್ಗಿಸುವದರಿಂದ ಬಹಳ ಹಾನಿಯಾಗುತ್ತದೆ. ಆಟ ಮುಂತಾದವುಗಳಲ್ಲಿ ತನ್ನ ಮಿತ್ರರಿಗೆ ತನ್ನಿಂದ ಏನಾದರೂ ಉಪಯೋಗ

ವಾಗಬೇಕೆಂಬ ಇಚ್ಛೆಯಾದರೂ ಇದೇ ವಯಸ್ಸಿನಲ್ಲಿ ಉತ್ಪನ್ನವಾಗುವದು. ಈ ಆಟಗಳಿಂದ ಅವರ ಆಯುಷ್ಯದಲ್ಲಿ ಯಾವಾಗಲೂ ಅವರಿಗೆ ಉಪಯೋಗವಾಗುವಂಥ ಸದ್ಗುಣಗಳನ್ನು ಉಂಟುಮಾಡಬಹುದು. ಎಷ್ಟೋ ಪ್ರಸಂಗಗಳಲ್ಲಿ ಹುಡುಗರಿಂದ ಪ್ರಮಾದಗಳು ಸಂಭವಿಸಿದರೆ, ಅವುಗಳನ್ನು ಅವರು ಬುದ್ಧಿ ಪೂರ್ವಕವಾಗಿ ಮಾಡಿದರೆಂದು, ಅವರ ಮೇಲೆ ತಪ್ಪು ಹೊರಿಸಿ, ಅವರಿಗೆ ಸಿಟ್ಟು ಮಾಡುವ ರೂಢಿಯು ಎಷ್ಟೋ ತಾಯಿ ತಂದೆಗಳಲ್ಲಿ ಕಂಡು ಬರುವದು. ಇದು ಸರಿಯಲ್ಲ. ಹುಡುಗರ ನೈಸರ್ಗಿಕ ಪ್ರವೃತ್ತಿಗಳಿಗೆ ಅಡ್ಡ ಬಂದರೆ ಅವರು ತಪ್ಪುಗಳನ್ನು ಮಾಡುವರು; ಅವೇ ಮುಂದೆ ಕೆಟ್ಟ ಚಾಳಿಗಳಾಗಿ ಪರಿಣಮಿಸುವವು. ಆದರೆ ಯಾವ ನೈಸರ್ಗಿಕ ಪ್ರವೃತ್ತಿಗೆ ವಿರೋಧ ಉಂಟಾದದ್ದರಿಂದ ಈ ತರದ ಕೆಟ್ಟ ಚಾಳಿಗಳು ಉಂಟಾಗಿರುವವೆಂಬದನ್ನು ಶೋಧಿಸಿ, ಆ ವಿರೋಧಗಳನ್ನು ಇಲ್ಲದಂತೆ ಮಾಡುವದೇ, ಆ ಕೆಟ್ಟ ಚಾಳಿಗಳನ್ನು ನಿರ್ಮೂಲ ಮಾಡುವ ಶ್ರೇಷ್ಠವಾದ ಉಪಾಯವೆಂದು ಹೇಳಬಹುದು.

ಈ ವಯಸ್ಸಿನಲ್ಲಿ ಏಕೀಕರಣಬುದ್ಧಿಯು ಕಡಿಮೆಯಾಗಿ ವಿವಿಧತೆಯನ್ನು ಗ್ರಹಣ ಮಾಡುವ ಶಕ್ತಿಯು ಬೆಳೆಯುತ್ತಿರುತ್ತದೆ. ಆದಕಾರಣ ಶಿಕ್ಷಕರು ಈ ಐಕ್ಯಬುದ್ಧಿಯು ನಷ್ಟವಾಗದಂತೆ ಎಚ್ಚರಪಡಲಿಕ್ಕೆ ಬೇಕು. ಹಲವು ಸಂಗತಿಗಳನ್ನು ಹುಡುಗರ ತಲೆಯಲ್ಲಿ ತುಂಬುವದು ಶಾಲಾಶಿಕ್ಷಣದ ಉದ್ದೇಶವಾಗಿರುವದಿಲ್ಲ. ಅನೇಕ ಸಂಗತಿಗಳಲ್ಲಿರುವ ಐಕ್ಯವೂ ವಿವಿಧ ವಸ್ತುಗಳಲ್ಲಿ ಕಂಡುಬರುವ ನಿಯಮಬದ್ಧತೆಯೂ ವಿದ್ಯಾರ್ಥಿಗಳ ಮನಸಿನಲ್ಲಿ ಚನ್ನಾಗಿ ಬಿಂಬಿಸತಕ್ಕದ್ದು. ಮನುಷ್ಯನಿಗೆ ಧರ್ಮಶಿಕ್ಷಣವನ್ನು ಕೊಡುವದು ಅತ್ಯವಶ್ಯವು. ಈ ಪ್ರಸಂಗದಲ್ಲಿ ಫ್ರೊಬೆಲ ಸಾಹೇಬರು ಕ್ರಿಸ್ತೀ ಧರ್ಮದ ವ್ಯಾಖ್ಯೆಯನ್ನು ಹೇಳಿದ್ದಾರೆ:—"ನಿತ್ಯನೂ ಚೈತನ್ಯ ಯುಕ್ತನೂ ಆತ್ಮಜ್ಞ (Self-conscious) ನೂ ಆದ ಪರಮೇಶ್ವರನ ಅವತಾರವೂ ಆವಿಷ್ಕರಣವೂ ಮೂರು ಸ್ವರೂಪವಾಗಿಯೇ ಇರಲಿಕ್ಕೆ ಬೇಕು. ಈಶ್ವರನು ತನ್ನದೊಂದೇ ಸ್ವರೂಪದಲ್ಲಿ ಜಗತ್ತಿನ ಜನನ-ಪಾಲನ-ನಿಯಮನಗಳನ್ನು ಮಾಡುತ್ತಾನೆ. ಈಶ್ವರನ ಮಗನಾದ ಯಾವ ಒಂದೇ ವ್ಯಕ್ತಿಯು (ಏಸೂಕ್ರಿಸ್ತನು) ಸರ್ವಗುಣ ಸಂಪನ್ನನಾಗಿರುವದೋ ಆ ಒಂದೇ ವ್ಯಕ್ತಿಯ ಮುಖಾಂತರವಾಗಿ ಈಶ್ವರನು ತನ್ನ ಹೇತುಗಳನ್ನು

ಪ್ರಕಟ ಮಾಡುವನೆಂಬ ದೃಢವೂ, ಸಹಜೋತ್ಪನ್ನವೂ, ಶುದ್ಧವೂ ಆದ ನಿರ್ಧಾರಕ್ಕೂ ತದನುರೂಪವರ್ತನಕ್ಕೂ ಕೂಡಿ ಕ್ರಿಸ್ತೀ ಧರ್ಮವೆಂಬ ಸಂಜ್ಞೆಯು. ಈ ರಹಸ್ಯದ ಜ್ಞಾನವಿಲ್ಲದಿದ್ದರೆ, ಜೀವಿತವು ವ್ಯರ್ಥವಾಗುವದು. ಆದ ಕಾರಣ ಎಲ್ಲ ದೇಶಗಳೊಳಗಿನ ಪ್ರತಿಯೊಂದು ಶಾಲೆಯಲ್ಲಿ ನಿತ್ಯದಲ್ಲಿಯೂ, ಎಲ್ಲಕ್ಕೂ ಮೊದಲು, ಏಸೂ ಕ್ರಿಸ್ತನಿಂದ ಪ್ರತಿಪಾದಿತವಾದ ಈ ಸದ್ಧರ್ಮದ ಶಿಕ್ಷಣವನ್ನು ಕೊಡಲಿಕ್ಕೆ ಬೇಕೆಂದು ಫ್ರೊಬೆಲ ಸಾಹೇಬರ ಅಭಿಪ್ರಾಯವಿರುತ್ತದೆ. ಸ್ವಧರ್ಮಾಭಿಮಾನದ ದೃಷ್ಟಿಯಿಂದ ಅವರ ಈ ಅಭಿಪ್ರಾಯವು ಯೋಗ್ಯವಾಗಿರುತ್ತದೆ.

ಚೈತನ್ಯವು ಸೃಷ್ಟಿಯ ಮೂಲಕಾರಣವಾಗಿರುತ್ತದೆ. ಪ್ರಕೃತಿಯ ಮೇಲೆ ಚೈತನ್ಯದ ಪರಿಣಾಮವಾಗಿ ಸೃಷ್ಟಿಯು ಉತ್ಪನ್ನವಾಗುತ್ತದೆ. ಚೈತನ್ಯದ ಅನಿಯಂತ್ರಿತ ಪರಿಣಾಮದಿಂದ ಪದಾರ್ಥಕ್ಕೆ ಗೋಲರೂಪವುಂಟಾಗುತ್ತದೆ. ಆದಕಾರಣ ಗೋಲವು ಜಗತ್ತಿನ ಐಕ್ಯದ ಚಿಹ್ನವಾಗಿರುತ್ತದೆ. ಸೃಷ್ಟಿಯೊಳಗಿನ ಎಲ್ಲವಸ್ತುಗಳ ಮೂಲ ಹಾಗು ಅಂತ್ಯ ಆಕಾರವು ಸಾಮಾನ್ಯವಾಗಿ ಗೋಲವಿರುತ್ತದೆ. ಈ ಆಕಾರವು ಭೇದದಲ್ಲಿ ಅಭೇದವನ್ನೂ, ಅಭೇದದಲ್ಲಿ ಭೇದವನ್ನೂ ತೋರಿಸುವದಾಗಿರುತ್ತದೆ. ಗೋಲವು ಒಂದೇಕಾಲಕ್ಕೆ ವಿಭುತ್ವವನ್ನೂ ಆತ್ಯಂತಿಕ ಸಂಕೋಚವನ್ನೂ ತೋರಿಸುವದಾಗಿರುತ್ತದೆ; ಇದಲ್ಲದೆ ಗೋಲವು ಪೂರ್ಣತೆ ಅಪೂರ್ಣತೆಗಳನ್ನು ಜೋಡಿಸುವ ಕೊಂಡಿಯೂ ಆಗಿರುತ್ತದೆ.

ಶಕ್ತಿಯು ಬೇರೆ ಬೇರೆ ದಿಕ್ಕಿನಲ್ಲಿ ಬೇರೆ ಬೇರೆ ಪ್ರಮಾಣದಿಂದಿದ್ದರೆ ಸ್ಫಟಿಕಾಕೃತಿಯು ಸಿದ್ಧವಾಗುವದು. ಸ್ಫಟಿಕದ ಮೂಲ ಆಕಾರವು ಘನವು. ಸ್ಫಟಿಕದ ಶೋಧನದಿಂದ ಮಾನವೀ ಆಯುಷ್ಯದ ನಿಯಮಗಳು ಸ್ಪಷ್ಟವಾಗಿ ತಿಳಿಯುವವೆಂದು ಫ್ರೋಬೆಲ ಸಾಹೇಬರು ಹೇಳುತ್ತಾರೆ. ಘನಸ್ಫಟಿಕದಿಂದ ಬೇರೆ ಬೇರೆ ಪ್ರಕಾರದ ಸ್ಫಟಿಕಗಳು ಹ್ಯಾಗೆ ಉತ್ಪನ್ನವಾಗುವವೆಂಬದನ್ನು ಅವರು ಕ್ರಮಕ್ರಮವಾಗಿ ಹೇಳುತ್ತ ಹೋಗಿರುವರು. ಕಟ್ಟಕಡೆಗೆ ಅವರು ಮನಸ್ಸು ಹಾಗು ಗಣಿತ ಇವು ಆತ್ಮ ಹಾಗು ಧರ್ಮ ಇವುಗಳಂತೆ ಅವಿಭಾಜ್ಯಗಳಾಗಿರುತ್ತವೆ, ಎಂದುಹೇಳಿ ಈ ವಿಷಯವನ್ನು ಮುಗಿಸಿರುತ್ತಾರೆ.

ಧರ್ಮದಲ್ಲಿ ಮಾನವೀ ಆತ್ಮಗಳ ಐಕ್ಯ ಪ್ರವೃತ್ತಿಯು ಪ್ರಬಲವಾಗಿರುತ್ತದೆ. ನಿಸರ್ಗಚಿಂತನದಲ್ಲಿಯೂ, ಗಣಿತದಲ್ಲಿಯೂ, ವೈಯುಕ್ತಿಕ ಪ್ರವೃತ್ತಿಯೇ ಪ್ರಧಾನವಾಗಿರುತ್ತದೆ. ವಿವಿಧತೆಯನ್ನು ಶೋಧಿಸಿ ಅದರೊಳಗಿನ ಐಕ್ಯವನ್ನು ಗೊತ್ತು ಹಿಡಿಯುವದು, ಭಾಷೆಯಲ್ಲಿ ಪ್ರಾಧಾನ್ಯವಾಗಿರುವದು. ಆದಕಾರಣ ಈ ಮೂರೂ ವಿಷಯಗಳು ಒಂದಕ್ಕೊಂದು ಹೊಂದಿಕೊಂಡಿರುವದರಿಂದ ಅವುಗಳ ಅಭ್ಯಾಸವನ್ನು ಮಾಡಲಿಕ್ಕೆ ಬೇಕು. ಗಣಿತವಿಷಯವು ನಿಸರ್ಗದ ಕಾರಣಗಳನ್ನೂ ನಿಯಮಗಳನ್ನೂ ಪ್ರವೃತ್ತಿಯನ್ನೂ ಮನುಷ್ಯರಿಗೆ ತೋರಿಸಿಕೊಡುವ ಚಿಹ್ನವಾಗಿರುತ್ತದೆ. ಆದಕಾರಣ ಈ ವಿಷಯದ ಅಧ್ಯಯನವನ್ನು ಮಾಡಿದ ಹೊರತು ನಿಸರ್ಗವು ಪೂರ್ಣವಾಗಿ ತಿಳಿಯಲಿಕ್ಕಿಲ್ಲ. ಭಾಷೆಯು ಅಂತರ್ಭಾವವನ್ನೂ ಅಂತಸ್ಫೂರ್ತಿಯನ್ನೂ ಹೊರಗೆಡವುವ ಸಾಧನವು; ಈ ಪ್ರಕಾರ ಹೊರಟ ಸಂಗತಿಗಳಿಗೆ ಸ್ಥಿರವಾದ ಸ್ವರೂಪವನ್ನು ಕೊಡುವದಕ್ಕಾಗಿ ಲೇಖನದ ಯೋಜನೆಯಾಗಿರುವದು.

ಬಾಲ್ಯಾವಸ್ಥೆಯಲ್ಲಿ ಮಕ್ಕಳಿಗೆ, ಸಾಲೆಯಲ್ಲಿಯೂ ಮನೆಯಲ್ಲಿಯೂ ಕೆಳಗೆ ಹೇಳಿದ ಸಂಗತಿಗಳ ಶಿಕ್ಷಣವನ್ನುಕೊಡತಕ್ಕದ್ದು.

೧. ಮನುಷ್ಯನ ಧಾರ್ಮಿಕ ಪ್ರವೃತ್ತಿಯ ಉದ್ಬೋಧನವನ್ನು ಮಾಡಿ ಅದರ ಪೋಷಣವನ್ನು ಮಾಡುವದು; ತಾಯಿ, ತಂದೆ, ಮಗು ಇವರಲ್ಲಿ ಐಕ್ಯವಿದ್ದರೆ ಮಗುವಿಗೆ ತನ್ನ ತಂದೆಯ ಅಥವಾ ತಾಯಿಯ ಧಾರ್ಮಿಕ ಉನ್ನತಿಯ ಲಾಭವು ದೊರಕುವದು.

೨. ಶರೀರವು ವ್ಯವಸ್ಥಿತವೂ, ಸಶಕ್ತವೂ ತನ್ನ ಇಚ್ಛಾಶಕ್ತಿಗೆ ಆಧೀನವಾದದ್ದೂ ಆಗುವಂತೆ ಮಾಡಿಕೊಳ್ಳಲಿಕ್ಕೆ ಕಲಿಸತಕ್ಕದ್ದು. 'शरीरमाद्यं खलु धर्मसाधनम्'; ವ್ಯಾಯಾಮದ ಯೋಗದಿಂದ ಶರೀರದ ಅಂತರ್ ರಚನೆಯು ತಿಳಿಯಲಿಕ್ಕೆ ಸಹಾಯವಾಗುವದು.

೩. ಸೃಷ್ಟಿಯ ನಿರೀಕ್ಷಣವನ್ನು ಮಾಡಿಸುವದು: — ಮೊದಲು ಮಕ್ಕಳಿಗೆ ಸುತ್ತುಮುತ್ತಲಿನ ಪ್ರದೇಶಗಳನ್ನು ತೋರಿಸತಕ್ಕದ್ದು. ಅಲ್ಲಿ ಕಾಣುವ ಎಲ್ಲ ಸಂಗತಿಗಳ ಕಡೆಗೆ ಅವರ ಲಕ್ಷವನ್ನು ಎಳೆಯತಕ್ಕದ್ದು. ತರುವಾಯ ಅವರಿಗೆ ದೂರ ದೂರದ ಪ್ರದೇಶಗಳನ್ನು ತೋರಿಸತಕ್ಕದ್ದು. ಅದ

ರಿಂದ ಅವರಿಗೆ ಭೂಗೋಲ ಶಾಸ್ತ್ರದ ಜಿಜ್ಞಾಸೆಯೂ ನಿಸರ್ಗಶಾಸ್ತ್ರದಲ್ಲಿ ಸೇರಿಕೆಯೂ ತಮ್ಮಷ್ಟಕ್ಕೆ ತಾವೇ ಉತ್ಪನ್ನವಾಗುವವು. ಎಷ್ಟೋ ಗೂಢ ಸಂಗತಿಗಳು ಅವರಿಗೆ ತಮ್ಮಿಂದ ತಾವೇ ತಿಳಿಯಹತ್ತುವವು. ಶಿಕ್ಷಕನು ಅವರ ಜ್ಞಾನಕ್ಕೆ ವ್ಯವಸ್ಥಿತ ಸ್ವರೂಪವನ್ನು ಕೊಡುತ್ತಿರಬೇಕು.

೪. ಸುಂದರವಾದ ಕವಿತೆಗಳನ್ನೂ ಹಾಡುಗಳನ್ನೂ ಪಾಠ ಮಾಡ ಲಿಕ್ಕೆ ಹೇಳುವದು. ಜ್ಞಾನಸಂಪಾದನೆಗೆ ಸಹೃದಯತೆ ಎಂಬ ಗುಣವು ಅವಶ್ಯವಾದದ್ದು. ಗಾಯನದಿಂದ ಈ ಗುಣದ ಅಭಿವೃದ್ಧಿಯಾಗುತ್ತದೆ.

೫. ಭಾಷೆಯನ್ನು ಕಲಿಸುವದು:— ಹಿಂದೆ ಅನೇಕ ಸಾರೆ ಹೇಳಿದಂತೆ ಭಾಷೆಯು ಅಂತರ್ಭಾವವನ್ನು ವ್ಯಕ್ತಪಡಿಸುವ ಸಾಧನವಾಗಿರುವದರಿಂದ ಅದನ್ನು ಅದೇರೀತಿಯಾಗಿ ಉಪಯೋಗಿಸಲಿಕ್ಕೆ ಅವರಿಗೆ ಕಲಿಸತಕ್ಕದ್ದು. ಮೊದಲು ಬಾಹ್ಯವಸ್ತುಗಳ ವರ್ಣನೆಯನ್ನು ಮಾಡಲಿಕ್ಕೆ ಹಚ್ಚುವದು; ತರುವಾಯ ಅದೃಶ್ಯ ಪದಾರ್ಥಗಳ ವರ್ಣನೆಯನ್ನು ಮಾಡಹೇಳುವದು; ಈ ಪ್ರಕಾರ ಶಿಕ್ಷಣದ ಕ್ರಮವು ಇರಲಿಕ್ಕೆ ಬೇಕು.

೬. ಮಣ್ಣು, ಇಸ್ಪೇಟು, ಕಾಗದ, ಕಟ್ಟಿಗೆಯ ತುಂಡುಗಳು ಇತ್ಯಾದಿ ಸಾಧನಗಳಿಂದ ನಾನಾಪ್ರಕಾರದ ಆಕೃತಿಗಳನ್ನು ಅಂದರೆ ಮನೆ, ತೋಟ, ಕಟ್ಟೆ ಮುಂತಾದವುಗಳನ್ನು ಮಾಡಿಸಿ ಆಡಿಸುವದು:— ಒಂದು ಆಕೃತಿಯು ಸಿದ್ಧವಾದ ಮೇಲೆ ಅದನ್ನು ಮುರಿದು ಒಮ್ಮೆಲೆ ಎರಡನೆ ಆಕೃತಿಯನ್ನು ಸಿದ್ಧ ಮಾಡಲಿಕ್ಕೆ ಹೇಳಬಾರದು. ಆದರೆ ಮೊದಲು ಮಾಡಿದ ಆಕೃತಿ ಯಲ್ಲಿ ತೀರ ಸ್ವಲ್ಪ ಹೆಚ್ಚುಕಡಿಮೆ ಮಾಡಿ, ಎರಡನೇ ಪದಾರ್ಥದ ಆಕೃತಿ ಯನ್ನು ಸಿದ್ಧಮಾಡಿಸಬೇಕು. ಇಂಥ ಪಾಠಗಳಿಂದ ಹುಡುಗರ ಚಿಕಿತ್ಸಕ ಬುದ್ಧಿಯೂ, ಕಲ್ಪನಾಸಾಮರ್ಥ್ಯವೂ ಅಭಿವೃದ್ಧಿ ಹೊಂದುವವು.

೭. ನಾನಾತರದ ಆಕೃತಿಗಳನ್ನು ತೆಗೆಯಲಿಕ್ಕೆ ಕಲಿಸುವದು.

೮. ಮೇಲೆ ಹೇಳಿದ ಆಕೃತಿಗಳಲ್ಲಿ ತಕ್ಕ ಬಣ್ಣಗಳನ್ನು ತುಂಬ ಲಿಕ್ಕೆ ಕಲಿಸುವದು.

೯. ನಾನಾಪ್ರಕಾರದ ಆಟಗಳನ್ನು ಆಡಿಸುವದು.

೧೦. ಹಲವು ಬಗೆಯ ಕಥೆಗಳನ್ನು ಹೇಳುವದು. ಚಿಕ್ಕಮಕ್ಕಳಿಗೆ ಕಥೆಗಳನ್ನು ಕೇಳುವ ಪ್ರೀತಿಯು ವಿಶೇಷವಾಗಿರುವದು. ಇಂಥ ಕಥೆಗ

ಳಿಂದ ಅವರ ಕೋಮಲವಾದ ಅಂತಃಕರಣದಲ್ಲಿ ಎಷ್ಟೋ ಒಳ್ಳೇ ತತ್ವಗಳು ಬಿಂಬಿಸಲಿಕ್ಕೆ ಅನುಕೂಲವಾಗುವದು. ಕಥೆಯನ್ನು ಹೇಳುವಾಗ ತಾತ್ಪರ್ಯವನ್ನು ಅಥವಾ ಉಪದೇಶವನ್ನು ಎಂದೂ ಹೇಳಬಾರದು. ಇಷ್ಟು ಸಂಗತಿಗಳು ಅವರ ಮನಸಿನಲ್ಲಿ ಬಿಂಬಿಸುವಂತೆ ತಮ್ಮ ಭಾಷೆಯನ್ನೂ ಹಾವಭಾವವನ್ನೂ ಮುಖಮುದ್ರೆಯನ್ನೂ ಉಪಯೋಗಿಸತಕ್ಕದ್ದು.

ಈ ವಿಷಯಗಳಾದ ಬಳಿಕ (೧೧) ಸಂಖ್ಯಾಗಣಿತ, (೧೨) ಆಕೃತಿಗಣಿತ (ಭೂಮಿತಿ), (೧೩) ವ್ಯಾಕರಣ (೧೪) ಲೇಖನ (೧೫) ವಾಚನ ಈ ವಿಷಯಗಳನ್ನು ಕಲಿಸತಕ್ಕದ್ದು.

"ಮೇಲೆ ಹೇಳಿದ ಎಲ್ಲ ವಿಷಯಗಳನ್ನು ತಕ್ಕ ಕ್ರಮದಿಂದ ಕಲಿಸಿದರೆ, ಹುಡುಗರ ಮನಸ್ಸು ಎಲ್ಲ ಬದಿಯಿಂದಲೂ ಉನ್ನತಿಯನ್ನು ಹೊಂದುವದೆಂತಲೂ ಮಕ್ಕಳ ಬಾಲ್ಯಾವಸ್ಥೆಯು ಮುಗಿಯುವವರೆಗೆ ವಿಶಿಷ್ಟ ಪ್ರಕಾರದ ಶಿಕ್ಷಣವು ಉಪಯೋಗಿಸುವದಿಲ್ಲೆಂತಲೂ ಫ್ರೋಬೆಲ ಸಾಹೇಬರು ಕಟ್ಟಕಡೆಗೆ ಹೇಳಿದ್ದಾರೆ.

ನೀತಿಪಾಠಮಾಲಾ.

ದೂರದೃಷ್ಟಿಯೂ ಮುಂಜಾಗ್ರತೆಯೂ.

೩ನೇ ಪಾಠ.

(ಹಿಂದಿನ ಎರಡು ಪಾಠಗಳ ಬಗ್ಗೆ ಕೆಲವು ಪ್ರಶ್ನಗಳನ್ನು ಕೇಳಿ ಪಾಠವನ್ನು ಪ್ರಾರಂಭಿಸುವದು.)

ಮಕ್ಕಳಿರಾ, ದುರ್ಬೀನೆಂಬ ಯಂತ್ರವನ್ನು ನೀವು ಎಂದಾದರೂ ನೋಡಿರಬಹುದಲ್ಲವೆ? (ಇಲ್ಲಿ ಪ್ರತ್ಯಕ್ಷ ದುರ್ಬೀನನ್ನಾಗಲಿ, ಅದು ಇಲ್ಲದಿದ್ದರೆ ಅದರ ಚಿತ್ರವನ್ನಾಗಲಿ ತೋರಿಸುವದು) ಈ ಯಂತ್ರದೊಳಗಿಂದ ನೋಡಿದರೆ ದೂರದ ಪದಾರ್ಥಗಳು ಬರಿಗಣ್ಣಿನಿಂದ ಕಾಣುವದಕ್ಕಿಂತ ಹೆಚ್ಚು ಸ್ಪಷ್ಟವಾಗಿ ಕಾಣುವವು. ಒಂದು ವರ್ತಮಾನಪತ್ರವನ್ನು ನಮ್ಮ ಕಣ್ಣಿಗೆ ಸಮೀಪವಾಗಿ ಹಿಡಿದರೆ ಮಾತ್ರ ಓದಲಿಕ್ಕೆ ಬರುವದು. ಆದರೆ ಈ ಯಂತ್ರದ ಸಹಾಯದಿಂದ ಅದು ನೂರಾರು ಯಾರ್ಡ್ ದೂರದಲ್ಲಿದ್ದರೂ ಕೂಡ ಅದನ್ನು ಸ್ಪಷ್ಟವಾಗಿ ಓದಿ ತೋರಿಸಬಹುದು. ಇದೇಮೇರೆಗೆ

ದೂರದೃಷ್ಟಿಯುಳ್ಳ ಮನುಷ್ಯನಿಗೆ ಮುಂದೆ ಕಾಲಾಂತರದ ಮೇಲೆ ಒದಗಬಹುದಾದ ಸಂಕಟಗಳು ತತ್ಕಾಲಕ್ಕೆ ಗೋಚರವಾಗುವವು.

ಹಿಂದಕ್ಕೆ ಜಾರ್ಜ ಸ್ಟೀಫನ್ಸನೆಂಬವನೊಬ್ಬ ಯಂತ್ರಶಾಸ್ತ್ರಜ್ಞನು ಇರುತ್ತಿದ್ದನು. ಅವನು ಬಲು ಶೋಧಕನೂ, ದೂರದೃಷ್ಟಿಯುಳ್ಳವನೂ ಆಗಿದ್ದನು. ಒಂದಾನೊಂದು ದಿವಸ ಅವನು ಕಾಲುನಡಿಗೆಯಿಂದ ಪ್ರವಾಸ ಮಾಡುತ್ತಿರುವಾಗ, ಒಂದು ದೊಡ್ಡ ನದಿಯ ಮೇಲಿನ ಪೂಲಿನ ಮೇಲೆ ಹಾಯ್ದನು. ಆಗ ಅವನ ಮನಸಿಗೆ ಈ ಪೂಲು ಭದ್ರವಾಗಿಲ್ಲೆಂಬ ಸಂಶಯವು ತಟ್ಟಿತು. ಕೂಡಲೆ ಅವನು ಅದರ ಕೆಳಮಗ್ಗಲು ಇಳಿದು ಚನ್ನಾಗಿ ಪರೀಕ್ಷಿಸಿ ನೋಡಿದನು. ನಿಜವಾಗಿಯೇ ಅದು ಸಡಿಲಾಗಿತ್ತು. ಹೆಚ್ಚು ಜನರು ಒಮ್ಮೆಲೆ ಈ ಪೂಲಿನ ಮೇಲೆ ಹಾಯ್ದರೆ, ಅಥವಾ ಹೆಚ್ಚು ಭಾರವಾದ ಬಂಡಿಗಳು ಹಾಯ್ದರೆ, ಇದು ಕಡಕೊಂಡು ಬೀಳುವದೆಂದು ಅವನು ತನ್ನ ಮನಸಿನಲ್ಲಿ ನಿಶ್ಚಯಿಸಿ ತತ್ಕಾಲಕ್ಕೆ ಆ ಸಂಗತಿಯನ್ನು ಯೋಗ್ಯ ಅಧಿಕಾರಸ್ಥರಿಗೆ ಬರೆದು ತಿಳಿಯಪಡಿಸಿದನು. ಆ ಅಧಿಕಾರಿಗಳು ಸ್ಟೀಫನ್ಸನ ಯೋಗ್ಯತೆಯನ್ನು ಅರಿತಿದ್ದಿಲ್ಲವಾದ್ದರಿಂದ ಅವರು ಅವನ ಮಾತಿಗೆ ಕಿವಿಗೊಡಲಿಲ್ಲ. ತರುವಾಯ ಸ್ವಲ್ಪ ದಿವಸಗಳ ಮೇಲೆ ಹತ್ತುಸಾವಿರ ಕಾಲಾಳುಗಳು ಆ ಪೂಲಿನಮೇಲೆ ಹಾಯ್ದು ಹೋಗುವಾಗ ಅಕಸ್ಮಾತ್ತಾಗಿ ಪೂಲು ಕಡಕೊಂಡು ಬಿದ್ದು, ಸಾವಿರಾರು ಜನರ ಪ್ರಾಣಹಾನಿಯಾಯಿತು. ಜಾರ್ಜಸ್ಟೀಫನ್ಸನು ಸೂಚಿಸಿದ ಕಾಲಕ್ಕೇ ಆ ಪೂಲನ್ನು ನೆಟ್ಟಗೆ ಮಾಡಿಸಿದ್ದರೆ, ಈ ದುಃಖಕರವಾದ ಪ್ರಸಂಗವು ಒದಗುತ್ತಿದ್ದಿಲ್ಲ.

ದೂರದೇಶಗಳಿಗೆ ಮಹಾಸಾಗರದೊಳಗಿಂದ ಪ್ರಯಾಣ ಮಾಡುವ ಹಡಗುಗಳಿಗೆ ಮಾರ್ಗದಲ್ಲಿ ಅನೇಕ ತರದ ಗಂಡಾಂತರಗಳು ಸಂಭವಿಸುವ ಸಂಭವವು ವಿಶೇಷವಾಗಿರುವದು. ಅದಕ್ಕಾಗಿ ಅಲ್ಲಲ್ಲಿಗೆ ದೀಪಸ್ತಂಭಗಳು ಕಟ್ಟಲ್ಪಟ್ಟಿರುವವು. ಮತ್ತು ಹಡಗುಗಳಲ್ಲಿ ಪ್ರಾಣಸಂರಕ್ಷಕ ನಾವೆಗಳು ಇಡಲ್ಪಟ್ಟಿರುವವು; ಬಾಲಕರೇ, ಇವೆರಡರಲ್ಲಿ ಯಾವವು ಶ್ರೇಷ್ಠವಾದವುಗಳು ಹೇಳಿರಿ, ನೋಡುವಾ. ಪ್ರಾಣಸಂರಕ್ಷಕನಾವೆಗಳು ಗಂಡಾಂತರವು ಒದಗಿದ ಮೇಲೆ ಉಪಯೋಗಿಸುವವು. ಆದರೆ ದೀಪಸ್ತಂಭಗಳು ಗಂಡಾಂತರಗಳು ಸಂಭವಿಸದಂತೆ ಮಾಡುವವು. ಇವುಗಳ ಬೆಳಕು

ಸಮುದ್ರದಲ್ಲಿ ನೂರಾರು ಮೈಲು ದೂರದವರೆಗೆ ಹಬ್ಬಿರುವದು. ಆ ಬೆಳಕಿನಲ್ಲಿ ಹಡಗಗಳು ಗಂಡಾಂತರ ಸಂಭವಿಸುವ ಸ್ಥಳದಿಂದ ದೂರ ಹಾಯ್ದು ಹೋಗುವವು. ಇವೆರಡೂ ಸಾಧನಗಳು ಸಾವಿಕರ ದೂರ ದೃಷ್ಟಿಯನ್ನು ತೋರಿಸುವವು.

ದೂರದೃಷ್ಟಿಯು ಇಲ್ಲದ್ದರಿಂದ ನಾವು ನಿತ್ಯದಲ್ಲಿ ಅನೇಕ ತಪ್ಪುಗಳನ್ನು ಮಾಡುವೆವು. ಪ್ರತಿಯೊಂದು ಕೆಲಸವನ್ನು ಮಾಡುವಾಗ ದೂರದವರೆಗೆ ಆಲೋಚನೆಯನ್ನು ಮಾಡತಕ್ಕದ್ದು. ಒಂದು ಸಮಯದಲ್ಲಿ ಏಸುಕ್ರಿಸ್ತನು ತನ್ನ ಎಲ್ಲ ಶಿಷ್ಯರನ್ನು ಕರೆದು, "ಎಲೈ ಶಿಷ್ಯರೆ, ನೀವು ಒಂದು ಮನೆಯನ್ನು ಕಟ್ಟಬೇಕಾಗಿರುವದೆಂದು ತಿಳಿಯಿರಿ. ಕೂಡಲೆ ಕೆಲಸಕ್ಕೇ ಪ್ರಾರಂಭ ಮಾಡುವಿರೇನು? ಅದಕ್ಕೆ ಎಷ್ಟು ಹಣವು ಹಿಡಿಯುವದು? ಅಷ್ಟು ಹಣದ ಅನುಕೂಲತೆಯು ತಮ್ಮಲ್ಲಿರುವದೋ ಇಲ್ಲವೋ? ಅದಕ್ಕೆ ಯಾವ ಯಾವ ಸಾಮುಗ್ರಿಗಳು ಬೇಕಾಗುವವು? ಈ ಮೊದಲಾದ ಸಂಗತಿಗಳನ್ನೆಲ್ಲ ಮೊದಲು ಆಲೋಚನೆ ಮಾಡಬೇಕಾಗುವದು, ಇಲ್ಲದಿದ್ದರೆ ಮನೆ ಕಟ್ಟಲಿಕ್ಕೆ ಪ್ರಾರಂಭಮಾಡಿ ಅರ್ಧಮರ್ಧ ಕೆಲಸವಾದಮೇಲೆ ಕೆಲಸವನ್ನು ನಿಲ್ಲಿಸಿಬಿಟ್ಟರೆ, ಜನರಲ್ಲಿ ನಿಮಗೆ ಅಪಕೀರ್ತಿಯು ಬರುವದು. ಮತ್ತು ಆದ ಕೆಲಸವು ಸಹ ಹಾಳಾಗಿ ಹೋಗುವದು. ಮನೆ ಕಟ್ಟುವ ಕೆಲಸದಲ್ಲಿ ಜಾಣನೂ ಅನುಭವಿಕನೂ ಆದವನು ಮೊದಲು ಹೊಸದಾಗಿ ಕಟ್ಟತಕ್ಕ ಮನೆಯ ನಕಾಶವನ್ನು ಸಿದ್ಧಮಾಡುವನು; ತರುವಾಯ ಆ ನಕಾಶವನ್ನು ಮುಂದಿಟ್ಟುಕೊಂಡು ಅದು ಪೂರ್ಣವಾಗಿ ಮುಗಿಯುವವರೆಗೆ ಅದಕ್ಕೆ ಬೇಕಾಗುವ ಎಲ್ಲ ಸಾಮುಗ್ರಿಗಳನ್ನು ಆಲೋಚನೆ ಮಾಡಿ ಎಚ್ಚರಿಕೆಯಿಂದ ಅಣಿಮಾಡಿಟ್ಟುಕೊಳ್ಳುವನು. ಆ ಬಳಿಕ ಕೆಲಸಕ್ಕೆ ಪ್ರಾರಂಭಿಸಿ ಮುಗಿಯುವವರೆಗೆ ಕೆಲಸವನ್ನು ಅಖಂಡವಾಗಿ ಸಾಗಿಸುವನು. ಇದೇ ಪ್ರಕಾರ ನೀವು ನಿತ್ಯದಲ್ಲಿಯೂ ಮಾಡತಕ್ಕ ಕೆಲಸಗಳ ಒಂದು ನಕಾಶವನ್ನು ಮನಸಿನಲ್ಲಿ ಮಾಡಿಟ್ಟುಕೊಂಡು, ಪೂರ್ಣವಾಗಿ ಆಲೋಚನೆಮಾಡಿ ಕೆಲಸಕ್ಕೆ ಕೈಹಚ್ಚಿರಿ. ಹೀಗೆ ಮಾಡದಿದ್ದರೆ ನೀವು ಕೈಕೊಂಡ ಕೆಲಸದಲ್ಲಿ ಖಂಡಿತವಾಗಿ ಅಪಯಶಸ್ಸು ಸಿಗುವದೆಂದು ತಿಳಿಯಿರಿ," ಎಂದು ಉಪದೇಶ ಮಾಡಿರುವನು. ಸ್ಟೀಫನ್ಸನು ಪೂಲಿನಬಗ್ಗೆ ಹೇಳಿದ ಸಂಗತಿಯನ್ನೇ

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ ಧಾರವಾಡ.

ಏಸುಕ್ರಿಸ್ತನು ತನ್ನ ಶಿಷ್ಯರಿಗೆ ಬೋಧಿಸಿದನು. ಶಿಷ್ಯರು ಅವನು ಹೇಳಿದಂತೆ ಎಚ್ಚರಿಕೆಯಿಂದ ನಡೆದರೆ ಈ ಸಂಸಾರವೆಂಬ ಮಹಾಸಾಗರದ ಪೂಲನ್ನು ಸುಖರೂಪದಿಂದ ದಾಟಿ ಪಾರಾಗುವರು. ಇಲ್ಲದಿದ್ದರೆ ಸಂಕಟಕ್ಕೆ ಗುರಿಯಾಗುವರು. ಈ ವಿಷಯವಾಗಿ ಇನ್ನೊಂದು ಕಥೆಯನ್ನು ಹೇಳುವೆನು.

ಒಂದಾನೊಂದು ಸಮಯದಲ್ಲಿ ಒಬ್ಬ ತರುಣನಾದ ಬೇಡನು ತನ್ನ ಬಿಲ್ಲಿಗೆ ಹೆದೆಯನ್ನು ಏರಿಸಿ ಗಿಡದ ಮೇಲೆ ಕುಳಿತಿದ್ದ ಒಂದು ಪಕ್ಷಿಗೆ ಗುರಿಯಿಟ್ಟು ಬಾಣವನ್ನು ಹೊಡೆದನು. ಕೂಡಲೆ ಆ ಪಕ್ಷಿಯು ಬಾಣ ತಾಕಿ ನೆಲಕ್ಕೆ ಬಿತ್ತು. ಇದನ್ನೆಲ್ಲ ಕಂಡು ಅವನ ಮಿತ್ರನು,—ಶಾಬಾಸ! ಮಿತ್ರಾ ಶಾಬಾಸ! ಗುರಿಹೊಡೆಯುವದರಲ್ಲಿ ನಿನ್ನ ಕೈಗಳು ಒಳ್ಳೇ ನಿರತವಾಗಿರುವವು, ಎಂದು ಹೊಗಳಿದನು. ಈ ಮಾತನ್ನು ಕೇಳಿ ಒಬ್ಬ ದಿವ್ಯ ಪುರುಷನು, ಛೀ ಛೀ ಇದರಲ್ಲೇನು ಆಶ್ಚರ್ಯವು? ಸ್ವಚ್ಛವಾಗಿ ಸೂರ್ಯ ಪ್ರಕಾಶವು ಬಿದ್ದಿರುವದು. ಪಕ್ಷಿಯು ಗುರಿಹೊಡೆಯುವವನ ಕಣ್ಣಿಗೆ ಸ್ಪಷ್ಟವಾಗಿ ಕಾಣುತ್ತಿರುವದು. ಆದಕಾರಣ ಗುರಿಹೊಡೆಯುವದರಲ್ಲಿ ಈ ಬೇಡನು ದಶರಥರಾಜನಷ್ಟು ಕುಶಲನಲ್ಲೆಂದು ಅಂದನು. ಆಗ ಬೇಡನೂ, ಅವನ ಗೆಳೆಯನೂ ಆ ದಿವ್ಯ ಪುರುಷನನ್ನು ನೋಡಿ, ಎಲೈ ಮಹಾಪುರುಷನೆ, ದಶರಥರಾಜನು ಹ್ಯಾಗೆ ಗುರಿಯನ್ನು ಹೊಡೆಯುತ್ತಿದ್ದನು? ವಿವರಿಸಿಹೇಳಬೇಕೆನಲು, ಆ ದಿವ್ಯ ಪುರುಷನು:—

"ಬೇಡನೆ, ಕೇಳು; ದಶರಥರಾಜನು ಶಬ್ದವೇಧವನ್ನು ಅರಿತಿದ್ದನು. ಶಬ್ದವೇಧವೆಂದರೆ ಸಪ್ಪಳವನ್ನು ಕೇಳಿ ಗುರಿ ಹೊಡೆಯುವದು. ಅವನು ಕತ್ತಲೆಯ ರಾತ್ರಿಯಲ್ಲಿ ಬೇಟೆಯಾಡುವದಕ್ಕಾಗಿ ಅಡವಿಗೆ ಹೋಗುತ್ತಿದ್ದನು. ಕಗ್ಗತ್ತಲೆಯಲ್ಲಿ ಅಡವಿಯೊಳಗೆ ತಿರುಗುತ್ತಿರುವಾಗ ಬೇಟೆಯ ಪ್ರಾಣಿಗಳ ಹೆಜ್ಜೆಯ ಸಪ್ಪಳವನ್ನಾಗಲಿ, ರೆಕ್ಕೆಗಳ ಸಪ್ಪಳವನ್ನಾಗಲಿ ಕೇಳಿ ತನ್ನ ಬಿಲ್ಲಿಗೆ ಬಾಣವನ್ನು ಹೂಡಿ ಆ ಸಪ್ಪಳವು ಬಂದ ದಿಕ್ಕಿಗೆ ಗುರಿ ಇಟ್ಟು ಬಾಣವನ್ನು ಹೊಡೆದು ಬೇಟೆಯನ್ನು ತಪ್ಪದೆ ಕೆಡವುತ್ತಿದ್ದನು. ಈ ಪ್ರಕಾರ ಅವನು ಬಹು ಕಾಲದವರೆಗೆ ಅಭ್ಯಾಸಿಸಿದ್ದರಿಂದ ಶಬ್ದವೇಧದಲ್ಲಿ ಅವನು ಒಳ್ಳೇ ಕುಶಲನಾದನು. ಆ ನಾಡಿನ

ಜನರೆಲ್ಲರೂ ಅವನನ್ನು ಹೊಗಳಹತ್ತಿದರು. ಅವನು ಎಷ್ಟೋ ಸಾರೆ ಹೊಳೆ ಸರೋವರಗಳಿಗೆ ನೀರು ಕುಡಿಯಲಿಕ್ಕೆ ಬಂದ ಚಿಗರಿ, ಮೊಲ, ಮುಂತಾದ ಕ್ಷುದ್ರ ಪ್ರಾಣಿಗಳನ್ನೂ ಕೆಲ ಕೆಲವು ಸಾರೆ ಆ ಪ್ರಾಣಿಗಳ ಬೇಟೆಯಾಡುವದಕ್ಕಾಗಿ ಬಂದ ಸಿಂಹ ಮೊದಲಾದ ಕಾಡುಮೃಗಗಳನ್ನೂ ಸಂಹರಿಸಿದ್ದನು.

ಒಂದಾನೊಂದು ದಿವಸ ರಾತ್ರಿಯಲ್ಲಿ ನಿತ್ಯದಂತೆ ಬೇಟೆಗಾಗಿ ಅಡವಿಗೆ ಹೋಗಿ ಯೋಗ್ಯಸ್ಥಳವನ್ನು ಹುಡುಕಿಕೊಂಡು ಸಜ್ಜಾಗಿ ಕುಳಿತುಕೊಂಡನು. ಕೆಲಹೊತ್ತಿನ ಮೇಲೆ ನದಿಯ ದಂಡೆಯುಹತ್ತರ ನೀರೊಳಗೆ ಆನೆಯು ಸಪ್ಪಳ ಮಾಡುವಂತೆ ಅವನಿಗೆ ಕೇಳಬಂತು. ಕೂಡಲೆ ಅವನು ಒಂದು ಹದಸಾದ ಬಾಣವನ್ನು ಬಿಲ್ಲಿಗೆ ಹೂಡಿ ಹೊಡೆಯಲು,

ಅಯ್ಯೋ! ಸತ್ತೆನು!! ಸತ್ತೆನು!! ಯಾರೋ ನನಗೆ ಬಾಣವನ್ನು ಹೊಡೆದು ಕೆಡವಿದರು, ಎಂದು ಅತ್ಯಂತ ದುಃಖದ ಸ್ವರದಿಂದ ಒದರುವ ಸಪ್ಪಳವು ಅವನ ಕಿವಿಗೆ ಬಿತ್ತು. ಕೂಡಲೆ ಅವನು ಬಹಳ ಗಾಬರಿಯಾದನು; ಅವನ ಕಯ್ಯೊಳಗಿನ ಬಿಲ್ಲು ಒಮ್ಮೆಲೆ ಕಳಚಿ ನೆಲಕ್ಕೆ ಬಿದ್ದುಬಿಟ್ಟಿತು. ಅವನು ಆ ಧ್ವನಿಯ ಸುಳುವು ಹಿಡಿದು, ಕಲ್ಲುಮುಳ್ಳುಗಳನ್ನು ತುಳಿಯುತ್ತ ಕತ್ತಲೆಯಲ್ಲಿಯೇ ಓಡಹತ್ತಿದನು, ಕೆಲವು ಅಂತರದವರೆಗೆ ಓಡಿಹೋದಮೇಲೆ ಒಂದು ಪೂಲಿನಹತ್ತರ ನದಿಯ ತೀರದಲ್ಲಿ ಒಬ್ಬ ಹುಡುಗನು ನೀರು ತುಂಬಿಕೊಳ್ಳುತ್ತಿರುವಾಗ, ಬಾಣತಾಕಿಬಿದ್ದದ್ದು ಅವನ ದೃಷ್ಟಿಗೆಬಿತ್ತು. ಅವನು ಹೊರಚಿಮ್ಮಿಹರಿಯುವ ರಕ್ತದಲ್ಲಿ ನೆರಳುತ್ತ ಹೊರಳಾಡುತ್ತಿದ್ದನು. ತಲೆಯ ಕೂದಲುಗಳು ಕೆದರಿ ಹೋಗಿದ್ದವು. ನೀರಿನ ಚಂಬುವನ್ನು ಕೈಯಲ್ಲಿ ಹಿಡಿದಿದ್ದನು. ದಶರಥನು ಅವನ ಬಳಿಗೆ ಹೋದ ಕೂಡಲೆ, ಆ ಹುಡುಗನು ಅತಿ ದೈನ್ಯದಿಂದ ಎಲೈ ಮಹಾತ್ಮನೇ, ಇಂಥ ರಾತ್ರಿಯಲ್ಲಿ ನನಗೆ ಈ ತೀಕ್ಷ್ಣವಾದ ಬಾಣವನ್ನು ಯಾರು ಹೊಡೆದಿರಬಹುದು? ಇಂಥ ಕಗ್ಗತ್ತಲೆಯಲ್ಲಿ ಅವರು ನನ್ನನ್ನು ಹ್ಯಾಗೆ ನೋಡಿದ್ದಾರು? ಅಯ್ಯೋ! ನಾನು ಇಂದಿನವರೆಗೆ ಯಾರಿಗೂ ಕೆಡಕು ಬಯಸಿಲ್ಲ!! ನನ್ನ ಮುಪ್ಪಿನ ತಾಯಿತಂದೆಗಳು ನೀರಡಿಕೆಯಿಂದ ಬಳಲುತ್ತಿರುವರು; ಅವರ ಕಣ್ಣು ಕಾಣುವದಿಲ್ಲ; ಕಿವಿ ಕೇಳುವದಿಲ್ಲ;

ಅವರಿಗೆ ನಾನೊಬ್ಬನೇ ಮಗನು. ಅವರು ಇಲ್ಲಿಂದ ಸಮೀಪದಲ್ಲಿರುವ ಒಂದು ಹುಲ್ಲು ಗುಡಿಸಲಿನಲ್ಲಿ ಇರುವರು. ಅವರ ನೀರಡಿಕೆಯನ್ನು ಶಾಂತಮಾಡುವದಕ್ಕಾಗಿ ನದಿಯ ನೀರನ್ನು ಒಯ್ಯಬೇಕೆಂದು ಬಂದಿದ್ದೆನು. ಯಾರೋ ದುಷ್ಟರು ಈ ಹದನಾದ ಬಾಣವನ್ನು ಹೊಡೆದು ಕೆಡ ಹಿದರು. ಅಯ್ಯೋ ಇನ್ನು ನನ್ನ ಮುಪ್ಪಿನ ತಾಯಿ ತಂದೆಗಳ ಶುಶ್ರೂಷೆ ಯನ್ನು ಯಾರು ಮಾಡಿಯಾರು? ದೇವರೇ, ನೀನೇ ರಕ್ಷಿಸು ಎಂದು ನಿಟ್ಟು ಸಿರುಬಿಟ್ಟು, ಎಲೈ ಮಹಾತ್ಮನೆ, ನೀನು ಹೋಗಿ ನಡೆದ ಸಂಗತಿಯ ನ್ನಾದರೂ ನನ್ನ ತಾಯಿತಂದೆಗಳಿಗೆ ಹೇಳು. ನಾನು ಇನ್ನು ಬಹಳ ಹೊತ್ತು ಬದುಕಲಾರೆನು. ಈ ನಟ್ಟಬಾಣವು ನನ್ನನ್ನು ಬಹಳ ನೋಯಿ ಸುತ್ತದೆ. ದಯವಿಟ್ಟು ಇದನ್ನಷ್ಟು ನನ್ನ ಶರೀರದಿಂದ ಕಿತ್ತಿಚಲ್ಲು ಎಂದು ದೀನಸ್ವರದಿಂದ ಬೇಡಿಕೊಂಡನು.

ದಶರಥನು ಆ ಬಾಣವನ್ನು ಕಿತ್ತಿ ಚಲ್ಲಿದಮೇಲೆ ಆ ಬ್ರಾಹ್ಮಣ ಕುಮಾರನು ಪ್ರಾಣಬಿಟ್ಟನು. ಆ ಬಳಿಕ ದಶರಥನು ಆ ಹುಡುಗನ ಕೈಯೊಳಗಿನ ಚಂಬುವನ್ನು ನೀರಿನಿಂದ ತುಂಬಿಕೊಂಡು, ಅವನು ಸಾ ಯುವಾಗ ತೋರಿಸಿದ ದಾರೀ ಹಿಡಿದು ಅವನ ಗುಡಿಸಲಿನ ವರೆಗೆ ನಡೆದು ಬಂದನು. ಆಗ ಬ್ರಾಹ್ಮಣನು:--

"ಮಗುವೆ, ಇಷ್ಟೇಕೆ ತಡವಾಯಿತು? ನದಿಯಲ್ಲಿ ಸ್ನಾನ ಮಾಡಿ ದೆನು? ನೀನು ಕಾಲು ಜಾರಿ ನದಿಯಲ್ಲಿ ಬಿದ್ದೆಯೋ ಏನೋ ಎಂಬ ಸಂಶಯದಿಂದ ನಾನು ಹೆದರಿದ್ದೆನು. ಯಾಕೆ ಮಾತಾಡಲೊಲ್ಲೆ? ಆದದ್ದಾ ದರೂ ಏನು? ಬೇಗನೆ ಹೇಳು" ಎಂದು ಅಂದನು.

ಅದಕ್ಕೆ ದಶರಥನು ದೀನಸ್ವರದಿಂದ — ಎಲೈ ಬ್ರಾಹ್ಮಣಶ್ರೇಷ್ಠನೆ, ನಾನು ನಿನ್ನ ಮಗನಲ್ಲ. ಒಬ್ಬ ಕ್ಷತ್ರಿಯನು — ಬಿಲ್ಲುಗಾರಿಕೆಯ ವಿದ್ಯೆಯ ಲ್ಲಿ ಗರ್ವವನ್ನು ತಾಳಿದ ಒಬ್ಬ ಶೂರ ಕ್ಷತ್ರಿಯನು. ಈ ದಿನ ರಾತ್ರಿ ನಾನು ಕಾಡು ಪಶುಗಳ ಬೇಟೆಯಾಡಬೇಕೆಂದು ಕುಳಿತಿರುವಾಗ ಒಂದು ಆನೆಯು ನದಿಯಲ್ಲಿ ನೀರು ಕುಡಿಯುತ್ತಿರುವಂತೆ ಭಾಸವಾಯಿತು. ಕೂಡಲೆ ನಾನು ಶಬ್ದವೇಧವನ್ನು ಸಾಧಿಸಿ ಬಾಣ ಹೊಡೆದೆನು. ಅದರಿಂದ ದೊಡ್ಡ ಪ್ರಮಾದವಾಯಿತು. ಆ ಬಾಣವು, ನದಿಯಲ್ಲಿ ನೀರು ತುಂಬುತ್ತಿ ರುವ ನಿನ್ನ ಮಗನಿಗೆ ತಾಕಿತು. ವಿಪ್ರಶ್ರೇಷ್ಠನೆ, ಈ ತಪ್ಪಿಗಾಗಿ ನಾನು

ನಿನು ಮಾಡತಕ್ಕದ್ದು, ಅಪ್ಪಣೆಯಾಗಬೇಕು ಎಂದು ಕೈಮುಗಿದು ಬೇಡಿಕೊಂಡನು.

ಮಗನು ಸತ್ತ ದುಃಖದಿಂದ ಆ ಮುಪ್ಪಿನ ತಾಯಿತಂದೆಗಳು ನೆಲದಮೇಲೆ ಬಿದ್ದು ಹೊರಳಾಡಹತ್ತಿದರು. ತರುವಾಯ ಅವರು ಅರಸನನ್ನು ಮುಂದೆ ಮಾಡಿಕೊಂಡು ಮಗನು ಸತ್ತು ಬಿದ್ದಸ್ಥಳಕ್ಕೆ ಹೋದರು. ನದಿಯ ದಂಡೆಯಮೇಲೆ ಹುಡುಗನ ಹೆಣವೊಂದೇ ಬಿದ್ದಿತ್ತು. ತಾಯಿತಂದೆಗಳಿಗೆ ಅತ್ಯಂತ ದುಃಖವಾಯಿತು. ಆ ಬ್ರಾಹ್ಮಣನು ದಶರಥನನ್ನು ಕುರಿತು — ಎಲೈಗರ್ವಿಷ್ಠ ಕ್ಷತ್ರಿಯನಾದ ದಶರಥನೆ, ನಾನು ಮುಪ್ಪಿನಲ್ಲಿ ಮಗನನ್ನು ಕಳಕೊಂಡು ದುಃಖಪಡುವಂತೆ ನೀನಾದರೂ ನನ್ನಂತೆಯೇ ಮುಪ್ಪಿನಲ್ಲಿ ಪ್ರೀತಿಯ ಮಗನನ್ನು ಕಳಕೊಂಡು ದುಃಖಪಡುವೆ ಎಂದು ಹೇಳಿದನು. ತರುವಾಯ ಆ ಬ್ರಾಹ್ಮಣಕುಮಾರನ ಅಂತ್ಯವಿಧಿಯು ತೀರಿಸಲ್ಪಟ್ಟಿತು. ಆ ಮುದುಕರು ಕೆಲವು ದಿವಸಗಳವರೆಗೆ ಮಗನ ಸಲುವಾಗಿ ಹಂಬಲಿಸುತ್ತ ಪ್ರಾಣಬಿಟ್ಟರು. ಈ ಮಾತಿಗೆ ಬಹುಕಾಲವು ಸಂದಿಹೋದಮೇಲೆ ದಶರಥನಿಗೆ ಬ್ರಾಹ್ಮಣನು ಕೊಟ್ಟ ಶಿಕ್ಷೆಯು ನಿಜವಾಗುವ ಸಮಯವು ಒದಗಿತು.

ದಶರಥನು ಅಯೋಧ್ಯೆಗೆ ಅರಸನಾದನು; ಕೌಸಲ್ಯೆಯೆಂಬ ರಾಜಪುತ್ರಿಯನ್ನು ಮದುವೆಯಾದನು. ಅವರಿಗೆ ರಾಮಚಂದ್ರನೆಂಬ ಸದ್ಗುಣಿಯಾದ ಮಗನು ಹುಟ್ಟಿದನು. ರಾಮನನ್ನು ಎಲ್ಲರೂ ಪ್ರೀತಿಸುತ್ತಿದ್ದರು ಆದರೆ ದಶರಥನ ಇನ್ನೊಬ್ಬ ಹೆಂಡತಿಯಾದ ಕೈಕೇಯಿಯ ದಾಸಿಯು ಮಾತ್ರ ಪ್ರೀತಿಸುತ್ತಿದ್ದಿಲ್ಲ. ಅವಳು ದುಷ್ಟ ವಿಚಾರಗಳಿಂದ ರಾಮನ ವಿಷಯವಾಗಿ ಕೈಕೇಯಿಯ ಮನಸು ಕೆಡಿಸಿದಳು; ಅದರಿಂದ ಕೈಕೇಯಿಯು ರಾಮನನ್ನು ಹದಿನಾಲ್ಕುವರ್ಷ ವನವಾಸಕ್ಕೆ ಕಳಿಸುವ ಬಗ್ಗೆ ಮುಪ್ಪಿನ ಅರಸನನ್ನು ಒಡಂಬಡಿಸಿದಳು.

ಹಿಂದಕ್ಕೆ ಅಡವಿಯೊಳಗೆ ಒಂದು ಮಧ್ಯರಾತ್ರಿಯಲ್ಲಿ ಒಬ್ಬ ಹುಡುಗನು ಸತ್ತದ್ದರಿಂದ ಅವನ ಮುಪ್ಪಿನ ತಾಯಿತಂದೆಗಳು ದುಃಖದಿಂದ ಗೋಳಾಡಿದಂತೆಯೇ ಈಗ ದಶರಥನು ತನ್ನ ಪ್ರೀತಿಯ ಮಗನ ಅಗಲುವಿಕೆಯಿಂದ ದುಃಖಪಡುತ್ತ ಮರಣ ಹೊಂದಿದನು.

ಮಕ್ಕಳಿರಾ, ದಶರಥನು ಹಗಲಿನಲ್ಲಿಯೇ ಬೇಟೆಯಾಡುತ್ತಿದ್ದರೆ ಅವನಿಂದ ಈ ಪ್ರಮಾದವಾಗುವ ಸಂಭವವಿತ್ತೇನು? ಮತ್ತು ಅವನು ತನ್ನ ಶಬ್ದವೇಧದ ಕೌಶಲ್ಯವನ್ನು ನಂಬಿದ್ದು ಜಾಣತನದ ಸಂಗತಿಯೆ?

ದಶರಥನು ತನ್ನಲ್ಲಿ ಶಬ್ದವೇಧಮಾಡುವ ಕೌಶಲ್ಯವುಂಟೆಂಬ ಗರ್ವದಿಂದ, ಕತ್ತಲೆಯಲ್ಲಿ ಗುರಿಹೊಡೆಯುವದರಿಂದ ಯಾವ ಗಂಡಾಂತರಗಳು ಒದಗಬಹುದೆಂಬದನ್ನು ಅವನು ವಿಚಾರ ಮಾಡಲಿಲ್ಲ. ಮೊದಲು ಅವನು ಯಾರಿಗೂ ಅಪಾಯ ಸಂಭವಿಸಲಿಕ್ಕಿಲ್ಲೆಂತಲೇ ತಿಳಿದಿದ್ದನು. ಅದರಿಂದ ಅವನಲ್ಲಿ ಯಾವ ಗುಣವು ಇಲ್ಲದ್ದರಿಂದ ಇಂಥ ದೊಡ್ಡ ತಪ್ಪಾಯಿತು?

ಜಪಾನದವರು ತಮ್ಮ ದೂರದೃಷ್ಟಿಯ ಕಲ್ಪನೆಯನ್ನು ಒಂದು ವಿಲಕ್ಷಣವಾದ ಪದ್ಧತಿಯಿಂದ ವ್ಯಕ್ತಪಡಿಸಿರುತ್ತಾರೆ. ಅವರದೊಂದು ದೇವಾಲಯದಲ್ಲಿ ಬುದ್ಧನ ಮೂರ್ತಿಯು ಧ್ಯಾನಾಸಕ್ತವಾಗಿ ಗದ್ದಿಗೆಯ ಮೇಲೆ ಕುಳಿತಿರುವದು; ಅದರ ಮುಂದೆ ಮೂರು ಮಂಗಗಳ ಮೂರ್ತಿಗಳು ಇರುವವು. ಅವುಗಳಲ್ಲಿ ಒಂದು ಮಂಗವು ತನ್ನ ಕೈಗಳನ್ನು ಎರಡೂ ಕಣ್ಣುಗಳ ಮೇಲೆ ಇಟ್ಟುಕೊಂಡಿರುವದು; ಮತ್ತೊಂದು ಮಂಗವು ತನ್ನ ಎರಡೂ ಕಿವಿಗಳ ಮೇಲೆ ಇಟ್ಟುಕೊಂಡಿರುವದು; ಮೂರನೇ ಮಂಗವು ತನ್ನ ಕೈಯನ್ನು ಬಾಯಮೇಲೆ ಇಟ್ಟುಕೊಂಡಿರುವದು. ಇವುಗಳ ಅರ್ಥವೇನಂದರೆ: —

ಮೊದಲನೇ ಮಂಗವು—"ನಾನು ಕೆಟ್ಟ ಅಥವಾ ಮೂರ್ಖತನದ ಸಂಗತಿಗಳನ್ನು ನೋಡುವದಿಲ್ಲ"ಂದು ಬೋಧಿಸುತ್ತದೆ.

ಎರಡನೇ ಮಂಗವು—"ನಾನು ಕೆಟ್ಟ ಅಥವಾ ಮೂರ್ಖತನದ ಸಂಗತಿಗಳನ್ನು ಕೇಳುವದಿಲ್ಲೆಂ"ದು ಬೋಧಿಸುತ್ತದೆ.

ಮೂರನೇ ಮಂಗವು—"ನಾನು ಕೆಟ್ಟ ಅಥವಾ ಮೂರ್ಖತನದ ಸಂಗತಿಗಳನ್ನು ಆಡುವದಿಲ್ಲೆಂದು ಬೋಧಿಸುತ್ತದೆ.

ಸಾರಾಂಶವೇನಂದರೆ ದೂರದೃಷ್ಟಿಯುಳ್ಳ ಮನುಷ್ಯನ ನಡಾವಳಿಯ ನಿಯಮಗಳನ್ನು ಒಂದು ಹಲಿಗೆಯ ಮೇಲೆ ಸಾಲಾಗಿ ಬರೆದರೆ, ಅವು ಕೆಳಗೆ ಬರೆದಂತೆ ಆಗುವವು: —

೧. ದೂರದೃಷ್ಟಿಯುಳ್ಳ ಮನುಷ್ಯನು ಒಳ್ಳೇಎಚ್ಚರಿಕೆಯಿಂದ ಮಾತುಗಳನ್ನು ಆಡುವನು.

೨. ದೂರದೃಷ್ಟಿಯುಳ್ಳ ಮನುಷ್ಯನು ಒಳ್ಳೇ ಎಚ್ಚರಿಕೆಯಿಂದ ಮಾತುಗಳನ್ನು ಕೇಳುವನು.

೩. ದೂರದೃಷ್ಟಿಯುಳ್ಳ ಮನುಷ್ಯನು ಒಳ್ಳೇ ಎಚ್ಚರಿಕೆಯಿಂದ ನೋಡುವನು.

೪. ದೂರದೃಷ್ಟಿಯುಳ್ಳ ಮನುಷ್ಯನು ಅನ್ನಪಾನಾದಿಗಳಲ್ಲಿಯೂ ವ್ಯೋಪಾಕು ಮಾಡುವದರಲ್ಲಿಯೂ ಒಳ್ಳೇ ಎಚ್ಚರದಿಂದ ಇರುವನು.

೫. ದೂರದೃಷ್ಟಿಯುಳ್ಳ ಮನುಷ್ಯನು ತಾನು ಹೋದಲ್ಲೆಲ್ಲ ಎಚ್ಚರಿಕೆಯಿಂದ ಅವಲೋಕನವನ್ನು ಮಾಡುವನು.

೬. ದೂರದೃಷ್ಟಿಯುಳ್ಳ ಮನುಷ್ಯನು ಮುಂದಿನಕಾಲದ ಬಗ್ಗೆ ಎಚ್ಚರದಿಂದ ವಿಚಾರ ಮಾಡುವನು.

೭. ದೂರದೃಷ್ಟಿಯುಳ್ಳ ಮನುಷ್ಯನು ತನ್ನ ಮಾತಿನಿಂದಲೂ ಕೃತಿಯಿಂದಲೂ, ಏನು ಪರಿಣಾಮವಾಗಬಹುದೆಂಬದನ್ನು ಎಚ್ಚರಿಕೆಯಿಂದ ಸರಿಯಾಗಿ ಕಲ್ಪನೆಯನ್ನು ಮಾಡಬಲ್ಲನು.

ನೃಥಭಾಜಕ-ಲಘುತಮಸಾಧಾರಣಭಾಜ್ಯಗಳ ಸಹಾಯದಿಂದ ಬಿಡಿಸಬಹುದಾದ ಉದಾಹರಣಗಳು: —

೧. ೫, ೬, ೮, ೧೦ ಈ ಸಂಖ್ಯೆಗಳಿಂದ ನಿಃಶೇಷವಾಗಿ ಭಾಗಿಸಲ್ಪಡುವಂಥ ಮೂರು ಅತಿ ಸಣ್ಣ ಸಂಖ್ಯೆಗಳು ಯಾವವು?

೨. ಒಬ್ಬ ತೋಟಿಗನು ತನ್ನಲ್ಲಿರುವ ಹಣ್ಣುಗಳನ್ನು ಎರಡೆರಡರಂತೆ ಮೂರುಮೂರರಂತೆ ನಾಲ್ನಾಲ್ಕರಂತೆ ಎಣಿಸಲು, ಒಂದು ಹಣ್ಣು ಹೆಚ್ಚು ಉಳಿಯುತ್ತಿತ್ತು. ಅವನ ಹತ್ತರ ಒಟ್ಟಿಗೆ ೧೦೦ ಕ್ಕಿಂತ ಹೆಚ್ಚಿಗೆ ೧೨೦ ಕ್ಕಿಂತ ಕಡಿಮೆ ಹಣ್ಣುಗಳು ಇದ್ದವು. ಆದರೆ ಹಣ್ಣುಗಳೆಷ್ಟು?

೩. ಒಬ್ಬ ಗೃಹಸ್ಥನು ಅಂಗಡಿಕಾರನಿಗೆ ೧ ಪೌಂಡು ೫ ಶಿಲಿಂಗಿಗಿಂತ ಹೆಚ್ಚು ೫ ಪೌಂಡಿಗಿಂತ ಕಡಿಮೆ ಹಣವನ್ನು ಕೊಡಬೇಕಾಗಿದೆ. ಆ

ಹಣವನ್ನು ಆರು ಪೇನಸಿನ ನಾಣ್ಯಗಳಿಂದಲೂ, ತಿಲಿಂಗಿನ ನಾಣ್ಯಗಳಿಂದಲೂ, ಸ್ಟಾರೇನುಗಳಿಂದಲೂ, ಅರ್ಧಕ್ರೌನುಗಳಿಂದಲೂ, ಒಂಬತ್ತು ಪೇನಸಿನ ನಾಣ್ಯಗಳಿಂದಲೂ ಕೊಡಲಿಕ್ಕೆ ಬರುವದು. ಆದರೆ ಆ ಹಣವು ಎಷ್ಟು?

೪. ಮೂರು ಗಂಟೆಗಳು ಇರುವವು; ಅವು ಅನುಕ್ರಮವಾಗಿ ೩, ೪, ೭ ಸೇಕಂದುಗಳಿಗೊಮ್ಮೆ ಬಾರಿಸುವವು. ಅವೆಲ್ಲ ಒಮ್ಮೆಲೆ ಬಾರಿಸಲಿಕ್ಕೆ ಪ್ರಾರಂಭಿಸಿದವು; ಇನ್ನು ಪುನಃ ಎಷ್ಟು ಹೊತ್ತಿನಮೇಲೆ ಅವು ಒಮ್ಮೆಲೆ ಬಾರಿಸುವವು? ತಾಸು ಪ್ರಾರಂಭವಾದಕೂಡಲೆ ಅವು ಬಾರಿಸಲಿಕ್ಕೆ ಹತ್ತಿದವೆಂದರೆ ತಾಸು ಮುಗಿಯುವಷ್ಟು ಹೊತ್ತಿನಲ್ಲಿ ಎಷ್ಟುಸಾರೆ ಮೂರೂ ಗಂಟೆಗಳು ಒಮ್ಮೆಲೆ ಬಾರಿಸುವವು?

೫. ನನಗೆ ಎರಡು ಹೊಲಗಳು ಇರುವವು. ಒಂದು ೨ ಎಕರೆ ಇರುವದು. ಮತ್ತೊಂದು ಕಾಟಕೋನಚತುಷ್ಕೋನಾಕೃತಿಯಾದ ಹೊಲವು ೪೦ ಯಾರ್ಡ × ೧೨೨ ಯಾರ್ಡ ಇರುವದು. ಈ ಹೊಲಗಳನ್ನು ಸಮಾನ ತುಂಡುಗಳಾಗುವಂತೆ ವಿಭಾಗಿಸಬೇಕಾಗಿದೆ. ಆದರೆ ಪ್ರತಿಯೊಂದು ತುಂಡಿನ ಕ್ಷೇತ್ರಫಲವು ತೀರ ಕಡಿಮೆಯೆಂದರೆ ಎಷ್ಟು ಇರಬೇಕು?

೬. ಒಬ್ಬ ಕುರುಬನು ತನ್ನ ಕುರಿಗಳನ್ನು ಮೂರರಂತೆ ಎಣಿಸಲು, ೨ ಕುರಿಗಳು ಹೆಚ್ಚಾದವು; ನಾಲ್ಕರಂತೆ ಎಣಿಸಲು, ೩ ಕುರಿಗಳು ಹೆಚ್ಚಾದವು; ೫ ರಂತೆ ಎಣಿಸಿದರೆ, ೪ ಕುರಿಗಳು ಹೆಚ್ಚಾದವು. ೧೦೦ಕ್ಕಿಂತ ಹೆಚ್ಚು ಅವನ ಕುರಿಗಳು ಇರುವದಿಲ್ಲ. ಆದರೆ ಕುರಿಗಳ ಸಂಖ್ಯೆಯು ಎಷ್ಟು?

೭. ೧೨೫ ಮತ್ತು ೨೧೩ ಈ ಎರಡು ಸಂಖ್ಯೆಗಳಿಗೆ ಯಾವ ಅತಿ ದೊಡ್ಡ ಸಂಖ್ಯೆಯಿಂದ ಭಾಗಿಸಿದರೆ ೧ ಬಾಕಿ ಉಳಿಯುವದು?

೮. ನಿಮ್ಮ ಹತ್ತರ ಕೆಲವು ಬುಟ್ಟಿಗಳು ಇರುವವು; ಪ್ರತಿಯೊಂದು ಬುಟ್ಟಿಯಲ್ಲಿ ಕೆಲವು ನಿಂಬಿಯ ಹಣ್ಣುಗಳನ್ನೂ ಕೆಲವು ಕಿತ್ತಳೆಯ ಹಣ್ಣುಗಳನ್ನೂ ಹಾಕಲಿಕ್ಕೆ ಹೇಳಿರುತ್ತದೆ. ಎಲ್ಲ ಬುಟ್ಟಿಗಳಲ್ಲಿ ನಿಂಬಿಯ ಹಣ್ಣುಗಳು ಸರಿಯಾಗಿರಬೇಕು. ಮತ್ತು ಕಿತ್ತಳೆಯ ಹ

ಣ್ಣುಗಳಾದರೂ ಅಷ್ಟಷ್ಟೇ ಇರತಕ್ಕದ್ದು. ಒಟ್ಟಿಗೆ ನಿಮಗೆ ೨೧೦ ನಿಂಬೆಯ ಹಣ್ಣುಗಳನ್ನೂ ೩೦೦ ಕಿತ್ತಳೆಯ ಹಣ್ಣುಗಳನ್ನೂ ಕೊಟ್ಟಿ ದ್ದುತ್ತದೆ. ನೀವು ಆ ಎಲ್ಲ ಹಣ್ಣುಗಳನ್ನು ಉಪಯೋಗಿಸಲಿಕ್ಕೆ ಬೇಕು. ಆದರೆ ಎಷ್ಟು ಬುಟ್ಟಿಗಳನ್ನು ತೆಗೆದುಕೊಳ್ಳುವಿರಿ? ಮತ್ತು ಪ್ರತಿಯೊಂದು ಬುಟ್ಟಿಯಲ್ಲಿ ಎಷ್ಟೆಷ್ಟು ಹಣ್ಣುಗಳನ್ನು ಹಾಕುವಿರಿ?

೯. ಮೇಲಿನ ಉದಾಹರಣೆಯಲ್ಲಿ ಕೆಲವು ಬುಟ್ಟಿಗಳನ್ನು ಬರಿಯ ನಿಂಬಿಯ ಹಣ್ಣುಗಳಿಂದಲೂ ಕೆಲವು ಬುಟ್ಟಿಗಳನ್ನು ಬರಿಯ ಕಿತ್ತಳೆಯ ಹಣ್ಣುಗಳಿಂದಲೂ ತುಂಬಬೇಕಾಗಿದೆ ಎಂದು ತಿಳಿಯಿರಿ. ಪ್ರತಿಯೊಂದು ಬುಟ್ಟಿಯಲ್ಲಿ ಹಣ್ಣುಗಳ ಸಂಖ್ಯೆಯು ಅಷ್ಟಷ್ಟೇ ಇರತಕ್ಕದ್ದು; ಮತ್ತು ಆದಷ್ಟು ಕಡಿಮೆ ಬುಟ್ಟಿಗಳನ್ನು ಉಪಯೋಗಿಸತಕ್ಕದ್ದು. ಹಾಗಾದರೆ ಎಷ್ಟು ಬುಟ್ಟಿಗಳು ಬೇಕು? ಮತ್ತು ಪ್ರತಿಯೊಂದು ಬುಟ್ಟಿಯಲ್ಲಿ ಎಷ್ಟು ನಿಂಬಿಯ ಹಣ್ಣುಗಳನ್ನು ಅಥವಾ ಎಷ್ಟು ಕಿತ್ತಳೆಯ ಹಣ್ಣುಗಳನ್ನು ಹಾಕತಕ್ಕದ್ದು?

೧೦. ಒಂದು ದಾರಿಯು ೨ ಯಾರ್ಡ ೩ ಇಂಚು ಉದ್ದ, ೧೨೪ ಯಾರ್ಡ ಅಗಲು ಇರುವದು. ಆದರೆ ಆ ಹಾದಿಗೆ ಹಾಸುಗಲ್ಲುಗಳನ್ನು ಕೂಡ್ರಿಸಲಿಕ್ಕೆ ತೀರ ದೊಡ್ಡದೆಂದರೆ ಯಾವ ಅಳತೆಯ ಚಚ್ಚೌಕು ಕಲ್ಲುಗಳನ್ನು ಉಪಯೋಗಿಸತಕ್ಕದ್ದು?

೧೧. ಒಂದು ಗಂಟೆಯು ೪ ಸೇಕಂದಿಗೆ ೩ ಸಾರೆ ಬಾರಿಸುತ್ತದೆ. ಮತ್ತೊಂದು ೧೮ ಸೇಕಂದಿಗೆ ೫ ಸಾರೆ ಬಾರಿಸುತ್ತದೆ. ಅವು ಒಮ್ಮೆಲೆ ಬಾರಿಸಲಿಕ್ಕೆ ಪ್ರಾರಂಭ ಮಾಡಿದ ಎಷ್ಟು ಹೊತ್ತಿನಮೇಲೆ ಪುನಃ ಒಟ್ಟುಗೂಡಿ ಬಾರಿಸುವವು?

೧೨. ಮೂರು ಗಂಟೆಗಳು ಅನುಕ್ರಮವಾಗಿ ಒಂದು ಮಿನೀಟಿಗೆ ೧೨, ೪, ೮ ಸಾರೆ ಬಾರಿಸುವವು. ಪುನಃ ಯಾವಾಗ್ಗೆ ಅವು ಒಟ್ಟುಗೂಡಿ ಬಾರಿಸುವವು?

೧೩. ಒಂದು ಹಣ್ಣಿನ ⅓ ಭಾಗದಂಥ ತುಂಡುಗಳೂ, ¼ ಭಾಗದಂಥ ತುಂಡುಗಳೂ, ⅙ ಭಾಗದಂಥ ತುಂಡುಗಳೂ ಪೂರ್ಣವಾಗಿ ಆಗಬೇ

ಕಾದರೆ ತೀರ ಕಡಿಮೆಯೆಂದರೆ ಎಷ್ಟು ಪೂರ್ಣ ಹಣ್ಣುಗಳನ್ನು ತೆಗೆದುಕೊಳ್ಳಬೇಕು?

ಏಕಮಾನ ಪದ್ಧತಿಯ ರೀತಿಯಿಂದ ಬಿಡಿಸಬಹುದಾದ ಕೆಲವು ಲೆಕ್ಕಗಳನ್ನು, ವಿಶೇಷವಾಗಿ ಕಾಲಶಕ್ತಿಯ ಲೆಕ್ಕಗಳನ್ನು ಲಘುತಮ ಸಾಧಾರಣ ಭಾಜ್ಯದಿಂದ ಹೆಚ್ಚು ಸುಲಭವಾಗಿಯೂ, ಹೆಚ್ಚು ಸಂಕ್ಷೇಪವಾಗಿಯೂ ಬಿಡಿಸಬಹುದು. ಅಂಥ ಕೆಲವು ಲೆಕ್ಕಗಳನ್ನು ಕೆಳಗೆ ಬಿಡಿಸಿ ತೋರಿಸಿರುತ್ತದೆ. ಜಾಣಾಕ್ಷರಾದ ವಿದ್ಯಾರ್ಥಿಗಳು ಆ ರೀತಿಗಳ ಸಹಾಯದಿಂದ ಅದೇ ಮಾದರಿಯ ಬೇರೆ ಲೆಕ್ಕಗಳನ್ನು ಬಿಡಿಸಬಹುದು.

೧೪ ನೇ ಉದಾ:— ಅ ನು ೧ ಕೆಲಸವನ್ನು ೬ ದಿವಸಗಳಲ್ಲಿ ಮಾಡುತ್ತಾನೆ. ಬ ನು ೮ ದಿವಸಗಳಲ್ಲಿ ಕ ನು ೧೨ ದಿವಸಗಳಲ್ಲಿ ಮಾಡುತ್ತಾರೆ. ಮೂವರೂ ಕೂಡಿ ಮಾಡಿದರೆ ಎಷ್ಟು ದಿವಸಗಳಲ್ಲಿ ಮಾಡುವರು?

ರೀತಿ:— ಭಿನ್ನ ಕಾಲಗಳ ಲ. ಸಾ. ಭಾ. = ೨೪ ದಿವಸಗಳು.

೨೪ ದಿವಸಗಳಲ್ಲಿ ಅ ನು ಅಂಥ ೪ ಕೆಲಸಗಳನ್ನು ಮಾಡುತ್ತಾನೆ.

,,	,,	ಬ ನು	,,	೩	,,	,,
,,	,,	ಕ ನು	,,	೨	,,	,,

∴ ೨೪ ದಿವಸಗಳಲ್ಲಿ ಅ + ಬ + ಕ ಇವರು ಅಂಥ ೯ ಕೆಲಸಗಳನ್ನು ಮಾಮಾಡುತ್ತಾರೆ.

∴ ಅವರಿಗೆ ಅಂಥ ೧ ಕೆಲಸವನ್ನು ಮಾಡಲಿಕ್ಕೆ ೨೪/೯ ದಿ = ೨⅔ ದಿವಸಗಳು ಹಿಡಿಯುವವು ಇದೇ ಉತ್ತರವು

೧೫ ನೇ ಉದಾ:— ಅ ನು ಒಂದು ಹೊಲವನ್ನು ೯ ದಿವಸಗಳಲ್ಲಿಯೂ, ಬ ನು ೧೨ ದಿವಸಗಳಲ್ಲಿಯೂ, ಕ ನು ೧೬ ದಿವಸಗಳಲ್ಲಿಯೂ ಹರಗುತ್ತಾರೆ. ಆದರೆ ಇಬ್ಬಿಬ್ಬರನ್ನು ಕೂಡಿ ಕೆಲಸಕ್ಕೆ ಹಚ್ಚಿದರೆ ಎಷ್ಟೆಷ್ಟು ದಿವಸಗಳು ಹಿಡಿಯುವವು?

ರೀತಿ:— ಭಿನ್ನ ಕಾಲಗಳ ಲ. ಸಾ. ಭಾ. = ೧೪೪ ದಿವಸಗಳು.

೧೪೪ ದಿವಸಗಳಲ್ಲಿ ಅ ನು ಅಂಥ ೧೬ ಹೊಲಗಳನ್ನು ಹರಗುತ್ತಾನೆ.

,,	,,	ಬ ನು	,,	೧೨	,,	,,
,,	,,	ಕ ನು	,,	೯	,,	,,
,,	,,	ಅ + ಬ ಇವರು	,,	೨೮	,,	,,

ಅವರಿಗೆ ಒಂದು ಹೊಲವನ್ನು ಹರಗಲಿಕ್ಕೆ ೪×೬/೫ ದಿ=೨೪/೫ ದಿ=೪⅘ ದಿವಸ. ಇದೇ ಪ್ರಕಾರ ಅ+ಕ ಹಾಗು ಬ+ಕ ಇವರಿಗೆ ಹಿಡಿಯುವ ದಿವಸಗಳನ್ನು ತೆಗೆಯಬಹುದು

ಉತ್ತರಗಳು.

(೧) ೧೨೦, ೨೪೦, ೩೬೦. (೨) ೧೭೯ ಹ. (೩) ೧ ಪೌ. ೧೦ ಶಿ.; ೩ ಪೌ.; ೪ ಪೌ. ೧೦ ಶಿ. (೪) (ಅ) ೪೪ ಸೇಕಂದಿಗೆ. (ಬ) ೪೩ ಸಾರೆ (೧ನೇ ಸಾರೆ ಹಿಡಿದು). (೫) ೪೧ ಚೌರಸಯಾರ್ಡ. (೬) ೫೯ ಕು. (ಲ. ಸಾ. ಭಾ. ಕ್ಕಿಂತ ೧ ಕಡಿಮೆ.) (೭) ೪. (೧೨೪, ೨೧೨ ಇವುಗಳ ದೃ. ಭಾ.) (೮) ೪ ಬುಟ್ಟಿಗಳು. ಪ್ರತಿಯೊಂದು ಬುಟ್ಟಿಯಲ್ಲಿ ೫೩ ನಿಂಬಿಯ ಹಣ್ಣು, ೭೫ ಕಿತ್ತಳೆಯ ಹಣ್ಣು. (೯) ೧೨೮ ಬುಟ್ಟಿಗಳು. ಪ್ರತಿಯೊಂದು ಬುಟ್ಟಿಯಲ್ಲಿ ೪ ನಿಂಬಿಯ ಹಣ್ಣು, ಅಥವಾ ೪ ಕಿತ್ತಳೆಯ ಹಣ್ಣು. (೧೦) ೩ ಚೌರಸ ಇಂಚು. (೧೧) ಪ್ರತಿ ೩೬ ಸೇಕಂದಿಗೆ (೪/೫ ಸೇ. ೩/೫ ಸೇ. ಲ. ಸಾ. ಭಾ.) (೧೨) ಪ್ರತಿ ೧೫ ಸೇಕಂದಿಗೆ ೧೫/೬ ಮಿ ೫/೪ ಮಿ. ಮತ್ತು ೫/೬ ಮಿ ಗಳ ಲ. ಸಾ. ಭಾ. = ೫/೪ ಮಿ. = ೧೫ ಸೇ. ಅಥವಾ ೫ ಸೇ. ೧೫ ಸೇ. ಮತ್ತು ೭೫/೨ ಸೇ. ಗಳ ಲ. ಸಾ. ಭಾ = ೧೫ ಸೇ. (೧೩) ೧೨ ಹಣ್ಣುಗಳು.

ವಿದ್ಯಾಖಾತೆಯ ನೋಟೀಸು.

ಮಿ. ವ್ಹಿ. ಎಸ್. ಮುಗದಾಳ ಇವರು ಬರೆದ "ಹಿಂದುಸ್ಥಾನದ ಭೂಗೋಲ"ವನ್ನು ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸುವದಕ್ಕೆ ಮಂಜೂರು ಮಾಡಿರುವದರಿಂದ ಈ ವರೆಗೆ ಕನ್ನಡ ಶಾಲೆಗಳಲ್ಲಿ ೫ನೆಯ ಇಯತ್ತೆಯಲ್ಲಿ ಉಪಯೋಗಿಸುತ್ತಿದ್ದ "ಭೂಗೋಲವಿದ್ಯೆಯ ಮೂಲತತ್ವಗಳು ೨ನೆಯ ಭಾಗ (ಹಿಂದುಸ್ಥಾನದ ವರ್ಣನೆ)" ಎಂಬ ಪುಸ್ತಕವನ್ನು ಇನ್ನು ಮುಂದೆ ಯಾವ ಕನ್ನಡ ಪ್ರಾಥಮಿಕ ಶಾಲೆಗಳಲ್ಲಿಯೂ ಉಪಯೋಗಿಸಬಾರದು.

V. B. JOSHI.

ಧಾರವಾಡ ಎಜ್ಯುಕೇಶನಲ್ ಇನಸ್ಪೇಕ್ಟರ ದಕ್ಷಿಣಭಾಗರವರ ಆಫೀಸು ತಾ|| ೧೦-೨-೧೫

ಅ|| ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣಭಾಗ.

ಶಾಲಾಪತ್ರಕ.

ಪುಸ್ತಕ ೫೦ { ವರ್ಷ ೧೯೧೪. { ಸಂಚಿಕೆ ೩.

ಸ್ಫುಟ ವಿಷಯಗಳು.

೧. ಮೈಲಿಯ ಜಂತುಗಳ ಶೋಧ.

ವಾಲ್ಟರ ಫಾರ್ನೆಟನೆಂಬ ಒಬ್ಬ ಜರ್ಮನಿಯ ಡಾಕ್ಟರನು ಮೈಲಿಯ ಜಂತುಗಳನ್ನು ಶೋಧಿಸಿದ್ದಾನೆ. ಈ ಜಂತುಗಳ ಬೆಳವಣಿಗೆಯನ್ನು ಮಾಡಲಿಕ್ಕೆ ಬರುತ್ತಿರುವದರಿಂದ ಇನ್ನು ಮೇಲೆ ಮೈಲೀ ತೆಗೆಯಲಿಕ್ಕೆ ಉಪಯೋಗಿಸುವ ರಸಿಕೆಯನ್ನು ಸ್ವತಂತ್ರವಾಗಿ ಸಿದ್ಧಮಾಡಲಿಕ್ಕೆ ಬರುವದು. ಆಕಳು ಇಲ್ಲವೆ ಕರು ಇವುಗಳ ಕೆಚ್ಚಲಮೇಲಿನ ಬಕ್ಕೆಯ ರಸಿಕೆಯನ್ನು ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ. ಈ ರಸಿಕೆಯಲ್ಲಿ ಬೇರೆ ರೋಗಜಂತುಗಳ ಪ್ರವೇಶವಾಗುವ ಸಂಭವವು ಹೆಚ್ಚಿರುವದು. ಆದರೆ ಹೊಸದಾಗಿ ಶೋಧಿಸಲ್ಪಟ್ಟ ರಸಿಕೆಯಲ್ಲಿ ಈ ದೋಷವಾಗುವ ಸಂಭವವಿಲ್ಲ.

---

೨. ವಸುಧೈವ ಕುಟುಂಬಕಂ.

ಸ್ವೀಡನ ದೇಶದಲ್ಲಿ ನೋಬಲನೆಂಬ ಹೆಸರಿನ ಒಬ್ಬ ಶಾಸ್ತ್ರ ಸಂಶೋಧಕನೂ, ಧನಾಢ್ಯನೂ, ದಾನಶೂರನೂ ಆದ ಒಬ್ಬ ಗೃಹಸ್ಥನಿರುವನು. ಇವನು ಪದಾರ್ಥ ವಿಜ್ಞಾನ ಶಾಸ್ತ್ರ, ರಸಾಯನಶಾಸ್ತ್ರ, ವಾಙ್ಮಯ ಮೊದಲಾದವುಗಳಲ್ಲಿ ಅಪ್ರತಿಮವಾದ ನೈಪುಣ್ಯವನ್ನು ತೋರಿಸಿದವರಿಗೆ ಪ್ರತಿವರ್ಷ ಒಂದು ಲಕ್ಷ ೨೦ ಸಾವಿರ ರೂಪಾಯಿಗಳ ಇನಾಮು ಕೊಡುತ್ತಿರುವನು. ಇನಾಮು ಹೊಂದುವ ಮನುಷ್ಯನು ಜಗತ್ತಿನೊಳಗಿನ ಬೇಕಾದ ದೇಶದವನಿದ್ದರೂ ನಡೆಯುವದು. ಈ ಇನಾಮುಗಳು ಇಂದಿಗೆ ೮-೧೦ ವರ್ಷಗಳಿಂದ ಬೇರೆ ಬೇರೆ ಜನರಿಗೆ ದೊರಕಿರುವವು. ಕಳೆದ ವರ್ಷ ಈ ಬಹುಮಾನವು ಬಂಗಾಲ ದೇಶದ ಪ್ರಸಿದ್ಧಕವಿಗಳಾದ ರವೀಂದ್ರನಾಥ ಠಾಗೋರ ಎಂಬವರಿಗೆ ಅವರ "ಗೀತಾಂಜಲಿ" ಎಂಬ ಕಾವ್ಯಕ್ಕೆ ಜಗತ್ತು

ತಲೆದೂಗಿದ್ದರಿಂದ ದೊರೆಯಿತು. ತಮ್ಮ ತಮ್ಮ ಸಮಾಜದ ಅಥವಾ ರಾಷ್ಟ್ರದ ಉನ್ನತಿಯ ಸಲುವಾಗಿ ಯತ್ನಮಾಡುವ ಜನರನ್ನು ಕಾಣಬ ಹುದು. ಆದರೆ ನೋಬಲನಂಥ "ವಸುಧೈವ ಕುಟುಂಬಕಂ" ಎಂಬಂಥ ಜನರು ಜಗತ್ತಿನಲ್ಲಿ ಅಪರೂಪವಾಗಿ ಹುಟ್ಟುವರು.

---

೩. ಇಂಗ್ಲೀಷರ ಚಹಾದ ವ್ಯಸನವು.

ಇಂಗ್ಲಿಷರಲ್ಲಿ ಚಹಾದ ವ್ಯಸನವು ಮಿತಿಮೀ ಬೆಳೆದಿರುವದೆಂದು ಒಬ್ಬ ಯುರೋಪಿಯನ್ನ ಗೃ ಸ್ಥನ ಅಭಿಪ್ರಾಯವಿರುತ್ತದೆ. ಅವನು ಸಾಯೆನ್ಸ ಶಿಫ್ಟಿಂಗಸ (Science Shiftings) ಎಂಬ ಇಂಗ್ಲಿಷ ಪತ್ರದಲ್ಲಿ ಬೇ ಎಲ್ಲ ರಾಷ್ಟ್ರದವರಿಗಿಂತ ಇಂಗ್ಲಿಷರಲ್ಲಿ ಚಹಾ ಕುಡಿಯುವ ರೂಢಿಯ ವಿಶೇಷವಾಗಿರುವದೆಂತಲೂ ಚಹಾ ಕುಡಿಯುವ ಸಾರ್ವತ್ರಿಕ ಪ್ರಚಾರವ ಬ್ರಿಟಿಶರಲ್ಲಿದ್ದಷ್ಟು ಬೇರೆ ಎಲ್ಲಿಯೂ ಕಂಡು ಬರುವದಿಲ್ಲೆಂತಲೂ ಪ್ರಸಿದ್ಧ ಮಾಡಿರುತ್ತಾನೆ. ಬ್ರಿಟಿಶ ಜನರಲ್ಲಿ ಬಹು ಮಂದಿ ಹೆಂಗಸರು, ಹುಡುಗರ ಸಹ ಈಗ ಒಮ್ಮೆ, ಇನ್ನೊಂದು ತಾಸಿಗೆ ಮತ್ತೊಮ್ಮೆ ಈ ಪ್ರಕಾರ ಇಡಿ ದಿವಸ ಚಹಾ ಕುಡಿಯುತ್ತಿರುತ್ತಾರೆ. ವ್ಯಾಪಾರೋದ್ಯೋಗಗಳಲ್ಲಿ ತೊ ಗಿದ ಜನರು ಚಹಾ ಕುಡಿಯುವದಕ್ಕಾಗಿ ದಿನಾಲು ತಮ್ಮ ಉದ್ಯೋ ವನ್ನು ಆಗಾಗ್ಗೆ ನಿಲ್ಲಿಸಬೇಕಾಗುವದು. ಇದಲ್ಲದೆ ಚಹಾವು ತೀಕ್ಷ್ಣವಾ ದದ್ದೇ ಸಿದ್ಧಮಾಡಲ್ಪಡುವದು. ಆದರಿಂದ ಚಹಾದೊಳಗಿನ ವಿಷದ್ರವ್ಯ ಗಳು ಕುಡಿಯುವವರ ಹೊಟ್ಟೆಯಲ್ಲಿ ಹೆಚ್ಚಾಗಿ ಸೇರುವವು.

ಸರಾಸರಿಮಾನದಿಂದ ಗ್ರೇಟಬ್ರಿಟನ್ನದ ಪ್ರತಿಯೊಬ್ಬ ಮನುಷ್ಯ ಹೊಟ್ಟೆಯಲ್ಲಿ ಪ್ರತಿದಿವಸ ಚಹಾದೊಳಗಿನ ಅಲ್ಕಲಾಯಿಡ ಹಾಗು ಟ್ಯಾನಿ ಸ್ ಈ ಎರಡು ಪದಾರ್ಥಗಳು ಅನುಕ್ರಮವಾಗಿ ೩.೬ ಹಾಗು ೯.೭ ಗ್ರೇನ ಸೇರುತ್ತವೆಯೆಂದು ಲೆಕ್ಕದಿಂದ ಹೊರಬರುತ್ತದೆ. ಈ ಎರಡೂ ಪದಾರ್ಥಗ ಳನ್ನು ಡಾಕ್ಟರರು ಒಮ್ಮೊಮ್ಮೆ ರೋಗಿಗಳಿಗೆ ಔಷಧವೆಂದು ಕೊಡುತ್ತಿರು ತ್ತಾರೆ. ಆದರೆ ಅವರು ಆ ಪದಾರ್ಥಗಳನ್ನು ತಕ್ಕ ಪ್ರಸಂಗಗಳಲ್ಲಿ ಮಾತ್ರ ಕೊಡುವರು. ಅಲ್ಕಲಾಯಿಡ ಈ ಪದಾರ್ಥವನ್ನು ಡಾಕ್ಟರರು ಕಾರಣ ಪರತ್ವದಿಂದ ಮೇಲಿನ ಪ್ರಮಾಣದ ಇಮ್ಮಡಿ ಕೊಡುತ್ತಿರುವರು. ಟ್ಯಾನಿಸ್

ಈ ಪದಾರ್ಥವನ್ನು ಮಾತ್ರ ಅಷ್ಟೇ ಪ್ರಮಾಣದಿಂದ ಕೊಡುವರು. ಯೋಗ್ಯ ಪ್ರಸಂಗಗಳಲ್ಲಿ ಔಷಧದಂತೆ ಉಪಯೋಗವಾಗುವ ದ್ರವ್ಯಗಳು ಅದೇ ಪ್ರಮಾಣದಿಂದ ಅಥವಾ ಅದಕ್ಕೂ ಹೆಚ್ಚಾಗಿ ಪ್ರತಿ ದಿವಸ ನಮ್ಮ ಹೊಟ್ಟೆಯಲ್ಲಿ ಸೇರಿದರೆ ಅಪಾಯವಾಗದೆ ಇರದು. ಇದಲ್ಲದೆ ಮೇಲೆ ಕೊಟ್ಟ ಪ್ರಮಾಣವು ಸರಾಸರಿ ಮಾನದ್ದಿರುವದು; ಆದರೆ ಎಷ್ಟೋ ಜನರು ಈ ಸರಾಸರಿ ಮಾನಕ್ಕಿಂತ ಹೆಚ್ಚು ಚಹಾ ಕುಡಿಯುತ್ತಿರುತ್ತಾರೆ. ಅದರಿಂದ ಅವರ ಹೊಟ್ಟೆಯಲ್ಲಿ ಮೇಲೆ ಹೇಳಿದ ದ್ರವ್ಯಗಳು ಹೆಚ್ಚು ಪ್ರಮಾಣದಿಂದ ಸೇರುವವು. ಇದರಿಂದ ಅವರಿಗೆ ಅಪಾಯವಾಗದೆ ಇರದೆಂದು ಮೇಲ್ಕಾಣಿಸಿದ ಲೇಖಕನ ಅಭಿಪ್ರಾಯವಿರುತ್ತದೆ.

ಪತ್ರವ್ಯವಹಾರ.

ಗಮಕಹೃದಯಂ.

ಕೇಶಿರಾಜಂ ನಮಸ್ಕೃತ್ಯ ತದುಕ್ತೀಃ ಪರಿಮೃಶ್ಯಚ ||
ಹೃದಯಂ ಗಮಕಸ್ಯಾತ್ರ ಲಘೂಪಾಯೇನ ವ್ಯಜ್ಯತೇ ||

—(0)—

ವ್ಯವಸ್ಥಾಪಿತಾಂಶಗಳು:—೧. ದರ್ಪಣದಲ್ಲಿ ಕರ್ಮಧಾರಯಗಮಕಗಳಿಗೆ ಪರಸ್ಪರ ಭೇದವುಂಟು. (ಅ). ದರ್ಪಣದ ಕರ್ಮಧಾರಯದಲ್ಲಿ ಸಂಖ್ಯಾವಾಚಕ ವಿ. ವಿಲ್ಲ. (ಆ). ಸಂಸ್ಕೃತೋತ್ತರಪದಕವಾದ ಕರ್ಮಧಾರಯವು ಗಮಕವೆಂಬದು ದರ್ಪಣದ ಅಭಿಪ್ರಾಯವಲ್ಲ. ೨. ಕನ್ನಡ ವ್ಯಾ. ಪ್ರಕ್ರಿಯೆಗೆ ಗಮಕದಿಂದ ಪ್ರಯೋಜನವುಂಟು. ೩. ಶಾಸನದಲ್ಲಿ ಸಂಜ್ಞೆಗಳು ಕಡಿಮೆ ಎಂಬದು ಔಪಚಾರಿಕವು. ೪. ಸಮಾಸಲಕ್ಷಣಗಳಲ್ಲಿ ದರ್ಪಣಕ್ಕೂ ಸಂ. ವ್ಯಾ. ಕ್ಕೂ ವಿರೋಧವೆಂಬ ಭೀತಿ ಬೇಡಾ, ೫. ಸಂ. ವ್ಯಾ. ದಲ್ಲಿ ಸಂಖ್ಯೆಗೆ ಅನೇಕಾಧಿಕರಣ್ಯ ಕೊಟ್ಟ ಕಾರಣ. ೬. ಮಧ್ಯಪದ ಲೋಪದ ಅಸ್ತಿತ್ವ. ೭. ಗಮಕದಲ್ಲಿ ದಿಗ್ವಾಚಕದ ಉಪಸಂಖ್ಯಾನವನ್ನು ಮಾಡಬೇಕು. ೮. ಗಮಕವು ಕನ್ನಡದ ಒಂದು ಲಕ್ಷ್ಮವು ಅಹುದು. ೯. ಕನ್ನಡ ವ್ಯಾ. ಗಳ ಪ್ರಾಮಾಣ್ಯ. ೧೦. ದರ್ಪಣದಲ್ಲಿ ದೋಷಗಳ ಆಭಾಸ.

ಉಪಪಾದನಂ.

ದರ್ಪಣದಲ್ಲಿ ಕರ್ಮಧಾರಯಗಮಕಗಳಿಗೆ ಪರಸ್ಪರ ಭೇದವುಂಟು. ನೋಡಿ–ದರ್ಪಣ ಸೂ. ೧೬೪ನೇದರಲ್ಲಿ "ಸಮಾಂತದೇಕಾಶ್ರಯುವಾಗಿರೆ ಕರ್ಮಧಾರಯಂ" ಎಂದು ನಿಯಮವನ್ನು ಹೇಳಿದ ಕೂಡೇ "ನೆಲಸಿರೆ ಮೊದಲೊಳ್ ಸಂಖ್ಯೆಯಡೆ ವಲಂ ದ್ವಿಗುವಕ್ಕುಂ" ಎಂದ ಅಪವಾದವು ಉಕ್ತವಾದದರಿಂದ, "ಪರನಿತ್ಯಾಂತರಂಗಾಪವಾದಾನಾ ಉತ್ತರೋತ್ತರಂ ಬಲೀಯಃ" ಎಂಬ ಪರಿಭಾಷೆಯಿಂದ ಅಥವಾ "ತಕ್ರ ಕೌಂಡಿನ್ಯ" ನ್ಯಾಯದಂತೆ ಸಂಖ್ಯಾವಾಚಕ ವಿ. ವು ಕರ್ಮಧಾರಯದಿಂದ ಹೆರಗಾಯ್ತು. ಇದರಿಂದ ದರ್ಪಣದ, ಅಂತೆಯೇ ತದನುಯಾಯಿಗಳ ಕರ್ಮಧಾರಯದಲ್ಲಿ ಸಂಖ್ಯಾವಾಚಕವಿಲ್ಲ ಯಾಕೆ ಎಂಬದಕ ಸಮಾಧಾನವಾಯ್ತು; ಮತ್ತು ಸಂಸ್ಕೃತೋತ್ತರಪದಕವಾದ ಕರ್ಮ ಧಾರಯವು 'ಗಮಕ'ವೆಂಬದು ದರ್ಪಣದ ಅಭಿಪ್ರಾಯವಲ್ಲ; ಇದ ಅಬದ್ಧ ಎಂಬದೂ ಸಿದ್ಧವಾಯಿತು. ಆದ್ದರಿಂದ 'ಜನಿಯಿಸುಗು ಸಂಖ್ಯಾ....ಪ್ರಪೂರ್ವಂ ಸಂಸ್ಕೃತೋತ್ತರಂ ಗಮಕಂ'. ನೋಡಿ — ದರ್ಪಣ ಸೂ. ೭೦ನೇದರ ವೃತ್ತಿಯಲ್ಲಿ 'ಆದ ವಿಷ್ಣು ಎಂಬ ಗಮಕಸಮಾಸಮುಂ' ಇ. ಜ್ಞಾಪಕವನ್ನು. 'ಕರ್ಮಧಾರಯಮುದುವುಂ' ಎಂಬದ ತಾತ್ಪರ್ಯವೇನಂದರೆ — ಗಮಕವು ಅರ್ಥಾನುಗುಣವಾಗಿ ಕರ್ಮಧಾರಯವು, ಅಲ್ಲದೆ ತತ್ಪುರುಷವು. ನೋಡಿ — ಸೂ. ೧೬೪ನೇದರವೃತ್ತಿ. ಆದ ವಿವಕ್ಷಾನುಗುಣವಾಗಿ ಅಲ್ಲ. ವಿವಕ್ಷೆಯಿಂದರೆ ಲಾಕ್ಷಣಿಕನ ಸಮಯ (ಸಂಕೇತ)ವು. ಗಮಕವನ್ನು ಕಟ್ಟಿಕೊಂಡು ದರ್ಪಣದಲ್ಲಿ ಕಾರ್ಯ ವಿಧಾನವುಂಟು. ನೋಡಿ — ಸೂ. ೧೬೯ನೇದು. ಇದು ಕರ್ಮಧಾರಯದಿಂದ ಸಿದ್ಧವಾಗುವದೆಂದರೆ, ದರ್ಪಣದ ವಿವಕ್ಷೆಯು ಹಾಗಿಲ್ಲ. ಇದ್ದೀತ ಎಂದರೂ ಗಮಕಗಳು ಕನ್ನಡ ಸಮಾಸಗಳೊ, ಅಪಭ್ರಷ್ಟ ಸ. ಗಳೊ ತತ್ಸಮ ಸ.ಗಳೊ? ಅವವೆಂದರೂ ಅವುಗಳ ಮುಂದೆ ಕನ್ನಡ ಪದಗ ನ್ನಿಟ್ಟರೆ ಪುನಃ ಸಮಾಸವಾಗಬೇಕು. ಆಗುತ್ತಿದ್ದರೆ, ಮೂಲೋಕಂ (೦ಗಳ)+ಕೊಲೆ, ಕಾವಲ್, ಪಗೆ, ತಲ್ಲಣಂ ಇವುಗಳಲ್ಲಿ ಒಂದು ಕೂಡಿ ಅಥವಾ ಮೂಲೋಕಂ (ಗಳ್) ಮನೆ ಆವಂಗೆ ಆತಂ, ಮೂಲೋಕ (ಗಳ್) ಪೊಡೆಯೊಳ್ ಆವನ ಆತಂ ಇವು ಸಮಾಸವಾಗುವದು ಹ್ಯಾಗ

ಮೂಲೋಕಗೊಳಿ, ಮೂ.... ಗಾವಲ್, ಮೂ .... ನನೆಯಂ, ಮೂ .... ಪೊಡೆಯಂ ಇಂಥ ಸ. ಗಳು ಅಯುಕ್ತ (ಅಸಾಧು). ನೋಡಿ—ದ. ಸೂ. ೨೯೭, ೨೯೮, ೨೯೯ ನೇಯವನ್ನು. ಈ ಸೂ. ಗಳಿಂದ ಹೇಳಿದ ನಿಯಮ [ನಿಯಮಶ್ಶಾತ್ರ (ವ್ಯಾ. ಶಾಸ್ತ್ರೀ) ಇತರ ನಿವೃತ್ತಿಫಲಕಃ ಪಂಚಪಂಚನಖಭಕ್ಷಣಾದಿವತ್ ಪರಿಸಂಖ್ಯಾರೂಪಃ] ಕ್ಕೆ ಗಮಕ (ಸಾಂಕರ್ಯಯೋಗದ ಸಮಾಸ) ಗಳು ಅಪವಾದ. ಇದೇ ಗಮಕ ಸಂಜ್ಞೆಯ ಅಮೋಘವಾದ ಪ್ರಯೋಜನ (ಕಾರ್ಯ)ವು. ಈ ತಾತ್ಪ ರ್ಯವನ್ನು ಶಾ. ಕಾರನಿಗೆ ಕಲ್ಪಿಸುವದಕ್ಕೆ ಗಮಕ ಸಂ. ಇಲ್ಲದೆ ಬಹು ಕ್ಲೇಶಕರವು. ಆದ್ದರಿಂದಲೇ 'ಲಘ್ವರ್ಥಂಹಿ ಸಂಜ್ಞಾಕರಣಂ'. ನೋಡಿ— ಮಹಾಭಾಷ್ಯ, ಶಾ. ಪ್ರಕಾಶಿಕೆ, ದ. ಸೂ. ೧ ನೇದು. ಇಲ್ಲಿ ಜಾತಿಸಾಂ ಕರ್ಯದೋಷದ ಸ್ವಾರಸ್ಯವು ಹೇಳಲ್ಪಟ್ಟಿತು; ಹಾಗೆಯೇ ಸಕ್ಕದ ಕನ್ನಡಗಳು ಬೆರಕೆಯಾದ ಕ್ರಿಯಾಸ. ಗಳು (ಸಾಂಕರ್ಯಾನುಗುಣ ವಾಗಿ) ಗಮಕಗಳು ಅಕ್ಕು. ನೋಡಿ—'ಗಮಕಸಮಾಸದಿಂ' ಇ. ಪದ್ಯ. ಇಲ್ಲಿ ಸಂಕರವೆಂದರೆ—' ಪರಸ್ಪರಾತ್ಯಂತಾಭಾವಸಮಾನಾಧಿಕರಣಯೋಃ ಧರ್ಮಯೋಃ ಏಕತ್ರಸಮಾವೇಶಃ' ಎಂದರ್ಥ. ಈ ಪ್ರಸಕ್ತಿಯಲ್ಲಿ ವ್ಯಕ್ತೇ ರ್ಭೇದ ಸ್ತುಲ್ಯತ್ವಂ ಇ. ಕಾರಿಕೆಯ, ನಿತ್ಯಮೇಕಮನೇಕಾನುಗತಂ ಈ ನ್ಯಾಯಪಙ್ಕ್ತಿಯ ಪ್ರಯೋಜನವಿಲ್ಲ. ಸಂಜ್ಞೆಗಳು ಶಾಸ್ತ್ರಕಾರನ ವಿವಕ್ಷೆ ಯಂತೆ ಅರ್ಥದ್ಯೋತಕಗಳಾಗುತ್ತವೆ. ಉದಾ: 'ಅಸದುತ್ತರಂ ಜಾತಿಃ' (ನ್ಯಾಯವಿಷಯ, ಕೇಶವಮಿಶ್ರ), 'ಜಾತಿಃ ಮಾತ್ರಾಕೃತಾಭವೇತ್' (ಛಂದೋವಿಷಯ). ಇದೇ ಸಂಕೇತವೆಂಬದು. ನಿತ್ಯಮೇಕಮನೇಕಾನು ಗತಂ, ಇದು ಜಾತಿಯ ಲಕ್ಷಣವೆಂದರೆ—ನಿತ್ಯಂ, ಏಕಂ, ಅನೇಕಾನುಗತಂ ಆದ ಆಕಾಶದಲ್ಲಿ ಅತಿವ್ಯಾಪ್ತಿಯಾಗುತ್ತದೆ. ಇರಲಿ. ಪ್ರಸ್ತುತ—ಶಾಸನದಲ್ಲಿ ಸಂಜ್ಞೆಗಳ ಕಾರ್ಪಣ್ಯವಿದೆ ಎಂಬದು ಔಪಚಾರಿಕವೇ. ಈ ಮಾತು ಶಾ. ದಲ್ಲಿ ಕಾಣುವ ಇದ್ವ್ಯವಹಾರ, ಅನುಬಂಧಗಳ ಗ್ರಹಣ, ದೇಶ್ಯಲಿಂಗ, ಅಂತಿಸಮಾಸ, ಸಮಾನಾಧಿಕರಣಸಮಾಸಾದಿ ಅಭಿನವ ಸಂಜ್ಞೋ ಚ್ಚಾರ, ನ್ಯಾಯ, ವ್ಯಾಕರಣ ಪರಿಭಾಷೆಗಳ ಉದ್ಧಾರ, ಅನುಕ್ತವಾದ ಸಂಜ್ಞೆಗಳನ್ನು ಸಂಸ್ಕೃತಾಕರಗಳಿಂದಲೂ, ವ್ಯವಹಾರದಿಂದಲೂ ತಕ್ಕೊ ಳ್ಳುವ ವ್ಯಾಖ್ಯಾನಕಾರರ ಶೈಲಿ (ಸಮವಧಾನಪೂರ್ವಿಕಾಪ್ರವೃತ್ತಿಃ)

ಇವುಗಳಿಂದ ಸಿದ್ಧವಾಗುತ್ತದೆ. ಸಂಜ್ಞೆಗಳಲ್ಲಿ ಕಾರ್ಪಣ್ಯ ಮಾಡಿದರೆ, ವ್ಯಾಖ್ಯಾನವು ಪಕ್ಷೋಚ್ಛೇದಮಾಡಿದ ಸುವರ್ಣದಂತಾಗುವದು. ಇದು ನೀಗಲಾಗದ ವ್ಯಾಕುಳವು. ನೋಡಿ— ದ. ಪೀಠಿಕಾಪದ್ಯ ೬ ನೇದು. ದರ್ಪಣದ ಕರ್ಮಧಾರಯ ದ್ವಿಗುಗಳ ಲಕ್ಷಣವು ಸಂಸ್ಕೃತಕ್ಕೆ ವಿರೋಧವೆಂಬ ಭೀತಿ ಬೇಡಾ. ದರ್ಪಣದ ಅವ್ಯಯೀಭಾವಕ್ಕೂ ಸಂಸ್ಕೃತದ ಅವ್ಯಯೀಭಾವಕ್ಕೂ ಜತೆಯಿಲ್ಲ. ಸಂಸ್ಕೃತದಲ್ಲಿ ಲಿಂಗಾನುಶಾಸನಕ್ಕಾಗಿ ಸಂಖ್ಯೆಗೂ, ಸಮಾಸಗಳಿಗೂ ಅನೇಕಾಧಿಕರಣ್ಯವು ಕಲ್ಪಿತವಾಗಿದೆ. ಕನ್ನಡದಲ್ಲಿ ಹಾಗೆ ಕ್ಲೇಶಪಡುವದು ಬೇಡಾ. ಗ್ರಂಥಕಾರರು ಸ್ವತಂತ್ರರು. ಪದಸಿದ್ಧಿಗೆ ಸಂಜ್ಞಾಭೇದದಿಂದ ಅಪಾಯವಿಲ್ಲ. ಶಿಕ್ಷಣೋಪಾಯಗಳು ಅನೇಕ ಅವೆ. ನೋಡಿ— ದರ್ಪಣದ ಆಖ್ಯಾತ ಪ್ರಕರಣದಲ್ಲಿ ಕೊನೆಗಿದ್ದ ಶ್ಲೋಕ, ಮತ್ತು ಸಮಾಪ್ತಿಕಾಂಗದಲ್ಲಿ ಪ್ರಥಮ ಪದ್ಯ. ಸಂಸ್ಕೃತ ಪದಸಿದ್ಧಿಯನ್ನು ಕನ್ನಡ ವ್ಯಾ. ಗಳಿಂದ ಮಾಡಲೆಳಸುವದು ದ್ರವಿಡಕುಲಪತಿಯಾದ ರಾವಣನು, ಕಪಿಸೇನಾಗ್ರಣಿಯಾದ ಮಾರುತಿ ಇಂಥ ಮಹಾವೈಯಾಕರಣರಿಗೂ ಅಗಮ್ಯವು. ನೋಡಿ— ಇತ್ತಲಾಗಿನ ಲಘುವ್ಯಾಕರಣದ ಪ್ರಸ್ತಾವನೆ, ಅಥವಾ ಕವಿಚರಿತ್ರೆಯ ಅವತರಣಿಕೆ. ಆದರಿಂದ ಅಭಿನವ ಬ್ರಹ್ಮನಾದ ಕೇಶಿರಾಜನು ಸಂಖ್ಯೆಗೆ ವ್ಯಭಿಚಾರವನ್ನು ಕಲ್ಪಿಸಿಲ್ಲ ಎಂದು ಸಂತೋಷಪಡಬೇಕು. ನಡೆದುದೆ ಮಾರ್ಗ ವೆಂಬ ಆ ಕವಿಕೇಶವನ ಸಮಯವೇ ಬೇರೆ. ಎಂದು, (ಸಾಂಕರ್ಯವಶದಿಂದ) ಮೂಲೋಕಂಗಳ್ ಕರ್ಮಧಾರಯವಲ್ಲ. ಮೂಲೋಕಂ ದ್ವಿ. ವಲ್ಲ. ಎರಡೂ ಗಮಕವು. ಮಧ್ಯ ಪದಲೋಪೋಕ್ತಿಯು ನುಡಿಗಟ್ಟಿನಲ್ಲಿ ಗೋಚರವಹವಲ್ಲ. ನೋಡಿ— ದ. ಸೂ. ೧೭೮ ನೇದರಲ್ಲಿ 'ಮಧ್ಯಪದಕ್ಕಂ ದೊರೆಕೊಳ್ವುದು ಅದರ್ಶನ ವಿಧಿ ಇ.' ದರ್ಪಣವೆಂತೂ ಪ್ರಮಾಣಗ್ರಂಥವು. ದ. ಗಮಕದಿಂದ ತೆಂಕದಿಕ್ಕಿನೊಳ್, ಮೂಡಗಿರಿಯ ತಿಮ್ಮಪ್ಪಶೆಟ್ಟಿ, (ವೆಂಕಟರಮಣ ದೇವರು.) ಪಡುಕೋಣಂ, ಬಡಗರೀತಿ, ಪೊರವಳಯಂ ಇತ್ಯಾದಿ ಪದಗಳಿಗೆ ಸಾಧುತ್ವವನ್ನು ಕಲ್ಪಿಸಲಿಕ್ಕೆ ಅದರಲ್ಲಿ ದಿಗ್ವಾಚಕದ ಉಪಸಂಖ್ಯಾನವನ್ನು ಮಾಡಬೇಕು. ನೋಡಿ— ದ. ಪೀಠಿಕಾಪದ್ಯ ೪ ನೇದು. ಗಮಕವು ಕನ್ನಡದ ಒಂದು ಲಕ್ಷಣವು ಅಹುದು. ನೋಡಿ— ಕವಿಚರಿತ್ರೆಯಲ್ಲಿ ಕೇಶಿರಾಜನವರ್ಣನೆ. ಅಲ್ಲಿ

ಸ್ವರೂಪ ಪದ ಪ್ರಯೋಗವಿದೆ. ಲಕ್ಷ್ಯತಾವಚ್ಛೇದಕಾದಿ ಪಙ್ತಿಯು ಇಲ್ಲಿ ಬೇಡಾ. ನೈಯಾಯಿಕರ ಮತದಂತೆಯೇ ಯಾವದೊಂದು ಪದಾರ್ಥದ ನಿರ್ವಚನವನ್ನು ನಿರ್ದೋಷವಾಗಿ ಮಾಡಲಿಕ್ಕೆ ಬರುವದಿಲ್ಲ. ಇದನ್ನು ಮೇಲೆ ತೋರಿಸಿದೆ. ಸಾಲದಿದ್ದರೆ ನೋಡಿ—ಶ್ರೀಹರ್ಷನ ಅನಿರ್ವಚನೀಯತಾವಾದ. ಕನ್ನಡ ವ್ಯಾ. ಗಳ ಪ್ರಾಮಾಣ್ಯವೆಂಬ ಅಂಶವು ಸ್ವತಂತ್ರೋಪನ್ಯಾಸಕ್ಕೆ ಅರ್ಹವಾದ ವಿಷಯವು. ವಿಸ್ತರಭಿಯಾ ಇಲ್ಲಿ ಪ್ರಪಂಚಿಸಲಿಲ್ಲ. ಅದರಿಂದ ಸದ್ಯಕ್ಕೆ ದರ್ಪಣ ಶಾ. ಗಳೆರಡಕ್ಕೂ ಸಮಾನ ಪ್ರಾಮಾಣ್ಯವಿದೆ ಎಂದು ತಿಳಿದರೆ ಸಾಕು. ನೋಡಿ— ನಾಗವರ್ಮನ ಕಾದಂಬರಿ, ನೀತಿಮಂಜರಿ, ಕರ್ಣಾಟಕ ಕಾವ್ಯಮಾಲೆ ಇವುಗಳ ಟಪ್ಪಣೆ, ಮತ್ತು ಸೂಕ್ತಿತಾರಾವಳಿಯ ವ್ಯಾಖ್ಯಾನ. ದರ್ಪಣದಲ್ಲಿ ದೋಷಾಭಾಸದ ಸ್ಥಳಗಳು:—ನೋಡಿ—ಸೂ. ೨೧೧ ನೇದರಲ್ಲಿ ತನಕ್ಕೆ ಉದಾ: ಕಲಿತನಂ, ಸೂ. ೧೬೫ನೇದರಲ್ಲಿ ಬಹುವ್ರೀಹಿಗೆ ಉದಾ: ಚಲವಾದಿ. ಸೂ. ೧೭೭ ನೇದರಲ್ಲಿ ತತ್ಪುರುಷದ ಉಚಿತಾಕ್ಷರಾಗಮಕ್ಕೆ ಉದಾ: ದಾಂಗುಡಿ, ಕಂಮುಂಗಣ್ಣೆ, ಸೂ. ೧೭೭ ನೇದರಲ್ಲಿ ಕ್ರಿ. ಸ.ಕ್ಕೆ ಉದಾ: ಪೋತಂದಂ, ಎಯ್ತಂದಂ ಇವುಗಳನ್ನು. ಆಪಾತತಃ ಈ ಸ್ಥಳಗಳು ಸಂದೇಹಕ್ಕಾಸ್ಪದವಾದರೂ ಇವಕ್ಕೆ ಸಮಾಧಾನವನ್ನು ಕಲ್ಪಿಸಲಾಗದಷ್ಟು ದರ್ಪಣವಾರಣದ ನಡುವು ಬಡವಲ್ಲ. ಆದರಿಂದ, ಮೂರು ತಲಾಂತರದ ಪಾಂಡಿತ್ಯದಿಂದೊಡಗೂಡಿ. ಅಭಿರೂಪರಿಂದ ಪರಿಗೃಹೀತವಾಗುವಂತೆ, ಅಪ್ಪಸಂಧ್ಯಾತ್ಮಕವಾಗಿ, ಕನ್ನಡದ ಅಷ್ಟಾಧ್ಯಾಯಿಯನ್ನು ಮಾಡಿದ, ಅಭಿಜಾತನಾದ ಕೇಶಿರಾಜನಿಗೆ ಅಲ್ಪಜ್ಞರೂ ಜಡಮತಿಗಳೂ ಆದ ನಾವು ಕೊರಚಾಡುವದು ಯುಕ್ತವಲ್ಲ. ಇಂತು ಪೂರ್ವಾಂಗದಲ್ಲಿ ಹೇಳಿದ ಅಂಶಗಳು ಯಥಾಮತಿ ಉಪಪಾದಿಸಲ್ಪಟ್ಟವು.

—. ಚರಮ ಪ್ರಾರ್ಥನೆ . —

ಅಲ್ಪಾಯಾಸೇನ ಭಾಷಾಯಾಃ ಶಿಕ್ಷಣಾಯ ಕೃತೋದ್ಯಮೇ॥
ಕೇಶಿರಾಜೇಽತ ತಚ್ಛಾಸ್ತ್ರೇ ಭಕ್ತಿರ್ಭವತು ಧೀಮತಾಂ ॥

ಯಾಕಂದರೆ,

ಖಲಾಃ ಖೇಲಂತ್ಯಸತ್ತರ್ಕೈಃ ಪ್ರಕೃತ್ಯಾ ನಿರ್ಮಲೇಷ್ವಪಿ ॥
ಸರಲಾಸ್ತ್ವನುಕೂಲಾಶ್ಚ ವಿರಲಾಸ್ತೇಹಿ ಸಾಂಪ್ರತಂ ॥

ಈಗ ಕುಶಾಗ್ರ ಬುದ್ಧಿಯ ವೈಯಾಕರಣರು ದರ್ಪಣದ ನಿಃಶಂಕ ಶತ್ವವನ್ನು ಒಪ್ಪಿಕೊಂಡು ತದುಪದೇಷ್ಟಾರನಾದ ಆ ಮುನಿಪ್ರವರನ ಗಮಕಪಾರಾವಾರದಲ್ಲಿ ಯಥೇಚ್ಛವಿಹಾರ ಮಾಡಲಿ, ಎಂದು ಕೈಗೊಟ್ಟು ವಿಶ್ರಮಿಸಿಕೊಳ್ಳುವದಕ್ಕೆ ವಾಚಕರ ಅಪ್ಪಣೆಯನ್ನು ಕೇಳುವ

ಮೂಡಗೆರೆ
ಶಕೆ ೧೮೩೫ ಮಾಘ ವ. ೧೧ ಬುಧವಾರ

ಲಾಕ್ಷಣಿಕಸಮುಯಾನುಗ
ವೆಂಕಟೇಶ ರಾ. ಪ್ರಭು.

ಸೂಚನೆ: — ಈ ವಿಷಯದ ಚರ್ಚೆ ಇವರಿಗೆ ಸಾಕಷ್ಟು ಆಗಿರುವದರಿಂದ ಈ ವಿಷಯಕ್ಕೆ ಇನ್ನು ಹೆಚ್ಚು ಸ್ಥಳ ಸಿಕ್ಕಲಾರದು.

ಎ. ಶಾ. ಪ.

ಚಿಕ್ಕ ಮಕ್ಕಳ ಶಿಕ್ಷಣ.

(ಮಿ. ಶ. ನಾ. ಅವಿನಾಶಭಾವಿಯವರು ಬರೆದದ್ದು)

ಮಕ್ಕಳು ಶೈಶವಾವಸ್ಥೆಯಲ್ಲಿರುವಾಗ ಅವರ ಮಾನಸಿಕ ಶಕ್ತಿಗಳು ಅಂಕುರರೂಪದಿಂದ ಇರುತ್ತವೆ. ಆ ಅಂಕುರಗಳು ಇದ್ದಲ್ಲಿಯೇ ಕಮರಿ ಅಥವಾ ಕೊಳೆತು ಹೋಗದಂತೆ ಅವುಗಳನ್ನು ಜಾಗ್ರತೆಯಿಂದ ಕ್ರಮ ಕ್ರಮವಾಗಿ ಅಭಿವೃದ್ಧಿಗೊಳಿಸತಕ್ಕದ್ದು. ಮಕ್ಕಳ ಮೂರು ವರ್ಷದ ಆಯುಸ್ಯವು ಶೈಶವಾವಸ್ಥೆಯಲ್ಲಿ ಕ್ರಮಿಸುವದು. ಈ ಅವಧಿಯಲ್ಲಿ ಅವರ ಬಹುತರ ಎಲ್ಲ ಜ್ಞಾನವು ಇಂದ್ರಿಯಜನ್ಯವಾಗಿರುತ್ತದೆ. ಸಾಧಾರಣವಾಗಿ ತಮ್ಮ ಮನೋಭಾವಗಳನ್ನು ತೊದಲು ಮಾತುಗಳಿಂದಲೂ, ಬೇರೆ ಸಂಜ್ಞೆಗಳಿಂದಲೂ ವ್ಯಕ್ತಮಾಡುತ್ತಿರುವರು. ಸುಖ, ದುಃಖ, ಅಂಜಿಕೆ, ಹಸಿವೆ, ಮೊದಲಾದವುಗಳು ಅವರಿಗೆ ಅಲ್ಪಸ್ವಲ್ಪ ತಿಳಿಯ ಹತ್ತಿರುತ್ತವೆ. ಮತ್ತು ಕೆಲವು ಅಹೇತುಕ ವ್ಯಾಪಾರಗಳನ್ನೂ ಮಾಡುತ್ತಿರುವರು. ಆದರಿಂದ ಅವುಗಳ ಪರಿಣಾಮವು ಆ ಹುಡುಗರ ಮನಸಿನ ಮೇಲೆ ಸ್ಥಿರವಾಗಿ ಉಳಿಯುವದಿಲ್ಲ. ಆದಾಗ್ಯೂ ಮಾನಸಿಕ ಶಕ್ತಿಗಳ ಬೆಳವಣಿಗೆಯ ಕಾರ್ಯದಲ್ಲಿ ಇವು ಬಹಳ ಉಪಯೋಗಿಸುತ್ತವೆ. ಒಂದೇ ಆಕಾರದ ಒಂದೇ ಬಣ್ಣದ ಒಂದೇ ರುಚಿಯ ಪದಾರ್ಥಗಳು ಹಲವು ಸಾರೆ ಚಿಕ್ಕಮಕ್ಕಳ ಕಣ್ಣಮುಂದೆ ಹಾಯ್ದುಹೋಗಲು, ಕಾಲಾಂತರದಿಂದ ಅವರು ಆ ಪದಾರ್ಥಗಳ ತುಲನೆಯನ್ನು ಮಾಡ ಹತ್ತುವರು. ತುಲನೆಯಿಂದ ಗೊತ್ತಾದ ಪದಾರ್ಥಗಳ ಗುಣಗಳನ್ನು ಸ್ಮರಣದಲ್ಲಿಡುವರು. ಮುಂದೆ ಪದಾರ್ಥಗಳು ಇಲ್ಲದಾಗ ಸಹ ನೆನಪಿನಲ್ಲಿಟ್ಟ ಗುಣಗಳನ್ನು ಕಲ್ಪಿಸುವರು. ಹಾಗು ಅವುಗಳ ಸಂಬಂಧದಿಂದ ವಿಚಾರ ಮಾಡುವರು. ಸಾರಾಂಶವೇನಂದರೆ, ಮೊದಲು ಅವಲೋಕನ, ಅವಲೋಕನದಿಂದ ತುಲನೆ, ತುಲನೆಯಿಂದ ಸ್ಮರಣ, ತರುವಾಯ ಕಲ್ಪನೆ, ಆ ಬಳಿಕ ಅದರಿಂದ ವಿಚಾರ ಈ ಪ್ರಕಾರ ಮಾನಸಿಕ ಶಕ್ತಿಗಳು ಪರಂಪರೆಯಿಂದ ವಿಕಾಸಹೊಂದುವವು. ಚಿಕ್ಕ ಮಕ್ಕಳ ಸಂಬಂಧವಾದ ಈ ಬಗೆಯ ಮನೋಧರ್ಮದ ಜ್ಞಾನವು ಶಿಕ್ಷಕರಿಗೂ ಪಾಲಕರಿಗೂ ಅವಶ್ಯವಾಗಿ ಇರತಕ್ಕದ್ದು.

ಕಿಂಡರಗಾರ್ಟನ್ ಪದ್ಧತಿಯ ಶಿಕ್ಷಣ:—ಮನುಷ್ಯನು ಪೂರ್ಣತೆಯನ್ನು ಹೊಂದಬೇಕಾದರೆ ಅವಶ್ಯವಾದ ಯಾವತ್ತು ಗುಣಗಳು ಬಾಲಕನಲ್ಲಿ ಅಂಕುರ ರೂಪದಿಂದ ಇರುತ್ತವೆ. ಆದರೆ ಇವುಗಳ ಪೋಷಣವೂ ವರ್ಧನವೂ ಆಗದಿದ್ದರೆ ಅವು ನಷ್ಟವಾಗುವವು. ಮಾನಸಿಕ ಶಕ್ತಿಗಳ ಬೆಳವಣಿಗೆಯ ತತ್ವವನ್ನು ಲಕ್ಷದಲ್ಲಿಟ್ಟು ಚಿಕ್ಕಮಕ್ಕಳ ಶಿಕ್ಷಣದಲ್ಲಿ ಆ ಅಂಕುರರೂಪವಾದ ಗುಣಗಳ ಪೋಷಣ-ವರ್ಧನಗಳನ್ನು ಅಲ್ಪಶ್ರಮದಿಂದ ಮಾಡುವ ಉಪಾಯಗಳ ಯೋಜನೆಯನ್ನು ಮಾಡತಕ್ಕದ್ದು. ಜರ್ಮನೀದೇಶದ ಫ್ರೋಬೆಲ್ಲನೆಂಬ ತತ್ವಜ್ಞಾನಿಯು ಬಹುದಿವಸ ಶ್ರಮಬಟ್ಟು ಚಿಕ್ಕಮಕ್ಕಳ ಶಾರೀರಿಕ ಮಾನಸಿಕ ನೈತಿಕ ಉನ್ನತಿಯನ್ನು ಸುಲಭವಾಗಿ ಮಾಡುವ ಉಪಾಯಗಳನ್ನು ಗೊತ್ತು ಹಚ್ಚಿದನು. ಚಿಕ್ಕಮಕ್ಕಳ ಸ್ವಭಾವವನ್ನೂ ಅವರ ಮಾನಸಿಕ ಶಕ್ತಿಗಳ ಬೆಳವಣಿಗೆಯನ್ನೂ ಒಳ್ಳೇ ಮಾರ್ಮಿಕತನದಿಂದ ಶೋಧಿಸಿದ ಶಿಕ್ಷಕಾಗ್ರೇಸರನು ಇವನೊಬ್ಬನೇ. ಇವನು ಗೊತ್ತುಹಚ್ಚಿದ ಕಲಿಸುವ ಪದ್ಧತಿಗೆ ಕಿಂಡರಗಾರ್ಟನ್ ಪದ್ಧತಿ ಎಂಬ ಹೆಸರು. ಇದೇ ಹೆಸರನ್ನು ಭಾಷಾಂತರಿಸಿ ನಾವು ಬಾಲೋದ್ಯಾನವೆಂದು ಅನ್ನುತ್ತೇವೆ. ಉದ್ಯಾನವೆಂದರೆ ಸಮೀಪದ ತೋಟವು; ತೋಟಗನು ಮುಂದೆ ಬೆಳೆದು ದೊಡ್ಡಗಿಡವಾಗತಕ್ಕ ಸಸಿಗಳನ್ನು ತನ್ನ ಉದ್ಯಾನದ ಮಡಿಗಳಲ್ಲಿ ಹಚ್ಚಿ ಜಾಗ್ರತೆಯಿಂದ ಬೆಳಿಸಿ ಅವು ಸ್ವಲ್ಪ ದೊಡ್ಡವಾದ ಬಳಿಕ ಬೇಕಾದಲ್ಲಿ ಒಯ್ದು ಹಚ್ಚುವನು. ಅದೇ ಪ್ರಕಾರ ಈ ಬಾಲೋದ್ಯಾನ ಶಿಕ್ಷಣಪದ್ಧತಿಯಿಂದ ಚಿಕ್ಕಮಕ್ಕಳನ್ನು ಶಾಲಾಶಿಕ್ಷಣಕ್ಕೆ ತಕ್ಕವರನ್ನು ಮಾಡತಕ್ಕದ್ದು. ಈ ಶಿಕ್ಷಣದ ಸಾಮಾನ್ಯ ಸ್ವರೂಪವನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸುವೆನು.

ಶಿಕ್ಷಣದಿಂದ ಮನುಷ್ಯನ ಆತ್ಮ, ಮನಸ್ಸು, ಶರೀರ ಇವುಗಳ ವ್ಯವಸ್ಥಿತವಾದ ಉನ್ನತಿಯನ್ನು ಮಾಡತಕ್ಕದ್ದಿರುತ್ತದೆ. ಶರೀರದ ಯಾವ ಅವಯವಗಳಿಗೆ ಹೆಚ್ಚು ಕೆಲಸ ಬೀಳುವದೋ ಆ ಅವಯವಗಳು ಹೆಚ್ಚು ಬಲ ಹೊಂದುವವು. ಇದು ಅನುಭವಸಿದ್ಧವಾದ ಸಂಗತಿಯು. ಇದೇ ಮಾತನ್ನು ಉಪಯೋಗಿಸಿ, ಆತ್ಮ, ಮನಸ್ಸು, ಶರೀರ ಈ ಮೂರಕ್ಕೂ ತಕ್ಕಷ್ಟು ಕೆಲಸಗಳು ಬೀಳುವಂತೆ ಶಿಕ್ಷಣದ ಯೋಜನೆಯನ್ನು ಮಾಡತಕ್ಕದ್ದು. ಈ ಯೋಜನೆಯು, ಬಾಲಕರ ವಯಸ್ಸು

ಆ ವಯಸ್ಸಿಗನುಸರಿಸಿದ ಅವರ ಸ್ವಾಭಾವಿಕ ಒಲವುಗಳು ಈ ಎರಡು ಸಂಗತಿಗಳಿಗೆ ಅನುಗುಣವಾದದ್ದಿರಬೇಕು. ಇದು ಎಷ್ಟರಮಟ್ಟಿಗೆ ಸಾಧ್ಯವಾಗುವದೋ ಅಷ್ಟು ಶಿಕ್ಷಣವು ಹೆಚ್ಚೆಚ್ಚು ಪ್ರಯೋಜನಕರವಾಗುವದು. ಫ್ರೋಬೆಲ್ಲನು ಇವೇ ತತ್ವಗಳನ್ನು ಅನುಲಕ್ಷಿಸಿ ಕಿಂಡರಗಾರ್ಟನ್ ಪದ್ಧತಿಯನ್ನು ರಚಿಸಿರುತ್ತಾನೆ. ಈ ಶಿಕ್ಷಣದಲ್ಲಿ ಅವನು ಉಣ್ಣೆಯ ಚೆಂಡುಗಳು, ಕಟ್ಟಿಗೆಯ ತುಂಡುಗಳು, ಕಡ್ಡಿಗಳು, ಬಳೆಗಳು, ಉಂಗರಗಳು ಮಣಿಗಳು, ಕಾಗದ, ಮಣ್ಣು ಇವೇ ಮೊದಲಾದ ಹುಡುಗರ ಆಟದ ಒಡವೆಗಳನ್ನು ತೆಗೆದುಕೊಂಡಿರುತ್ತಾನೆ. ಒಂದೊಂದು ಪ್ರಕಾರದ ಒಡವೆಗಳಿಗೆ ಅವನು 'ಗಿಫ್ಟ' ಎಂಬ ಸಂಜ್ಞೆಯನ್ನು ಕೊಟ್ಟಿರುತ್ತಾನೆ. ಒಟ್ಟಿಗೆ ೨೦ ಗಿಫ್ಟುಗಳಿರುತ್ತವೆ. ಒಂದೊಂದು ಗಿಫ್ಟಿನಿಂದ ಹುಡುಗರು ಅನೇಕ ಕೆಲಸಗಳನ್ನು ಮಾಡಬೇಕಾಗುತ್ತದೆ. ಆ ಕೆಲಸಗಳಿಗೆ ಆಟಗಳೆಂದು ಹೆಸರಿಟ್ಟಿದ್ದಾನೆ. ಈ ಆಟಗಳಿಂದ ಹುಡುಗರಿಗೆ ನಾನಾಪ್ರಕಾರದ ಜ್ಞಾನವಾಗುವಂತೆ ಇವುಗಳ ರಚನೆ ಇರುತ್ತದೆ.

ನಮ್ಮ ದೇಶದಲ್ಲಿ ಈ ಶಿಕ್ಷಣವು ಹೊಸದಾಗಿ ಪ್ರಚಾರದಲ್ಲಿ ಬಂದಾಗ ಎಷ್ಟೋ ಶಿಕ್ಷಕರು ಹುಡುಗರ ಅಭ್ಯಾಸಕ್ರಮದೊಳಗಿನ ಇತರ ವಿಷಯಗಳಂತೆ, ಕಿಂಡರಗಾರ್ಟನ್‌ವೂ ಒಂದು ವಿಷಯವೆಂದು ತಿಳಕೊಂಡರು. ಮತ್ತು ಪ್ರತಿ ಒಂದು ಗಿಫ್ಟಿನ ವಿಷಯವಾಗಿಯೂ, ಆಟದ ವಿಷಯವಾಗಿಯೂ, ಫ್ರೋಬೆಲ್ಲನು ಹೇಳಿದ ಸಂಗತಿಗಳನ್ನು ಹುಡುಗರಿಂದ ಪಾಠ ಮಾಡಿಸತೊಡಗಿದರು. ಇದರಿಂದ ನಮ್ಮ ಹುಡುಗರಿಗೆ ಪ್ರಯೋಜನವಾಗುವದರ ಬದಲು, ವಿಶೇಷ ತೊಂದರೆಯಾಯಿತು. ನಿಜವಾಗಿ ಕಿಂಡರಗಾರ್ಟನ್ ಎಂಬದು ಸ್ವತಂತ್ರ ವಿಷಯವಲ್ಲ. ಪ್ರಾಥಮಿಕ ಹುಡುಗರಿಗೆ ಲೇಖನ, ವಾಚನ, ಗಣಿತ, ಇತಿಹಾಸ, ಭೂಗೋಲ ಮೊದಲಾದ ವಿಷಯಗಳನ್ನು ಸುಲಭವಾಗಿ ಕಲಿಸುವದಕ್ಕಾಗಿ ನಾವು ಬೇರೆ ಬೇರೆ ಉಪಕರಣಗಳನ್ನು ತೆಗೆದುಕೊಳ್ಳುವಂತೆಯೇ ಚಿಕ್ಕಮಕ್ಕಳಿಗೆ ಮೂಲಾಕ್ಷರ, ಅಂಕಿ, ಮಗ್ಗಿ, ಬಳಿಕೆಯೊಳಗಿನ ವಸ್ತುಗಳ ಆಕಾರ, ಬಣ್ಣ ಗುಣ ಮೊದಲಾದವುಗಳನ್ನು ಮನೋರಂಜನವಾಗುವಂತೆ ಕಲಿಸುವದಕ್ಕೆ ಈ ಕಿಂಡರಗಾರ್ಟನ್ನ ಪದ್ಧತಿಯ ಗಿಫ್ಟಗಳನ್ನೂ, ಆಟಗಳನ್ನೂ ಉಪಕರಣಗಳಂತೆ ಉಪಯೋಗಿಸಿಕೊಳ್ಳಬೇಕು. ಚಿಕ್ಕಮಕ್ಕಳಲ್ಲಿ

ಸತತೋದ್ಯೋಗ, ಇಂದ್ರಿಯಗಳ ಅಳವಿನಲ್ಲಿ ಬಂದ ಪದಾರ್ಥಗಳ ಜ್ಞಾನ ಮಾಡಿಕೊಳ್ಳೋಣ ಈ ಸ್ವಾಭಾವಿಕ ಪ್ರವೃತ್ತಿಗಳು ಕಂಡುಬರುತ್ತವೆ ಇವೇ ಪ್ರವೃತ್ತಿಗಳನ್ನು ನಾನಾಪ್ರಕಾರದ ಆಟದ ಸ್ವರೂಪವುಳ್ಳ ಕೆಲಸಗಳಲ್ಲಿ ಉಪಯೋಗಿಸಿ ಅವರ ಶಾರೀರಿಕ ಮಾನಸಿಕ ನೈತಿಕ ಉನ್ನತಿಯನ್ನು ಸುವ್ಯವಸ್ಥೆಯಿಂದಲೂ ಒಂದಕ್ಕೊಂದು ಸಂಬಂಧಿಸಿಯೂ ಮಾಡುವದೇ ಕಿಂಡರಗಾರ್ಟನ್ ಶಿಕ್ಷಣದ ಮುಖ್ಯ ಧೋರಣವು.

ಇಂಗ್ಲಂಡ ಜರ್ಮನೀ ಮೊದಲಾದ ಸುಧಾರಿಸಿದ ರಾಷ್ಟ್ರಗಳಲ್ಲಿ ಈ ಕಿಂಡರಗಾರ್ಟನ್ ಪದ್ಧತಿಯಿಂದ ಶಿಕ್ಷಣವನ್ನು ಕೊಡುವ ಸ್ವತಂತ್ರ ಶಾಲೆಗಳು ಇರುತ್ತವೆ. ಆ ಶಾಲೆಗಳಲ್ಲಿ ೨ ವರ್ಷ ಪೂರ್ಣ ತುಂಬಿದ ಹುಡುಗರನ್ನು ತೆಗೆದುಕೊಂಡು ಅವರಿಗೆ ನಾಲ್ಕು ವರ್ಷ ಶಿಕ್ಷಣ ಕೊಡುವರು. ಇಷ್ಟು ಅವಧಿಯಲ್ಲಿ ಮೊದಲಿನ ಎರಡು ವರ್ಷ ಅವರಿಗೆ ನಿತ್ಯದ ಬಳಿಕೆಯೊಳಗಿನ ಪದಾರ್ಥಗಳ, ಹಾಗೂ ಬಣ್ಣ ಆಕಾರ ಮೊದಲಾದ ಸುಲಭ ಸಂಗತಿಗಳ ಜ್ಞಾನ ಮಾಡಿಕೊಡುವರು. ತರುವಾಯ ಮುಂದಿನ ಎರಡುವರ್ಷಗಳಲ್ಲಿ ಅವರನ್ನು ಪ್ರಾಥಮಿಕ ಶಾಲೆಗಳಿಗೆ ತಕ್ಕವರನ್ನು ಮಾಡುವರು. ಅಂದರೆ ನಮ್ಮ ದೇಶದ ಶಾಲೆಗಳಲ್ಲಿ ಬಾಲಕರ ವರ್ಗ, ೧ನೇ ಇಯತ್ತೆಗಳಿಗೆ ಕಲಿಸುವ ವಿಷಯಗಳನ್ನು ಕಿಂಡರಗಾರ್ಟನ್ ಪದ್ಧತಿಯಿಂದ ಕಲಿಸುವರು. ನಮ್ಮ ದೇಶದಲ್ಲಿ ಹುಡುಗರು ನಾಲ್ಕುವರ್ಷ ತುಂಬಿದ ಬಳಿಕ ಶಾಲೆಗೆ ಹೋಗಲಿಕ್ಕೆ ಪ್ರಾರಂಭಿಸುವರು. ಅಷ್ಟು ವಯಸ್ಸಿನಲ್ಲಿ ಅವರಿಗೆ ಎಷ್ಟೋ ಸಂಗತಿಗಳ ಜ್ಞಾನವಾಗಿರುತ್ತದೆ. ಹುಡುಗರಿಗೆ ಗೊತ್ತಿದ್ದ ಸಂಗತಿಗಳನ್ನೇ ಗೊತ್ತಿಲ್ಲೆಂದು ತಿಳಿದು ಕಲಿಸಹತ್ತಿದರೆ ಅದರಿಂದ ಶಿಕ್ಷಕನ ಅಯೋಗ್ಯತನವು ಮಾತ್ರ ವ್ಯಕ್ತವಾಗುವದಲ್ಲದೆ, ವಿದ್ಯಾರ್ಥಿಗಳಿಗೆ ಪ್ರಯೋಜನವೇನೂ ಆಗುವದಿಲ್ಲ. ನಾಲ್ಕೆಂಟು ವರ್ಷಗಳ ಅನುಭವದಿಂದ ಈ ಶಿಕ್ಷಣಪದ್ಧತಿಯು ನಮ್ಮ ದೇಶಕ್ಕೆ ಪೂರ್ಣವಾಗಿ ಅನುಕೂಲವಾದದ್ದಲ್ಲವೆಂದು ಕಂಡುಬಂದಿರುತ್ತದೆ. ಇದರಿಂದ ಹಿತವಾಗಬೇಕಾದರೆ ಇದಕ್ಕಾಗಿ ಸ್ವತಂತ್ರ ಶಾಲೆಗಳೇ ಸ್ಥಾಪಿಸಲ್ಪಡಬೇಕು.

ಸದ್ಯಕ್ಕೆ ನಮ್ಮ ದೇಶದಲ್ಲಿ ಕಿಂಡರಗಾರ್ಟನ್ ಶಾಲೆಗಳೂ ಇಲ್ಲ; ೪ ವರ್ಷಕ್ಕಿಂತ ಚಿಕ್ಕ ಬಾಲಕರಿಗೆ ಈಗಿನ ಶಾಲಾ ಶಿಕ್ಷಣದ ನಿರ್ಬಂ

ಧವೂ ಹಿತಕರವಲ್ಲ. ಮನೆಯಲ್ಲಿ ಅವರ ಶಿಕ್ಷಣದ ಜವಾಬದಾರಿಯನ್ನು ಹೊತ್ತು ಅವರ ಸಮಾಧಾನವೃತ್ತಿಯನ್ನು ಕಾಯ್ದು ಸನ್ಮಾರ್ಗಕ್ಕೆ ಹಚ್ಚುವ ಅನುಕೂಲತೆಯೂ ತಿಳುವಳಿಕೆಯೂ ಹುಡುಗರ ತಾಯಿತಂದೆಗಳಿಗೆ ಇರುವದಿಲ್ಲ. ಈ ಕಾರಣಗಳ ಮೂಲಕವಾಗಿ ಹುಡುಗರು ಶಾಲೆಗೆ ಹೋಗುವ ಪೂರ್ವದಲ್ಲಿ ಸ್ವಚ್ಛಂದವೃತ್ತಿ, ಮೊಂಡತನ, ಮುಕ್ಕತನ, ನಾಚಿಕೆ, ಸಾಲೆಯ ವಿಷಯವಾಗಿ ಅಪ್ರೀತಿ, ಶಿಕ್ಷಕನ ವಿಷಯವಾಗಿ ಹೆದರಿಕೆ ಮುಂತಾದ ಗುಣಗಳು ಅವರಲ್ಲಿ ಹುಟ್ಟುವವು. ಈ ಗುಣಗಳನ್ನು ತಿದ್ದಿ ಅವರನ್ನು ತಮಗೆ ಅನುಕೂಲರನ್ನಾಗಿ ಮಾಡಿಕೊಳ್ಳುವದರೊಳಗೆ ಶಿಕ್ಷಕರಿಗೆ ಸಾಕುಸಾಕಾಗುತ್ತದೆ. ನಮ್ಮ ದೇಶದಲ್ಲಿ ಕಿಂಡರಗಾರ್ಟನ ಶಾಲೆಗಳು ಸ್ಥಾಪನವಾಗುವವರೆಗೆ ತಾಯಿತಂದೆಗಳು ಹುಡುಗರನ್ನು ಶಾಲೆಗೆ ಕಳಿಸುವ ಪೂರ್ವದಲ್ಲಿ ಅವರಿಗೆ ಮೇಲೆ ಹೇಳಿದ ದುರ್ಗುಣಗಳು ಹತ್ತದಂತೆ ಎಚ್ಚರ ಪಡಬೇಕು. ಅವರ ಕೂಡ ಮನಸುಬಿಚ್ಚಿ ಮಾತಾಡುತ್ತಿದ್ದರೂ, ತಮ್ಮ ಗಾಂಭೀರ್ಯವನ್ನು ಕಾಯ್ದುಕೊಂಡು ನಡೆಯುತ್ತಿರಬೇಕು. ಅವರು ಕೇಳಿದ ಪ್ರಶ್ನಗಳಿಗೆ ಸಮಂಜಸವಾದ ಉತ್ತರಗಳನ್ನು ಕೊಟ್ಟು ಅವರ ಕುತೂಹಲವನ್ನು ಜಾಗ್ರತ ಪಡಿಸುತ್ತಿದ್ದರೂ ತಮಗೆ ಸಂಬಂಧವಿಲ್ಲದ ವಿಷಯಗಳಲ್ಲಿ ವಿಶೇಷ ಪೃಚ್ಛಾಪೃಚ್ಛೆ ಮಾಡಗೊಡಬಾರದು. ಮೇಲಿಂದ ಮೇಲೆ ತಮ್ಮ ಸಂಗಡ ಸಾಲೆಗೆ ಕರಕೊಂಡು ಹೋಗಿ, ಸಾಲೆಯಲ್ಲಿ ನಡೆಯುವ ಕೆಲಸವನ್ನು ತೋರಿಸಿ ಸಾಲೆಯ ವಿಷಯವಾಗಿಯೂ ಶಿಕ್ಷಕರ ವಿಷಯವಾಗಿಯೂ, ಅವರ ಮನಸಿನಲ್ಲಿ ಪೂಜ್ಯ ಬುದ್ಧಿಯನ್ನು ಹುಟ್ಟಿಸಬೇಕು. ಒಟ್ಟಿಗೆ ಹುಡುಗರನ್ನು ಸಾಲೆಗೆ ಹಾಕಿದ ಬಳಿಕ ಶಿಕ್ಷಕರಿಗೆ ತೊಂದರೆಯಾಗದೆ ಶಿಕ್ಷಣದ ಕಾರ್ಯವು ನಡೆಯಲಿಕ್ಕೆ ಅನುಕೂಲವಾಗುವಂತೆ ತಾಯಿತಂದೆಗಳು ಮೊದಲೇ ಆ ಹುಡುಗರನ್ನು ಸಿದ್ಧಪಡಿಸಬೇಕು.

ಶಾಲಾಶಿಕ್ಷಣವು:—ಸದ್ಯಕ್ಕೆ ಶಾಲಾಶಿಕ್ಷಣದಲ್ಲಿ ಪ್ರಾಥಮಿಕ ಶಿಕ್ಷಣ, ಮಧ್ಯಮಪ್ರತಿಯ ಶಿಕ್ಷಣ, ಉಚ್ಚಪ್ರತಿಯ ಶಿಕ್ಷಣ ಎಂದು ಮೂರು ವಿಭಾಗಗಳು ಮಾಡಲ್ಪಟ್ಟಿರುತ್ತವೆ. ಇಲ್ಲಿ ಚಿಕ್ಕಮಕ್ಕಳ ವಿಷಯವಾಗಿಯೇ ವಿಚಾರಮಾಡತಕ್ಕದ್ದಿರುವದರಿಂದ ಪ್ರಾಥಮಿಕ ಶಿಕ್ಷಣವೇ ವಿವರಿಸಲ್ಪಟ್ಟಿರುತ್ತದೆ. ಪ್ರಾಥಮಿಕ ಶಿಕ್ಷಣವು ಉಳಿದ ಎರಡುಬಗೆಯ ಶಿಕ್ಷಣಗಳ

ಅಸ್ತಿವಾರವೆಂದು ಹೇಳಬಹುದು. ಯಾಕೆಂದರೆ, ಈ ಶಿಕ್ಷಣದಿಂದಲೇ ಹುಡುಗರಲ್ಲಿ ಜ್ಞಾನಸಂಪಾದನದ ಚಟವೂ ಸದ್ವರ್ತನವೂ ನೆಲೆಗೊಳ್ಳುವವು; ಸುಂದರವಾದ ಅಕ್ಷರಗಳನ್ನು ಪದ್ಧತಿಗೆ ಸರಿಯಾಗಿ ಬರೆಯುವ ಅಭ್ಯಾಸವಾಗುವದು; ಪ್ರಾಥಮಿಕ ಶಿಕ್ಷಣದಲ್ಲಿ ಇವುಗಳ ಸಂಬಂಧದ ಕೊರತೆಗಳು ಉಳಿದರೆ ಅವು ಮುಂದೆ ಕಡೆತನಕ ಹಾಗೇ ಉಳಿಯುವವು. ಸದ್ಯದ ಎಷ್ಟೋ ಪದವೀಧರರಲ್ಲಿ ಈ ಮಾತಿಗೆ ಅನೇಕ ಉದಾಹರಣೆಗಳು ದೊರೆಯುತ್ತವೆ. ಇದಲ್ಲದೆ ಸ್ವಾವಲಂಬನ, ದೀರ್ಘೋದ್ಯೋಗ, ಚಟುವಟಿಕೆ, ಮನಸಿನ ಉದಾತ್ತತನ, ಅಚ್ಚುಕಟ್ಟುತನ, ನಿಯಮಿತತನ ಇವೇ ಮೊದಲಾದ ಸದ್ಗುಣಗಳ ಪೋಷಣವು ಪ್ರಾಥಮಿಕ ಶಿಕ್ಷಣದಿಂದಲೇ ಆಗತಕ್ಕದ್ದು. ಇಲ್ಲಿ ಈ ಗುಣಗಳು ಹುಟ್ಟದಿದ್ದರೆ ಅವುಗಳನ್ನು ಸಂಪಾದನ ಮಾಡುವದು ಮುಂದೆ ಅವರಿಗೆ ಬಹಳ ಕಷ್ಟವಾಗುವದು. ಚಿಕ್ಕಂದಿನಲ್ಲಿ ಸದ್ಗುಣಗಳು ಮೈಯ್ಯಲ್ಲಿ ಭೇದಿಸಿ ಮನಸು ಸುಸಂಸ್ಕೃತವಾಗದಿದ್ದರೆ ಮುಂದೆ ಎಷ್ಟು ಗ್ರಂಥಾವಲೋಕನ ಮಾಡಿದರೂ ಶಾಸ್ತ್ರಗಳನ್ನು ಕಲಿತರೂ ಅದೆಲ್ಲ ವ್ಯರ್ಥವೇ ಸರಿ.

ಸದ್ಯದ ಪ್ರಾಥಮಿಕ ಶಿಕ್ಷಣದಲ್ಲಿ ಏಳು ಇಯತ್ತೆಗಳನ್ನು ಕಲ್ಪಿಸಿರುತ್ತಾರೆ. ಅವುಗಳಲ್ಲಿ ಲೇಖನ, ವಾಚನ, ಭಾಷಾ, ಗಣಿತ, ಈ ದೇಶದ ಇತಿಹಾಸ, ಜಗತ್ತಿನ ಭೂಗೋಲ ಈ ವಿಷಯಗಳು ಮುಖ್ಯವಾಗಿ ಕಲಿಸಲ್ಪಡುತ್ತವೆ. ಕಠಿಣವಾದ ಶಾಸ್ತ್ರೀಯ ವಿಷಯಗಳು ವಾಚನಪುಸ್ತಕಗಳಲ್ಲಿ ದಿಗ್ದರ್ಶನ ಮಾಡಲ್ಪಟ್ಟಿರುತ್ತವೆ.

ಮಧ್ಯಮ ಪ್ರತಿಯ ಹಾಗು ಉಚ್ಚಪ್ರತಿಯ ಶಿಕ್ಷಣದ ವಿಷಯಗಳ ಬಗ್ಗೆ ಅನೇಕ ಮತಭೇದಗಳಿದ್ದಾಗ್ಯೂ ಪ್ರಾಥಮಿಕ ಶಿಕ್ಷಣದ ವಿಷಯಗಳ ಬಗ್ಗೆ ಮತಭೇದವಿಲ್ಲ. ಆದರೆ ಕೆಲಕೆಲವು ವಿಷಯಗಳ ಸಂಬಂಧದಿಂದ ಒಬ್ಬ ಅನುಭವಿಕ ಶಿಕ್ಷಕರಾದ ಮಿ. ಸರದೇಸಾಯಿ ಎಂಬವರು ಸೂಚಿಸಿದ ಕೆಲವು ಸಂಗತಿಗಳನ್ನು ಇಲ್ಲಿ ಕೊಡುತ್ತೇನೆ:—

ಭಾಷಾವಿಷಯದಲ್ಲಿ ವ್ಯಾಕರಣಕ್ಕಿಂತ ಗದ್ಯಪದ್ಯ ಗ್ರಂಥಗಳ ವಾಚನದ ಕಡೆಗೂ ನಿಬಂಧ ಲೇಖನದ ಕಡೆಗೂ ವಿಶೇಷ ಲಕ್ಷಕೊಡತಕ್ಕದ್ದು. ನಿಬಂಧ ಲೇಖನಕ್ಕೆ ಅನುಕೂಲವಾಗುವಷ್ಟು ವ್ಯಾಕರಣವನ್ನು ಕಲಿಸಿದರೆ ಸಾಕು.

ವ್ಯವಹಾರಕ್ಕೆ ಅನುಕೂಲವಾಗುವಷ್ಟು ಇಂಗ್ರೇಜಿ ಭಾಷೆಯನ್ನೂ ದೇಶ ಭಾಷೆಯ ನೆರವಿಗೆ ಸ್ವಲ್ಪ ಸಂಸ್ಕೃತ ಭಾಷೆಯನ್ನೂ ಕಲಿಸಬೇಕು.

ಅಂಕಗಣಿತ, ಜಮಾಖರ್ಚು ಈಗಿರುವಷ್ಟು ಸಾಕು. ಯುಕ್ಲಿಡನ ಭೂಮಿತಿಯನ್ನು ತೆಗೆದು ಅದರ ಬದಲು ವ್ಯವಹಾರಕ್ಕೆ ಉಪಯುಕ್ತವಾದ ಕ್ಷೇತ್ರಫಲವನ್ನು ಕಲಿಸಬಹುದು.

ಹಿಂದೂ ದೇಶದ ಪ್ರಾಚೀನ ಅರ್ವಾಚೀನ ಇತಿಹಾಸವನ್ನು ಈಗಿನದಕ್ಕಿಂತ ಹೆಚ್ಚು ವಿಶದವಾಗಿ ಹೇಳುವದು. ಜಗತ್ತಿನ ಸಾಮಾನ್ಯ ಭೂಗೋಲವನ್ನೂ ಹಿಂದುಸ್ಥಾನದ ವಿಶೇಷ ಭೂಗೋಲವನ್ನೂ ಕಲಿಸುವದು.

ಭೂಪೃಷ್ಠಶಾಸ್ತ್ರ, ಭೂಗರ್ಭಶಾಸ್ತ್ರ, ಆರೋಗ್ಯಶಾಸ್ತ್ರ, ಶರೀರ ರಚನಾಶಾಸ್ತ್ರ, ರಸಾಯನಶಾಸ್ತ್ರ ಇವುಗಳ ಮೂಲತತ್ವಗಳನ್ನು ಪ್ರತ್ಯಕ್ಷ ಪ್ರಯೋಗಗಳಿಂದ ಕಲಿಸುವದು.

ಚಿತ್ರಕಲಾ, ಗಾಯನ ಈ ವಿಷಯಗಳನ್ನು ತಕ್ಕಮಟ್ಟಿಗೆ ಕಲಿಸತಕ್ಕದ್ದು. ಇವುಗಳಿಗೂ ಈಗಿದ್ದ ಇಯತ್ತೆಗಳ ವಿಷಯಗಳಿಗೂ ವಿಶೇಷ ಹೆಚ್ಚುಕಡಿಮೆ ಇಲ್ಲ. ಇಂಗ್ರೇಜಿ ಹಾಗು ಸಂಸ್ಕೃತ ವಿಷಯಗಳು ಮಾತ್ರ ಹೆಚ್ಚು ಇರುತ್ತವೆ; ಸ್ವಲ್ಪ ವಿಚಾರಮಾಡಿದರೆ ಈ ವಿಷಯಗಳು ಪ್ರಾಥಮಿಕ ಶಿಕ್ಷಣದಲ್ಲಿ ಬೇಡೆಂದು ಯಾರೂ ಅನ್ನಲಾರರು.

ಇನ್ನು ಈ ವಿಷಯಗಳನ್ನು ಕಲಿಸುವ ಪದ್ಧತಿಯಲ್ಲಿ ಅನೇಕ ದೋಷಗಳುಂಟು. ಆ ದೋಷಗಳ ಮೂಲಕವಾಗಿ ವಿದ್ಯಾರ್ಥಿಗಳ ಮನಸ್ಸು ಆಗತಕ್ಕಷ್ಟು ಸುಸಂಸ್ಕೃತವಾಗುವದಿಲ್ಲ. ಆದರಿಂದ ಅವರು ಕಟ್ಟಕಡೆಗೆ ಭಾರವಾಹಕರಾಗುವರೇ ಹೊರತು, ಸ್ವತಂತ್ರ ವಿಚಾರವುಳ್ಳವರಾಗುವದಿಲ್ಲ. ಈ ಸ್ಥಿತಿಯು ದೂರಾಗಲಿಕ್ಕೆ ಸದ್ಯದ ಶಾಲಾಶಿಕ್ಷಣ ಪದ್ಧತಿಯಲ್ಲಿ ಕೆಲವು ಸುಧಾರಣೆಗಳನ್ನು ಮಾಡುವದು ಅವಶ್ಯವು. ಆ ಸುಧಾರಣೆಗಳು ಯಾವವೆಂದರೆ:—

೧. ಯಾವ ವಿಷಯವನ್ನೂ ಹುಡುಗರ ಕೈಯಲ್ಲಿ ಪುಸ್ತಕವನ್ನು ಕೊಟ್ಟು, ಪಾಠಮಾಡಿಸಬಾರದು. ಆದರೆ ಏನೂ ಪಾಠಮಾಡಿಸಲೇ ಬಾರದೆಂದು ನಾನು ಹೇಳುವದಿಲ್ಲ. ಚಿಕ್ಕಂದಿನಲ್ಲಿ ಪಾಠಶಕ್ತಿಯು ವಿಶೇಷವಾಗಿರುವದು. ಆ ಕಾಲಕ್ಕೆ ಅವರು ಪಾಠಮಾಡಿದ ಸಂಗತಿಗಳು ಎಂದೂ ಮರೆಯುವದಿಲ್ಲ. ಆದಕಾರಣ ಮುಂದೆ ಅವರಿಗೆ ಉಪಯೋಗವಾಗತಕ್ಕ

ಸಂಗತಿಗಳನ್ನೂ ಕೆಲವು ಸುಲಭ ಪದಪದ್ಯಗಳನ್ನೂ ಕಥಾಪ್ರಸಂಗಗ ಳನ್ನೂ ಆರಿಸಿ, ಚನ್ನಾಗಿ ತಿಳಿಸಿ ಹೇಳಿ ಶುದ್ಧವಾಗಿ ಪಾಠಮಾಡಿಸಬಹುದು. ಇದರಿಂದ ಹುಡುಗರ ಸ್ಮರಣಶಕ್ತಿಯು ಬೆಳೆಯುವದು; ಉಚ್ಚಾರವು ಸುಧಾ ರಿಸುವದು; ಭಾಷಾಭ್ಯಾಸಕ್ಕೆ ಸಹಾಯವಾಗುವದು. ಆದರೆ ವಯಸ್ಸು ಹೆಚ್ಚಾದ ಬಳಿಕ ಯಾಂತ್ರಿಕ ರೀತಿಯಿಂದ ಪಾಠಮಾಡುವದು ಅಸಾಧ್ಯ ವಾಗುವದು. ಜುಲುಮೆಯಿಂದ ಪಾಠಮಾಡಲಿಕ್ಕೆ ಹೇಳಿದರೆ ಲಾಭವೇನೂ ಆಗದೆ ಕಷ್ಟವು ಮಾತ್ರ ಆಗುವದು. ಹುಡುಗರಿಗೆ ಕಲಿಸತಕ್ಕ ಎಲ್ಲ ಸಂಗತಿಗಳನ್ನು ಹಲವು ಪ್ರಶ್ನೆಗಳನ್ನು ಕೇಳಿ ಬಾಯಿಂದಲೇ ಜ್ಞಾನ ಮಾಡಿ ಕೊಡಬೇಕಲ್ಲದೆ, ಪುಸ್ತಕವನ್ನು ತಾವೂ ಹಿಡಿಯಬಾರದು, ಹುಡುಗರಿಗೂ ಹಿಡಿಯಗೊಡಬಾರದು. ಬಾಯಿಂದ ಪೂರ್ಣವಾಗಿ ತಿಳಿಸಿ ಹೇಳಿದ ಸಂಗತಿಗಳಲ್ಲಿ ಅಕ್ಷರಶಃ ನೆನಪಿನಲ್ಲಿಡತಕ್ಕ ಸಂಗತಿಗಳನ್ನು ಮಾತ್ರ ಪಾಠಮಾಡಿಸಬೇಕು. ಕವಿತೆಗಳನ್ನೂ ಗಣಿತದ ಅಥವಾ ವ್ಯಾಕರ ಣದ ವ್ಯಾಖ್ಯೆಗಳನ್ನೂ ನಿಯಮಗಳನ್ನೂ ಚನ್ನಾಗಿ ತಿಳಿಸಿಕೊಡದೆ ಕೇವಲ ಯಾಂತ್ರಿಕ ರೀತಿಯಿಂದ ಪಾಠಮಾಡಿಸಿದರೆ ಅವುಗಳಿಂದೇನೂ ಪ್ರಯೋ ಜನವಾಗುವದಿಲ್ಲ. ಮತ್ತು ಅವು ಸ್ಥಿರವಾಗಿಯೂ ಉಳಿಯುವದಿಲ್ಲ. ಒಂದೊಂದೇ ಸಂಗತಿಯನ್ನು ಸಾವಕಾಶವಾಗಿ ಕಲಿಸಿ ಬುದ್ಧಿವಂತರನ್ನು ಮಾಡಬೇಕೆಂದು ಶ್ರೀ ರಾಮದಾಸ ಸ್ವಾಮಿಗಳು ಹೇಳಿರುತ್ತಾರೆ.

೨. ಗಣಿತ, ಭಾಷಾ, ಈ ವಿಷಯಗಳು ಬಹಳ ವ್ಯಾಪಕವಾದವು ಗಳು. ಇವುಗಳಿಂದಲೇ ವಿಚಾರಕ್ಕೆ ಚಾಲನೆ ದೊರೆಯುವದು. ಸದ್ಯಕ್ಕೆ ಗಣಿತದ ಉದಾಹರಣೆಗಳ ರೀತಿಗಳನ್ನು ಕಲಿಸುವಾಗ ರೀತಿಯ ಒಂದೊಂದು ಮೆಟ್ಟಿನ ಕಾರ್ಯ ಕಾರಣ ಸಂಬಂಧವು ತಿಳಿಸಲ್ಪಡುವದಿಲ್ಲ. ಅದರಿಂದ ಹುಡುಗರ ಬುದ್ಧಿಗೆ ಸಂಸ್ಕಾರವೇನೂ ಆಗುವದಿಲ್ಲ. ಈ ವಿಷ ಯದ ತತ್ವಗಳನ್ನು ಕಲಿಸುವ ಗೋಜಿಗೆ ಹೋಗದೆ ರೀತಿಯ ಒಂದೊಂದು ಮೆಟ್ಟಿನ ಕಾರ್ಯಕಾರಣ ಸಂಬಂಧವನ್ನು ಹೇಳಿದರೆ ಅವರ ವಿಚಾರಕ್ಕೆ ಚಾಲನೆ ದೊರೆತು ಅದು ಪ್ರಗಲ್ಭವಾಗುವದು. ಭಾಷಾವಿಷಯದ ತತ್ವಗಳಾದ ವ್ಯಾಕರಣದ ನಿಯಮಗಳು ಈಗ ಯಾಂತ್ರಿಕ ರೀತಿಯಿಂದ ಪಾಠಮಾಡಿಸಲ್ಪಡುತ್ತವೆ. ಆ ನಿಯಮಗಳನ್ನು ವ್ಯಾವಹಾರಿಕ ಉದಾಹರ ಣೆಗಳಲ್ಲಿ ಸಮನ್ವಯ ಮಾಡದೆ ಇರುವದರಿಂದ ಆಗತಕ್ಕಷ್ಟು ಪ್ರಯೋ

ಜನವಾಗುವದಿಲ್ಲ. ಇದಲ್ಲದೆ ಮೊದಲು ವ್ಯಾಕರಣನಿಯಮಗಳನ್ನು ಹೇಳಿ, ಬಳಿಕ ಉದಾಹರಣೆಗಳನ್ನು ಕಲಿಸುವ ಪದ್ಧತಿಯು ದೋಷವಾಗಿ ರುತ್ತದೆ. ಈ ಪದ್ಧತಿಯಿಂದ ವಿಷಯವು ಚಿಕ್ಕಮಕ್ಕಳಿಗೆ ಸುಲಭವಾಗಿ ತಿಳಿಯುವದಿಲ್ಲ. ಅನೇಕ ಉದಾಹರಣೆಗಳನ್ನು ಅವರ ಮುಂದೆ ಇಟ್ಟು, ಅವರಿಂದಲೇ ಸಾಮಾನ್ಯ ನಿಯಮವನ್ನು ಹೊರಡಿಸಿದರೆ ನಿಯಮಗಳು ಸರಿಯಾಗಿ ತಿಳಿಯುವವು. ಭಾಷಾಶಾಸ್ತ್ರದ ನಿಯಮಗಳನ್ನು ಚಿಕ್ಕಮ ಕ್ಕಳಿಗೆ ಸ್ವತಂತ್ರವಾಗಿ ಕಲಿಸದೆ ಗದ್ಯಪದ್ಯಗಳಲ್ಲಿಯೂ ವಾಕ್ಯರಚನೆಯ ಲ್ಲಿಯೂ ಅವಶ್ಯವಿದ್ದಷ್ಟು ಮಾತ್ರ ಕಲಿಸಬಹುದು.

೪. ಭೂಗೋಲ ಇತಿಹಾಸ ಈ ವಿಷಯಗಳನ್ನು ಕಲಿಸುವಾಗ ಪರಸ್ಪರ ಸಂಬಂಧವಿಟ್ಟು ಹುಡುಗರ ಸ್ವತಂತ್ರ ವಿಚಾರವನ್ನು ಜಾಗ್ರತ ಗೊಳಿಸಬೇಕು. ಯಾವದೊಂದು ದೇಶದ ಸ್ವಾಭಾವಿಕ ರಚನೆಗೂ ಅಲ್ಲಿಯ ಹವೆ, ಮಳೆ, ಹುಟ್ಟುವಳಿ ಜನರ ಸ್ವಭಾವ ಇತ್ಯಾದಿ ಸಂಗತಿಗ ಳಿಗೂ ಎಷ್ಟು ನಿಕಟ ಸಂಬಂಧವಿರುತ್ತದೆಂಬದನ್ನು ವಿವರಿಸಿ ಹೇಳಿ ಈ ಸಂಬಂಧದಿಂದ ಸ್ವಂತ ದೇಶದಕೂಡ ತುಲನೆಮಾಡಹಚ್ಚಿದರೆ ಹುಡು ಗರಿಗೆ ಮನೋರಂಜನದೊಡನೆ ವಿಷಯಜ್ಞಾನವಾಗುವದು. ಇದೇ ಪ್ರಕಾರ ಭೂಮಿಯಮೇಲೆ ಹಲವು ದೇಶಗಳು, ಹಲವು ಜಾತಿಗಳು, ಹಲವು ಭಾಷೆಗಳು, ಬೇರೆ ಬೇರೆ ರಾಜ್ಯದಾಡಳತೆಗಳು ಹ್ಯಾಗೆ ನೆಲಗೊಂ ಡವು? ಆಯಾ ದೇಶಗಳು ಯಾವ ಯಾವ ಕಾಲಕ್ಕೆ ಯಾವ ಯಾವ ಕಾರಣಗಳಿಂದ ಉನ್ನತಿಯನ್ನು ಹೊಂದಿದವು. ಮತ್ತು ಅವರ ಅವನತಿ ಯುಂಟಾಗಲಿಕ್ಕೆ ಯಾವ ಕಾರಣಗಳು ಸಂಭವಿಸಿದವು. ಸಮುದ್ರ, ನದಿ, ಪರ್ವತ ಮೊದಲಾದವುಗಳು ಆಯಾ ದೇಶದ ಜನರ ಉನ್ನತಿಗೆ ಹ್ಯಾಗೆ ಕಾರಣವಾದವು? ಇತ್ಯಾದಿ ಅನೇಕ ವಿಚಾರಗಳನ್ನು ಹುಡುಗರಿಂದ ಮಾಡಿಸಿ ಇವುಗಳ ಉತ್ತರವನ್ನು ಅವರಿಂದಲೇ ಹೊರಡಿಸಿಕೊಳ್ಳಬೇಕು. ಈ ಪ್ರಕಾರದ ಶಿಕ್ಷಣದಿಂದ ಹುಡುಗರಲ್ಲಿ ಸದ್ಯದ ಪರಿಸ್ಥಿತಿಗನುಸರಿಸಿ ಕೌಟುಂಬಿಕ, ಸಾಮಾಜಿಕ, ರಾಜಕೀಯ ಮೊದಲಾದ ವಿಚಾರಗಳನ್ನು ಸ್ವತಂತ್ರ ರೀತಿಯಿಂದ ಮಾಡುವ ಚಟವು ಹತ್ತುವದು. ದೇಶದ ಉನ್ನ ತಿಗೆ ಇದೇ ಬೇಕಲ್ಲವೆ?

೫. ಪ್ರತಿ ಒಂದು ವಿಷಯದ ಶಿಕ್ಷಣಕ್ಕೆ ಅವಶ್ಯವಿದ್ದಷ್ಟು ಉಪಕರಣಗಳನ್ನು ತೆಗೆದುಕೊಳ್ಳತಕ್ಕದ್ದು. ಯಾವದೊಂದು ಸಂಗತಿಯನ್ನು ಬರೇ ಬಾಯಿಂದ ಹೇಳಿ ಬಿಡುವದಕ್ಕಿಂತ ವಸ್ತುಗಳನ್ನು ತೋರಿಸಿ ಅಥವಾ ಪ್ರಯೋಗವನ್ನು ಮಾಡಿ ಅನುಭವಕ್ಕೆ ತಂದು ಕೊಟ್ಟರೆ ಅದರ ಜ್ಞಾನವು ಚನ್ನಾಗಿ ಆಗುವದು. ಹೊಸ ಶಿಕ್ಷಣದಲ್ಲಿ ವಸ್ತುಪಾಠವೆಂಬ ವಿಷಯವನ್ನು ಸೇರಿಸಿದ ಉದ್ದೇಶವು ಇದೇ. ಜಪಾನದ ಪ್ರಾಥಮಿಕ ಶಾಲೆಗಳಿಗೆ ಪ್ರಪಂಚದ ಉಪಯೋಗದ ಒಡವೆಗಳನ್ನು ಮೊದಲ್ಗೊಂಡು ದೊಡ್ಡ ದೊಡ್ಡ ಯುದ್ಧದ ಹಡಗಗಳ ವರೆಗೆ ಯಾವತ್ತು ವ್ಯವಹಾರದೊಳಗಿನ ವಸ್ತುಗಳ ಮಾದರಿಗಳು ಕೊಡಲ್ಪಟ್ಟಿರುತ್ತವೆ. ಮತ್ತು ಶಿಕ್ಷಣದ ಕಾಲಕ್ಕೆ ಪ್ರಸಂಗ ಬಂದಾಗ ಆ ವಸ್ತುಗಳನ್ನು ತೋರಿಸಿ ಅವುಗಳ ಸಂಬಂಧದಿಂದ ಹೇಳತಕ್ಕ ಸಂಗತಿಗಳು ಹೇಳಲ್ಪಡುವವು. ಇದರಿಂದ ಹುಡುಗರಿಗೆ ವ್ಯವಹಾರಕ್ಕೂ ಶಿಕ್ಷಣಕ್ಕೂ ವ್ಯತ್ಯಾಸವಿಲ್ಲೆಂದು ಮನವರಿಕೆಯಾಗುವದು. ಚಿಕ್ಕಮಕ್ಕಳಿಗೆ ಈ ಸೃಷ್ಟಿಯು ಹೊಸದಿರುವ ಕಾರಣ, ಯಾವದೊಂದು ಸಂಗತಿಯನ್ನು ಅನುಭವಕ್ಕೆ ತಂದುಕೊಡದೆ ಹೇಳಿದರೆ ಹುಟ್ಟುಗುರುಡನಿಗೆ ಹಾಲು ಬೆಳ್ಳಕ್ಕಿಯಂತೆ ಇರುತ್ತದೆ, ಎಂದು ಹೇಳಿದಂತಾಗುತ್ತದೆ. ಸದ್ಯಕ್ಕೆ ಎಷ್ಟೋ ಶಿಕ್ಷಕರಿಗೆ ಈ ವಸ್ತುಪಾಠಶಿಕ್ಷಣದ ಉದ್ದೇಶವು ತಿಳಿಯದ್ದರಿಂದ ಆಗತಕ್ಕಷ್ಟು ಪ್ರಯೋಜನವು ಆಗದೆ, ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ತೊಂದರೆಯು ಮಾತ್ರ ಆಗಿರುವದು. ಅನುಭವಜನ್ಯಜ್ಞಾನವನ್ನು ಮಾಡಿಕೊಡುವದೇ ವಸ್ತುಪಾಠಶಿಕ್ಷಣದ ಮುಖ್ಯೋದ್ದೇಶವು. ಶಿಕ್ಷಕರು ಇದನ್ನು ಚನ್ನಾಗಿ ಅರಿತುಕೊಂಡು ಬೇಕಾಗುವ ಉಪಕರಣಗಳನ್ನು ಸಂಗ್ರಹಿಸಿಕೊಂಡು ಕಲಿಸತಕ್ಕದ್ದು. ಇದಕ್ಕಾಗಿ ಊರವರೂ ಸರಕಾರದವರೂ ಹಣದ ಸಹಾಯವನ್ನು ಮಾಡತಕ್ಕದ್ದು.

೬. ಇತರ ವಿಷಯಗಳಂತೆ ಶಾಲೆಯಲ್ಲಿ ಶಾರೀರಶಿಕ್ಷಣಕ್ಕೆ ತಕ್ಕಷ್ಟು ಲಕ್ಷ್ಯಕೊಡಲಿಕ್ಕೆ ಬೇಕು. ಈ ವಿಷಯದ ಅನಾಸ್ಥೆಯಿಂದ ಮಾನಸಿಕ ಶಿಕ್ಷಣಕ್ಕೆ ತೊಂದರೆಯುಂಟಾಗುವದು. ವ್ಯಾಯಾಮದಿಂದ ಶರೀರದ ಇತರ ಅವಯವಗಳಂತೆ ಮಿದುಳಾದರೂ ಬಲಹೊಂದುತ್ತದೆ. ಮಾನಸಿಕ ವ್ಯಾಪಾರಗಳೆಲ್ಲ ಮಿದುಳಿನ

ಕಾರ್ಯಗಳು. ಮಿದುಳು ಬಲಗುಂದಿದರೆ ಮಾನಸಿಕ ಶಕ್ತಿಗಳ ಪೋಷಣವೂ ಸಂವರ್ಧನವೂ ಆಗುವ ಬಗೆ ಯಾವದು? ಇದಲ್ಲದೆ ಡ್ರಿಲ್ಲಿ (ಕವಾಯಿತು) ನಿಂದ ವ್ಯಾಯಾಮವಾಗುವದಲ್ಲದೆ ಶಾಲೆಯಲ್ಲಿ ವ್ಯವಸ್ಥೆಯನ್ನು ಕಾಯ್ದುಕೊಳ್ಳಲಿಕ್ಕೆ ಅನುಕೂಲವಾಗುವದು, ಮತ್ತು ಹುಡುಗನು ಮೆಚ್ಚಿಕೆಯಿಂದ ಅದನ್ನು ಕಲಿಯುವನು. ಅದರಿಂದ ಅವರ ಕೂಡ್ರೋಣ, ಏಳ್ಲೋಣ, ನಡಿಯೋಣ, ಪೋಷಾಕ ಮಾಡೋಣ ಮೊದಲಾದ ವ್ಯಾಪಾರಗಳಲ್ಲಿ ವ್ಯವಸ್ಥೆಯು ನೆಲೆಗೊಳ್ಳುವದು. ಆದಕಾರಣ, ಶಾಲೆಯಲ್ಲಿ ಈ ವಿಷಯವು ಅವಶ್ಯವಾಗಿ ಕಲಿಸಲ್ಪಡಬೇಕು.

೭. ಒಬ್ಬೊಬ್ಬ ಶಿಕ್ಷಕನ ಕಯ್ಯೊಳಗೆ ಒಂದೊಂದೇ ವರ್ಗವಿರಬೇಕು. ಒಂದಕ್ಕಿಂತ ಹೆಚ್ಚು ವರ್ಗಗಳಿದ್ದರೆ ಕೆಲಸವು ಸರಿಯಾಗಿ ಆಗುವದಿಲ್ಲ. ಯಾಕೆಂದರೆ ಕಲಿಯತಕ್ಕ ಹುಡುಗನು ಒಬ್ಬನೇ ಇರಲಿ, ಇಬ್ಬರೇ ಇರಲಿ, ಹತ್ತುಮಂದಿ ಇರಲಿ ಹೇಳತಕ್ಕಷ್ಟು ಸಂಗತಿಗಳನ್ನು ಹೇಳಲಿಕ್ಕೇ ಬೇಕಾಗುತ್ತದೆ. ಮಾಡತಕ್ಕ ಸಿದ್ಧತೆಯನ್ನು ಮಾಡಲೇ ಬೇಕಾಗುತ್ತದೆ. ಒಬ್ಬ ಶಿಕ್ಷಕನಿಗೆ ಒಂದು ವರ್ಗದ ಶಿಕ್ಷಣದ ಸಿದ್ಧತೆಯನ್ನು ಮಾಡಲಿಕ್ಕೆ ವೇಳೆಯು ಸಾಲುವದಿಲ್ಲ. ಅಂದಮೇಲೆ ೨,೩,೪ ವರ್ಗಗಳನ್ನು ಕಲಿಸುತ್ತಿರುವ ಶಿಕ್ಷಕರು ಯಾವ ರೀತಿಯಿಂದ ಕೆಲಸ ಮಾಡುತ್ತಿರಬಹುದು? ಅವರ ಶಿಕ್ಷಣದಿಂದ ಹುಡುಗರಿಗೆ ಎಷ್ಟರ ಮಟ್ಟಿಗೆ ಕಲ್ಯಾಣವಾಗುತ್ತಿರಬಹುದು? ಎಂಬದನ್ನು ವಾಚಕರೇ ವಿಚಾರಮಾಡತಕ್ಕದ್ದು.

೮. ಒಂದೊಂದು ವರ್ಗದಲ್ಲಿ ೨೦ ಕ್ಕಿಂತ ಹೆಚ್ಚು ಹುಡುಗರು ಇರಕೂಡದು. ಒಬ್ಬ ಶಿಕ್ಷಕನ ಕೈಕೆಳಗೆ ಒಂದೇ ವರ್ಗವಿದ್ದರೂ ವರ್ಗದಲ್ಲಿ ೨೦ ಕ್ಕಿಂತ ಹೆಚ್ಚು ಹುಡುಗರು ಇದ್ದರೆ ಪ್ರತಿ ಒಬ್ಬ ವಿದ್ಯಾರ್ಥಿಯನ್ನು ಸೂಕ್ಷ್ಮ ರೀತಿಯಿಂದ ಪರೀಕ್ಷಿಸಿ ತಿದ್ದಲಿಕ್ಕೆ ಅನುಕೂಲವಾಗುವದಿಲ್ಲ. ಇಡೀ ಶಾಲೆಯ ಕೆಲಸವು ಕೆಲವು ಸಾಮಾನ್ಯ ನಿಯಮಗಳಿಗನುಸರಿಸಿ ನಡೆಯುತ್ತಿದ್ದರೂ ಶಿಕ್ಷಣದ ಕಾಲಕ್ಕೆ ಬೇರೆ ಬೇರೆ ವ್ಯಕ್ತಿಗಳ ಬುದ್ಧಿ, ನಡಾವಳಿ ಇವುಗಳನ್ನು ಸೂಕ್ಷ್ಮ ರೀತಿಯಿಂದ ಪರೀಕ್ಷಿಸಬೇಕಾಗುತ್ತದೆ. ಆಯಾ ವ್ಯಕ್ತಿಗಳಿಗೆ ಅವರವರ ಯೋಗ್ಯತೆಯ ಪ್ರಕಾರ ಬೇರೆ ಬೇರೆ ಶಿಕ್ಷೆ-ನಿಯಮ-ಪದ್ಧತಿಗಳನ್ನು ಉಪಯೋಗಿಸಬೇಕಾಗುತ್ತದೆ. ಪ್ರತಿ ಒಬ್ಬ ವಿದ್ಯಾರ್ಥಿಯನ್ನು ತನ್ನ ಅಂಕಿತದಲ್ಲಿ ತಂದುಕೊಂಡು ಅವನಿಗೆ

ವಿಷಯಜ್ಞಾನವನ್ನು ಮಾಡಿಕೊಡುವ ಪತೀಕರಣಬಿಂದುವು ಅಥವಾ ಮರ್ಮಸ್ಥಾನವು ಬೇರೆ ಬೇರೆ ಇರುತ್ತದೆ. ಅದನ್ನು ಶೋಧಿಸಿ ತೆಗೆಯುವದೇ ಶಿಕ್ಷಕನ ಕೆಲಸದಲ್ಲಿ ಕೌಶಲ್ಯವು. ಶಿಕ್ಷಕನ ಕೈಕೆಳಗೆ ಒಂದಕ್ಕಿಂತ ಹೆಚ್ಚು ವರ್ಗಗಳೂ ಒಂದೊಂದು ವರ್ಗದಲ್ಲಿ ೨೦ಕ್ಕಿಂತ ಹೆಚ್ಚು ಹುಡುಗರೂ ಇದ್ದರೆ ಅವನಿಗೆ ಹುಡುಗರ ಆ ಮರ್ಮಸ್ಥಾನವನ್ನು ಶೋಧಿಸಿ ಕೆಲಸಮಾಡಲು ಅನುಕೂಲವಾಗುವದಿಲ್ಲ.

೯. ಚಿಕ್ಕ ಪ್ರವಾಸಗಳನ್ನು ಮಾಡುವದು: – ವಸ್ತುಗಳ ಗುಣಧರ್ಮಗಳನ್ನೂ ಶಾಸ್ತ್ರೀಯ ಸಂಗತಿಗಳನ್ನೂ ಪ್ರತ್ಯಕ್ಷವಾಗಿ ಹುಡುಗರ ಅನುಭವಕ್ಕೆ ತಂದುಕೊಡುವದು ಅವಶ್ಯವೆಂದು ಹಿಂದೆ ಹೇಳಿದೆ. ಅದೇಪ್ರಕಾರ ನದಿ, ಪರ್ವತ, ಸಮುದ್ರ, ಬಂದರ, ಐತಿಹಾಸಿಕ ಸ್ಥಳಗಳು, ಕೋಟೆ, ರಣಭೂಮಿ, ಕ್ಷೇತ್ರ, ಹಳೇ ಹೊಸ ರಾಜಧಾನಿಗಳು, ಬೇರೆ ಬೇರೆ ಜನರ ಸ್ಥಿತಿರೀತಿಗಳು ಮುಂತಾದವುಗಳನ್ನು ಹುಡುಗರು ಕಣ್ಣಿಟ್ಟು ನೋಡತಕ್ಕದ್ದು. ಅವುಗಳ ವರ್ಣನೆಯನ್ನು ಅಥವಾ ನಡೆದ ಸಂಗತಿಯನ್ನು ಪುಸ್ತಕದಲ್ಲಿ ಹಲವುಸಾರೆ ಓದಿದಾಗ್ಯೂ, ಶಿಕ್ಷಕರು ಹಲವು ಸಾರೆ ಹೇಳಿದಾಗ್ಯೂ ಯಥಾರ್ಥ ಕಲ್ಪನೆಯು ಬರಲಾರದು. ಒಂದು ಸಾರೆ ಕಣ್ಣಿಟ್ಟು ನೋಡಿದರೆ ಮೊದಲು ತಿಳಿಯದೆ ಇದ್ದ ಸಂಗತಿಗಳು ತಿಳಿಯಹತ್ತುವವು; ಮತ್ತು ಹೆಚ್ಚು ಹೆಚ್ಚು ತಿಳಕೊಳ್ಳಬೇಕೆಂಬ ಜಿಜ್ಞಾಸೆಯು ಹುಟ್ಟುವದು. ಇದಲ್ಲದೆ ಪ್ರವಾಸದಲ್ಲಿ ನಾನಾಪ್ರಕಾರದ ಸೃಷ್ಟಿ ಸೌಂದರ್ಯವು ಅವರ ದೃಷ್ಟಿಗೆ ಬಿದ್ದು ಮನಸಿಗೆ ಆನಂದವೂ ಉಲ್ಲಾಸವೂ ಆಗುವದು. ಮತ್ತು ಪ್ರವಾಸದಲ್ಲಿ ತಮ್ಮ ಅರಿವೆ ಅಂಚಡಿಗಳನ್ನೂ ಬೇರೆ ಒಡವೆಗಳನ್ನೂ ಜೋಪಾನ ಮಾಡಿಕೊಳ್ಳಲಿಕ್ಕೂ ಪ್ರಕೃತಿಯನ್ನು ಸರಿಯಾಗಿ ಕಾಯ್ದುಕೊಳ್ಳಲಿಕ್ಕೂ ಪರಸ್ಪರರಲ್ಲಿ ಸಹಾನುಭೂತಿಯನ್ನಿಂಟು ಮಾಡಲಿಕ್ಕೂ ಸುಲಭವಾಗಿ ಕಲಿಸಬಹುದು. ಪ್ರವಾಸದ ಈ ಉದ್ದೇಶಗಳು ಸಾಧ್ಯವಾಗಬೇಕಾದರೆ ವಿದ್ಯಾರ್ಥಿಗಳ ಸಂಗಡ ಅನುಭವಿಕನಾದ ಶಿಕ್ಷಕನೂ ಇರಲಿಕ್ಕೆ ಬೇಕು.

೧೦. ಸದ್ಯದ ಪರೀಕ್ಷಾಪದ್ಧತಿಯನ್ನು ಬದಲು ಮಾಡಲಿಕ್ಕೆಬೇಕು. ಪರೀಕ್ಷಕರು ಯಾವ ಧೋರಣದಿಂದ ಹುಡುಗರಿಗೆ ಪ್ರಶ್ನೆಗಳನ್ನು ಕೇಳುವರೋ ಅದೇ ಧೋರಣದಿಂದ ಶಿಕ್ಷಕರು ಶಿಕ್ಷಣವನ್ನು ಕೊಡು

ವರು. ಯಾಂತ್ರಿಕ ರೀತಿಯ ಕೆಲಸಕ್ಕೆ ಪರೀಕ್ಷಕರು ಸಮಾಧಾನಪಡು ತ್ತಿದ್ದಮೇಲೆ ಬುದ್ಧಿಗೆ ಸಂಸ್ಕಾರ ಕೊಡುವ ಒಣಗೋಜಿಗೆ ಯಾವ ಶಿಕ್ಷ ಕರೂ ಹೋಗುವದಿಲ್ಲ. ಪರೀಕ್ಷೆಯ ಸಲುವಾಗಿಯೇ ಅಭ್ಯಾಸ ಮಾಡ ಬಾರದೆಂಬ ತಿಳುವಳಿಕೆಯು ಚಿಕ್ಕಮಕ್ಕಳಲ್ಲಿ ಇರುವದಿಲ್ಲ. ಜ್ಞಾನಾಭಿ ವೃದ್ಧಿಯ ಸಲುವಾಗಿಯೇ ವಿದ್ಯಾಭ್ಯಾಸವನ್ನು ಮಾಡತಕ್ಕದ್ದೆಂಬ ದೃಢ ವಾದ ನಂಬಿಗೆಯನ್ನು ಶಿಕ್ಷಕರೇ ವಿದ್ಯಾರ್ಥಿಗಳ ಮನಸಿನಲ್ಲಿ ಹುಟ್ಟಿಸ ತಕ್ಕದ್ದು. ಪರೀಕ್ಷಕರು ಪ್ರತಿ ಒಂದು ವಿಷಯದ ಬಗ್ಗೆ ಕೆಲವು ಮಾರ್ಮಿಕ ಪ್ರಶ್ನಗಳನ್ನು ಕೇಳಿ ಶಿಕ್ಷಿತರಾದ ಹುಡುಗರ ಬುದ್ಧಿಗೆ ಸಂಸ್ಕಾರವಾಗಿದೆಯೋ ಇಲ್ಲವೋ? ಶಿಕ್ಷಣವು ಅವರ ಮನಸಿನಲ್ಲಿ ಪೂರ್ಣ ವಾಗಿ ಬಿಂಬಿಸಿರುವದೋ ಇಲ್ಲವೋ? ನಡೆಯೋಣ, ಕೂಡ್ರೋಣ, ನಿಲ್ಲೋಣ, ಮಾತಾಡೋಣ, ಪ್ರಶ್ನಗಳಿಗೆ ಉತ್ತರ ಕೊಡೋಣ, ಬರ ಯೋಣ, ಓದೋಣ, ಇತ್ಯಾದಿ ಪ್ರತಿಒಂದು ವ್ಯಾಪಾರದಲ್ಲಿ ವಿನಯ, ಸ್ವಾವಲಂಬನ, ನಿಶ್ಚಿತತನ, ಅಚ್ಚುಕಟ್ಟುತನ, ಇವೇ ಮೊದಲಾದ ಗುಣ ಗಳು ತೋರುತ್ತಿರುವವೋ ಹ್ಯಾಗೆ? ಒಟ್ಟಿಗೆ, ಶಾರೀರಿಕ, ಮಾನಸಿಕ, ನೈತಿಕ ಉನ್ನತಿಯು ಎಷ್ಟರ ಮಟ್ಟಿಗೆ ಆಗಿರುವದು? ಅದನ್ನು ಅವರು ವ್ಯವಹಾರದಲ್ಲಿ ಎಷ್ಟರ ಮಟ್ಟಿಗೆ ಉಪಯೋಗಿಸಬಲ್ಲರು? ಈ ಸಂಗತಿ ಗಳನ್ನು ಮುಖ್ಯವಾಗಿ ಪರೀಕ್ಷಿಸತಕ್ಕದ್ದು. ಉದ್ಬುದ್ಧವಾದ ಗಣಿತದ ಉದಾಹರಣೆಗಳಿಂದಲೂ, ಗೊತ್ತು ಮಾಡಿಕೊಂಡ ಪ್ರಶ್ನಗಳಿಂದಲೂ ವಿದ್ಯಾರ್ಥಿಗಳ ನಿಜವಾದ ಪರೀಕ್ಷೆಯಾಗುವದಿಲ್ಲ. ಮತ್ತು ಶಿಕ್ಷಕನ ಕೌಶಲ್ಯವೂ ತೋರಬೀಳುವದಿಲ್ಲ; ಅವನಿಗೆ ಉತ್ತೇಜನವೂ ದೊರೆಯು ವದಿಲ್ಲ.

ಯೋಗ್ಯರಾದ ಶಿಕ್ಷಕರನ್ನು ನಿಯಮಿಸುವದು — ಹಿಂದೆ ಹೇಳಿದ ಎಲ್ಲ ವಿಚಾರಗಳಿಂದ ಚಿಕ್ಕಮಕ್ಕಳ ಶಿಕ್ಷಣದ ಕೆಲಸವು ಬಹಳ ಕಠಿಣ ವಾದದ್ದೂ ತೊಂದರೆಯುಳ್ಳದ್ದೂ ಜವಾಬದಾರಿಯುಳ್ಳದ್ದೂ ಆಗಿರುವ ದೆಂದು ಕಂಡು ಬರುವದು. ಈ ಕೆಲಸವನ್ನು ಮಾಡುವ ಮನುಷ್ಯನು ಸಶಕ್ತನೂ ಬುದ್ಧಿವಂತನೂ ನೀತಿವಂತನೂ ವ್ಯವಹಾರಜ್ಞನೂ ಆಗಿ ತಕ್ಕದ್ದು. ಅವನ ಮನಸ್ಸು ಎಷ್ಟು ಉದಾತ್ತವಾದಾಗ್ಯೂ ಎಷ್ಟು ಪ್ರಗಲ್ಭ ವಾದಾಗ್ಯೂ ಚಿಕ್ಕಮಕ್ಕಳ ಕೂಡ ವಿಚಾರ ಮಾಡಲಿಕ್ಕೂ ಅವರ ವಿಚಾ

ಗಳ ಉಗಮವನ್ನು ಗೊತ್ತು ಹಚ್ಚಲಿಕ್ಕೂ ಅವನು ಬೇಸರಿಯಬಾರದು. ಮತ್ತು ಹುಡುಗರ ವಿಚಾರಗಳಿಗೆ ಅವನ ಮನಸಿನಲ್ಲಿ ತಿರಸ್ಕಾರವು ಹುಟ್ಟ ಬಾರದು. ಹುಡುಗರು ಶಿಕ್ಷಕರ ಸಹವಾಸವನ್ನೂ ಶಿಕ್ಷಣವನ್ನೂ ಬಯ ಸುತ್ತಿರಬೇಕು. ವಿಷಯದ ಜ್ಞಾನ, ಮಾತಿನ ಚಾತುರ್ಯ, ಸದ್ವರ್ತನ, ಒಳ್ಳೇ ವಿಚಾರಸರಣಿ ನಿಶ್ಚಯಾತ್ಮಕವಾದ ವ್ಯವಹಾರಜ್ಞಾನ ಸಾದಾ ಪೋಷಾಕು ಇತ್ಯಾದಿ ಯಾವ ವಿಷಯಗಳಲ್ಲಿಯೂ, ಶಿಕ್ಷಕನು ಕೊರತೆ ಯುಳ್ಳವನಿರಬಾರದು. ಒಬ್ಬ ಸರ್ವಸಾಧಾರಣ ಮನುಷ್ಯನಲ್ಲಿ ಯಾವ ದೋಷಗಳು ಅತ್ಯಲ್ಪವಾದವುಗಳೆಂದು ನಾವು ಅವುಗಳನ್ನು ಉದಾಸೀನ ಮಾಡುವೆವೋ ಅಂಥ ದೋಷಗಳು ಸಹ ಶಿಕ್ಷಕರಲ್ಲಿ ಇರಕೂಡದು. ಕರ್ತವ್ಯದಕ್ಷನೂ ದೀರ್ಘೋದ್ಯೋಗಿಯೂ ನಿಸ್ಪೃಹನೂ, ಬುದ್ಧಿವಂತನೂ ಆದ ಶಿಕ್ಷಕನ ಕೈಕೆಳಗೆ ಕಲಿತ ವಿದ್ಯಾರ್ಥಿಗಳು ಅವನಂತೆ ಆಗುವರು ಆದರೆ ಸ್ವಾರ್ಥತ್ಯಾಗಮಾಡಿ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕಳಕಳ ಯಿಂದ ಕೊಡುವ ಶಿಕ್ಷಕರು ಅಪರೂಪವಾಗಿರುವರು.

ಸದ್ಯದಲ್ಲಿ ಲೋಕಶಿಕ್ಷಣವು ಅತ್ಯವಶ್ಯವಾಗಿರುತ್ತದೆ. ಲೋಕಶಿಕ್ಷ ಣವೆಂದರೆ ಉಚ್ಚತರದ ಶಿಕ್ಷಣ ಅಥವಾ ಔದ್ಯೋಗಿಕ ಶಿಕ್ಷಣವಲ್ಲ. ಬಡವ ರಿಗೂ ಶ್ರೀಮಂತರಿಗೂ ಚಿಕ್ಕವರಿಗೂ ದೊಡ್ಡವರಿಗೂ ನಿತ್ಯದ ವ್ಯವಹಾ ರದಲ್ಲಿ ಅಡಿಗಡಿಗೆ ಉಪಯೋಗಿಸುವ ಪ್ರಾಥಮಿಕ ಶಿಕ್ಷಣವು. ಈ ಶಿಕ್ಷಣವನ್ನು ಹೊಂದಿದ ಮನುಷ್ಯನು ಯಾವದೊಂದು ಉದ್ಯೋಗಮಾಡಿ ಹೊಟ್ಟೆ ಹೊರಕೊಳ್ಳಲಿಕ್ಕೆ ತಕ್ಕವನಾಗುವದಿಲ್ಲ. ಆದರೆ ಮುಂದೆ ಅವನು ಯಾವ ಉದ್ಯೋಗವನ್ನು ಕೈಕೊಂಡರೂ ಕೈಕೊಳ್ಳದಿದ್ದರೂ ಈ ಶಿಕ್ಷಣವು ಅವನಿಗೆ ಉಪಯೋಗಿಸುತ್ತದೆ. ಅವನು ಸರ್ವಸಾಧಾರಣ ಲೌಕಿಕ ವ್ಯವಹಾರ ಮಾಡಲಿಕ್ಕೆ ತಕ್ಕವನಾಗುತ್ತಾನೆ. ಮನುಷ್ಯನಾಗಿ ಹುಟ್ಟಿ ಇಷ್ಟು ಜ್ಞಾನವನ್ನು ಗಳಿಸದಿದ್ದರೆ ಅವನ ಜನ್ಮವು ವ್ಯರ್ಥವೇ ಸರಿ. ಇಂಥ ಅಜ್ಞಾನಿಗಳಿಗೆ ಸುಖವಂತೂ ಇಲ್ಲೇ ಇಲ್ಲ. ಆದರೆ ಇವರಿಂದ ದೇಶದೊಳಗಿನ ಮಿಕ್ಕ ಪ್ರಜೆಗಳಿಗೆ ವಿಧವಿಧದ ತೊಂದರೆಗಳು ತಟ್ಟು ವವು. ದೇಶದಲ್ಲಿ ಶಾಂತತೆಯು ಭಂಗವಾಗುವದು. ವಿದ್ಯಾಕಲಾಕೌಶಲ್ಯ ಗಳು ನಷ್ಟವಾಗುವವು. ವ್ಯಾಪಾರೋದ್ಯೋಗಗಳು ಕೆಟ್ಟುಹೋಗುವವು ಸಾರಾಂಶವೇನಂದರೆ ಕಳವು, ದರೋಡೆ, ಖೂನಿ ಮೊದಲಾದವುಗಳಿಂ

ಜನರ ವಿತ್ತಜೀವಿತಗಳ ರಕ್ಷಣವೂ ಸುಧಾರಣೆಯೂ ಆಗುವದಿಲ್ಲ. ದೇಶದಲ್ಲಿ ಊರೂರಿಗೆ ಪ್ರಾಥಮಿಕ ಶಾಲೆಗಳು ಸ್ಥಾಪಿಸಲ್ಪಟ್ಟು, ಎಲ್ಲ ಜನರಿಗೆ ಶಿಕ್ಷಣವು ದೊರೆಯುವಂತೆ ವ್ಯವಸ್ಥೆಯಾದರೆ ಅಶಿಕ್ಷಿತರ ಸಂಖ್ಯೆಯು ದಿನದಿನಕ್ಕೆ ಕಡಿಮೆಯಾಗುವದು. ದೇಶದಲ್ಲಿ ಶಾಂತತೆಯು ನೆಲಗೊಂಡು ದೇಶದ ಯಾವತ್ತು ಕಾರ್ಯಗಳು ಸುಸೂತ್ರ ಸಾಗುವವು. ಇವರಿಂದಲೇ ಪ್ರಜೆಗಳಿಗೆ ಲೋಕಶಿಕ್ಷಣವನ್ನು ಕೊಡುವದು ಸರಕಾರದ ವರ ಅವಶ್ಯ ಕರ್ತವ್ಯವೆಂದು ತಿಳಿಯಲ್ಪಡುತ್ತದೆ. ಮತ್ತು ಲೋಕ ಹಿತದ ಸಲುವಾಗಿ ಅವರು ದೇಶದ ಪ್ರತಿ ಒಬ್ಬ ಮನುಷ್ಯನು ಪ್ರಾಥ ಮಿಕ ಶಿಕ್ಷಣವನ್ನು ಹೊಂದಲಿಕ್ಕೇ ಬೇಕೆಂದು ಕಾಯಿದೆಯಿಂದ ಜುಲು ಮೆಮಾಡಿದರೆ ಅನ್ಯಾಯಮಾಡಿದಂತಾಗುವದಿಲ್ಲ. ಜರ್ಮನಿ, ಇಂಗ್ಲಂಡ, ಅಮೇರಿಕಾ ಮೊದಲಾದ ಸುಧಾರಿಸಿದ ರಾಷ್ಟ್ರಗಳಲ್ಲಿ ಎಲ್ಲ ಪ್ರಜೆಗಳು ಪ್ರಾಥಮಿಕ ಶಿಕ್ಷಣವನ್ನು ಹೊಂದಲಿಕ್ಕೇ ಬೇಕೆಂದು ಕಾಯಿದೆಗಳನ್ನು ಮಾಡಿರುವರು. ಮತ್ತು ಈ ತರದ ಶಿಕ್ಷಣಕ್ಕಾಗಿ ಬಡಬಗ್ಗರಿಗೆ ಏನೂ ವೆಚ್ಚವು ಬೀಳದಂತೆ ವ್ಯವಸ್ಥೆಯು ಮಾಡಲ್ಪಟ್ಟಿರುವದು. ನಮ್ಮ ದೇಶ ದಲ್ಲಿ ಬಡೋದೆಯ ಗಾಯಕವಾಡನು ಈ ತರದ ಸುಧಾರಣೆಯನ್ನು ತನ್ನ ರಾಜ್ಯದಲ್ಲಿ ಮಾಡಿರುವನು.

ಈ ಪ್ರಕಾರ ಸುಧಾರಣೆಗಳಾದರೆ ಪ್ರಾಥಮಿಕ ಶಿಕ್ಷಣವು ಸರಿ ಯಾಗಿ ಆಗುವದು. ಈ ಶಿಕ್ಷಣವನ್ನು ಮುಗಿಸಿದ ಹುಡುಗರು ಮಧ್ಯಮ ಹಾಗು ಉಚ್ಚತರದ ಶಿಕ್ಷಣವನ್ನೂ ಔದ್ಯೋಗಿಕ ಶಿಕ್ಷಣವನ್ನೂ ಹೊಂದ ಲಿಕ್ಕೆ ತಕ್ಕವರಾಗುವರು.

ನೈತಿಕ ಶಿಕ್ಷಣ—ಮನುಷ್ಯನಿಗೆ ಮನುಷ್ಯತ್ವವು ಪ್ರಾಪ್ತವಾಗಬೇ ಕಾದರೆ ಅವನಿಗೆ ಬುದ್ಧಿಯು ಅವಶ್ಯವಾಗಿದ್ದಷ್ಟು ನೀತಿಯೂ ಅವಶ್ಯವಾ ದದ್ದು. ನೀತಿಯಿಂದ ಮನುಷ್ಯನಿಗೆ ಇಹಪರಗಳೆರಡೂ ಲಭಿಸುತ್ತವೆ. ಬೇರೆ ಎಲ್ಲ ಪ್ರಾಣಿಗಳಿಗಿಂತ ಮನುಷ್ಯನೇ ಶ್ರೇಷ್ಠನೆಂದು ಅವನ ನೀತಿ ಯುಕ್ತವಾದ ಆಚರಣೆಯಿಂದಲೇ ಗೊತ್ತಾಗುತ್ತದೆ. ಮನುಷ್ಯನಲ್ಲಿ ವಿದ್ವತ್ತು, ಧನ, ಅಧಿಕಾರ ಮುಂತಾದ ಸುಖದ ಸಾಧನಗಳು ಬೇಕಾ ದಷ್ಟು ಇದ್ದಾಗ್ಯೂ ನೀತಿಯುಕ್ತವಾದ ನಡಾವಳಿಯು ಇಲ್ಲದಿದ್ದರೆ ಅವ ನಿಗೆ ಕಿಂಚಿತ್ತಾದರೂ ಸೌಖ್ಯವು ಲಭಿಸುವದಿಲ್ಲ. ಒಳ್ಳೇ ನಡತೆಯುಳ್ಳ

ಮನುಷ್ಯನು ಉದ್ಯೋಗಿಯೂ, ಪ್ರಾಮಾಣಿಕನೂ ಉದಾರನೂ ಆಗಿದ್ದರೆ ಅವನ ವಿಷಯವಾಗಿ ಜನರಲ್ಲಿ ಪೂಜ್ಯಬುದ್ಧಿಯು ತನ್ನಿಂದ ತಾನೇ ಉತ್ಪನ್ನವಾಗುವದು. ಜನರು ಅಂಥ ಮನುಷ್ಯನು ಆಡಿದ ಮಾತು ನಿಜವೆಂದು ಭಾವಿಸುವರು. ಇತರರು ಅವನ ಆಚರಣೆಯನ್ನು ಅನುಸರಿಸಲಿಕ್ಕೆ ಯತ್ನಮಾಡುವರು. ಲೋಕದಲ್ಲಿ ಅಲೌಕಿಕ ಬುದ್ಧಿಶಾಲಿಯಾದ ಮನುಷ್ಯನನ್ನು ಜನರು ಕೊಂಡಾಡುವರು; ಆದರೆ ನೀತಿವಂತನಾದ ಮನುಷ್ಯನನ್ನು ಮೇಲುಪಂಙ್ತಿಯಾಗಿ ಇಟ್ಟುಕೊಂಡು ಅವನಂತೆ ನಡೆಯುತ್ತಾರೆ. ಈ ಜಗತ್ತಿಗೆ ಬುದ್ಧಿಗಿಂತ ನೀತಿಯಿಂದಲೇ ಬಹಳ ಉಪಯೋಗವಾಗುತ್ತದೆ. ಇವಲ್ಲದೆ ದೇಶದ ಎಲ್ಲ ಜನರು ಬುದ್ಧಿವಂತರಾಗುವದು ಅಸಂಭವವು. ಆದರೆ ಎಲ್ಲರೂ ನೀತಿವಂತರಾದರೇ ಮಾತ್ರ ದೇಶದ ಸುಧಾರಣೆಯಾಗುವದು. ದೇಶದ ಎಲ್ಲ ಸುಧಾರಣೆಗಳಿಗೆ ನೀತಿಯು ಮೂಲಾಧಾರವು. ಯಾವದೊಂದು ದೇಶದ ಉನ್ನತ್ಯವನತಿಗಳು ಆ ದೇಶದ ನೀತಿಯನ್ನು ಅವಲಂಬಿಸಿರುತ್ತವೆ, ಎಂದು ಇತಿಹಾಸದಿಂದ ತಿಳಿಯುತ್ತದೆ. ಅನೇಕ ವ್ಯಕ್ತಿಗಳು ಕೂಡಿ ಒಂದು ದೇಶವಾಗುತ್ತದೆ. ಆದಕಾರಣ ಭಾವೀರಾಷ್ಟ್ರವಾದ ನಮ್ಮ ಚಿಕ್ಕಮಕ್ಕಳಿಗೆ ನೀತಿಶಿಕ್ಷಣವನ್ನು ಅವಶ್ಯವಾಗಿ ಕೊಡಲಿಕ್ಕೆ ಬೇಕು. ಇದಕ್ಕೆ ಅಯ್ದು ಉಪಾಯಗಳು ತೋಚುವವು. ಅವು ಯಾವವೆಂದರೆ: —

೧. ತಾಯಿತಂದೆಗಳೂ ಶಿಕ್ಷಕರೂ ತಮ್ಮ ಉಜ್ವಲವಾದ ಆಚರಣೆಯಿಂದ ಚಿಕ್ಕಮಕ್ಕಳ ಕೋಮಲ ಮನಸಿನಲ್ಲಿ ಸದ್ವರ್ತನವನ್ನು ಬಿಂಬಿಸುವದು.

೨. ಮಕ್ಕಳು ಯಾವಾಗಲೂ ಒಳ್ಳೇ ನಡತೆಯವರ ಸಹವಾಸದಲ್ಲಿರುವಂತೆಯೂ, ಅವರಿಗೆ ದುರ್ನಡತೆಯವರ ಗಾಳಿ ತಾಕದಂತೆಯೂ ಎಚ್ಚರಪಡುವದು.

೩. ಸಾಲೆಯಲ್ಲಿ ಶಿಕ್ಷಕರು ಪಾಠ ಹೇಳುವಾಗ ಪ್ರಸಂಗಗಳನ್ನು ಸಾಧಿಸಿ ನೀತಿಯಿಂದಾಗುವ ಹಿತಗಳನ್ನೂ ಅನೀತಿಯಿಂದಾಗುವ ಅಹಿತಗಳನ್ನೂ ಉದಾಹರಣೆ ಸಹಿತವಾಗಿ ವಿವರಿಸುವದು.

೪. ಒಳ್ಳೇ ನಡತೆಯ ಕೆಲವು ನಿಯಮಗಳನ್ನು ಮಾಡಿ ಆ ನಿಯಮಗಳಂತೆ ಹುಡುಗರನ್ನು ಆಗ್ರಹಪೂರ್ವಕವಾಗಿ ನಡಿಸಿಕೊಳ್ಳುವದು.

೫. ಸುಲಭವೂ ಮನೋರಂಜಕವೂ ಆದ ನೀತಿಯ ಕಥೆಗಳನ್ನು ಓದಿಸಿ ಅವರೊಡನೆ ವಿಚಾರ ಮಾಡುವದು.

ಈ ಉಪಾಯಗಳಲ್ಲಿ ಮೊದಲನೇ ಉಪಾಯವು ಎಲ್ಲಕ್ಕೂ ಶ್ರೇಷ್ಠವಾದದ್ದು. ಯಾಕಂದರೆ, ನೀತಿಯ ನಡಾವಳಿಯು ವ್ಯಾಖ್ಯಾನವನ್ನು ಕೇಳಿ ಇಲ್ಲವೆ ಪುಸ್ತಕಗಳನ್ನು ಓದಿ ಬರುವಂಥದಲ್ಲ. ಹಾಗಾಗುವ ಸಂಭವವಿದ್ದರೆ ಈ ಲೋಕದಲ್ಲಿ ಅನೀತಿಯೇ ಉಳಿಯುತ್ತಿದ್ದಿಲ್ಲ. ವ್ಯಾಖ್ಯಾನ ಕೊಡುವವರಾಗಲಿ ಗ್ರಂಥಗಳನ್ನು ಬರೆಯುವವರಾಗಲಿ ಅನೀತಿಯಿಂದ ನಡೆಯಬೇಕೆಂದು ಯಾರೂ ಹೇಳುವದಿಲ್ಲ. ಜನರಲ್ಲಿ ಗತಾನುಗತಿಕ ಪದ್ಧತಿಯೇ ಸಾಮಾನ್ಯವಾಗಿದೆ. ನಮ್ಮ ಜನರು ಒಬ್ಬರು ಮಾಡಿದ್ದನ್ನು ನೋಡಿ ಸಾರಾಸಾರ ವಿಚಾರ ಮಾಡದೆ ತಾವೂ ಅದರಂತೆ ನಡೆಯುವರು. ಈ ಮಾತಿಗೆ ಶಾಸ್ತ್ರಾಧ್ಯಯನವನ್ನು ಮಾಡಿದ ಎಷ್ಟೋ ಪಂಡಿತರ ಉದಾಹರಣೆಗಳನ್ನು ಸಹ ಕೊಡಬಹುದು. ಚಿಕ್ಕಮಕ್ಕಳಲ್ಲಿಯಂತೂ ಈ ಅನುಕರಣ ಪ್ರವೃತ್ತಿಯು ಬಹಳ ಪ್ರಬಲವಾಗಿರುವ ಕಾರಣ ಅವರು ತಮ್ಮ ಕಣ್ಣಿಗೆ ಬಿದ್ದದ್ದನ್ನೂ ಕಿವಿಯಿಂದ ಕೇಳಿದ್ದನ್ನೂ ಅನುಕರಣ ಮಾಡುತ್ತಿರುವರು. ಅನುಕರಣವೇ ಅವರ ಆರಂಭದ ಶಿಕ್ಷಣವು. ಬಾಲಕರ ಅಂತಃಕರಣವು ಕನ್ನಡಿಯಂತೆ ನಿರ್ಮಲವಾಗಿರುವದು. ಅದರ ಮೇಲೆ ಬಿದ್ದ ಕಿರಣಗಳು ಪರಾವರ್ತನ ಹೊಂದದೆ ಇರಲಾರವು. ಒಳ್ಳೇ ನಡತೆಯ ಉದಾಹರಣೆಗಳೇ ಅವರ ಕಣ್ಣೆದುರಿಗೆ ಇದ್ದರೆ ಅವು ಅವರ ಮನಸಿನಲ್ಲಿ ಬಿಂಬಿಸಿ ಅವರು ಜನ್ಮವಿರುವವರೆಗೂ ಅವುಗಳನ್ನನುಸರಿಸಿಯೇ ನಡೆಯುವರು. ದೊಡ್ಡವರಾದ ಬಳಿಕ ಶಿಕ್ಷಣದಿಂದಲೂ, ಗ್ರಂಥಾವಲೋಕನದಿಂದಲೂ ಅವರ ಮಾನಸಿಕ ಪ್ರವೃತ್ತಿಗಳಲ್ಲಿ ಎಷ್ಟು ವ್ಯತ್ಯಾಸವಾದಾಗ್ಯೂ ಬಾಲಾಭ್ಯಾಸಗಳು ಅಥವಾ ಚಿಕ್ಕಂದಿನಲ್ಲಿ ಹೃತ್ಪಟಲದಲ್ಲಿ ಮೂಡಿದ ನಡಾವಳಿಯು ಬದಲಾಗುವದಿಲ್ಲ. ಆದಕಾರಣ ಹುಡುಗರಲ್ಲಿ ಸದ್ವರ್ತನವು ನೆಲೆಗೊಳ್ಳಬೇಕಾದರೆ ತಾಯಿತಂದೆಗಳೂ ಶಿಕ್ಷಕರೂ ತಾವೇ ಸ್ವತಃ ಸದ್ವರ್ತನದಿಂದ ನಡೆಯಲಿಕ್ಕೆಬೇಕು. ಕನಿಷ್ಠಪಕ್ಷಕ್ಕೆ ತಮ್ಮ ದುರ್ನಡತೆಯು ಹುಡುಗರ ದೃಷ್ಟಿಗೆ ಬೀಳದಂತೆಯಾದರೂ ಎಚ್ಚರ ಪಡಬೇಕು,

ಹುಡುಗರು ಹುಟ್ಟಿದಂದಿನಿಂದ ನಾಲ್ಕೈದು ವರ್ಷದವರಾಗುವವ

ರಿಗೆ ತಾಯಿತಂದೆಗಳ— ವಿಶೇಷವಾಗಿ ತಾಯಿಯು ಬಳಿಯಲ್ಲಿರುವದು ಆ ಕಾಲಕ್ಕೆ ಅವಳ ನಡೆನುಡಿಗಳು ಹುಡುಗರಲ್ಲಿ ತಮ್ಮಿಂದ ತಾವೇ ಸೇರು ತ್ತಿರುವವು. ಅವಳು ಉಲ್ಲಾಸವೃತ್ತಿಯಿಂದಲೂ, ಸಮಾಧಾನದಿಂದಲೂ ಗಾಂಭೀರ್ಯದಿಂದಲೂ ಪ್ರೇಮದ ಬಳಿಕೆಯಿಂದಲೂ ಇದ್ದರೆ ಹುಡುಗ ರಾದರೂ ಹಾಗೇ ಆಗುವರು. ಆದರೆ ಅವಳು ಅಸಂತುಷ್ಟಳೂ, ಚಿಂತಾ ಯುಕ್ತಳೂ, ಒದರಬಡಕಳೂ, ಅಷ್ಟಿಷ್ಟು ಮಾತಿಗೆ ಸಿಟ್ಟಿಗೇಳುವ ಸ್ವಭಾ ವದವಳೂ ಆಗಿದ್ದರೆ ಹುಡುಗರು ಸಹ ಅವಳಂತೆ ಆಗುವರು.

(ಸಶೇಷ)

ವಿದ್ಯಾಖಾತೆಯ ನೋಟೀಸುಗಳು.

ಹ್ವರ್ನ್ಯಾಕ್ಯೂಲರ ಫಾಯನಲ್ ಪರೀಕ್ಷೆಯು.

ದಕ್ಷಿಣಭಾಗ.

೧೮೦೭ನೇ ಇಸ್ವಿಯು ನವಂಬರ ೨೧ನೇ ತಾರೀಖಿನ, ಮುಂಬಯಿ ಗವ್ಹರಮೆಂಟ ಗ್ಯಾಝೀಟ ಭಾಗ ೧ನೇದರಲ್ಲಿ ಪ್ರಕಟಸಲ್ಪಟ್ಟ ನಿಯಮಗ ಳಿಗನುಸರಿಸಿ, ೧೮೧೫ರಲ್ಲಿ ನಡೆಯತಕ್ಕ ಪರೀಕ್ಷೆಗೆ ಕೆಳಗೆ ಕಾಣಿಸಿ ಪುಸ್ತಕಗಳು ನಿಯಮಿಸಲ್ಪಟ್ಟವೆ:—

ಮರಾಠಿ.

ಗದ್ಯ:— ಹೊಸ ಕ್ರಮಿಕ ಪುಸ್ತಕಗಳಲ್ಲಿ ೭ನೇ ಪುಸ್ತಕ ಪೂರ್ಣ.

ಪದ್ಯ:— ಹೊಸ ಕ್ರಮಿಕ ಪುಸ್ತಕಗಳಲ್ಲಿ ೭ನೇ ಪುಸ್ತಕದಲ್ಲಿರುವ ಕಡೆಯ ೩೦೦ ಸಾಲುಗಳನ್ನು ಪಾಠಮಾಡುವದು; ಮತ್ತು ಅವುಗಳ ಅರ್ಥವನ್ನು ಹೇಳುವದು.

ಕನ್ನಡ.

ಗದ್ಯ:— ಹೊಸ ಕ್ರಮಿಕ ಪುಸ್ತಕಗಳಲ್ಲಿ ೭ನೆ ಪುಸ್ತಕವು ಪೂರ್ಣ.

ಪದ್ಯ:— ಹೊಸ ಕ್ರಮಿಕ ಪುಸ್ತಕಗಳಲ್ಲಿ ೭ನೇ ಪುಸ್ತಕದಲ್ಲಿರುವ ಕಡೆಯ ೩೦೦ ಸಾಲುಗಳನ್ನು ಪಾಠ ಮಾಡುವದು. ಮತ್ತು ಅವುಗಳ ಅರ್ಥವನ್ನು ಹೇಳುವದು.

ಧಾರವಾಡ,
೪—೧೨—೧೪.

V. B. JOSHI.
ಆಕ್ಟಿಂಗ ಎಜ್ಯುಕೇಶನಲ್ ಇನಸ್ಪೇಕ್ಟರ.

ಹ್ವನ್ಯಾಕ್ಯುಲರ ಫಾಯನಲ್ ಪರೀಕ್ಷೆಯು.

ದಕ್ಷಿಣಭಾಗ.

೧೯೧೫ನೇ ಇಸವಿಯಲ್ಲಿ ಆಗುವ ಹ್ವನ್ಯಾಕ್ಯುಲರ ಫಾಯನಲ್ ಪರೀಕ್ಷೆಗೆ ಉರ್ದೂ ಭಾಷಾವಿಷಯದಲ್ಲಿ ಕೆಳಗೆ ಬರೆದ ಪುಸ್ತಕಗಳು ನಿಯಮಿಸಲ್ಪಟ್ಟಿರುತ್ತವೆ:—

(ಅ) ಉರ್ದೂ ಮಿಡಲ್‌ಕೋರ್ಸ, ಭಾಗ ೨ ಪಂಜಾಬ, ೧ರಿಂದ ೧೦೫ ಪುಟಗಳು.

(ಬ) ಮುಸದ್ದಾಸ ಹಾಲಿ. ೫೫ನೆಯ ಪದ್ಯವನ್ನು ಮೊದಲ್ಗೊಂಡು ೫೦ ಪದ್ಯಗಳು.

ಧಾರವಾಡ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗದವರ ಆಫೀಸು ೫ನೆಯ ಫೆಬ್ರುವರಿ ೧೯೧೫

V. B. JOSHI.
ಆ|| ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣಭಾಗ.

ಸರಕ್ಯುಲರ ಹುಕುಂ ನಂ. ೧೧೯೪೮. / ೨೫–೧–೧೫.

ಕಳೆದ ಆರು ತಿಂಗಳುಗಳಲ್ಲಿ ನೋಡಿದ ಬಹುತರ ಎಲ್ಲ ಲೋಕಲ್ ಬೋರ್ಡ ಮತ್ತು ಮ್ಯುನಿಸಿಪಲ್ ಕನ್ನಡ ಶಾಲೆಗಳಲ್ಲಿ "ಉಪಾಧ್ಯಾಯರಿಗೋಸ್ಕರ ಸೂಚನೆಗಳು" ಎಂಬ ಪುಸ್ತಕದಲ್ಲಿ ಹೇಳಿದ ಶಿಕ್ಷಣದ ಮಾರ್ಗವನ್ನು ಶಿಕ್ಷಕರು ಶಿಕ್ಷಣಕ್ರಮದಲ್ಲಿ ಅನುಸರಿಸದೆ ಆ ಸೂಚನೆಗಳನ್ನು ಮೂಲೆಗುಂಪು ಮಾಡಿದ್ದನ್ನೂ ಶಿಕ್ಷಣವನ್ನು ಇನ್ನೂ ಹಳೇ ಪದ್ಧತಿಯಿಂದಲೇ ಸಾಗಿಸುತ್ತಿದ್ದನ್ನೂ ನೋಡಿ ಕೆಳಗೆ ಸಹಿಮಾಡಿದವರಿಗೆ ಬಹಳ ವಿಷಾದವೆನಿಸಿತು. ಅವರು ಪರೀಕ್ಷಿಸಿದ ಬಹುತರ ಎಲ್ಲ ಟ್ರೇಂಡ್ ಮತ್ತು ಅಂಟ್ರೇಂಡ್ ಶಿಕ್ಷಕರು ಉಪಾಧ್ಯಾಯರ ಸೂಚನೆಯ ಪುಸ್ತಕದಲ್ಲಿ ಕೊಟ್ಟ ಸೂಚನೆಗಳನ್ನು ಪೂರ್ಣವಾಗಿ ಮರೆತು ಬಿಟ್ಟಂತೆ, ಇಲ್ಲವೆ ಅವುಗಳನ್ನು ತಿಳಕೊಳ್ಳದೆ ಇದ್ದಂತೆ ಕಂಡುಬಂದಿತು; ಮತ್ತು ಶಿಕ್ಷಣದ ಹೊಸ ಪದ್ಧತಿಯ ದೃಷ್ಟಿಯಿಂದ ನೋಡಿದರೆ, ಪ್ರಾಥಮಿಕ ಶಾಲೆಗಳು ತೀರ ಹೀನಾವಸ್ಥೆಯಲ್ಲಿದ್ದದ್ದು ಕಂಡುಬಂದಿತು. ಈ ದೇಶದ ಪ್ರಾಥಮಿಕ ಶಾಲೆಗಳು ಊರ್ಜಿತಾವಸ್ಥೆಗೆ ಬರಬೇಕೆಂತಲೂ ಅವುಗಳಲ್ಲಿ ಸುಧಾರಿಸಿದ ಪದ್ಧತಿಯ ಶಿಕ್ಷಣಕ್ರಮವು ನಡೆಯಬೇಕೆಂತಲೂ, ಸರಕಾರದವರು ವರ್ಷವರ್ಷಕ್ಕೆ ಬಹಳ ಹಣವನ್ನು ವೆಚ್ಚಮಾಡುತ್ತಿರಲು, ಶಿಕ್ಷ

ಣದ ಮಾನದಿಂದ ಪ್ರಾಥಮಿಕ ಶಾಲೆಗಳು ಇಂಥ ಕೀಳ್ತರದ ಸ್ಥಿತಿಯಲ್ಲಿರುವದು ಸರಿಯಾದದ್ದಲ್ಲ. ಆದದರಿಂದ ಈ ಸರಕ್ಯೂಲರ ಹುಕುಮಿನಿಂದ ತಿಳಿಸುವದೇನಂದರೆ, ಯಾವತ್ತೂ ಲೋಕಲ್‌ಬೋರ್ಡ, ಮ್ಯುನಿಸಿಪಲ್, ಮತ್ತು ಏಡೆಡ್ ಕನ್ನಡ ಶಾಲೆಗಳಲ್ಲಿರುವ ಟ್ರೇಂಡ್ ಮತ್ತು ಅನ್‌ಟ್ರೇಂಡ್ ಶಿಕ್ಷಕರು ಶಾಳಾಖಾತೆಯಿಂದ ಉಪಾಧ್ಯಾಯರುಗೋಸ್ಕರ ಪ್ರಕಟಿಸಲ್ಪಟ್ಟ ಸೂಚನೆಗಳನ್ನು ಮನಮುಟ್ಟಿ ಓದಿ, ಅವುಗಳನ್ನು ಚನ್ನಾಗಿ ತಿಳಕೊಂಡು ಆಯಾ ಶಾಲೆಗಳ ಪರಿಸ್ಥಿತಿಗನುಸರಿಸಿ ಆ ಸೂಚನೆಗಳನ್ನು ಶಿಕ್ಷಣಕ್ರಮದಲ್ಲಿ ಆಚರಣೆಗೆ ತರತಕ್ಕದ್ದು. ಶಿಕ್ಷಕರ ಸಾಕಷ್ಟು ಸಂಖ್ಯೆಯೂ ಶಿಕ್ಷಣದ ತಕ್ಕಷ್ಟು ಉಪಕರಣಗಳೂ ಇರುವ ಎಲ್ಲ ಲೋಕಲ್‌ಬೋರ್ಡ ಶಾಲೆಗಳಲ್ಲಿಯೂ, ದೊಡ್ಡ ಊರುಗಳಲ್ಲಿದ್ದ ಮುನಿಸಿಪಲ್ ಕನ್ನಡ ಶಾಲೆಗಳಲ್ಲಿಯೂ ಶಿಕ್ಷಣವು ಬಹುತರ ಆ ಸೂಚನೆಗಳಂತೆಯೇ ಸಾಗುವದಕ್ಕೆ ಅಡ್ಡಿ ಇರುವದಿಲ್ಲ. ಇನ್ನುಮುಂದೆ ಶಿಕ್ಷಕರು ಆ ಸೂಚನೆಗಳನ್ನು ಶಿಕ್ಷಣದಲ್ಲಿ ಅನುಸರಿಸುತ್ತಾರೋ ಇಲ್ಲವೋ ಎಂಬದನ್ನು ಶಾಲಾಧಿಕಾರಿಗಳು ಶಾಲೆಗಳನ್ನು ತಪಾಸಿಸುವದಕ್ಕೆ ಹೋದಾಗ್ಗೆ ನೋಡುವರು; ಶಿಕ್ಷಕರು ಆ ಸೂಚನೆಗಳನ್ನು ಎಷ್ಟರಮಟ್ಟಿಗೆ ಓದಿ ತಿಳಕೊಂಡಿರುವರೆಂಬದನ್ನು ಪರೀಕ್ಷಿಸುವರು; ಮತ್ತು ಆ ಸೂಚನೆಗಳನ್ನು ಅಲಕ್ಷ ಮಾಡಿದವರ ಬಗ್ಗೆ ತಮ್ಮ ಇನಸ್ಪೆಕ್ಶನ್ ರಿಪೋರ್ಟುಗಳಲ್ಲಿ ಉಲ್ಲೇಖಿಸುವರು ಅದರಂತೆಯೇ, ಶಾಲೆಯ ಪರಿಸ್ಥಿತಿಯನ್ನು ನೋಡಲಾಗಿ, ಯಾವ ಶಿಕ್ಷಕರು ಆ ಸೂಚನೆಗಳನ್ನು ಶಿಕ್ಷಣವು ಪರಿಣಾಮಕರವಾಗುವಂತೆ ಮನಃಪೂರ್ವಕವಾಗಿ ಅನುಸರಿಸಿದಂತೆ ಕಂಡು ಬರುವದೋ ಅವರ ಬಗ್ಗೆ ಇನಸ್ಪೆಕ್ಶನ್ ರಿಪೋರ್ಟುಗಳಲ್ಲಿ ಶಿಫಾರಸು ಬರೆಯುವರು. ಇನ್ನು ಮೇಲೆ ಹೊಸದಾಗಿ ನೇಮಿಸಲ್ಪಡುವ ಅನ್‌ಟ್ರೇಂಡ್ ಶಿಕ್ಷಕರು ಉಪಾಧ್ಯಾಯರುಗೋಸ್ಕರ ಪ್ರಸಿದ್ಧ ಪಡಿಸಿದ ಸೂಚನೆಗಳನ್ನು ಯೋಗ್ಯರಾದ ಟ್ರೇಂಡ್ ಶಿಕ್ಷಕರ ಸಹಾಯದಿಂದ ಅವರನ್ನು ನೇಮಿಸಿದಂದಿನಿಂದ ಮೂರು ತಿಂಗಳುಗಳಲ್ಲಿ ಚನ್ನಾಗಿ ಓದಿ ತಿಳಕೊಳ್ಳತಕ್ಕದ್ದು. ಈ ಪ್ರಕಾರ ತಿಳಕೊಳ್ಳದೆ ಇದ್ದವರು ಶಿಕ್ಷಕರ ಕೆಲಸದಿಂದ ಬಿಡುಗಡೆ ಮಾಡಲ್ಪಡಬಹುದು.

ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣಭಾಗ.
ಇವರ ಆಫೀಸು ತಾ॥ ೨೫-೧-೧೯.

V. B. JOSHI.
ಅ. ಎಜ್ಯುಕೇಶನಲ್ ಇನಸ್ಪೆಕ್ಟರ, ದಕ್ಷಿಣಭಾಗ.

ಪ್ರಾಥಮಿಕ ಶಾಲೆಗಳ ಉಪಯೋಗಕ್ಕಾಗಿ ಸರಕಾರದವರು ಮಂಜೂರು ಮಾಡಿದ ಪುಸ್ತಕಗಳ ಪಟ್ಟಿಯನ್ನು ಎಲ್ಲ ಜನರ ಮಾಹಿತಿಗಾಗಿ ಕೆಳಗೆ ಕೊಟ್ಟದ್ದೇವೆ.

ನಂಬರು	ಪುಸ್ತಕದ ಹೆಸರು.	ಪುಸ್ತಕದ ಭಾಷೆ.	ಮಂಜೂರು ಮಾಡಿದ ಉದ್ದೇಶವು.	ಕಿಮ್ಮತ್ತು. ರು.	ಆ.	ಪೈ.	ಶರಾ.
	ದಾತಾರ ಆರ. ಎನ್. ವಿ. ಎನ್. ಹಾಗೂ ಜೀ. ಎನ್. ಪುಣೆ.						
೧	ಪ್ರಾಣಿಗಳ ಸಪ್ರಮಾಣ ಚಿತ್ರಪಟವು.	ಕನ್ನಡ	ಪ್ರಾಥಮಿಕ ಶಾಲೆಗಳ ಉಪಯೋಗಕ್ಕಾಗಿ	೧	೪	೦	
೨	ಆನೆಯ ಚಿತ್ರವು.	ಸದರ	ಸದರ	೦	೮	೦	
೩	ಕುದುರೆಯ ಚಿತ್ರವು	ಸದರ	ಸದರ	೦	೮	೦	
೪	ಹುಲಿಯ ಚಿತ್ರವು	ಸದರ	ಸದರ	೦	೮	೦	
	ಅಹಮ್ಮದಲ್ಲೀಖಾನ ಗ್ವಾಲೇರ.						
೫	ಅತಾಲೀಖೆ ನಿಸ್ವಾನ ೧ನೇಭಾಗ ಅಂಕಗಣಿತ	ಉರ್ದು	ಉರ್ದು ಹೆಣ್ಣುಮಕ್ಕಳ ಶಾಲೆಗಳಲ್ಲಿ ಇನಾಮು ಕೊಡುವದಕ್ಕಾಗಿ.	೦	೮	೦	
೬	ಸದರ ೨ನೇಭಾಗ ಸೂಪಶಾಸ್ತ್ರ	ಸದರ	ಸದರ	೦	೧೧	೦	

೭	ಸದರ ೩ನೇಭಾಗ ಕತ್ತರಿಸುವದೂ ಹೊಲಿಯುವದೂ.	ಸದರ	ಸದರ	೦	೮	೦	
೮	ಸದರ ೪ನೇಭಾಗ ಪತ್ರಲೇಖನವೂ ನಿಬಂಧವೂ	ಸದರ	ಸದರ	೦	೬	೦	
೯	ಸದರ ೫ನೇಭಾಗ ಡ್ರಾಯಿಂಗ (ಫ್ರೀಹ್ಯಾಂಡ)	ಸದರ	ಸದರ	೦	೬	೦	
೧೦	ಸದರ ೬ನೇಭಾಗ ಅರಿವೆಗಳಿಗೆ ಬಣ್ಣ ಕೊಡುವದು	ಸದರ	ಸದರ	೦	೪	೦	
೧೧	ಸದರ ೭ನೇಭಾಗ ಜರತಾರಿ ಕಸೂತಿ	ಸದರ	ಸದರ	೦	೫	೦	
೧೨	ಸದರ ೮ನೇಭಾಗ ಉಣ್ಣೆ ಹಾಗೂ ರೇಸಿಮೆಯ ಕಸೂತಿ	ಸದರ	ಸದರ	೦	೧೦	೦	
೧೩	ಸದರ ೯ನೇಭಾಗ ಮಾನವ ಶರೀರ ಶಾಸ್ತ್ರ	ಸದರ	ಸದರ	೦	೧೦	೦	
೧೪	ಸದರ ೧೦ನೇಭಾಗ ಗೃಹವ್ಯವಸ್ಥೆ	ಸದರ	ಸದರ	೦	೧೨	೦	
	ಫೆರೋಜ ಉದ್ದೀನ ಎಮ್ ಆ್ಯಂಡ ಸನ್ಸ ಲಾಹೋರ						
೧೫	ತಕ್ಷ್ಯವೋತಾಜಿ ಹಿಂದ	ಸದರ	ಉರ್ದು ಶಾಲೆಗಳಲ್ಲಿ ಇನಾಮು ಗಾಗಿ.	೨	೦	೦	
	ಫ್ಮೈಝೀ. ಝೆಡ. ಬಿ. ರಾಹತ						
೧೬	ಸ್ಕೈರೆ ಯೂರೋಪ	ಸದರ	ಉರ್ದು ಶಾಲೆಗಳಲ್ಲಿ ಲಾಯಬ್ರರಿಯ ಹಾಗೂ ಇನಾಮುಗಾಗಿ.	೩ ೨	೦ ೮	೦ ೦	ಎರಡು ತರದವು.
	ಗುಂಡ. ಬಿ. ಬಿ. ಅಹಮ್ಮದನಗರ						
೧೭	ಹಿಂದುಸ್ತಾನದ ಪ್ರಾಕೃತಿಕ ಸಕಾಶೆ.	ಸದರ	ಉರ್ದು ಶಾಲೆಗಳ ಉಪಯೋಗಕ್ಕಾಗಿ	೧೦	೦	೦	

	ಖಾನಬಹಾದ್ದೂರ ಝುಕ ಉಲ್ಲಾ ಶಮುಸುಲ ಉಲ್ಲಾಮುಹಮ್ಮದ					
೧೮	ಏಸಿನೇ ಕೈಸರಿ	ಉರ್ದು	ಉರ್ದು ಶಾಲೆಗಳಲ್ಲಿ ಲಾಯುಬ್ರರಿಗಾಗಿಯೂ ಇನಾಮುಗಾಗಿಯೂ	೧	೦	೦
೧೯	ಕರ್ಝುನ ನಾಮಾ	ಸದರ	ಸದರ	೧	೦	೦
೨೦	ಮಹರೇಬಾತೆ ಅಝೀಮು	ಸದರ	ಸದರ	೦	೪	೦
೨೧	ಸೂನ್ಹೆ ಉಮರಿ	ಸದರ	ಸದರ	೦	೦	೦
೨೨	ತಾರೀಖೆ ಉರೂಜಿ ಅಹದೇ ಸುಲ್ತಾನತೆ ಇಂಗ್ಲಿಸಿಯೇ ಹಿಂದ ಬಹಾರೆ ಶಾಹಿನ ಶಾಹೆ ಹಜರತ ಅಲಿಯಾ ಮಲೀಕೇವೋಕಿ ಝುಮಾ ವಿಕ್ಟೋರಿಯಾ ಕೈಸರೆ ಹಿಂದ ಬೇ ಅಲ್ಕಥಾ	ಸದರ	ಸದರ	೨	೮	೦
೨೩	ಸದರ ಹಿಂದ	ಸದರ	ಸದರ	೩	೦	೦
೨೪	ತಾರೀಖೆ ಉರುಜಿ ಸಲ್ತನತೆ ಇಂಗ್ಲಿಸೆಯೇ ಹಿಂದ ಕಬಲಅಝು ಅಹದೇ ಸಲ್ತನತೆ ಹಜರತ ಅಲಿಯಾ ಮಲೀಕೆವೋಅಝು ಝುಮಾ ಕೈಸರಿ ಹಿಂದ	ಸದರ	ಸದರ	೦	೮	೦
	ನಾನಕ ಪ್ರಸಾದ ಕಾನಪುರ					
೨೫	ಉರ್ದು ಸಿಬಂಧ ೧ನೇಭಾಗ	ಉರ್ದು	ಸದರ	೦	೮	೦
	ರಾಯಬಹಾದ್ದೂರ ಪಂಡಿತ ನಥೂರಾಮ ಮಹಿಲಪೂರ ಹೊನಿಯರಪೂರ					
೨೬	ಬಾಗಬಾಸಿಪೊಝುರ ಯುತ್ಕರಿಸಾಲಾ	ಉರ್ದು	ಸದರ	೧	೦	೦

	ತಯಬ ಕೇ. ಎಮ್ಮ.ಲ್ಯಾಂಡ ತಹೀರ ಎಚ್. ಎಮ್ಮ ಭಿವಂಡಿ ಠಾಣೆ						
೨೭	ಉರ್ದು ಕಾಪಿಬುಕ್ಕ ೧-೨	ಉರ್ದು	ಉರ್ದು ಶಾಲೆಗಳ ಉಪಯೋಗಕ್ಕಾಗಿ	೦	೧	೦	ಪ್ರತಿಯೊಂದಕ್ಕೆ
	ದಿ ಆನರೇಬಲ ಖಾನಬಹಾದ್ದೂರ ಮೀರ ಆಸದ ಅಲ್ಲಿ ಅಸದ ಮಂಜೀಲ ವೇಪರ್ಗ ಮದ್ರಾಸ						
೨೮	ಮೋಯ ಶೀರಾತ	ಉರ್ದು	ಉರ್ದು ಶಾಲೆಗಳಲ್ಲಿ ಲಾಯಬ್ರರಿಗಾಗಿಯೂ ಇನಾಮುಗಾಗಿಯೂ.	೨	೦	೦	

ಡಾಯರೆಕ್ಟರ ಆಫ್ ಪಬ್ಲಿಕ ಇನ್ಸಟ್ರಕ್ಶನರ ಆಫೀಸು ಪುಣೆ.
ತಾರೀಖು ೧೪ ನವಂಬರ ೧೯೧೪

ವ್ಹಿ. ಎಮ್ಮ. ಡಿಕೆ.
ಅಕ್ಟಿಂಗ ಹೆಡ್. ಅಸಿಸ್ಟೆಂಟ.
ಫಾರ ಡೆಪ್ಯೂಟಿ ಡಾಯರೆಕ್ಟರ ಆಫ್ ಪಬ್ಲಿಕ ಇನ್ಸಟ್ರಕ್ಶನ್

ಶಾಲಾಪತ್ರಿಕೆ.

ಪುಸ್ತಕ ೫೧ | ಏಪ್ರಿಲ್ ೧೯೧೫ | ಸಂಚಿಕೆ ೪

ಉಪಗುಪ್ತ.

ಇದು ಅಶೋಕ ಮಹಾರಾಜನ ಕಾಲದಲ್ಲಿ ಮುಖ್ಯ ಧರ್ಮಾ ಚಾರ್ಯನೆಂದು ಪ್ರಸಿದ್ಧಿಯನ್ನು ಹೊಂದಿದ ಉಪಗುಪ್ತನ ಚರಿತ್ರವು. "ಅಶೋಕ" ಎಂಬ ಗ್ರಂಥದಿಂದ ಉದ್ಧರಿಸಿ ಬರೆಯಲ್ಪಟ್ಟಿರುವದು.

ಪ್ರಾಚೀನ ಬೌದ್ಧ ಗ್ರಂಥಗಳಲ್ಲಿ ಕೆಳಗೆ ಬರೆದ ಮಹಾಪುರುಷರು ಬೌದ್ಧ-ಧರ್ಮಗುರುಗಳೆಂದು ಪ್ರಸಿದ್ಧರಾಗಿರುವರು. ಅವರು ಮಹಾ ಕಾಶ್ಯಪ, ಆನಂದ, ಸನವಾಸ, ಉಪಗುಪ್ತ, ಧ್ರುಟಕ, ಮಿಚ್ಛಕ, ವಸು ಮಿತ್ರ, ಬುದ್ಧನಂದಿ, ಬುದ್ಧಮಿತ್ರ, ಪಾರ್ಶ್ವ, ಪುಣ್ಯಯಶ, ಅಶ್ವಘೋಷ, ವಿಮಲ, ನಾಗಾರ್ಜುನ, ಕಣ್ಣದೇವ ಅಥವಾ ಆರ್ಯದೇವ, ಅಸಂಗ, ಸುಬಂಧು, ಮುಂತಾದ ಮಾನವಜಾತಿಯ ಕಲ್ಯಾಣಕ್ಕಾಗಿ ಬೌದ್ಧ ಧರ್ಮವನ್ನು ಪ್ರಚಾರಪಡಿಸುವ ಉದ್ದೇಶದಿಂದ ಇವರು ಕಾಲಕಾಲಕ್ಕೆ ಭೂತಲದಲ್ಲಿ ಅವತರಿಸಿದರು. ಉಪಗುಪ್ತನು ಇವರಲ್ಲಿ ನಾಲ್ಕನೆಯ ವನು. ಮಹಾಯಾನವೆಂಬ ಬೌದ್ಧಗ್ರಂಥದಲ್ಲಿ, ಬುದ್ಧದೇವನೂ ಆನಂ ದನೂ ಉಪಗುಪ್ತನು ಅವತರಿಸುವನೆಂದು ಭವಿಷ್ಯವನ್ನು ಹೇಳಿದಂತೆ ವರ್ಣನೆಯುಂಟು. ಈತನು ಅಶೋಕ ಚಕ್ರವರ್ತಿಯ ಗುರುವೂ ಧರ್ಮೋ ಪದೇಶಕನೂ ಆಗಿದ್ದನು. ಈತನ ಅಸಾಧಾರಣವಾದ ವೈರಾಗ್ಯವೂ, ಘೋರವಾದ ಸಾಧನವೂ, ವಿಲಕ್ಷಣವಾದ ಪ್ರತಿಭೆಯೂ, ಧರ್ಮಪ್ರ ಚಾರಕ್ಕಾಗಿ ಮಾಡಿದ ನಿಸ್ಸೀಮ ಪರಿಶ್ರಮವೂ ಮಹಾಯಾನಗ್ರಂಥದಲ್ಲಿ ಚನ್ನಾಗಿ ವರ್ಣಿಸಲ್ಪಟ್ಟಿರುವವು. ಅಶೋಕನ ಜೀವಮಾನದಲ್ಲಿ ಉಪಗು ಪ್ತನ ಸಂಬಂಧವು ಬಹಳ ನಿಕಟವಾಗಿರುವದು.

ಮೂರನೆಯ ಧರ್ಮಗುರುವಾದ ಸನವಾಸನು ಚಂಪಾನಗರದಲ್ಲಿ ಮಹಾಪರಿನಿರ್ವಾಣವನ್ನು ಹೊಂದಲು, ಉಪಗುಪ್ತನು ಆತನ ಪೀಠದಲ್ಲಿ

ಕುಳಿತು ಬೌದ್ಧಧರ್ಮವನ್ನು ಹಬ್ಬಿಸುವದಕ್ಕಾಗಿ ದೇಶಸಂಚಾರಮಾಡ ಹತ್ತಿದನು. ಅವನು ಭಾಗೀರಥಿಯನ್ನು ದಾಟ ವಿದೇಹ ನಗರದ ವಸುಸಾರನು ಕಟ್ಟಿಸಿದ ವಿಹಾರದಲ್ಲಿ ಕೆಲವು ದಿವಸ ವಾಸಮಾಡಿದನು. ಮುಂದೆ ಗಂಧಾರ ಪರ್ವತಕ್ಕೆ ಹೋಗಿ, ಎಷ್ಟೋ ಜನ ಸ್ತ್ರೀಪುರುಷರಿಗೆ ಬೌದ್ಧ ಧರ್ಮ ದೀಕ್ಷೆಯನ್ನು ಕೊಟ್ಟು, ಮಥುರೆಗೆ ನಡೆದನು. ಅಲ್ಲಿ ನಟ ಭಟ್ಟ ಎಂಬ ಇಬ್ಬರು ಕಟ್ಟಿಸಿದ ವಿಹಾರದಲ್ಲಿ ಕೆಲವು ದಿವಸ ವಾಸಮಾಡಿದನು ಮತ್ತು ಅಲ್ಲಿಯೇ ಮಾರನನ್ನು ಸಂಗ್ರಾಮದಲ್ಲಿ ಜಯಿಸಿ, ಸಾವಿರಾರು ಜನರನ್ನು ಬೌದ್ಧಧರ್ಮದಲ್ಲಿ ತೆಗೆದುಕೊಂಡನು. ಮುಂದೆ ಮಹೇಂದ್ರ ಚಮಸ ಎಂಬ ಇಬ್ಬರು ರಾಜರ ಆಳಿಕೆಯಲ್ಲಿ ಸಿಂಧು ದೇಶಕ್ಕೆ ಹೋಗಿ ಅಲ್ಲಿರುವ ಹಂಸಾರಾಮದಲ್ಲಿ ವಾಸಮಾಡಿದ್ದನು. ಅಲ್ಲಿಂದ ಕಾಶ್ಮೀರಕ್ಕೆ ಪ್ರಯಾಣಮಾಡಿ, ಅಲ್ಲಿ ಹಲವು ಅಮಾನುಷಕೃತಿಗಳನ್ನು ತೋರಿಸಿ, ಅಲ್ಲಿಯ ಜನರನ್ನು ಬೆರಗುಬಡಿಸಿದನು. ತಿಬೇಟದ ಲಾಮಾ ತಾರಾನಾಥನ ಭಾರತೀಯ ಬೌದ್ಧಧರ್ಮವೆಂಬ ಪುಸ್ತಕದಲ್ಲಿ, ಉಪಗುಪ್ತನ ಇತಿಹಾಸವು ವರ್ಣಿಸಲ್ಪಟ್ಟದೆ. ತಿಬೇಟದ ಗ್ರಂಥಗಳಲ್ಲಿ ಉಪಗುಪ್ತ ಎಂಬ ಹೆಸರಿಗೆ ಬದಲು, "ರತಿಗುಪ್ತ"ಎಂಬದಾಗಿಯೂ ಉಲ್ಲೇಖವುಂಟು. ಆ ಗ್ರಂಥಗಳಲ್ಲಿ ಆತನು ಕಾಶ್ಮೀರವಾಸಿಯೆಂದು ವರ್ಣಿತವಾಗಿದೆ. ಮಂಗೋಲಿಯದ ಕೆಲಕೆಲವು ಪುಸ್ತಕಗಳಲ್ಲಿಯೂ ಆತನ ಉಲ್ಲೇಖವುಂಟು. ನೇಪಾಳದೇಶದ ಗ್ರಂಥಗಳಲ್ಲಿ ಉಪಗುಪ್ತನು ಅಶೋಕನ ಸಮಕಾಲೀನನೆಂದೂ, ಪಾಟಲಿಪುತ್ರ ನಗರದ ಮುಖ್ಯ ಧರ್ಮ ಗುರುವೆಂದೂ ವರ್ಣನೆಯುಂಟು. ಉಪಗುಪ್ತನು ಮಥುರೆಯಲ್ಲಿ ಹೆಚ್ಚಾಗಿ ವಾಸಮಾಡುತ್ತಿದ್ದನು. "ಹ್ಯೂವೆನ್‌ತ್ಸಾಂಗನು" ಮಥುರೆಗೆ ಬಂದಾಗ ಹತ್ತು ಸಂಘಾರಾಮಗಳನ್ನು ನೋಡಿದ್ದನು. ಅವುಗಳಲ್ಲಿ ಸುಮಾರು ಎರಡು ಸಾವಿರ ಭಿಕ್ಷುಗಳು ವಾಸವಾಗಿದ್ದರು. ಮಥುರೆಯ ಸಂಘದಲ್ಲಿ ಹೀನಯಾನಕ್ಕೂ * ಮಹಾಯಾನಕ್ಕೂ ಸಮವಾಗಿ ಆದರವಿತ್ತು. ಅಶೋಕನು ಮಥುರೆಯಲ್ಲಿ ಮೂರು ಸ್ತೂಪಗಳನ್ನು ಕಟ್ಟಿಸಿದ್ದನು. ಮಹಾತ್ಮರಾದ ತಥಾಗತ, ಸಾರಿಪುತ್ರ, ಮೌದ್ಗಲಿಪುತ್ರ, ಪೂರ್ಣಮೈತ್ರಾಣಿಪುತ್ರ, ಉಪಾಲಿ

---

* ಇವೆರಡು ಬೌದ್ಧಧರ್ಮದ ಸಂಪ್ರದಾಯಗಳು.

ಆನಂದ, ರಾಹುಲ, ಮಂಜುಶ್ರೀ ಮೊದಲಾಗಿ ಹಲವು ಜನ ಬೋಧಿಸತ್ವರ ಸ್ಮಾರಕಸ್ತೂಪಗಳು ಅಲ್ಲಿ ಇದ್ದವೆಂದು ಚೀನ ಪ್ರವಾಸಿಗಳು ಉಲ್ಲೇಖಿಸಿದ್ದಾರೆ. ಪಟ್ಟಣದ ಪೂರ್ವಕ್ಕೆ ಅರ್ಧ ಹರದಾರಿಯ ಮೇಲೆ ಸಂಘಾರಾಮಪರ್ವತವಿತ್ತು. ಈ ಪರ್ವತವನ್ನು ಕೊರೆದು, ಭಿಕ್ಷುಗಳ ವಾಸಕ್ಕಾಗಿ ಗುಹೆಗಳನ್ನು ನಿರ್ಮಿಸಿದ್ದರು. ಈ ಆರಾಮದ ಬಾಗಿಲಿಗಿದ್ದ ಒಂದು ಇಳುಕಲುವನ್ನು ದಾಟಿ ಹ್ಯೂವೇನ್‌ತ್ಸಾಂಗನು ಆ ಗುಹೆಗಳಲ್ಲಿ ಪ್ರವೇಶಿಸಿದ್ದನು. ಉಪಗುಪ್ತನು ಈ ಮಾರ್ಗವನ್ನು ಮಾಡಿಸಿದ್ದನು.

ಹ್ಯೂವೇನ್‌ತ್ಸಾಂಗನ ವಿವರಣೆಯನ್ನೋದಲು ಮಥುರೆಯು ಒಂದು ಮುಖ್ಯವಾದ ಬೌದ್ಧಕ್ಷೇತ್ರವಿತ್ತೆಂದೂ, ಇದೇ ಉಪಗುಪ್ತನ ಲೀಲಾಭೂಮಿಯೆಂದೂ ತಿಳಿಯುವದು. ಉಪಗುಪ್ತನು ಹದಿನೇಳನೆಯ ವರ್ಷ ಭಿಕ್ಷುಧರ್ಮವನ್ನು ಸ್ವೀಕರಿಸಿ, ೨೦ನೆಯ ವರುಷ ಅರ್ಹತ್ವವನ್ನು ಹೊಂದಿದನು. ಮಹಾಯಾನ ಗ್ರಂಥದಲ್ಲಿ ಉಪಗುಪ್ತನು ಬುದ್ಧದೇವನ ಮಹಾಪರಿ ನಿರ್ವಾಣವಾದ ನೂರುವರ್ಷಗಳ ತರುವಾಯ ಅಶೋಕನ ಕಾಲದಲ್ಲಿ ಇದ್ದನೆಂದು ಹೇಳಿರುವದು. ಹ್ಯೂವೇನ್‌ತ್ಸಾಂಗನ ಪ್ರವಾಸ ವೃತ್ತಾಂತದಲ್ಲಿ:— ಉಪಗುಪ್ತನು ಸಂಘಾರಾಮ ಪರ್ವತದ ಉತ್ತರದಲ್ಲಿ ಇಪ್ಪತ್ತು ಫುಟು ಎತ್ತರವಾಗಿಯೂ, ಮೂವತ್ತು ಫೂಟು ವಿಶಾಲವಾಗಿಯೂ ಇರುವ ಒಂದು ಕಲ್ಲಿನ ಕಟ್ಟೆಯ ಮೇಲೆ ಧರ್ಮೋಪದೇಶ ಮಾಡುತ್ತಿದ್ದನೆಂದು ವರ್ಣಿಸಲ್ಪಟ್ಟಿದೆ. ಆತನು * ಅಲಕ್ಷಣಿಕ ಬುದ್ಧನೆಂದೂ ಭಿಕ್ಷುಗಳಲ್ಲಿ ಸನ್ಮಾನಿತನಾಗಿದ್ದನು. ಬೌದ್ಧಗುರುವಾದ ಉಪಗುಪ್ತನ ಮುಖಮಂಡಲವಲ್ಲಿ ಅನುಪಮವಾದ ಪ್ರತಿಭೆ, ತೀಕ್ಷ್ಣಬುದ್ಧಿ, ಅತಿಶಯ ತೇಜಸ್ವಿತೆ ಇವು ಒಡೆದು ಕಾಣುತ್ತಿದ್ದವು. ಈತನು ಧರ್ಮಾನುರಾಗದಿಂದ ಸ್ಥವಿರ ಸನವಾಸನ ಬಳಿಗೆ ಬರಲು ಆಗ ಆತನು— 'ವತ್ಸಾ, ಚಿತ್ತಶುದ್ಧಿಯು ಧರ್ಮಸಾಧನದ ಮೂಲವು. ನಿನ್ನ ಮನಸಿನಲ್ಲಿ ಕೆಟ್ಟವಿಚಾರವು ಬಂದಾಗ, ನೀನು ಒಂದು ಪಾತ್ರೆಯಲ್ಲಿ ಒಂದು ಕರಿಯ ಹರಳನ್ನು ಹಾಕು; ಮತ್ತು ಒಳ್ಳೆಯ ವಿಚಾರವು ಬಂದಾಗ ಅದೇ ಪಾತ್ರೆ

---

* ಚಿಹ್ನ (ಲಕ್ಷಣ) ಗಳಿಲ್ಲದ; ಬುದ್ಧದೇವನ ಶರೀರದಲ್ಲಿ ೩೨ ಮಹಾಪುರುಷ ಲಕ್ಷಣಗಳಿ

ಒಂದು ಬಿಳಿಯ ಹರಳನ್ನು ಹಾಕು. ಬೆಳಿಗ್ಗೆ ಎದ್ದಕೂಡಲೆ ಆ ಪಾತ್ರೆಯಲ್ಲಿಯ ಹರಳುಗಳನ್ನು ತೆಗೆದುಕೊಂಡು ಯಾವ ಬಣ್ಣದ ಹರಳುಗಳು ಹೆಚ್ಚಾಗಿವೆ. ನೋಡುತ್ತ ಹೋಗು " ಎಂದು ಹೇಳಿದನು. ಮೊದಲನೆಯ ದಿವಸ ಬಹುತರ ಕರಿಯ ಹರಳುಗಳಿಂದಲೇ ಪಾತ್ರೆಯು ತುಂಬಿದೆಯೆಂದು, ಕಂಡು ಬಂತು. ಎರಡನೇ ದಿವಸ ನೋಡುತ್ತಾನೆ:— ಬಿಳಿಯಬಣ್ಣದ ಹರಳುಗಳು ಮೊದಲನೆಯ ದಿವಸಕ್ಕಿಂತ ಸ್ವಲ್ಪ ಹೆಚ್ಚಿಗೆ ಅವೆ. ಈ ಪ್ರಕಾರ ಏಳನೆಯ ದಿವಸ ನೋಡಲು, ರಾತ್ರೆಯು ಬಿಳಿಯ ಹರಳುಗಳಿಂದಲೇ ತುಂಬಿತ್ತು. ಈ ರೀತಿಯಿಂದ ಉಪಗುಪ್ತನ ಚಿತ್ತಶುದ್ಧಿಯಾದದ್ದನ್ನು ಕಂಡು, ಸನವಾಸನು ಆತನನ್ನು ಶಿಷ್ಯನನ್ನಾಗಿ ಮಾಡಿಕೊಂಡನು. ಮತ್ತು ಅವನಿಗೆ ಧರ್ಮೋಪದೇಶವನ್ನು ಮಾಡಿದನು. ಸ್ವಲ್ಪ ದಿವಸಗಳಲ್ಲಿ ಉಪಗುಪ್ತನು ಶ್ರೋತಾಪತ್ತಿ, *ಫಲವನ್ನು ಹೊಂದಿದನು.

ಉಪಗುಪ್ತನ ಕೀರ್ತಿಯನ್ನು ಕೇಳಿ, ಒಮ್ಮೆ ಒಬ್ಬ ಸುಂದರಿಯಾದ ವಾರಾಂಗನೆಯು ತನ್ನ ಬಳಿಗೆ ಬರುವದಕ್ಕೆ ಆತನಿಗೆ ಆಮಂತ್ರಣ ಕಳಿಸಿದಳು. ಉಪಗುಪ್ತನು ಅದಕ್ಕೆ ಒಪ್ಪಲಿಲ್ಲ. ಮಥುರೆಯ ಒಬ್ಬ ತರುಣ ಶ್ರೀಮಂತನು ಈ ವೇಶ್ಯೆಯ ರೂಪಲಾವಣ್ಯಗಳಿಗೆ ಮರುಳಾಗಿ ಅವಳ ಮನಿಗೆ ದಿನಾಲು ಬರುತ್ತಿದ್ದನು. ಕೆಲವು ದಿವಸಗಳಾದ ತರುವಾಯ ಮತ್ತೊಬ್ಬ ಶ್ರೀಮಂತನಾದ ಪ್ರವಾಸಿಯು ಬಹುಮೂಲ್ಯವಾದ ಮುತ್ತು, ರತ್ನ ಮೊದಲಾದವುಗಳನ್ನು ತೆಗೆದುಕೊಂಡು ಈ ವೇಶ್ಯಾಸ್ತ್ರೀಯ ಮನೆಗೆ ಹೋದನು. ಆ ಪಾಪಿಷ್ಠೆಯು ದ್ರವ್ಯಲೋಭದಿಂದ ಆ ಪ್ರವಾಸಿಗೆ ಮರುಳಾಗಿ, ದಿನಾಲು ಬರುವ ತರುಣನನ್ನು ಮಧ್ಯರಾತ್ರಿಯಲ್ಲಿ ಕೊಂದು ಹೆಣವನ್ನು ಅಂಗಳದಲ್ಲಿ ಹುಗಿದಳು. ಆ ತರುಣನ ಬಳಗದವರು ಶೋಧ ಮಾಡುತ್ತ ಈ ವಾರಾಂಗನೆಯ ಮನೆಗೆ ಬಂದರು. ಅವಳ ಹಾವಭಾವಗಳನ್ನು ನೋಡುತ್ತಿರಲು ಅವರಿಗೆ ಸಂಶಯವು ಬರಲು ಅವರು ಮನೆಯ ಸುತ್ತಲು ಶೋಧ ಮಾಡುತ್ತ ಮಾಡುತ್ತ ಅಂಗಳದಲ್ಲಿ ಮಣ್ಣನ್ನು ಅಗಿದು ಹೆಣವನ್ನು ಹೊರಗೆ ತೆಗೆದರು. ಅರಸನು ಈ ಕ್ರೂರ

* ಯಾವ ಅವಸ್ಥೆಗೆ ಬರಲು ಮನುಷ್ಯನಿಗೆ ಏಳು ಜನ್ಮಗಳಾದ ಬಳಿಕ ನಿರ್ವಾಣವು ದೊರೆಯುವದೋ, ಆ ಅವಸ್ಥೆ.

ವಾದ ಕೊಲೆಯನ್ನು ಕೇಳಿ, ಆ ಜಾರೆಯ ಕಿವಿ-ಮೂಗುಗಳನ್ನು ಕೊಯ್ಸಿ ಪಟ್ಟಣದಿಂದ ಹೊರಗೆ ಹಾಕಿಸಿದನು. ರಾಜಸೇವಕರು ಅವಳನ್ನು ಒಂದು ಅರಣ್ಯದಲ್ಲಿ ಒಯ್ದು ಬಿಟ್ಟರು. ಉಪಗುಪ್ತನು ಸಂಚಾರ ಮಾಡುತ್ತ ಮಾಡುತ್ತ ಆ ಅರಣ್ಯಕ್ಕೆ ಒಮ್ಮೆ ಬಂದನು. ಆ ವಾರಾಂಗನೆಯ ಈ ಆಕಾರವನ್ನು ನೋಡಿ, ಅವಳನ್ನು ಕೇಳಿ, ಎಲ್ಲ ಸಂಗತಿಯನ್ನು ತಿಳಿದು ಕೊಂಡನು.

ಆ ವೇಶ್ಯೆಗೆ ಉಪಗುಪ್ತನ ಗುರುತು ಹತ್ತಲು ಅವಳು:– ನಾನು ಸುಂದರಿಯಾಗಿದ್ದಾಗ ನನ್ನ ಬಳಿಗೆ ಬರಬೇಕೆಂದು ನಿಮಗೆ ಎಷ್ಟೋ ಸಾರೆ ಪ್ರಾರ್ಥನೆ ಮಾಡಿಕೊಂಡೆನು. ಆಗ ನೀವು ಆ ಪ್ರಾರ್ಥನೆಗೆ ನಿರಾಕರಣ ಮಾಡಿದಿರಿ. ಈಗ ರಾಜಾಜ್ಞೆಯಿಂದ ನನ್ನ ಕಿವಿ ಮೂಗುಗಳು ಕೊಯ್ಯಲ್ಪಟ್ಟಿವೆ. ಈ ನನ್ನ ಅಮಂಗಲವಾದ ಕುರೂಪವನ್ನು ನೋಡಿ ಎಲ್ಲರೂ ನನ್ನನ್ನು ಬಿಟ್ಟಿರುವರು. ನನಗೆ ಈಗ ಮರಣವು ಸಮೀಪಿಸಿದೆ. ಈಗ ನನ್ನ ಬಳಿಗೆ ಬರಲು ಫಲವೇನು? ಎಂದು ಅಂದಳು. ಅದಕ್ಕೆ ಉಪಗುಪ್ತನು:– ಈ ಮೇರೆಗೆ ನಾನು ಯಾವ ದುಷ್ಟವಾಸನೆಯಿಂದಲೂ ನಿನ್ನ ಬಳಿಗೆ ಬಂದಿಲ್ಲ. ನಿನ್ನ ಈಗಿನ ಮನಸ್ಸಿನ ಸ್ಥಿತಿಯನ್ನು ತಿಳಿಯಲು ಬಂದಿರುವೆನು. ಆದರೆ ಈಗಲೂ ನೀನು ಕಾಲಕೂಟ ತುಂಬಿದ ಪಾತ್ರೆಯಂತೆ ನನಗೆ ತೋರುತ್ತೀ; ನಿನ್ನಲ್ಲಿ ಸೌಂದರ್ಯವಿತ್ತೆಂಬದು ನಿಜ; ಆದರೆ ಆ ಸೌಂದರ್ಯವೆಂಬ ಬೆಂಕಿಯಲ್ಲಿ ಎಷ್ಟೋ ಕಾಮಮೋಹಿತರಾದ ತರುಣರೆಂಬ ಪತಂಗಗಳು ಬಿದ್ದು ಭಸ್ಮವಾಗಿರಬಹುದು. ನಿಜವಾದ ಜ್ಞಾನವುಳ್ಳವರು ನಿನ್ನ ಸಹವಾಸದಿಂದ ಯಾವ ಆನಂದವನ್ನೂ ಹೊಂದಲಾರರು. ದೇಹದ ಸೌಂದರ್ಯವು ಸ್ಥಿರವಲ್ಲ. ಕುಷ್ಠರೋಗಗ್ರಸ್ತನಾದ ರೋಗಿಯಂತೆ ನೀನು ಈಗ ಪೀಡೆಯಿಂದ ವ್ಯಾಕುಲಳಾಗಿ ಪಶ್ಚಾತ್ತಾಪ ಪಡುತ್ತಿರುವೆ. ದುರ್ಮಾರ್ಗಕ್ಕೆ ಈ ಶೋಚನೀಯವಾದ ಪರಿಣಾಮವು ಒದಗತಕ್ಕದ್ದೇ ಸರಿ, ಎಂದು ಹೇಳಿದನು. ಉಪಗುಪ್ತನ ಉಪದೇಶ ಪೂರ್ಣವಾದ ಈ ತಿರಸ್ಕಾರದ ನುಡಿಗಳನ್ನು ಕೇಳಿ, ಆ ವಾರಾಂಗನೆಯ ಧರ್ಮನೇತ್ರವು ತೆರೆಯಿತು. ಮನೋವಾಕ್ಕಾಯಗಳಿಂದ ಅವಳು ಮುಕ್ತಿಮಾರ್ಗವನ್ನು ಹಿಡಿಯುವದಕ್ಕೆ ಏಕಾಗ್ರತೆಯನ್ನು ಸ್ವೀಕರಿಸಿದಳು. ಅತ್ಯಂತವಾದ ಇಚ್ಛಾಶಕ್ತಿಯ ಬಲದಿಂದ ಅವಳ ಹೃದಯವು ನಿರ್ಮಲವಾಯಿತು.

ಉಪಗುಪ್ತನು ಯೌವನದ ಮೊದಲ್ಲಿಯೇ ಕ್ಷಣಭಂಗುರವೂ, ದುಃಖಪೂರ್ಣವೂ ಆದ ಜಗತ್ತಿನ ವ್ಯಾಪಾರಗಳನ್ನು ನೋಡಿ ಸಂಸಾರದ ಭೋಗಗಳಲ್ಲಿ ವಿರಕ್ತನಾಗಿ "ಅನಾಗಾಮಿ" ಪದವನ್ನು ಹೊಂದಿದನು. ಇದೇ ನಿರ್ವಾಣದ ಪೂರ್ವಸ್ಥಿತಿಯು. ಉಪಗುಪ್ತನು ಸನವಾಸನ ಬಳಿಗೆ ಹೋದ ಕೂಡಲೆ ಆತನು ಅವನಿಗೆ ಭಿಕ್ಷುಧರ್ಮದ ದೀಕ್ಷೆಯನ್ನು ಕೊಟ್ಟನು. ಉಪಗುಪ್ತನು ಕೂಡಲೆ ಅರ್ಹತ್ವವನ್ನು ಹೊಂದಿದನು.

ಅಶೋಕಾವದಾನ ಗ್ರಂಥದಲ್ಲಿ ಈ ಪ್ರಕಾರ ಹೇಳಿರುವದು:— ಅಶೋಕನು ತೀರ್ಥಯಾತ್ರೆಗೆ ಹೊರಡುವದಕ್ಕೆ ಸ್ವಲ್ಪ ದಿವಸಗಳ ಮುಂಚೆ ಅಶೋಕ-ಉಪಗುಪ್ತರ ಸಮಾಗಮವಾಯಿತು. ಆಗ ಉಪಗುಪ್ತನು ತೀರ್ಥಯಾತ್ರೆಗಾಗಿ ಅಶೋಕನೊಡನೆ ಹೊರಟು ಆತನಿಗೆ ಪ್ರಸಿದ್ಧವಾದ ಬೌದ್ಧ ತೀರ್ಥಗಳನ್ನೆಲ್ಲಾ ತೋರಿಸಿದನು. ಇದರಿಂದ ಅಶೋಕನು ಆಯಾ ಸ್ಥಳಗಳಲ್ಲಿ ಹಲವು ಸ್ತೂಪಗಳನ್ನೂ ವಿಹಾರಗಳನ್ನೂ ಕಟ್ಟಿಸಿದನು. ಅಶೋಕನ ಬಳಿಗೆ ಬರುವ ಮುಂಚೆ ಉಪಗುಪ್ತನು ಮಥುರೆಯಲ್ಲಿ ವಾಸವಾಗಿದ್ದನು. ಆತನ ಉಪದೇಶವನ್ನು ಕೇಳಿ, ಅಸಂಖ್ಯ ಸ್ತ್ರೀಪುರುಷರು ಬೌದ್ಧಧರ್ಮವನ್ನು ಸ್ವೀಕರಿಸುತ್ತಿದ್ದರು. ಅಶೋಕನು ಆತನ ಗುಣಗಳನ್ನೂ, ಕೀರ್ತಿಯನ್ನೂ ಕೇಳಿ ಪಾಟಲೀಪುತ್ರಕ್ಕೆ ಬರಬೇಕೆಂದು ಉಪಗುಪ್ತನಿಗೆ ಹೇಳಿಕಳುಹಿದನು. ಆತನನ್ನು ಕರೆತರುವದಕ್ಕಾಗಿ ಪಾಟಲೀಪುತ್ರದಿಂದ ನಾವೆಯನ್ನು ಕಳುಹಿದನು. ಮತ್ತು ಆತನು ಅಲ್ಲಿಗೆ ಬಂದೊಡನೆ ಮಹಾ ವೈಭವದಿಂದ ಪಟ್ಟಣಕ್ಕೆ ಕರೆದುಕೊಂಡು ಬಂದನು. ಬಳಿಕ ಅಶೋಕನು ತೀರ್ಥಯಾತ್ರೆ[ಗೆ] ತನ್ನೊಡನೆ ಬರಬೇಕೆಂದು ಬೇಡಿಕೊಂಡನು. ಉಪಗುಪ್ತನು ಆನಂ[ದ]ದಿಂದ ಅದಕ್ಕೆ ಒಪ್ಪಿಕೊಂಡನು. ಅಶೋಕನು ಹೂಮಾಲೆಗಳು, ಪ[ರಿ]ಮಳದ್ರವ್ಯಗಳು,ಮೊದಲಾದ ಸಂಭಾರಗಳನ್ನು ತೆಗೆದುಕೊಂಡು ತೀರ್ಥಯಾತ್ರೆಗೆ ಹೊರಟನು.

ಪಾಟಲಿಪುತ್ರದಲ್ಲಿ ಒಂದು ದಿನ್ನೆಯ ಮೇಲೆ ಉಪಗುಪ್ತನ ಆಶ್ರಮವಿತ್ತು. ಇದರ ಬಳಿಯಲ್ಲಿಯೇ ಅಶೋಕನು ಭಿಕ್ಷುಗಳಿಗಾಗಿ ಕಲ್ಲಿನ ಆರಾಮಗಳನ್ನು ಕಟ್ಟಿಸಿದ್ದನು. ಆ ದಿನ್ನೆಗೆ ಈಗ "ಸಣ್ಣಗುಡ್ಡ" ಎಂದು ಕರೆಯುತ್ತಾರೆ.

ಚೀನ ದೇಶದ ಉಪಾಖ್ಯಾನಗಳನ್ನು ಓದಿದರೆ, ಉಪಗುಪ್ತನೇ ಅಶೋಕನಿಗೆ ಬೌದ್ಧಧರ್ಮದ ದೀಕ್ಷೆಯನ್ನು ಕೊಟ್ಟನೆಂದೂ, ಆತನೇ ಅಶೋಕನಿಗೆ ಬೋಧಿಸಿ ಹಲವು ಕಡೆಗಳಲ್ಲಿ ಸ್ತೂಪ-ವಿಹಾರಗಳನ್ನು ಕಟ್ಟಿಸಿದನೆಂದೂ, ಇದರಿಂದಲೇ ಪಾಟಲಿಪುತ್ರದಲ್ಲಿ ಎಲ್ಲಕ್ಕೂ ಮೊದಲು ಉತ್ತಮವಾದ ಕೈಗಾರಿಕೆಯ ಕೌಶಲ್ಯವುಳ್ಳ ಕುಕ್ಕುಟಾರಾಮ ಅಥವಾ ಅಶೋಕಾರಾಮವು ಕಟ್ಟಿಸಲ್ಪಟ್ಟಿತೆಂದೂ ತಿಳಿಯುತ್ತದೆ. ಕುಕ್ಕುಟಾರಾಮದಲ್ಲಿ ಅಶೋಕನೂ, ಉಪಗುಪ್ತನೂ ಕೂಡಿ ಮಾಡಿದ ಧರ್ಮಾಲೋಚನೆಯು * "ಗುಣಕಾರಂಡವ್ಯೂಹ" ಎಂಬ ಬೌದ್ಧ ಗ್ರಂಥವಾಯಿತು. ಉಪಗುಪ್ತನ ದೇಹತ್ಯಾಗದ ಸಂಬಂಧವಾಗಿ ಹಲವು ಪ್ರವಾದಗಳಿರುವವು. ಕೆಲವರು ಮಥುರೆಯಲ್ಲಿ ದೇಹಬಿಟ್ಟನೆಂದು ಹೇಳುತ್ತಾರೆ. ಒಂದು ಭಯಂಕರವಾದ ಭೂಕಂಪವಾಗಿ ಅದರಲ್ಲಿ ಉಪಗುಪ್ತನ ಅಂತವಾಯಿತೆಂದು ಜಪಾನದೇಶದಲ್ಲಿ ಒಂದು ಕಥೆಯು ಪ್ರಚಲಿತವಿರುವದು. ಉಪಗುಪ್ತನು ಈಗಲೂ ಜೀವಿಸಿರುವನೆಂದು ಬ್ರಹ್ಮದೇಶದವರು ಅನುತ್ತಾರೆ. ಬ್ರಹ್ಮದೇಶದಲ್ಲಿ ಉಪಗುಪ್ತನ ವಿಷಯವಾಗಿ ಹಲವು ಕಥೆಗಳಿರುವವು. ಅವೆಲ್ಲವು ಪಾಲಿ ಭಾಷೆಯಲ್ಲಿರುವವು. ಇದರಿಂದ ಉಪಗುಪ್ತನ ಸಂಬಂಧವಾಗಿ ಕೇವಲ ಮಹಾಯಾನಗ್ರಂಥದಲ್ಲಿ ಉಲ್ಲೇಖವಿದೆ ಎಂಬ ವಿಶ್ಲೇಯಲ್ಲ. ಪಾಲಿ ಗ್ರಂಥಗಳಲ್ಲಿಯೂ ಆತನ ಸಂಬಂಧವಾಗಿ ಉಪಾಖ್ಯಾನಗಳು ಪ್ರಚಲಿತವಾಗಿರುವವೆಂಬದು ಸ್ಪಷ್ಟವಾಗಿರುವದು. ಬ್ರಹ್ಮದೇಶನಿವಾಸಿಗಳು ಉಪಗುಪ್ತನು ಅಮರನು. ಅವನು ದಕ್ಷಿಣ ಮಹಾಸಾಗರದಲ್ಲಿ ಒಂದು ಹಿತ್ತಾಳಿಯ ಪ್ರಾಸಾದವನ್ನು ನಿರ್ಮಾಣ ಮಾಡಿ ಇದು ವರೆಗೆ ದೈವಶಕ್ತಿಯಿಂದ ಧ್ಯಾನನಿರತನಾಗಿ ಜಗತ್ತಿನ ಕಲ್ಯಾಣವನ್ನು ಮಾಡುತ್ತಾನೆಂದೂ, ನಿರ್ವಾಣವನ್ನವಲಂಬಿಸಿದವರಿಗೆ ತಮ್ಮ ತಮ್ಮ ಮಾರ್ಗದಲ್ಲಿ ಮುಂದುವರಿಯುವದಕ್ಕೆ ಅವರಿಗೆ ಸಹಾಯ ಮಾಡುತ್ತಾನೆಂತಲೂ ನಂಬುವರು. ಬ್ರಹ್ಮದೇಶದಲ್ಲಿ ಪ್ರತಿವರ್ಷ ವರ್ಷಾವಾಸದ ಕಡೆಯ ದಿವಸ (ಅಕ್ಟೋಬರ ತಿಂಗಳಲ್ಲಿ) ಉಪಗುಪ್ತನ ಹೆಸರಿನಿಂದ

* ಬ್ರಹ್ಮದೇಶನಿವಾಸಿಗಳು ಉಪಗುಪ್ತನಿಗೆ ಪೂಜೆಯನ್ನರ್ಪಿಸಿದರೆ ಜಡಿಮಳೆಯು ಹೋಗಿ, ಆಕಾಶವು ನಿರ್ಮಲವಾಗುವದೆಂದು ನಂಬುತ್ತಾರೆ.

ಒಂದು ಉತ್ಸವವು ನಡೆಯುವದು. ಈ ದಿವಸ ಪ್ರತಿಯೊಂದು ಮನೆಯು
ದೀಪಮಾಲೆಯಿಂದ ಶೋಭಿತವಾಗುವದು. ಬಹುತರ ಪ್ರತಿಯೊಬ್ಬ
ಬ್ರಹ್ಮದೇಶದ ಗೃಹಸ್ಥನು ಒಂದೊಂದು ಸಣ್ಣ ನಾವೆಯನ್ನು ಮಾಡಿ
ಅದನ್ನು ಪತ್ರಪುಷ್ಪಗಳು ದೀಪಗಳು ಇವುಗಳಿಂದ ಸಿಂಗರಿಸಿ ಹಾಡುತ್ತ
ಅದನ್ನು ನದಿಯಲ್ಲಿ ತೇಲಬಿಡುವನು. ಅವರ ವಿಶ್ವಾಸವೇನಂದರೆ:-
ಆ ನಾವೆಯು ಉಪಗುಪ್ತನ ಬಳಿಗೆ ಹೋಗಬೇಕು; ಮತ್ತು ಆತನನ
ಕರೆತರಬೇಕು. ಕೆಲಕೆಲವೆಡೆ ಉಪಗುಪ್ತನು ವಾರಣಾಸಿಯ ಒ
ಸುಗಂಧದ್ರವ್ಯ ಮಾರುವವನ ಮಗನೆಂದು ಹೇಳಿದೆ. ಹೀನಯಾ
ಬೌದ್ಧಗ್ರಂಥದಲ್ಲಿ ಉಪಗುಪ್ತನ ಬದಲು ಮೌದ್ಗಲಿಪುತ್ರ ಲಿಷ್ಯನ ಹೆಸ
ಮೇಲಿಂದಮೇಲೆ ಉಲ್ಲೇಖಿಸಿರುವದು. ಉಪಗುಪ್ತ ಲಿಷ್ಯನೂ, ಮೌದ್ಗ
ಪುತ್ರ ಲಿಷ್ಯನೂ ಬೇರೆ ಬೇರೆ ಅಲ್ಲ, ಒಂದೇ ವ್ಯಕ್ತಿಯೇಯೆಂದು ಹ
ವರು ಅಭಿಪ್ರಾಯ ಪಟ್ಟಿದ್ದಾರೆ. ಮೊದಲನೆಯ ಹೆಸರು ಮಹಾಯಾ
ಗ್ರಂಥದಲ್ಲಿ, ಎರಡನೆಯದು ಹೀನಯಾನ ಗ್ರಂಥದಲ್ಲಿ ಉಲ್ಲೇಖಿತವಾಗಿ
ವದು. ಏನೇ ಇರಲಿ, ಉಪಗುಪ್ತನು ಪಾಟಲಿಪುತ್ರಕ್ಕೆ ಬರುವದ
ಮೌದ್ಗಲಿ ಪುತ್ರ ಲಿಷ್ಯನು ಅಹೊಗಂಗಾ ಪರ್ವತದಿಂದ ಪಾಟಲಿಪುತ್ರ
ಎರುವದೂ ಒಂದೇ ಪ್ರಸಂಗದ ಪುನರಾವರ್ತನವೆಂದು ತೋರುತ್ತದೆ. ಈ
ಎರಡೂ ಘಟನೆಗಳಲ್ಲಿ ಬಹಳ ಸಾಮ್ಯವಿರುವದು. ಬುದ್ಧ ಚರಿತಕಾವ್ಯ
ಹ್ಯೂವೇನ್‌ತ್ಸಾಂಗನ ಪ್ರವಾಸವೃತ್ತಾಂತ, ಬ್ರಹ್ಮದೇಶದಲ್ಲಿಯ ಪ್ರಚ
ತವಾದ ಕಥೆಗಳು ಇವುಗಳಲ್ಲಿ ಉಪಗುಪ್ತನು ಅಶೋಕಮಹಾರಾಜ
ನುಪದೇಶಕನೂ, ಗುರುವೂ ಆಗಿದ್ದನೆಂದು ವರ್ಣಿಸಲ್ಪಟ್ಟಿರುವದು.

ಚಿಕ್ಕಮಕ್ಕಳ ಶಿಕ್ಷಣ.

(ಕಳೆದ ತಿಂಗಳ ಸಂಚಿಕೆಯ ೨೬ನೆಯ ಪುಟದಿಂದ ಮುಂದೆ ಸಾಗಿದ್ದು.)

ಸದ್ಯಕ್ಕೆ ನಮ್ಮ ದೇಶವು ಹೀನ ಸ್ಥಿತಿಯನ್ನು ಹೊಂದಲಿಕ್ಕೆ ಸುಶಿಕ್ಷಿತರಾದ ತಾಯಂದಿರು ಇಲ್ಲದಿರುವದು ಒಂದು ಮುಖ್ಯ ಕಾರಣವಾಗಿರುತ್ತದೆ. ನಮ್ಮ ನಡತೆಯಿಂದ ಹುಡುಗರ ನಡತೆಯು ಕೆಡುತ್ತದೆ. ಅವರ ಹಸನಾದ ಕೋಮಲ ಮನಸಿನಲ್ಲಿ ದುಷ್ಟ ಮನೋವಿಕಾರಗಳ ಬೀಜಗಳನ್ನು ಬಿತ್ತುತ್ತೇವೆಂಬ ಪರಿವೆಯಿಲ್ಲದೆ ನಮ್ಮ ದೇಶದ ತಾಯಂದಿರು ಮನಸಿಗೆ ಬಂದ ಹಾಗೆ ನಡೆಯುವರು. ತಾಯಿಯ ಈ ನಡತೆಯಿಂದ ಉಂಟಾದ ಮಕ್ಕಳ ಶೀಲವು ಮುಂದೆ ಏನು ಮಾಡಿದರೂ ತಿದ್ದಲಿಕ್ಕೆ ಸಾಧ್ಯವಾಗುವದಿಲ್ಲ. ಬಾಲಸ್ವಭಾವದಿಂದ ಹುಡುಗರು ಮಾಡುವ ತಪ್ಪುಗಳಿಗೆ ತಾಯಿತಂದೆಗಳು ಎಂದೂ ಸಿಟ್ಟಾಗಬಾರದು. ಅವರು ತಪ್ಪು ಮಾಡುವ ಕಾರಣಗಳನ್ನು ಶೋಧಿಸಿ ಯುಕ್ತಿಯಿಂದ ಅವರನ್ನು ಮರೆಮಾತಿಗೆ ಕೆಡವಬೇಕಲ್ಲದೆ ಅವರ ಕೋಮಲ ಮನಸ್ಸನ್ನು ನೋಯಿಸಬಾರದು. ಹುಡುಗರು ಏನಾದರೂ ಬೇಡಿದರೆ ಕೊಡುವಂತಿದ್ದರೆ ಒಂದೇಮಾತಿಗೆ ಕೊಟ್ಟು ಬಿಡಬೇಕು. ಹಾಗಿರದಿದ್ದರೆ ಮರೆಮಾತಿಗೆ ಹಾಕಿ ಆಟಕ್ಕೆ ಹಚ್ಚುವ ಪ್ರಯತ್ನ ಮಾಡಬೇಕು. ಬಹಳ ಹೊತ್ತಿನವರೆಗೆ ಕಾಡಿಸಿಕೊಂಡು ಕಡೆಗೆ ಕೊಟ್ಟರೆ ತಾವಾಗಿಯೇ ಅವರಿಗೆ ಚಂಡಿತನವನ್ನು ಕಲಿಸಿದಂತಾಗುವದು. ತಾಯಿತಂದೆಗಳು ತಮ್ಮ ಉದಾಹರಣೆಯಿಂದ, ತಾವು ಆಡಿದ ಮಾತಿಗೆ ತಪ್ಪಿ ನಡೆಯುವವರಲ್ಲೆಂಬ ಭಾವನೆಯನ್ನು ಹುಡುಗರ ಮನಸಿನಲ್ಲಿ ಪೂರ್ಣವಾಗಿ ಬಿಂಬಿಸತಕ್ಕದ್ದು. ಕೆಲವು ತಾಯಂದಿರು ಕೌತುಕದಿಂದ ತಮ್ಮ ಮಕ್ಕಳಿಗೆ ಅಭದ್ರ ಮಾತುಗಳನ್ನಾಡಲಿಕ್ಕೂ ಬಯ್ಯಲಿಕ್ಕೂ ಹೊಡೆಯಲಿಕ್ಕೂ ಕಲಿಸುವರು. ಇದರ ದುಷ್ಪರಿಣಾಮವನ್ನು ಮುಂದೆ ತಾವೇ ಅನುಭೋಗಿಸಬೇಕಾಗುವದು. ತಾಯಿಯ ಬಳಿಯಲ್ಲಿ ಪ್ರೀತಿಯೆಂಬ ಶ್ರೇಷ್ಠವಾದ ಸಾಧನವು ಇರುತ್ತದೆ. ಈ ಸಾಧನದಿಂದ ಅವಳು ಹುಡುಗರಲ್ಲಿ ಬೇಕಾದ ಗುಣಗಳನ್ನು ಹುಟ್ಟಿಸಬಲ್ಲಳು. ಬೇಕಾದ ವಿದ್ಯೆಯನ್ನು ಕಲಿಸಬಲ್ಲಳು.

ಏಳುವರು; ಸುಳ್ಳಿನಲ್ಲಿ ಮುಣುಮುಣುಗಿ ಏಳುವರು. ಇಂಥವರ ಮಾತಿನಲ್ಲಿ ಚಿಕ್ಕಮಕ್ಕಳ ನಂಬಿಗೆಯು ಎಂತು ಕೂಡ್ರುವದು? ಇದರಿಂದ ಪರರಿಗೆ ಹೇಳತಕ್ಕದ್ದು ಬೇರೆ; ನಾವು ನಡೆಯುತಕ್ಕದ್ದು ಬೇರೆ, ಎಂಬ ಭಾವನೆಯು ಹುಡುಗರ ಮನಸಿನಲ್ಲಿ ನೆಲಗೊಳ್ಳುವದು. ತಾವಾಗಿಯೇ ಅವರಿಗೆ ಡಾಂಭಿಕತನವನ್ನೂ ಕಪಟಾಚರಣೆಯನ್ನೂ ಕಲಿಸಿದಂತಾಗುತ್ತದೆ. ಸಂಸಾರದ ಕೊಳಸಾಟದಲ್ಲಿ ಬಿದ್ದು, ವಿಷಯಸುಖಕ್ಕೆ ಮೆಚ್ಚಿದ ಹರಿದಾಸನು ಪುರಂದರ ದಾಸರ ವಿರಕ್ತಿಪರವಾದ ನೂರಾರು ಪದಗಳನ್ನು ಹಾಡಿದರೂ ಅವುಗಳಿಂದ ಕೇಳುವವರ ಮನಸಿನ ಮೇಲೆ ಏನೂ ಪರಿಣಾಮವಾಗುವದಿಲ್ಲ. ಅದೇ ವಿರಕ್ತನಾದ ಮನುಷ್ಯನು ಒಂದು ಪದದೊಳಗಿನ ಒಂದು ಮಾತನ್ನು ಹೇಳಿದರೂ ಅದು ಬೇಕಾದಷ್ಟು ಕೆಲಸವನ್ನು ಮಾಡುತ್ತದೆ. ಅದೇ ಪ್ರಕಾರ ತಾಯಿತಂದೆಗಳಾಗಲಿ ಶಿಕ್ಷಕರಾಗಲಿ ಸದ್ವರ್ತನದಿಂದ ತಾವು ಪಡೆದ ಅನುಭವವನ್ನೇ ಹುಡುಗರಿಗೆ ಹೇಳಿ ತಮಗಾದ ಸುಖವನ್ನು ಅವರ ಅನುಭವಕ್ಕೆ ತಂದುಕೊಡತಕ್ಕದ್ದು.

ಹುಡುಗರು ಒಳ್ಳೇ ಹುಡುಗರ ಸಹವಾಸದಲ್ಲಿ ಇರಬೇಕೆಂದು ಹೇಳುವ ಉದ್ದೇಶವಾದರೂ ಇದೇ. ಈ ಜಗತ್ತು ಚಲೋದು, ಕಾಡು, ಇವುಗಳಿಂದ ಕೂಡಿಕೊಂಡಿರುತ್ತದೆ. ಸಾರಾಸಾರವಿಚಾರವುಳ್ಳ ಮನುಷ್ಯನು ಈ ಮಿಶ್ರಣದೊಳಗಿಂದ ಚಲೋದನ್ನು ಆರಿಸಿಕೊಳ್ಳತಕ್ಕದ್ದು. ವಿವೇಕಹೀನರು ಪರರ ಮಾತಿನ ಮೇಲೆ ವಿಶ್ವಾಸವಿಟ್ಟು ಪರಿಪರಿಯಿಂದ ಕೇಡಿಗೆ ಒಳಗಾಗುವರು. ಚಿಕ್ಕಮಕ್ಕಳಲ್ಲಿ ಈ ಸಾರಾಸಾರವಿಚಾರಶಕ್ತಿಯು ಇರುವದಿಲ್ಲ. ಅವರು ಕಂಡದ್ದೆಲ್ಲ ಒಳ್ಳೇದು ಎಂದು ತಿಳಿದು ಅನುಕರಣ ಮಾಡುವರು. ಇದಲ್ಲದೆ ತಮ್ಮ ಓರಿಗೆಯ ಗೆಳೆಯರ ಹಾಗೆ ತಾವೂ ಇರಬೇಕೆಂದು ಅವರ ಮನಸಿನಲ್ಲಿ ಇರುತ್ತದೆ. ಅದರಲ್ಲಿ ಅವರಿಗೆ ಒಂದು ಪ್ರಕಾರದ ಗೌರವವೆನಿಸುತ್ತದೆ. ಕೆಲಕೆಲವು ಉಡಾಳ ಹುಡುಗರು ಯಾವ ಕೆಲಸವನ್ನು ಮಾಡಲಿಕ್ಕೂ ಹೇಸುವದಿಲ್ಲ. ಈ ಹುಡುಗರು ಯಾರ ಅಂಕೆಯಲ್ಲಿಯೂ ಇರುವದಿಲ್ಲ. ತಮ್ಮ ಹುಡುಗರು ಇಂಥ ಹುಡುಗರ ಕೂಡ ಆಡಹತ್ತಿದರೆ ಅವರ ದುರ್ಗುಣಗಳು ಇವರಿಗೆ ಸಹಜವಾಗಿ ಹತ್ತುವವು. ದುರ್ವ್ಯಸನಗಳಂತೂ ಕೆಟ್ಟ ಸಂಗತಿಯ ಫಲಗಳಾಗಿವೆ. ಆದಕಾರಣ ಪಾಲಕರೂ ಶಿಕ್ಷಕರೂ ಮನೆಯ ಅಥವಾ

ಶಾಲೆಯ ಹೊರಗೆ ಹುಡುಗರು ಯಾರ ಸಂಗಡ ಆಡುತ್ತಾರೆ; ಯಾವ ಕೆಲಸಗಳನ್ನು ಮಾಡುತ್ತಿರುತ್ತಾರೆ. ಎಂಬದರ ಶೋಧವಿಟ್ಟು, ದುಷ್ಪರಿಣಾಮವಾಗದಂತೆ ಎಚ್ಚರಪಡಬೇಕು. ಆದರೆ ಸೆರೆಯಾಳಿನಂತೆ ಯಾವಾಗಲೂ ಅವರ ಮೇಲೆ ದೃಷ್ಟಿಯಿಡುವದು ಹಿತಕರವಲ್ಲ.

ಹುಡುಗರಲ್ಲಿ ಸದ್ವರ್ತನವು ನೆಲೆಗೊಳ್ಳಬೇಕಾದರೆ ಅವರು ಒಳ್ಳೇ ನಡತೆಗಳಂತೆ ಸತತವಾಗಿ ನಡೆಯಲಿಕ್ಕೆ ಬೇಕು. ಬಿಟ್ಟು ಬಿಟ್ಟು ಆಚರಿಸಿದರೆ ಏನೂ ಪ್ರಯೋಜನವಾಗುವದಿಲ್ಲ. ಅವರಿಗೆ ಅವುಗಳ ಚಟ ಬೀಳಲಿಕ್ಕೆ ಬೇಕು. ಚಟಗಳಿಂದಲೇ ಶೀಲವು ಸಿದ್ಧವಾಗುತ್ತದೆ. ಒಮ್ಮೆ ಶೀಲವು ಸಿದ್ಧವಾದಮೇಲೆ ಅದು ಬದಲಾಗುವದಿಲ್ಲ.

ನೀತಿಬೋಧವನ್ನು ಮಾಡುವದು:-ನೀತಿ ಶಿಕ್ಷಣವನ್ನು ಕೊಡುವದು ೩ನೆಯ ಸಾಧನವು. ಸರ್ವಕಾಲವೂ ಹುಡುಗರ ಕಣ್ಣೆದುರಿಗೆ ಒಳ್ಳೇ ನಡತೆಯ ಚಿತ್ರೆಯನ್ನೇ ಇಡುವದು ಅಸಂಭವವು. ಯಾಕೆಂದರೆ ಜಗತ್ತಿನಲ್ಲಿ ಕೆಟ್ಟ ನಡತೆಯ ಉದಾಹರಣೆಗಳು ಅವರ ದೃಷ್ಟಿಗೆ ಬಿದ್ದೇ ಬೀಳುತ್ತವೆ. ಅವುಗಳನ್ನು ಕಂಡು, ಹುಡುಗರು ತಮ್ಮ ಸ್ವಾಭಾವಿಕ ಕುತೂಹಲಕ್ಕನುಸರಿಸಿ ಅವುಗಳಂತೆ ಒಂದು ಸಾರೆಯಾದರೂ ನಡೆಯುವವರೇ. ಆದರೆ ಶಿಕ್ಷಕರೂ ಪಾಲಕರೂ ಆಟದಲ್ಲಿಯೂ, ಅಭ್ಯಾಸದಲ್ಲಿಯೂ, ಮನೆಯಲ್ಲಿಯೂ ಹುಡುಗರ ಕಡೆಗೆ ಲಕ್ಷವಿಟ್ಟು, ಕಾಲಕಾಲಕ್ಕೆ ದೃಷ್ಟಿಗೆ ಬೀಳುವ ಪ್ರಸಂಗಗಳಲ್ಲಿ ಏನಾದರೂ ನೀತಿಯನ್ನು ಹೊರಡಿಸಿ ಹೇಳುತ್ತಿರಬೇಕು. ವಾಚನಪಾಠಗಳನ್ನು ಹೇಳುವ ಕಾಲಕ್ಕೂ ಇತಿಹಾಸವನ್ನು ಕಲಿಸುವ ಕಾಲಕ್ಕೂ ನೀತಿಯನ್ನು ಕಲಿಸಲಿಕ್ಕೆ ಅನೇಕ ಪ್ರಸಂಗಗಳು ದೊರೆಯುವವು. ಅವುಗಳಿಗಿಂತ ವ್ಯವಹಾರದಲ್ಲಿ ಅವರ ನಡತೆಯನ್ನು ಅನುಲಕ್ಷಿಸಿ ನೀತಿಬೋಧವನ್ನು ಮಾಡಿದರೆ ಅದು ಅವರ ಮನಸಿನಲ್ಲಿ ಬಿಂಬಿಸುತ್ತದೆ.

ನೀತಿಯ ನಿಯಮಗಳನ್ನು ಹಾಕಿಕೊಟ್ಟು ಅವುಗಳಂತೆ ತಪ್ಪದೆ ನಡೆಯಹಚ್ಚುವದು:—ಇಂಥಿಂಥ ಹೊತ್ತಿನಲ್ಲಿ ಇಂಥ ಕೆಲಸಗಳನ್ನು ಮಾಡತಕ್ಕದ್ದೆಂಬ ಬಗ್ಗೆ ಒಮ್ಮೆ ನಿಯಮಿಸಿಕೊಟ್ಟರೆ ಹುಡುಗರು ಅವುಗಳಂತೆ ತಪ್ಪದೆ ನಡೆಯುವರು. ಅಚೇತನವಾದ ಸೃಷ್ಟಿಯ ಕಾರ್ಯಗಳು ಸಹ ಕೆಲವು ನಿಯಮದಿಂದ ನಡೆಯುತ್ತವೆ. ಹುಡುಗರ ಯಾವತ್ತು ಕಾರ್ಯ

ಗಳಿಗೆ ನಿಯಮವನ್ನು ಹಾಕಿಕೊಟ್ಟರೆ ಅವರಿಗೆ ಆಲಸ್ಯಕ್ಕೂ ದುರ್ವಿಚಾರಕ್ಕೂ ಆಸ್ಪದವು ಉಳಿಯುವದಿಲ್ಲ. ಅವರು ಹಾಕಿಕೊಟ್ಟ ನಿಯಮಗಳಂತೆ ನಡೆಯುವರೋ ಇಲ್ಲವೋ ಇದರ ಮೇಲ್ವಿಚಾರಣೆಯನ್ನು ಮಾಡಿದರೆ ಸಾಕು. ವಿಧಿನಿಷೇಧಗಳ ಬಗ್ಗೆ, ಮೇಲೆ ಮೇಲೆ ಹೇಳುವ ಪ್ರಸಂಗಗಳು ಬರುವದಿಲ್ಲ. ಹುಡುಗರಿಗೆ ಯಾವಾಗಲೂ ಏನಾದರೂ ಕೆಲಸವು ಬೇಕು. ನಾವು ಅವರಿಗೆ ಕೆಲಸವನ್ನು ನಿಯಮಿಸಿಕೊಡದಿದ್ದರೆ ಅವರು ತಮ್ಮ ಕೆಲಸವನ್ನು ತಾವೇ ಹುಡುಕಿಕೊಳ್ಳುವರು. ಕೆಟ್ಟ ಚಟಗಳು ಅವರಲ್ಲಿ ನೆಲಗೊಳ್ಳಲಿಕ್ಕೆ ಇದೇ ಕಾರಣವು.

ಕುಟುಂಬವೂ ಶಾಲೆಯೂ ಒಂದೊಂದು ಸ್ವತಂತ್ರ ಸಂಸ್ಥೆಯಾಗಿರುತ್ತವೆ. ಈ ಸಂಸ್ಥೆಗಳ ಕೆಲಸವು ಕೆಲವು ನಿಯಮಗಳಿಗನುಸರಿಸಿಯೇ ನಡೆಯಲಿಕ್ಕೆ ಬೇಕು. ಇಲ್ಲದಿದ್ದರೆ ಆ ಸಂಸ್ಥೆಗಳನ್ನು ನಡಿಸುವ ಚಾಲಕರಿಗೆ ಕ್ಷಣಕ್ಷಣಕ್ಕೆ ತೊಂದರೆಯಾಗುವದು. ಕುಟುಂಬದಲ್ಲಿ ದೊಡ್ಡವನಿಂದ ಸಣ್ಣವನ ವರೆಗೆ ಎಲ್ಲರೂ ತಮ್ಮ ಕರ್ತವ್ಯಗಳನ್ನು ಸರಿಯಾಗಿ ಮಾಡುತ್ತಿದ್ದರೆ, ಅಂದರೆ ಎಲ್ಲರೂ ನಿಯಮದಂತೆ ನಡೆದರೆ, ಎಲ್ಲರಿಗೂ ಸುಖವಾಗುವದು. ಯಾವತ್ತು ಕಾರ್ಯಗಳು ಯಂತ್ರಗಳಂತೆ ನಡೆಯುವವು. ಒಬ್ಬರಿಂದ ಮತ್ತೊಬ್ಬರಿಗೆ ಸಹಾಯವಾಗುವದಲ್ಲದೆ ತೊಂದರೆಯಾಗುವದಿಲ್ಲ. ಈ ತರದ ವ್ಯವಸ್ಥೆಯುಳ್ಳ ಕುಟುಂಬವು ಒಂದು ಸ್ವರಾಜ್ಯವೇ ಆಗುವದು. ಇದೇ ಪ್ರಕಾರ ಶಾಲೆಯ ಕೆಲಸವೂ ನಿಯಮಗಳಿಗನುಸರಿಸಿ ನಡೆಯುತ್ತಿರಬೇಕು. ಈ ಪ್ರಕಾರ ನಿಯಮಗಳಂತೆ ನಡೆಯುವ ಕುಟುಂಬಗಳಲ್ಲಿಯೂ ಶಾಲೆಗಳಲ್ಲಿಯೂ ಇರುವ ಹುಡುಗರಲ್ಲಿ ನಿಯಮಿತತನ ಸಮಯನಿಷ್ಠತೆ, ಚಟುವಟಿಕೆ, ಆಜ್ಞಾಪಾಲನ, ಪ್ರಾಮಾಣಿಕತನ, ಕರ್ತವ್ಯದಕ್ಷತೆ ಮೊದಲಾದ ಗುಣಗಳು ಹುಟ್ಟುವವು. ಮತ್ತು ಸ್ವೇಚ್ಛಾವರ್ತನ, ಅವ್ಯವಸ್ಥೆ ಇವುಗಳ ವಿಷಯವಾಗಿ ತಿರಸ್ಕಾರವು ಉತ್ಪನ್ನವಾಗುವದು. ಕುಟುಂಬದಲ್ಲಿಯೂ ಶಾಲೆಯಲ್ಲಿಯೂ ಉಪಯೋಗಿಸತಕ್ಕ ನಿಯಮಗಳನ್ನು ಕುಟುಂಬದ ಯಜಮಾನರೂ ಶಾಲೆಯ ಮುಖ್ಯ ಶಿಕ್ಷಕನೂ ತಮ್ಮ ತಮ್ಮ ಅನುಕೂಲತೆಯ ಪ್ರಕಾರ ಮಾಡಿಕೊಳ್ಳಬೇಕು. ಒಳ್ಳೇ ನಡತೆಯ ಸಂಬಂಧದಿಂದ ಹುಡುಗರು ಅನುಸರಿಸತಕ್ಕ

ಕೆಲವು ಸಾಮಾನ್ಯನಿಯಮಗಳು ಈಗಿನ ೭ನೇ ಪುಸ್ತಕದಲ್ಲಿ ಕೊಡಲ್ಪಟ್ಟವೆ. ಅವುಗಳಂತೆ ನಡೆಯುತಕ್ಕದ್ದು.

ನೀತಿಯು ಪುಸ್ತಕಗಳನ್ನು ಓದಲಿಕ್ಕೆ ಹಚ್ಚುವದು ನೀತಿಶಿಕ್ಷಣದ ಕಟ್ಟಕಡೆಯ ಸಾಧನವು. ಸದ್ಯಕ್ಕೆ ಇಂಥ ಪುಸ್ತಕಗಳೇ ಕನ್ನಡದಲ್ಲಿ ಇಲ್ಲ; ಮಹಾರಾಷ್ಟ್ರ ಭಾಷೆಯಲ್ಲಿ "ಭಾಲಭಾರತ," "ರಾಮಾಯಣ-ಮಹಾಭಾರತಗಳೊಳಗಿನ ಸುಲಭಕಥೆಗಳು" ಇತ್ಯಾದಿ ಅನೇಕ ಸಣ್ಣ ಸಣ್ಣ ಪುಸ್ತಕಗಳು ಸಣ್ಣ ಹುಡುಗರ ಉಪಯೋಗಕ್ಕಾಗಿಯೇ ಬರೆಯಲ್ಪಟ್ಟಿರುತ್ತವೆ. ಕನ್ನಡದ ಅಭಿಮಾನವುಳ್ಳವರು ಈ ನ್ಯೂನತೆಯನ್ನು ಪೂರ್ಣ ಮಾಡತೊಡಗಿರುವರು.

ಸಾರಾಂಶವೇನಂದರೆ, ಈ ಸಾಧನಗಳಿಂದ ಚಿಕ್ಕಮಕ್ಕಳಲ್ಲಿ, ಬೆಳಗಿನಲ್ಲಿ ಬೇಗ ಏಳುವದು, ಮೈಕೈಗಳನ್ನೂ ಅರಿವೆ ಅಂಚಡಿಗಳನ್ನೂ ಸ್ವಚ್ಛವಾಗಿಟ್ಟುಕೊಳ್ಳುವದು, ಯಾವಾಗಲೂ ಮನಸ್ಸನ್ನು ಸತ್ಕಾರ್ಯದಲ್ಲಿ ತೊಡಗಿಸಿರುವದು, ಕೈಕೊಂಡ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುವದು, ಹಿಡಿದ ಕೆಲಸವನ್ನು ಸತತ ಪ್ರಯತ್ನದಿಂದ ಕೊನೆಗಾಣಿಸುವದು, ತನ್ನ ಕೆಲಸದ ಹೊರೆಯನ್ನು ಪರರ ಮೇಲೆ ಹಾಕದಿರುವದು, ಪರರ ಕೂಡ ಸುಸ್ವಭಾವದಿಂದ ನಡಕೊಳ್ಳುವದು, ಕರ್ತವ್ಯದಕ್ಷತೆ, ಸ್ವಧರ್ಮನಿಷ್ಠೆ, ಸ್ವಾಭಿಮಾನ ಇವೇ ಮೊದಲಾದ ಸದ್ಗುಣಗಳ ಉಜ್ವಲ ಸ್ವರೂಪವನ್ನು ನೆಲೆಗೊಳಿಸಬೇಕು. ದುರ್ವ್ಯಸನಗಳು ಸೇರದಂತೆ ಎಚ್ಚರಪಡಬೇಕು.

ಧರ್ಮಶಿಕ್ಷಣವು.—ಧರ್ಮವು ಬಹುಶಃ ನೀತಿಯಲ್ಲಿ ಸಮಾವೇಶವಾಗುತ್ತದೆ. ಎಲ್ಲ ಧರ್ಮದ ತತ್ವಗಳು ನೀತಿಯು ತತ್ವಗಳನ್ನೇ ಅವಲಂಬಿಸಿರುತ್ತವೆ. ಜಾತಿಗೆ ಭೇದವಾದರೂ ನೀತಿಗೆ ಭೇದವಿಲ್ಲ. ದಾನಮಾಡಬೇಕು, ಧರ್ಮಮಾಡಬೇಕು, ಸತ್ಯಮಾತಾಡಬೇಕು, ಭೂತದಯವಿರಬೇಕು, ಇತ್ಯಾದಿ ನೀತಿಯು ಮಾತುಗಳು ಎಲ್ಲ ಧರ್ಮ ಪುಸ್ತಕಗಳಲ್ಲಿ ಹೇಳಲ್ಪಟ್ಟಿರುತ್ತವೆ. ಆದರೆ ಬೇರೆ ಬೇರೆ ಧರ್ಮಮತಗಳಲ್ಲಿ ಕೆಲಕೆಲವು ವಿಶೇಷ ಪ್ರಕಾರದ ಆಚರಣೆಗಳು ಇರುತ್ತವೆ; ಮತ್ತು ದೇವರನ್ನು ಆರಾಧಿಸುವ ಮಾರ್ಗಗಳು ಬೇರೆ ಬೇರೆ ಇರುತ್ತವೆ. ತಾಯಿತಂದೆಗಳು ತಮ್ಮ ಮಕ್ಕಳಿಗೆ ತಮ್ಮ ತಮ್ಮ ಧರ್ಮಮತಗಳ ತತ್ವಗಳನ್ನೂ ನಡಾವಳಿಗ

ಳನ್ನೂ ಧಾರ್ಮಿಕ ಕಲ್ಪನೆಗಳನ್ನೂ ತಮ್ಮ ಸ್ವಂತ ಆಚರಣೆಯಿಂದಲೇ ಅವರ ಮನಸಿನಲ್ಲಿ ಹುಟ್ಟಿಸತಕ್ಕದ್ದು. ಸದ್ಯಕ್ಕೆ ನಮ್ಮ ದೇಶದಲ್ಲಿ ಪಾಶ್ಚಿಮಾತ್ಯ ಶಿಕ್ಷಣದಿಂದಲೂ, ಸುಧಾರಣೆಗಳಿಂದಲೂ ಕೆಲಮಟ್ಟಿಗೆ ಧರ್ಮಲಂಡತನವು ಪ್ರಸಾರವಾಗಿರುತ್ತದೆ. ಇದು ದೇಶದ ಏಳ್ಗೆಗೆ ಹಿತಕರವಲ್ಲ. ತಾಯಿ ತಂದೆಗಳು ಬೇಗನೆ ಎಚ್ಚತ್ತು ತಮ್ಮ ತಮ್ಮ ಸನಾತನ ಧರ್ಮವನ್ನು ತಾವು ಆಚರಿಸದಿದ್ದರೆ ಅದು ನಷ್ಟವಾಗಿ ಹೋಗುವದು.

ಶಿಕ್ಷಕರು ಶಾಲೆಯಲ್ಲಿ ಯಾವ ಧರ್ಮಕ್ಕೂ ಮಹತ್ವವನ್ನು ಕೊಡದೆ, ಯಾವ ಧರ್ಮದ ಗುಣದೋಷಗಳ ವಿವೇಚನೆಯನ್ನೂ ಮಾಡದೆ ಪ್ರತಿ ಒಂದು ಧರ್ಮದಲ್ಲಿರುವ ಒಳ್ಳೇ ತತ್ವಗಳನ್ನು ಮಾತ್ರ ಹುಡುಗರ ಮುಂದೆ ಇಡುತ್ತಿರಬೇಕು. ಮತ್ತು ಎಲ್ಲ ಧರ್ಮಗ್ರಂಥಗಳೊಳಗಿನ ನೀತಿಪರವಾದ ಕಥೆಗಳನ್ನು ಹೇಳಿ ಪರಸ್ಪರರಲ್ಲಿ ಧರ್ಮವಾತ್ಸಲ್ಯವು ಹುಟ್ಟಿದಂತೆ ಯತ್ನಮಾಡುತ್ತಿರಬೇಕು. ಶಿಕ್ಷಕನು ಯಾವದೊಂದು ಧರ್ಮಮತಕ್ಕೆ ಸೇರಿದವನಾದರೂ ಶಾಲೆಯಲ್ಲಿ ಎಲ್ಲ ಧರ್ಮಗಳ ಅಭಿಮಾನವನ್ನು ಹಿಡಿದು ವರ್ತಿಸುತ್ತಿದ್ದರೆ ಎಲ್ಲ ಹುಡುಗರ ಪೂಜ್ಯಬುದ್ಧಿಗೆ ಪಾತ್ರನಾಗುವನು; ಮತ್ತು ಊರಲ್ಲಿ ಎಲ್ಲ ಜನರೂ ಅವನಿಗೆ ಸನ್ಮಾನ ಮಾಡುವರು. ಹುಡುಗರಲ್ಲಿ ಈ ಪ್ರಕಾರದ ಧಾರ್ಮಿಕ ಸಹಾನುಭೂತಿಯು ಉತ್ಪನ್ನವಾದರೆ ಅದು ರಾಷ್ಟ್ರೋನ್ನತಿಯ ಕಾರ್ಯದಲ್ಲಿ ಬಹಳ ಉಪಯೋಗಿಸುವದು. ಸಾರಾಂಶವೇನಂದರೆ, ಧಾರ್ಮಿಕ ಶಿಕ್ಷಣದಲ್ಲಿ ಮುಖ್ಯವಾಗಿ ಎರಡು ಸಂಗತಿಗಳನ್ನು ಕಲಿಸತಕ್ಕದ್ದು. (೧) ಸ್ವಧರ್ಮಾಚರಣೆಯನ್ನು ನಿಷ್ಠೆಯಿಂದ ಮಾಡುವದು. (೨) ಪರಧರ್ಮಸಹಿಷ್ಣುವಾಗಿ ಸಹಾನುಭೂತಿಯಿಂದ ನಡೆಯುವದು.

ಸ್ತ್ರೀ ಶಿಕ್ಷಣ:—ಇಲ್ಲಿಯವರೆಗೆ ಗಂಡುಹುಡುಗರ ಶಿಕ್ಷಣದ ವಿಷಯವು ವಿವರಿಸಲ್ಪಟ್ಟಿತು. ಇನ್ನು ಹೆಣ್ಣುಮಕ್ಕಳ ಶಿಕ್ಷಣದ ಸಂಬಂಧದಿಂದ ನಾಲ್ಕು ಮಾತುಗಳನ್ನು ಹೇಳಿ ಈ ನಿಬಂಧವನ್ನು ಮುಗಿಸುವೆನು.

ಈ ಜಗತ್ತಿನಲ್ಲಿ ಗಂಡಸರಂತೆ ಹೆಂಗಸರಾದರೂ ಅನೇಕ ಕೆಲಸಗಳನ್ನು ಮಾಡಬೇಕಾಗುವದು. ದೇವರು ಹೆಂಗಸರನ್ನು ಕೇವಲ ಪುರುಷರ ಸುಖಕ್ಕ ಸಲುವಾಗಿ ಹುಟ್ಟಿಸಿಲ್ಲ. ಸಂಸಾರದಲ್ಲಿ ಪುರುಷರಿಗೆ ಸ್ತ್ರೀಯರ

ಸಹಾಯವು ಬೇಕು. ಸ್ತ್ರೀಯರಿಗೆ ಪುರುಷರ ಸಹಾಯವು ಬೇಕು. ಸ್ತ್ರೀಪುರುಷರಿಬ್ಬರು ಜತೆಯಾದರೆ ಮನುಷ್ಯನು ಪೂರ್ಣನಾಗುತ್ತಾನೆ. ಕುಟುಂಬವೆಂಬ ಪುರುಷನ ಶರೀರಕ್ಕೆ ಸ್ತ್ರೀಪುರುಷರಿಬ್ಬರು ಎರಡು ಅವಯವಗಳಂತೆ ಇರುತ್ತಾರೆ. ಒಂದು ಅವಯವದ ಕಡೆಗೆ ದುರ್ಲಕ್ಷ್ಯ ಮಾಡಿದರೆ, ಆ ಶರೀರದ ಗತಿಯು ಏನಾಗಬಹುದು? ಅದೇ ಪ್ರಕಾರ ಪುರುಷನಿಗೆ ಮಾತ್ರ ಶಿಕ್ಷಣವನ್ನು ಕೊಟ್ಟು ಸ್ತ್ರೀಯರನ್ನು ಅಜ್ಞಾನದಲ್ಲಿಟ್ಟರೆ, ದೇಶವು ಊರ್ಜಿತಸ್ಥಿತಿಯನ್ನು ಹೊಂದಲಾರದು. ಕೆಲವರಿಗೆ ಸ್ತ್ರೀಯರೆಂದರೆ ಮಹತ್ವವೆನಿಸುವದಿಲ್ಲ. ಅವರು ಗಂಡು ಹುಡುಗರ ಶಿಕ್ಷಣದ ಕಡೆಗೆ ಕೊಡುವಷ್ಟು ಲಕ್ಷವನ್ನು ಹೆಣ್ಣು ಮಕ್ಕಳ ಶಿಕ್ಷಣದ ಕಡೆಗೆ ಕೊಡುವದಿಲ್ಲ. ಅವರು ಹೆಂಗಸರಿಗೆ ಶಿಕ್ಷಣವು ಯಾತಕ್ಕೆ ಬೇಕೆಂದು ಅನ್ನುತ್ತಾರೆ. ಹಾಗಾದರೆ ಹೆಣ್ಣುಮಕ್ಕಳಿಗೆ ಊಟವಾದರೂ ಯಾತಕ್ಕೆ ಬೇಕು? ಇದು ಮೂರ್ಖತನದ ವಿಚಾರವು ಹೆಣ್ಣುಮಕ್ಕಳಲ್ಲಿ ಅಚ್ಚುಕಟ್ಟುತನ, ಉದ್ಯೋಗ ಪ್ರೀತಿ, ಮಿತವ್ಯಯ, ನಿಯಮಿತತನ, ಒಳ್ಳೇ ತಿಳುವಳಿಕೆ, ಮನೆಯ ಕೆಲಸಗಳ ಜ್ಞಾನ, ತಮ್ಮ ಸ್ಥಿತಿಗತಿಯನ್ನು ತಿಳಕೊಂಡು ಪ್ರಪಂಚ ಮಾಡುವಜ್ಞಾನ, ಬಾಲಶುಶ್ರೂಷೆ, ರೋಗಿಗಳಶುಶ್ರೂಷೆ, ಇತ್ಯಾದಿ ಗುಣಗಳು ಅವಶ್ಯವಾಗಿ ಬೇಕು. ಇವು ಶಿಕ್ಷಣವಿಲ್ಲದೆ ತಮ್ಮಿಂದ ತಾವೇ ಪ್ರಾಪ್ತವಾಗುವವೆ? ಈ ಗುಣವತಿಯರಾದ ಸ್ತ್ರೀಯರು ಇರುವ ಮನೆಯಲ್ಲಿ ಒಳ್ಳೇ ಹುಡುಗರು ಉದಯಕ್ಕೆ ಬರುವವು. ಹೆಂಗಸರು ಹೊತ್ತಿಗೆ ಸರಿಯಾಗಿ ತಮ್ಮ ಕೆಲಸಗಳನ್ನು ಮಾಡದಿದ್ದರೆ, ಅಥವಾ ತಿಳುವಳಿಕೆಯಿಂದ ನಡೆಯದಿದ್ದರೆ ತಮ್ಮ ಉತ್ಪನ್ನವನ್ನು ತಿಳಕೊಂಡು ವೆಚ್ಚಮಾಡದಿದ್ದರೆ, ಮನೆತನದಲ್ಲಿ ಅವ್ಯವಸ್ಥೆಯುಂಟಾಗುವದು; ದಾರಿದ್ರ್ಯವು ನೆಲಿಸುವದು. ಅವರ ಈ ತಪ್ಪುಗಳ ಫಲವನ್ನು ಪುರುಷರು ಅನುಭವಿಸಬೇಕಾಗುವದು. ಆದರೆ ಸುಶಿಕ್ಷಿತರಾದ ಸ್ತ್ರೀಯರಿಂದ ಇಂಥ ತಪ್ಪುಗಳು ಸಂಭವಿಸಲಿಕ್ಕಿಲ್ಲ. ಅವರು ತಮ್ಮ ಕರ್ತವ್ಯಗಳನ್ನು ಸರಿಯಾಗಿ ಮಾಡಿ ಉಳಿದ ವೇಳೆಯಲ್ಲಿ ಪುರುಷರ ಕೆಲಸಗಳಿಗೆ ಸಹ ನೆರವಾಗಬಹುದು.

ಸ್ತ್ರೀ ಪುರುಷರ ಕರ್ತವ್ಯಗಳು ಬೇರೆ ಬೇರೆ ಇದ್ದ ಬಳಿಕ ಅವರವರಿಗೆ ಕೊಡತಕ್ಕ ಶಿಕ್ಷಣವಾದರೂ ಬೇರೆ ಬೇರೆ ಇರಲಿಕ್ಕೆ ಬೇಕು. ಆದರೆ ಉಭಯತರಿಗೂ ಜನ್ಮಭಾಷೆಯ ಓದು-ಬರಹ, ವ್ಯವಹಾರದ

ಪೂರ್ತಿ ಲೆಕ್ಕ ಬಳಿಕೆಯೊಳಗಿನ ಪದಾರ್ಥಗಳ ಗುಣ ಧರ್ಮಗಳು, ಭೂಮಿಯ ಮೇಲಿನ ನಾನಾ ದೇಶಗಳು, ಸ್ವಜನರ ಇತಿಹಾಸ ಇವುಗಳ ಜ್ಞಾನವು ಅವಶ್ಯವಾಗಿ ಇರತಕ್ಕದ್ದು. ಅಂದರೆ ಉಭಯತರಿಗೂ ಪ್ರಾಥಮಿಕ ಶಿಕ್ಷಣವನ್ನು ಕೊಡಲಿಕ್ಕೇ ಬೇಕು. ತರುವಾಯ ಸ್ತ್ರೀಯರಿಗೆ ಅವಶ್ಯವಾದ ಗೃಹವ್ಯವಸ್ಥೆ, ಆರೋಗ್ಯ ರಕ್ಷಣೆ, ಪಾಕಶಾಸ್ತ್ರ, ಹೊಲಿಗೆ, ಹೆಣಿಕೆ, ಸ್ತ್ರೀಧರ್ಮ ನೀತಿ ಈ ಮೊದಲಾದವುಗಳನ್ನು ಕಲಿಸಬಹುದು. ಅಥವಾ ಈ ವಿಷಯಗಳ ಬಗ್ಗೆ ಸುಲಭ ಪುಸ್ತಕಗಳನ್ನು ಕೊಟ್ಟು ಓದಿಸಬಹುದು.

ಜಪಾನ ಮುಂತಾದ ಸುಧಾರಿಸಿದ ದೇಶಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಗಂಡು ಹೆಣ್ಣು ಮಕ್ಕಳಿಗೆ ಒತ್ತಟ್ಟಿಗೆ ಒಂದೇ ಶಾಲೆಯಲ್ಲಿ ಕೊಡುವ ಪದ್ಧತಿಯುಂಟು. ಆದರೆ ನಮ್ಮ ದೇಶದ ಪರಿಸ್ಥಿತಿಗನುಸರಿಸಿ ಅವರವರ ಶಾಲೆಗಳು ಬೇರೆ ಬೇರೆ ಇರುವದು ಒಳ್ಳೇದು; ಮತ್ತು ಹೆಣ್ಣು ಮಕ್ಕಳಿಗೆ ಕಲಿಸಲಿಕ್ಕೆ ಶಿಕ್ಷಕಿಯರೇ ಇರತಕ್ಕದ್ದು. ಇದರಿಂದ ಹೆಣ್ಣು ಮಕ್ಕಳಿಗೆ ತಕ್ಕಂತೆ ವಿಷಯಗಳಲ್ಲಿ ಅವಶ್ಯ ಕಂಡ ಹೆಚ್ಚು ಕಡಿಮೆಗಳನ್ನು ಮಾಡಿಕೊಳ್ಳಬಹುದು; ಅವರ ಸಲುವಾಗಿ ಶಿಕ್ಷಣದ ಧೋರಣವನ್ನು ಬದಲು ಮಾಡಬಹುದು; ಶಿಕ್ಷಣದ ಕಾಲಕ್ಕೆ ಅವರ ಬಳಿಕೆಯೊಳಗಿನ ಉದಾಹರಣೆಗಳನ್ನೇ ಕೊಡಲಿಕ್ಕೆ ಅನುಕೂಲವಾಗುವದು. ಇದಲ್ಲದೆ ಪ್ರೌಢರಾಗುವವರೆಗೆ ಶಾಲೆಯಲ್ಲಿಡಲಿಕ್ಕೂ ಲಜ್ಜಾ, ವಿನಯ, ಕೋಮಲತನ ಮೊದಲಾದ ಅವರ ನೈಸರ್ಗಿಕ ಗುಣಗಳಿಗೆ ವ್ಯತ್ಯಯ ಬಾರದಂತೆ ಶಿಕ್ಷಣ ಕೊಡಲಿಕ್ಕೂ ಆಸ್ಪದವಾಗುವದು.

ಹೆಣ್ಣು ಮಕ್ಕಳು ಮನೆಯ ಕೆಲಸಗಳಿಗೆ ನೆರವಾಗುವದರಿಂದ ಅವುಗಳ ಜ್ಞಾನವಾಗುವದಲ್ಲದೆ, ವ್ಯಾಯಾಮವೂ ಆಗುವದು. ಚಿಕ್ಕ ಹೆಣ್ಣು ಮಕ್ಕಳ ಶಾರೀರಿಕ ಅಭಿವೃದ್ಧಿಗಾಗಿ ಅವರ ಸಲುವಾಗಿಯೇ ಫುಗಡಿ, ಕಣ್ಣು ಮುಚ್ಚಾಲಿಕೆ, ಮುಂತಾದ ಆಟಗಳಿರುತ್ತವೆ. ಅವುಗಳನ್ನು ಆಡಿಸಬೇಕು.

ಗಂಡು ಹೆಣ್ಣು ಮಕ್ಕಳ ನೀತಿನಡಾವಳಿಗಳಲ್ಲಿ ಹೆಚ್ಚು ಕಡಿಮೆ ಇದ್ದಾಗ್ಯೂ ಆ ಸಂಬಂಧದ ಶಿಕ್ಷಣವನ್ನು ಕೊಟ್ಟು ಅವರನ್ನು ನೀತಿವಂತರನ್ನು ಮಾಡುವ ಉಪಾಯಗಳು ಬೇರೆ ಇಲ್ಲ.

ಹಿಂದೂಸಮಾಜವ್ಯವಸ್ಥೆಗೆ ಆಧಾರಭೂತವಾದ ಕೆಲವು ಕಲ್ಪನೆಗಳು.

(ಭಾಷಾಂತರ.)

ಜಗತ್ತಿನೊಳಗಿನ ಇತರ ಸಮಾಜಗಳ ವ್ಯವಸ್ಥೆಗೂ ಹಿಂದೂಸಮಾಜ ವ್ಯವಸ್ಥೆಗೂ ಅನೇಕ ವಿಚಾರಗಳಲ್ಲಿ ಭಿನ್ನತ್ವವು ಕಂಡುಬರುವದು. ಇದಕ್ಕೆ ನಮ್ಮ ಸಮಾಜ ವ್ಯವಸ್ಥೆಗೆ ಆಧಾರಭೂತವಾದ ಕೆಲವು ಕಲ್ಪನೆಗಳೇ ಕಾರಣವಾಗಿರುವವು. ಇಂಥಹ ಕೆಲವು ಕಲ್ಪನೆಗಳ ಸಂಬಂಧದ ವಿಚಾರವನ್ನು ಇಲ್ಲಿ ಹೇಳುವೆವು.

ಕೃತ್ರಿಮ ಶುಚಿರ್ಭೂತತೆ, ಹಾಗು ಮೈಲಿಗೆ ಇವುಗಳ ಸಂಬಂಧದ ಕಲ್ಪನೆಯು ನಮ್ಮ ಸಮಾಜದೊಳಗಿನ ಮೊದಲನೇ ಮೂಲ ಕಲ್ಪನೆಯಾಗಿರುವದು:- ಈ ಕಲ್ಪನೆಯು ಜಗತ್ತಿನ ಇನ್ನಾವ ರಾಷ್ಟ್ರದಲ್ಲಿಯೂ ಕಂಡುಬರುವದಿಲ್ಲ. ಅದರಿಂದ ನಮ್ಮವರ ಈ ಮಡಿ ಮೈಲಿಗೆಗಳ ವಿಚಾರವನ್ನು ನೋಡಿ ಎರಡನೇ ಜನಾಂಗದವರು ಆಶ್ಚರ್ಯಚಕಿತರಾದರು. ಉತ್ತರ ಹಿಂದುಸ್ಥಾನವೇ ಮೊದಲಾದ ಕಡೆಗಳಲ್ಲಿ ಅಡಿಗೆಯ ಮನೆಯಲ್ಲಿ ಯಾರೂ ಹೋಗಕೂಡದೆಂದು ನಿರ್ಬಂಧವಿರುವದು. ಇದೂ ಅಲ್ಲದೆ, ಎರಡನೆಯವರ ನೆಳಲು ಬೀಳುವದರಿಂದಲೂ ಸಹ ಮೈಲಿಗೆಯಾಗುವದೆಂದು ನಮ್ಮವರು ತಿಳಿದುಕೊಳ್ಳುವರು. ಈ ಕಲ್ಪನೆಯ ಮೂಲಕವಾಗಿ ನಮ್ಮ ಸಮಾಜವು ಒಡೆದು ಚೂರು ಚೂರಾಗಿ ಹೋಗಿರುವದು. ಹನ್ನೆರಡು ಜನರಿಗೆ ಹದಿನಾರು ಮನೆಗಳು ಬೇಕಾಗುವವು. ಪ್ರತಿಯೊಬ್ಬರೂ ಎಲ್ಲಿ ಮೈಲಿಗೆಯಾಗುವದೋ ಎಂಬ ಅಂಜಿಕೆಯಿಂದ ಒಬ್ಬರಿಂದೊಬ್ಬರು ಆದಷ್ಟು ದೂರ ಇರಲಿಕ್ಕೆ ಯತ್ನಿಸುವರು.

ಸಾಮಾಜಿಕ ವ್ಯಕ್ತಿಗಳನ್ನು ಸಣ್ಣ ಹುಡುಗರಂತೆ ತಿಳಿಯುವದು ನಮ್ಮ ಸಮಾಜರಚನೆಗೆ ಆಧಾರವಾದ ಎರಡನೇ ಭಾವನೆಯಾಗಿರುವದು:- ನಮ್ಮ ಸಮಾಜ ವ್ಯವಸ್ಥೆಯನ್ನು ಸ್ಥಾಪಿಸಿದವರ ದೃಷ್ಟಿಯಿಂದ ನೋಡಿದರೆ, ಸಮಾಜವು ಕೇವಲ ಸಣ್ಣ ಹುಡುಗರ ಒಂದು ಸಮುದಾಯವೇ ಆಗಿರುವದು; ಹಾಗು ಈ ಸಾಮಾಜಿಕ ವ್ಯಕ್ತಿಗಳೆಂಬ ಹುಡುಗರ ಸಂಬಂಧದ ಇನ್ನೂ ಒಂದು ಚಮತ್ಕಾರವೇನಂದರೆ, ಈ ಹುಡುಗರ

ಎಂದೂ ಬೆಳುವಣಿಗೆಯನ್ನು ಹೊಂದುತ್ತಿರುವದೇ ಇಲ್ಲ. ಹಿಂದೂಶಾಸ್ತ್ರಕಾರರ ಅಭಿಪ್ರಾಯದ ಮೇರೆಗೆ, ಸಮಾಜವು ಇದ್ದಂತೆಯೇ ಇರುವದು; ಹಾಗು ಅದರೊಳಗಿನ ವ್ಯಕ್ತಿಗಳು ಸರ್ವದಾ ಅಜ್ಞಾನಿಗಳೂ ವ್ಯಂಗರೂ ಆಗಿರುವರು. ತಂದೆ ತಾಯಿಗಳು ತಮ್ಮ ಮಕ್ಕಳ ವಿಷಯವಾಗಿ ಸಂಪೂರ್ಣವಾಗಿ ಲಕ್ಷಗೊಡುತ್ತಿದ್ದು, ತೀರ ಕ್ಷುಲ್ಲಕ ಸಂಗತಿಗಳಲ್ಲಿಯೂ ಸಹ ಅವರಿಗೆ ಸ್ವಾತಂತ್ರ್ಯ ಕೊಡದಿರುವಂತೆ, ಸಾಮಾಜಿಕ ವ್ಯಕ್ತಿಗಳನ್ನು ಹಾಸಿಗೆಯಿಂದ ಎದ್ದು ಪುನಃ ಹಾಸಿಗೆಯನ್ನು ಸೇರುವವರೆಗೆ, ಪ್ರತಿಯೊಂದು ಕಾರ್ಯದಲ್ಲಿಯೂ ನಿರ್ಬಂಧಿಸಲಿಕ್ಕೆ ಬೇಕು, ಇಲ್ಲದಿದ್ದರೆ ಸಮಾಜವು ಲಯವಾಗಿ ಹೋಗುವದು, ಎಂದು ಕಲ್ಪಿಸಿಕೊಂಡು ನಮ್ಮ ಸಮಾಜದೊಳಗಿನ ಆಚಾರ ವ್ಯವಹಾರಗಳ ವಿಧಿನಿಷೇಧಾತ್ಮಕವಾದ ನಿಯಮಗಳು ರಚಿತವಾಗಿರುವವು. ಸಾಮಾಜಿಕ ವ್ಯಕ್ತಿಗಳನ್ನು ಹುಡುಗರೆಂದು ತಿಳಿದುಕೊಂಡು ಅವರ ಆಚಾರವಿಚಾರಗಳನ್ನು ನಿರ್ಣಯಿಸುವ ರೂಢಿಯು ಕೇವಲ ಹಿಂದೂ ಸಮಾಜದಲ್ಲಿಯೇ ಇರುವದೆಂತಲ್ಲ; ಇತರ ಸಮಾಜಗಳಲ್ಲಿಯೂ ಅವು ಇದ್ದವು; ಆದರೆ ನಮ್ಮ ಸಮಾಜದಲ್ಲಿ ಮಾತ್ರ ಅವು ಅವ್ಯಾಹತವಾಗಿ ನಡೆದಿರುವವು. ಈ ಪ್ರಕಾರದ ಕಲ್ಪನೆಯ ಮೂಲಕವಾಗಿ ಸಾಮಾಜಿಕ ವ್ಯಕ್ತಿಗಳಿಗೆ ಸ್ವಾತಂತ್ರ್ಯವು ಎಷ್ಟು ಮಾತ್ರವೂ ದೊರೆಯುವದಿಲ್ಲ. ಯಾವಾಗಲೂ ಪಾರತಂತ್ರ್ಯದಲ್ಲಿಯೇ ಇರಬೇಕಾಗುವದರಿಂದ ಅವರ ಕಲ್ಪನೆಗಳಿಗೆ ಹೊರಗೆ ಬರಲಿಕ್ಕೆ ಅವಕಾಶವು ದೊರೆಯುವದಿಲ್ಲ. ಪರಾವಲಂಬನವೆಂಬ ದುರ್ಗುಣವು ಶಾಸ್ತ್ರಕಾರರ ಈ ತಿಳುವಳಿಕೆಯ ಮೂಲಕವಾಗಿಯೇ ನಮ್ಮಲ್ಲಿ ಉಂಟಾಗಿರುವದು

ಸಾಮಾಜಿಕ ವ್ಯಕ್ತಿಗಳಲ್ಲಿ ಕೃತ್ರಿಮ ವಿಷಮತೆಯಿರುವದು, ಎಂಬದು ನಮ್ಮ ಸಮಾಜದೊಳಗಿನ ಮೂರನೇ ಮೂಲಭಾವನೆಯಾಗಿರುವದು:- ವ್ಯಕ್ತಿಗಳ ಯೋಗ್ಯತೆಗಳನ್ನು ನೋಡಿ ಈ ವಿಷಮತೆಯನ್ನು ನಿರ್ಣಯಿಸಿಲ್ಲ; ಕೇವಲ ಜನ್ಮವೇ ಈ ವಿಷಮತೆಗೆ ಕಾರಣವೆಂದು ತಿಳಿಯಲ್ಪಡುವದರಿಂದ ಇದರಲ್ಲಿ ಸ್ವಾಭಾವಿಕತೆಯು ಎಷ್ಟು ಮಾತ್ರವೂ ಉಳಿದಿಲ್ಲ. ಅದರಿಂದಲೇ ಇದಕ್ಕೆ ಕೃತ್ರಿಮ ವಿಷಮತೆಯೆಂದು ಹೇಳಿರುವೆವು.

ಹಿಂದೂಗಳ ಧರ್ಮಶಾಸ್ತ್ರಗಳನ್ನು ರಚಿಸುವಾಗ ಸ್ತ್ರೀಪುರುಷರ

ಯೋಗ್ಯತೆಯಲ್ಲಿ ಬಹಳ ಅಂತರವಿರುವದೆಂದು ತಿಳಿಯಲ್ಪಟ್ಟಿರುವದು. ನಮ್ಮ ಶಾಸ್ತ್ರಾನುಗುಣವಾದ ಕಾಯದೆಗಳನ್ನು ನೋಡಿದರೆ ಸ್ತ್ರೀಯರ ಯೋಗ್ಯತೆಯು ಪುರುಷರ ಯೋಗ್ಯತೆಗಿಂತ ಬಹಳ ಕಡಿಮೆತರದ್ದಾಗಿರುವದೆಂತಲೂ ಅವರು ಕೇವಲ ಪುರುಷರ ವಿಲಾಸದ ಒಡವೆ (ಸಜೀವ ಪ್ರಾಣಿಗಳಲ್ಲಿ) ಗಳೆಂತಲೂ ಗೊತ್ತಾಗುವದು. ಸಂಸ್ಕೃತ ವಾಙ್ಮಯದಲ್ಲಿ ಎಷ್ಟೋ ಕವಿಗಳು ಸ್ತ್ರೀಯರ ಯೋಗ್ಯತೆಯಾದರೂ ಪುರುಷರಷ್ಟೇ ಇರುವವೆಂದು ವರ್ಣಿಸಿ ಅವರ ದೊಡ್ಡಸ್ತಿಕೆಯನ್ನು ಹೊಗಳಿರುವರು. ಒಬ್ಬಿಬ್ಬರು ಕವಿಗಳು ಆಧ್ಯಾತ್ಮಿಕ ವಿಷಯದಲ್ಲಿ ಸ್ತ್ರೀ ಪುರುಷರು ಸಮಾನಾಧಿಕಾರಿಗಳಾಗಿರುವರೆಂತಲೂ ಅವರವರಲ್ಲಿ ಏನೂ ಅಂತರವಿರುವದಿಲ್ಲೆಂತಲೂ ವರ್ಣಿಸಿರುವರು. ಆದರೆ ಸಾಂಪ್ರತದ ಕಾಯದೆಗಳನ್ನು ನೋಡಿದರೆ, ನಾವು ಸ್ತ್ರೀಯರನ್ನು ತೀರ ಕಡಿಮೆ ಯೋಗ್ಯತೆಯವರೆಂದು ತಿಳಿಯುತ್ತೇವೆಂಬದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಸ್ತ್ರೀಯಳು ಯಾವ ತರದ ಬಾಧ್ಯತೆಯನ್ನೂ ಪಡೆಯಲಾರಳು. ಪತಿಯ ಸ್ಥಾವರಾಸ್ತಿಯು ಆತನ ಪತ್ನಿಗೆ ದೊರೆಯದೆ ಯಾವನೋ ಒಬ್ಬನಿಗೆ, ಅವರವರಿಗೆ ಪ್ರತ್ಯಕ್ಷ ಸಂಬಂಧವು ಎಷ್ಟು ಮಾತ್ರವೂ ಇರದೆ ಇದ್ದರೂ, ಕೇವಲ ಗಂಡಸು ವಾರಸದಾರನೆಂಬದಿಷ್ಟೇ ತತ್ವದ ಮೇಲಿಂದ ದೊರೆಯುವದು. ಆಮರಣ ಸುಖದುಃಖಗಳಿಗೆ ಸಮಭಾಗಿನಿಯೆನಿಸುವ ಪತ್ನಿಯು ಕೇವಲ ಹೊಟ್ಟೆಯ ಕೂಳಿಗಷ್ಟೇ ಅಧಿಕಾರಿಣಿಯು! ಈ ರೀತಿಯಾಗಿ ನಮ್ಮ ಸಮಾಜ ವ್ಯವಸ್ಥೆಯಲ್ಲಿ ಸ್ತ್ರೀ ಪುರುಷರ ಯೋಗ್ಯತೆಯಲ್ಲಿ ವಿಚಿತ್ರವಾದ ಅಂತರವಿರುವದೆಂದು ತಿಳಿಯಲ್ಪಡುವದರಿಂದ ಸ್ತ್ರೀಯರು ಅತ್ಯಂತ ಹೀನಾವಸ್ಥೆಯನ್ನು ಹೊಂದಿರುವರು. ಗಂಡಸಿಗೆ ಒಬ್ಬ ಹೆಂಡತಿಯು ಸತ್ತರೆ ಎರಡನೇ ಹೆಂಡತಿಯನ್ನು ಮಾಡಿಕೊಳ್ಳಲಿಕ್ಕೆ ನಮ್ಮ ಸಮಾಜದಲ್ಲಿ ಪ್ರತಿಬಂಧವಿರುವದಿಲ್ಲ, ಇಷ್ಟೇ ಅಲ್ಲ, ಒಂದೇ ಕಾಲಕ್ಕೆ ಇಬ್ಬರು ಹೆಂಡರನ್ನು ಮಾಡಿಕೊಳ್ಳಲಿಕ್ಕೆ ಸಹ ಏನೂ ಅಡ್ಡಿಯಿರುವದಿಲ್ಲ. ಆದರೆ ಸ್ತ್ರೀಯರಿಗೆ ಮಾತ್ರ ಈ ವಿಷಯದಲ್ಲಿ ಎಷ್ಟು ಮಾತ್ರವೂ ಅಧಿಕಾರವಿರುವದಿಲ್ಲ. ಈ ತರದ ಪ್ರತಿಬಂಧವು ಯೋಗ್ಯವಾದದ್ದೋ? ಅಯೋಗ್ಯವಾದದ್ದೋ? ಆ ವಿಚಾರ ಬೇರೆ. ನಮ್ಮ ಸಮಾಜ ವ್ಯವಸ್ಥೆಯು ಯಾವ ತತ್ವವನ್ನು ಅವಲಂಬಿಸಿ ರಚಿತವಾಗಿರುವದೋ ಆ ತತ್ವವನ್ನು ಹೇಳುವದಿಷ್ಟೇ ನಮ್ಮ ಪ್ರಕೃತ ಉದ್ದೇಶವಾಗಿರುವದು.

ಇದೇ ಮೇರೆಗೆ ಮನುಷ್ಯಮನುಷ್ಯರಲ್ಲಿ ಕೃತ್ರಿಮ ವಿಷಮತೆ ಯಿರುವದು, ಎಂಬ ತತ್ವವು ನಮ್ಮ ಸಮಾಜ ವ್ಯವಸ್ಥೆಯ ತಳದಲ್ಲಿ ಕಂಡುಬರುವದು. ಜಾತಿಭೇದವೆಂಬ ಒಂದೇ ಶಬ್ದವನ್ನು ಹೇಳಿದರೆ ಸಾಕು. ಈ ಮಾತಿನ ಅರ್ಥವು ಚನ್ನಾಗಿ ತಿಳಿದು ಬರುವದು. ಬೇರೆ ಬೇರೆ ಮನುಷ್ಯರ ಯೋಗ್ಯತೆಯಲ್ಲಿ ಅಂತರವಿರುವದು. ಈ ಮಾತು ಸರ್ವಸಮ್ಮತವಾದದ್ದಿರುವದು. ಈ ಪ್ರಕಾರದ ವಿಚಾರವು ಎಲ್ಲ ಸಮಾಜಗಳಲ್ಲಿಯೂ ಕಂಡುಬರುವದು. ವಿಲಾಯತಿಯಲ್ಲಿ ಜನರಲ್ಲಿ ಶ್ರೀಮಂತರು, ಮಧ್ಯಮರು, ಸಾಮಾನ್ಯರು ಎಂಬ ಮೂರು ವರ್ಗಗಳಿರುವವು. ಆದರೆ ಈ ವರ್ಗಗಳು ಖಂಡಿತವಾದವುಗಳಿರುವದಿಲ್ಲ. ಅವುಗಳ ಮೇರೆಯು ಅಸ್ಪಷ್ಟವಾದದ್ದಿದ್ದು ಅದನ್ನು ಸಹಜವಾಗಿ ದಾಟಲಿಕ್ಕೆ ಬರುವದು. ಬೇಕಾದ ಮನುಷ್ಯನು ತನ್ನ ಸಾಹಸದಿಂದ ಮೇಲಿನ ವರ್ಗಕ್ಕೆ ಹೋಗಬಹುದು. ಇಂದು ಸಾಮಾನ್ಯನಾಗಿದ್ದವನು ನಾಳೆ ಮಧ್ಯಮ ವರ್ಗದವನಾಗಬಹುದು, ಶ್ರೀಮಂತನಾಗಬಹುದು. ವಿಶೇಷವಾಗಿ, ಕಾಯಿದೆಯ ದೃಷ್ಟಿಯಿಂದ ಇಂಗ್ಲಂಡದೊಳಗಿನ ಯಾವತ್ತು ಪ್ರಜೆಗಳು ಒಂದೇ ಆಗಿರುವರು. ಕಾಯಿದೆಗೆ ಇವರು ಸಾಮಾನ್ಯರು, ಇವರು ಮಧ್ಯಮರು, ಇವರು ಶ್ರೀಮಂತರು ಎಂಬ ಭೇದಭಾವವಿರುವದಿಲ್ಲ. ಆದರೆ ನಮ್ಮ ಜಾತಿವ್ಯವಸ್ಥೆಯು ವಜ್ರಲೇಪವಾದದ್ದಿರುವದು; ಯಾಕಂದರೆ, ಅದು ಮನುಷ್ಯರ ಜನ್ಮಕ್ಕೆ ಸಂಬಂಧಿಸಿರುವದು. ಮನುಷ್ಯನು ಯಾವನಾದರೊಂದು ಜಾತಿಯಲ್ಲಿ ಹುಟ್ಟಿದರೆ ತೀರಿತು. ಆದರಿಂದಲೇ ಸಮಾಜದಲ್ಲಿ ಅವನ ಯೋಗ್ಯತೆಯು ನಿರ್ಣಯಿಸಲ್ಪಡುವದು. ಅವನು ಬೇಕಾದಷ್ಟು ಬುದ್ಧಿವಂತನಾಗಲಿ; ಬೇಕಾದಷ್ಟು ಧನವಂತನಾಗಲಿ ಆತನ ಯೋಗ್ಯತೆಯನ್ನು ಮೀರಿ ಹೆಚ್ಚಿನ ಸ್ಥಿತಿಯನ್ನು ಹೊಂದಲಾರನು. ಇದೀಗ ನಮ್ಮ ಜಾತಿಭೇದದ ವಿಚಾರದೊಳಗಿನ ವಿಶೇಷ ಸಂಗತಿಯು. ಪ್ರಸಿದ್ಧ ಗ್ರೀಕ ತತ್ವಜ್ಞಾನಿಯಾದ ಅರಿಸ್ಟಾಟಲನು ಹೇಳಿರುವದೇನಂದರೆ, ಗುಲಾಮರು ಸ್ವಾಭಾವಿಕವಾಗಿಯೇ ಗ್ರೀಕರಿಗಿಂತ ಕಡಿಮೆ ಯೋಗ್ಯತೆಯವರಾಗಿರುವರು; ಅದರಿಂದಲೇ ಅವರು ನಮ್ಮ ಗುಲಾಮರಾಗುವರು. ಇದೇ ತರದ ವಿಚಾರಸರಣಿಯು ನಮ್ಮ ಜಾತಿಭೇದದ ವಿಚಾರದ ತಳದಲ್ಲಿಯೂ ಇರುವದು ಇನ್ನು ಕೆಲವರು ತತ್ವಜ್ಞಾನಿಗಳು ಕರ್ಮ ಹಾಗು

ಯೋಗ್ಯತೆಯಲ್ಲಿ ಬಹಳ ಅಂತರವಿರುವದೆಂದು ತಿಳಿಯಲ್ಪಟ್ಟಿರುವದು. ನಮ್ಮ ಶಾಸ್ತ್ರಾನುಗುಣವಾದ ಕಾಯದೆಗಳನ್ನು ನೋಡಿದರೆ ಸ್ತ್ರೀಯರ ಯೋಗ್ಯತೆಯು ಪುರುಷರ ಯೋಗ್ಯತೆಗಿಂತ ಬಹಳ ಕಡಿಮೆತರದ್ದಾಗಿರುವದೆಂತಲೂ ಅವರು ಕೇವಲ ಪುರುಷರ ವಿಲಾಸದ ಒಡವೆ (ಸಜೀವ ಪ್ರಾಣಿಗಳಲ್ಲಿ) ಗಳೆಂತಲೂ ಗೊತ್ತಾಗುವದು. ಸಂಸ್ಕೃತ ವಾಙ್ಮಯದಲ್ಲಿ ಎಷ್ಟೋ ಕವಿಗಳು ಸ್ತ್ರೀಯರ ಯೋಗ್ಯತೆಯಾದರೂ ಪುರುಷರಷ್ಟೇ ಇರುವದೆಂದು ವರ್ಣಿಸಿ ಅವರ ದೊಡ್ಡಸ್ತಿಕೆಯನ್ನು ಹೊಗಳಿರುವರು. ಒಬ್ಬಿಬ್ಬರು ಕವಿಗಳು ಆಧ್ಯಾತ್ಮಿಕ ವಿಷಯದಲ್ಲಿ ಸ್ತ್ರೀ ಪುರುಷರು ಸಮಾನಾಧಿಕಾರಿಗಳಾಗಿರುವರೆಂತಲೂ ಅವರವರಲ್ಲಿ ಏನೂ ಅಂತರವಿರುವದಿಲ್ಲೆಂತಲೂ ವರ್ಣಿಸಿರುವರು. ಆದರೆ ಸಾಂಪ್ರತದ ಕಾಯದೆಗಳನ್ನು ನೋಡಿದರೆ, ನಾವು ಸ್ತ್ರೀಯರನ್ನು ತೀರ ಕಡಿಮೆ ಯೋಗ್ಯತೆಯವರೆಂದು ತಿಳಿಯುತ್ತೇವೆಂಬದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಸ್ತ್ರೀಯಳು ಯಾವ ತರದ ಬಾಧ್ಯತೆಯನ್ನೂ ಪಡೆಯಲಾರಳು. ಪತಿಯ ಸ್ಥಾವರಾಸ್ತಿಯು ಆತನ ಪತ್ನಿಗೆ ದೊರೆಯದೆ ಯಾವನೋ ಒಬ್ಬನಿಗೆ, ಅವರವರಿಗೆ ಪ್ರತ್ಯಕ್ಷ ಸಂಬಂಧವು ಎಷ್ಟು ಮಾತ್ರವೂ ಇರದೆ ಇದ್ದರೂ, ಕೇವಲ ಗಂಡಸು ವಾರಸದಾರನೆಂಬದಿಷ್ಟೇ ತತ್ವದ ಮೇಲಿಂದ ದೊರೆಯುವದು. ಆಮರಣ ಸುಖದುಃಖಗಳಿಗೆ ಸಮಭಾಗಿನಿಯೆನಿಸುವ ಪತ್ನಿಯು ಕೇವಲ ಹೊಟ್ಟೆಯ ಕೂಳಿಗಷ್ಟೇ ಅಧಿಕಾರಿಣಿಯು! ಈ ರೀತಿಯಾಗಿ ನಮ್ಮ ಸಮಾಜ ವ್ಯವಸ್ಥೆಯಲ್ಲಿ ಸ್ತ್ರೀ ಪುರುಷರ ಯೋಗ್ಯತೆಯಲ್ಲಿ ವಿಚಿತ್ರವಾದ ಅಂತರವಿರುವದೆಂದು ತಿಳಿಯಲ್ಪಡುವದರಿಂದ ಸ್ತ್ರೀಯರು ಅತ್ಯಂತ ಹೀನಾವಸ್ಥೆಯನ್ನು ಹೊಂದಿರುವರು. ಗಂಡಸಿಗೆ ಒಬ್ಬ ಹೆಂಡತಿಯು ಸತ್ತರೆ ಎರಡನೇ ಹೆಂಡತಿಯನ್ನು ಮಾಡಿಕೊಳ್ಳಲಿಕ್ಕೆ ನಮ್ಮ ಸಮಾಜದಲ್ಲಿ ಪ್ರತಿಬಂಧವಿರುವದಿಲ್ಲ, ಇಷ್ಟೇ ಅಲ್ಲ, ಒಂದೇ ಕಾಲಕ್ಕೆ ಇಬ್ಬರು ಹೆಂಡರನ್ನು ಮಾಡಿಕೊಳ್ಳಲಿಕ್ಕೆ ಸಹ ಏನೂ ಅಡ್ಡಿಯಿರುವದಿಲ್ಲ. ಆದರೆ ಸ್ತ್ರೀಯರಿಗೆ ಮಾತ್ರ ಈ ವಿಷಯದಲ್ಲಿ ಎಷ್ಟು ಮಾತ್ರವೂ ಅಧಿಕಾರವಿರುವದಿಲ್ಲ. ಈ ತರದ ಪ್ರತಿಬಂಧವು ಯೋಗ್ಯವಾದದ್ದೋ? ಅಯೋಗ್ಯವಾದದ್ದೋ? ಆ ವಿಚಾರ ಬೇರೆ. ನಮ್ಮ ಸಮಾಜ ವ್ಯವಸ್ಥೆಯು ಯಾವ ತತ್ವವನ್ನು ಅವಲಂಬಿಸಿ ರಚಿತವಾಗಿರುವದೋ ಆ ತತ್ವವನ್ನು ಹೇಳುವದಿಷ್ಟೇ ನಮ್ಮ ಪ್ರಕೃತ ಉದ್ದೇಶವಾಗಿರುವದು.

ಇದೇ ಮೇರೆಗೆ ಮನುಷ್ಯಮನುಷ್ಯರಲ್ಲಿ ಕೃತ್ರಿಮ ವಿಷಮತೆ ಯಿರುವದು, ಎಂಬ ತತ್ವವು ನಮ್ಮ ಸಮಾಜ ವ್ಯವಸ್ಥೆಯ ತಳದಲ್ಲಿ ಕಂಡುಬರುವದು. ಜಾತಿಭೇದವೆಂಬ ಒಂದೇ ಶಬ್ದವನ್ನು ಹೇಳಿದರೆ ಸಾಕು. ಈ ಮಾತಿನ ಅರ್ಥವು ಚನ್ನಾಗಿ ತಿಳಿದು ಬರುವದು. ಬೇರೆ ಬೇರೆ ಮನುಷ್ಯರ ಯೋಗ್ಯತೆಯಲ್ಲಿ ಅಂತರವಿರುವದು. ಈ ಮಾತು ಸರ್ವಸಮ್ಮತವಾದದ್ದಿರುವದು. ಈ ಪ್ರಕಾರದ ವಿಚಾರವು ಎಲ್ಲ ಸಮಾಜಗಳಲ್ಲಿಯೂ ಕಂಡುಬರುವದು. ವಿಲಾಯತಿಯಲ್ಲಿ ಜನರಲ್ಲಿ ಶ್ರೀಮಂತರು, ಮಧ್ಯಮರು, ಸಾಮಾನ್ಯರು ಎಂಬ ಮೂರು ವರ್ಗಗಳಿರುವವು. ಆದರೆ ಈ ವರ್ಗಗಳು ಖಂಡಿತವಾದವುಗಳಿರುವದಿಲ್ಲ. ಅವುಗಳ ಮೇರೆಯು ಅಸ್ಪಷ್ಟವಾದದ್ದಿದ್ದು ಅದನ್ನು ಸಹಜವಾಗಿ ದಾಟಲಿಕ್ಕೆ ಬರುವದು. ಬೇಕಾದ ಮನುಷ್ಯನು ತನ್ನ ಸಾಹಸದಿಂದ ಮೇಲಿನ ವರ್ಗಕ್ಕೆ ಹೋಗಬಹುದು. ಇಂದು ಸಾಮಾನ್ಯನಾಗಿದ್ದವನು ನಾಳೆ ಮಧ್ಯಮ ವರ್ಗದವನಾಗಬಹುದು, ಶ್ರೀಮಂತನಾಗಬಹುದು. ವಿಶೇಷವಾಗಿ, ಕಾಯಿದೆಯ ದೃಷ್ಟಿಯಿಂದ ಇಂಗ್ಲಂಡದೊಳಗಿನ ಯಾವತ್ತು ಪ್ರಜೆಗಳು ಒಂದೇ ಆಗಿರುವರು. ಕಾಯಿದೆಗೆ ಇವರು ಸಾಮಾನ್ಯರು, ಇವರು ಮಧ್ಯಮರು, ಇವರು ಶ್ರೀಮಂತರು ಎಂಬ ಭೇದಭಾವವಿರುವದಿಲ್ಲ. ಆದರೆ ನಮ್ಮ ಜಾತಿವ್ಯವಸ್ಥೆಯು ವಜ್ರಲೇಪವಾದದ್ದಿರುವದು; ಯಾಕೆಂದರೆ, ಅದು ಮನುಷ್ಯರ ಜನ್ಮಕ್ಕೆ ಸಂಬಂಧಿಸಿರುವದು. ಮನುಷ್ಯನು ಯಾವದಾದರೊಂದು ಜಾತಿಯಲ್ಲಿ ಹುಟ್ಟಿದರೆ ತೀರಿತು. ಅದರಿಂದಲೇ ಸಮಾಜದಲ್ಲಿ ಅವನ ಯೋಗ್ಯತೆಯು ನಿರ್ಣಯಿಸಲ್ಪಡುವದು. ಆವನು ಬೇಕಾದಷ್ಟು ಬುದ್ಧಿವಂತನಾಗಲಿ; ಬೇಕಾದಷ್ಟು ಧನವಂತನಾಗಲಿ ಆತನ ಯೋಗ್ಯತೆಯನ್ನು ಮೀರಿ ಹೆಚ್ಚಿನ ಸ್ಥಿತಿಯನ್ನು ಹೊಂದಲಾರನು. ಇದೀಗ ನಮ್ಮ ಜಾತಿಭೇದದ ವಿಚಾರದೊಳಗಿನ ವಿಶೇಷ ಸಂಗತಿಯು. ಪ್ರಸಿದ್ಧ ಗ್ರೀಕ ತತ್ವಜ್ಞಾನಿಯಾದ ಆರಿಸ್ಟಾಟಲನು ಹೇಳಿರುವದೇನಂದರೆ, ಗುಲಾಮರು ಸ್ವಾಭಾವಿಕವಾಗಿಯೇ ಗ್ರೀಕರಿಗಿಂತ ಕಡಿಮೆ ಯೋಗ್ಯತೆಯವರಾಗಿರುವರು; ಅದರಿಂದಲೇ ಅವರು ನಮ್ಮ ಗುಲಾಮರಾಗುವರು. ಇದೇ ತರದ ವಿಚಾರಸರಣಿಯು ನಮ್ಮ ಜಾತಿಭೇದದ ವಿಚಾರದ ತಳ ಹ್ಲಿಯೂ ಇರುವದು ಇನ್ನು ಕೆಲವರು ತತ್ವಜ್ಞಾನಿಗಳು ಕರ್ಮ ಹಾಗು

ಪುನರ್ಜನ್ಮಗಳ ವಿಚಾರಗಳನ್ನು ಮುಂದೆ ಮಾಡಿ ಜಾತಿಭೇದದ ವಿಚಾರವನ್ನು ಸ್ಥಾಪಿಸಲು ಯತ್ನಿಸುವರು. ಈ ಸಂಬಂಧದ ವಿಶೇಷ ವಿಚಾರವನ್ನು "ಹಿಂದೂ ಸಮಾಜದವರ ಜಾತಿಭೇದವಿಚಾರವು" ಎಂಬ ಬೇರೊಂದು ಲೇಖದಲ್ಲಿ ಹೇಳುವೆವು. ಒಟ್ಟಿನ ಮೇಲೆ ಈ ಸಾಮಾಜಿಕ ವ್ಯಕ್ತಿಗಳೊಳಗಿನ ವಿಷಮತೆಯು ಅವರವರ ಗುಣಾವಗುಣಗಳನ್ನು ಅನುಲಕ್ಷಿಸಿ ನಿರ್ಣಯಿಸಲ್ಪಡದೆ ಇದ್ದದರಿಂದ ಅದು ಕೃತ್ರಿಮವೆನಿಸುವದು. ಕೇವಲ ಜನ್ಮಧಾರಣೆಯೇ ಇದಕ್ಕೆ ಕಾರಣವೆಂದು ಹೇಳುವದರಿಂದ ಅದು ಸಕಾರಣವಾದದ್ದಾಗುವದಿಲ್ಲ.

ತತ್ವಜ್ಞಾನದ ಸಂಬಂಧದ ವಿಚಾರವು ನಮ್ಮ ಸಮಾಜದೊಳಗಿನ ಇನ್ನೊಂದು ವಿಶಿಷ್ಟ ಕಲ್ಪನೆಯಾಗಿರುವದು:—ಹಿಂದೂಗಳ ಜಗನ್ಮಾನ್ಯತೆಗೆ ಈ ತತ್ವಜ್ಞಾನವೇ ಮುಖ್ಯಕಾರಣವೆಂದು ಅನೇಕರು ಹೇಳುವರು. ಆದದರಿಂದ ಆ ಸಂಬಂಧದ ನಾಲ್ಕು ಮಾತುಗಳನ್ನು ಇಲ್ಲಿ ಹೇಳುವೆವು:—

ಈ ಪ್ರಸಂಗದಲ್ಲಿ ಇನ್ನೊಂದು ಹೇಳತಕ್ಕ ಸಂಗತಿಯೇನಂದರೆ, ತತ್ವಜ್ಞಾನದ ನಿಜವಾದ ಮರ್ಮವನ್ನರಿತುಕೊಂಡು, ಈ ಜಗತ್ತನ್ನು ತೃಣಕ್ಕೆ ಬಗೆದು ಸರ್ವಸಂಗಪರಿತ್ಯಾಗ ಮಾಡಿ ಸನ್ಯಾಸಿಗಳಾಗಿ ಆಧ್ಯಾತ್ಮಿಕ ವಿಷಯದ ಅತಿ ನಿಗೂಢವಾದ ಪ್ರಶ್ನೆಗಳನ್ನು ಬಿಡಿಸಲೆಳಸುವ ಮಹನೀಯರ ತತ್ವಜ್ಞಾನದ ಸಂಬಂಧದಿಂದ ಯಾವ ವಿಚಾರವನ್ನೂ ಇಲ್ಲಿ ಹೇಳುವದಿಲ್ಲ. ಕೇವಲ ವ್ಯವಹಾರದಲ್ಲಿ ಕಂಡು ಬರುವ, ತಮ್ಮ ದುರ್ನಡತೆಗಳನ್ನು ಮುಚ್ಚಿಕೊಳ್ಳುವದರ ಸಲುವಾಗಿ ಕರ್ಮವಾದ ಮಾಯಾವಾದ ಶ್ರದ್ಧಾವಾದಗಳನ್ನು ಮುಂದೆ ಮಾಡುತ್ತಿರುವ ಮೂಢ ಜನಸಮುದಾಯದ ತತ್ವಜ್ಞಾನದ ಸಂಬಂಧದಿಂದ ಮಾತ್ರ ಒಂದೆರಡು ಮಾತುಗಳನ್ನು ಇಲ್ಲಿ ಹೇಳುವೆವು.

ನಮ್ಮ ವಾಙ್ಮಯದಲ್ಲಿ ಪ್ರಾಚೀನ ಇತಿಹಾಸದ ಕೊರತೆಯು ವಿಶೇಷವಾಗಿರುವದರಿಂದ, ಪೂರ್ವಕಾಲದಿಂದ ನಮ್ಮ ಸಮಾಜದ ಉನ್ನತಿಯು ಇಲ್ಲವೆ ಅವನತಿಯು ಯಾವ ಕ್ರಮದಿಂದ ಆಗುತ್ತ ಬಂದಿರುವದೆಂಬದನ್ನು ತಿಳಿದುಕೊಳ್ಳಲು ತಕ್ಕಷ್ಟು ಸಾಧನಗಳಿರುವದಿಲ್ಲ. ಹೀಗಿದ್ದರೂ ವೇದಗಳು, ಪುರಾಣಗಳು, ಕಾವ್ಯಗಳು ಮೊದಲಾದವುಗಳು ಈ ಕಾರ್ಯಕ್ಕೆ ತಕ್ಕಮಟ್ಟಿಗೆ ಸಹಾಯ ಮಾಡುವವು.

ವೇದಕಾಲದಲ್ಲಿ ಆರ್ಯರಲ್ಲಿ ತತ್ತ್ವಜ್ಞಾನದ ಉದಯವಾಗಿದ್ದಿಲ್ಲ. ಆ ಕಾಲವಲ್ಲಿ ಸೃಷ್ಟಿಯೊಳಗಿನ ನೈಸರ್ಗಿಕ ಸಂಗತಿಗಳನ್ನು ಕಲ್ಯಾಣಕರ ವಾದ ದೇವತೆಗಳಂತೆ ಆರ್ಯರು ಪೂಜಿಸುತ್ತಿದ್ದರು. ಈ ತರದ ಸಮಾಜದ ಪ್ರಥಮಾವಸ್ಥೆಯು ಇತರ ದೇಶಗಳ ಇತಿಹಾಸದಲ್ಲಿಯಾದರೂ ಕಂಡು ಬರುವದು. ಉದರನಿರ್ವಾಹದ ಸಲುವಾಗಿಯೂ ಆತ್ಮಸಂರಕ್ಷಣೆಗಾಗಿಯೂ ಹಗೆಗಳೊಡನೆ ಹಗಲಿರುಳು ಕಾದುತ್ತಿರುವಾಗ ಸಮಾಜದೊಳಗೆ ಆಧ್ಯಾತ್ಮಿಕ ವಿಚಾರವು ತಲೆದೋರಲಾರದು.

ಆರ್ಯರು ಉತ್ತರಹಿಂದುಸ್ತಾನದೊಳಗಿನ ಗಂಗಾ-ಯಮುನೆಗಳ ದಂಡೆಯಲ್ಲಿರುವ ಸುಫಲವಾದ ಭೂಮಿಯಲ್ಲಿ ವಾಸಿಸುತ್ತಿದ್ದಾಗ ಅವರ ತತ್ತ್ವಜ್ಞಾನಕ್ಕೆ ಅಥವಾ ಉಪನಿಷತ್ಕಾಲಕ್ಕೆ ಆರಂಭವಾಯಿತು. ಆ ಸಮಯದಲ್ಲಿ ಆರ್ಯರಿಗೆ ಯಾವ ಬಗೆಯ ತೊಂದರೆಯೂ ಇದ್ದಿಲ್ಲ. ಅವರು ಜಯಶಾಲಿಗಳಾದ್ದರಿಂದ ಶೂದ್ರರು ಅವರ ದಾಸ್ಯವನ್ನು ಸ್ವೀಕರಿಸಿದ್ದರು; ಕ್ಷತ್ರಿಯ-ವೈಶ್ಯರು ತಮ್ಮ ತಮ್ಮ ಕಾರ್ಯಗಳನ್ನು ನಿರಾತಂಕವಾಗಿ ನಡಿಸುತ್ತಿದ್ದದರಿಂದ ಬ್ರಾಹ್ಮಣರಿಗೆ ಕಾವ್ಯ-ಶಾಸ್ತ್ರಾದಿಗಳಲ್ಲಿ ಮನಸು ಹಾಕಲಿಕ್ಕೆ ಅನುಕೂಲವಾಯಿತು. ನಾನಾಪ್ರಕಾರದ ಶಾಂತತೆಯ ವಿಚಾರಗಳು ಸಮಾಜದಲ್ಲಿ ಸಮಾಧಾನವಿದ್ದಾಗಲೇ ಉಂಟಾಗುವವು. ಮೇಲೆ ಹೇಳಿದ ರೀತಿಯಾಗಿ ಆರ್ಯಸಮಾಜದಲ್ಲಿ ಶಾಂತತೆಯುಂಟಾದಾಗ ಅವರಲ್ಲಿ ತತ್ತ್ವಜ್ಞಾನವು ಉದಯ ಹೊಂದಿತು. ಹಾಗು ಇದರ ಪರಿಣಾಮವು ಮುಂದಿನ ಕಾಲದಲ್ಲಿ ವಿಶೇಷವಾಗಿ ಆಯಿತು.

ಆರ್ಯರು ಸಮಾಧಾನ ಸ್ಥಿತಿಯಲ್ಲಿದ್ದಾಗ ತಮ್ಮ ವಿರೋಧಿಗಳಾಗಿದ್ದ ದಾಸರಾದ ಶೂದ್ರವರ್ಗವನ್ನು ಸಮಾಧಾನಗೊಳಿಸುವದಕ್ಕಾಗಿ ದೈವವಾದವನ್ನು ಸೃಷ್ಟಿಸಿದರು. ಅದರೊಂದಿಗೆ ಪುನರ್ಜನ್ಮದ ವಿಚಾರವು ಜೋಡಿಸಲ್ಪಟ್ಟಿತು. ಒಟ್ಟಿನ ಮೇಲೆ ಆರ್ಯರು ಅನಾರ್ಯರಿಗೆ "ನಿಮ್ಮ ಪೂರ್ವದ ಕರ್ಮದ ಫಲವಾಗಿರುವದು. ಅವರವರ ಕರ್ಮಾನುಸಾರವಾಗಿ ಅವರವರಿಗೆ ಫಲವು ದೊರಕುವದು." ಇವೇ ಮುಂತಾದ ವಿಚಾರಗಳನ್ನು ಬೋಧಿಸಿ ಅವರನ್ನು ಸಮಾಧಾನಪಡಿಸಲೆಳಿಸಿದರು.

ಕರ್ಮಾನುಸಾರವಾಗಿ ಫಲವಾಗುವದು, ಎಂಬ ಸಿದ್ಧಾಂತವು ಆ ಸಮಯದಲ್ಲಿ ರಾಜಕೀಯ ದೃಷ್ಟಿಯಿಂದಲೂ ಅತ್ಯವಶ್ಯವಾಗಿತ್ತು.

ತಮ್ಮಿಂದ ಜಯಿಸಲ್ಪಟ್ಟ ಅನಾರ್ಯರನ್ನು ಯಾವದಾದರೊಂದು ರೀತಿ ಯಿಂದ ಸಮಾಧಾನಗೊಳಿಸಿ ದೇಶದಲ್ಲಿ ಶಾಂತತೆಯನ್ನು ನೆಲಗೊಳಿಸು ವದು ಆರ್ಯಮುತ್ಸದ್ದಿಗಳ ಉದ್ದೇಶವಾಗಿತ್ತು. ಸಾಂಪ್ರತಕಾಲದಲ್ಲಿ ಜಯಶಾಲಿಗಳಾದವರು "ಜಗತ್ತಿನ ಜೀವನ ಕಲಹದಲ್ಲಿ ಉತ್ತಮರ ಜಯವಾಗುವದು ಸ್ವಾಭಾವಿಕವು," ಎಂಬ ಉತ್ಕ್ರಾಂತಿ ತತ್ವವನ್ನು ಪ್ರತಿಪಾದಿಸಿ ಜಯಿಸಲ್ಪಟ್ಟವರನ್ನು ಸಮಾಧಾನಪಡಿಸಲಿಕ್ಕೆ ಯತ್ನಿಸು ತ್ತಿರುವರು. ಇದೇ ರೀತಿಯಾಗಿ ಆಗಿನಕಾಲದೊಳಗಿನ ಆರ್ಯಮುತ್ಸ ದ್ದಿಗಳು ಪುನರ್ಜನ್ಮ-ಕರ್ಮವಾದಗಳ ವಿಚಾರವನ್ನು ದೇಶದತುಂಬ ಸಾರಿ ಶೂದ್ರವರ್ಗವನ್ನು ಸಮಾಧಾನಪಡಿಸಿದರು.

ಸಾಂಪ್ರತಕಾಲದಲ್ಲಿ ಪ್ರಾಣಿಗಳ ಉತ್ಕ್ರಾಂತಿ ವಿಚಾರವು ಸಮಾಜದ ವಿಚಾರಗಳಿಗೆ ಸರಿಹೊಂದುವದಿಲ್ಲವೆಂಬದು ಸಿದ್ಧವಾಗಿದ್ದರೂ ಆ ವಿಚಾ ರವು ಯುರೋಪದೊಳಗಿನ ಸಾಮಾನ್ಯ ಜನತೆಗೆ ಸಮಂಜಸವೆನಿಸಹ ತ್ತಿದ್ದದರಿಂದ, ಅವರು "ಬಲಶಾಲಿಯಾದವನೇ ಜಯಶಾಲಿಯಾಗುವನು," ಎಂಬತತ್ವವನ್ನು ನಂಬಿಕೊಂಡು ನಡೆಯುವರೆಂದು ಹೇಳುವದುಂಟು. ಇದೇ ಮೇರೆಗೆ ಕರ್ಮವಾದ-ಪುನರ್ಜನ್ಮಗಳ ವಿಚಾರಗಳನ್ನು ಹುಟ್ಟಿಸಿದ್ದರ ನಿಜವಾದ ಉದ್ದೇಶವನ್ನು ತಿಳಿದುಕೊಳ್ಳುವಷ್ಟು ಯೋಗ್ಯತೆಯು ಅನಾ ರ್ಯರಲ್ಲಿದ್ದಿಲ್ಲ. ಹಾಗು ಎಷ್ಟು ಮಾಡಿದರೂ ತಮಗೆ ಜಯವು ದೊರೆ ಯದೆ ಇದ್ದದ್ದನ್ನು ನೋಡಿ ಅನಾರ್ಯರಿಗೆ ಆರ್ಯರು ಹೇಳುವ ತತ್ವಜ್ಞಾ ನದ ವಿಚಾರಗಳು ಸಮಂಜಸವೆನಿಸಿದವು. ಈ ಮೇರೆಗೆ ತತ್ವಜ್ಞಾನದ ವಿಚಾರಗಳು ಜಯಶಾಲಿಗಳಿಗೆ ಅವಶ್ಯವಿದ್ದದರಿಂದಲೂ ಜಯಿಸಲ್ಪಟ್ಟವ ರಿಗೆ ಸಮಂಜಸವೆನಿಸಿದ್ದರಿಂದಲೂ ಅವು ಬಹು ಬೇಗ ಪ್ರಸಾರ ಹೊಂದ ಲಿಕ್ಕೆ ಕಾರಣವಾಯಿತು.

ಈ ತತ್ವಜ್ಞಾನ ವಿಚಾರವೆಂಬ ಭಸ್ಮಾಸುರನ ಹಸ್ತವು ಕಾಲಾಂತರ ದಲ್ಲಿ ತಮ್ಮ ತಲೆಯ ಮೇಲೆಯೇ ಬೀಳಬಹುದೆಂಬ ವಿಚಾರವು ಆರ್ಯ ಮುತ್ಸದ್ದಿಗಳಿಗೆ ಸೂಚಿಸಲಿಲ್ಲ. ತತ್ವಜ್ಞಾನದ ವಿಚಾರವು ಕ್ರಮವಾಗಿ ಆರ್ಯರಲ್ಲಿಯೂ ಪ್ರವೇಶಿಸತೊಡಗಿತು. ಅನಾರ್ಯರಿಗಾಗಿ ತೋಡಿದ ಕುಣಿಯಲ್ಲಿ ಆರ್ಯರೂ ಬೀಳಹತ್ತಿದರು! ಅಜ್ಞಾತವಾದ ಪೂರ್ವಜ ನ್ಮದ ಕರ್ಮಾನುಸಾರವಾಗಿ ಇಹಜನ್ಮದ ಕರ್ಮದ ಫಲವು ದೊರೆಯು

ವದೆಂಬದನ್ನು ನಂಬಿ ನಡೆದರೆ ಉದ್ಯೋಗದಲ್ಲಿ ಸ್ಫೂರ್ತಿಯು ಹ್ಯಾಗೆ ಉಂಟಾಗಬೇಕು? ಹೀಗಾಗಿ ಆಲಸ್ಯ-ನಿರಾಶೆಗಳು ಹುಟ್ಟಿ ಆರ್ಯಸಮಾಜದ ಕಾರ್ಯಸ್ಫೂರ್ತಿಯು ನಾಶವಾಗತೊಡಗಿತು.

ಈ ತರದ ಕರ್ಮವಾದ-ಪುನರ್ಜನ್ಮಗಳ ವಿಚಾರದೊಂದಿಗೆ ಜಗನ್ಮಿಥ್ಯಾವಾದವು ಅಂದರೆ, ಈ ಜಗತ್ತು ಮಿಥ್ಯವಾದದ್ದು; ಈ ಯಾವತ್ತು ದೃಶ್ಯವಸ್ತುಗಳು ಒಂದಿಲ್ಲೊಂದು ದಿನ ನಾಶವಾಗಿ ಹೋಗುವವು; ಇವುಗಳ ಸಲುವಾಗಿ ಶ್ರಮಪಡುವದು ವ್ಯರ್ಥವೇ ಸರಿ, ಎಂಬ ವಿಚಾರಸರಣಿಯು ಪ್ರಬಲವಾಯಿತು.

" यदभावि न तद्भावी भावि चेन्न तदन्यथा " ಎಂಬ ವಿಚಾರವೂ, ನಾವು ಹುಟ್ಟುವಾಗ ತರಲಿಲ್ಲ, ಹೋಗುವಾಗ ಒಯ್ಯುವದಿಲ್ಲ, ಎಂಬ ಭಾವನೆಯೂ ಒಮ್ಮೆ ಮೈಯುಂಡಿತೆಂದರೆ, ಮನುಷ್ಯನ ಕಾರ್ಯಸ್ಫೂರ್ತಿಯು ಲಯ ಹೊಂದುವದರಲ್ಲಿ ಆಶ್ಚರ್ಯವೇನು? ನಮ್ಮ ಸಮಾಜದ ಉದ್ಯೋಗಹೀನತೆಗೆ ಕಾರಣವಾದ ಸಂಗತಿಗಳಲ್ಲಿ ಈ ಕರ್ಮವಾದ-ಮಾಯಾವಾದಗಳೇ ಮಹತ್ವವುಳ್ಳವುಗಳೆಂಬದನ್ನು ಪ್ರತಿಯೊಬ್ಬ ಪ್ರಜ್ಞಾವಂತನು ಜನರಲ್ಲಿಲ್ಲದಿದ್ದರೆ ಮನದಲ್ಲಿಯಾದರೂ ಒಪ್ಪಿಕೊಳ್ಳಲಿಕ್ಕೆಬೇಕು. ಹಿಂದೂ ಸಮಾಜದ ಕಾರ್ಯಸ್ಫೂರ್ತಿಯು ಕರ್ಮವಾದದ ವಿಚಾರದಿಂದ ಮೊದಲೇ ಕುಂಠಿತವಾಗಿತ್ತು; ಆ ಮೇಲೆ ಉಂಟಾದ ಮಾಯಾವಾದವು ಜಗತ್ತು ಮಿಥ್ಯವಾದದ್ದೆಂದು ಸಾರಿ, ಉದ್ಯೋಗದ ಅವಶ್ಯಕತೆಯೇ ಇಲ್ಲವೆಂದು ನಿರ್ಣಯಿಸಿ ಬಿಟ್ಟಿತು.

ಈ ವಿಚಾರಗಳ ಮೂಲಕವಾಗಿ ನಮ್ಮವರು ನಿವೃತ್ತಿಮಾರ್ಗಾವಲಂಬಿಗಳಾದರು. ಈ ನಮ್ಮ ನಿವೃತ್ತಿಮಾರ್ಗದ ಮುಂದೆ ಪ್ರವೃತ್ತಿಮಾರ್ಗಾವಲಂಬಿಗಳಾದ ಅನ್ಯರಾಷ್ಟ್ರದವರ ಉನ್ನತಿಯು ಕೇವಲ ತುಚ್ಛವಾದದ್ದೆಂದು ನಮ್ಮಲ್ಲಿ ಅನೇಕರು ಹೇಳುವದುಂಟು. ಹಿಂದುಸ್ತಾನವು ಪಾರಮಾರ್ಥಭೂಮಿಯೆಂಬ ಉದ್ಗಾರವು ಪರದೇಶಗಳಲ್ಲಿ ಒಮ್ಮೊಮ್ಮೆ ಕೇಳಬರುವದು. ಇದರಿಂದಂತೂ ನಮ್ಮವರಿಗೆ ಇನ್ನಿಷ್ಟು ಉತ್ತೇಜನವು ದೊರೆಯುವದು. ಅವರು ಹಿಂದುಸ್ತಾನವು ಯಾವತ್ತು ಜಗತ್ತಿಗೆ ಪಾರಮಾರ್ಥದ ಶಿಕ್ಷಣವನ್ನು ಹಾಕಿಕೊಡಬೇಕೆಂದು ಈಶ್ವರನ ಆಜ್ಞೆಯಿರುವದೆಂದು ಹೇಳುವರು. ಎಷ್ಟೋ ಮಂದಿ ಅರ್ಥಶಾಸ್ತ್ರಪಂಡಿತರು ಸತಿ

ಯಾಖಂಡವು ಔದ್ಯೋಗಿಕ ಯುರೋಪಖಂಡಕ್ಕೆ ಕಚ್ಚಾ ಸರಕುಗಳನ್ನು ಪೂರೈಸಿಕೊಡಬೇಕೆಂದು ಈಶ್ವರನ ಸಂಕೇತವಿರುವದೆಂದು ಪ್ರತಿಪಾದಿಸುವರು. ಈ ಮಾತಿನಲ್ಲಿ ಎಷ್ಟರಮಟ್ಟಿಗೆ ತಥ್ಯಾಂಶವಿರುವದೆಂಬದನ್ನು ವಿಚಾರವಂತರು ಸಹಜವಾಗಿ ತಿಳಿದುಕೊಳ್ಳಬಹುದು. ಊಟಮಾಡುವ ಪಾಳಿಯು ನನ್ನದು, ಎಂಜಲ ಬಳಿಯುವ ಪಾಳಿಯು ನಿನ್ನದು; ಹಾಸಿಗೆಯನ್ನು ಹಾಸುವ ಪಾಳಿಯು ನಿನ್ನದು, ಮಲಗಿಕೊಳ್ಳುವ ಪಾಳಿಯು ನನ್ನದು. ಈ ರೀತಿಯು ಕಾರ್ಯವಿಭಾಗ ಮಾಡುವದು ಎಷ್ಟರಮಟ್ಟಿಗೆ ಸಮಂಜಸವಾಗುವದೆಂಬದನ್ನು ವಾಚಕರೇ ನಿರ್ಣಯಿಸಬೇಕು. ಇದೇ ತರದ ವಿಚಾರವು ಹಿಂದೂ ಸಮಾಜದ ಪಾರಮಾರ್ಥಿಕ ವಿಚಾರದಲ್ಲಿಯಾದರೂ ಇರುವದು. ಹಿಂದುಸ್ತಾನವು ಜಗತ್ತಿಗೆ ಪಾರಮಾರ್ಥಿಕ ವಿಚಾರಗಳನ್ನು ಬೋಧಿಸುತ್ತ, ಉದ್ಯೋಗಸ್ಪರ್ಧೆಯನ್ನು ಬಿಟ್ಟುಬಿಟ್ಟು, ದಾರಿದ್ರ್ಯ ಪಂಕದಲ್ಲಿ ತೊಳಲಾಡುತ್ತಿರಬೇಕು. ಅನ್ಯರಾಷ್ಟ್ರದವರು ಇದರಿಂದ ಕಚ್ಚಾ ಸರಕುಗಳನ್ನು ದೊರಕಿಸಿಕೊಂಡು ವ್ಯಾಪಾರೋದ್ಯೋಗಗಳನ್ನು ನಡಿಸಿ ಸಕಲೈಶ್ವರ್ಯಸಂಪನ್ನರಾಗಿ ಸುಖಪಡಬೇಕು; ಈ ವಿಚಾರವು ನಮ್ಮ ತತ್ವಜ್ಞಾನಾಭಿಮಾನಿಗಳಿಗೆ ಸಮಂಜಸವೆನಿಸುವದು!

ಸಮಾಜವಿದ್ದಲ್ಲಿ ಸಮಾಜದ ಬಂಧನಗಳು ಇರಲಿಕ್ಕೆ ಬೇಕು. ಅದರಂತೆ ರಾಷ್ಟ್ರದ ಕಲ್ಪನೆಯಿದ್ದಲ್ಲಿ ಅದರ ಸಂರಕ್ಷಣೆಯ ವಿಚಾರಗಳು ಇರಲಿಕ್ಕೆ ಬೇಕು; ಅದರೊಡನೆ, ಸ್ಪರ್ಧೆಯನ್ನು ವಹಿಸುವ ಇಚ್ಛೆ ಇರಬೇಕು; ಉದ್ಯೋಗಲಾಲಸತೆ ಇರಬೇಕು. ಅಂಥಲ್ಲಿ ನಿವೃತ್ತಿ ಮಾರ್ಗವನ್ನು ಅವಲಂಬಿಸುವದು ಹಾಸ್ಯಾಸ್ಪದವು; ಅಯೋಗ್ಯವು. ಮಧ್ಯಾಹ್ನದ ಹನ್ನೆರಡು ಹೊಡೆದಾಗ ಒಳಗೆ ಅನ್ನಕ್ಕೆ ಅಕ್ಕಿ ಇಲ್ಲದಿದ್ದರೆ ಸಂಸಾರವು ಮಿಥ್ಯವಾದದ್ದು ಎಂಬ ವಿಚಾರವು ಬರಲಾರದು; ಸುಮ್ಮನೆ ಕೂಡ್ರಲು ಮನಸ್ಸು ಒಪ್ಪದು. ಹುಟ್ಟಿದವನು ಸಾಯಲೇ ಬೇಕು ಎಂದ ಮಾತ್ರಕ್ಕೆ ಜಗತ್ತು ಮಿಥ್ಯವಾದದ್ದು, ಎಂದು ಹೇಳುವದು ಸರಿಯಲ್ಲ. ಕಡೆಗೆ ಪುನರ್ಜನ್ಮವನ್ನು ಒಪ್ಪಿಕೊಳ್ಳುವ ಜನರಾದರೂ ಈ ವಿಚಾರವನ್ನು ಹೇಳಬಾರದು. ನಿನ್ನೆ ಊಟಮಾಡಿದ್ದು ಜೀರ್ಣವಾಗಿ ಹೋಗಿದೆ; ಈಗ ಊಟ ಮಾಡಿದ್ದು ನಾಳೆ ಉಳಿಯುವದಿಲ್ಲ; ಎಂದ ಮಾತ್ರಕ್ಕೆ ಊಟ ಮಾಡುವದು ಸುಳ್ಳೆಂದು ಹೇಳಬಹುದೆ? ಊಟದ ಅವಶ್ಯಕತೆಯು ಇಲ್ಲವೆಂದು ಹೇಳಬಹುದೇ?

ಮನುಷ್ಯನು ಏನಾದರೊಂದು ಉದ್ದೇಶವಿಲ್ಲದೆ ಕಾರ್ಯವನ್ನು ಆರಂಭಿಸಲಾರನು. ಫಲಾಪೇಕ್ಷೆ ಇಲ್ಲದೆ ಕಾರ್ಯವನ್ನು ಮಾಡುವದು ಯೋಗ್ಯವಾಗಿದ್ದರೂ ಅದು ಸರ್ವಸಾಧ್ಯವಾದ ಸಂಗತಿಯಲ್ಲ.

ಪತ್ನೀಪುತ್ರರು ನಮ್ಮವರಲ್ಲ, ನಾವು ಗಳಿಸಿದ ಧನವು ನಮ್ಮದಲ್ಲ, ಎಂಬ ತಾತ್ತ್ವಿಕ ವಿಚಾರವನ್ನು ಅನುಸರಿಸುವ ಮಹನೀಯರು ನಮ್ಮಲ್ಲಿ ತೀರ ದುರ್ಲಭವು. ಮುಪ್ಪಿನ ಮುದುಕನಾಗಿದ್ದರೂ ಮೊದಲಿನ ಹೆಂಡತಿಯು ಸತ್ತಕೂಡಲೆ ಏನಾದರೊಂದು ನೆವವನ್ನು ಹೇಳಿ ಎಂಟು ವರುಷದ ಬಾಲಿಕೆಯನ್ನು ಮದುವೆ ಮಾಡಿಕೊಂಡು ಅವಳನ್ನು ಸುಖಕ್ಕೆ ಎರವಾಗಿ ಮಾಡುವ ಜನರು ನಮ್ಮ ಸಮಾಜದಲ್ಲಿ ಕಡಿಮೆಯಾಗಿರುವರೇ? ಆಮರಣ ದುಃಖಭಾಗಿನಿಯಾದ ಪತ್ನಿಯನ್ನು ಮರೆತು, ಮರಣಾನಂತರ ತನಗೊಂದು ಗುಟಕು ನೀರು ದೊರೆಯಲೆಂಬ ಆಶೆಯಿಂದ ದತ್ತಕಪುತ್ರನನ್ನು ಮಾಡಿಕೊಂಡು ಅವಳನ್ನು ಭಕ್ಕರೀ ಬೇಡಲಿಕ್ಕೆ ಕಳುಹಿಸುವ ಜನರೇನು ಕಡಿಮೆಯಾಗಿರುವರು? ಮಿಥ್ಯಾಪುತ್ರನು ಮಿಥ್ಯಾಜಲವನ್ನು ಈ ಮಿಥ್ಯಾಲೋಕದಲ್ಲಿ ಅರ್ಪಿಸಿದ ಮಾತ್ರಕ್ಕೆ ಅದು ಆ ಲೋಕಕ್ಕೆ ಹೋಗಿ ಮುಟ್ಟುವ ಬಗೆಯೆಂತು? ಈ ಸಮಯದಲ್ಲಿ ಅವರ ತಾತ್ತ್ವಿಕ ವಿಚಾರವು ಎಲ್ಲಿ ಹೋಗಿರುವದು? ತುಡುಗು ಮಾಡಿ ತುರಂಗಕ್ಕೆ ಹೋಗುವ ತುಡುಗನು—"ನನ್ನ ಪೂರ್ವದ ವಿಧಿ!" ಎಂದು ಹೇಳುವನು. ಎರಡನೆಯವರನ್ನು ಕೊಂದ ಬಳಿಕ ಪಶ್ಚಾತ್ತಾಪ ಪಡುವವನಿಗೆ ಉಪದೇಶ ಮಾಡುವರು—"ನೀನೇನು ಮಾಡುತ್ತೀ? ನಿನ್ನ ಕೈಯಿಂದ ಸಾಯಬೇಕೆಂದು ಆತನ ಹಣೆಯಲ್ಲಿ ಬರೆದಿತ್ತು," ಎಂದು ಸಮಾಧಾನ ಮಾಡುವರು. ಧನಿಕನು ಬಲಾತ್ಕಾರದಿಂದ ಎರಡನೆಯವರ ಸ್ವತ್ತನ್ನು ಅಪಹರಿಸಿದಾಗ-"ಈ ಜನ್ಮದಲ್ಲಿ ಅಲ್ಲದಿದ್ದರೆ ಮುಂದಿನ ಜನ್ಮದಲ್ಲಿಯಾದರೂ ಕೊಡುವನು; ಎತ್ತುಕತ್ತೆಯಾಗಿ ದುಡಿದು ತೀರಿಸುವನು," ಎಂದು ಸಮಾಧಾನ ಹೇಳುವರು. ಆದರೆ ಅನ್ಯಾಯವನ್ನು ಆಚರಿಸಿದವನ ಎದುರಿಗೆ ಹೋಗಿ—"ನೀನು ಹೀಗೆ ಮಾಡುವದು ಸರಿಯಲ್ಲ," ಎಂದು ಧೈರ್ಯದಿಂದ ಮಾತಾಡುವದು ಒಬ್ಬರ ಕಡೆಯಿಂದಲೂ ಆಗದು. ಒಟ್ಟಿನ ಮೇಲೆ, "ಮಾಡುವವನೂ ಮಾಡಿಸುವವನೂ ಪರಮೇಶ್ವರನೇ. ನಮ್ಮ ಕೈಯ್ಯಲ್ಲೇನಿರುವದು?" ಎಂಬ ವಿಚಾರವು, ಮಾಡುವಷ್ಟು ಅನ್ಯಾಯಕಾರ್ಯಗಳನ್ನೆಲ್ಲಾ ಆದ ಮೇಲೆಯೇ ನೆನಪಿಗೆ ಬರುವದು.

ಕರ್ಮವಾದ-ಮಾಯಾವಾದಗಳಿಂದ ನಮ್ಮ ಸಮಾಜದ ಉದ್ಯೋಗ ಲಾಲಸತೆಯು ಕುಂದಿ ಹೋಗಿ ನೈಗಳ್ಳತನವೇ ಮೊದಲಾದ ದುರ್ಗುಣಗಳು ನಮ್ಮಲ್ಲಿ ಸೇರಿಕೊಂಡಂತೆ, ಶ್ರದ್ಧಾವಾದದಿಂದ ನಮ್ಮವರ ಚಿಕಿತ್ಸಾಬುದ್ಧಿಯು ನಷ್ಟವಾಗಿ ಹೋಗಿರುವದು. ಚಿಕಿತ್ಸಾ ಬುದ್ಧಿಯು ಜ್ಞಾನದ ತಾಯಿಯು. ನ್ಯೂಟನ್ನನು ಹುಟ್ಟುವದಕ್ಕಿಂತ ಮೊದಲು ಎಷ್ಟು ಹಣ್ಣುಗಳು ಗಿಡದಿಂದ ಕೆಳಗೆ ಬಿದ್ದಿರಲಿಲ್ಲ? ಅವನು ಇದರಲ್ಲೇನಿದೆ? ಇದರಲ್ಲಿ ಏನಾದರೂ ವಿಶೇಷವಿದ್ದರೆ ನಮ್ಮ ಹಿರಿಯರು ಹೇಳಿರುತ್ತಿದ್ದಿಲ್ಲೇನು ಎಂದು ತಿಳಿದು ಸುಮ್ಮನೆ ಇದ್ದರೆ ಗುರುತ್ವಾಕರ್ಷಣದ ನಿಯಮವು ಹ್ಯಾಗೆ ಬೈಲಿಗೆ ಬರುತ್ತಿತ್ತು? ಅಥವಾ ಸರ್ ಜೇಮ್ಸ ವಾಟನು ಚಹಾ ಪಾತ್ರೆಯ ಮುಚ್ಚಳವು ಕುಣಿಯುತ್ತಿದ್ದಾಗ ನಮ್ಮ ಅಜ್ಜಮುತ್ತಂದಿರು ಇದರ ವಿಷಯವಾಗಿ ಏನೂ ಹೇಳಿಲ್ಲ, ಅಂದಮೇಲೆ ನಾನಾದರೂ ಯಾಕೆ ವಿಚಾರ ಮಾಡಬೇಕು? ಎಂದು ತಿಳಿದು ಸುಮ್ಮನೆ ಕುಳಿತುಕೊಂಡು ಬಿಟ್ಟಿದ್ದರೆ ಉಗಿಯ ಯಂತ್ರಗಳ ಉತ್ಪತ್ತಿಯು ಎಲ್ಲಿ ಆಗುತ್ತಿತ್ತು? ಒಟ್ಟಿನ ಮೇಲೆ, ಪೂರ್ವದವರು ಹೀಗೆ ಹೇಳಿದ್ದಾರೆ; ನಾವು ಹೀಗೆ ಆಚರಿಸುವೆವು, ಎಂಬ ಅಂಧಶ್ರದ್ಧೆಯು ಜ್ಞಾನೋದಯಕ್ಕೆ ಸಂಪೂರ್ಣ ವಿಘ್ನಕಾರಿಯಾಗಿರುವದು.

ಹಿಂದುಸ್ಥಾನವು ಪಾರಮಾರ್ಥ ಭೂಮಿಯೆಂದು ಹೇಳುವದರಲ್ಲಿ ಏನೂ ಅರ್ಥವಿಲ್ಲ. ಎರಡನೇ ಕಡೆಗಳಲ್ಲಿ ಅನ್ಯಾಯ ಅತ್ಯಾಚಾರಗಳು ಹ್ಯಾಗೆ ನಡೆಯುವವೋ ಹಾಗೆ ಇಲ್ಲಿಯಾದರೂ ನಡೆಯುವವು. ಕಳವು-ಕೊಲೆ-ಸುಲಿಗೆಗಳೂ ಖೊಟ್ಟಿ ಕತಬೆಗಳೂ ಅಸಂಖ್ಯ ಪರಿಮಾಣವಾಗಿ ನಡೆಯುವದನ್ನು ನಾವು ಕಣ್ಣಾರೆ ಕಾಣುತ್ತಲಿದ್ದೇವೆ. ನಮ್ಮ ಹಿರಿಯರ ಹೇಳಿಕೆಯಂತೆ ನೋಡಿದರಂತೂ ನಮ್ಮಲ್ಲಿ ಕಲಿಯ ಸಾಮ್ರಾಜ್ಯವೇ ನಡೆದಿರುವದೆಂಬದು ಗೊತ್ತಾಗುವದು. ಆದರಿಂದ ಹಿಂದುಸ್ಥಾನಕ್ಕೆ ಪಾರಮಾರ್ಥ ಭೂಮಿಯೆಂದು ಹೇಳುವದಕ್ಕಿಂತಲೂ ಪಾರಮಾರ್ಥದ ಸ್ಮಶಾನ ಭೂಮಿಯೆಂದು ಹೇಳಿದರೆ ಹೆಚ್ಚಿಗೆ ಒಪ್ಪುವದು. ಒಂದಾನೊಂದು ಕಾಲದಲ್ಲಿ ಈ ದೇಶದಲ್ಲಿ ಕೆಲವರು ಮಹನೀಯರಾದ ತತ್ವಜ್ಞಾನಿಗಳು ಆಗಿ ಹೋದರು. ಆದರೆ ನಾವು ಈಗ ಅವರ ಸಂತತಿಯವರೆಂದು ಅಭಿಮಾನ ವಹಿಸಿ ಅವರ ಹೆಸರು ತೆಗೆದುಕೊಂಡರೆ ಅವ

ರುಹನೀಯತೆಗೆ ಕಲಂಕ ತಂದಂತಾಗುವದು. ಅಂಥ ಋಷಿವರ್ಯರ ಸಂತತಿಯಲ್ಲಿ ನಾವು ಹುಟ್ಟಿದ್ದು ಸೂರ್ಯನ ಹೊಟ್ಟೆಯಲ್ಲಿ ಶನಿಯು ಹುಟ್ಟಿದಂತಾಗಿರುವದು. ಆದರಿಂದ ತತ್ವಜ್ಞಾನದ ಹೆಸರಿನಿಂದ ನಿರು ದ್ಯೋಗಿಗಳಾಗಿ, ಚಿಕಿತ್ಸಾಬುದ್ಧಿಯನ್ನು ಕಳೆದುಕೊಂಡು, ಕರ್ತೃತ್ವ ಶಕ್ತಿಹೀನರಾಗಿ, ಜಗತ್ತಿನ ದಾಸ್ಯವನ್ನು ಸ್ವೀಕರಿಸುವದಕ್ಕೆ ಸಿದ್ಧರಾಗು ವದು ಎಷ್ಟು ಮಾತ್ರವೂ ಸರಿಯಲ್ಲ.

ನಮ್ಮ ಸಮಾಜದವರ ಪಾಪ ಪುಣ್ಯಗಳ ಸಂಬಂಧದ ವಿಚಾರವಾ ದರೂ ವಿಚಿತ್ರವಾದದ್ದಿರುವದು. ಅಸ್ಪೃಶ್ಯರಾದ ಜನರನ್ನು ಮುಟ್ಟುವದೂ ಪಾಪ; ಪರರ ಪ್ರಾಣಾಪಹರಣವೂ ಪಾಪ; ಕೆಲಸ ಮಾಡುವದಕ್ಕೆ ಸಾಮ ರ್ಥ್ಯವಿದ್ದು ಬಿಕ್ಕೆ ಬೇಡುವದೇ ಚರಿತಾರ್ಥಕ್ಕೆ ಸುಲಭೋಪಾಯವೆಂದು ತಿಳಿದುಕೊಂಡು ಮೈಗಳ್ಳನಾಗಿ ಮನೆಯ ಬಾಗಿಲಿಗೆ ಬಂದ ತಿರುಕನನ್ನು ತಿರುಗಿ ಕಳುಹಿಸುವದೂ ಪಾಪ; ಪರರ ಸ್ವತ್ತಾಪಹರಣವೂ ಪಾಪ; ಈ ತರದ ಹೆಜ್ಜೆ ಹೆಜ್ಜೆಗೆ ಒದಗುತ್ತಿರುವ ಪಾಪಗಳ ಕ್ಷಾಲನಕ್ಕಾದರೂ ವಿಶೇಷ ತೊಂದರೆಯಿಲ್ಲ. ಗಂಗಾನದಿಯಲ್ಲಿ ಹೋಗಿ ಮುಳುಗಿದರೆ ತೀರಿತು; ಮೈಮೇಲಿನ ಧೂಳಿಯು ತೊಳೆದು ಹೋಗುವಂತೆ ಸಕಲ ಪಾಪವೂ ತೊಳೆದು ಹೋಗಿ, ನರಹತ್ಯಾದಿ ದೋಷಗಳನ್ನು ಮಾಡಿದ ನೀಚನಿಗೂ ಮೋಕ್ಷದ ಮಾರ್ಗವು ಸುಗಮವಾಗುವದು. ಬ್ರಾಹ್ಮಣ ರಿಗೆ ಮೂರು ದುಡ್ಡು ಕೊಟ್ಟು ಊಟ ಹಾಕಿದರೆ ತೀರಿತು; “ಸ್ವರ್ಗಂಗ ಚ್ಛಂತು ಪಿತರಃ” ಎಂದು ಹೇಳಿ ಬಿಡುವರು. ಈ ತರದ ಪಾಪ ಪುಣ್ಯಗಳ ವಿಚಾರದಿಂದ ಮಾನವ ಶರೀರವು ಒಂದು ಯಂತ್ರವೆಂದು ಅಂದಂತಾಗು ವದು; ಪಾಪಪುಣ್ಯಗಳು ಅಂತಃಕರಣದ ಪವಿತ್ರಾಪವಿತ್ರತೆಯನ್ನು ಅವ ಲಂಬಿಸಿರುವವೆಂಬ ವಿಚಾರವು ಹೋಗಿ ಬಿಡುವದು.

ನಮ್ಮ ಸಾಮಾನ್ಯಜನಸಮೂಹದ ದೇವರ ಸಂಬಂಧದ ವಿಚಾರ ವಾದರೂ ವಿಚಿತ್ರವಾದದ್ದೇ ಸರಿ. ಖೊಟ್ಟಿ ಕತಬಿಯನ್ನು ಮಾಡಿದವನು ಬೇಡಿಕೊಳ್ಳುವದು—“ದೇವರೇ, ಈ ಸಾರೆ ನನಗೆ ಬಿಡುಗಡೆಯಾದರೆ ನಿನಗೆ ಒಂದು ನಂದಾದೀಪವಿಡುವೆನು.” ತುಡುಗು ಮಾಡಿದ ತುಡುಗನು ಹೇಳಿಕೊಳ್ಳುವನು “ಪರಮೇಶ್ವರಾ, ಈ ಕಳವು ನನಗೆ ದಕ್ಕಿದರೆ ನಿನಗೆ ಒಂದು ಭಂಗಾರದ ಸರಿಗೆಯನ್ನು ಒಪ್ಪಿಸುವೆನು.” ಪರೀಕ್ಷೆಗೆ ಹೋಗುವ

ವಿದ್ಯಾರ್ಥಿಯು ಬೇಡಿಕೊಳ್ಳುವದೇನಂದರೆ, "ನಾನು ಈ ಸಾರೆ ಪರೀಕ್ಷೆಯಲ್ಲಿ ಪಾಸಾದರೆ ಒಂದು ಸತ್ಯನಾರಾಯಣ ವ್ರತವನ್ನು ಮಾಡಿಕೊಳ್ಳುವೆನು." ಈ ವಿಚಾರಗಳನ್ನು ನೋಡಿದರೆ, ದೇವರು ಪ್ರಾಪಂಚಿಕನಾದ ಒಬ್ಬ ಲಂಚಖೋರನಾದ ದೊಡ್ಡ ಅಧಿಕಾರಿಯೆಂದಂತಾಗುವದು. ಸೃಷ್ಟಿಕರ್ತನ ಅಗಾಧವಾದ ಮಹಿಮೆಗಳನ್ನು ಅರಿತುಕೊಂಡು ಆತನ ಸಂಬಂಧದ ಮಹತ್ವದ ಸಿದ್ಧಾಂತಗಳನ್ನು ಜಗತ್ತಿಗೆ ಬೋಧಿಸಿದ ಋಷಿವರ್ಯರ ಸಂತತಿಯವರಲ್ಲಿ ಇಂಥ ವಿಚಾರಗಳೇ! ಕಾಲಾಯ ತಸ್ಮೈ ನಮಃ!

ವಿದ್ಯಾಖಾತೆಯ ನೋಟೀಸುಗಳು.

ನೋಟೀಸು.

ದೇಶಭಾಷೆಯ ಶಾಲೆಗಳ ಶಿಕ್ಷಕರ ಮತ್ತು ಶಿಕ್ಷಕಿಯರ ಕಾಯಿದೆ (೧೯೧೧) ಯಲ್ಲಿ ತಿದ್ದುಪಡಿ:—

ಸದರೀ ಕಾಯಿದೆಯ ೫ನೆಯ ಪ್ರಕರಣದ ೩ನೆಯ ನಿಯಮದ ೬ ನೆಯ ಸಾಲಿನಲ್ಲಿ ೩೦ ಎಂಬದಕ್ಕೆ ಬದಲಾಗಿ ೩೫ ಎಂದು ಬದಲು ಮಾಡಿರಿ.

ಇದೇ ನಿಯಮದ ಕೊನೆಗೆ ಚಕ್ರವರ್ತಿಯವರ ಜನ್ಮದಿವಸ ಎಂಬದರ ಕೆಳಗೆ "ದರ್ಬಾರ ಡೇ (ದಿಶಂಬರ ೧೨ನೆಯ ತಾರೀಖು)" ಎಂದು ಸೇರಿಸಿರಿ.

ಜಾಹೀರಾತು.

ಇದರ ಮೂಲಕ ಜಾಹೀರುಪಡಿಸುವದೇನಂದರೆ—"ಹಿಂದುಸ್ತಾನದಲ್ಲಿ ಬ್ರಿಟಿಶರ ಆಡಳಿತದಿಂದ ಕಳೆದ ೫೦ ವರ್ಷಗಳಲ್ಲಿ ಉಂಟಾದ ಕೆಲವು ಪರಿಣಾಮಗಳ ವಿವರವು" ಎಂಬ ಇಂಗ್ಲಿಷ ಮೂಲಗ್ರಂಥದ ಕನ್ನಡ ಭಾಷಾಂತರವು ಪ್ರಸಿದ್ಧಮಾಡಲ್ಪಟ್ಟಿರುವದು. ಮತ್ತು ಅದರ ಪ್ರತಿಗಳು ಪ್ರತಿ ಒಂದು ಪ್ರತಿಗೆ ೧ ರೂಪಾಯಿ ಕ್ರಯಕೊಟ್ಟಲ್ಲಿ, ಮ್ಯಾನೇಜರ ಗವ್ಹರ್ನಮೆಂಟ ಸೆಂಟ್ರಲ್ ಪ್ರೆಸ್, ಮುಂಬಯಿ, ಎಂಬವರಲ್ಲಿ ದೊರೆಯುವವು.

ಡಾಯರೆಕ್ಟರ ಆಫ್ ಪಬ್ಲಿಕ್
ಇನ್ಸಟ್ರಕ್ಷನ್‌ರವರ ಆಫಿಸು ಪುಣೆ.
ತಾ॥ ೩೦ನೇ ಮಾರ್ಚ ೧೯೧೫

A. L. COVERNTON,
ಅ॥ ಡಾಯರೆಕ್ಟರ ಆಫ್ ಪಬ್ಲಿಕ್
ಇನ್ಸಟ್ರಕ್ಷನ್.

ಜಾಹೀರಾತ ನ. ೧೬೩೭೭.

ಈ ಮೂಲಕ ಜಾಹೀರು ಪಡಿಸುವದೇನಂದರೆ, "ಮೇಸರ್ಸ ಮ್ಯಾಕ ಮಿಲನ್ ಎನ್ನು ಕಂಪನಿಯವರ ಮರಾಠಿ, ಗುಜರಾಥಿ, ಕನ್ನಡ, ಮತ್ತು ಸಿಂಧಿ ಎಂಬ ನಾಲ್ಕು ದೇಶಭಾಷೆಗಳಲ್ಲಿರುವ ಬಾಲಕರ ಪುಸ್ತಕವನ್ನೂ ಏಳು ಕ್ರಮಿಕ ವಾಚನ ಪುಸ್ತಕಗಳನ್ನೂ ಪ್ರಸಿದ್ಧ ಪಡಿಸುವ ಕರಾರನ್ನು, ಅವರು ತಾರೀಖು ೧ನೇ ಅಕ್ಟೋಂಬರ ೧೯೧೫ನೆಯಿಂದ, ಕೆಳಗೆ ಬರೆದಂತೆ ಸದರೀ ಪುಸ್ತಕಗಳ ಕ್ರಯವನ್ನು ಕಡಿಮೆ ಮಾಡಬೇಕೆಂಬ ಶರ್ತಿನಿಂದ, ಸರಕಾರದವರು ಸದರೀ ತಾರೀಖಿನಿಂದ ಪುನಃ ಹತ್ತು ವರ್ಷಗಳ ವರೆಗೆ ಮಂಜೂರು ಮಾಡಿದ್ದಾರೆ:—

	ಈಗಿನ ಕ್ರಯ.	ಕಡಿಮೆ ಮಾಡಿದ ಕ್ರಯ,
	ರೂ. ಆ. ಪೈ.	ರೂ. ಆ. ಪೈ.
೧ನೆಯ ಪುಸ್ತಕ:—ಪೂರ್ಣ ಅರಿವೆಯ ಬೈಂಡಿಂಗದ್ದು	೦—೧೦—೦	೦—೮—೦
ಕಾಗದ ರಟ್ಟಿನ ಬೈಂಡಿಂಗದ್ದು	೦—೯—೦	೦—೭—೦
೨ನೆಯ ಪುಸ್ತಕ:—ಪೂರ್ಣ ಅರಿವೆಯ ಬೈಂಡಿಂಗದ್ದು	೦—೮—೦	೦—೭—೦
ಕಾಗದ ರಟ್ಟಿನ ಬೈಂಡಿಂಗದ್ದು	೦—೭—೦	೦—೬—೦
೩ನೆಯ ಪುಸ್ತಕ:—ಪೂರ್ಣ ಅರಿವೆಯ ಬೈಂಡಿಂಗದ್ದು	೦—೭—೦	೦—೬—೦
ಕಾಗದ ರಟ್ಟಿನ ಬೈಂಡಿಂಗದ್ದು	೦—೬—೦	೦—೫—೦
೪ನೆಯ ಪುಸ್ತಕ:—ಪೂರ್ಣ ಅರಿವೆಯ ಬೈಂಡಿಂಗದ್ದು	೦—೬—೦	೦—೫—೦
ಕಾಗದ ರಟ್ಟಿನ ಬೈಂಡಿಂಗದ್ದು	೦—೫—೦	೦—೪—೬
೫ನೆಯ ಪುಸ್ತಕ:—ಪೂರ್ಣ ಅರಿವೆಯ ಬೈಂಡಿಂಗದ್ದು	೦—೫—೦	೦—೪—೦
ಕಾಗದ ರಟ್ಟಿನ ಬೈಂಡಿಂಗದ್ದು	೦—೪—೦	೦—೩—೬
೬ನೆಯ ಪುಸ್ತಕ:—ಕಾಗದದ ಮೇಲೆ ಅರಿವೆ ಹಚ್ಚಿದ ಬೈಂಡಿಂಗದ್ದು	೦—೩—೬	೦—೩—೦
ವ್ಯಾನಿಲಾ	೦—೩—೦	೦—೨—೬
೭ನೆಯ ಪುಸ್ತಕ:—ವ್ಯಾನಿಲಾ	೦—೨—೬	೦—೨—೬
ಬಾಲಬೋಧಿನಿ:—	೦—೧—೬	೦—೧—೬ ಅಥವಾ ೦—೧—೦

೨. ಮೇಲ್ಕಾಣಿಸಿದ ಕರಾರಿನ ಮುದ್ದತಿನಲ್ಲಿ ಪುಸ್ತಕಗಳ ಮಾರಾಟ ಮಾಡುವವರಿಗೆ ಸದರೀ ಪುಸ್ತಕಗಳ ಪ್ರಸಿದ್ಧಪಡಿಸಿದ ಕ್ರಯಗಳ ಮೇಲೆ ಶೇಕಡಾ ೧೫ ರಂತೆಯೂ ಸರಕಾರದ ಬುಕ್ ಡಿಪೋನಿಗೆ ಶೇಕ

ಷಾ ೨೦ ಠರಕತೆಯೂ ಡಿಸ್ಕಾಂಟ ಕೊಡುವದಕ್ಕೆ ಮೆಸರ್ಸ ಮ್ಯಾಕಮಿಲನ್ ಎನ್ನ ಕಂಪನಿಯವರು ಒಪ್ಪಿಕೊಂಡದ್ದನ್ನು ಸರಕಾರದವರು ಮಾನ್ಯ ಮಾಡಿರುವರು.

ಡಿರೆಕ್ಟರ ಆಫ್ ಪಬ್ಲಿಕ್ ಇನ್ಸಟ್ರಕ್ಶನ್‌ರವರ ಆಫೀಸು. ಪುಣೆ ತಾ|| ೧೩ ನೇ ಫೆಬ್ರುವರಿ ೧೯೧೫ } W. H. SHARP. ಡಿರೆಕ್ಟರ ಆಫ್ ಪಬ್ಲಿಕ್ ಇನ್ಸಟ್ರಕ್ಶನ್

ನೋಟೀಸು.

ಧಾರವಾಡ ಹೆಂಣುಮಕ್ಕಳ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಬರುವ ಅಕ್ಟೋಬರ ತಿಂಗಳ ೧೫ನೇ ತಾರೀಖಿನ ದಿವಸ ಮುಂಜಾನೆ ೧೧|| ಗಂಟೆಗೆ ಪ್ರಾರಂಭವಾಗುವದು. ಪರೀಕ್ಷೆಗೆ ಕೂಡ್ರಲಿಚ್ಛಿಸುವ ವಿದ್ಯಾರ್ಥಿನಿಯರು ತಮ್ಮ ಜಿಲ್ಹೆಯ ಡೆಪ್ಯೂಟಿ ಎಜ್ಯುಕೇಶನಲ್ಲ ಇನ್ಸಪೆಕ್ಟರರವರ ಮುಖಾಂತರ ತಮ್ಮ ಅರ್ಜಿಗಳನ್ನು ೧೯೧೫ ನೇ ಇಸವಿಯ ಸಪ್ಟಂಬರ ತಿಂಗಳ ೧೫ನೇ ತಾರೀಖಿನೊಳಗಾಗಿ ನಮಗೆ ಮುಟ್ಟುವಂತೆ ಕಳಿಸತಕ್ಕದ್ದು. ಅರ್ಜದಾರಳು ತನ್ನ ಅರ್ಜಿಯ ಲಗತ ತನ್ನ ನಡತೆಯೂ, ಸ್ವಭಾವವೂ ನೆಟ್ಟಗಿರುವಬಗ್ಗೆ ಸರಕಾರೀ ನವಕರಿಯಲ್ಲಿರುವ ಒಬ್ಬ ಸಭ್ಯಗೃಹಸ್ಥರ ಅಥವಾ ಶಾಲಾಖಾತೆಯ ಅಮಲದಾರರ ಸಹಿ ಇರುವ ಒಂದು ಸರಟೀಫಿಕೀಟನ್ನು ಇಟ್ಟು ಕಳಿಸತಕ್ಕದ್ದು. ವಿದ್ಯಾರ್ಥಿನಿಯರು ಪರೀಕ್ಷೆಗೆ ಬರುವಾಗ ತಾವು ಕಲಿಯುತ್ತಿದ್ದ ಅಥವಾ ಕಲಿತು ಬಿಟ್ಟ ಸಾಲಿಯಿಂದ ಲೀವ್ಹಿಂಗ ಸರಟಫಿಕೀಟನ್ನು ಸಂಗಡ ತರತಕ್ಕದ್ದು. ಪ್ರವೇಶಪರೀಕ್ಷೆಯಲ್ಲಿ ಪಾಸಾದವರನ್ನು ಸ್ಕಾಲರಸಿಪ್ಪು ಕೊಟ್ಟು ಕಾಲೇಜದ ಮೊದಲನೇ ವರ್ಷದ ಕ್ಲಾಸಿಗೆ ತಕ್ಕೊಳ್ಳುವೆವು. ಇಂಥ ವಿದ್ಯಾರ್ಥಿನಿಯರು ಕಾಲೇಜದಲ್ಲಿ ಕಲಿತು ಮುಂದೆ ಶಾಲಾಖಾತೆಯಲ್ಲಿ ಕೆಲಸ ಮಾಡಲಿಕ್ಕೆ ತಮ್ಮ ಒಪ್ಪಿಗೆ ಇರುವದೆಂದು ಇವರ ಪಾಲಕರು (ಲಗ್ನವಾದಲ್ಲಿ ಗಂಡನು, ಇಲ್ಲದಿದ್ದರೆ ತಂದೆ ಅಥವಾ ಕಕ್ಕ ಮುಂತಾದವರು) ಕಬೂಲೀ ಲೇಖವನ್ನು ಬರೆದುಕೊಡಬೇಕಾಗುವದು. ಪ್ರವೇಶ ಪರೀಕ್ಷೆಯಲ್ಲಿ ನಾಪಾಸಾದ ವಿದ್ಯಾರ್ಥಿನಿಯರನ್ನು ಕಾಲೇಜದ ತಯಾರಿ ವರ್ಗಕ್ಕೆ ತಕ್ಕೊಂಡು ಅವರಿಗೂ ತಿಂಗಳಿಗೆ ಸ್ವಲ್ಪು ಸ್ವಲ್ಪು ಸ್ಕಾಲರಸಿಪ್ಪ ಕೊಡಲಾದೀತು

...ಧನಲಕ್ಷ್ಮಿ ವಾಚನ ಮಂದಿರ.
ಮೊರಬ. ಜಿ ಧಾರವಾಡ.

ಶಾಲಾಪತ್ರಕ.

ಸಂಪುಟ ೫೧. | ಮೇ ೧೯೧೫ | ಸಂಚಿಕೆ ೫

ಸ್ಫುಟವಿಷಯಗಳು.

೧. ರೇಡಿಯಮ್ ಧಾತುವೂ, ಪೃಥ್ವಿಯ ಉಷ್ಣತೆಯೂ.

ಭೂಮಿಯ ಉಷ್ಣತೆಯು ಒಂದೇ ಸವನೆ ಆಕಾಶದಲ್ಲಿ ಪಸರಿಸಿ ಹೋಗುವದರಿಂದ ನಷ್ಟವಾಗುತ್ತಿದ್ದರೂ ಭೂಗೋಲವು ಇದುವರೆಗೆ ತಣ್ಣಗೆ ಆಗಿಲ್ಲವೆಂಬದು ಎಷ್ಟೋ ಶಾಸ್ತ್ರಜ್ಞರಿಗೆ ಬಹಳ ಗೂಢವಾಗಿರುವದು. ಹಲವರು ತಮಗೆ ಸರಿದೋರಿದ ಕಾರಣಗಳನ್ನು ಹೇಳುತ್ತಿರುವರು. ಕೆಲವರು ರೇಡಿಯಮ್ ಧಾತುವೇ ಇದಕ್ಕೆ ಕಾರಣವೆಂದು ಅಭಿಪ್ರಾಯಪಡುತ್ತಾರೆ. ಈ ಧಾತುವಿನ ವಿಲಕ್ಷಣ ಧರ್ಮಗಳು ಈಗ ಪ್ರಸಿದ್ಧವಾಗಿರುವವು. ಈ ಧಾತುವಿನೊಳಗಿಂದ ಉಷ್ಣತೆಯು ಒಂದೇ ಸವನೆ ಹೊರಬೀಳುತ್ತಿರುವದು. ಮತ್ತು ಎಷ್ಟೋ ವರ್ಷಗಳಾದರೂ ಅದು ಸ್ವಲ್ಪವೂ ಕಡಿಮೆಯಾಗುವದಿಲ್ಲ. ಆ ಧಾತುವು ಶಕ್ತಿಯ ಒಂದು ದೊಡ್ಡ ಸಂಗ್ರಹಸ್ಥಾನವೆಂದು ಹೇಳಬಹುದು. ಅದನ್ನು ಶುದ್ಧ ಸ್ಥಿತಿಗೆ ತರುವದು ಬಹಳ ಕಠಿಣವು. ಸುಧಾರಿಸಿದ ಎಲ್ಲ ರಾಷ್ಟ್ರಗಳಲ್ಲಿ ಕೂಡಿ ಅದರ ಸಂಗ್ರಹವು ಈ ಹೊತ್ತಿಗೆ ಒಂದೆರಡು ಸೇರಿಗಿಂತ ಹೆಚ್ಚಾಗಿಲ್ಲ. ಅದು ಮಣ್ಣು ಕಲ್ಲು ನೀರುಗಳಲ್ಲಿ ಅತ್ಯಲ್ಪ ಪ್ರಮಾಣದಿಂದ ವ್ಯಾಪಿಸಿರುತ್ತದೆ. ಅದರೊಳಗಿನ ಉಷ್ಣತೆಯಿಂದ ಪೃಥ್ವಿಯ ಉಷ್ಣತೆಯು ಉಳಿದಿರಬಹುದೆಂದು ತರ್ಕವುಂಟು. ರೇಡಿಯಮ್ಮಿನಿಂದ ಈ ಪ್ರಕಾರದ ಒಂದೇ ಸವನೆ ಹೊರಡುತ್ತಿರುವ ಶಕ್ತಿಯ ಉಪಯೋಗವನ್ನು ಮಾಡಿಕೊಂಡು ಒಬ್ಬಸು ಒಂದು ಗಡಿಯಾರವನ್ನು ರಚಿಸಿರುವನು. ಅದಕ್ಕೆ ಕೀಲೀ ಕೊಡದಿದ್ದರೂ ಅದು ನೂರಾರು ವರ್ಷ ನಡೆದೀತೆಂದು ಹೇಳುತ್ತಾರೆ.

ಡಾಂಬರಿನ ಸಂಬಂಧದಿಂದ ಜರ್ಮನ್ನರ ಉದ್ಯೋಗವು.

ಕಲ್ಲಿದ್ದಲಿಯಿಂದ ಉರಿಯುವ ಗ್ಯಾಸನ್ನು ಮಾಡುವಾಗ ಹೆಚ್ಚಾಗಿ ಡಾಂಬರು ಹೊರಡುತ್ತಿರುತ್ತದೆ. ಆ ಡಾಂಬರಿನಿಂದ ಬೇರೆ ಬೇರೆ ತರದ ಉಪಯುಕ್ತ ಪದಾರ್ಥಗಳನ್ನು ಜರ್ಮನ್ನರು ಮಾಡುವಷ್ಟು ಬೇರೆ ಯಾವ ಸುಧಾರಿಸಿದ ರಾಷ್ಟ್ರದವರೂ ಮಾಡಿಲ್ಲ. ಈಗ ಪ್ರಸಿದ್ಧವಾಗಿರುವ ಜರ್ಮನ್ ಬಣ್ಣಗಳೆಲ್ಲ ಡಾಂಬರಿನಿಂದಲೆ ಮಾಡಲ್ಪಟ್ಟಿರುವವು. ಆ ಬಣ್ಣ

ಗಳು ಯುದ್ಧಕ್ಕಿಂತ ಮುಂಚೆ ಬಹಳ ಹೆಚ್ಚಾಗಿ ಖರ್ಚಾಗುತ್ತಿದ್ದವು. ಆ ಬಣ್ಣಗಳನ್ನು ಮಾಡುವ ಕಂಪನಿಗಳು ತಮ್ಮ ಪಾಲುಗಾರರಿಗೆ ೧೦೦ಕ್ಕೆ ೨೨ ಟಕ್ಕೆಯವರೆಗೆ ಲಾಭವನ್ನು ಮಾಡಿಕೊಡುತ್ತಿದ್ದವು. ಆ ದೇಶದಲ್ಲಿ ಅಲ್ಲಿಯ ಕಾರಖಾನೆಯವರಿಗೆ ಬೇಕಾಗುವದಕ್ಕಿಂತ ೨ ಪಟ್ಟು ಹೆಚ್ಚು ಬಣ್ಣವು ತಯಾರಾಗುತ್ತಿತ್ತು; ಧಾರಣೆಯೂ ಬಹಳ ಅಗ್ಗವಿರುತ್ತಿತ್ತು. ಅವರಿಂದ ಜಗತ್ತಿನಲ್ಲೆಲ್ಲ ಆ ಬಣ್ಣಗಳ ಪ್ರಸಾರವಾಗಿತ್ತು. ಜರ್ಮನ್ನರು ಡಾಂಬರಿನಿಂದ ತಯಾರಿಸಿದ ಔಷಧಪದಾರ್ಥಗಳೂ ಎಲ್ಲ ಕಡೆಗೆ ಖರ್ಚಾಗುತ್ತಿದ್ದವು. ಡಾಂಬರಿನಿಂದ ಈ ಎಲ್ಲ ಪದಾರ್ಥಗಳನ್ನು ಮಾಡುವದಕ್ಕಾಗಿ ಕಳೆದ ೩೬ ವರ್ಷಗಳಲ್ಲಿ ಆ ದೇಶದಲ್ಲಿ ಒಟ್ಟು ೮೦೬೨ ಪೇಟೆಂಟುಗಳು ತೆಗೆದುಕೊಳ್ಳಲ್ಪಟ್ಟವು. ಇದರಿಂದ ಆ ದೇಶದಲ್ಲಿ ಶೋಧಕರು ಯಾವ ರೀತಿ ಪ್ರಯತ್ನಪಡುತ್ತಿರುವರೆಂಬದು ಗೊತ್ತಾಗುವದು. ದೇಶದ ಉದ್ಯೋಗಾಭಿವೃದ್ಧಿಯಲ್ಲಿ ಹೊಸ ಹೊಸ ಶಾಸ್ತ್ರೀಯ ಶೋಧಗಳನ್ನು ಮಾಡುವ ಶಾಸ್ತ್ರಜ್ಞರನ್ನು ಆ ದೇಶದವರು ಉಪಯೋಗಿಸಿಕೊಂಡಷ್ಟು ಇನ್ನಾವ ದೇಶದಲ್ಲಿಯೂ ಉಪಯೋಗಿಸಿಕೊಂಡಿಲ್ಲ. ಇಂಥ ಶಾಸ್ತ್ರಜ್ಞರನ್ನು ಕಂಪನಿಯ ಡಾಯರೆಕ್ಟರರಲ್ಲಿ ಕೂಡಿಸಿ ಕೊಳ್ಳುವರು. ಅದರಿಂದ ಕಂಪನಿಗಳ ಕಾರಖಾನೆಗಳು ಸುಧಾರಿಸುವದಲ್ಲದೆ ವ್ಯಾಪಾರವೂ ಬೆಳೆಯುವದು; ಕಂಪನಿಗಳ ಲಾಭವೂ ಹೆಚ್ಚಾಗುವದು. ಜರ್ಮನ್ ವ್ಯಾಪಾರವು ಬೆಳೆದದ್ದರಲ್ಲಿರುವ ಇದೊಂದು ರಹಸ್ಯವು ಈಗೀಗ ಇಂಗ್ಲಂಡಕ್ಕೆ ತಿಳಿಯ ಹತ್ತಿದೆ. ಈಗಿನ ಯುದ್ಧದಿಂದ ಜರ್ಮನಿಯ ಪದಾರ್ಥಗಳು ದುರ್ಲಭವಾಗಿರುವವು. ಇಂಗ್ಲಂಡದ ಕಾರಖಾನೆಗಳಿಗೂ ಡಾಂಬರಿನ ಬಣ್ಣಗಳು ದೊರೆಯದ್ದರಿಂದ ಕೆಲಸಕ್ಕೆ ಅಡ್ಡಿಯಾಗಹತ್ತಿದೆ. ಆದ್ದರಿಂದ ಅಲ್ಲಿ ಸರಕಾರದ ಸಹಾಯದಿಂದ ಅಂಥ ಬಣ್ಣಗಳನ್ನು ತಯಾರಿಸುವ ದೊಡ್ಡ ದೊಡ್ಡ ಕಾರಖಾನೆಗಳನ್ನು ಸ್ಥಾಪಿಸುವ ಯೋಜನೆ ನಡೆದಿರುವದು. ಅಂಥ ಕಾರಖಾನೆಗಳನ್ನು ಹಿಂದುಸ್ತಾನದಲ್ಲಿ ಸ್ಥಾಪಿಸುವದೂ ಇಷ್ಟವಾದದ್ದು. ಯಾಕಂದರೆ ಈ ದೇಶದಲ್ಲಿಯೂ ಯುದ್ಧಕ್ಕಿಂತ ಮುಂಚೆ ಲಕ್ಷಾವಧಿ ರೂಪಾಯಿಗಳ ಜರ್ಮನ್ ಬಣ್ಣಗಳು ಖರ್ಚಾಗುತ್ತಿದ್ದವು. ಅವು ಈಗ ದೊರೆಯದ್ದರಿಂದ ಎಷ್ಟೋ ಜನರ ಉದ್ಯೋಗಕ್ಕೆ ಅಡ್ಡಿಯಾಗಿರುವದು.

---

೩. ಕೆಲವು ಬಣ್ಣಗಳ ಮಿಶ್ರಣಗಳು.

ಹುಲ್ಲಿನ ಹಸರು ಬಣ್ಣವು:—೩ ಭಾಗ ಹಳದಿ, ೧ ಭಾಗ ನೀಲಿ ಇವುಗಳ ಮಿಶ್ರಣದಿಂದ ಉಂಟಾಗುತ್ತದೆ.

ಬೂದಿ ಬಣ್ಣವು:—೯ ಭಾಗ ಬಿಳಿಯ ಬಣ್ಣ, ೧ ಭಾಗ ನೀಲಿ, ೧ ಭಾಗ ಕರಿಯಬಣ್ಣ, ಇವುಗಳ ಮಿಶ್ರಣದಿಂದ ಮಾಡಲಿಕ್ಕೆ ಬರುತ್ತದೆ,

ನೇರಲ ಬಣ್ಣವು:—೪ ಭಾಗ ಕೆಂಪು, ೩ ಭಾಗ ಬಿಳಿಯ ಬಣ್ಣ, ೨ ಭಾಗ ನೀಲಿ ಇವುಗಳ ಮಿಶ್ರಣದಿಂದಾಗುವದು.

ಬಾದಾಮಿಯ ಬಣ್ಣವು:—೩ ಭಾಗ ಕೆಂಪು, ೨ ಭಾಗ ಕರಿಯಬಣ್ಣ, ೧ಭಾಗ ಹಳದಿ ಇವುಗಳ ಮಿಶ್ರಣದಿಂದ ಸಿದ್ಧವಾಗುವದು.

ಗುಲಾಬಿ ಬಣ್ಣವು:—೫ ಭಾಗ ಬಿಳಿಯಬಣ್ಣ, ೨ ಭಾಗ ದಡಸು ಕೆಂಪು, ಇವುಗಳ ಮಿಶ್ರಣದಿಂದ ಉಂಟಾಗುವದು.

ಸಭ್ಯಾಚರಣೆಯ ಇಪ್ಪತ್ತು ನಿಯಮಗಳು.

೧. ಸದಾ ಸತ್ಯ ಮಾತಾಡು. ಸತ್ಯಕ್ಕೆ ಸಾವಿಲ್ಲ. ಅಸತ್ಯವು ಎಂದೂ ಮುಂದೆ ಬರಲಾರದು. ಸುಳ್ಳುಗಾರನು ಒಂದು ವೇಳೆ ಸತ್ಯ ಮಾತಾಡಿದರೂ ಅವನನ್ನು ಯಾರೂ ನಂಬಲಾರರು.

೨. ನಿಂದೆಯ ಮಾತುಗಳನ್ನೂ, ಕೀಳುತರದ ಮಾತುಗಳನ್ನೂ, ಕೆಟ್ಟ ಬೈಗಳನ್ನೂ ಆಡಬೇಡ; ಹಾಗು ಅಂಥ ಜನರ ಸಹವಾಸವನ್ನು ಮಾಡಬೇಡ. ಶಾಲೆಯಲ್ಲಿಯಾಗಲಿ ಓಣಿಯಲ್ಲಾಗಲಿ ಕೆಟ್ಟ ಮಾತನ್ನು ಆಡದಿರುವದಕ್ಕೆ ಸಾಧ್ಯವಿದ್ದಮಟ್ಟಿಗೂ ಯತ್ನಿಸು.

೩. ಎಂದೂ ಹುಂಬತನದಿಂದ ಮಾತಾಡಬೇಡ; ಹಾಗೂ ನಡೆಯಬೇಡ. ಶಾಲೆಯಲ್ಲಿಯೂ ಮನೆಯಲ್ಲಿಯೂ ಓಣಿಯಲ್ಲಿಯೂ ಯಾವಾಗಲೂ ಶಾಂತರೀತಿಯಿಂದ ನಡೆಯಬೇಕು. ಶಾಂತವಾದ ನಡತೆಯು ಯಾವಾಗಲೂ ಶುಭಸೂಚಕವಾಗಿರುವದು. ಗಡಬಡಿಯಿಂದ ನಡೆಯುವದೂ ಚಡಪಡಿಸಿ ಮಾತಾಡುವದೂ ದೊಡ್ಡ ಸಪ್ಪಳಮಾಡಿ ಬಾಗಿಲವನ್ನು ಮುಚ್ಚುವದೂ ಅವಲಕ್ಷಣಗಳಾಗಿರುವವು.

೪. ಪರಕೀಯರೊಡನೆಯೂ ತಂದೆ ತಾಯಿಗಳೊಡನೆಯೂ ಬಂಧುಬಳಗದವರೊಡನೆಯೂ ಗುರುಗಳೊಡನೆಯೂ ಯಾವಾಗಲೂ ವಿನಯದಿಂದ ನಡೆದುಕೊಳ್ಳಬೇಕು. ಗುರುಹಿರಿಯರಾಗಲಿ ಎರಡನೆಯ ಸಭ್ಯಗೃಹಸ್ಥರಾಗಲಿ ದಾರಿಯೊಳಗೆ ಭೆಟ್ಟಿಯಾದರೂ ಅವರಿಗೆ ನಮಸ್ಕಾರ ಮಾಡಬೇಕು; ಮುಖತಪ್ಪಿಸಿಕೊಳ್ಳಲಿಕ್ಕೆ ಯತ್ನಿಸಬಾರದು. ಅವರು ಏನನ್ನಾದರೂ ಕೇಳಿದರೆ ವಿನಯದಿಂದ ಯೋಗ್ಯವಾಗಿ ಉತ್ತರಹೇಳಬೇಕು.

೫. ಅಶಕ್ತರಿಗೂ ವೃದ್ಧರಿಗೂ ಚಿಕ್ಕಬಾಲಕರಿಗೂ ತಕ್ಕ ದಯೆಯನ್ನು ತೋರಿಸಬೇಕು. ಹಾದಿಯನ್ನು ಬಿಟ್ಟು ಓರೆಯಾಗಿ ಹೋಗಬೇಕು. ದೊಡ್ಡ ದೊಡ್ಡ ಮಾನಧನ ಗಳನ್ನು ಮಾಡುವ ಯೋಗ್ಯತೆಯು ಎಲ್ಲರಿಗೆ ಇರದಿದ್ದರೂ ಸಭ್ಯತನ

ದಿಂದ ನಡೆಯುವದಕ್ಕೆ ಎಲ್ಲರಿಗೂ ಸಾಧ್ಯವಿರುವದು. ಹಾಗೂ ಮನುಷ್ಯನ ಆಯುಷ್ಯಕ್ಕೆ ಈ ಸಭ್ಯಾಚರಣೆಯೇ ಹೆಚ್ಚು ಬೆಲೆಯನ್ನುಂಟುಮಾಡುವದು.

೬. ಗುರುಹಿರಿಯರ ಅಪ್ಪಣೆಯನ್ನು ಪಾಲಿಸಲಿಕ್ಕೆ ಎಂದೂ ಹಿಂದುಮುಂದೆ ನೋಡಬಾರದು. ಒಂದು ಕೆಲಸವನ್ನು ತಿರುಗಿ ಎರಡನೇ ಸಾರೆ ಹೇಳಿಸಿಕೊಳ್ಳುವ ಪ್ರಸಂಗವನ್ನು ಎಂದೂ ತರಬಾರದು.

೭. ಎರಡನೆಯವರ ಮನಸ್ಸನ್ನು ಎಂದೂ ನೋಯಿಸಬಾರದು. ಯಾವನು ಎರಡನೆಯವರನ್ನು ಸುಖಪಡಿಸುವದಕ್ಕಾಗಿ ಯತ್ನಿಸುತ್ತಿರುವನೋ ಯಾವನು ದಯಾಳುವಾಗಿ ಸ್ವಾರ್ಥಾಪೇಕ್ಷೆಯಿಲ್ಲದೆ ಪರೋಪಕಾರ ಮಾಡುತ್ತಿರುವನೋ ಅವನೇ ಸಭ್ಯಗೃಹಸ್ಥನೆನಿಸಿಕೊಳ್ಳುವನು.

೮. ಎರಡನೆಯವರು ನಿನ್ನನ್ನು ಯಾವ ದೃಷ್ಟಿಯಿಂದ ನೋಡಬೇಕೆಂದು ಬಯಸುವೆಯೋ ಅದೇ ದೃಷ್ಟಿಯಿಂದ ನೀನು ಎರಡನೆಯವರನ್ನು ನೋಡುತ್ತಿರಬೇಕು. ಇದೊಂದೇ ಮಾತಿನಲ್ಲಿ ಸಭ್ಯಾಚರಣೆಯ ಎಲ್ಲ ನಿಯಮಗಳು ಸಮಾವೇಶವಾಗುವವು.

೯. ಯಾವದಾದರೊಂದು ಕಾರಣದಿಂದ ಎರಡನೆಯವರ ಇಚ್ಛೆಯ ವಿರುದ್ಧವಾಗಿ ನಡೆಯುವ, ಇಲ್ಲವೆ ಎರಡನೆಯವರು ತನಗೆ ಮಾಡಲಿಚ್ಛಿಸುವ ಸಹಾಯವನ್ನು ಸ್ವೀಕರಿಸದಿರುವ ಪ್ರಸಂಗವು ಒದಗಿದರೆ ಆ ತನ್ನ ಅಭಿಪ್ರಾಯವನ್ನು ಅವರಿಗೆ ವಿನಯದಿಂದ ತಿಳಿಸಬೇಕು; ಹಾಗು ಸಾಧ್ಯವಿದ್ದರೆ ಅದರ ಕಾರಣಗಳನ್ನಾದರೂ ಹೇಳಬಹುದು. ವಿನಯವಚನಗಳಿಂದ ಸಮಾಧಾನವಾಗದಂಥ ಕ್ರೂರಸ್ವಭಾವವು ತೀರ ವಿರಲ. ವಿನಯಯುಕ್ತವಾದ ಭಾಷಣದಿಂದ ಸಿಟ್ಟು ತಾನಾಗಿಯೇ ಕಡಿಮೆಯಾಗುವದು.

೧೦. ಎರಡನೆಯವರು ಮಾತಾಡುವಾಗ ನಡುವೆ ಎಂದೂ ಬಾಯಿ ಹಾಕಬಾರದು. ಬಹುಜನರು ಹೀಗೆ ಮಾಡುತ್ತಿರುವರು. ಇದು ಸರಿಯಲ್ಲ. ಇದರಿಂದ ಸಭ್ಯಾಚರಣೆಗೆ ಕುಂದುಬರುವದು.

೧೧. ಎರಡನೆಯವರು ಬರೆಯುವಾಗ ಅವರ ಹಿಂದೆ ನಿಂತು ಅದನ್ನು ಹಣಿಕಿ ನೋಡುವವನು ಸಹಜವಾಗಿ ನೋಡಿದರೂ, ಇದರಿಂದ ಎರಡನೆಯವರ ಮನಸ್ಸಿನಲ್ಲಿ ವಿಕಲ್ಪವುಂಟಾಗುವದು.

೧೨. ಸಕಾಲದಲ್ಲಿ ಕೆಲಸಮಾಡು. ವೇಳೆಯ ನಿಯಮವಿಲ್ಲದವರು ತಮ್ಮ ವೇಳೆಯನ್ನು ಕಳೆದುಕೊಳ್ಳುವದಲ್ಲದೆ ಎರಡನೆಯವರ ವೇಳೆಯನ್ನೂ ಕಳೆಯುವರು. ಎಂಥ ಸಣ್ಣ ಕೆಲಸವೆ ಆಗಲಿ ಅದನ್ನು ವ್ಯವಸ್ಥೆಯಿಂದ ಮಾಡು, ಕ್ಷುಲ್ಲಕವೆಂದು ಯಾವದನ್ನೂ ದುರ್ಲಕ್ಷಿಸಬೇಡ.

ಸಭ್ಯಾಚರಣೆಯ ಇಪ್ಪತ್ತು ನಿಯಮಗಳು.

೧೩. ಪ್ರತಿಯೊಂದು ವಸ್ತುವನ್ನು ಇಡತಕ್ಕ ಸ್ಥಳವನ್ನು ಗೊತ್ತುಮಾಡಿ ಅದನ್ನು ಯಾವಾಗಲೂ ಅದೇ ಸ್ಥಳದಲ್ಲಿಯೇ ಇಡುತ್ತಿರು.

೧೪. ವಸ್ತ್ರಗಳೂ ಹೊದಿಕೆಗಳೂ ಯಾವಾಗಲೂ ಸ್ವಚ್ಛವಾಗಿಯೂ ಅಚ್ಚುಕಟ್ಟಾಗಿಯೂ ಇರಬೇಕು. ಎರಡನೆಯವರ ವಸ್ತ್ರಗಳೂ ಹೊದಿಕೆಗಳೂ ಕಡಿಮೆ ತರದವೆಂದು ಎಂದೂ ನಿಂದಿಸಬೇಡ. ಬಟ್ಟೆಗಳ ಯೋಗ್ಯತೆಯು ಅವುಗಳ ಬೆಲೆಯನ್ನು ಅವಲಂಬಿಸಿರುವದಿಲ್ಲ. ಅರಳಿಯ ಬಟ್ಟೆಗಳಾದರೂ ರೇಶಿಮೆಯ ಬಟ್ಟೆಗಳಷ್ಟೇ ಸ್ವಚ್ಛವಾಗಿರಬಹುದು.

೧೫. ಮನುಷ್ಯನ ಪ್ರತಿಯೊಂದು ಅವಯವವೂ-ಕಾಲಿನಿಂದ ತಲೆಯವರೆಗೆ-ಸ್ವಚ್ಛವಾಗಿರಬೇಕು. ಸಭ್ಯಾಚರಣೆಗೂ ಆರೋಗ್ಯಕ್ಕೂ ಸ್ವಚ್ಛತೆಯು ಅವಶ್ಯವಾಗಿ ಬೇಕು.

೧೬. ಯಾವಾಗಲೂ ಆನಂದದಿಂದಲೂ ತೃಪ್ತಿಯಿಂದಲೂ ಇರಬೇಕು. ತೃಪ್ತಿಯು ಐಶ್ವರ್ಯಕ್ಕಿಂತಲೂ ಹೆಚ್ಚು ಸುಖದಾಯಕವಾಗಿರುವದು. ಎರಡನೆಯವರ ಹೆಚ್ಚಳವನ್ನು ನೋಡಿ ಮತ್ಸರ ಪಡಬೇಡ.

೧೭. ಎರಡನೆಯವರ ವಸ್ತುವನ್ನು ಎಂದೂ ಆಶಿಸಬಾರದು. ತಾನು ತನ ಹಕ್ಕು-ಸ್ವಾಮಿತ್ವಗಳಿಗೆ ಲಕ್ಷ್ಯಗೊಡುತ್ತಿರುವಂತೆ ಎರಡನೆಯವರ ಹಕ್ಕು ಸ್ವಾಮಿತ್ವಗಳಿಗೂ ಅಷ್ಟೇ ಲಕ್ಷ್ಯಗೊಡುತ್ತಿರಬೇಕು.

೧೮. ತನ್ನ ಸಭ್ಯಾಚರಣೆಯನ್ನೂ ಸದಾಚರಣೆಯನ್ನೂ ಮಂದಿಯ ಮುಂದೆ ತಾನಾಗಿ ತೋರಿಸಲಿಕ್ಕೆ ಹೋಗುವದು ಸರಿಯಲ್ಲ. ಈ ಗುಣಗಳ ಅಭ್ಯಾಸಕ್ಕೂ ಆಚರಣೆಗೂ ತನ್ನ ಮನೆಯೇ ಉತ್ತಮವಾದ ಸ್ಥಳವು. ಎಲ್ಲರಿಗೂ ಎಲ್ಲ ಕಾಲದಲ್ಲಿಯೂ ಎಲ್ಲ ಸ್ಥಳದಲ್ಲಿಯೂ ಸಹಾಯ ಮಾಡುತ್ತಿರುವದು ಸರಿಯಾಗಿದ್ದರೂ, ತನ್ನನ್ನು ಮರೆತು ನಡೆಯುವದು ವ್ಯವಹಾರಕ್ಕೆ ಯೋಗ್ಯವೆನಿಸುವದಿಲ್ಲ.

೧೯. ಯೋಗ್ಯವಾದದ್ದನ್ನು ಅದರ ಯೋಗ್ಯತೆಗಾಗಿಯೇ ಮಾಡುತ್ತಿರಬೇಕು. ತನ್ನ ಕರ್ತವ್ಯವನ್ನು ಮಾಡಿದ್ದಕ್ಕಾಗಿ ಎರಡನೆಯವರಿಂದ ಹೌದೆನ್ನಿಸಿಕೊಳ್ಳುವ, ಅಥವಾ ಅವರಿಂದ ಇನಾಮನ್ನು ಇಲ್ಲವೆ ಪ್ರತಿಫಲವನ್ನು ಪಡೆಯುವ ಆಶೆಯನ್ನು ಮಾಡಬಾರದು. ಸದಾಚರಣೆಗೆ ಸದಾಚರಣೆಯೇ ಫಲವಾಗಿರುವದು.

೨೦. ದೇವರನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸು. ಅದೇ ಭಕ್ತಿಯೆನಿಸುವದು.

ದಾರಿದ್ರ್ಯಂ ಪರಮೌಷಧಮ್.

ದ್ರವ್ಯಮೊದಲಾಗಿ ಎಲ್ಲ ಪ್ರಕಾರದಿಂದ ಅನುಕೂಲತೆಯಿತ್ತೆಂದರೆ ಮನುಷ್ಯನು ಸದ್ಗುಣಿಯೇ ಇರಬೇಕು; ದುರ್ಗುಣ-ದುರಾಚಾರಗಳ ಕಡೆಗೆ ಅವನ ಮನಸ್ಸು ಎಳೆ

ಸುವ ಪ್ರಸಂಗವೇ ಅವನಿಗೆ ಬರಲಾರದು, ಎಂಬದಾಗಿ ಎಲ್ಲರಿಗೂ ಸ್ವಾಭಾವಿಕವಾಗಿ ತೋರುವದು. ಆದರೆ ಈ ತರದ ಅನುಭವವು ಮಾತ್ರ ಲೋಕದಲ್ಲಿ ಬರುವದಿಲ್ಲ. ತಿರುಗಿ ನೋಡಿದರೆ, ದ್ರವ್ಯಾನುಕೂಲತೆಗಳು ಹೆಚ್ಚು ಹೆಚ್ಚು ಇದ್ದಂತೆ ವಿರುದ್ಧ ಮಾರ್ಗದ ಕಡೆಗೇ ಮನಸ್ಸಿನ ಪ್ರವೃತ್ತಿಯಾಗುವದು ಕಂಡು ಬರುವದು. ಆದರೆ ದಾರಿದ್ರ್ಯಸ್ಥಿತಿಯನ್ನು ನೋಡಿರಿ. ಆ ಸ್ಥಿತಿಯು ನೋಡುವದಕ್ಕೆ ಬಹಳ ಕಷ್ಟದಾಯಕವೆಂದೆನಿಸುವದು ನಿಜವಾದರೂ ಆ ಸ್ಥಿತಿಯಲ್ಲಿದ್ದ ಮನುಷ್ಯನ ಮನಸ್ಸಿನ ಒಲವು ಸನ್ಮಾರ್ಗದ ಕಡೆಗೇ ಉಂಟಾಗಿ ಅವನು ಮುಂಥಿನ ಸೌಖ್ಯದ ಆಶೆಗಾಗಿ ಸದ್ಯಃಸ್ಥಿತಿಯ ಕಷ್ಟವನ್ನು ಸಹಜವಾಗಿ ಮರೆತು ಬಿಡುವನು. ಬಡತನದ ಕಷ್ಟಗಳು ಸಹಜವಾದವುಗಳೆಂದು ತೋರುತ್ತವೆ; ಮತ್ತು ಆ ಕಷ್ಟಗಳ ತೀವ್ರತೆಯನ್ನಷ್ಟು ಸಹನಮಾಡಿದರೆ ಮುಂದಿನ ಆಶೆಯು ರಮ್ಯವಾಗಿರುತ್ತದೆ.

ಒಬ್ಬ ಶ್ರೀಮಂತನ ಅನುಭವವು.

ಒಂದು ಇಂಗ್ರೇಜಿ ಪತ್ರದ ಬಾತಮಿದಾರನು ಒಬ್ಬ ದೊಡ್ಡ ಶ್ರೀಮಂತನಿಗೆ ಭೆಟ್ಟಿಯಾದಾಗ ನೀವು ಇಷ್ಟು ಸಂಪತ್ತಿಯನ್ನು ಹ್ಯಾಗೆ ಗಳಿಸಿದಿರೆಂದು ಕೇಳಲು, ಆ ಶ್ರೀಮಂತನು ತನ್ನ ಅನುಭವವನ್ನು ಈ ಪ್ರಕಾರ ಹೇಳಿದನು:—

(೧) ಯಾವದೊಂದು ಶ್ರಮದ ಕೆಲಸವನ್ನು ಮಾಡುವ ವಿಷಯದಲ್ಲಿ ನನ್ನ ಮನಸ್ಸು ಯಾವಾಗಲು ಸಿದ್ಧವಾಗಿರುತ್ತಿತ್ತು. (೨) ರಾತ್ರಿ ಜಾಗರಣೆ ಮಾಡುವ ಕೆಟ್ಟ ಪದ್ಧತಿಯನ್ನು ಇಡದ್ದರಿಂದ ನನ್ನ ಬೆಳಗಿನ ಉದ್ಯೋಗದ ವೇಳೆಯು ವ್ಯರ್ಥ ಹೋಗುತ್ತಿರಲಿಲ್ಲ; ಮತ್ತು ಮಧ್ಯಾಹ್ನದಲ್ಲಿಯೂ ಉದ್ಯೋಗ ಮಾಡುವದಕ್ಕೆ ಉತ್ಸಾಹವು ಇರುತ್ತಿತ್ತು. (೩) ಉದ್ಯೋಗವಿಲಾಸಗಳೆರಡನ್ನೂ ಏಕಕಾಲಕ್ಕೆ ಮಾಡುತ್ತಿರಲಿಲ್ಲ; ಮತ್ತು ಯಾವ ವ್ಯಸನವೂ ನನ್ನ ಉದ್ಯೋಗಕ್ಕೆ ಎಂದೂ ಅಡ್ಡ ಬರದಂತೆ ಇದ್ದೆನು. (೪) ಯಾವ ಕೆಲಸವು ನನಗೆ ಸಹಜವಾಗಿಯೂ ಚನ್ನಾಗಿಯೂ ಮಾಡಲಿಕ್ಕೆ ಬರುತ್ತಿತ್ತೋ ಅದನ್ನೇ ನಾನು ಮಾಡುವದಕ್ಕೆ ತೊಡಗುತ್ತಿದ್ದೆನು; ಮತ್ತು ಎರಡನೆಯವರ ಮುಂದೆ ಸ್ವಲ್ಪವಾದರೂ ನನಗೆ ಹೋಗಲಿಕ್ಕೆ ಬರುವಂತೆ ಅದರಲ್ಲಿ ಮುಂಜಾಗ್ರತೆಯನ್ನು ಇಡುತ್ತಿದ್ದೆನು.

ಚೇಳು ಕಡಿದದ್ದಕ್ಕೆ ಔಷಧ.

ಐಗಳೀ ಶಾಲೆಯ ಹೆಡ್‌ಮಾಸ್ತರರಾದ ರಾ|| ನಾರಾಯಣ ಬಾಳಾಜಿ ಕುಲಕರಣಿ ಇವರು ಚೇಳುಕಡಿದದ್ದಕ್ಕೆ ಕೆಳಗೆ ಬರೆದ ಔಷಧವನ್ನು ಬರೆದು ಕಳುಹಿದ್ದಾರೆ.

ಇದರಿಂದ ೧೦೦ಕ್ಕೆ ೮೦ ಕ್ಕಿಂತ ಹೆಚ್ಚು ಜನರಿಗೆ ಗುಣ ಬರುತ್ತದೆಂದು ಅವರು ಅನುಭವದಿಂದ ಹೇಳುತ್ತಾರೆ. ಬೇಕಾದವರು ಅವಶ್ಯವಿದ್ದಾಗ ಅದನ್ನು ಉಪಯೋಗಿಸಬಹುದು:-

"ಹುಣಶೀಕಾಯಿ ನೀರಿನಲ್ಲಿ ತೆಯಿದು ಗಂಧದಂತೆ ರಾಡಿಮಾಡಿ ಕಡಿದ ಸ್ಥಳದ ಮೇಲೆ ಹಚ್ಚಿ ಬೆಂಕಿಯಿಂದ ಕಾಸಬೇಕು. ಔಷಧ ಒಣಗುತ್ತ ನಡೆದಂತೆ ಚೇಳಿನ ನೋವು ಇಳಿಯುತ್ತ ಹೋಗುತ್ತದೆ. ಒಣಗಿದ ನಂತರ ತಾಸೆರಡುತಾಸು ಕಡಿದ ಸ್ಥಳ ಪುನಃ ತೊಯ್ಯದಂತೆ ವ್ಯವಸ್ಥೆ ಇಡತಕ್ಕದ್ದು. ಚೇಳಿನ ಕೊಂಡಿಯು ಮೈಯಲ್ಲಿ ಮುರಿದಿದ್ದರೆ ತೀವ್ರ ತಿಳಿಯುವದಿಲ್ಲ. ಅದನ್ನು ಹದ್ದಿ ತೆಗೆದು ನಂತರ ಔಷಧ ಉಪಯೋಗಿಸಿಕೊಳ್ಳಬೇಕು."

ಹಿರಿಯರು ಹೇಳುವ ಕಥೆಗಳ ಪ್ರಯೋಜನ.

(ಬರೆದು ಬಂದದ್ದು.)

ನನ್ನ ಅವಲೋಕನದಲ್ಲಿ ಈ ಕೆಳಗಿನ ಶ್ಲೋಕವು ಬಂದಾಗ್ಗೆ ಗೋಡೆಯು ಮುಂದೆ ಬಂದರಿಸಿದಂತಾಯಿತು. ಮುಂದೊಂದು ಕ್ಷಣದಲ್ಲಿಯೇ ನಮ್ಮ ಹಿರಿಯರು ನಾಲ್ವತ್ತು ವರ್ಷಗಳ ಹಿಂದೆ ನಾನು ಸಣ್ಣವನಿರುವಾಗ್ಗೆ ಪತ್ತರ ಮಲಗಿಸಿಕೊಂಡು ಹೇಳಿದ ಕಥೆಯು ನೆನಪಾಗಲು, ಶ್ಲೋಕಾರ್ಥವು ತಡವಿಲ್ಲದೆ ಆಯಿತು. ಆಗ್ಗೆ ನನಗೆ ಹಿರಿಯರು ಪ್ರೀತಿಯಿಂದ ಹುಡುಗರಿಗೆ ಹೇಳುತ್ತಿರುವ ಕಥೆಗಳ ಪ್ರಯೋಜನವು ಎಷ್ಟಿರುವದೆಂಬದು ದೃಷ್ಟಿಗೋಚರವಾಯಿತು.

ಈ ಕೆಳಗಿನ ಸರ್ವಾಂಗಸುಂದರ ಪದ್ಯವು ಕ್ಷಾತ್ರವೃತ್ತಿಧುರೀಣಾಗ್ರೇಸರ ಬ್ರಾಹ್ಮಣನಾದ ಶ್ರೀ ಪರಶುರಾಮನ ವರ್ಣನಪರವಾಗಿದೆ. ವಾಚಕರಾದರೂ ಈ ಪದ್ಯವನ್ನು ಓದಿ ಅರ್ಥಮಾಡಯತ್ನಿಸಿ ಬಳಿಕ ಪುಟವನ್ನು ತಿರುವಿ ನನ್ನ ಬಾಲ್ಯದ ಕಥೆಯನ್ನು ಓದಬೇಕಾಗಿ ಪ್ರಾರ್ಥಿಸುವೆ. ಅಂದರೆ, ಅವರ ಮಹತ್ವವು ಅವರಿಗೂ ಕಂಡು ಬರಬಹುದು:—

> गोत्राचारविचारपारगतया वृद्धाभिरादिष्टया ।
> मात्रा वस्तुषु तेषु तेषु पुरतः प्रस्तारितेषु क्रमात् ॥
> अन्नप्राशनवासरे सरभसं वक्षोभरोत्सर्पिणा ।
> येनात्तं धनुरीक्षिताश्च सपदि क्षत्रावतंसा दिशः ॥

ವಾಡಿಕೆಯೊಗಿ ಮೊದಲಿನ ಜನರು ಚಿಕ್ಕ ಮಕ್ಕಳಿಗೆ ಕಥೆಗಳನ್ನು ಹೇಳುರುವಂತೆ ನಮ್ಮ ತೀರ್ಥರೂಪರೂ ಕೂಡಿ ಕೂಡಿವಾಗ ನನಗೂ ಕಥೆಗಳನ್ನು

ಹೇಳುತ್ತಿದ್ದರು. ಆಗ ನಾನು ೫-೬ ವರ್ಷದವನಿರಬಹುದು. ಮಲಗಿಸಿಕೊಂಡು ಚಪ್ಪರಿಸುತ್ತ ಆ ಕಥೆ ಈ ಕಥೆ ಅನ್ನುತ್ತಾ ಪುಣೆಯ ಶ್ರೀಮಂತರ ಕಥೆಯನ್ನು ತೆ ವರು.

"ಅರಸು-ಮನೆತನಗಳಲ್ಲಿ ಕೂಸುಗಳು ಹೊಟ್ಟಿ ಹೊಸಿಯುವಾಗ್ಗೆ ಅವ ಮುಂದಿನ ಯೋಗ್ಯತೆಯನ್ನು ತಿಳಿಯುವದಕ್ಕೆ ಒಂದು ಕ್ರಮವನ್ನು ಮಾಡುತ್ತಾ ಅದು ಹೇಗಂದರೆ— ಒಂದು ದೊಡ್ಡ ಪಡಸಾಲೆಯಲ್ಲಿ ಪ್ರಪಂಚಕ್ಕೆ ಉಪಯೋ ಬೀಳುವ ವಸ್ತುಗಳನ್ನೆಲ್ಲ ಅಸ್ತವ್ಯಸ್ತವಾಗಿ ಅಲ್ಲಲ್ಲಿ ಇಟ್ಟು, ನಡುವೆ ರಾಜಕುಮಾ ನನ್ನು ಆಡಬಿಡುತ್ತಾರೆ. ಇದರಂತೆ ಶ್ರೀಮಂತರೊಳಗಿನ ೧ನೆಯ ಬಾಜೀರಾಯನನ ಬಿಡಲು, ಆತನು ಬಿಚ್ಚುಗತ್ತಿಯನ್ನೂ ಕುದುರೆ(ಗೊಂಬಿ) ಯನ್ನೂ ಮುಟ್ಟಿದನ ಈತನೇ ಮುಂದೆ ಬಹಳ ಶೂರನಾಗಿ ಬಹಳ ರಾಜ್ಯವನ್ನು ಸಂಪಾದಿಸಿದನು. ಕಡೆ ಬಾಜೀರಾಯನು ಈ ಉತ್ಸವದಲ್ಲಿ ಬುಂದೆಯ ಉಂಡಿಯನ್ನು ಹಿಡಿದನು. ಅವ ಹಲಶಿನ ಕಾಯಿಪಲ್ಲೆ, ಪಳದ್ಯೆ, ತರತರದ ಪಕ್ವಾನ್ನಪ್ರಿಯನಾಗಿ ರಾಜ್ಯವನ ಕಳಕೊಂಡು ದೇಶಾಂತರಕ್ಕೆ ಹೋದನು.

* * *

ಓದು ಹೇಳುವ ಕ್ರಮವೂ ಅವರವೊಂದು ಪ್ರಕಾರದ್ದಿತ್ತು. ನನಗೆ ಸಮಾ ಕಲಿಸುವಾಗ್ಗೆ ೬-೭ ವರ್ಷದ ವಯಸ್ಸಿಗೆ ಚಕಾರಬಹುಲೋ ದ್ವಂದ್ವಃ ದ್ವಂದ್ವಸಮಾಸವೆಂದು "ಚ"ಕಾರವು ಬಹಳ ಸಾರೆ ಬರುತ್ತಿರುವದು ಎಂದು ಹೇಳಿ, ಯಲಿಶ್ಚ ದೊನ್ನಿಶ್ಚ ಯಲಿದೊನ್ನೀ; ಗೋಡಿಶ್ಚ ಗೂಟಶ್ಚ = ಗೋಡಿಗೂಟೌ ಎಂದು ಕಲಿಸಿದ್ದರು.

ವ್ಹಿಕ್ಟೋರಿಯ ಹಾಯಸ್ಕೂಲ ತಾ|| ೧೪-೨-೧೫ } ನರಸಿಂಹಾಚಾರ್ಯ ಪುಣೇಕರ. ಕನ್ನಡ ಶಿಕ್ಷಕ.

ರುಗ್ಬಿಯ ಹೆಡ್ ಮಾಸ್ತರನು.

ವಿದ್ಯಾಶಾಲೆಗಳು ಜ್ಞಾನದ ಆಲಯಗಳು. ಅಲ್ಲಿಯೇ ಹುಡುಗಿಯರೂ, ಹುಡುಗರೂ ವಿದ್ಯಾಭ್ಯಾಸ ಮಾಡಿ ಜಾಣರಾಗಬೇಕಾಗುವದು. ಅಲ್ಲಿಯ ಸುವ್ಯವಸ್ಥೆಯೂ, ಸುಶಿಕ್ಷಣವೂ ಉತ್ತಮ ಗುರುಗಳನ್ನವಲಂಬಿಸಿರುತ್ತವೆ. ಶಾಲೆಯ ಅಧ್ಯಾಪಕರು ಉತ್ತಮರಿದ್ದರೆ, ಹಾಗು ಅವರು ತಮ್ಮ ಕೆಲಸವನ್ನು ಚನ್ನಾಗಿ ಮಾಡಿದರೆ ಆ ಶಾಲೆಯ ದೈವವೇ ತೆರೆಯಿತೆಂದು ಹೇಳ ಬಹುದು. ಒಮ್ಮೊಮ್ಮೆ ತನ್ನ ಶಿಕ್ಷಣದಿಂದ ಶಾಲೆಯನ್ನು ಉರ್ಜಿತಸ್ಥಿತಿಗೆ ತರುವಂಥವನೂ, ಇಷ್ಟೇ ಏಕೆ? ತನ್ನ ಕೆಲಸದಿಂದ ಶಿಕ್ಷಣ ಪದ್ಧತಿಯ ಮೇಲೆಯೇ ಸಾರ್ವತ್ರಿಕ ಪರಿಣಾಮವನ್ನುಂಟು ಮಾಡುವಂಥವನೂ ಆದ ಶಿಕ್ಷಕನು ಉದಯ ಹೊಂದುವನು. ಇಂಥ ಒಬ್ಬ ಸಮರ್ಥನಾದ ಅಧ್ಯಾಪಕನು ಸುಮಾರು ೭೫ ವರ್ಷಗಳ ಹಿಂದೆ ಇಂಗ್ಲಂಡದಲ್ಲಿ ಆಗಿ ಹೋದನು. ಅವನೇ ಡಾಕ್ಟರ್, ಥಾಮಸ್ ಆರ್ನೋಲ್ಡ್, ಡಿ. ಡಿ. ಎಂಬವನು. ಇವನು ರುಗ್ಬಿ ಶಾಲೆಯ ಮುಖ್ಯಾಧ್ಯಾಪಕನಾಗಿದ್ದಾಗ ಪ್ರಸಿದ್ಧಿಗೆ ಬಂದದ್ದರಿಂದ "ರುಗ್ಬಿಯ ಹೆಡ್ ಮಾಸ್ತರ" ಎಂಬ ಹೆಸರಿನಿಂದಲೇ ಪರಿಚಿತನಾಗಿರುತ್ತಾನೆ. ಆತನ ಚರಿತ್ರವು ಬಾಲಕ-ಬಾಲಿಕೆಯರಿಗೆ ಬೋಧಪ್ರದವಾಗಿರುವದರಿಂದ ಇಲ್ಲಿ ಅದರ ಸ್ವಲ್ಪ ಅಂಶವನ್ನು ಕೊಡಲು ಯೋಚಿಸಿರುವೆವು.

ಥಾಮಸ್ ಆರ್ನೋಲ್ಡನು ಆಯಿಲ್ ಆಫ್ ವಾಯಿಟ್ ಎಂಬಲ್ಲಿ ೧೭೯೫ನೆಯ ಇಸ್ವಿಯ ಜೂನ ೧೩ನೆಯ ತಾರೀಖಿನ ದಿವಸ ಹುಟ್ಟಿದನು. ಆತನ ಹಿರಿಯರು ೧೮೦೧ರಲ್ಲಿ, ಅಂದರೆ ಇವನು ೫|೬ ವರ್ಷದವನಿರುವಾಗಲೇ ತೀರಿಕೊಂಡರು. ಬಾಲ್ಯದಲ್ಲಿ ಇವನ ವಿದ್ಯಾಭ್ಯಾಸವು ಮನೆಯಲ್ಲಿಯೇ ಆಯಿತು. ಆಕಾಲದಲ್ಲಿ ಹುಡುಗರ ಅಭ್ಯಾಸಕ್ಕೆ ಮೂರು ತರದ ಅನುಕೂಲತೆಗಳಿದ್ದವು. ಕೆಲವು ಹುಡುಗರು ಮನೆಯ ಜನರ ಬಳಿಯಲ್ಲಿ ಕಲಿಯುವರು. ಕೆಲವರು ಉತ್ತಮ ಗುರುಗಳ ಮನೆಯಲ್ಲಿ ವಾಸ ಮಾಡಿ, ಅವರ ಗುರುಕುಲದಲ್ಲಿ ಕಲಿಯುವರು. ಉಳಿದವರು ಊರೊಳಗಿನ ಸಾರ್ವಜನಿಕ ಶಾಲೆಗೆ ಹೋಗುವರು. ಬಾಲಕನಾದ ಥಾಮಸ್ ಆರ್ನೋಲ್ಡನಿಗೆ ೧೮೦೧ರಿಂದ ೧೮೦೩ರವರೆಗೆ ೨ ವರ್ಷ ಅವನ ಚಿಕ್ಕನ್ನನು ಮನೆಯಲ್ಲಿಯೇ ಸ್ವಲ್ಪ ವಿದ್ಯೆಯನ್ನು ಕಲಿಸಿದಳು. ಬಳಿಕ ಅವನನ್ನು ೧೮೦೩ರಲ್ಲಿ ವಾರ್ಮಿನ್ಸ್ಟರ್ ಎಂಬಲ್ಲಿರುವ ಸಾಲೆಗೂ ೧೮೦೭ರಲ್ಲಿ ವಿಂಚೆಸ್ಟರ ಎಂಬಲ್ಲಿರುವ ಸಾಲೆಗೂ ಕಳುಹಿದರು. ಅವನು ವಿಂಚೆಸ್ಟರದ ಶಾಲೆಯಲ್ಲಿ ೧೮೧೧ರ ವರೆಗೆ ವಿದ್ಯಾಭ್ಯಾಸ ಮಾಡಿದನು. ಈ ಎರಡು ಶಾಲೆಗಳಲ್ಲಿ ಅವನಿಗೆ ಸಾರ್ವಜನಿಕ ಶಾಲೆಗಳ ವ್ಯವಸ್ಥೆಯೂ, ಹೆಡ್ ಮಾಸ್ತರನ ಕೆಲಸವೂ ಹ್ಯಾಗಿರುವವೆಂಬದನ್ನು ನೋಡುವದಕ್ಕೆ ಆಸ್ಪದವು ದೊರೆಯಿತು. ಆ ವ್ಯವ

ಸ್ಥೆಯು ಮತ್ತು ಆ ಕೆಲಸದ ಕಡೆಗೆ ಅವನ ಲಕ್ಷವು ಬಾಲ್ಯದಲ್ಲಿಯೇ ಹತ್ತಿತ್ತು; ಮತ್ತು ಅವುಗಳಲ್ಲಿ ಕೆಲವು ಸುಧಾರಣೆಯಾಗಬೇಕೆಂದು ಅವನಿಗೆ ತೋರ ಹತ್ತಿತು.

ಆರ್ನೋಲ್ಡನು, ದಾಕ್ಷಿಣ್ಯವುಳ್ಳ ಸ್ವಭಾವದವನು; ಆದರೂ ನಿಶ್ಚಯವುಳ್ಳವನಿದ್ದನು. ಅವನು ಎರಡನೆಯವರೊಡನೆ ಆಡುವದರಲ್ಲಿಯೂ, ಹರಟುವದರಲ್ಲಿಯೂ ವೇಳೆಕಳೆಯದೆ ತನ್ನ ಮೆಚ್ಚಿಗೆಯ ಗ್ರಂಥಗಳನ್ನು ಓದುವದರಲ್ಲಿ ತೊಡಗಿರುತ್ತಿದ್ದನು. ಮನೆಯಲ್ಲಿ ಹಿರಿಯ ಜನರು ಅವನಿಗೆ ಮಹತ್ವದ ಗ್ರಂಥಗಳನ್ನು ಓದಿ ಹೇಳುತ್ತಿದ್ದರು. ಅವನು ಅದನ್ನು ಕೇಳಿ ತಿಳಿಯದ್ದನ್ನು ತಿಳಿದುಕೊಂಡು ತನ್ನ ಜ್ಞಾನಸಂಗ್ರಹವನ್ನು ಬೆಳೆಯಿಸುತ್ತಿದ್ದನು. ಈ ವಿಷಯದಲ್ಲಿ ಅವನು ಸುದೈವಿಯೇ ಸರಿ. ಅವನ ನಿಶ್ಚಯದ ಸ್ವಭಾವವು ಬಾಲ್ಯದಲ್ಲಿಯೇ ಹೊರಬಿತ್ತು. ಬೇಗಿನ ಜಾವದಲ್ಲಿ ಬೇಗನೆ ಏಳುವದು ಅವನಿಂದಾಗುತ್ತಿರಲಿಲ್ಲ. ಆದರೆ ಅವನು ಅದನ್ನು ಪ್ರಯತ್ನದಿಂದ ಸಾಧಿಸಿದನು. ಅವನಿಗೆ ಕವಿತೆಯ ಚಟವು ಬಹಳವಾಗಿತ್ತು. ಎಷ್ಟೋ ಹಳೆಯ ಕವಿತೆಗಳನ್ನು ಬಾಯಿಂದ ಹೇಳುವನು; ಹೊಸದಾಗಿ ಕವಿತೆಗಳನ್ನು ಮಾಡುವನು. ಇದರಿಂದ ಶಾಲೆಯ ಹುಡುಗರು ಅವನಿಗೆ "ಕವಿ ಆರ್ನೋಲ್ಡ" ಎಂದು ಕರೆಯುತ್ತಿದ್ದರು. ಅವನು ಸಾಲೆಯಲ್ಲಿ ನಿಯಮಿಸಿದ ಪುಸ್ತಕಗಳನ್ನಲ್ಲದೆ ಸಾಲೆಯ ಪುಸ್ತಕಾಲಯದೊಳಗಿನ ಬೇರೆ ಎಷ್ಟೋ ಪುಸ್ತಕಗಳನ್ನೂ ಓದುತ್ತಿದ್ದನು. ಈ ವಿಷಯದಲ್ಲಿ ಅವನ ಒಬ್ಬ ಮಿತ್ರನು (ಮುಂದೆ ಅವನು ಜಸ್ಟಿಸ್ ಕಾಲರೀಜ ಎಂಬ ಪ್ರಸಿದ್ಧ ನ್ಯಾಯಾಧೀಶನಾದನು.) ಅವನಿಗೆ ಬಹಳ ನೆರವಾಗಿದ್ದನು.

ಇವನು ೧೬ ವರ್ಷದವನಾದಾಗ, ಅಂದರೆ ೧೮೧೧ರಲ್ಲಿ ಶಾಲೆಯ ಅಭ್ಯಾಸವನ್ನು ಮುಗಿಸಿ ಆಕ್ಸಫರ್ಡದಲ್ಲಿದ್ದ ಕಾಲೇಜಕ್ಕೆ ಹೋದನು. ಮೂರು ವರ್ಷಗಳಾ ಬಳಿಕ ಅಲ್ಲಿ "ಫೆಲೊ" ಆದನು. ಲಾಟಿನ್, ಇಂಗ್ಲಿಷ ಭಾಷೆಗಳಲ್ಲಿರುವ ನೈಪುಣ್ಯಕ್ಕಾಗಿ ಇವನಿಗೆ ಎರಡು ಇನಾಮುಗಳು ದೊರೆತವು. ಆಕ್ಸಫರ್ಡದೊಳಗಿನ ವಿದ್ಯಾಭ್ಯಾಸವು ಮುಂದೆ ಇವನಿಗೆ ಬಹಳ ಉಪಯುಕ್ತವಾಯಿತು. ಅದು ಅವನಲ್ಲಿ ಶೀಲವು ಉಂಟಾಗುವದಕ್ಕೆ ಸಹಾಯಮಾಡಿತು. ಆ ಕಾಲೇಜದ ಅಧ್ಯಕ್ಷರಾದ ಡಾ ಕುಕ್ ಸಾಹೇಬರು ವಾಚನ-ಲೇಖಗಳಲ್ಲಿ ವಿದ್ಯಾರ್ಥಿಗಳಿಗೆ ಬಹಳ ಸಹಾಯ ಮಾಡುತ್ತಿದ್ದರು. ಮತ್ತು ಹೆಚ್ಚಿನ ಜ್ಞಾನಕ್ಕಾಗಿ ವರ್ಗಕ್ಕೆ ನಿಯಮಿತವಾದ ಪುಸ್ತಕಗಳ ಹೊರತು ಬೇರೆ ಯಾವ ಪುಸ್ತಕಗಳನ್ನು ಓದಬೇಕೆಂಬದನ್ನೂ ಹೇಳುತ್ತಿದ್ದರು. ಇದೆಲ್ಲವೂ ಆರ್ನೋಲ್ಡನಿಗೆ ಬಹಳ ಹಿತಕರವಾಯಿತಲ್ಲದೆ ಆತನ ಜ್ಞಾನಸಂಗ್ರಹವೂ ಬೆಳೆಯಿತು. ಕಾಲೇಜದ ವಿದ್ಯಾರ್ಥಿಗಳ ಸಭೆಗಳು ನೆರೆದಾಗ ಅವುಗಳಲ್ಲಿ ಧರ್ಮ, ಧರ್ಮಗ್ರಂಥ, ಧರ್ಮಸಂಸ್ಥೆ, ಸಮಾಜಸಂಸ್ಥೆ, ರಾಜ್ಯಕಾರಭಾರ ಈ ವಿಷಯದಲ್ಲಿ ವಾದವಿವಾದಗಳು ನಡೆಯುತ್ತಿದ್ದವು. ಉಳಿದ ವಿದ್ಯಾರ್ಥಿಗಳೆಲ್ಲ ಹಳೆಯದೆಲ್ಲವೂ ಉತ್ತಮವಾದದ್ದು; ಹಳೆಯ ಸಂಪ್ರದಾಯಗಳು ಸರಿಯಾದಂಥವು, ಎಂಬದನ್ನು

ಸ್ಥಾಪಿಸುವದರ ಕಡೆಗೇ ಮನಸುಳ್ಳವರಾಗಿರುತ್ತಿದ್ದರು. ಆದರೆ ಆರ್ನೋಲ್ಡನು ವಿರುದ್ಧವಾಗಿ ಮಾತಾಡಿ ಆ ಸಂಸ್ಥೆಗಳಲ್ಲಿ ಕಾಲಕ್ಕನುಸರಿಸಿ ಕೆಲವು ಸುಧಾರಣೆಗಳು ಆಗುವದು ಅವಶ್ಯವೆಂದು ಪ್ರತಿಪಾದಿಸುವನು; ಮತ್ತು ಅವುಗಳಲ್ಲಿ ಯುಕ್ತವಾದಂಥವು ಯಾವವು? ಅಯುಕ್ತವಾದಂಥವು ಯಾವವು? ಎಂಬದನ್ನು ನಿಷ್ಕಪಟವಾಗಿ ವಿಚಾರ ಮಾಡುವದಕ್ಕೆ ಅವನು ಸ್ವಲ್ಪವೂ ಅಂಜುತ್ತಿರಲಿಲ್ಲ. ಸ್ನಾನ ಮಾಡುವದೂ ಸುತ್ತಲಿನ ಪ್ರದೇಶವಲ್ಲಿ ತಿರುಗಾಡುವದೂ ಇವನ ವ್ಯಾಯಾಮವಾಗಿದ್ದವು.

ಅವನು ೧೮೧೫ರಲ್ಲಿ ಕಾಲೇಜದಲ್ಲಿ "ಫೆಲೊ" ಆದಬಳಿಕ ೪|೫ ವರ್ಷ ಆಕ್ಸಫರ್ಡದಲ್ಲಿಯೇ ಕಲಿಯುತ್ತಲೂ, ಕಲಿಸುತ್ತಲೂ ಇದ್ದನು. ಕಾಲೇಜದಲ್ಲಿ ಕಲಿಸುವ ಕೆಲಸವನ್ನು ಸಾಗಿಸಿಕೊಂಡು ಬೇರೆ ವಿದ್ಯಾರ್ಥಿಗಳಿಗೂ ಪಾಠಹೇಳುತ್ತಿದ್ದನು. ಉಳಿದ ವೇಳೆಯಲ್ಲೆಲ್ಲ ಕಾಲೇಜದ ಪುಸ್ತಕಾಲಯದ ಪುಸ್ತಕಗಳನ್ನು ಓದುತ್ತಿದ್ದನು. ಈ ನಾಲ್ಕು ವರ್ಷದ ನಿರಂತರವಾದ ವಾಚನವು ಮುಂದೆ ಅವನಿಗೆ ಬಹಳ ಉಪಯೋಗಕ್ಕೆ ಬಿತ್ತು.

ಅವನು ೧೮೧೯ರಲ್ಲಿ ಕಾಲೇಜವನ್ನು ಬಿಟ್ಟು ಬಂದಬಳಿಕ ಲೇಲಹಮ ಎಂಬಲ್ಲಿ ಗೃಹಸ್ಥಾಶ್ರಮಿಯಾಗಿ ವಾಸಿಸಿದನು. ಅಲ್ಲಿ ಮನೆಯಲ್ಲಿಯೇ ಗುರುಕುಲವನ್ನು ಸ್ಥಾಪಿಸಿ ಖಾಸಗಿ ವಿದ್ಯಾರ್ಥಿಗಳಿಗೆ ಅಭ್ಯಾಸಮಾಡಿಸುವದೂ, ತಾನು ಅಭ್ಯಾಸ ಮಾಡುವದೂ ಇವುಗಳಲ್ಲಿಯೇ ಸಮಾಧಾನವನ್ನು ತಾಳಿಕೊಂಡು ಇದ್ದನು. ತಾನು ಮುಂದೆ ಏನು ಮಾಡಬೇಕೆಂಬ ವಿಷಯದಲ್ಲಿ ತನಗೆ ತೋರಿದ್ದನ್ನು ಆತನು ತನ್ನ ಒಬ್ಬ ಹಳೆಯ ವಿದ್ಯಾರ್ಥಿಗೆ ಈ ಪ್ರಕಾರ ಬರೆದಿದ್ದನು:—

"ಮುಂದೆ ಏನು ಮಾಡಬೇಕೆಂಬದು ಚನ್ನಾಗಿ ತಿಳಿಯುವದಿಲ್ಲ. ಒಮ್ಮೆ ರಾಜನ ಮುಖ್ಯ ಮಂತ್ರಿಯಾಗಬೇಕೆಂದೆನಿಸುವದು. ಇನ್ನೊಮ್ಮೆ ಅಧ್ಯಯನದಲ್ಲಿಯೂ, ಗ್ರಂಥರಚನೆಯಲ್ಲಿಯೂ ವೇಳೆಯನ್ನು ಕಳೆಯಬೇಕೆಂದೆನಿಸುವದು. ಮತ್ತೊಮ್ಮೆ ಎಲ್ಲಿಯಾದರೂ ಗವರ್ನರನಾಗಬೇಕೆಂದೆನಿಸುವದು. ಆದರೂ ಈಗಿನ ಪರಿಸ್ಥಿತಿಯಲ್ಲಿ ಯಾವ ಕೆಲಸವು ನನ್ನ ಕೈಗೆ ಬರುವದೋ, ಅದನ್ನು ನಾನು ಮನಃಪೂರ್ವಕವಾಗಿ ಮಾಡುತ್ತಿರುವೆನು. ಮನೆಯಲ್ಲಿ ಬಂದು ವಾಸಮಾಡಿದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಮಾಡಿಸುತ್ತೇನೆ. ಸುತ್ತಲಿನ ಸೀಮೆಯಲ್ಲಿ ಧರ್ಮೋಪದೇಶ ಮಾಡುತ್ತೇನೆ. ದಿನದ ಕೆಲಸಗಳೇ ದೇವರು ನನಗೆ ನಿಯಮಿಸಿದ ಕೆಲಸಗಳು. ಅವುಗಳಲ್ಲಿ ಬದಲುಮಾಡುವದನ್ನು ಯೋಗ್ಯ ಸಮಯದಲ್ಲಿ ಆತನೇ ಮಾಡುವನು."

ಈ ಪ್ರಕಾರ ಲೇಲಹಮದಲ್ಲಿ ವಾಸಮಾಡಿ ಇತಿಹಾಸ, ಧರ್ಮ, ರಾಜ್ಯವ್ಯವಹಾರ ಮೊದಲಾದ ವಿಷಯಗಳಲ್ಲಿ ಹೆಚ್ಚು ಮನಸ್ಸುಗೊಟ್ಟು ಓದಿದನು; ಮತ್ತು ವಿಚಾರಮಾಡಿದನು. ತನ್ನ ಆಶ್ರಮದೊಳಗಿನ ವಿದ್ಯಾರ್ಥಿಗಳು ವಿದ್ಯಾವಂತರೂ,

ಸುಶೀಲರೂ, ಸದಾಚಾರಿಗಳೂ ಆಗಲೇಬೇಕೆಂದು ಅವನ ಮನಸ್ಸಿತ್ತು; ಮತ್ತು ಅದ ರಂತೆ ಅವರಿಗೆ ಕಲಿಸುವನು; ಅವರೊಡನೆ ತಿರುಗಾಡುವದಕ್ಕೆ ಹೋಗುವನು; ಆಡ ವನು. ಸ್ವಲ್ಪ ದಿವಸಗಳಲ್ಲಿ ಉತ್ತಮ ಗುರುವೆಂದು ಅವನ ಕೀರ್ತಿಯು ಎಲ್ಲ ಕಡೆ ಹಬ್ಬಿತು. ಎಷ್ಟೋ ವಿದ್ಯಾರ್ಥಿಗಳು ಅವನ ಆಶ್ರಮದಲ್ಲಿ ಬಂದು ವಾಸಮಾಡಹತ್ತಿ ದರು. ಹುಡುಗರಿಗೆ ಸಾಮಾನ್ಯ ವಿದ್ಯೆಯನ್ನು ಕಲಿಸುವದಲ್ಲದೆ ಅವರಿಗೆ ವ್ಯವಹಾ ಜ್ಞಾನ-ಧರ್ಮಜ್ಞಾನಗಳು ಉಂಟಾಗಬೇಕೆಂದು ಪ್ರಯತ್ನಪಡುತ್ತಿದ್ದನು. ಧರ್ಮ ಗ್ರಂಥಗಳ ಮತ್ತು ಧರ್ಮವಿಷಯಗಳ ಜ್ಞಾನವು ವಿದ್ಯಾರ್ಥಿಗಳಿಗೆ ಇರಬೇಕೆಂದೂ, ಧರ್ಮಶಿಕ್ಷಣದಿಂದ ಮನಸ್ಸಿನ ಮೇಲೆ ಒಳ್ಳೆಯ ಸಂಸ್ಕಾರಗಳು ಉಂಟಾಗುವ ವೆಂದೂ, ಧರ್ಮಜ್ಞಾನವು ಸದಾಚರಣದ ಪರಿಪೋಷಕವಾಗಿರುವದೆಂದೂ ಅವನು ನಂಬಿದ್ದನು; ಮತ್ತು ಆ ಜ್ಞಾನವುಂಟಾಗುವದಕ್ಕೆ ತನ್ನ ಆಶ್ರಮದಲ್ಲಿ ವ್ಯವಸ್ಥೆ ಯನ್ನು ಮಾಡಿದ್ದನು. ಅವನು ಹುಡುಗರ ಪಾಲಕರಿಗೆ ಆಗಾಗ ಪತ್ರಗಳನ್ನು ಬರೆದು ತನ್ನ ಆಶ್ರಮದಲ್ಲಿ ಏನು ನಡೆದಿದೆಯೆಂಬದನ್ನೂ, ಆಯಾ ಹುಡುಗರ ವಿಷ ಯದಲ್ಲಿ ತನ್ನ ವಿಚಾರಗಳನ್ನೂ ತಿಳಿಸುತ್ತಿದ್ದನು. ಇಂಥ ಒಂದು ಪತ್ರವನ್ನು ಇಲ್ಲಿ ಮಾದರಿಗಾಗಿ ಕೊಡುತ್ತೇವೆ:—

"ನಿಮ್ಮ ಹುಡುಗನು ನೆಟ್ಟಗಿದ್ದಾನೆ; ಅವನು ಅಭ್ಯಾಸವನ್ನೂ ಚೆನ್ನಾಗಿ ಮಾಡುತ್ತಾ ಇದ್ದಾನೆ. ಆದರೂ ಮನುಷ್ಯಜನ್ಮದ ಜೀವಿತಸಾಫಲ್ಯವು ಯಾತರಲ್ಲಿ ರುತ್ತದೆಂಬ ಬಗ್ಗೆ ಅವನ ಮನಸ್ಸಿನಲ್ಲಿ ಇನ್ನೂ ಜಾಗೃತಿಯಾದಂತೆ ಕಾಣಿಸುವದಿಲ್ಲ; ಆದರೂ ಬೇಗನೆಯಾಗುವದೆಂದು ನಂಬುತ್ತೇನೆ. ನನ್ನ ಆಶ್ರಮದೊಳಗಿನ ವಿದ್ಯಾ ರ್ಥಿಗಳ ಆಚಾರ-ವಿಚಾರಗಳಲ್ಲಿ ಅಸಡ್ಡೆ ಇರಬಾರದು; ಅವರ ಯೋಗ್ಯತೆಯು ಬೆಳೆ ಯಬೇಕು; ಅವರು ಒಳ್ಳೆಯವರಾಗಬೇಕು, ಎಂದು ನಾನು ನಿರಂತರವಾಗಿ ಬಯ ಸುತ್ತೇನೆ. ನಿಮ್ಮ ಮಗನು ಗುಣವಂತನಿದ್ದಾನೆ; ಅವನನ್ನು ದಂಡಿಸುವಂಥ ಅಥವಾ ಅವನಿಗೆ ದೋಷಹಚ್ಚುವಂಥ ಪ್ರಸಂಗವು ಇದುವರೆಗೆ ಒಂದೂ ಬಂದಿರುವದಿಲ್ಲ. ಅವನು ವಿದ್ಯಾರ್ಜನದ ಕೆಲಸದಲ್ಲಿ ಮನಮುಟ್ಟಿ ಪರಿಶ್ರಮಮಾಡಿ ತನ್ನ ಉನ್ನತಿ ಯನ್ನು ಮಾಡಿಕೊಳ್ಳಬೇಕೆಂಬದೇ ನನ್ನ ಕೋರಿಕೆ ಇರುವದು. ಆದರಂತೆಯೇ ಅವನು ವಿದ್ಯಾವ್ಯಾಸಂಗ ಮಾಡುತ್ತ ಮಾಡುತ್ತ ಸ್ವತಃ ವಿಚಾರಮಾಡುವದಕ್ಕೆ ಕಲಿಯಬೇಕು; ಯಾಕಂದರೆ, ಇದೇ ಅವನಿಗೆ ಮುಂದೆ ಉಪಯೋಗಕ್ಕೆ ಬರುವದು, ಹಾಗೂ ಅದ ರಿಂದ ಅವನು ತಾನೇ ಜ್ಞಾನವನ್ನು ಸಂಪಾದಿಸುವದಕ್ಕೆ ಸಮರ್ಥನಾಗುವನು."

ಬಾಲ್ಯದಲ್ಲಿ ತನ್ನ ಶಿಕ್ಷಣವಿಷಯದಲ್ಲಿ ತನ್ನ ಗುರುಹಿರಿಯರು ಎಚ್ಚರಪಟ್ಟಂತೆ ಈಗ ತಾನು ತನ್ನ ಆಶ್ರಮದೊಳಗಿನ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಮತ್ತು ಆಚರ ಣದ ವಿಷಯದಲ್ಲಿ ಎಚ್ಚರಪಡುತ್ತಿದ್ದನು. ಮುಂದೆ ರುಗ್ಬಿಗೆ ದೊಡ್ಡ ಕೆಲಸದ ಮೇಲೆ ಹೋದಾಗ ಈ ಗುಣವು ಇವನಲ್ಲಿ ಪೂರ್ಣವಾಗಿ ವಾಸವಾಗಿತ್ತು.

ಈ ಗುರುವಿನ ಆಚಾರವಿಚಾರಗಳೂ, ಶಿಕ್ಷಣಪದ್ಧತಿಯೂ ಇವನ ಆಶ್ರಮದೊಳಗಿನ ವಿದ್ಯಾರ್ಥಿಗಳಲ್ಲಿ ಕರ್ತವ್ಯಜಾಗೃತಿಯನ್ನು ಉಂಟುಮಾಡುವಂಥವಿದ್ದವು. ಹೊಸವಿದ್ಯಾರ್ಥಿಯು ಬಂದರೆ ಅವನಿಗೆ ಕೂಡಲೆ ಇಲ್ಲಿ ಏನೋ ಮಹತ್ವದ ಕಾರ್ಯವು ನಡೆದಿದೆಯೆಂದು ತೋರುತ್ತಿತ್ತು; ಈತನು ಜಗತ್ತಿನಲ್ಲಿ ಪ್ರತಿಯೊಬ್ಬನು ಯಾವದೊಂದು ಕಾರ್ಯವನ್ನು ಮಾಡಬಹುದೆಂಬದಾಗಿ ಉಪದೇಶಿಸಿ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಉತ್ಸಾಹವನ್ನೂ ಆಕಾಂಕ್ಷೆಯನ್ನೂ ಹುಟ್ಟಿಸಿದನು. ಇದರಿಂದ ಇಂಥ ಗುರುವಿನ ವಿಷಯದಲ್ಲಿ ಅವರಿಗೆ ನಿಸ್ಸೀಮವಾದ ಭಕ್ತಿಯೂ, ಆದರವೂ ಉತ್ಪನ್ನವಾದವೆಂಬ ವಿಷಯದಲ್ಲಿ ಆಶ್ಚರ್ಯವೇನು? ಆರ್ನೋಲ್ಡನು ತನ್ನ ಕರ್ತವ್ಯಗಳನ್ನು ಆಸ್ಥೆಯಿಂದಲೂ, ನಿರಭಿಮಾನದಿಂದಲೂ ಮಾಡುತ್ತಿದ್ದದರಿಂದ ವಿದ್ಯಾರ್ಥಿಗಳಿಗೆ ತಾವಾದರೂ ಅವನಂತೆಯೇ ತಮ್ಮ ಕರ್ತವ್ಯಗಳನ್ನು ಮಾಡಬೇಕೆಂದೆನಿಸುತ್ತಿತ್ತು. ಅವನು ವಿದ್ಯಾರ್ಥಿಗಳಿಗೆ ಧರ್ಮಶಿಕ್ಷಣವನ್ನು ಕೊಡುವ ವಿಷಯದಲ್ಲಿ ಬಹಳ ಪರಿಶ್ರಮ ಮಾಡುತ್ತಿದ್ದನು. ದಿನದ ಶಿಕ್ಷಣಕಾರ್ಯದಲ್ಲಿ ಸ್ವಲ್ಪವೂ ಆಲಸ್ಯಮಾಡುತ್ತಿರಲಿಲ್ಲ. ತಾನೂ ವಿದ್ಯಾರ್ಥಿಗಳೊಡನೆ ಬೇಗನೆ ಏಳುವನು. ಬೆಳಿಗ್ಗೆ ಏಳುಘಂಟೆಗೆ ಅವರಿಗೆ ಪಾಠವನ್ನು ಆರಂಭಿಸುವನು. ವಿದ್ಯಾರ್ಥಿಗಳನ್ನು ವಿಶ್ರಾಂತಿಗೂ, ಆಟಕ್ಕೂ ಬಿಟ್ಟ ವೇಳೆಯೇ ಆರ್ನೋಲ್ಡನ ಸ್ವಂತದ ಓದು-ಬರಹಗಳ ವೇಳೆಯು. ಅವನು ೧೮೨೧ ರಿಂದ ೧೮೨೭ ರ ಅವಧಿಯಲ್ಲಿ ಇಟಲಿಯಲ್ಲಿ ಸ್ವಲ್ಪ ಪ್ರವಾಸಮಾಡಿದನು. ರೋಮ ನಗರವನ್ನು ನೋಡಿದನು. ಗ್ರೀಕರೋಮನ್ ಇತಿಹಾಸಗಳ ಮೇಲೆ ಕೆಲವು ಲೇಖಗಳನ್ನು ಬರೆದನು. ಮತ್ತು ಆ ವಿಷಯಗಳಲ್ಲಿ ಜರ್ಮನ್ ವಿದ್ವಾಂಸರ ಗ್ರಂಥಗಳನ್ನು ಓದುವದಕ್ಕೆ ಅನುಕೂಲವಾಗಬೇಕೆಂದು ಜರ್ಮನ್ ಭಾಷೆಯ ಅಭ್ಯಾಸ ಮಾಡಿದನು.

ಧರ್ಮಶಾಸ್ತ್ರದ ಅಧ್ಯಯನದಿಂದ ಅವನಿಗೆ ಧರ್ಮಶಾಸ್ತ್ರವು ಹೇಳುವದೊಂದು, ಜನರು ಆಚರಿಸುವದೊಂದು ಆಗಿರುತ್ತದೆಂದು ತೋರಿತು. ಆದರಂತೆ ಸಮಾಜದ ಆಚರಣೆಯಲ್ಲಿ ಸುಧಾರಣೆಯಾಗಬೇಕೆಂದು ಅವನು ಪ್ರತಿಪಾದಿಸಹತ್ತಿದನು. ಜನರು ಹಳಿವಾರೆಂಬ ಅಂಜಿಕೆಗೆ ತನ್ನ ಸಾಮಾಜಿಕ ಧಾರ್ಮಿಕ ಸುಧಾರಣೆಯ ವಿಚಾರಗಳನ್ನು ಹೇಳುವದಕ್ಕೆ ಅವನು ಹಿಂದೆ ಮುಂದೆ ನೋಡುತ್ತಿರಲಿಲ್ಲ. ನಾನು ದೇವರನ್ನು ಬಿಟ್ಟು ಮತ್ಯಾರಿಗೂ ಅಂಜುವದಿಲ್ಲವೆಂದು ಅವನು ಅನ್ನುತ್ತಿದ್ದನು.

ಲೇಲಹಮದಲ್ಲಿರುವಾಗ ಇವನು ಸಾರ್ವಜನಿಕ ರಾಜಕೀಯ ಕಾರ್ಯಗಳಲ್ಲಿ ಪ್ರತ್ಯಕ್ಷವಾಗಿ ತೊಡಗಿರಲಿಲ್ಲ. ಆದರೂ ಇತಿಹಾಸದ ಅವಲೋಕನ ಮತ್ತು ಲೋಕಸ್ಥಿತಿಯ ನಿರೀಕ್ಷಣ ಇವುಗಳಿಂದ ಅವನ ಮನಸ್ಸಿನಲ್ಲುಂಟಾಗತಕ್ಕ ಪರಿಣಾಮವೇ ಆಗಿತ್ತು. ಆದ್ದರಿಂದ ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿ ಲೋಕಸೇವೆಯನ್ನು ಮಾಡುವ ಉತ್ಕಟೇಚ್ಛೆಯು ಅವನಿಗೆ ಉತ್ಪನ್ನವಾಯಿತು. ೧೮೨೬ರಲ್ಲಿ ತನ್ನ ಒಬ್ಬ

ಮಿತ್ರನಿಗೆ ಬರೆದ ಪತ್ರದಲ್ಲಿ ಲೋಕಹಿತಕ್ಕಾಗಿ ಏನಾದರೂ ಉದ್ಯೋಗ ಮಾಡಬೇಕೆಂದು ಯಾವಾಗಲೂ ಅನಿಸುತ್ತಿರುವದೆಂದೂ ಶಿಕ್ಷಣಪದ್ಧತಿ-ಧರ್ಮಶಾಸ್ತ್ರಗಳಲ್ಲಿ ಸುಧಾರಣೆಯನ್ನು ಮಾಡಬೇಕೆಂದು ಮನಸ್ಸಿರುವದೆಂದೂ ತನ್ನ ಅಭಿಪ್ರಾಯವನ್ನು ತೋರಿಸಿದ್ದನು. ಅವನು ಬರೆದ ಅಭಿಪ್ರಾಯವೇನಂದರೆ:—"ದೇಶದ ಸಾಂಪ್ರತ ಸ್ಥಿತಿಯನ್ನು ನೋಡಿ ನನ್ನ ಮನಸ್ಸು ಎಷ್ಟು ತಳಮಳಗೊಳ್ಳುವದೆಂಬದನ್ನು ಪತ್ರದಲ್ಲಿ ಬರೆಯಲಾರೆ. ಕೂಲಿಕಾರರ ಮತ್ತು ಬಡಜನರ ಆಪತ್ತು ನೋಡಿ ನನಗೆ ಬಹಳ ವ್ಯಸನವಾಗುವದು. ಲೋಕಹಿತಕ್ಕಾಗಿಯೂ ದೇಶಹಿತಕ್ಕಾಗಿಯೂ ಏನಾದರೊಂದು ಉದ್ಯೋಗವನ್ನು ಮಾಡಬೇಕೆಂದು ಹಗಲಿರುಳು ಹಾತೊರೆಯುತ್ತಿರುವೆನು. ಶಿಕ್ಷಣ ಪದ್ಧತಿಯಲ್ಲಿಯೂ ಧರ್ಮಸಂಸ್ಥೆಯಲ್ಲಿಯೂ ಸುಧಾರಣೆಗಳನ್ನು ಮಾಡಲಿಕ್ಕೆ ಬೇಕು. ಧರ್ಮಶಾಸ್ತ್ರದ ಆಜ್ಞೆಯಂತೆ ಜನರು ತಮ್ಮ ನಿತ್ಯ ವ್ಯವಹಾರದಲ್ಲಿ ಸದಾಚರಣೆಯುಳ್ಳವರಾಗಿ ನಡೆಯಬೇಕೆಂಬದೇ ನನ್ನ ಇಚ್ಛೆ."

ಆರ್ನೋಲ್ಡನು ೧೮೧೯ರಿಂದ ೧೮೨೮ರ ವರೆಗೆ ೮ ವರ್ಷದ ಲೇಲಹಾಮದ ಗುರುಕುಲದಲ್ಲಿ ವಿದ್ಯಾದಾನದ ಕೆಲಸವನ್ನು ಮಾಡಿದನು; ಮತ್ತು ಸ್ವಲ್ಪ ಸ್ವಂತದ ಉತ್ಪನ್ನದಲ್ಲಿಯೇ ಗುರುವಿಗೆ ತಕ್ಕ ಸಮಾಧಾನವನ್ನು ಹೊಂದಿ ಇದ್ದನು. ಆದರೂ ಅವನ ವಿಸ್ತಾರವಾದ ಸಂಸಾರವನ್ನು ನೋಡಿ ಅವನ ಮಿತ್ರರು ಆರ್ನೋಲ್ಡನು ಇನ್ನು ಮುಂದೆ ಖಾಸಗಿ ಶಾಲೆಯನ್ನು ಅವಲಂಬಿಸದೆ ಕಾಯಂ ಸಂಬಳವು ದೊರೆಯುವಂಥ ಮತ್ತು ತನ್ನ ವಿದ್ವತ್ತೆಯ ಉಪಯೋಗವು ಹೆಚ್ಚು ವಿದ್ಯಾರ್ಥಿಗಳಿಗೆ ಆಗುವಂಥ ಒಂದು ಸ್ಥಳದಲ್ಲಿ ಕಾಯಂ ನೌಕರಿಯನ್ನು ಹಿಡಿಯಬೇಕೆಂದು ಅಭಿಪ್ರಾಯಪಟ್ಟರು. ಇಷ್ಟರಲ್ಲಿ ೧೮೨೭ರ ಆಗಸ್ಟ ತಿಂಗಳಲ್ಲಿ ರುಗ್ಬಿಯ (ಇಂಗ್ಲಂಡದ ಮಧ್ಯಭಾಗದಲ್ಲಿ ಒಂದು ಊರು) ಸಾರ್ವಜನಿಕ ಶಾಲೆಯ ಹೆಡ್ ಮಾಸ್ತರನಾದ ಡಾ. ವೂಲನು ೨೧ ವರ್ಷ ಕೆಲಸ ಮಾಡಿ ಅದನ್ನು ಬಿಟ್ಟು ಹೋಗಲು, ಆಗ ಆ ಸ್ಥಳಕ್ಕಾಗಿ ಆರ್ನೋಲ್ಡನು ಅರ್ಜಿಯನ್ನು ಮಾಡಿದನು. ಅಲ್ಲಿಯ ಪಂಚರು ಅರ್ಜದಾರನ ಗುಣಗಳನ್ನು ನೋಡಿ ಇವನಿಗೇ ಆ ಸ್ಥಳವನ್ನು ಕೊಟ್ಟರು. ಆ ಪ್ರಸಂಗದಲ್ಲಿ ಡಾ. ಹಾರೆನ್ಸನು ಆರ್ನೋಲ್ಡನಿಗೆ ಕೊಟ್ಟ ಪ್ರಶಂಸಾಪತ್ರದಲ್ಲಿ ಈ ಪ್ರಕಾರ ಬರೆದಿತ್ತು :—

"ರುಗ್ಬಿ ಶಾಲೆಯ ಹೆಡ್ ಮಾಸ್ತರನ ಸ್ಥಳಕ್ಕೆ ಮಿ. ಆರ್ನೋಲ್ಡನು ನಿಯಮಿಸಲ್ಪಟ್ಟದ್ದಾದರೆ ಅವನು ಶಾಲೆಯ ಶಿಕ್ಷಣಪದ್ಧತಿ-ವ್ಯವಸ್ಥೆಗಳನ್ನು ಸುಧಾರಿಸುವನೆಂಬದಿಷ್ಟೇ ಅಲ್ಲ; ಇಂಗ್ಲಂಡದ ಶಿಕ್ಷಣ ಪದ್ಧತಿಯ ಮೇಲೆಯೇ ಅವನ ಕೆಲಸದ ಪರಿಣಾಮವುಂಟಾಗಿ ಆ ಪದ್ಧತಿಯು ರೂಪಾಂತರವಾದೀತೆಂದು ನಾನು ಪೂರ್ಣವಾಗಿ ನಂಬುತ್ತೇನೆ."

ಈ ಸ್ಥಳಕ್ಕೆ ನಿಯಮಿಸಲ್ಪಟ್ಟ ಬಳಿಕ ಅಲ್ಲಿಯ ನಿಯಮಕ್ಕನುಸರಿಸಿ ಆರ್ನೋಲ್ಡನು ಪುರೋಹಿತತನದ ದೀಕ್ಷೆಯನ್ನು ತೆಗೆದುಕೊಳ್ಳಬೇಕಾಯಿತು. ಆ ಬಳಿ

ನಿಸ್ವರ ಆರ್ನೋಲ್ಡನು ಡಾಕ್ಟರ್ ಆರ್ನೋಲ್ಡ್, ಡಿ. ಡಿ. ಎಂದು ಕರೆಯಲ್ಪಡಹತ್ತಿ ದನು. ೧೮೨೮ ರ ಅಗಸ್ಟ ತಿಂಗಳಲ್ಲಿ ಲೇಲಹಮ್‌ದೊಳಗಿನ ಗುರುಕುಲವನ್ನು ನುರಿದು ರುಗ್ಬಿಗೆ ಹೋಗಿ ಅಲ್ಲಿಯ ಮುಖ್ಯಾಧ್ಯಾಪಕನ ಪದವನ್ನು ಸ್ವೀಕರಿಸಿದನು. ಈ ವಿಷಯದಲ್ಲಿ ಅವನು ತನ್ನ ಒಬ್ಬ ಮಿತ್ರನಿಗೆ ಬರೆದದ್ದೇನಂದರೆ:—

"ರುಗ್ಬಿಯಲ್ಲಿ ನನ್ನ ಕೆಲಸದ ಉಪಯುಕ್ತತೆಯು ಹೆಚ್ಚಾದೀತೆಂದು ತಿಳಿದು ನಾನು ಈ ಹೊಸ ಕೆಲಸದ ವಿಷಯವಾಗಿ ಸಂತೋಷಬಡುತ್ತೇನೆ. ಇಲ್ಲಿ ನಾನು ಧರ್ಮಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಆಸ್ಥೆಯಿಂದ ಕೊಟ್ಟು ಎಲ್ಲ ಶಿಕ್ಷಣವನ್ನು ಧರ್ಮಮಯವಾಗಿ ಮಾಡುವದಕ್ಕೂ ವಿದ್ಯಾರ್ಥಿಗಳ ಆಚರಣಗಳೆಲ್ಲವು ಧರ್ಮಮೂಲವಾಗಿ ಏರ್ಪಡುವಂತೆ ಮಾಡುವದಕ್ಕೂ ಪ್ರಯತ್ನಪಡುತ್ತೇನೆ. ಈಗ ನನ್ನ ಚರಿತ್ರನಾಟಕದ ಹೊಸ ಅಂಕವು ಪ್ರಾರಂಭವಾಗಹತ್ತಿದೆ. ನನ್ನ ಕೈಯಿಂದ ದೇಶಸೇವೆಯು ಚನ್ನಾಗಿ ಆಗುವಂತೆ ದೇವರು ಸಹಾಯ ಮಾಡಲಿ."

೧೮೨೮ನೆಯ ಇಸ್ವಿಯು ಇಂಗ್ಲಂಡದಲ್ಲಿ ಶಿಕ್ಷಣಪದ್ಧತಿಯ ವಿಷಯದಲ್ಲಿ ಸಾರ್ವತ್ರಿಕ ಅಸಂತೋಷದ ಕಾಲವು. ಗ್ರೀಕ ಲಾಟನ ಭಾಷೆಗಳನ್ನು ಹೆಚ್ಚಾಗಿ ಅಭ್ಯಾಸ ಮಾಡಿಸುವದೂ ಧರ್ಮಶಿಕ್ಷಣವು ಪರಿಣಾಮಕಾರಕವಾಗಿದ್ದಿಲ್ಲವೆಂಬದೂ ಆ ಅಸಂತೋಷದ ಮುಖ್ಯ ಕಾರಣಗಳಾಗಿದ್ದವು. ಸಾರ್ವಜನಿಕ ಶಾಲೆಗಳಲ್ಲಿ ಬಹುತರ ಹುಡುಗರಲ್ಲಿ ಸುಳ್ಳು ಹೇಳುವದೂ, ಗುರುಗಳ ಅಪಮಾನ ಮಾಡುವದೂ, ತಮ್ಮತಮ್ಮೊಳಗೆ ಜಗಳವಾಡುವದೂ, ನಾಲ್ಕು ಹುಡುಗರು ಕೂಡಿಕೊಂಡು ಒಕ್ಕಟ್ಟು ಮಾಡಿಕೊಂಡು ಬೇರೆ ಹುಡುಗರನ್ನು ಪೀಡಿಸುವದೂ, ಅಭ್ಯಾಸವನ್ನು ಮಾಡದಿರುವದೂ, ಶಾಲೆಯ ಶಿಸ್ತನ್ನು ಪಾಲಿಸದಿರುವದೂ ಕಂಡು ಬರುತ್ತಿದ್ದವು. ಅದ್ದರಿಂದಲೇ ತಿಳಿದವರು ತಮ್ಮ ಹುಡುಗರನ್ನು ಇಂಥ ಶಾಲೆಗಳಿಗೆ ಕಳಿಸದೆ ಗುರುಕುಲಗಳಲ್ಲಿ ಇಡುತ್ತಿದ್ದರು. ಡಾ. ಆರ್ನೋಲ್ಡನು ಕೆಲವು ಕೆಟ್ಟ ಹುಡುಗರನ್ನು ಶಾಲೆಯಿಂದ ಹೊರಗೆ ಹಾಕಿದನು. ಶಿಕ್ಷಣದ ಕೆಲಸದಲ್ಲಿ ಆಸ್ಥೆಯನ್ನು ಹೆಚ್ಚಿಸಿದನು. ಧರ್ಮಶಿಕ್ಷಣವನ್ನು ತಾನೇ ಕೈಕೊಂಡನು. ಎಲ್ಲ ಕ್ಲಾಸುಗಳಿಗೆ ತಾನು ಕೆಲವು ವೇಳೆ ಹೋಗುವ ಕ್ರಮವನ್ನಿಟ್ಟನು. ಇನಾಮುಗಳನ್ನಿಟ್ಟು ಹುಡುಗರಲ್ಲಿ ಹುರುಪು ಹುಟ್ಟಿಸಿದನು. ಅರ್ವಾಚೀನ ಇತಿಹಾಸ ಮೊದಲಾದ ಹೊಸ ವಿಷಯಗಳನ್ನು ಶಿಕ್ಷಣದಲ್ಲಿ ಸೇರಿಸಿದನು. ಕೈಕೆಳಗಿನ ಶಿಕ್ಷಕರಿಗೆ ಉತ್ತೇಜನ ಕೊಟ್ಟು ವಾಚನದಿಂದ ಜ್ಞಾನವನ್ನು ಬೆಳಿಸುವದಕ್ಕೆ ಉಪದೇಶಿಸಿದನು. ಮೇಲಿನ ವರ್ಗಗಳ ಹುಡುಗರ ಸಹಾಯವನ್ನು ತೆಗೆದುಕೊಂಡನು. ಶಾಲೆಯೊಳಗಿನ ಹುಡುಗರೊಡನೆ ಮನಸ್ಸು ಬಿಚ್ಚಿ ಮಾತಾಡಿ ಅವರಲ್ಲಿ ಆತ್ಮವಿಶ್ವಾಸವನ್ನುಂಟು ಮಾಡಿದನು. ಈ ಪ್ರಕಾರ ಹಲವು ತರದ ಉಪಾಯಗಳಿಂದ ಅವನು ಸ್ವಲ್ಪ ಕಾಲದಲ್ಲಿ ಶಾಲೆಯ ಕೆಲಸದಲ್ಲಿ ರೂಪಾಂತರವನ್ನು ಮಾಡಿದನು. ಕಲಿ

ಸುವದರಲ್ಲಿ ಆಸ್ಥೆ, ಅಸಾಧಾರಣವಾದ ಮನೋಧೈರ್ಯ, ಲೌಕಿಕ ಧಾರ್ಮಿಕ ಶಿಕ್ಷಣಗಳನ್ನು ಫಲಧ್ರೂಪವಾಗಿ ಮಾಡುವ ಬಲವಾದ ಇಚ್ಛೆ, ಲೋಕೋಪಯೋಗದ ಕಾರ್ಯಗಳನ್ನು ಮಾಡುವದರಲ್ಲಿ ಉತ್ಸಾಹ ಇವೆಲ್ಲ ಗುಣಗಳು ಆತನಲ್ಲಿದ್ದದರಿಂದ ಅವನು ತನ್ನ ವಿದ್ಯಾರ್ಥಿಗಳು ಮುಂದೆ ದೇಶಕಾರ್ಯಗಳನ್ನು ಮಾಡತಕ್ಕವರೂ, ಧಾರ್ಮಿಕರೂ ಆದ ನಾಗರಿಕರಾಗಬೇಕೆಂದು ರುಗ್ಬಿಶಾಲೆಯ ಅಧ್ಯಾಪನದ ಕಾರ್ಯವನ್ನು ಬಹಳ ಆಸ್ಥೆಯಿಂದ ಮಾಡಿದನು. ತಾನು ಯೋಗ್ಯವಾಗಿ ನಡೆದು ಎಲ್ಲರ ಮನಸ್ಸಿನಲ್ಲಿ ಶಾಲೆಯ ಕೆಲಸದ ವಿಷಯದಲ್ಲಿ ಆಸ್ಥೆಯನ್ನು ಹುಟ್ಟಿಸಿದನು. ಎಲ್ಲ ವಿಷಯಗಳನ್ನು ಚನ್ನಾಗಿ ಕಲಿಸುವನು. ಅರ್ವಾಚೀನ ಇತಿಹಾಸದ ಪಾಠದಲ್ಲಂತೂ ವಿದ್ಯಾರ್ಥಿಗಳು ತಲ್ಲೀನರಾಗುತ್ತಿದ್ದರು. ಅವನ ಧರ್ಮ ವಿಷಯದ ವ್ಯಾಖ್ಯಾನಗಳನ್ನು ಕೂಡಾ ವಿದ್ಯಾರ್ಥಿಗಳು ಪ್ರೇಮದಿಂದ ಕೇಳುತ್ತಿದ್ದರು. ಶಿಕ್ಷಣ ವಿಷಯಕ, ಸಾಮಾಜಿಕ, ಧಾರ್ಮಿಕ, ರಾಜಕೀಯ ಮೊದಲಾದ ದೇಶಹಿತದ ಎಲ್ಲ ವಿಷಯಗಳಲ್ಲಿ ಅವನು ಯಾರಿಗೂ ಹೆದರದೆ ಹಲವು ಲೇಖಗಳನ್ನು ಬರೆದನು; ವ್ಯಾಖ್ಯಾನಗಳನ್ನು ಕೊಟ್ಟನು; ಗ್ರಂಥಗಳನ್ನೂ ಛಾಪಿಸಿ ಪ್ರಸಿದ್ಧ ಪಡಿಸಿದನು. ೧೮೩೧ ರಿಂದ ೧೮೩೩ರ ವರೆಗೆ ರಿಫಾರ್ಮ ಬಿಲ್ಲಿನ ವಿಷಯವಾಗಿ ರಾಜಕೀಯ ವಾತಾವರಣವು ಕ್ಷುಬ್ಧವಾಗಿದ್ದರೂ ಈತನು ತನ್ನ ವಿಚಾರಗಳನ್ನು ಪ್ರಕಟಸುವದನ್ನು ಬಿಡಲಿಲ್ಲ. ಸಾರ್ವಜನಿಕ ಕೆಲಸಗಳಲ್ಲಿ ತನ್ನ ಅಧಿಕಾರದ ವಿಷಯವಾಗಿ ಆತನು ಈ ಪ್ರಕಾರ ಅನ್ನುತ್ತಿದ್ದನು.

"ನಾನು ಶಿಕ್ಷಕನಿದ್ದಂತೆ ನಾಗರಿಕನೂ ಇರುತ್ತೇನೆ. ಶಿಕ್ಷಕನಾದ್ದರಿಂದ ನಾನು ಶಾಲೆಯೊಳಗಿನ ಕೆಲಸವನ್ನು ಚನ್ನಾಗಿ ಮಾಡತಕ್ಕದ್ದೇ ಸರಿ. ಆದರೆ ಬೇರೆ ವೇಳೆಯಲ್ಲಿ ನಾಗರಿಕನೆಂದು ದೇಶಹಿತಕ್ಕಾಗಿ ಬರೆಯುವದಕ್ಕೂ, ಮಾತಾಡುವದಕ್ಕೂ ನನಗೆ ಪೂರ್ಣ ಅಧಿಕಾರವುಂಟು."

ಡಾ. ಆರ್ನೋಲ್ಡನು ಜನರು ಆಡಿಕೊಳ್ಳುವದರ ಕಡೆಗೆ ಲಕ್ಷವನ್ನು ಕೊಡದೆ ತನ್ನ ಕೆಲಸವನ್ನು ನಿರಂತರವಾಗಿ ನಡೆಯಿಸಿದನು. ಕೆಲವು ವರ್ಷಗಳ ತರುವಾಯ ಆತನ ಶಿಕ್ಷಣವಿಷಯಕ, ರಾಜಕೀಯ, ಧಾರ್ಮಿಕ ವಿಚಾರಗಳು ಜನರಿಗೆ ಹೆಚ್ಚಾಗಿ ಮಾನ್ಯವಾಗಹತ್ತಿದವು. ಆಕ್ಸಫರ್ಡದಲ್ಲಿ ಪ್ರತಿವರ್ಷ ಅರ್ವಾಚೀನ ಇತಿಹಾಸವನ್ನು ಕುರಿತು ಯಾವನಾದರೊಬ್ಬ ವಿದ್ವಾಂಸನ ವ್ಯಾಖ್ಯಾನವು ಆಗುತ್ತಿತ್ತು; ಆ ಕೆಲಸದ ಮೇಲೆ ೧೮೪೧ರಲ್ಲಿ ಡಾ. ಆರ್ನೋಲ್ಡನು ನಿಯಮಿಸಲ್ಪಟ್ಟನು. ಅವನ ವ್ಯಾಖ್ಯಾನಗಳು ವಿದ್ವಾಂಸರು ಮೆಚ್ಚತಕ್ಕಂಥವುಗಳು.

ಇಂಥ ಲೋಕಸೇವಕನೂ, ಧಾರ್ಮಿಕನೂ ಆದ ಗುರುವು ರುಗ್ಬಿ ಶಾಲೆಗೆ ದೊರೆತದ್ದು ಆ ಶಾಲೆಯ ದೈವವೇ ಸರಿ. ಅವನು ಅಲ್ಲಿ ೧೮೨೮ ರಿಂದ ೧೮೪೨ರ ವರೆಗೆ ೧೪ ವರ್ಷ ನಿರಂತರ ಪರಿಶ್ರಮ ಮಾಡಿ ರಾಷ್ಟ್ರೀಯ ಶಿಕ್ಷಣದಲ್ಲಿ ಕ್ರಾಂತಿಯನ್ನು

ಉಂಟುಮಾಡಿದನು. ದೇಶಕ್ಕೆ ಅಪರಿಮಿತವಾದ ಕಲ್ಯಾಣವನ್ನು ಮಾಡಿದನು. ಡಾ. ಆರ್ನೋಲ್ಡನು ಪ್ರಾಣಕ್ಕಿಂತ ಪ್ರಿಯವಾದ ತನ್ನ ಶಾಲೆಯಲ್ಲಿ ೧೮೪೨ ನೆಯ ಇಸವಿಯ ಜೂನ ೧೧ ನೆಯ ತಾರೀಖು ಶನಿವಾರ ಸಾಯಂಕಾಲದ ವರೆಗೆ ಕೆಲಸ ಮಾಡಿ ಮರು ದಿವಸ ಎದೆಯಲ್ಲಿ ನೋವಾದದ್ದೇ ನಿಮಿತ್ತವಾಗಿ ದೇಹವಿಟ್ಟನು; ಹಾಗೂ ಲೋಕ ಪ್ರಿಯವೂ, ದೇಶಮಾನ್ಯವೂ, ಆದ ರುಗ್ಬಿಯ ಹೆಡ್ಡಮಾಸ್ತರ ಸ್ಥಳವನ್ನು ಬಿಟ್ಟು ಹೋದನು. ಆದರೆ ಆತನು ಹೋದರೂ ಅವನು ಮಾಡಿದ ಕಾರ್ಯವು ಅವನ ಹಿಂದೆ ಉಳಿದು ಲೋಕಹಿತವನ್ನು ಮಾಡುತ್ತಿರುವದು.

ಹಿಂದೂ ಸಮಾಜದ ಜಾತಿಭೇದ ವಿಚಾರವು.

(ಭಾಷಾಂತರ.)

ನಮ್ಮ ಸಮಾಜದೊಳಗಿನ ಜಾತಿಭೇದಸಂಬಂಧದ ವಿಚಾರವು ಬಹಳ ವಾದಾತ್ಮಕವಾದದ್ದಿರುವದು. ಸುಶಿಕ್ಷಿತರಾದವರಲ್ಲಿಯೂ ಈ ವಿಷಯದಲ್ಲಿ ಐಕ್ಯ ವಿದ್ದಂತೆ ಕಂಡು ಬರುವದಿಲ್ಲ. ಜಾತಿಭೇದವೆಂಬ ಸಂಸ್ಥೆಯು ಕೇವಲ ನಮ್ಮ ಸಮಾಜದಲ್ಲಿಯೇ ಕಂಡು ಬರುವದು. ಬೇರೆ ಬೇರೆ ಜಾತಿಯವರ ನಡುವೆ ವಿವಾಹವಂತೂ ಆಗುವದೇ ಇಲ್ಲ; ಅನ್ನೋದಕ ವ್ಯವಹಾರವು ಸಹ ನಡೆಯಕೂಡದೆಂದು ಜಾತಿಯ ನಿರ್ಬಂಧವಿರುವದು. ಆದರೆ ಸುಶಿಕ್ಷಿತರೆನಿಸಿಕೊಳ್ಳುವ ಜನರಲ್ಲಿ ಈ ಅನ್ನೋದಕ ವ್ಯವಹಾರದ ಸಂಬಂಧದ ನಿರ್ಬಂಧವು ದಿನದಿನಕ್ಕೆ ಶಿಥಿಲವಾಗುತ್ತ ನಡೆದಿರುವದು. ನಮ್ಮ ಸಮಾಜದಲ್ಲಿ ಸದ್ಯಕ್ಕೆ ಸುಮಾರು ೩-೪ ಸಾವಿರಕ್ಕಿಂತ ಹೆಚ್ಚು ಜಾತಿಗಳಿರುವವು. ಇವು ಹ್ಯಾಗೆ, ಯಾವ ಕಾರಣಗಳಿಂದುಂಟಾದವೆಂಬದನ್ನು ಮೊದಲು ವಿಚಾರ ಮಾಡೋಣ.

ಈ ಸಮಯದಲ್ಲಿ ಡಾರ್ವಿನ್ನನ ಉತ್ಕ್ರಾಂತಿ ತತ್ವದ ಸಂಬಂಧದ ವಿಚಾರವನ್ನು ದೃಷ್ಟಾಂತಕ್ಕಾಗಿ ತೆಗೆದುಕೊಂಡರೆ ವಿಷಯವು ಹೆಚ್ಚು ಸುಗಮವಾಗಬಹುದು. ಜಗತ್ತಿನೊಳಗಿನ ಪ್ರಾಣಿವನಸ್ಪತಿಗಳೊಳಗಿನ ಅಸಂಖ್ಯಾತವಾದ ಭೇದಗಳು ಹ್ಯಾಗೆ ಉಂಟಾದವು? ಎಂಬ ವಿಚಾರವನ್ನು ಡಾರ್ವಿನ್ನನು ಅನೇಕ ಆಧಾರಗಳಿಂದ ಶೋಧಿಸಿ ತೆಗೆದನು. ಸೃಷ್ಟಿಯ ಉತ್ಪತ್ತಿಯ ಸಂಬಂಧದಿಂದ ಕ್ರೈಸ್ತರ ಧರ್ಮಗ್ರಂಥವಾದ ಬೈಬಲಿನಲ್ಲಿ ಒಂದು ವಿಚಿತ್ರವಾದ ಕಥೆಯಿರುವದು. ಆ ಕಥೆಯ ಮೇರೆಗೆ ನೋಡಿದರೆ, ಈ ಪ್ರಾಣಿವನಸ್ಪತಿಗಳೊಳಗಿನ ಯಾವತ್ತು ಭೇದಗಳನ್ನು ಸೃಷ್ಟಿಕರ್ತನು ಸ್ವತಃ ಸೃಷ್ಟಿಸಿರುವನೆಂತಲೂ, ಈ ಭೇದಗಳು ನಿಶ್ಚಲವಾದವುಗಳು, ಅಂದರೆ ಯಾವದಾದರೂ ಜಾತಿಯ ಪ್ರಾಣಿಯ ಅಥವಾ ವನಸ್ಪತಿಯ ಸಂತತಿಯು ಯಾವಾಗಲೂ ಅದೇ ಸ್ಥಿತಿಯಲ್ಲಿಯೇ ಇರುವದೆಂತಲೂ ತಿಳಿಯಬರುವದು.

ಆದರೆ ಕಾಲಾಂತರದಲ್ಲಿ ಈ ಸಿದ್ಧಾಂತವು ಶಾಸ್ತ್ರಜ್ಞರಿಗೆ ಸಮಂಜಸವೆನಿಸದ ಇದ್ದ ದರಿಂದ, ಅವರು ಈ ಸಿದ್ಧಾಂತಕ್ಕೆ ಕೆಲವಂಶದಿಂದ ತಮ್ಮ ಅಭಿಪ್ರಾಯಗಳನ್ನು ಸೇರಿಸಿ ಹೊಸಥೊಂದು ಸಿದ್ಧಾಂತವನ್ನು ಸ್ಥಾಪಿಸಿದರು. ಅವರು ಹೇಳಿದ್ದೇನಂದರೆ- "ಜಗತ್ತಿನೊಳಗಿನ ಪ್ರಾಣಿವನಸ್ಪತಿಗಳೊಳಗಿನ ಕೆಲವು ವಿಶಿಷ್ಟ ಪ್ರಕಾರದ ಪ್ರಾಣಿವನ ಸ್ಪತಿಗಳನ್ನು ಮಾತ್ರ ಈಶ್ವರನು ಸೃಷ್ಟಿಸಿದನು; ಹಾಗು ಆ ಮೂಲ ಪ್ರಾಣಿವನ ಸ್ಪತಿಗಳಿಂದ ಮುಂದೆ ಕ್ರಮವಾಗಿ ಅನಂತ ಪ್ರಕಾರಗಳು ನೈಸರ್ಗಿಕ ಕಾರಣಗಳಿಂದ ಉಂಟಾದವು." ಆದರೆ ಡಾರ್ವಿನ್ನನ ಉತ್ಕ್ರಾಂತಿ ತತ್ವಕ್ಕೆ ಸಂಬಂಧಿಸಿದ ಸಿದ್ಧಾಂತಾ ನುಸಾರವಾಗಿ ನೋಡಿದರೆ, ಈ ಸೃಷ್ಟಿಯೊಳಗಿನ ಪ್ರಾಣಿವನಸ್ಪತಿಗಳೊಳಗಿನ ಯಾವತ್ತು ಪ್ರಕಾರಗಳು ನೈಸರ್ಗಿಕ ಕಾರಣಗಳಿಂದಲೇ ಉಂಟಾಗಿರುವವೆಂತಲೂ, ಅವು ಸರ್ವದಾ ಉತ್ಕ್ರಾಂತಿಯನ್ನು ಹೊಂದುತ್ತಲೇ ಇರುವವೆಂತಲೂ ಸಿದ್ಧವಾ ಗುವದು. ಸಾಂಪ್ರತಕಾಲದ ಎಲ್ಲ ಶಾಸ್ತ್ರಜ್ಞರು ಈ ಮತವನ್ನು ಅನುಮೋದಿಸು ವರು. ಒಟ್ಟಿನಮೇಲೆ, ಸೃಷ್ಟಿಯೊಳಗಿನ ಪ್ರಾಣಿವನಸ್ಪತಿಗಳ ಭೇದಗಳ ಉತ್ಪತ್ತಿಯ ಸಂಬಂಧದ ವಿಚಾರದಲ್ಲಿ, (೧) ಈ ಯಾವತ್ತು ಭೇದಗಳು ಈಶ್ವರ ಪ್ರಣೀತವಾದ ವುಗಳು, ಇವುಗಳಲ್ಲಿ ಯಾವ ತರದ ಉತ್ಕ್ರಾಂತಿಯೂ ನಡೆಯಲಾರದು; (೨) ಇವುಗಳೊಳಗಿನ ಕೆಲವು ವಿಶಿಷ್ಟ ಪ್ರಕಾರಗಳನ್ನು ಮಾತ್ರ ಈಶ್ವರನು ಸೃಷ್ಟಿಸಿದನು, ಇವುಗಳಿಂದ ಮುಂದೆ ಅಸಂಖ್ಯಾತ ಪ್ರಕಾರಗಳು ನೈಸರ್ಗಿಕ ಕಾರಣಗಳಿಂದ ಉಂಟಾದವು; (೩) ಈ ಯಾವತ್ತು ಪ್ರಕಾರಗಳು ಕೇವಲ ನೈಸರ್ಗಿಕ ಕಾರಣಗಳಿಂ ದಲೇ ಉಂಟಾದವು, ಇವೆಲ್ಲ ಉತ್ಕ್ರಾಂತಿ ಕ್ಷಮವಾಗಿರುವವು, ಇದಕ್ಕೆ ದೈವಿಕ ಕಾರಣಗಳ ಸಂಬಂಧವು ಎಷ್ಟು ಮಾತ್ರವೂ ಇರುವದಿಲ್ಲ; ಎಂಬ ಮೂರು ಬೇರೆ ಬೇರೆ ಮೆಟ್ಟುಗಳು ಕಾಲಾನುಕ್ರಮದಿಂದ ಉಂಟಾದವು. ಹಾಗು ಮೂರನೆಯ ಮೆಟ್ಟಿನಲ್ಲಿ ಹೇಳಿರುವ ವಿಚಾರವೇ ಪ್ರಕೃತಕ್ಕೆ ಸಮಂಜಸವೆನಿಸಿ ಬಹುಜನಸಮ್ಮತ ವಾಗಿರುವದು.

ನಮ್ಮ ಸಮಾಜದೊಳಗಿನ ಜಾತಿಭೇದಸಂಬಂಧವಿಚಾರದಲ್ಲಿಯಾದರೂ ಇದೇ ತರದ ವಿಚಾರಸರಣಿಯು ಪರಿಬೀಳುವದು. ಹಿಂದೂ ಸಮಾಜದೊಳಗಿನ ಮೂರು ನಾಲ್ಕು ಸಾವಿರ ಜಾತಿಗಳೆಲ್ಲ ಈಶ್ವರ ನಿರ್ಮಿತವಾದವುಗಳು; ಅವುಗಳಿಗೆ ಪರಿಸ್ಥಿತಿಯೇ ಮೊದಲಾದ ನೈಸರ್ಗಿಕ ಕಾರಣಗಳ ಸಂಬಂಧವು ಎಷ್ಟು ಮಾತ್ರವೂ ಇರುವದಿಲ್ಲ, ಎಂಬ ಕಲ್ಪನೆಯು ನಮ್ಮವರಲ್ಲಿ ಕೆಲ ಕಾಲದ ವರೆಗೆ ಇತ್ತು. ಆದರೆ ಮುಂದೆ ಈ ವಿಚಾರವು ಜಾತಿಭೇದದ ಅಭಿಮಾನಿಗಳಿಗೂ ಸಹ ಸಮಂಜಸವೆನಿಸದೆ ಇದ್ದದರಿಂದ ಅವರು ಬೇರೊಂದು ಕಲ್ಪನೆಯನ್ನು ತೆಗೆದರು. ಅವರು ಹೇಳಿದ್ದೇ ನಂದರೆ, ಚಾತುರ್ವರ್ಣ್ಯ ವ್ಯವಸ್ಥೆಯನ್ನಷ್ಟೇ ಈಶ್ವರನು ಸೃಜಿಸಿದನು. ಆಮೇಲೆ ಹುಟ್ಟಿದ ಸಾವಿರಾರು ಭೇದಗಳೆಲ್ಲ ನೈಸರ್ಗಿಕ ಕಾರಣಗಳಿಂದ ಉಂಟಾದವು. ಈ

ತತ್ವವನ್ನು ಅನುಸರಿಸಿದ್ದರಿಂದ ಕೆಲವು ಜನರಿಗೆ ಒಂದು ಮುಖ್ಯ ಜಾತಿಗೆ ಸೇರಿದ ಉಪಜಾತಿಗಳಲ್ಲಿ ವಿವಾಹವೂ ಅನ್ನೋದಕ ವ್ಯವಹಾರವೂ ನಡೆಯಲಿಕ್ಕೆ ಅಡ್ಡಿಯಿಲ್ಲವೆಂದು ಅನಿಸುವದು. ಆದರೆ ಜಾತಿಭೇದವು ಸಂಪೂರ್ಣವಾಗಿ ಇಲ್ಲದಂತಾಗಬೇಕೆಂದರೆ ಅದು ಅವರಿಗೆ ಸರಿದೋರುವದಿಲ್ಲ. ನಿಜವಾಗಿ ವಿಚಾರ ಮಾಡಿ ನೋಡಿದರೆ ಈ ಚಾತುರ್ವರ್ಣ್ಯ ವ್ಯವಸ್ಥೆಯು ಸಹ ಕೇವಲ ನೈಸರ್ಗಿಕ ಕಾರಣಗಳಿಂದಲೇ ಉಂಟಾಗಿರುವದೆಂದು ಸಿದ್ಧವಾಗುವದು.

ಜಾತಿಭೇದಗಳು ಹ್ಯಾಗೆ ಉಂಟಾದವು, ಎಂಬ ವಿಷಯದ ಸಮಂಜಸವಾದ ಉಪಪತ್ತಿಯು ಸಂಸ್ಕೃತವಾಙ್ಮಯದೊಳಗಿನ ಆಧಾರಗಳಿಂದಲೂ ಇತಿಹಾಸದ ಸಹಾಯದಿಂದಲೂ ಸಿದ್ಧವಾಗುವಂತೆ ಇದೆ. ಒಂದಾನೊಂದು ಕಾಲದಲ್ಲಿ ಆರ್ಯರು ಭರತಖಂಡದಲ್ಲಿ ಒಳನುಗ್ಗಿದರೆಂಬದು ಪ್ರಮಾಣಸಿದ್ಧವಾದ ಸಂಗತಿಯಾಗಿರುವದು. ಅತಿ ಪ್ರಾಚೀನ ಕಾಲದ ಗ್ರಂಥಗಳಲ್ಲಿ ಆರ್ಯರು, ದಸ್ಯುಗಳು ಎಂಬ ಜಾತಿಭೇದಗಳು ಉಲ್ಲೇಖಿಸಲ್ಪಟ್ಟಿರುವವು. ಪ್ರಾರಂಭದಲ್ಲಿ ಆರ್ಯರಲ್ಲಿ ಯಾವ ಪ್ರಕಾರದ ಒಳಭೇದವೂ ಇರಲಿಲ್ಲ. ಅವರು ತಮ್ಮ ಜನರು ಹೊರ್ತಾಗಿ ಉಳಿದವರೆಲ್ಲರಿಗೆ ದಸ್ಯುಗಳೆನ್ನುತ್ತಿದ್ದರು. ಪ್ರಾಚೀನ ಕಾಲದ ಗ್ರೀಕರೂ ಸಹ ತಮ್ಮ ಜನರು ಹೊರ್ತಾಗಿ ಉಳಿದವರೆಲ್ಲರಿಗೆ ಕಾಡು ಜನರೆನ್ನುತ್ತಿದ್ದರೆಂಬದು ಅವರ ಇತಿಹಾಸದಿಂದ ತಿಳಿದು ಬರುವದು. ಮುಂದೆ ಬರಬರುತ್ತ ಆರ್ಯರಲ್ಲಿ ಮನೆಯಲ್ಲಿ ಉಳಿದುಕೊಂಡು ಧರ್ಮಕೃತ್ಯಗಳನ್ನು ನೆರವೇರಿಸುವವರು, ಯುದ್ಧಮಾಡುವ ಶೂರರು, ಅಂದರೆ ಕ್ರಮವಾಗಿ ಬ್ರಾಹ್ಮಣರು, ಕ್ಷತ್ರಿಯರು ಎಂಬ ಎರಡು ವರ್ಗಗಳು ಅವರವರ ವ್ಯವಸಾಯಾನುಗುಣವಾಗಿ ಉಂಟಾದವು. ಹಾಗು ಮುಂದೆ ಫಲವತ್ತಾದ ಭೂಮಿಯು ಆರ್ಯರ ವಶಕ್ಕೆ ಬಂದ ಬಳಿಕ ಆರ್ಯರಲ್ಲಿಯೇ ಕೆಲವರು ಒಕ್ಕಲತನವನ್ನೇ ಆರಂಭಿಸಿದ್ದರಿಂದ ವೈಶ್ಯರು, ಎಂಬ ಮೂರನೇ ವರ್ಗವು ಪ್ರಚಾರದಲ್ಲಿ ಬಂದಿತು. ಈ ರೀತಿಯಾಗಿ ಆರ್ಯರಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಎಂಬ ಮೂರು ಬೇರೆ ಬೇರೆ ವರ್ಗಗಳು ಅಥವಾ ವರ್ಣಗಳು ಉಂಟಾದವು. ಆದರೂ ಕೆಲಕಾಲದವರೆಗೆ ಆ ಮೂರು ವರ್ಣದವರಲ್ಲಿ ದೃಢತರವಾದ ಭೇದಭಾವವಿದ್ದಿಲ್ಲ. ಅವರೆಲ್ಲರೂ ಬಹುತವಾಗಿ ಸಮಾನ ಯೋಗ್ಯತೆಯವರೆಂದು ತಿಳಿಯಲ್ಪಡುತ್ತಿದ್ದರು. ಈ ಮೂರೂ ವರ್ಣದವರಿಗೆ ದ್ವಿಜರೆನ್ನುತ್ತಿದ್ದರು; ಹಾಗು ಉಪನಯನಾದಿ ಸಂಸ್ಕಾರಗಳ ಅಧಿಕಾರವು ಎಲ್ಲರಿಗೂ ಇದ್ದೇ ಇತ್ತು. ಆದರೆ ದಸ್ಯುಗಳು ಮಾತ್ರ ಕೀಳ್ತರದವರೆಂದು ತಿಳಿಯಲ್ಪಡುತ್ತಿದ್ದರು. ಅವರಿಗೆ ಈ ಆರ್ಯರ ಸಂಸ್ಕಾರಗಳ ಅಧಿಕಾರವು ಇದ್ದಿಲ್ಲ.

ಆರ್ಯರು ಈ ದೇಶವನ್ನು ಒಳನುಗ್ಗಿ ಇಲ್ಲಿಯ ಮೂಲ ನಿವಾಸಿಗಳನ್ನು ಸೋಲಿಸಿದರು; ಹಾಗು ತಮಗೆ ಅಂಕಿತರಾದವರನ್ನೇ ತಮ್ಮ ಸಮಾಜದೊಳಗೆ

ಸೇರಿಸಿಕೊಂಡು, ಅವರಿಗೆ ಶೂದ್ರರೆಂದು ಹೆಸರಿಟ್ಟರು; ಈ ಪ್ರಕಾರ ಶೂದ್ರರೆಂಬ ನಾಲ್ಕನೇ ವರ್ಣವು ಉಂಟಾಯಿತು.

ಮುಂದೆ ವೈಶ್ಯರಿಗೂ ಶೂದ್ರರಿಗೂ ಉದ್ಯೋಗ-ವ್ಯವಹಾರಗಳ ಮೂಲಕವಾಗಿ ನಿಕಟಸಂಬಂಧವುಂಟಾದ್ದರಿಂದ ಅವರವರ ವ್ಯವಹಾರವು ಹೆಚ್ಚುತ್ತಾ ನಡೆಯಲಾಗಿ ಬ್ರಾಹ್ಮಣರಿಗೆ ವೈಶ್ಯರು ಕಡಿಮೆ ತರಗತಿಯವರಾಗಿ ತೋರಹತ್ತಿದರು. ಹಾಗು ಇದೇ ತರದ ನೈಸರ್ಗಿಕ ಕಾರಣಗಳಿಂದಲೇ ಕ್ಷತ್ರಿಯರು ಸಹ ಬ್ರಾಹ್ಮಣರ ಶ್ರೇಷ್ಠತ್ವವನ್ನು ಒಪ್ಪಿಕೊಂಡರು; ಮುಂದೆ ಮಡಿ-ಮೈಲಿಗೆಗಳ ಕಲ್ಪನೆಯು ಸಮಾಜದಲ್ಲಿ ಸೇರಿತು. ಹಾಗು ಆರ್ಯ ಸಮಾಜವು ಒಡೆದು ನಾಲ್ಕು ಚೂರಾಗಿ ಹೋಯಿತು. ಈ ಕ್ರಮದಿಂದ ವಿಚಾರ ಮಾಡಿ ನೋಡಿದರೆ, ಚಾತುರ್ವರ್ಣ್ಯ ವ್ಯವಸ್ಥೆಯು ಪುರುಷಸೂಕ್ತ ಭಗವದ್ಗೀತೆ ಮುಂತಾದವುಗಳಲ್ಲಿ ವರ್ಣಿಸಲ್ಪಟ್ಟಂತೆ ಈಶ್ವರ ನಿರ್ಮಿತವಾದದ್ದಲ್ಲವೆಂದು ಕಂಡುಬರುವದು. ಹಿಂದುಸ್ತಾನದೊಳಗಿನ ಮೂಲನಿವಾಸಿಗಳು ಕಡಿಮೆ ಸುಧಾರಿಸಿದವರಾಗಿದ್ದದರಿಂದಾಗಲಿ ಮುಂದಾದರೂ ಇಂಥದೇ ಕಾರಣದಿಂದಾಗಲಿ ಆರ್ಯರ ದ್ವಿಜತ್ವವನ್ನು ಅಪೇಕ್ಷೆ ಮಾಡಲಿಲ್ಲ. ಅವರು ಶೂದ್ರತ್ವವನ್ನು ಒಪ್ಪಿಕೊಂಡು ಆರ್ಯರ ಸಮಾಜದಲ್ಲಿ ಕೂಡಿಕೊಂಡರು. ಇಷ್ಟೇ ಕಾರಣದಿಂದ ಅವರು ಕೀಳುತನವನ್ನು ಹೊಂದಿದರು.

ಸಾಂಪ್ರತಕಾಲದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಇದೇ ತರದ ಬಡಿದಾಟವು ನಡೆದಿರುವದು. ಅಲ್ಲಿಯ ಯುರೋಪಿಯನ್ನರು ಹಿಂದೂ ಜನರನ್ನು ಶೂದ್ರರಂತೆ ಇಟ್ಟುಕೊಳ್ಳಲಿಕ್ಕೆ ಸಮ್ಮತಿಸುವರು. ಆದರೆ ಹಿಂದೂಗಳು ಶೂದ್ರರಂತೆ ಇರಲಿಕ್ಕೆ ಒಪ್ಪುವದಿಲ್ಲ. ಅದರಿಂದ ಅವರಲ್ಲಿ ಬಡಿದಾಟವುಂಟಾಗಿರುವದು. ಹಿಂದಕ್ಕೆ ರೋಮ ಪಟ್ಟಣದಲ್ಲಿ ಪ್ಯಾಟ್ರಿಶಿಯನ್ ಹಾಗು ಪ್ಲೆಬಿಯನ್ ಜನಾಂಗದವರಲ್ಲಿ ಸಹ ಇದೇ ತರದ ಬಡಿದಾಟವು ಉಂಟಾಗಿತ್ತು. ಆದರೆ ಪ್ಲೆಬಿಯನ್ನರು ಪ್ಯಾಟ್ರಿಶಿಯನ್ನರೊಡನೆ ಬಡಿದಾಡಿ ಸಮಾನ ಹಕ್ಕನ್ನು ಪಡೆದರು. ನಾರ್ಮನ್ ಹಾಗು ಇಂಗ್ಲಿಷ ಜನಾಂಗದವರ ನಡುವೆಯೂ ಇದೇ ತರದ ಬಡಿದಾಟವುಂಟಾಗಿ ಕೊನೆಗೆ ಇಂಗ್ಲಿಷರು ವಿರೋಧಿಗಳೊಡನೆ ಸಮಾನಸಂಬಂಧತೆಯನ್ನು ಪಡೆದರು. ಆದರೆ ಹಿಂದುಸ್ತಾನದ ಮೂಲ ನಿವಾಸಿಗಳು ಮಾತ್ರ ಪ್ಲೇಬಿಯನ್ನರ ಅಥವಾ ಇಂಗ್ಲಿಷರ ಹಾಗೆ ಆರ್ಯರ ಸಂಗಡ ಬಡಿದಾಡದೆ ಇದ್ದದರಿಂದ, ಆರ್ಯರು ಅವರನ್ನು ಕಡಿಮೆ ಸ್ಥಿತಿಯಲ್ಲಿ ಎಣಿಸಿ ಅವರನ್ನು ಶೂದ್ರರನ್ನು ಮಾಡಿದರು. ಇಲ್ಲವಾದರೆ ಹಿಂದೂ ಸಮಾಜದಲ್ಲಿ ಶೂದ್ರ ವರ್ಗವು ಉಳಿಯುತ್ತಿದ್ದಿಲ್ಲ. ಈ ಪ್ರಕಾರ ಆರ್ಯರಿಗೆ ಶೂದ್ರರು ತೀರ ಕಡಿಮೆ ಪ್ರತಿಯವರಾಗಿ ತೋರಿದ್ದರಿಂದ ಅವರನ್ನು ಆರ್ಯರು ಶೂದ್ರರನ್ನು ಮಾಡಿದರು. ಹಾಗು ಮುಂದಿನಕಾಲದಲ್ಲಿ ಜಾತಿಭೇದವನ್ನು ಸಮರ್ಥನೆ ಮಾಡುವದಕ್ಕಾಗಿ ಈ ಚಾತುರ್ವರ್ಣ್ಯ ವ್ಯವಸ್ಥೆಯು ಈಶ್ವರ ನಿರ್ಮಿತವಾದದ್ದೆಂದು

ಹೇಳಿ ಬಿಟ್ಟರು. ಈ ಯುಕ್ತಿಯಿಂದ ಅಜ್ಞಾನಿಗಳಾದ ಕೆಳಗಿನ ವರ್ಗದವರು ಸಹ ಸಹಜವಾಗಿ ಮೋಸಹೋದರು. ಈ ತರದ ಯುಕ್ತಿಯು ಸುಪ್ರಸಿದ್ಧ ಗ್ರೀಕ ತತ್ವಜ್ಞನಾದ ಪ್ಲೇಟೋನಿಗೂ ಸೂಚಿಸಿತ್ತು. ಪ್ಲೇಟೋನ ವಿಚಾರವಾದರೂ ನಮ್ಮ ಚಾತುರ್ವರ್ಣ್ಯದ ವಿಚಾರದಂತೆಯೇ ಇರುವದು. ಅವನಾದರೂ ನಮ್ಮವರಂತೆಯೇ ನಾಲ್ಕು ವರ್ಗಗಳನ್ನು ಕಲ್ಪಿಸಿದ್ದನು. ಹಾಗು ಈ ನಾಲ್ಕು ವರ್ಗಗಳು ಈಶ್ವರ ನಿರ್ಮಿತವಾದವುಗಳೆಂದು ಜನರಿಗೆ ಭಾಸವಾಗಬೇಕೆಂದು ಒಂದು ಕಥೆಯನ್ನು ರಚಿಸಿದ್ದನು. ಅವನು ಹೇಳಿದ್ದೇನಂದರೆ, ಯಾವತ್ತು ಜನರಲ್ಲಿ ಶ್ರೇಷ್ಠರಾದ ಜಾತಿಯವರನ್ನು ದೇವರು ಸುವರ್ಣವನ್ನು ಹಾಕಿ ಸೃಷ್ಟಿಸಿದನು; ಶಿಪಾಯರ ವರ್ಗವನ್ನು ಬೆಳ್ಳಿಯನ್ನು ಹಾಕಿ ಹುಟ್ಟಿಸಿದನು; ಹಾಗು ಕೈಗಾರಿಕೆಯನ್ನು ಮಾಡುವ ವರ್ಗದ ಜನರನ್ನು ಕಬ್ಬಿಣವನ್ನು ಹಾಕಿ ಉಂಟು ಮಾಡಿದನು. ಆದರೆ ಗುಲಾಮರನ್ನು ಹುಟ್ಟಿಸುವಾಗ ದೇವರು ಯಾವ ತರದ ಲೋಹವನ್ನೂ ಉಪಯೋಗಿಸಲೇ ಇಲ್ಲ. ಬ್ರಾಹ್ಮಣರು ಸೃಷ್ಟಿಕರ್ತನ ಮುಖದಿಂದಲೂ, ಕ್ಷತ್ರಿಯರು ಬಾಹುಗಳಿಂದಲೂ, ವೈಶ್ಯರು ತೊಡೆಗಳಿಂದಲೂ ಶೂದ್ರರು ಪಾದಗಳಿಂದಲೂ ಹುಟ್ಟಿದರೆಂಬ ಆರ್ಯಮುತ್ಸದ್ದಿಗಳ ವಿಚಾರವು ಗ್ರೀಕ ತತ್ವಜ್ಞನಾದ ಪ್ಲೇಟೋನ ವಿಚಾರವನ್ನು ತಾತ್ವಿಕ ದೃಷ್ಟಿಯಿಂದ ಹೋಲುವದೆಂಬದನ್ನು ಪುನಃ ಹೇಳಬೇಕಾಗಿಲ್ಲ. ಇದರ ಮೇಲಿಂದ ಚಾತುರ್ವರ್ಣ್ಯವ್ಯವಸ್ಥೆಯ ಕಲ್ಪನೆಯೂ ಅದಕ್ಕೆ ದೈವಿಕ ಕಾರಣವನ್ನು ಹೇಳುವ ವಿಚಾರವೂ ಕೇವಲ ಆರ್ಯಮುತ್ಸದ್ದಿಗಳಿಗಷ್ಟೇ ಸೂಚಿಸಿರಲಿಲ್ಲ. ಗ್ರೀಕರಿಗೂ ಗೊತ್ತಾಗಿತ್ತು, ಎಂಬದು ಸಿದ್ಧವಾಗುವದು. ಹಾಗು ಒಂದೇ ವಿಚಾರವು ಎರಡು ಭಿನ್ನ ಭಿನ್ನ ಜನಾಂಗದವರಿಗೆ ತೋಚಿದ್ದರಿಂದ ಈ ವಿಚಾರವು ಕೇವಲ ಮನುಷ್ಯನ ಸೃಷ್ಟನೆಯೇ ಅಲ್ಲದೆ, ಇದಕ್ಕೆ ದೈವಿಕ ಸಂಬಂಧವು ಎಷ್ಟು ಮಾತ್ರವೂ ಇರುವದಿಲ್ಲವೆಂಬದು ಸಿದ್ಧವಾಗುವದು.

ಪ್ಲೇಟೋನು ಈ ತನ್ನ ಕಲ್ಪನೆಯು ತನ್ನ ಸಮಕಾಲೀನರಿಗೆ ಒಂದು ವೇಳೆ ಸಮಂಜಸವೆನ್ನಿಸದಿದ್ದರೂ ಮುಂದಿನವರಿಗಾದರೂ ಇದು ಯೋಗ್ಯವೆನಿಸಬಹುದು; ಇಂದಿಲ್ಲದಿದ್ದರೆ ಇನ್ನು ಐನೂರು ವರುಷಗಳ ತರುವಾಯವಾದರೂ ಜನರು ಈ ತನ್ನ ವಿಚಾರವನ್ನು ನಂಬಿ ನಡೆಯಬಹುದು ಎಂದು ಅನ್ನುತ್ತಿದ್ದನು. ಮುಂದೆ, ಶಿಪಾಯಿಯ ಮಗನು ಒಳ್ಳೇ ಶಿಪಾಯಿಯಾಗದಿದ್ದರೆ ಏನು ಮಾಡಬೇಕು? ಎಂಬ ಪ್ರಶ್ನೆಯು ಪ್ಲೇಟೋನ ಮನಸ್ಸಿಗೆ ಹೊಳೆಯಿತು. ಜಾತಿವ್ಯವಸ್ಥೆಯು ಜನ್ಮಸಿದ್ಧವಾದದ್ದು, ಎಂದು ಎಣಿಸುವದು ಹಿತಕರವಲ್ಲವೆಂದು ಪ್ಲೇಟೋನಿಗೆ ಗೊತ್ತಿತ್ತು. ಆದರಿಂದ ಅವನು ಪುನಃ ಮತ್ತೊಂದು ಉಪಾಯವನ್ನು ಯೋಚಿಸಿದನು. ಅದೇನಂದರೆ, ಎಲ್ಲ ಜಾತಿಯ ಹುಡುಗರನ್ನು ಒಂದೇ ಶಾಲೆಗೆ ಕಳುಹಿಸಬೇಕು; ಹಾಗು ಆ ಹುಡುಗರ ಮನಸ್ಸಿನ ಪ್ರವೃತ್ತಿಯನ್ನೂ ಅವರ ಶರೀರದೊಳಗಿನ ಗುಣ

ಗಳನ್ನೂ ನೋಡಿ ಅವರು ಯಾವ ಉದ್ಯೋಗವನ್ನು ಮಾಡಬೇಕೆಂಬದನ್ನು ನಿರ್ಣಯಿಸಬೇಕು.

ಇರಲಿ, ಇದೇ ಮೇರೆಗೆ ನಮ್ಮ ಸಮಾಜದಲ್ಲಿಯಾದರೂ ಜಾತಿಭೇದನಿಣ ಯವು ಆರಂಭದಲ್ಲಿ ಕೇವಲ ಜನ್ಮಸಿದ್ಧವಾದದ್ದಿರದೆ ಗುಣಕರ್ಮಗಳಿಗನುಗುಣವ ದದ್ದಿತ್ತೆಂಬ ಬಗ್ಗೆ ಅನೇಕ ಆಧಾರಗಳು ದೊರೆಯುವವು. ಮುಂದಿನ ಕಾಲದ ಜಾತಿಭೇದವ್ಯವಸ್ಥೆಯನ್ನು ಸ್ಥಾಪಿಸುವ ವಿಷಯವಾಗಿ ಬೇರೆ ಬೇರೆ ಜನರು ಬೇರೆ ಬೇ ವಿಚಾರಗಳನ್ನು ಸೃಷ್ಟಿಸಿದರು; ಹಾಗು ಚಾತುರ್ವರ್ಣ್ಯವ್ಯವಸ್ಥೆಯು ಮುಂದಿನ ಸಾ ರಾರು ಭೇದಗಳೆಲ್ಲ ಕೇವಲ ಪರಿಸ್ಥಿತಿಯ ಮೂಲಕವಾಗಿಯೇ ಉಂಟಾದವೆಂಬದನ್ನ ತೂ ಸರ್ವರೂ ಸಮ್ಮತಿಸುವರು.

ಜಾತಿಭೇದದ ವ್ಯವಸ್ಥೆಯನ್ನು ಆರಂಭಿಸಿದವರ ಉದ್ದೇಶವು ಸ್ತುತ್ಯವಾದದ್ದೆ ಬದರಲ್ಲಿ ಸಂಶಯವಿಲ್ಲ. ಆದರೆ ಶ್ರೇಷ್ಠತ್ವ ಕನಿಷ್ಠತ್ವಗಳ ಭಾವನೆಯು ಜನರ ಮ ಸಿನಲ್ಲಿ ಒಮ್ಮೆ ಬಿಂಬಿಸಿತೆಂದರೆ, ತಾವು ಹೆಚ್ಚಿನವರೆಂಬ ಅಭಿಮಾನವೂ ಎರಡನೆ ಜನರೊಡನೆ ಕೂಡಿ ನಡೆದರೆ ತಮ್ಮ ಯೋಗ್ಯತೆಯು ಕಡಿಮೆಯಾಗುವದೆಂಬ ಕ ನೆಯೂ ತಾವಾಗಿಯೇ ಉಂಟಾಗುವವು. ಸಾಂಪ್ರತಕಾಲದಲ್ಲಿಯೂ ಸಹ ನಮ ದೇಶದಲ್ಲಿ ಯುರೋಪಿಯನ್ನರಿಗೆ ದೇಶೀ ಜನರ ಸಂಗಡ ಉಗಿಬಂಡಿಯಲ್ಲಿ ಕೂತ ಪ್ರವಾಸಮಾಡಲಿಕ್ಕೆ ಒಂದು ತರದ ಹೀನಭಾವವು ತೋರುವದರಿಂದ ಅವರು ದೇಶಿ ಜನರು ಕೂಡ್ರುವ ಸ್ಥಳದಲ್ಲಿ ಕೂಡ್ರಲಿಕ್ಕೆ ಒಪ್ಪುವದಿಲ್ಲ. ಉಗಿಬಂಡಿಯಲ್ಲಿ ಯುರೋ ಪಿಯನ್ನರಿಗೋಸ್ಕರ ಬೇರೆ ಮೂರನೇ ಕ್ಲಾಸು ಇರುವದು.

ಒಂದು ದೃಷ್ಟಿಯಿಂದ, ಜಾತಿಭೇದದ ಸಂಸ್ಥೆಯು ಆರಂಭದಲ್ಲಿ ಜಯಶಾ ಗಳು ಹಾಗು ಜಯಿಸಲ್ಪಟ್ಟವರು ಇವರಲ್ಲಿ ಐಕ್ಯವನ್ನುಂಟುಮಾಡುವ ಉದ್ದೇಶದಿಂ ಉಂಟಾಗಿರಬಹುದು. ಆದರೆ ಇದರಿಂದ ನಿಜವಾದ ಐಕ್ಯವು ಹಿಂದೂ ಸಮಾಜದ ಎಂದೂ ಉಂಟಾಗಲಿಲ್ಲ. ಹಿಂದುಸ್ತಾನದ ಜನರಲ್ಲಿ ಏಕರಾಷ್ಟ್ರೀಯತ್ವದ ಕಲ್ಪನೆಯ ಬ್ರಿಟಿಶ ಸಾಮ್ರಾಜ್ಯದ ಏಕಛತ್ರವಾದ ಆಳಿಕೆಯಿಂದಲೇ ಉಂಟಾಯಿತೆಂಬದನ ಎಲ್ಲರೂ ಒಪ್ಪಿಕೊಳ್ಳುವರು. ಆದರೆ ಹಿಂದೂ ಧರ್ಮದವರು ಎಂಬ ಅಭಿಮಾನ ಮೂಲಕವಾಗಿ ಅವರೆಲ್ಲರೂ ಒಂದು ಸಮಾಜಕ್ಕೆ ಕೂಡುವರೆಂಬದು ಕೇವಲ ಕಲ್ಪ ನೆಯೇ ಸರಿ. ಜಾತಿಭೇದದ ಮೂಲಕವಾಗಿ ನಿಜವಾದ ಐಕ್ಯವು ಅವರಲ್ಲಿ ಉಂಟಾ ಗಲಾರದೆಂದು ಹೇಳುವದಕ್ಕೆ ಏನೂ ಅಡ್ಡಿಯಿಲ್ಲ. ಜಾತಿಭೇದದ ಸಂಸ್ಥೆಯು ಧಾರ್ಮಿಕ ಸಂಸ್ಥೆಯಲ್ಲ; ಸಾಮಾಜಿಕ ಸಂಸ್ಥೆಯು. ಆದರಿಂದ ಆ ಸಂಸ್ಥೆಯ ವ್ಯವಸ್ಥೆಯು ಸಮಾಜಶಾಸ್ತ್ರದ ನಿಯಮಗಳನ್ನು ಅನುಸರಿಸಿ ನಡೆಯಬೇಕು.

ಸಮಾಜದ ಸ್ಥಿರತೆಯ ಭಾರವನ್ನು ದೇವರ ಮೇಲೆ ಚಲ್ಲಿಕೊಟ್ಟದ್ದರಿಂದ ಅಂದರೆ ಜಾತಿಭೇದವ್ಯವಸ್ಥೆಯು ಈಶ್ವರಪ್ರಣೀತವಾದದ್ದೆಂದು ತಿಳಿದುಕೊಳ್ಳು

ರಿಂದ ಮನಸ್ಸಿಗೆ ಒಂದು ರೀತಿಯಿಂದ ಸಮಾಧಾನವುಂಟಾಗುವದು. ಆದರೆ ಈ ಜಾತಿಭೇದವ್ಯವಸ್ಥೆಯು ಮೂಲಕವಾಗಿ ಸಮಾಜಕ್ಕೆ ಬಹು ಪ್ರಕಾರದ ಹಾನಿಯು ಒದಗುವದು. ಸಮಾಜವು ಪ್ರಗತಿಹೀನವಾಗಿರುವದು. ಇದು ಅದರ ಉತ್ಕರ್ಷಕ್ಕೆ ಎಷ್ಟು ಮಾತ್ರವೂ ಹಿತಕರವಲ್ಲ. ಜಾತಿಭೇದವ್ಯವಸ್ಥೆಯು ಸ್ಥಿರತೆಯ ತತ್ವವನ್ನೇ ಅವಲಂಬಿಸಿ ಸೃಷ್ಟಿಸಲ್ಪಟ್ಟದ್ದಾದದರಿಂದ ಇದು ಸಮಾಜದ ಪ್ರಗತಿಯ ಮಾರ್ಗದೊಳಗಿನ ಭಯಂಕರವಾದ ವಿಘ್ನವಾಗಿರುವದು. ಈ ಸಂಸ್ಥೆಯು ಮೂಲಕವಾಗಿ ಸಮಾಜದ ಜೀವಾತ್ಮವು ಇಲ್ಲದಂತಾಗಿ ಸಮಾಜವು ಒಂದು ಯಂತ್ರದಂತಾಗಿರುವದು. ಸಮಾಜದ ಯಾವದಾದರೊಂದು ಭಾಗವು ಏನಾದರೊಂದು ಕಾರಣದಿಂದ ಬಲಹೀನವಾದರೆ ಅದರ ಕಾರ್ಯವನ್ನು ಮಾಡುವದಕ್ಕೆ ಎರಡನೇ ಭಾಗಕ್ಕೆ ಸಾಮರ್ಥ್ಯವಿರುವದಿಲ್ಲ; ಅದಕ್ಕೆ ಆ ತರದ ಇಚ್ಛೆ ಇರುವದಿಲ್ಲ; ಹಾಗು ಅದಕ್ಕೆ ಧರ್ಮದ ಅನುಮತಿಯಿರುವದಿಲ್ಲ. ರಜಪೂತರು ಕಾಲಾಂತರದಲ್ಲಿ ಪರಿಸ್ಥಿತಿಯ ಮೂಲಕವಾಗಿ ದುರ್ಬಲರಾಗಲು ಅವರ ಕಾರ್ಯವನ್ನು ನಿರ್ವಹಿಸಲು ಎರಡನೇ ರಜಪೂತರು ಹಿಂದೂ ಸಮಾಜದಲ್ಲಿ ಪುನಃ ಉಂಟಾಗಲಿಲ್ಲ. ಯಾವ ಹಿಂದೂಗಳು ಜಗತ್ತನ್ನು ಜಯಿಸಿದ ಶಿಕಂದರನಂಥ ಮಹಾವೀರನನ್ನು ಎದುರಿಸಿ ಪ್ರತಿಬಂಧಿಸಿದರೋ ಅದೇ ಹಿಂದೂಗಳು ಅವರ ವಿಪರೀತವಾದ ಸಮಾಜದ ವ್ಯವಸ್ಥೆಯು ಮೂಲಕವಾಗಿ ಮುಸಲ್ಮಾನರು ಮೊದಲಾದವರ ದಾಳಿಗಳಿಂದ ನುಗ್ಗು ನುಗ್ಗಾಗಿ ಹೇಳ ಹೆಸರಿಲ್ಲದಂತಾಗುವ ಸಮಯವು ಒದಗಿತು. ಒಂದೊಂದು ವರ್ಗದವರು ಒಂದೊಂದು ಕಾರ್ಯದಲ್ಲಿ ನಿಮಗ್ನರಾಗುವದರಿಂದ ಯಾವದಾದರೊಂದು ಭಾಗದವರು ಬಲಹೀನರಾದರೆ ಅವರ ಸ್ಥಳವನ್ನು ಆಕ್ರಮಿಸಲಿಕ್ಕೆ ಉಳಿದ ಭಾಗದವರಲ್ಲಿ ಯೋಗ್ಯತೆಯು ಉಳಿಯುವದಿಲ್ಲ. ಈ ಬಗೆಯ ಅನರ್ಥಕ್ಕೆ ಜಾತಿಭೇದ ವ್ಯವಸ್ಥೆಯೇ ಕಾರಣವಾಗುವದು.

ಜಾತಿಭೇದದ ವ್ಯವಸ್ಥೆಯಿಂದ ಇನ್ನೊಂದು ಇದಕ್ಕೂ ಹೆಚ್ಚಿನ ಹಾನಿಕರವಾದ ದುಷ್ಪರಿಣಾಮವು ಉಂಟಾಗುವದು. ಅದೇನಂದರೆ, ಈ ವ್ಯವಸ್ಥೆಯು ಸಾಮಾಜಿಕ ವ್ಯಕ್ತಿಗಳ ಉನ್ನತಿಮಾರ್ಗದಲ್ಲಿ ಅಡ್ಡ ಬರುವದು. ಸಾಮಾಜಿಕ ವ್ಯಕ್ತಿಗಳಿಗೆ ನೀಚಸ್ಥಿತಿಯಿಂದ ಪಾರಾಗಿ ಉಚ್ಚಸ್ಥಿತಿಗೆ ಹೋಗಲಿಕ್ಕೆ ಈ ವ್ಯವಸ್ಥೆಯಿಂದ ಪ್ರತಿಬಂಧವುಂಟಾಗುವದು. ಸೃಷ್ಟಿಯೊಳಗಿನ ಯಾವತ್ತು ಮನುಷ್ಯ ಜಾತಿಯೊಳಗಿನ ಪ್ರತಿಯೊಬ್ಬ ವ್ಯಕ್ತಿಗೆ ಅನ್ಯರಿಗೆ ಪ್ರತಿಬಂಧವಾಗದಂತೆ ತಾನು ಬೇಕಾದಷ್ಟು ಉನ್ನತಿಯನ್ನು ಹೊಂದಲಿಕ್ಕೆ ಯಾವ ತರದ ಪ್ರತಿಬಂಧವೂ ಇರಕೂಡದು; ಉನ್ನತಿಯ ಮಾರ್ಗವು ಸರ್ವರಿಗೂ ಸರಿಯಾಗಿ ಮುಕ್ತವಾಗಿರಬೇಕು, ಎಂಬದೇ ಸಮಾಜಶಾಸ್ತ್ರದ ಮುಖ್ಯ ತತ್ವವು; ಇದೇ ಅದರ ಧ್ಯೇಯವು. ಆದರೆ ಜನ್ಮಕ್ಕೆ ಸಂಬಂಧಿಸಿದ ಈ ಜಾತಿಭೇದ ವ್ಯವಸ್ಥೆಯು ಈ ಮಾರ್ಗದಲ್ಲಿ ಅಡ್ಡ ಬರುವದರಿಂದ ಇದು ಸಮಾಜಶಾಸ್ತ್ರದ ನಿಯಮಗಳಿಗೆ ವಿರುದ್ಧವಾಗಿರುವದು. ಅದರಿಂದಲೇ ಇದು ಧಿಕ್ಕರಣೀಯವು;

ಆದರಿಂದಲೇ ಇದು ಸರ್ವಥಾ ತ್ಯಾಜ್ಯವು. ಈ ಜಾತಿಭೇದವ್ಯವಸ್ಥೆಯಿಂದ ಮನು ಷ್ಯನ ಆಶೆಯು ಕುಗ್ಗುವದು; ಉನ್ನತಿಯನ್ನು ಹೊಂದಬೇಕೆಂಬ ಮನಸ್ಸಿನೊಳಗಿ ಇಚ್ಛಾಂಕುರವು ನಷ್ಟವಾಗುವದು; ಹಾಗು ಮನುಷ್ಯನ ಕಲ್ಪನಾಶಕ್ತಿಯು ಕುಂ ತವಾಗುವದು. ಒಟ್ಟಿನ ಮೇಲೆ ನಮ್ಮ ಸಮಾಜದೊಳಗಿನ ಜಾತಿಭೇದವ್ಯವಸ್ಥೆಯು ಸರ್ವಥಾ ಮನುಷ್ಯಕೃತವೇ; ಅಂದರೆ, ಪರಿಸ್ಥಿತಿ ಮುಂತಾದ ನೈಸರ್ಗಿಕ ಕಾರ ಗಳಿಂದಲೇ ಉಂಟಾಗಿರುವದು. ಇದರ ಉತ್ಪತ್ತಿಗೆ ದೈವಿಕ ಕಾರಣಗಳ ಸಂಬಂಧವ ಎಷ್ಟು ಮಾತ್ರವೂ ಇರುವದಿಲ್ಲ. ಹಾಗು ಈ ವ್ಯವಸ್ಥೆಯು ಸಮಾಜಶಾಸ್ತ್ರಕ್ಕೆ ವಿರುದ್ಧವಾಗಿರುವದು. ಅದರಿಂದ ಈ ಜಾತಿಭೇದಗಳನ್ನು ತೆಗೆದುಹಾಕುವದ ಸಮಾಜ ಸುಧಾರಕರ ಆದ್ಯಕರ್ತವ್ಯವಾಗಿರುವದು.

ಪತ್ರವ್ಯವಹಾರವು.

ಕಣ್ಣಿಗೆ ಕಾಣುವದಕ್ಕೆ ಕನ್ನಡಿಯೇ?

ಮ. ರಾ. ರಾ. ಕನ್ನಡ ಶಾಲಾಪತ್ರಕದ ಎಡಿಟರ ಮಹಾಶಯರ ಸನ್ನಿಧಿಗೆ:- ಸಾ. ನ. ಗಳು ವಿ. ವಿ. ಅಕ್ಟೋಬರ ತಿಂಗಳ ಶಾಲಾಪತ್ರಕದಲ್ಲಿ ಮಿ. ಕಮಕೇರಿಯ ವರ ಯತಿವಿಷಯಕ ಲೇಖವು ಪ್ರಸಿದ್ಧವಾಗಿರುವದಷ್ಟೇ! ಅದು ಕೇವಲ ಮಿ. ಚಿವ ಲಗಿಯವರ ಮುನ್ನಣ ಲೇಖದ ಪ್ರತಿಧ್ವನಿಯೇ ಇರುವದೆಂದು, ಸ್ವತಃ ಲೇಖಕರ ಒಪ್ಪಿಕೊಂಡಿರುವರು. ಆ ಮೂಲಲೇಖದ ಸಾಗ್ರವಾದ ಖಂಡನವು, ಜೂನ-ಜು ಗಳ ಅಂಕಗಳಲ್ಲಿ ಆಗಿಹೋಗಿರುವದರಿಂದ, ಪ್ರಸ್ತುತದಲ್ಲಿ ಈ ಪ್ರತಿಧ್ವನಿಯ ವಿಷಯ ವಾಗಿ ಮತ್ತೇನೂ ಹೆಚ್ಚಿಗೆ ಬರೆಯುವ ಅವಶ್ಯಕತೆಯೇ ಇದ್ದಿಲ್ಲ! ಆದರೂ ಕೇಶಿ ಜನು ಸ್ವೀಕರಿಸಿದ "ಯತಿವಿಲಂಘನ"ದ ಅರ್ಥವನ್ನು, ನಾನು ನನಗೆ ಮಾತ್ರ ಅ ಕೂಲವಾಗುವಂತೆ ಮಾಡಿಕೊಂಡಿರುವೆನೆಂದೂ, ಆತನಲ್ಲಿ ನನ್ನ ಪೂಜ್ಯತೆ ಕಂಡ ಬರುವದಿಲ್ಲೆಂದೂ, ಅವರು ವಿಭ್ರಮದಿಂದ ಮಾಡಿರುವ ವ್ಯಥಾರೋಪಣೆಯ ನಿ ನಗೆಯ್ಯುವದು ಮಾತ್ರ, ಅತ್ಯವಶ್ಯವಾಗಿರುವದು!!

ಪ್ರಾಚೀನರ ಯತಿವಿಲಂಘನದ ಹೇರಳವಾದ ಪ್ರಯೋಗಗಳನ್ನು ನೋಡಿಯ ಕೇಶಿರಾಜನು ದರ್ಪಣದಲ್ಲಿ "ಯತಿವಿಲಂಘನದಿಂದರಿದಲ್ತೆ ಕನ್ನಡಂ" ಎಂದು ಸ್ವೀ ರಿಸಿದನೆಂದರೆ, ನನಗೆ ದರ್ಪಣವು ಅಪ್ರಿಯವೆಂದೂ, ಕೇಶಿರಾಜನು ಅಮಾನ್ಯನೆಂದು ಅದು ಹೇಗೆ ಅರ್ಥವಾಗುವದು? ಮಿತ್ರರೇ, ವಿನಾಕಾರಣವಾಗಿ ಒಬ್ಬರನ್ನು ದೂ ಸುವದು ನೀತಿಯಲ್ಲ! ಪ್ರಾಚೀನ ಪ್ರಯೋಗಗಳನ್ನನುಸರಿಸಿಯೇ ಮೇಲಿನ ವಾ

ವನ್ನು ದರ್ಪಣದಲ್ಲಿ ಸಂಗ್ರಹಿಸಿರುವದು ನಿರ್ಬಾಧವಾಗಿರಲು, ಪಠಿಸುವಾಗಲೂ ಅಲ್ಲಿ ವಿಶ್ರಮಿಸಬಾರದೆಂಬ ಪ್ರತಿಕೂಲಾರ್ಥವನ್ನು, ಯಾವ ಆಧಾರದಿಂದ ತೆಗೆಯು ವಿರಿ? ಅವಿಭಕ್ತಿಕವಾದ ಯತಿಯು ಸ್ಥಳದಲ್ಲಿ ವಿಶ್ರಮಿಸುವದನ್ನು ನಿಷೇಧಿಸಿ, ಪೂರ್ವದ ಕಬ್ಬಿಗರು ಕೇಶಿರಾಜನಿಗಾಗಲಿ, ಆತನು ಅನ್ಯರಿಗಾಗಲಿ, ಪ್ರತ್ಯಕ್ಷ ಪಠಿಸಿ ತೋರಿಸಿದ್ದು ಇಲ್ಲವೇ ಇಲ್ಲ; ಮತ್ತು ಅಲ್ಲಿ ವಿಶ್ರಮಿಸಲೇಬಾರದೆಂಬ ಬಗ್ಗೆ ಒಂದಾದರೂ ಸ್ಪಷ್ಟವಾದ ಲೇಖವು ಎಲ್ಲಿಯೂ ಕಂಡು ಬರುವದಿಲ್ಲ. ಹೀಗಿರಲು, ನಾನು ಹೇಳಿದರ್ಥವು ಸ್ವಪ್ರಯೋಜನಾರ್ಥವೆಂದರೆ ಅದೆಂತು ದಿಟವಾಗುವದು? ಯತಿಯು ಸ್ಥಳದಲ್ಲಿ, ವಿಭಕ್ತಿಯನ್ನು ಲಕ್ಷಿಸದೆ ಅವಶ್ಯವಾಗಿ ಉಸುರಿಸಿ, ಛಂದೋನಿಯಮವನ್ನು ಪಾಲಿಸುವದೇ ಯುಕ್ತವೆಂದು ಹೇಳುವವರಿಗೆ ಅಗ್ರಹಿಗಳೆಂದು ಹೆಸರಿಡುವವರು, “ಅಲ್ಲಿ ವಿಶ್ರಮಿಸಲೇ ಬಾರದೆಂ”ಬ ತಮ್ಮ ನಿರಾಧಾರ ಪ್ರತಿಪಾದನವನ್ನು ತುಸು ನೆನಸಿದ್ದರೆ, ಬಹು ಒಳಿತಾಗುತ್ತಿತ್ತಲ್ಲವೇ?

ಅದಂತಿರಲಿ, ಇನ್ನು ಮೇಲೆ ಇದುವರೆಗೆ ಆದ ಉಭಯ ಪಕ್ಷದವರ ಪ್ರತಿಪಾದನಗಳನ್ನು ಮಥಿಸಿದರೆ ಯಾವ ಫಲಿತಾಂಶಗಳು ಹೊರಡುವವೆಂಬದನ್ನು ನೋಡುವಾ:-

ಅವಿಭಕ್ತಿಕ ಯತಿಯಲ್ಲಿ,

(अ) ಉಸುರಿಸಿದರೆ,	(ब) ಉಸುರಿಸದಿದ್ದರೆ,
೧. ಛಂದೋನಿಯಮದ ಪಾಲನವಾಗುವದು.	೧ ಕರ್ಣಕಠೋರವು ತಪ್ಪುವದು.
೨. ಕಬ್ಬಿಗರ ದೋಷವು ಆಚ್ಛಾದಿಸುವದು.	೨ ಅರ್ಥವು ಸುಬೋಧವಾಗುವದು.
೩. ಆರ್ಯಾವೃತ್ತಗಳ ಸ್ವತಂತ್ರದಾಟಿಯು ಸಂರಕ್ಷಣವಾಗುವದು.	
೪. ವೈಚಿತ್ರ್ಯವೂ ಗಾನಸ್ವಾರಸ್ಯವೂ ಉಳಿದು ಪೂರ್ವಿಕರ ಉದ್ದೇಶವು ಸ್ಥಿರಪಡುವದು.	
೫. ಗದ್ಯ-ಪದ್ಯಗಳ ಭೇದಕ ಲಕ್ಷಣದ ಜೋಪಾಸನವಾಗುವದು.	
೬. ಪಾಠಕರಿಗೆ ಸುಲಭವಾಗುವದು.	
೭. ಸ್ವೇಚ್ಛಾಚಾರದ ಉಚ್ಚಾಟನವಾಗುವದು.	

ಈ ಫಲಿತಾಂಶಗಳ ಮೇಲಿಂದ ನೋಡಿದರೆ, ಯತಿಯಿದ್ದಲ್ಲಿ (ಸವಿಭಕ್ತಿಕವೇ ಇರಲಿ, ಅವಿಭಕ್ತಿಕವೇ ಇರಲಿ,) ವಿಶ್ರಮಿಸುವದೇ ಹೆಚ್ಚು ಯೋಗ್ಯವಾಗಿರುವದೆಂಬದು, ಯಾರಿಗಾದರೂ ತಾನೇ ಒಡೆದು ತೋರದೆ ಇರದು. ವಸ್ತುಸ್ಥಿತಿಯು ಹೀಗಿರಲು, ಮೈಸೂರ ಸರಣಿಯ ಅನುಕರಣದ ಉಬ್ಬಿನಲ್ಲಿ ಸ್ವಾಭಿಮಾನಶೂನ್ಯರಾಗಿ, ಧಾರವಾಡ ಪ್ರಾಂತದ ವೈಶಿಷ್ಟ್ಯವನ್ನು ಅಳಿದು ಬಿಡುವದು ಸಮಂಜಸವೆನು? ಆದದ್ದರಿಂದ ಗುಣಗ್ರಾಹಿಗಳೂ ಸತ್ಯಪ್ರಿಯರೂ ಆದ ಕನ್ನಡಿಗರು ಈ ಕಾಲಕ್ಕೆ ಮುಂದುವ

ರಿದು ಔದಾಸೀನ್ಯವನ್ನೂ ಮೌನವನ್ನೂ ತೋರಿದು, ತಮ್ಮ ತಮ್ಮ ಅಭಿಪ್ರಾಯಗಳ ನ್ನು ಸ್ಪಷ್ಟವಾಗಿ ಪ್ರಕಟಿಸಿ, ಯತಿವಾದನಿರ್ಣಯಕ್ಕೆ ನೆರವಾಗುವರೆಂದು ಪೂರ್ಣ ಆಶಾಭರಿತನಾಗಿರುವೆನು.

ಸ್ವಾಮಿ ಎಡಿಟರ ದೊರೆಗಳೇ, ವಿಸ್ತಾರಕ್ಕೆ ಕ್ಷಮೆಯನ್ನು ಕೋರುವೆನು. ಲೋಭವಿರುವದು. ಇಂತು ವಿನಂತಿಗಳು.

ಕನ್ನಡ ಶಾಲಾ ವಂಟಮುರಿ,
ಜಿಲ್ಲಾ ಬೆಳಗಾವ
ತಾರೀಖು ೪—೨—೧೫.

ತಮ್ಮ ವಿಧೇಯ.
ಬಸಪ್ಪ ಚೆನ್ನಪ್ಪ ಪಟ್ಟೇದ,
ಹೆಡ್ಡ ಮಾಸ್ತರ.

ಸೂಚನೆ:—ಈ ವಿಷಯದ ಚರ್ಚೆ ಈಗ ಸಾಕಷ್ಟು ಆಗಿದ್ದದರಿಂದ ಇನ್ನು ಈ ವಿಷಯ ಚರ್ಚೆಗೆ ಸ್ಥಳ ಸಿಕ್ಕಲಾರದು.

ಎ. ಕ. ಶಾ ಪ.

ಬಿಜ್ಜಲವಿಡ.

ಶ್ರೀಯುತ ಕನ್ನಡ ಶಾಲಾಪತ್ರಕರ್ತರ ಸನ್ನಿಧಿಗೆ.—ಸವಿನಯ ಪ್ರಣಾಮಗಳು. ಅಧ್ಯಾಪನದ ಕಾರ್ಯದಲ್ಲಿ ಈ ವಿಷಯವು ಹೆಚ್ಚು ಉಪಯೋಗ ಬೀಳ ಬಹುದೆಂದು ನನಗೆ ತಿಳಿದು ಬಂದದರಿಂದ ಇದನ್ನು ಇದರಡಿಯಲ್ಲಿ ಕೊಟ್ಟಿರುವೆನು. ಅವಲೋಕನವಾಗಿ ದಿವ್ಯಚಿತ್ತಕ್ಕೆ ಸರಿದೋರಿದಲ್ಲಿ ತಮ್ಮ ಮಾಸಪತ್ರಿಕೆಯ ಬರುವ ಸಂಚಿಕೆಯಲ್ಲಿ ಸ್ಥಳವನ್ನು ದಯಪಾಲಿಸಬೇಕಾಗಿ ಆಶಿಸುತ್ತೇನೆ.

ಭೂಮಂಡಲದಲ್ಲಿ ಆಚಂದ್ರಾರ್ಕವಾಗಿ ಕೀರ್ತಿಯನ್ನು ಪಡೆದಿರುವ ಸುಪ್ರಸಿದ್ಧ ಜ್ಯೋತಿಷಿಗಳ ಮಾಲಿಕೆಯಲ್ಲಿ ನಮ್ಮ ಭರತ ಖಂಡದ ಭಾಸ್ಕರಾಚಾರ್ಯರು ಒಬ್ಬರಾಗಿರುವರೆಂದು ನಿರ್ವಿವಾದವಾಗಿ ಹೇಳಬಹುದು. ಇವರ ಅತ್ಯುತ್ತಮ ಗ್ರಂಥವಾದ ಸಿದ್ಧಾಂತ ಶಿರೋಮಣಿಯು ಜಗತ್ತಿನಲ್ಲಿ ಒಡೆದು ಕಾಣಿಸುವ ಫ್ರೆಂಚ, ಜರ್ಮನ್ನ ಮುಂತಾದ ಎಷ್ಟೋ ಭಾಷೆಗಳಲ್ಲಿ ಪರಿವರ್ತಿಸಲ್ಪಟ್ಟಿರುವದು. ಈ ಮಹಾತ್ಮರು ತಮ್ಮ ಜನ್ಮಸ್ಥಳವಾದ ಬಿಜ್ಜಲವಿಡನೆಂಬ ಗ್ರಾಮವು ಎಲ್ಲಿರುವದೆಂಬ ವಿಷಯವಾಗಿ ತಮ್ಮ ಗ್ರಂಥದ ಅಂತ್ಯದಲ್ಲಿ ಉಲ್ಲೇಖಿಸಿರುವದೇಂದರೆ:—

> आसीत् सह्यकुलाचलाश्रितपुरे त्रैविद्यविद्वज्जने ।
> नानासज्जन धाम्नि विज्जडविडे शांडिल्यगोत्रो द्विजः ॥
> श्रौतस्मार्तविचारसारचतुरो निःशेषविद्यानिधिः ।
> साधूनामवधीर्महेश्वरकृती दैवज्ञचूडामणिः ॥

ಸಹ್ಯಾದ್ರಿಯ ನೆರೆಯಲ್ಲಿರುಂಥ ವಿದ್ವಾಂಸರಿಂದಲೂ ಮೂಢ ಜನರಿಂದಲೂ ಯುಕ್ತವಾದಂಥ ಇವರ ನಿವಾಸಸ್ಥಾನವಾದ ಬಿಜ್ಜಲವಿಡದ ಅಸ್ತಿತ್ವದ ಬಗ್ಗೆ ಚರಕನೆಂಬ ಹೆಸರಾದ ಗೃಹಸ್ಥನು ಕೆಳಗೆ ಬರೆದಂತೆ ಟೀಕಿಸಿರುತ್ತಾನೆ:—

आसीदिति बिज्जडविडं......विडमिति नामैक
देशेप्रसिद्धं तत्कुत्रेति सह्यनामककुलपर्वतांतर्गतभूप्रदेशे
महाराष्ट्रदेशांतर्गत विदर्भापर्याय विराटदेशादपि निकटे
गोदावर्याः नातिदूरे नाम समिपे....ಇತ್ಯಾದಿ.

ಇದರ ಮೇಲಿಂದ ಈ ಬಿಜ್ಜಲವಿಡವೆಂಬ ಗ್ರಾಮವು ಸಹ್ಯಾದ್ರಿ ಪರ್ವತಕ್ಕೆ ಹೊಂದಿಕೆಯಾಗಿರುವ ಮಹಾರಾಷ್ಟ್ರ ದೇಶದೊಳಗಿನ ವಿರಾಟ ರಾಜ್ಯದ ಹತ್ತಿರ ಗೋದಾವರಿ ನದಿಯ ಪಕ್ಕದಲ್ಲಿರುವದೆಂದು ವ್ಯಕ್ತವಾಗುತ್ತದೆ. ಇದಕ್ಕೆ ಈಗ ಬೀಡ ದು ಕರೆಯುತ್ತಾರೆ. ಇದು ಮೊಗಲಾಯಿ ಇಲಾಖೆಯಲ್ಲಿ ಪೈಠಣದ ಆಗ್ನೇಯ ಗೋದಾವರಿಯ ದಕ್ಷಿಣಕ್ಕೆ ಸುಮಾರು ೨೦ ಮೈಲಿನ ಮೇಲೆ ಬೆಂಡಸುರಾ ಎಂಬ ನದಿಯ ದಂಡೆಯ ಮೇಲೆ ತಕ್ಕಮಟ್ಟಿಗೆ ದೊಡ್ಡ ಗ್ರಾಮವಿರುವದು. ಇದೇ ಚಾರ್ಯರವರ ಜನ್ಮಭೂಮಿಯು. ಇಲ್ಲಿ ಸುಮಾರು ನೂರಿನ್ನೂರು ಬ್ರಾಹ್ಮಣರ ನೆಗಳು ಅವೆ. ಇದು ಉತ್ತರ ಅಕ್ಷಾಂಶ ೧೯ ಮತ್ತು ಉಜ್ಜನಿಯ ಯಾಮ್ಯೋತ್ತರದ ರ್ವಕ್ಕೆ ಒಂದು ಅಂಶದ ಮೇಲೆ ಇರುತ್ತದೆ. ಅಥವಾ ಮುಂಬೈಯ ಪೂರ್ವಕ್ಕೆ ದು ಅಂಶದ ಮೇಲೆ ಅದೆ.

ಆಚಾರ್ಯರು ಲೀಲಾವತ್ಯಾರಂಭದಲ್ಲಿ "यस्मात् पंचक्रोशांतरे गणेशायनमो ... कांतये" ಎಂದು ಬರೆದಿರುವದರಿಂದ ಇವರು ಗಣೇಶೋಪಾಸಕರಿದ್ದ ದು ತಿಳಿಯುತ್ತದೆ. ಈ ಗಣಪತಿಯ ದೇವಸ್ಥಾನವು ಬೀಡ ಗ್ರಾಮದಿಂದ ಸು ರು ಎರಡು ಗಾವುದದ ಮೇಲಿರುವ ಲಿಂಬಿ ಎಂಬ ಊರಲ್ಲಿ ಇಂದಿಗೂ ಪ್ರಸಿದ್ಧ ಗಿರುವದು. ಈ ಗಣಪತಿಯ ಮೂರ್ತಿಯು ಬಹು ಸುಂದರವಾಗಿದ್ದು ಹೊಳಪುಳ್ಳ ಕಲ್ಲಿನದು ಇರುತ್ತದೆ. ಇದರ ಮೇಲಿಂದಲೂ ಭಾಸ್ಕರಾಚಾರ್ಯರವರ ಬೀಡು ಡವೆಂದು ತಿಳಿಯಲು ಅನುಕೂಲವಾಗುತ್ತದೆ.

ಂದೀಕುರಬೇಟ,
ೂಕ ಗೋಕಾಕ,
೧೯-೨-೧೫.

ಚಿದಂಬರ ಅನಂತಭಟ್ಟ ರಾಮದುರ್ಗ.
ಹೆಡ್ ಮಾಸ್ತರ,
ಶಿಂದೀಕುರಬೇಟ.

ವಿದ್ಯಾಖಾತೆಯ ನೋಟೀಸುಗಳು.

ಸನ್ ೧೯೧೫ನೆಯ ಇಸ್ವಿಯ ವರ್ಥ ಪ್ರಾಯಿಝು ಪರೀಕ್ಷೆಯು.

ಕನ್ನಡದಲ್ಲಿ ಆಗತಕ್ಕ ವರ್ಥಪ್ರಾಯಿಝು ಪರೀಕ್ಷೆಯನ್ನು ೧೯೧೫ನೆಯ ಇಸವಿ ದಶಂಬರ ತಿಂಗಳ ೧೩ನೆಯ ತಾರೀಖು ಸೋಮವಾರ ದಿವಸದಿಂದ, ಕೆಳಗೆ ಸ ಹೂಡಿದವರು ೧೯೧೬ನೆಯ ಇಸವಿಯ ಫೆಬ್ರುವರಿ ತಿಂಗಳ ಕನ್ನಡ ಶಾಲಾಪತ್ರ ೩೯-೪೦ ನೆಯ ಪುಟಗಳಲ್ಲಿ ಪ್ರಕಟಿಸಿದ ನಿಯಮಗಳಿಗನುಸಾರವಾಗಿ ಧಾರ ತದ ಟ್ರೇನಿಂಗ ಕಾಲೇಜದಲ್ಲಿ ತೆಗೆದುಕೊಳ್ಳಲಾಗುವದು. ಸದರೀ ಪರೀಕ್ಷೆಯಲ್ಲಿ

೪೦ ರೂಪಾಯಿಯ ಬಕ್ಷೀಸು ಒಂದು, ೨೦ ರೂಪಾಯಿಯ ಬಕ್ಷೀಸು ಒಂದು ಪ್ರಕಾರ ಎರಡು ಬಕ್ಷೀಸುಗಳಿರುವವು. ಪರೀಕ್ಷೆಗೆ ಬರತಕ್ಕ ಉಮೇದವಾರರ ವ್ಮ ಅರ್ಜಿಗಳನ್ನು ಕೆಳಗೆ ಸಹಿ ಮಾಡಿದವರ ಕಡೆಗೆ ತೀರ ತಡಮಾಡಿಯಾದರೆ ೧ ನೆ ಇಸವಿಯ ದಿಶಂಬರ ೧ನೆಯ ತಾರೀಖಿಗಾಗಲಿ ಅದಕ್ಕೂ ಪೂರ್ವದಲ್ಲಿಯೂ ತಪ್ಪದೆ ಮುಟ್ಟುವಂತೆ ಕಳಿಸಬೇಕು. ಪರೀಕ್ಷೆಯು ನೇಮಿಸಿದ ದಿವಸ ಬೆ ೧೧|| ಘಂಟೆಗೆ ಪ್ರಾರಂಭವಾಗುವದು.

A. C. MILLER,
ಆಕ್ಟಿಂಗ ಎಜ್ಯುಕೇಶನಲ್ ಇನ್ಸಪೆಕ್ಟ
ದಕ್ಷಿಣ ಭ

ನೋಟೀಸು.

ಬರುವ ಅಕ್ಟೋಬರ ತಿಂಗಳ ೧೪ನೇ ತಾರೀಖಿನಿಂದ ೧೬ನೇ ತಾರೀಖಿನ ಧಾರವಾಡದ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ದಕ್ಷಿಣ ಭಾಗದ ಕ ಶಾಲೆಗಳ ಮಿಸ್ಟ್ರೆಸರ ಸಮ್ಮೇಲನವು ನೆರೆಯುವದು. ಆ ಸಮ್ಮೇಲನಕ್ಕೆ ಎಲ್ಲ ಕಿಯರು ಬರುವರೆಂದು ನಾವು ತುಂಬಾ ನಂಬಿದ್ದೇವೆ.

ಮೆಹರ್ಬಾನ ಎಜ್ಯುಕೇಶನಲ್ ಇನ್ಸಪೆಕ್ಟರ ಸಾಹೇಬ ಬಾಹದ್ದೂರರವರು ಕಲ್ಲ ಬೋರ್ಡ ಯಾವತ್ತು ಶಾಲೆಗಳ ಶಿಕ್ಷಕಿಯರಿಗೆ ಸಮ್ಮೇಲನಕ್ಕೆ ಬರಲಿಕ್ಕೆ ಅನು ಲವಾಗಬೇಕೆಂದು ಎಲ್ಲ ಹೆಣ್ಣು ಹುಡುಗೆಯರ ಶಾಲೆಗಳನ್ನು ಅಕ್ಟೋಬರ ೧ ತಾರೀಖಿನಿಂದ ೧೭ನೇ ತಾರೀಖಿನ ವರೆಗೆ ಬಂದ ಇಡಿಸಲಿಕ್ಕಾಗಿ ಹುಕುಂ ಕೆ ದ್ದಾರೆ. ಮತ್ತು ಪ್ರತಿಯೊಬ್ಬ ಶಿಕ್ಷಕಿಗೆ ಲೋಕಲ್ಲ ಬೋರ್ಡ ಫಂಡಿನಿಂದ ತನ್ನ ಹಾಸಲಿನಷ್ಟು ಭತ್ತೆ ದೊರೆಯುವದು.

ಕಾಲೇಜದ ಹಾಸ್ಟೇಲದಲ್ಲಿ ಇಳಕೊಳ್ಳುವ ಪ್ರತಿಯೊಬ್ಬ ಶಿಕ್ಷಕಿಗೆ ಪ್ರತಿ ದಿ ಕ್ಕೆ ರೂಪಾಯಿ ೦-೩-೦ ಚಾರ್ಜ ಬೀಳುವದು. ಮತ್ತು ಕಾಲೇಜದಲ್ಲಿ ತಮ್ಮ ವಾಗಿ ಇಳಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕೆಂಬ ಇಚ್ಛೆಯುಳ್ಳ ಶಿಕ್ಷಕಿಯ ನಮಗೆ ಜುಲೈ ತಿಂಗಳ ಕೊನೆಯ ಒಳಗಾಗಿ ಹಾಗೆ ಮಾಡುವ ಬಗ್ಗೆ ತಿಳಿಸತಕ್ಕ

ಸಮ್ಮೇಲನದಲ್ಲಿ ತಮಗೆ ಬೇಕಾದ ಒಂದು ಪಾಠವನ್ನು ಉತ್ತಮ ರೀತಿಯಿ ಕಲಿಸಿದವರಿಗೆ ಎರಡು ಇನಾಮು ಇಟ್ಟಿರುತ್ತವೆ. ಈ ಇನಾಮುಗಳನ್ನು ದೊ ಬೇಕೆಂಬ ಇಚ್ಛೆಯುಳ್ಳವರು ತಾವು ಕಲಿಸಲಿಚ್ಛಿಸುವ ವಿಷಯ ಹಾಗೂ ಕ್ಲಾಸು ಬಗ್ಗೆ ನಮ್ಮ ಕಡೆಗೆ ಜುಲೈ ತಿಂಗಳ ಕೊನೆಯ ಒಳಗಾಗಿ ಬರೆದು ತಿಳಿಸ ತಕ್ಕ

ತಾ. ೫ನೇ ಮೇ ೧೯೧೫ನೇ ಇಸವಿ.

F. L. McAfee,
ಲೇಡೀ ಸುಪರಿಂಟೆಂಡೆಂಟ್,
ಟ್ರೇನಿಂಗ ಕಾಲೇಜ ಫಾರ ವಿಮೆ
ಧಾರವಾಡ.

ಪ್ರಾಥಮಿಕ ಶಾಲೆಗಳಿಗೋಸ್ಕರ ಮಂಜೂರ ಮಾಡಿದಂಥ ಈ ಕೆಳಗಿನ ಪುಸ್ತಕಗಳ ಪಟ್ಟಿಯನ್ನು ಎಲ್ಲ ಜನರ ತಿಳುವಳಿಕೆಯ ಬಗ್ಗೆ ಪ್ರಸಿದ್ಧ ಮಾಡಿರುತ್ತದೆ.

ಅ. ನ.	ಪುಸ್ತಕದ ಹೆಸರು.	ಯಾವ ಭಾಷೆಯಲ್ಲಿ ಪುಸ್ತಕ ಬರೆದದ್ದು.	ಯಾತರ ಬಗ್ಗೆ ಮಂಜೂರ ಮಾಡಿರುತ್ತದೆ.	ಕ್ರಯ. ರು.	ಆ.	ಪೈ	ಶರಾ.
೧	ಬೆಖ್ವಾದ ಟೀ. ಎಚ್. ಶಹಾಬಾದ "ರಫಿಉಲ್ ಖಿಯಾಲ"	ಉರ್ದು	ಉರ್ದು ಶಾಲೆಗಳ ಇನಾಮುಗಳಿಗೂ ಲಾಯಬ್ರರಿಗಳಿಗೂ	೦	೧೨	೦	
೨	ಫೋರಬೇಸ್ ಎ. ಲಖನೌ "ಇಲಮೆ ಹಿಸಾಬ ಎರೂಹನೀಕೀ ಕಿತಾಬ" (ಬಾಯಿಲೆಕ್ಕದ ಕೈಪಿಡಿ)	,,	ಸದರ	೦	೪	೦	
೩	ಗುಲಾಮ ಅಹಮ್ಮದ ಹೈದರಾಬಾದ ಡೆಕ್ಕನ್ "ಖೈನ್ ಉಲ್ ಕಲಮ್ ಫೀ ಅಖಲಾಗ್ ಇಲ್ ಇಸಲಾಮ್"	,,	ಉರ್ದು ಶಾಲೆಗಳ ಲಾಯಬ್ರರಿಗೋಸ್ಕರ	೫ ೩	೦ ೦	೦ ೦	ಕಾಗದದ ಪ್ರಕಾರ
೪	ಗುಲಾಮ ಮೊಹದ್ದೀನ ಆಗ್ರಾ "ಉಬ್ಬೆ ಉಬಬೆ ತಾಕೆಸೀನ್ ಹಿಸಾಬ"	,,	ಸದರ	೧	೨	೦	
೫	"ತಕವೀನ ಝುಬನೆ ಉರ್ದು"	,,	ಉರ್ದು ಶಾಲೆಗಳ ಇನಾಮುಗಳ ಮತ್ತು ಲಾಯಬ್ರರಿಗಳ ಬಗ್ಗೆ	೦	೬	೦	

೬	‟ತಕಲೀಮೂಲ್ ಉರುರ್‍ಝುಲ್ ಕಾಪಿಯಾ” ಅಮೀನ ಮುಹಮ್ಮದ ಭೋಪಾಳ	,,	ಉರ್ದು ಶಾಲೆಗಳ ಲಾಯಬ್ರರಿಗೋಸ್ಕರ	೦	೫	೦
೭	‟ಬಚೋನಕಿ ಪರವಾರಿಷ್” ಮಹನೀಯರಾದ ಭೋಪಾಳದ ನವಾಬ ಬೇಗಮು ಕೃತ	,,	ಉರ್ದು ಹೆಣ್ಣು ಹುಡಿಗೆಯರ ಶಾಲೆಗಳ ಇನಾಮುಗಳ ಮತ್ತು ಲಾಯಬ್ರರಿಗಳ ಬಗ್ಗೆ	೧	೨	೦
೮	ಡೊಮೆಸ್ಟಿಕ್ ಎಕಾನಮಿ ಸದರ	,,	ಸದರ	೮	೧೨	೦
೯	ತನ್ ದುರಸ್ತಿ ಸದರ	,,	ಸದರ	೦	೮	೦

P. LORY,
ಅಕ್ಟಿಂಗ ಡಿಪ್ಯುಟಿ ಡಾಯರೆಕ್ಟರ ಆಫ್ ಪಬ್ಲಿಕ್ ಇನ್ಸಟ್ರಕ್ಶನ್.

ಪುಣೆ ಡಿರೆಕ್ಟರ ಆಫ್ ಪಬ್ಲಿಕ್
ಇನ್ಸಟ್ರಕ್ಶನ್ ಇವರ ಆಫೀಸು.
ತಾ||೨೨ಎಪ್ರೈಲ ೧೯೧೫.

ಮಧ್ಯ-ಉತ್ತರ-ದಕ್ಷಿಣ ಭಾಗಗಳಲ್ಲಿದ್ದ ದೇಶಭಾಷೆಯ ಶಾಲೆಗಳ ಶಿಕ್ಷಕರ ಮತ್ತು ಶಿಕ್ಷಕಿಯರ ಕಾಯಿದೆ (೧೯೧೧) ಯಲ್ಲಿ ಮಾಡಿದ ಹೆಚ್ಚು ಕಡಿಮೆಗಳೂ ತಿದ್ದುಪಡಿಗಳೂ.

ತಿದ್ದುಪಡಿ ನ. ೬.

ಮಧ್ಯ-ಉತ್ತರ-ದಕ್ಷಿಣಭಾಗಗಳ ದೇಶಭಾಷೆಯ ಶಾಲೆಗಳ ಶಿಕ್ಷಕರ ಮತ್ತು ಶಿಕ್ಷಕಿಯರ ಕಾಯಿದೆಗೆ ಜೋಡಿಸಿದ ೭ನೆಯ ನಮೂನೆಗೆ ಬದಲಾಗಿ ಕೆಳಗೆ ಕೊಟ್ಟ ನಮೂನೆಯನ್ನು ಸೇರಿಸಿರಿ:—

ನಮುನೆ ನಂಬರ ೭.

ಲೋಕಲ್‌ಫಂಡ ಕೊಡುತ್ತಿರುವವರ ಮಕ್ಕಳ ರಜಿಸ್ಟರು   ಮೌಜೆ
ತಾಲೂಕು   ಜಿಲ್ಹಾ   ಇಲ್ಲಿಯ ದೇಶಭಾಷೆಯ ಶಾಲೆ.

ಅನುಕ್ರಮ ನಂಬರು.	ರಜಿಸ್ಟರ ನಂಬರು.	ವಿದ್ಯಾರ್ಥಿಯ ಪೂರ್ಣ ಹೆಸರು.	ಗ್ರಾಮ ನಮೂನೆ ೫ ಬ ದರಲ್ಲಿದ್ದ ಕಬಜೇದಾರನ ಹೆಸರು.	ವಿದ್ಯಾರ್ಥಿಯು ಕಬಜೇದಾರನಿಗೆ ಏನಾಗಬೇಕು?	ತಾಲೂಕು ಗ್ರಾಮ ಮತ್ತು ಖಾತೆ ನ.	ನಡಿಯುವ ವರ್ಷದ ಬಗ್ಗೆ ಕೊಟ್ಟ ಲೋಕಲ್ ಫಂಡ ಹಣ	ಶರಾ
೧	೨	೩	೪	೫	೬	೭	೮

ಟಿಪ್ಪಣಿ:— ೧. ಈ ಸರ್ಟಿಫಿಕೇಟುಗಳನ್ನು ಪ್ರತಿವರ್ಷ ಆಗಸ್ಟ ತಿಂಗಳಲ್ಲಿ ಹೊಸದಾಗಿ ತಕ್ಕೊಳ್ಳಬೇಕು.

೨*. ಈ ಸರಟೀಫಿಕೀಟಿಗೆ ಸಹಿ ಮಾಡುವ ಗ್ರಾಮಸ್ಥರು (ಕುಲಕರ್ಣಿ ಮತ್ತು ತಲಾಟಿ ಇಲ್ಲವೆ ಪಾಟೀಲ) ಕಬಜೇದಾರನ ಮುಖ್ಯ ಉದ್ಯೋಗವು ಒಕ್ಕಲತನ ಅಥವಾ ಹೊಲಗಸ್ಬವಿರುತ್ತದೆಯೋ ಇಲ್ಲವೋ, ಎಂಬ ಬಗ್ಗೆ ಶರಾದ ಕೊಷ್ಟಕದಲ್ಲಿ ಬರೆಯಬೇಕು.

೩. ೬ನೆಯ ಕೊಷ್ಟಕದಲ್ಲಿ ಲೋಕಲ್‌ಫಂಡ ಕೊಡುವವನು ಯಾವ ಜಿಲ್ಹೆಯಲ್ಲಿ ಶಾಲೆ ಇರುವದೋ ಆ ಜಿಲ್ಹೆಯನ್ನು ಬಿಟ್ಟು ಬೇರೆ ಜಿಲ್ಹೆಯವನಾಗಿದ್ದರೆ ಆ ಬೇರೆ ಜಿಲ್ಹೆಯ ಹೆಸರನ್ನೇ ಬರೆಯಬೇಕು.

* ಈ ಶರಾ ಸುರತ ಜಿಲ್ಹೆಯ ಲೋಕಲ್‌ಬೋರ್ಡ ಶಾಲೆಗಳ ಬಗ್ಗೆ ಮಾತ್ರ ಇರುತ್ತದೆ.

ಧುಳೆ ಟ್ರೇನಿಂಗ ಸ್ಕೂಲಿನ ವಿದ್ಯಾರ್ಥಿಯಾದ ಗಣೇಶ ನಾರಾಯಣ ದೇಶಪಾಂಡೆ ಇವನು ತನ್ನ ವ್ಹರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆಯ ಸರಟಫಿಕೇಟನಲ್ಲಿ ನಮೂದಿಸಿದ್ದ ತಾನು ಹುಟ್ಟಿದ ವರ್ಷವನ್ನು ತಿದ್ದಿದರಿಂದ ಅವನನ್ನು ಸದರೀ ಸ್ಕೂಲಿನಿಂದ ತಾರಿಖು ೨೫ನೇ ಫೆಬ್ರುವರಿ ೧೯೧೫ರಿಂದ ಹೊರಗೆ ಹಾಕಿರುತ್ತದೆ; ಮತ್ತು ಶಾಲಾ ಖಾತೆಯಲ್ಲಿ ನೌಕರಿಯು ದೊರೆಯುವದಕ್ಕೆ ಅವನು ನಾಲಾಯಖನಿದ್ದಾನೆಂದು ಮೆ ಡಾಯರೆಕ್ಟರ ಸಾಹೇಬ ಬಾಹಾದ್ದೂರವರಿಂದ ಪ್ರಸಿದ್ಧ ಮಾಡಲ್ಪಟ್ಟಿರುತ್ತದೆ.

ಜಾವಕ ನಂ. ೧೬೫.

ಮೆ. ಮ್ಯಾನೇಜರ ಕನ್ನಡ ಶಾಳಾಪತ್ರಕ ಧಾರವಾಡ ಇವರಿಗೆ—

ಡಿ. ಎ. ಇ. ಧಾರವಾಡ ಇವರಕಡಿಂದ ಕಲ್ಮಿ:—

ಧಾರವಾಡ ಜಿಲ್ಹೆ ಬಂಕಾಪೂರ ತಾಲೂಕ ಮೌಜೆ ಬಂಕಾಪೂರದ ಕನ್ನಡ ಗಂಡು ಮಕ್ಕಳ ಶಾಲೆಯ ೧ ನೇ ಅಸಿಸ್ಟಂಟ ಮಾಸ್ತರರಾದ ನೀಲಕಂಠ ಲಕ್ಷ್ಮೀಧರ ಪೂಜಾರ ಇವರು ಉದಾರಮನಸಿನಿಂದ ಸದರ ಗ್ರಾಮದ ವಿದ್ಯಾರ್ಥಿಗಳ "ಪರಸ್ಪರ ಸಹಾಯಕಾರಿ" ಸಂಘದ ಉತ್ತೇಜನಕ್ಕಾಗಿ ೬೫ ರುಪಾಯಿಗಳನ್ನು ಕಾಣಿಕೆಯಾಗಿ ಕೊಟ್ಟಿರುತ್ತಾರೆ. ಅವರ ಈ ಕೃತ್ಯವು ಅಭಿನಂದನೀಯವಿದ್ದು ಉಳಿದವರು ಅನುಕರಿಸುವಂತೆ ಇರುತ್ತದೆ. ಈ ಬಗ್ಗೆ ನಾವು ನಮ್ಮ ಆಭಾರವನ್ನು ವ್ಯಕ್ತಪಡಿಸುತ್ತೇವೆ. ಈ ಸಂಗತಿಗೆ ತಾವು ತಮ್ಮ ಶಾಳಾಪತ್ರಕದಲ್ಲಿ ಸ್ಥಳಕೊಡುವಿರೆಂದು ಅಪೇಕ್ಷಿಸುತ್ತೇವೆ. ಶ್ರುತವಿರಬೇಕು.

ತಾ|| ೮-೫-೧೫

K. B. Bendigeri

ಡಿ. ಎ. ಇ. ಧಾರವಾಡ.

ಪತ್ರಗಳ ಸಾರಾಂಶ.

೧ರಾ|| ಬಸವಯ್ಯಾ ಗಿರಿಮಲ್ಲಯ್ಯಾ ಮಠಪತಿ ಅಸಿಸ್ಟಂಟ ಮಾಸ್ತರ ಯಾದವಾಡ ತಾಲೂಕ ಗೋಕಾಕ ಇವರು ತಮಗೆ ತಿಂಗಳೊಂದಕ್ಕೆ ೧೫ ರೂಪಾಯಿ ಸಂಬಳವಿದ್ದು, ಅದರಲ್ಲಿಯ ೧೦ ರೂಪಾಯಿಗಳನ್ನು ಪ್ರತಿ ತಿಂಗಳಿಗೆ ಯುದ್ಧ ಫಂಡಕ್ಕೆ ಕಳುಹುತ್ತಿರುವರೆಂತಲೂ, ಈ ಪ್ರಕಾರ ಅವರು ಇದುವರೆಗೆ ೭೦ ರೂಪಾಯಿಗಳನ್ನು ಕಳುಹಿರುವರೆಂತಲೂ, ಆ ಬಗ್ಗೆ ತಮಗೆ ಅಲೀಜಾ ನೇಕನಾಮದಾರ ಗವ್ಹರ್ನರ ಜನರಲ್ ಸಾಹೇಬ ಬಾಹದ್ದೂರವರಿಂದ "ಥ್ಯಾಂಕ್ಸ" (ಇಂಗ್ಲೀಷದಲ್ಲಿ ಸಾಮಾನ್ಯವಾಗಿ ವಾಡಿಕೆಯಲ್ಲಿದ್ದ ಕೃತಜ್ಞತಾಸೂಚಕ ಶಬ್ದ) ಗಳು ಬಂದಿರುವವೆಂತಲೂ ಬರೆಯುತ್ತಾರೆ.

ಶಾಲಾಪತ್ರಕ.

ಸಂಪುಟ ೫೧. | ಜೂನ-ಜುಲಾಯಿ ೧೯೧೫. | ಸಂಚಿಕೆಗಳು. ೬-೭

ಸ್ಫುಟವಿಷಯಗಳು.

೧. ಬ್ರಿಟಿಶ್ ಸಾಮ್ರಾಜ್ಯದಲ್ಲಿ ವಸಾಹತು ಮಾಡಿದ ಹಿಂದೀ ಜನರು.

ಸಮುಗ್ರ ಬ್ರಿಟಿಶ್ ಸಾಮ್ರಾಜ್ಯದ ಬೇರೆ ಬೇರೆ ದೇಶಗಳಲ್ಲಿ ಇರುವ ಒಟ್ಟು ಜನಸಂಖ್ಯೆಯನ್ನೂ, ಅದರಲ್ಲಿ ಹಿಂದೀ ಜನರ ಸಂಖ್ಯೆಯುಷ್ಟೆಂಬದನ್ನೂ ಕೆಳಗೆ ತೋರಿಸಿದೆ:—

ದೇಶ.	ಒಟ್ಟು ಜನಸಂಖ್ಯೆ.	ಹಿಂದೀಜನರ ಸಂಖ್ಯೆ.
ಬ್ರಿಟಿಶ್ ಗ್ವಾಯಾನಾ	೨,೦೯,೦೪೪	೧,೨೯,೧೮೧
ಮಲಾಯಾ ಸ್ಟೇಟ್ಸ	೧೦,೩೬,೯೯೯	೧,೭೨,೪೬೫
ಫಿಜೀ	೧,೮೭,೮೭೧	೪೮,೬೧೪
ಗಿಲಬರ್ಟ ಪ್ರಾಂತ	೭೧,೧೨೧	೩೦೧
ಹಾಂಗ ಕಾಂಗ	೪,೬೭,೭೭೭	೩,೦೪೯
ಜಮೇಕಾ	೮,೩೧,೨೮೨	೧೭,೩೮೦
ಮಾರಿಶಸ್	೩,೬೮,೭೯೧	೨,೫೭,೬೯೭
ನ್ಯಾಸಾಲೆಂಡ್	೧೦,೦೦,೦೦೦	೪೬೩
ದಕ್ಷಿಣರೋಡೇಶಿಯಾ	೭,೭೦,೦೦೦	೨,೯೧೨
ಸ್ಟ್ರೇಟ್ಸ ಸೆಂಟಲಮೆಂಟ್ಸ	೭,೧೪,೯೬೯	೮೨,೦೬೫
ತ್ರಿನಿದಾದ ಟೊಬಗೊ	೩,೩೩,೫೫೨	೫೦,೫೮೫
ಯುಗಾಂಡಾ	೨೮,೯೩,೪೯೪	೩,೧೧೦
ಝಾಂಝಿಬಾರ	೧ ೯೮,೯೧೪	೧೦,೦೦೦

೨. ಶತಾಯುಗಳು. ಯುರೋಪದ ಬೇರೆ ಬೇರೆ ರಾಷ್ಟ್ರಗಳ ಜನ ಸಂಖ್ಯೆಯಲ್ಲಿ ಶತಾಯು ಜನರ ಪ್ರಮಾಣವು ಎಷ್ಟಿರುವದೆಂಬದನ್ನೂ, ಆಯಾ ದೇಶಗಳಲ್ಲಿ ಈಗ ಒಟ್ಟು ಶತಾಯು ಜನರು ಎಷ್ಟಿರುವರೆಂಬದನ್ನೂ ಕೆಳಗೆ ತೋರಿಸಿದೆ:—

ದೇಶ.	ಪ್ರಮಾಣ.	ಈಗ ಇರುವ ಶತಾಯುಗಳು.
ಸರ್ವಿಯಾ	೨೨೬೦:೧	೫೭೫
ಆಯರ್ಲಂಡ	೮೧೩೦:೧	೫೭೮
ಸ್ಪೇನ	೪೩೦೦೦:೧	(?)
ನಾರ್ವೆ	೯೬೦೦೦:೧	೨೩
ಇಂಗ್ಲಂಡ್ ಸ್ಕಾಟ್ಲಂಡ್ ವೇಲ್ಸ	೧೭೭೦೦೦:೧	೧೯೨
ಫ್ರಾನ್ಸ	೧೮೦೭೫೦:೧	೨೧೩
ಸ್ವೀಡನ್	೨೫೦೦೦೦:೧	೨೦
ಜರ್ಮನಿ	೭೦೨೦೦೦:೧	೭೮
ಡೆನ್ಮಾರ್ಕ	೧೦೦೦೦೦೦:೧	೨

ಸರ್ವಿಯಾ ದೇಶದಲ್ಲಿ ಶತಾಯು ಪುರುಷರು ಹೆಚ್ಚಾಗಿರುವರು. ಸ್ವಿತ್ಸರ್ಲಂಡದಲ್ಲಿ ಒಬ್ಬನೂ ಶತಾಯುವಿಲ್ಲ.

ಕೆಲವು ಸಾಮಾನ್ಯ ದುಷ್ಟ ಚಟಗಳು.

ಕೆಲವರು ಬೇಕಾದಷ್ಟು ಬುದ್ಧಿವಂತರೂ ಕೀರ್ತಿವಂತರೂ ಶ್ರೀಮಂತರೂ ಆಗಿದ್ದರೂ, ಅವರಲ್ಲಿ ಕೆಲವು ಅಸಹ್ಯಕರವೂ ಅಪಾಯಕರವೂ ಆದ ದುಷ್ಟ ಚಟಗಳು ಸೇರಿಕೊಂಡಿರುವದು ಕಂಡು ಬರುವದು. ಈ ಚಟಗಳು ಮೊದಲು ಕೇವಲ ನಿಷ್ಕಾರಣವಾದಂಥ ಹಾಗು ಕೆಟ್ಟ ಅನುಕರಣದ ಮೂಲಕವಾಗಿ ಅವರಲ್ಲಿ ಸೇರಿಕೊಳ್ಳುವವು; ಮತ್ತು ಅವರು ಅವುಗಳನ್ನು ದುರ್ಲಕ್ಷಿಸಿ ಹಾಗೇ ಉಳಿಯಗೊಡುವರು. ಆದರೆ ಅವರು ತುಸುಮಟ್ಟಿಗೆ ಲಕ್ಷ್ಯಗೊಟ್ಟು ನಡೆದರೆ, ಆ ಚಟಗಳನ್ನು ಸಹಜವಾಗಿ

ಬಿಡಲಿಕ್ಕೆ ಬರುವಂತಿರುವದು. ಹೀಗಿದ್ದರೂ, ದುಷ್ಟವ್ಯಸನದ ಹಾಗೆ ಪರರಿಗೆ ತ್ರಾಸದಾಯಕವೂ ಅಸಹ್ಯಕರವೂ ಎನಿಸುವಂಥ ಹಾಗೂ ಕೆಲಕೆಲವು ಸಾರೆ ತಮ್ಮ ಶರೀರಕ್ಕೆ ಅಪಾಯಕರವಾದಂಥ ಈ ದುಷ್ಟ ಚಟಗಳನ್ನು ಅವರು ಹಾಗೇ ಉಳಿಸಿಕೊಂಡಿರುವರು. ಕೆಲಕೆಲವರ ಈ ದುಷ್ಟ ಚಟಗಳಂತೂ ಅವರ ಹಿಂದಿನ ಜನ್ಮದೊಳಗಿನ ಪಶುವೃತ್ತಿಯ ಅವಶೇಷಗಳೋ ಎಂಬಂತೆ ತೋರುತ್ತಿರುವವು! ಪ್ರಕೃತಕ್ಕೆ ಅಂಥ ಚಟಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉಲ್ಲೇಖಿಸುವೆವು: –

(೧). ಮೇಲಿಂದ ಮೇಲೆ ಮೂಗನ್ನು ಒರಿಸಿಕೊಳ್ಳುವದೂ ಸುಂಬಳವನ್ನು ಕಳೆದು ಸಿಡಿಸುವದೂ ಇಂಥ ಚಟಗಳಲ್ಲಿ ಒಂದಾಗಿರುವದು. ಕೆಲವರು ಸುಂಬಳವನ್ನು ಜನರು ಓಡಾಡುವಂಥ ಮಾರ್ಗದಲ್ಲಿ ಜನರಿಗೆ ಹೇಸಿಗೆ ಬರುವಂತೆ ಕಳೆಯುವರು. ಕೆಲವರು ಹೀಗೆ ಮಾಡುವಾಗ ತಮ್ಮ ಕರವಸ ವನ್ನು ಉಪಯೋಗಿಸುವರು. ಆದರೆ ಕೆಲಕೆಲವರು ಮಹಾಪುರುಷರು ಬರೇ ಕೈಬೆರಳುಗಳಿಂದಲೇ ಕೆಲಸವನ್ನು ಸಾಗಿಸಿಕೊಳ್ಳುವರು. ಹಾಗೂ ಸಿಕ್ಕಸಿಕ್ಕಲ್ಲಿ ಆ ಕೈಯನ್ನು ಒರೆಸುವರು. ಇಷ್ಟೇ ಅಲ್ಲ; ಆ ಕೈಯಿಂದಲೇ ತಮ್ಮ ಹಾಗು ಪರರ ಆಹಾರದ ಪದಾರ್ಥಗಳನ್ನೂ ಬೇಕಾದ ಹಾಗೆ ಮುಟ್ಟುವರು.

(೨). ಮತ್ತೆ ಕೆಲವರಿಗೆ ಕೆಮ್ಮಿ ಖೇಕರಿಸಿ ಗಂಟಲವನ್ನು ಸ್ವಚ್ಛ ಮಾಡಿಕೊಳ್ಳುವ ಚಟವಿರುವದು. ಈ ಚಟವಾದರೂ ಎರಡನೆಯವರಿಗೆ ಅಸಹ್ಯಕರವೂ ತ್ರಾಸದಾಯಕವೂ ಆಗುವದು. ಅಂಥವರು ಕೆಮ್ಮಿದ ಕೂಡಲೆ ಜನರು ಹೇಸಿಕೊಳ್ಳುವರೆಂಬ ಎಚ್ಚರವಿಲ್ಲದೆ, ಕಂಡ ಕಂಡಲ್ಲಿ ಉಗುಳುವರು. ಅದರಿಂದ ಸುತ್ತಲಿನ ಸ್ಥಳವು ಹೊಲಸಾಗುವದು; ಹಾಗು ಅವರ ಸಮೀಪದಲ್ಲಿರುವ ಜನರು ಅವರು ಕೆಮ್ಮುವಾಗ ಹೊರಡುವ ಉಗುಳಿನ ಸೂಕ್ಷ್ಮ ತುಷಾರಗಳನ್ನು ಮೈಗೆಲ್ಲ ಸಿಡಿಸಿಕೊಳ್ಳಬೇಕಾಗುವದು. ಇಂಥವರು ರೋಗಿಗಳಾಗಿದ್ದರೆ ಆದರಿಂದ ಎರಡನೆಯವರಿಗೆ ಅಪಾಯವೂ ಆಗುವದು.

(೩). ಉಗುರು ಕಡಿಯುವದು ಮತ್ತು ಕೈಯೊಳಗಿನ ಟಾಕು ಪೆನ್ಸಿಲುಗಳನ್ನು ಬಾಯೊಳಗಿಡುವದು. ಇವೂ ಮೇಲೆ ಹೇಳಿದ ಅಸಹ್ಯಕರವಾದ ಚಟಗಳಲ್ಲಿಯೇ ಸೇರುವವು. ಹಲವು ಜನರು ಪುಸ್ತಕದ ಪಾನುಗೆ

ಳನ್ನು ತಿರುವುವಾಗ ಇಲ್ಲವೆ ಕಾಗದದ ಹಾಳೆಗಳನ್ನು ಎಣಿಸುವಾಗ ಮೇಲಿಂದ ಮೇಲೆ ಕೈಬೆರಳಿಗೆ ಉಗುಳನ್ನು ಹಚ್ಚಿ ಅದರ ಸಹಾಯದಿಂದ ಪಾನುಗಳನ್ನು ಎಬ್ಬಿಸುತ್ತಿರುವರು. ಇದಾದರೂ ಕೆಟ್ಟ ಚಟವೇ ಸರಿ. ಹೀಗೆ ಮಾಡುವದು ಎರಡನೆಯವರಿಗೆ ಅಸಹ್ಯಕರವಾಗುವದಲ್ಲದೆ ಕಾಗದಕ್ಕೆ ಉಗುಳು ಹತ್ತಿ ಅದು ಕೆಡಲಿಕ್ಕೆ ಕಾರಣವಾಗುವದು. ಮತ್ತು ಕಾಗದದ ಹೊಲಸೂ ಬಾಯಲ್ಲಿ ಸೇರುವದು.

(ಳ). ಮಲಗಿದಾಗ ಹಲ್ಲು ಕಡಿಯುವದು, ವಿಚಿತ್ರ ಸ್ವರದಿಂದ "ಗೊರ್ ಗೊರ್" ಎಂದು ನಿದ್ದೆಗೊರೆಯುವದು ಬಾಯೊಳಗಿಂದ ಉಗುಳು ಸುರಿಸುವದು, ಇವೇ ಮುಂತಾದ ಚಟಗಳು ಅನೇಕರಿಗೆ ಹತ್ತಿರುವವು. ನಿದ್ರೆಯಲ್ಲಿ ಮನುಷ್ಯನು ಎಚ್ಚರದಿಂದಿರುವದಿಲ್ಲವಾದ ಕಾರಣ, ಇಂಥ ಚಟಗಳನ್ನು ತಪ್ಪಿಸುವದು ಅಸಾಧ್ಯವೆಂದು ತೋರಬಹುದು. ಆದರೆ ಎರಡನೆಯವರ ಸಹಾಯದಿಂದಲೂ ತಾನು ಎಚ್ಚರಿಕೆಯಿಂದ ನಡೆಯುವದರಿಂದಲೂ ಇವುಗಳನ್ನು ಕಳೆದುಕೊಳ್ಳಲಿಕ್ಕೆ ಬರುವದು. ಕೇವಲ ದುರ್ಲಕ್ಷವೇ ಈ ಚಟಗಳ ಬೆಳುವಣಿಗೆಗೆ ಕಾರಣವಾಗಿರುವದು.

(ಱ). ತಲೆಯನ್ನು ಅಥವಾ ಸಿಕ್ಕಸಿಕ್ಕ ಅವಯವಗಳನ್ನು ಕರಕರ ಕೆರೆದುಕೊಳ್ಳುವದೂ ಇಂಥ ಚಟಗಳಲ್ಲಿಯೇ ಬರುವದು. ಇದು ಅಸಹ್ಯಕರವಾಗಿರುವದಲ್ಲದೆ ಬೀಭತ್ಸಕರವೂ ಆಗಿರುವದು.

(ೞ). ಕೆಲವರು ನಾಲ್ಕು ಜನರ ಎದುರಿಗೆ ಹಲ್ಲಿಗೆ ಕಡ್ಡಿಬಟ್ಟನ್ನು ಹಚ್ಚಿ ಬೇಕಾದ ಹಾಗೆ ತಿಕ್ಕುತ್ತ ಮುಖವನ್ನು ತೊಳೆದುಕೊಳ್ಳುತ್ತಿರುವರು. ಈ ಚಟವೂ ಕೆಟ್ಟದ್ದೇ ಸರಿ.

ಒಟ್ಟಿಗೆ, ಮನುಷ್ಯನು ಸ್ವಚ್ಛತೆಯು ತನಗೆ ಬೇಕಾಗುವಂತೆಯೇ ಪರರಿಗೂ ಬೇಕಾಗುವದೆಂಬದನ್ನು ಲಕ್ಷದಲ್ಲಿಟ್ಟುಕೊಂಡು, ತನ್ನ ನಡತೆಯು ಎರಡನೆಯವರಿಗೆ ಅಸಹ್ಯಕರವೂ ಅಮಂಗಲಕರವೂ ಆಗದಂತೆ ನೋಡಿಕೊಂಡು ನಾಲ್ಕು ಜನರ ಸಂಗಡ ವ್ಯವಹಾರ ಮಾಡುತ್ತಿರಬೇಕು. ಎರಡನೆಯವರ ಸುಖದುಃಖಗಳ ಹಾಗು ಬೇಸರದ ಕಡೆಗೆ ಲಕ್ಷಗೊಡದಂಥ ಮನುಷ್ಯನು ಸಮಾಜದಲ್ಲಿ ನಡೆಯಲಿಕ್ಕೆ ಅಯೋಗ್ಯನೆಂದೇ ಹೇಳಬೇಕಾಗುವದು. ತನ್ನಲ್ಲಿರುವ ಬೇರೆ ಕೆಲವು ಗುಣಗಳ ಅಥವಾ ಶ್ರೀಮಂತಿಕೆಯ ಸಲುವಾಗಿ ಜನರು ತನಗೆ ಮಾನಕೊಡುತ್ತಿರುವರೆಂದ

ಮಾತ್ರಕ್ಕೆ ತನ್ನೊಳಗಿನ ಬೇಕಾದ ಕೆಟ್ಟ ಚಟಗಳ ಮೂಲಕವಾಗಿ ಅವರನ್ನು ಪೀಡಿಸುವದು ಸರಿಯಲ್ಲ. ಹಾಗೆ ಮಾಡುವದು ಮನಸ್ಸಿನ ಕ್ಷುದ್ರತನದ ದ್ಯೋತಕವಾಗಿರುವದು. ಇಂಥ ದುಷ್ಟ ಚಟಗಳನ್ನು ನಿಷೇಧಿಸುವದೂ ಅವು ತಮ್ಮಲ್ಲಿ ಸೇರದಂತೆ ಎಚ್ಚರದಿಂದ ನಡೆಯುವದೂ ಅವಶ್ಯವು.

ಉಪಯುಕ್ತವಾದ ವಿಷಯಗಳು.

(ಒಕ್ಕಲಿಗರ ಪತ್ರಿಕೆಯಿಂದ.)

ಹಿತ್ತಾಳೆಯ ಸಾಮಾನುಗಳನ್ನು ಶುಭ್ರವಾಗಿಯೂ, ಅವುಗಳ ಮೇಲಿನ ಕಲೆಯು ಹೋಗಿ, ಥಳಥಳನೆ ಹೊಳೆಯುವಂತೆಯೂ ಮಾಡಬೇಕಾದರೆ, ಅರ್ಧ ಸೇರು ನೀರಿಗೆ ೨॥ ತೊಲಿ ಪಟಕವನ್ನು ಸೇರಿಸಿ, ಆ ನೀರನ್ನು ಪಾತ್ರೆಗಳಲ್ಲಿ ಹಾಕಿ, ಕುದಿಸಬೇಕು. ಅನಂತರ ಅಂಗಡಿಗಳಲ್ಲಿ ದೊರೆಯುವ ಹಿತ್ತಾಳೆ ಪಾಲಿಷ್‌ನಿಂದಾಗಲಿ, ಚನ್ನಾಗಿ ಒಣಗಿದ ಬಟ್ಟೆಯಿಂದಾಗಲಿ ಉಜ್ಜಬೇಕು. ಇದರಿಂದ, ಪಾತ್ರೆಗಳ ಸಂದುಗಳಲ್ಲಿರುವ ಕೊಳೆಯು ಕೂಡ ಹೋಗಿ, ಅವುಗಳು ಥಳಥಳನೆ ಹೊಳೆಯುವುವಲ್ಲದೆ, ಶುದ್ಧವೂ ಆಗುವವು.

ಚನ್ನಾಗಿ ಕಾದಿರುವ ದೀಪ (ಲ್ಯಾಂಪು)ಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ತೆಗೆದುಕೊಂಡು ಹೋಗುವಾಗ ಶೀತವಾಯು ತಗುಲಿದರೆ ಚಿಮನಿಗಳು ಒಡೆದು ಹೋಗುವವು. ಆದ ಕಾರಣ ಬಹು ಎಚ್ಚರಿಕೆಯಿಂದಿರಬೇಕು. ದೀಪವನ್ನು ಸ್ವಲ್ಪ ಇಳಿಸಿ (ಸಣ್ಣಗೆ ಮಾಡಿ) ಚಿಮಣಿಯು ಸ್ವಲ್ಪ ಆರುವದಕ್ಕೆ ಅವಕಾಶ ಕೊಟ್ಟು, ಅನಂತರ ಬೇರೆ ಕಡೆಗೆ ತೆಗೆದುಕೊಂಡು ಹೋಗಬಹುದು. ಇದರಿಂದ ಚಿಮಣಿಗಳು ಒಡೆಯುವದಕ್ಕೆ ಅವಕಾಶವಿರುವದಿಲ್ಲ. ದೀಪವನ್ನು ಆರಿಸಬೇಕಾದರೆ, ಬತ್ತಿಯನ್ನು ಕೆಳಕ್ಕಿಳಿಸಿ, ದೀಪವು ತನ್ನಷ್ಟಕ್ಕೆ ತಾನೆ ಆರುವಂತೆ ಬಿಟ್ಟುಬಿಡಬೇಕು; ಅಥವಾ ಚಿಮಣಿಯ ಮೇಲಿನಿಂದ ಉಗುಳು ಸಿಡಿಯದಂತೆ ಊದಿ ಆರಿಸಬಹುದು.

ಉರುಳುಗಡ್ಡೆಯಲ್ಲಿ ಪದಾರ್ಥಗಳ ಕೊಳೆಯನ್ನು ಹೋಗಲಾಡಿಸುವ ಶಕ್ತಿಯಿರುವದು, ಹಸಿ ಉರುಳುಗಡ್ಡೆಯನ್ನು ಸೋಪಿಗೆ (ಸಾಬೂನಿಗೆ) ಬದುಲಾಗಿ ಉಪಯೋಗಿಸುವದರಿಂದ ಕೈಗಳು ಶುಭ್ರವಾಗುವವು. ಮೈಗೆ ಉಪಯೋಗಿಸಿದರೆ,ಚರ್ಮದಲ್ಲಿ ನುಣುಪೂ, ಮಾರ್ದವವೂ ಹುಟ್ಟುವವು. ಉರುಳುಗಡ್ಡೆಗಳನ್ನು ಬೇಯಿಸಿದ ನೀರಿನಿಂದ ತೊಳೆದರೆ ರೇಷ್ಮೆಯ ಬಟ್ಟೆಗಳಲ್ಲಿರುವ ಕೊಳೆಯು ಸಂಪೂರ್ಣವಾಗಿ ಹೋಗುವದು. ಸಣ್ಣಗೆ ಕತ್ತರಿಸಿದ ಉರುಳುಗಡ್ಡೆಯನ್ನು ಅರ್ಧ ಸೇರು ನೀರಿನಲ್ಲಿ ಕುದಯಿಸಿ, ಆ ನೀರನ್ನು, ಶೋಧಿಸಿ, ಅದರಲ್ಲಿ "ಸರ್ಜ" ಮುಂತಾದ ಉಣ್ಣೆಯ ಬಟ್ಟೆಗಳನ್ನು ತೊಳೆಯುವದರಿಂದ, ಅವುಗಳ ಕೊಳೆಯೂ, ಮಣ್ಣಿನ ಕಲೆಗಳೂ ಹೋಗಿ ಶುಭ್ರವಾಗುವವು.

ಹಾಲನ್ನು ಅನೇಕ ಕೆಲಸಗಳಿಗೆ ಉಪಯೋಗಿಸಬಹುದೆಂದು ಒಬ್ಬಸಿ ೀಯು ತನ್ನ ಅನುಭವದಿಂದ ತಿಳಿಸಿರುವಳು. ಅವುಗಳನ್ನು ನಮ್ಮ ವಾಚಕರ ಉಪಯೋಗಕ್ಕಾಗಿ ಇಲ್ಲಿ ತಿಳಿಸಿರುವೆವು.—(೧) ಹಾರ್ಮೋನಿಯಮ್‌ಗಳ ರೀಡುಗಳನ್ನು ಹಾಲಿನಲ್ಲದ್ದಿದ ಬಟ್ಟೆಯಿಂದ ಉಜ್ಜಿದುದಾದರೆ ಅವುಗಳು ನಿರ್ಮಲವೂ, ಬೆಳ್ಳಗೂ ಆಗುವವು. (೨) ಬಟ್ಟೆಗೆ ಹಾಕುವ ಗಂಜಿಗೆ ಸ್ವಲ್ಪ ಹಾಲನ್ನು ಸೇರಿಸಿ, ಅನಂತರ ಇಸ್ತ್ರಿ ಮಾಡಿದರೆ, ಬಟ್ಟೆಗಳಿಗೆ ನುಣುಪಾದ ಹೊಳಪು ಬರುವದು. (೩)ಕಿಟಕಿಗಳ ಚಿಕ್ಕ ಚಿಕ್ಕ ಬಣ್ಣದ ಪರದೆಗಳನ್ನು ಸ್ವಲ್ಪ ಹಾಲು ಸೇರಿಸಿದ ನೀಲಿ ಮಿಶ್ರವಾದ ನೀರಿನಲ್ಲಿ ಅದ್ದಿಟ್ಟರೆ, ಆ ಪರದೆಗಳು ಹೊಸದಾದವುಗಳಂತೆ ಕಾಣುವವು. (೪) ರಾತ್ರಿ ಯೋಚನೆಯಿಂದ ನಿದ್ದೆಬಾರದೆ ಇದ್ದರೆ, ಮಲಗಿಕೊಳ್ಳುವಾಗ ಒಂದು ಬಟ್ಟಲು ಬಿಸಿ ಹಾಲನ್ನು ಕುಡಿದರೆ ನಿದ್ದೆಯು ಬರುವದು. (೫) ಬಟ್ಟೆಗಳ ಮೇಲೆ ಶಾಯಿಯ ಕಲೆಯು ಬಿದ್ದಿದ್ದರೆ ಆ ಬಟ್ಟೆಗಳನ್ನು ಹಾಲಿನಲ್ಲಿ ಅದ್ದಿ ಸ್ವಲ್ಪ ಕಾಲವಿಟ್ಟರೆ ಕಲೆಗಳು ಹೋಗುವವು.

ಸುಶಿಕ್ಷಣ ಪ್ರಭಾವ.

ಕಣಿಯೊಳಗಿಂದ ಅದೇ ತೆಗೆದ ಕಲ್ಲು ಅಷ್ಟತಿಷ್ಟವಾಗಿ ಕಾಣುವದು. ಆದರೆ ಅದು ಒಳ್ಳೇ ಮೂರ್ತಿಕಾರನ ಕೈಗೆ ಸಿಕ್ಕರೆ ಅದರಿಂದ

ಅವನು ಅತ್ಯುತ್ಕೃಷ್ಟವಾದ ಮೂರ್ತಿಯನ್ನು ಸಿದ್ಧಮಾಡುವನು; ಇಲ್ಲ ದಿದ್ದರೆ ಆ ಕಲ್ಲು ಒಡೆದು ಸವೆದು ಹಾಳಾಗಿ ಹೋಗುವದು. ಅದರಂ ತೆಯೇ ಕಾಡು ಸ್ಥಿತಿಯಲ್ಲಿದ್ದ ಜನರಿಗೆ ಒಳ್ಳೇ ಗುರುವು ದೊರೆತರೆ ಅ ವನ ಸುಶಿಕ್ಷಣದಿಂದ ಒಂದು ವೇಳೆ ಆ ಜನರು ಉತ್ತಮೋತ್ತಮ ಗುಣಗ ಳುಳ್ಳ ಜನರಾಗುವ ಸಂಭವವುಂಟು.

ಪತ್ರವ್ಯವಹಾರವು.

ರಾ॥. ಸಾ॥. ಶಾಲಾಪತ್ರಕದ ಎಡಿಟರ್‌ದೊರೆಗಳವರ ಸನ್ನಿಧಿಗೆ:— ಶಿ. ಸಾ. ನ. ವಿ. ತರುವಾಯ. ಕಳೆದ ಬುಧವಾರ ದಿವಸ ಬೆಳಗಾವಿ ಯಲ್ಲಿ ಕನ್ನಡ ಭಾಷಾಭಿಮಾನಿಗಳ ಸಭೆ ಕೂಡಿತ್ತು. ಅದರಲ್ಲಿ ರಾ. ಸಾ. ರಾಮಚಂದ್ರರಾವ ಸವಣೂರ ಪೆನ್ಶನರ ಡಿ. ಎ. ಇ. ಇವರು ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಿದ್ದರು. ಸಭೆಗೆ ನಾಮದಾರ ಬೆಳವಿ, ಶ್ರೀಯುತ ಲೋಕೂರ, ಗಂಗಾಧರರಾವ ಹುದ್ಲಿ, ಬೆಟಗೇರಿ, ಗೆಜ್ಜಿ ಇವರೇ ಮುಂ ತಾದ ವಕೀಲರೂ ಊರೊಳಗಿನ ಪ್ರಮುಖ ಕನ್ನಡಿಗರೂ ವಿದ್ಯಾರ್ಥಿಗ ಳೂ ನೆರೆದಿದ್ದರು. ಸಭಾಗೃಹವು ಸಣ್ಣದಿದ್ದ ಮೂಲಕ ಹಾಗೂ ಉತ್ಸಾಹ ವುಳ್ಳ ಬಹುಜನ ಪ್ರೇಕ್ಷಕರ ಮೂಲಕ ಬಿಗಿದು ನಿಂತಿತ್ತು. ಸಭೆಯನ್ನು ನೆರೆಯಿಸಿದ ಉದ್ದೇಶವನ್ನು ಎಲ್ಲರಿಗೂ ತಿಳಿಸಿದ ತರುವಾಯ, ಧಾರವಾಡ ದ ರಾ॥ ಆಲೂರಕರ ವಕೀಲರು ಎದ್ದುನಿಂತು, ಪುರಾತನ ಕಾಲದಲ್ಲಿದ್ದ ಕನ್ನಡ ಸೀಮೆಯನ್ನೂ ಅದರ ಗೌರವವನ್ನೂ, ಸದ್ಯಕ್ಕೆ ಅದರ ಅವನತಿಯ ಕಾರಣವನ್ನೂ ವಿವರಿಸಿ, ಕನ್ನಡ ವಾಚನಾಲಯವನ್ನು ಸ್ಥಾಪಿಸುವ ಅವ ಶ್ಯಕತೆಯನ್ನು ತೋರಿಸಿ, ಬಹಳ ಕಳಕಳಿಯ ಭಾಷಣವನ್ನು ಮಾಡಿದರು.

ಬೆಳಗಾವಿ ಜಿಲ್ಹೆಯೊಳಗಿನ ⅔ ಭಾಗವು ಕನ್ನಡದಿದ್ದು, ಬೆಳಗಾವಿ ಊರ ಸ್ಥಿತಿಯು ಮಾತ್ರ ಮಹಾರಾಷ್ಟ್ರ ಭಾಷೆಯಿಂದ ಮುಂದೆ ಬಂದಿರು ವದು. ಈ ಸ್ಥಿತಿಯಲ್ಲಿ ಕನ್ನಡಿಗರು, ಬಹಳೇ ಹಿಂದುಳಿದು, ಕನ್ನಡ ಸಮಾ ಜವು ಮೂಲೆಗುಂಪಾಗಿದ್ದ ಸ್ಥಿತಿಯನ್ನು ಕಂಡು ಡಾಕ್ಟರ ಸವಣೂರ ಮ ತ್ತು ಇಲ್ಲಿಯ ಸರದಾರ್ಸ ಹೈಸ್ಕೂಲಿನ ಮಾಸ್ತರರಾದ ಪೋತದಾರ ಇವರು ಬಹಳ ಶ್ರಮಬಟ್ಟು ಈ ಸಭೆಯನ್ನು ನೆರೆಯಿಸಿದ ಸಂಗತಿಯನ್ನು ಜನರಿ

ಗೆ ತಿಳಿಸಿದ ತರುವಾಯ, ಧಾರವಾಡದ ಕ. ವಿ. ವ. ಸಂಘದ ಸೇಕ್ರೆಟರಿಗಳಿಂದ ಈ ವಾಚನಾಲಯಕ್ಕೆ ರಾ. ಆಲೂರಕರ ವಕೀಲರು ೩೦|೩೦ ಪುಸ್ತಕಗಳನ್ನು ಉದಾರ ಮನಸ್ಸಿನಿಂದ ಕಾಣಿಕೆಯಾಗಿ ಕೊಟ್ಟಿದ್ದಲ್ಲದೆ, ತಾವು ಸ್ವತಃ ಬರೆದ ೪ ಪುಸ್ತಕಗಳನ್ನು ಈ ಮಂದಿರಕ್ಕೆ ಸಮರ್ಪಿಸಿದರು. ಇದು ಅವರಿಗೆ ಭೂಷಣಾಸ್ಪದವೇ ಸರಿ. ಇದೇ ಪ್ರಕಾರ ಬೇರೆ ಹಲವು ಜನರು ತಾವು ಬರೆದಿದ್ದ ಪುಸ್ತಕಗಳನ್ನೂ ತಮ್ಮಲ್ಲಿ ಸಂಗ್ರಹಿಸಿದ ಪುಸ್ತಕಗಳನ್ನೂ ಕೆಲವರು ವರ್ಷಾಶನ ರೂಪದಿಂದ ಹಣದ ಸಹಾಯವನ್ನೂ ಕೊಡುವದಕ್ಕೆ ಒಪ್ಪಿಕೊಂಡರು. ಈ ಸಮಾಜವು ಕೇವಲ ವಾಚನಾಲಯದ ಕೆಲಸವನ್ನಷ್ಟೇ ಮಾಡುವದನ್ನು ಕೈಕೊಂಡಿರದೆ ಕನ್ನಡ ಭಾಷೆಯ ಬಗ್ಗೆ ಸಂಪೂರ್ಣ ಅಭಿಮಾನ ತಾಳಿ. "ಕನ್ನಡ ಭಾಷೋತ್ತೇಜಕ ಸಮಾಜ" ಎಂಬ ಹೆಸರನ್ನು ಹೊಂದಿರುವದೆಂಬ ಸಂಗತಿಯನ್ನು ತಿಳಿಸಿದರು. ಬಳಿಕ, ಅನಂತರಾವ ದಾಭಾಡೇ ಇವರು ಪ್ರತಿವರ್ಷ ೧೦ ರೂಪಾಯಿ ಕೊಡುವದಕ್ಕೆ ಒಪ್ಪಿಕೊಂಡರು. ಇದು ಎಂಥ ಉತ್ಸಾಹವು! ಬಳಿಕ ನಾಮದಾರ ಬೆಳವಿಯವರು, ಉಪಸಂಹಾರದ ಭಾಷಣ ಮಾಡಿ ಅಧ್ಯಕ್ಷರ ಆಭಾರ ಮನ್ನಿಸಿದರು. ತರುವಾಯ, ಎಲ್ಲರಿಗೂ ಹಾರ-ತುರಾಯಿಗಳನ್ನೂ ತಾಂಬೂಲಾದಿಗಳನ್ನೂ ಕೊಟ್ಟು ಸಭಾವಿಸರ್ಜನ ಮಾಡಿದರು. ಈ ಸಭೆಯ ಉದ್ದೇಶವು ಈಡೇರಿ, ಕನ್ನಡ ಭಾಷೆಯು ಬೆಳವಣಿಗೆಯನ್ನು ಹೊಂದಿ, ಬೆಳಗಾವಿ ಗ್ರಾಮವಾಸಿಗಳಾದ ಕನ್ನಡಿಗರಿಗೆ ಸದ್ಬುದ್ಧಿಯನ್ನೀಯಲೆಂದು ಪರಮೇಶ್ವರನನ್ನು ಬೇಡಿಕೊಂಡು, ಪತ್ರವಿಸ್ತಾರದ ಭಯದಿಂದ ಸಾಕು ಮಾಡುವೆನು.

ಬೆಳಗಾವಿ, | ಪ್ರೇಕ್ಷಕ.

ತಾರೀಖು ೫-೬-೧೯೧೫.

ಬದ್ರಿನಾಥ ಸೂರಿ, ಮೊರಬ.

ಸ್ಲಾಯಿಡ, ಅಥವಾ ಹಸ್ತಶಿಕ್ಷಣ.

ಚಿಕ್ಕ ಮಕ್ಕಳ ಶಿಕ್ಷಣಕ್ರಮದಲ್ಲಿ ಹಸ್ತಶಿಕ್ಷಣವು ಅತ್ಯವಶ್ಯವಾದದ್ದೆಂದು ಪ್ರಾಚೀನ-ಅರ್ವಾಚಿನ ಶಿಕ್ಷಣಶಾಸ್ತ್ರಜ್ಞರು ಹೇಳುವದುಂಟು. ಅನೇಕ ಪ್ರಕಾರದ ಹಸ್ತಶಿಕ್ಷಣಗಳಲ್ಲಿ ಸ್ಲಾಯಿಡ ಎಂಬದು ಅತಿಮಹತ್ವವುಳ್ಳದ್ದೆಂದು ಅನುಭವದಿಂದ ಕಂಡು ಬಂದಿರುತ್ತದೆ. ಸ್ಲಾಯಿಡ ಎಂಬದು ಸ್ವೀಡನ್ನ ಭಾಷೆಯದೊಂದು ಶಬ್ದವು. ಅದರ ಮೂಲಾರ್ಥವು ಕುಶಲತೆಯೆಂದಿರುವದು. ಆದರೆ ರೂಢಿಯಲ್ಲಿ ಈ ಶಬ್ದವನ್ನು ಸಾಮಾನ್ಯವಾಗಿ ಶಾಲೆಗಳಲ್ಲಿ ಸಿಗುವ ಮಾನಸಿಕ ಶಿಕ್ಷಣಕ್ಕೆ ಅನುಕೂಲವಾದಂಥ ಹಸ್ತಶಿಕ್ಷಣವು ಎಂಬ ಅರ್ಥದಲ್ಲಿ ಉಪಯೋಗಿಸುವರು. ಸ್ಲಾಯಿಡ ಎಂಬದು ಯಾವದೋ ಒಂದು ದೇಶದಲ್ಲಿ ಒಬ್ಬನೇ ಶೋಧಕನು ಹುಡುಕಿ ತೆಗೆದಂಥದಲ್ಲ. ಇದು ಬೇರೆ ಬೇರೆ ಸುಧಾರಿಸಿದ ರಾಷ್ಟ್ರಗಳಲ್ಲಿದ್ದ ಅನೇಕ ಶಿಕ್ಷಣಶಾಸ್ತ್ರಜ್ಞರ, ಹಾಗೂ ಶಿಕ್ಷಕರ ಅನುಭವದಿಂದ ಅತ್ಯುಪಯುಕ್ತವಾದ ಹಸ್ತಶಿಕ್ಷಣವೆಂದು ನಿರ್ಣಯಿಸಲ್ಪಟ್ಟಿದೆ. ಸ್ಲಾಯಿಡವು ಶಿಕ್ಷಣಕ್ಕೆ ಬಹಳ ಅನುಕೂಲವಾಗಿರುವದೆಂಬದನ್ನು ಸ್ವೀಡನದಲ್ಲಿಯ "ನಾಆಸ" ಎಂಬ ಪಟ್ಟಣದ 'ಹರ್ ಆಟೋ ಸಾಲೋಮನ್' ಎಂಬವರು ಜನರಿಗೆ ಸಿದ್ಧಮಾಡಿಕೊಟ್ಟಿದ್ದಾರೆ.

ಸ್ಲಾಯಿಡವೆಂದರೇನೆಂಬದು ಕೆಳಗಿನ ವಿವರಣೆಯಿಂದ ಸ್ಪಷ್ಟವಾಗಿ ತಿಳಿದು ಬರುವದು:—

ಸ್ಲಾಯಿಡವೆಂಬದು ಹತ್ಯಾರಗಳಿಂದ ಮಾಡತಕ್ಕ ಕೆಲಸವು. ಈ ಕೆಲಸವು ಉಪಯೋಗವುಳ್ಳದ್ದೆಂದು ಬಾಲಕರು ನಂಬಿರುವರು. ಹಾಗೂ ಹುಡುಗರಲ್ಲಿ ಸ್ವಾಭಾವಿಕವಾಗಿರುವ ಚಟುವಟಿಕೆಯನ್ನು ಅವರು ಬಲವಾಗಿಯೂ ತಿಳುವಳಿಕೆಯೊಡನೆಯೂ ತೋರ್ಪಡಿಸಲನುವಾಗುವಂತೆ ಈ ಕೆಲಸವು ಸುವ್ಯವಸ್ಥಿತವಾಗಿ ರಚಿಸಲ್ಪಟ್ಟು ಅದರಂತೆ ಆಚರಣೆಗೆ ತರಲ್ಪಡುವದು.

ಸ್ಲಾಯಿಡದಲ್ಲಿ ಸಾಮಾನ್ಯವಾಗಿ ಮೂರು ಭಾಗಗಳನ್ನು ಮಾಡಿರುವರು:—

(೧) ಪೇಪರ್ ಸ್ಲಾಯಿಡ (ದಪ ಕಾಗದದಲ್ಲಿಯ ಕೆಲಸ).
(೨) ವೂಡ್ ಸ್ಲಾಯಿಡ (ಕಟ್ಟಿಗೆಯಲ್ಲಿಯ ಕೆಲಸ)
(೩) ಮೆಟಲ್ ಸ್ಲಾಯಿಡ (ಕಬ್ಬಿಣ-ಹಿತ್ತಾಳಿ ಮುಂತಾದವುಗಳಲ್ಲಿಯ ಕೆಲಸ).

ಈ ಮೂರು ಪ್ರಕಾರಗಳಲ್ಲಿ ಕಟ್ಟಿಗೆಯ ಕೆಲಸವು ಅತ್ಯುತ್ತಮವಾದದ್ದು. ಮೆಟಲ್‌ಸ್ಲಾಯಿಡ ಎಂಬದು ಶಾಲೆಗೆ ಹೋಗಬಹುದಾದ ಚಿಕ್ಕಮಕ್ಕಳ ಶಕ್ತಿಯನ್ನು ಮೀರಿರುವ ಮೂಲಕ ಅದನ್ನು ಶಾಲೆಗಳಲ್ಲಿ ಕಲಿಸುವ ರೂಢಿಯಿಲ್ಲ. ಕಿಂಡರಗಾರ್ಟನ್ನ ಶಿಕ್ಷಣಕ್ರಮವನ್ನು ಹೊಂದಿದಂಥ ಕೋಮಲವಾದ ಬೆರಳುಗಳಿಗೆ ತೆಳುವಾದ ಕಾಗದಗಳ ಸಹಾಯದಿಂ ಕೆಲಸ ಮಾಡುವದು ಚನ್ನಾಗಿ ರೂಢಿಯಾಗಿರುತ್ತದೆ. ಮುಂದೆ ಆ ಹುಡಗರಿಗೆ ದಪ್ಪಕಾಗದಗಳನ್ನು ಕೊಟ್ಟು ಅವುಗಳಿಂದ ಅನೇಕ ಮಾದರಿಗನ್ನು ಮಾಡಿಸುವದು ಪೇಪರ್‌ಸ್ಲಾಯಿಡವೆನಿಸುತ್ತದೆ. ಇದರಲ್ಲಿ ಕತ್ತರಿ ಫೂಟಗಟ್ಟಿಗೆ, ತ್ರಿಕೋಣದ ಪಟ್ಟಿ, ಕಂಪಾಸ ಮುಂತಾದವುಗಳೇ ಮುಖ್ಯವಾದ ಆಯುಧಗಳು. ಈ ಕೆಲಸದಲ್ಲಿ ನಾನಾತರದ ಬಣ್ಣಗಳ ಕಾಗಗಳನ್ನು ಕೊಡುವ ರೂಢಿಯುಂಟು. ಈ ಕೆಲಸವು ನಡೆದ ಕಾಲದಲ್ಲಿ ಪ್ರತಿಯೊಬ್ಬ ಹುಡುಗನು ತನಗೆ ಕೊಟ್ಟ ಕಾಗದವನ್ನು ಸ್ಪರ್ಶೇಂದ್ರಿಯದಿಂದ ಚನ್ನಾಗಿ ಪರೀಕ್ಷಿಸಿ ನುಣುಪಾದ ಭಾಗವನ್ನು ಯಾವಾಗಲೂ ಮೆಲ್ಭಾಗದಲ್ಲಿ ಮಾಡುವದಕ್ಕೆ ಪ್ರಯತ್ನಿಸುತ್ತಾನೆ. ಮಾದರಿಗಾಗಿ ಕೊಟ್ಟ ಆಕೃತಿಯನ್ನು ಮೊದಲು ಕಾಗದದ ಮೇಲೆ ತೆಗೆದು ಅದರ ಗೆರೆಗಳ ಗುಂಟ ಕತ್ತರಿಸಿ ಅದು ಸರಳವಾಗಿರುವದನ್ನು ದೃಷ್ಟಿಯಿಂದಲೂ ಸ್ಪರ್ಶದಿಂದಲೂ ಪರೀಕ್ಷಿಸುವನು. ಆ ಮೇಲೆ ಮಡಿಚ ಬೇಕಾದ ಭಾಗದಲ್ಲಿ ಎಚ್ಚರದಿಂದ ಮಡಿಕೆಯನ್ನು ಹಾಕಿ, ಅಂಟು ಹಚ್ಚಿ ಇಲ್ಲವೆ ದಾರದಿಂದ ಅಂದವಾಗಿ ಕಟ್ಟಿ, ಮಾದರಿಯನ್ನು ತಯಾರಿಸುವನು. ಇವುಗಳಿಂದ ವಿಚಾರಶಕ್ತಿ, ನಿರೀಕ್ಷಣಶಕ್ತಿ, ಕಲ್ಪನಾಶಕ್ತಿ ಮುಂತಾದ ಮಾನಸಿಕ ಶಕ್ತಿಗಳ ವಿಕಾಸವೂ, ಉತ್ಸುಕತೆ, ಲಕ್ಷ್ಯ, ಎಚ್ಚರಿಕೆ, ಪ್ರಾಮಾಣಿಕತನ, ಅಚ್ಚುಕಟ್ಟುತನ ಮುಂತಾದ ಗುಣಗಳ ಬೆಳವಣಿಗೆಯೂ ಆಗುವದಲ್ಲದೆ ಹಸ್ತನೇತ್ರಗಳ ಉಪಯೋಗವು ಬಹಳ ಮಟ್ಟಿಗೆ ಆಗುವದರಿಂದ ಅವುಗಳಲ್ಲಿ ಕೌಶಲ್ಯವು ಬಹಳವಾಗಿ ನೆಲೆಗೊಳ್ಳುವದು. ಕತ್ತರಿಸೋಣ ಮುಂತಾದ ಕೃತಿಗಳಲ್ಲಿ ಪ್ರವೀಣತೆಯೂ, ಹಸ್ತಗಳ ಮಜ್ಜಾತಂತುಗಳನ್ನು ಆಧೀನದಲ್ಲಿಟ್ಟುಕೊಳ್ಳುವ ಶಕ್ತಿಯೂ ಉಂಟಾಗಿ ಹುಡುಗರು ಕೆಲವು ದಿವಸಗಳ ಮೇಲೆ ಬೇಕಾದಂಥ ಕಠಿಣವಾದ ಮಾದರಿಯನ್ನು ಕಾಗದದಿಂದ ಮಾಡುವದಕ್ಕೆ ಶಕ್ತರಾಗುತ್ತಾರೆ.

ಈ ತರದ ಹಸ್ತಶಿಕ್ಷಣವು ಮುಗಿದನಂತರ ಕಾಗದಕ್ಕಿಂತಲೂ ಕಠಿಣವಾದ ಪದಾರ್ಥವನ್ನು, ಅಂದರೆ ಬೇರೆ ಬೇರೆ ಜಾತಿಯ ಕಟ್ಟಿಗೆಯನ್ನು ಹುಡುಗರಿಗೆ ಕೊಟ್ಟು ಅದರಿಂದ ಅವರಿಗೆ ಉಪಯೋಗವಾಗುವಂಥ ಅನೇಕ ಮಾದರಿಗಳನ್ನು ಮಾಡುವದು ವುಡ್ ಸ್ಲಾಯಿಡವೆನಿಸುತ್ತದೆ ಇದರಲ್ಲಿ ಚಾಕು, ಕರಗಸ, ಉಜ್ಜುಗೊರಡು, ಭೈರಂಗಿ, ಕಾಟಕೋನ ಪಟ್ಟಿ, ಖತ್ತು ಮುಂತಾದವುಗಳೇ ಮುಖ್ಯವಾದ ಆಯುಧಗಳು. ಈ ತರದ ಶಿಕ್ಷಣವನ್ನು ಹೊಂದುವ ಹುಡುಗನ ಕೈಯಲ್ಲಿ ಒಂದು ಕಟ್ಟಿಗೆಯ ತುಂಡನ್ನು ಕೊಟ್ಟು, ಅವನ ಮುಂದಿರುವ ಮೇಜಿನ ಮೇಲೆ ಹದನವಾದ ಆಯುಧಗಳನ್ನು ಇಟ್ಟು, ತುಸು ಹೊತ್ತು ನೋಡಿದರೆ ಇದಕ್ಕೂ ಹೆಚ್ಚಿನ ಉತ್ಸುಕತೆಯೂ, ಪರಿಶೋಧಕಬುದ್ಧಿಯೂ, ಚಟುವಟಿಕೆಯೂ ಅವನಲ್ಲಿ ಒಡೆದು ತೋರುವವು. ಹೀಗಿದ್ದಾಗ ಅವನು ಅ ಹದನವಾದ ಆಯುಧಗಳನ್ನು ತೆಗೆದುಕೊಂಡು ಕೋಮಲವಾದ ತನ್ನ ಸ್ವಂತ ಬೆರಳುಗಳನ್ನು ಕೊಯ್ದುಕೊಳ್ಳುವನೆಂದು ತಿಳಿಯುವಿರೋ ? ಅಥವಾ ಕೊಟ್ಟ ಕಟ್ಟಿಗೆಯ ತುಂಡನ್ನು ತೆಗೆದುಕೊಂಡು ಹದನವಾದ ಆಯುಧಗಳಿಂದ ಬೇಕಾದತ್ತ ಕೆತ್ತುವನೆಂದು ತಿಳಿಯುವಿರೋ? ಹಾಗಲ್ಲ. ಅವನು ತನಗೆ ಉಪಯುಕ್ತವಾದ ಹಾಗೂ ಮನೋರಂಜಕವಾದ, ಇಲ್ಲವೆ ತನ್ನ ಬಂಧುಬಳಗದವರಿಗೆ ಉಪಯುಕ್ತವಾದ ಸಾಮಾನವನ್ನು ತಯಾರಿಸಿ ಅತ್ಯಾನಂದವನ್ನು ಹೊಂದುವನು. ಈ ತರದ ಹಸ್ತಶಿಕ್ಷಣದಲ್ಲಿ ಉಪಯುಕ್ತವಾದ ಮಾದರಿಗಳ ಹೊರತು ಬೇರೆ ಯಾವದನ್ನೂ ಮಾಡುವದಿರುವದಿಲ್ಲ. ಕೇವಲ ಕರಗಸವನ್ನು ಅಥವಾ ಉಜ್ಜುಗೊರಡನ್ನು ತೆಗೆದುಕೊಂಡು ಯಾವದೊಂದು ಕಟ್ಟಿಗೆಯನ್ನು ಬರೇ ಕೊಯ್ದು ಅಥವಾ ಉಜ್ಜಿಕೊಡಹೇಳಿದರೆ ಮಾತ್ರ ಆ ಹುಡುಗರಲ್ಲಿ ಎಳ್ಳಷ್ಟಾದರೂ ಉತ್ಸುಕತೆಯು ಉತ್ಪನ್ನವಾಗದೆ ಶಿಕ್ಷಕನ ಆಜ್ಞೆಯ ಮೇರೆಗೆ ನಿಷ್ಕಾಳಜಿಯಿಂದ ಕೊಯ್ಯುತ್ತ, ಇಲ್ಲವೆ ಉಜ್ಜುಗೊರಡು ಹೊಡೆಯುತ್ತ ವೇಳೆ ಮುಗಿಯುವವರೆಗೆ ನಿಂತುಕೊಳ್ಳುವನು. ಆದರೆ "ಇಂಥಾದೊಂದು ಉಪಯುಕ್ತವಾದ ಮಾದರಿಯನ್ನು ತಯಾರಿಸು; ಅದು ನಿನ್ನದೇ ಇರುವದು" ಎಂದು ಹೇಳಿದ ಪಕ್ಷದಲ್ಲಿ ವಿಚಾರಶಕ್ತಿಯನ್ನೂ ನಿರೀಕ್ಷಣಶಕ್ತಿ-ಕಲ್ಪನಾಶಕ್ತಿಗಳನ್ನೂ ಪೂರ್ಣವಾಗಿ ಉಪಯೋಗಿಸಿ ಬಹಳ ಎಚ್ಚರದಿಂದ ಕೊಟ್ಟ ಅಳತೆಗಳಿಗೆ ಸರಿಯಾಗಿ ಮಾದರಿ

ಯನ್ನು ತಯಾರಿಸುವನು. ಈ ರೀತಿಯಾಗಿ ಹುಡುಗರಿಂದ ಕೆಲಸವನ್ನು ಮಾಡಿಸಿ, ಅವರ ಮಾನಸಿಕ, ಶಾರೀರಿಕ, ನೈತಿಕ ಶಕ್ತಿಗಳನ್ನು ಬಲಪಡಿಸುವದೇ ಸ್ಲಾಯಿಡದ ಮುಖ್ಯ ಲಕ್ಷಣವು.

ಸ್ಲಾಯಿಡ ಎಂಬದು ಕೇವಲ ಶಿಕ್ಷಣಕ್ಕೆ ಅನುಕೂಲವಾದ ಕೆಲಸವೆಂದು ಹಿಂದೆ ಹೇಳಿದೆಯಷ್ಟೇ? ಈ ತರದ ಹಸ್ತಶಿಕ್ಷಣವು ಸಾಮಾನ್ಯವಾಗಿ ಶಿಕ್ಷಣದ ಎಲ್ಲ ತತ್ವಗಳಿಗನುಸಾರವಾಗಿದ್ದು, ಶಿಕ್ಷಣದ ಉದ್ದೇಶವೇ ಇದರ ಉದ್ದೇಶವೆಂದು ಹೇಳಬಹುದು. ಆದ್ದರಿಂದ ಈ ವಿಷಯವನ್ನು ಕಲಿಸುವ ಶಿಕ್ಷಕನು ಅತ್ಯುತ್ತಮನಾದ ಶಿಕ್ಷಕನಾಗಿರಬೇಕು; ಚಿಕ್ಕಮಕ್ಕಳ ಸ್ವಭಾವವನ್ನರಿತವನಿರಬೇಕು; ಅವನು ಕೇವಲ ಶಾರೀರಿಕ ಶಕ್ತಿಯನ್ನು ಬಲಪಡಿಸುವದಲ್ಲದೆ ಮಾನಸಿಕ ಶಕ್ತಿಗಳನ್ನೂ ನೈತಿಕ ಶಕ್ತಿಗಳನ್ನೂ ವಿಕಾಸಗೊಳಿಸುವಂಥವನಿರಬೇಕು; ಅವನು ಚಿಕ್ಕಮಕ್ಕಳಲ್ಲಿರಬಹುದಾದ ಅಲ್ಪ ವಿಚಾರಗಳನ್ನು ಪುಷ್ಟೀಕರಿಸಲು ಶಕ್ತನಿರಬೇಕು; ವೃದ್ಧಿಹೊಂದಲು ಸಿದ್ಧವಾದ ಮಜ್ಜಾತಂತುಗಳಿಗೆ ಯುಕ್ತವಾದ ವ್ಯಾಯಾಮವನ್ನು ಕೊಟ್ಟು ಅವುಗಳನ್ನು ಶರೀರದ ಬೆಳವಣಿಗೆಗೆ ಅನುಕೂಲವಾಗಿ ಮಾಡುವವನಿರಬೇಕು; ಮಾನಸಿಕ ಜಾಗರೂಕತೆಯನ್ನೂ ಸರಿಯಾದ ಭಾವವನ್ನೂ ನಿರ್ಮಲವಾದ ಅಭಿರುಚಿಯನ್ನೂ ಅವರಲ್ಲಿ ನೆಲೆಗೊಳಿಸುವದಕ್ಕೆ ಪ್ರಯತ್ನ ಮಾಡುವವನಿರಬೇಕು. ಒಟ್ಟಿನ ಮೇಲೆ, ಈ ತರದ ಕೆಲಸವು ನಡೆದ ಕಾಲದಲ್ಲಿ ಹುಡುಗರು ಕೂಡ್ರುವ, ನಿಲ್ಲುವ ಪದ್ಧತಿಗಳಿಂದಲೂ, ಅವರಲ್ಲಿ ಉತ್ಪನ್ನವಾಗುವ ಉತ್ಸುಕತೆಯಿಂದಲೂ, ಅನೇಕ ಆಯುಧಗಳನ್ನು ಉಪಯೋಗಿಸಿ, ಕೊಟ್ಟ ಅಳತೆಗಳಿಗೆ ಸರಿಯಾಗಿ ಅವರು ಕೆಲಸಮಾಡುವ ಯೋಗ್ಯತೆಯಿಂದಲೂ ಶಿಕ್ಷಕನ ಯೋಗ್ಯತೆಯು ಗೊತ್ತಾಗುವದು. ಸಿದ್ಧವಾದ ಮಾದರಿಗಳನ್ನು ನೋಡಿ ಶಿಫಾರಸು ಮಾಡುವದಕ್ಕಿಂತ ಮೊದಲೇ ಶಿಕ್ಷಕನು ಈ ತರದ ಮಾದರಿಯು ಯಾಕೆ ತಯಾರಿಸಲ್ಪಟ್ಟಿತು, ಮತ್ತು ಹ್ಯಾಗೆ ತಯಾರಿಸಲ್ಪಟ್ಟಿತು? ಎಂಬೀತರದ ಪ್ರಶ್ನಗಳಿಗೆ ವಿದ್ಯಾರ್ಥಿಗಳಿಂದ ಉತ್ತರವನ್ನು ದೊರಕಿಸುವ ಆತುರವುಳ್ಳವನಾಗಿರಬೇಕು. ಉದಾತ್ತಶಿಕ್ಷಣವು ದೊರೆಯದ ಒಬ್ಬ ಕೆಲಸಗಾರನನ್ನು ತಂದು ಈ ತರದ ಹಸ್ತಶಿಕ್ಷಣವನ್ನು ಕೊಡಹೇಳಿದರೆ, ಸ್ಲಾಯಿಡದ ಸುಪರಿಣಾಮಗಳು ಕಂಡುಬಾರದೆ, ಅದರಿಂದ ಕೇವಲ ಅಪಾಯವಾಗಿ, ಆ ತರದ ಹಸ್ತ

ಶಿಕ್ಷಣಕ್ಕೆ ಕುಂದು ಬರುವದು. ಆದ್ದರಿಂದ ಮೇಲೆ ಉಲ್ಲೇಖಿಸಿದ ಗುಣಗಳುಳ್ಳ ಶಿಕ್ಷಕನನ್ನು ಆರಿಸುವದರಲ್ಲಿ ಮಾತ್ರ ಅಧಿಕಾರಿಗಳು ಜಾಗರೂಕರಾಗಿರಬೇಕು.

ಈ ಪ್ರಕಾರ ಸ್ಲಾಯಿಡದ ಮಹತ್ವವನ್ನು ಅದರಲ್ಲಿ ಅಂತರ್ಭೂತವಾದ ಉದ್ದೇಶದಿಂದಲೂ ತತ್ವಗಳಿಂದಲೂ ತಿಳಕೊಳ್ಳಬೇಕು. ಕೇವಲ ಈ ಪದ್ಧತಿಯಿಂದ ತಯಾರಿಸಿದ ಮಾದರಿಗಳನ್ನಷ್ಟೇ ನೋಡಿ, ಅದರ ಕಿಮ್ಮತ್ತು ಕಟ್ಟಬಾರದು.

ಸ್ಲಾಯಿಡದ ತತ್ವಗಳು.

(೧) ಸ್ಲಾಯಿಡದ ಶಿಕ್ಷಣಕ್ರಮವು ಪದ್ಧತಿಗನುಸಾರವಾದದ್ದೂ, ಕ್ರಮವಾಗಿ ಬೆಳವಣಿಗೆಯನ್ನು ಹೊಂದುವಂಥಾದ್ದೂ, ಶಿಕ್ಷಣದ ತತ್ವಗಳನ್ನು ಒಳಕೊಂಡದ್ದೂ ಸಾಧ್ಯವಿದ್ದಮಟ್ಟಿಗೆ ಪ್ರತಿಯೊಬ್ಬ ಹುಡುಗನಿಗೆ ಪ್ರತ್ಯೇಕವಾಗಿ ಕೆಲಸ ಕೊಡುವಂಥಾದ್ದೂ, ಇರತಕ್ಕದ್ದು.

(೨) ಮಾನಸಿಕ ಶಕ್ತಿಗಳನ್ನೂ ಶಾರೀರಿಕ ಶಕ್ತಿಗಳನ್ನೂ ಸರಾಗವಾಗಿ ಉಪಯೋಗಿಸಿ ಬೆಳಿಸುವಂಥ ಕೆಲಸಗಳನ್ನೇ ಇದರಲ್ಲಿ ಆರಿಸಿಕೊಳ್ಳತಕ್ಕದ್ದು.

(೩) ಈ ಶಿಕ್ಷಣದಲ್ಲಿ ಹುಡುಗರು ಮಾಡಿದ ಮಾದರಿಗಳು, ಅವುಗಳ ಸ್ವಚ್ಛತ್ವ, ಸಂಪೂರ್ಣತೆ, ಯೋಗ್ಯವಾದ ಕ್ರಮ ಇವುಗಳನ್ನು ಅನುಲಕ್ಷಿಸಿ, ಉತ್ತಮವಾದವುಗಳು ಅಥವಾ ಕೆಟ್ಟವಾದವುಗಳು ಎಂಬದನ್ನು ನಿರ್ಣಯಿಸತಕ್ಕದ್ದು.

(೪) ಯಾವನೊಬ್ಬ ಹುಡುಗನಿಗೆ ಗೊತ್ತುಮಾಡಿ ಕೊಟ್ಟ ಕೆಲಸದ ಯೋಗ್ಯಾಯೋಗ್ಯತೆಗಳ ಮೇಲಿಂದ ಅವನಲ್ಲಿ ಸ್ವತಂತ್ರವಾಗಿ ವಿಚಾರ ಮಾಡುವ ಹಾಗೂ ಲಕ್ಷ್ಯಪೂರ್ವಕವಾಗಿ ಕೆಲಸ ಮಾಡುವ ಗುಣಗಳನ್ನು ವಿಕಾಸಗೊಳಿಸತಕ್ಕದ್ದು.

(೫) ಹುಡುಗನು ಮಾಡತಕ್ಕ ಎಲ್ಲ ಮಾದರಿಗಳು ಒಂದು ಪೂರ್ಣವಾದ ಪದಾರ್ಥದಿಂದ ಆಗತಕ್ಕಂಥವುಗಳು ಇರತಕ್ಕದ್ದು. ಅಂದರೆ ಅದರಲ್ಲಿ ಬೇರೆ ಬೇರೆ ಅವಯವಗಳನ್ನು ಬೇರೆ ಬೇರೆಯಾಗಿ ಮಾಡತಕ್ಕ ಸಂದರ್ಭವು ಇರಕೂಡದು.

(೬) ಹುಡುಗರು ಮಾಡತಕ್ಕ ಮಾದರಿಗಳಲ್ಲಿ ಹಲವು ಕಂಸಾಕೃತಿಯುಳ್ಳವುಗಳೂ ಹಲವು ಸರಳವಾದ ವ್ಯೈಯುಳ್ಳವುಗಳೂ ಇರತಕ್ಕದ್ದು.

(೭) ಈ ಶಿಕ್ಷಣದಲ್ಲಿ ಹುಡುಗರು ಪ್ರೀತಿಸುವಂಥ, ಹಾಗು ಉಪಯುಕ್ತವಾದಂಥ ಅನೇಕ ಮಾದರಿಗಳು ಇರತಕ್ಕದ್ದು.

(೮) ಸಾಮಾನ್ಯವಾಗಿ ಈ ಶಿಕ್ಷಣದೊಳಗಿನ ಮಾದರಿಗಳಲ್ಲಿ ಒಂದಕ್ಕಿಂತ ಹೆಚ್ಚಾಗಿಯೂ ಐದಕ್ಕಿಂತ ಕಡಿಮೆಯಾಗಿಯೂ, ಹೊಸಕೃತಿಗಳೂ ಆಯುಧಗಳೂ ಇರತಕ್ಕದ್ದು.

ಸ್ಲಾಯಿಡದ ಉದ್ದೇಶಗಳು.

(೧) ಸಾಮಾನ್ಯವಾಗಿ ಎಲ್ಲ ತರದ ಕೆಲಸ ಮಾಡುವದರಲ್ಲಿ ಅಭಿರುಚಿಯನ್ನೂ ಪ್ರೀತಿಯನ್ನೂ ಹುಟ್ಟಿಸುವದು.

(೨) ಉತ್ತಮವಾದ ಶಾರೀರಿಕಶ್ರಮ ಮಾಡುವದರಲ್ಲಿ ಆದರವನ್ನುಂಟು ಮಾಡುವದು.

(೩) ಸ್ವಾವಲಂಬನವನ್ನೂ, ಸ್ವಾತಂತ್ರ್ಯವನ್ನೂ ಪ್ರತಿಯೊಬ್ಬರಲ್ಲಿ ನೆಲೆಗೊಳಿಸುವದು.

(೪) ಕ್ರಮ, ಅಚ್ಚುಕಟ್ಟುತನ, ಸ್ವಚ್ಛತೆ ಮುಂತಾದವುಗಳನ್ನು ವೃದ್ಧಿಗೊಳಿಸುವದು.

(೫) ನೇತ್ರಗಳಿಗೆ ಶಿಕ್ಷಣ ಕೊಟ್ಟು ಪದಾರ್ಥಗಳ ಆಕಾರಜ್ಞಾನವನ್ನು ಮಾಡಿಕೊಡುವದು. ಹಸ್ತಕೌಶಲ್ಯವು ಬಹಳ ಬೆಳೆದು ಸ್ಪರ್ಶೇಂದ್ರಿಯಜ್ಞಾನವು ವಿಕಾಸ ಹೊಂದುವದು.

(೬) ಲಕ್ಷ್ಯ, ಸದುದ್ಯೋಗ, ದೃಢವಾದ ಮನಸ್ಸು, ತಾಳ್ಮೆ ಮುಂತಾದ ಅಮೂಲ್ಯ ಗುಣಗಳ ಸಾಧನ ಮಾಡಿಕೊಡುವದು.

(೭) ಶಾರೀರಿಕಶಕ್ತಿಗಳನ ಬೆಳವಣಿಗೆಯನ್ನು ಪೂರೈಸಿ ಕೊಡುವದು.

(೮) ಆಯುಧಗಳ ತಕ್ಕ ಉಪಯೋಗವನ್ನು ಮಾಡಲಿಕ್ಕೆ ಬರುವಷ್ಟು ಕುಶಲತೆಯನ್ನುಂಟು ಮಾಡುವದು.

(೯) ಸರಿಯಾದ ಕೆಲಸ ಮಾಡುವಷ್ಟು ಸಾಮರ್ಥ್ಯವನ್ನುಂಟು ಮಾಡುವದು.

ಈ ಎಲ್ಲ ಉದ್ದೇಶಗಳು ಈ ತರದ ಹಸ್ತಶಿಕ್ಷಣದಲ್ಲಿರುವದರಿಂದ ಅವು ಪೂರ್ಣವಾಗಿ ನೆರವೇರಿ, ಮಾನಸಿಕ, ಶಾರೀರಿಕ, ನೈತಿಕ ಸಂಬಂಧದ ಅನೇಕ ಸಂಗತಿಗಳು ಕೈಗೂಡುವ ಕಾರಣ, ಶಿಕ್ಷಣದ ಉದ್ದೇಶವೇ ಇದರಿಂದಲೂ ಫಲಿಸುವದೆಂದು ಸ್ಪಷ್ಟವಾಗುತ್ತದೆ.

ಸ್ಲಾಯಿಡದ ಸುಪರಿಣಾಮಗಳು.

ಸ್ಲಾಯಿಡವು ಶಾಲೆಗಳಲ್ಲಿ ನಡೆಯುಬಹುದಾದ ಔಪಪತ್ತಿಕಭಾಗವನ್ನೂ ಕಾರಖಾನೆಗಳಲ್ಲಿ ನಡೆಯುಬಹುದಾದ ಕರ್ತವ್ಯಭಾಗವನ್ನೂ ಒಟ್ಟುಗೂಡಿಸುವ ಸಾಧನವಾಗಿರುವದು. ಇಲ್ಲಿಯ ಆಯುಧಗಳೇ ಪುಸ್ತಕಗಳು; ಇಲ್ಲಿ ತೆಯಾರಿಸಲ್ಪಡುವ ವಸ್ತುಗಳ ನಿಜವಾದ ಸ್ವರೂಪವೇ ಅಲ್ಲಿಯ ತಾತ್ವಿಕ ನಿಯಮಗಳು. ಸ್ಲಾಯಿಡ ಎಂಬ ಹಸ್ತಶಿಕ್ಷಣ ಹೊಂದುವ ವಿದ್ಯಾರ್ಥಿಗೆ ಮೊದಲು ಕೈಕೆಲಸ ಮಾಡಿದನಂತರ ಮಿದುಳಿನ ಕೆಲಸ ಮಾಡುವ ಪ್ರಸಂಗ ಬರುವದರಿಂದಲೂ, ಈ ರೀತಿಯಾಗಿ ಸಾಕಷ್ಟು ವಿಶ್ರಾಂತಿಯು ಸಿಗುವದರಿಂದಲೂ, ಅವನು ಸೋಮಾರಿಯಾಗುವದಿಲ್ಲ. ಸ್ಲಾಯಿಡದಲ್ಲಿ ಕೇವಲ ಕೈಯಿಂದಲೇ ಹಲವು ಆಕೃತಿಗಳನ್ನು ತೆಗೆಯಬೇಕಾಗುವದರಿಂದ ಹಸ್ತ-ನೇತ್ರಗಳಿಗೆ ಉತ್ತಮವಾದ ಶಿಕ್ಷಣ ಸಿಗುವದು. ಬಡಿಗಗಸ್ಪದಲ್ಲಿ ಕಂಡುಬರುವ ಯಾಂತ್ರಿಕ ಸಹಾಯವೂ, ಶ್ರಮ ಉಳಿಸುವ ಯುಕ್ತಿಗಳೂ ಈ ತರದ ಕೆಲಸದಲ್ಲಿ ಕಂಡುಬರುವದಿಲ್ಲ. ಆರೋಗ್ಯರಕ್ಷಣೆಗೂ, ದೇಹದ ಬೆಳವಣಿಗೆಗೂ, ಅಡ್ಡಬರುವಂಥ ಅಸಹ್ಯವಾದ ಚಲನವಲನಗಳೂ, ಶರೀರಕ್ಕೆ ಅಪಾಯಕರವಾದ ಕೂಡ್ರೋಣ, ನಿಲ್ಲೋಣ ಮುಂತಾದವುಗಳೂ ಇರುವದಿಲ್ಲ. ಕೈಕೆಲಸದ ವಿಷಯದಲ್ಲಿಯೂ ಶಾರೀರಿಕಶ್ರಮದ ವಿಷಯದಲ್ಲಿಯೂ ಯಾವ ತರದ ತಿರಸ್ಕಾರಬುದ್ಧಿಯೂ ಉತ್ಪನ್ನವಾಗದೆ, ಶೋಧಕ ಬುದ್ಧಿಯು ಮಾತ್ರ ಇದರಿಂದ ಹೆಚ್ಚಾಗುತ್ತದೆ. ಸ್ಲಾಯಿಡ ಶಿಕ್ಷಣವನ್ನು ಹೊಂದತಕ್ಕ ವಿದ್ಯಾರ್ಥಿಗಳು ಚಲೋ ಕೆಲಸಕ್ಕೆ ಮೆಚ್ಚುವವರೂ, ಉಪಯುಕ್ತರಾದ ನಾಗರಿಕರೂ ಆಗುವರು. ಸ್ಲಾಯಿಡವು ಹಸ್ತ-ನೇತ್ರಗಳನ್ನೂ, ಮನಸ್ಸನ್ನೂ, ಏಕಕಾಲಕ್ಕೆ ವಿಕಾಸಗೊಳಿಸುವದರಿಂದ, ಇದು ಸಾಮಾನ್ಯ ಶಾಲೆಗಳಲ್ಲಿ ದೊರೆಯುಬಹುದಾದ ಶಿಕ್ಷಣಕ್ಕೆ ಒಳ್ಳೇ ಅನುಕೂಲವಾಗಿರುವದು.

ಸರಾಸರಿ ಮೂವತ್ತು ವರ್ಷಗಳ ಹಿಂದೆ ಈ ತರದ ಹಸ್ತಶಿಕ್ಷಣವು ಸ್ವೀಡನ್ನದಲ್ಲಿ ನಾಅಸ ಎಂಬ ಪಟ್ಟಣದಲ್ಲಿ ಪ್ರಾರಂಭವಾಯಿತು. ಹರ ಆಟೋ ಸಾಲೋಮನ್ ಎಂಬವನು ಇದರ ಮುಖ್ಯ ಉತ್ಪಾದಕನು. ಇಲ್ಲಿಂದ ಈ ತರದ ಶಿಕ್ಷಣವು ಅಮೇರಿಕಾ, ಜರ್ಮನಿ, ಫ್ರಾನ್ಸ, ಇಂಗ್ಲಂಡ ಮುಂತಾದ ಅನೇಕ ಸುಧಾರಿಸಿದ ರಾಷ್ಟ್ರಗಳಲ್ಲಿ ನೆಲವೂರಿ ೭-೮ ವರ್ಷಗಳ ಹಿಂದೆ ಹಿಂದುಸ್ತಾನದಲ್ಲಿಯದೊಂದು ಸಂಸ್ಥಾನದ (ಮೈಸೂರ) ಆಶ್ರಯವನ್ನು ಪಡೆಯಿತು. ಈಗ ನಮ್ಮ ದಯಾಳು ಮುಂಬಯಿ ಸರಕಾರದವರು ಈ ತರದ ಹಸ್ತಶಿಕ್ಷಣದ ಉದ್ದೇಶಗಳನ್ನೂ ಅದರಿಂದುಂಟಾಗಬಹುದಾದ ಲಾಭಗಳನ್ನೂ ಲಕ್ಷ್ಯಕ್ಕೆ ತಂದು ಈ ಇಲಾಖೆಯಲ್ಲಿಯ ಎಲ್ಲ ಸರಕಾರಿ ಹಾಯಸ್ಕೂಲಗಳಲ್ಲಿಯೂ ಟ್ರೇನಿಂಗ ಕಾಲೇಜಗಳಲ್ಲಿಯೂ ಈ ವಿಷಯವನ್ನು ಮಾನಸಿಕ ಶಿಕ್ಷಣಕ್ಕೆ ಅನುಕೂಲವಾಗುವ ಅನೇಕ ವಿಷಯಗಳಂತೆಯೇ ಕಲಿಸುವ ವ್ಯವಸ್ಥೆಯನ್ನು ಮಾಡಹತ್ತಿದ್ದಾರೆ. ಸಾಕಷ್ಟು ಶಿಕ್ಷಕರನ್ನು ತಯಾರಿಸುವದಕ್ಕೆ ಧಾರವಾಡದಲ್ಲಿ ಒಂದು ಸ್ಲಾಯಿಡ ಶಿಕ್ಷಕರ ಟ್ರೇನಿಂಗಕ್ಲಾಸನ್ನು ಸ್ಥಾಪಿಸಿದ್ದಾರೆ. ಅಲ್ಲಿ ಶಿಕ್ಷಕರು ತಯಾರಾದ ಹಾಗೆ ಆಯಾ ಶಾಲೆಗಳಲ್ಲಿ ಈ ತರದ ಹಸ್ತಶಿಕ್ಷಣವು ಪ್ರಾರಂಭವಾಗುವದು.

B. S. Purohit.

ಹಿಂದೂ ಸಮಾಜದೊಳಗಿನ ವಿವಾಹ ಪದ್ಧತಿಯೂ ಸ್ತ್ರೀಯರ ಯೋಗ್ಯತೆಯೂ.

ಪ್ರಕೃತ ವಿಷಯದಲ್ಲಿರುವ ಎರಡೂ ಭಾಗಗಳು ಪರಸ್ಪರ ನಿಕಟ ಸಂಬಂಧವುಳ್ಳವುಗಳಾಗಿದ್ದರೂ ಮೇಲೆ ಹೇಳಿದ ಕ್ರಮದಂತೆ ಮೊದಲು ನಮ್ಮ ಸಮಾಜದಲ್ಲಿ ರೂಢವಾಗಿರುವ ವಿವಾಹ ಪದ್ಧತಿಗಳ ಸಂಬಂಧದ ಕೆಲವು ವಿಚಾರಗಳನ್ನು ಹೇಳಿ, ಆ ಮೇಲೆ ಎರಡನೇ ಭಾಗದ ಸಂಬಂಧದಿಂದ ವಿಚಾರ ಮಾಡುವೆವು. ಈ ವಿಷಯಗಳಲ್ಲಿ ನಮ್ಮ ಸಮಾಜದ ಮುಂದಾಳುಗಳೆನ್ನಿಸಿಕೊಂಡವರಲ್ಲಿ ಮತ್ತೈಕ್ಯವಿಲ್ಲ; ಅನೇಕರು ಅನೇಕ ರೀತಿಯಾಗಿ ಅಭಿಪ್ರಾಯ ಪಡುವರು. ಆ ಎಲ್ಲ ಭಿನ್ನಭಿನ್ನ ಅಭಿಪ್ರಾಯಗಳನ್ನು

ಚರ್ಚಿಸಲು ಪ್ರಕೃತಕ್ಕೆ ಅವಕಾಶವಿಲ್ಲದಿರುವದರಿಂದ ವಿವಾಹಸಂಸ್ಥೆಯ ಐತಿಹಾಸಿಕ ವಿಚಾರವನ್ನೂ ಆ ಸಂಬಂಧದ ಸಮಾಜಶಾಸ್ತ್ರದ ನಿಯಮಗಳನ್ನೂ ಮಾತ್ರ ಇಲ್ಲಿ ಹೇಳುವೆವು.

ಸಮಾಜರಚನೆಯ ಅಸ್ತಿವಾರವು ವಿವಾಹಸಂಸ್ಥೆಯು. ಅರಿಸ್ಟಾಟಲನು, ಸಮಾಜವು ಕುಟುಂಬದಿಂದ ಉದಯ ಹೊಂದುವದೆಂತಲೂ ಕುಟುಂಬ ಉಂಟಾಗಲಿಕ್ಕೆ ವಿವಾಹಸಂಸ್ಥೆಯೇ ಕಾರಣವಾಗಿರುವದೆಂತಲೂ ಹೇಳಿರುವನು. ಸಮಾಜಶಾಸ್ತ್ರದ ದೃಷ್ಟಿಯಿಂದ ವಿವಾಹಸಂಸ್ಥೆಯು ಅತಿ ಮಹತ್ವದ್ದಾಗಿರುವದು. ಹಾಗು ಈ ಕಾರಣದಿಂದಲೇ ಸಮಾಜಶಾಸ್ತ್ರದಲ್ಲಿ ವಿವಾಹಸಂಸ್ಥೆಯ ವಿಷಯವಾಗಿ ಒಂದು ಸ್ವತಂತ್ರವಾದ ಶಾಖೆಯೇ ಉಂಟಾಗಿದೆ.

ಜಗತ್ತಿನೊಳಗಿನ ಎಲ್ಲ ದೇಶಗಳಲ್ಲಿಯೂ ಎಲ್ಲ ಸಮಾಜಗಳಲ್ಲಿಯೂ ಯಾವಾಗಲೂ ವಿವಾಹಸಂಸ್ಥೆಗೆ ವಿಶೇಷ ಮಹತ್ವವನ್ನು ಕೊಡುವರೆಂಬದು ಆಯಾ ದೇಶಗಳ ಸಮಾಜಗಳ ಸೂಕ್ಷ್ಮ ನಿರೀಕ್ಷಣೆಯಿಂದ ಕಂಡು ಬರುವದು. ಸಮಾಜದಲ್ಲಿ ಸುಧಾರಣೆಗೆ ಆರಂಭವಾದ ಕೂಡಲೆ ಅವರು ವಿವಾಹಸಂಸ್ಥೆಗೆ ಕೆಲವು ಧಾರ್ಮಿಕ ವಿಧಿಗಳನ್ನು ಜೋಡಿಸಿ ಅದಕ್ಕೆ ಹೆಚ್ಚು ಪವಿತ್ರ ಸ್ವರೂಪವನ್ನು ಕೊಟ್ಟಿರುವರೆಂಬದು ಎಲ್ಲ ಸಮಾಜಗಳ ಇತಿಹಾಸದ ಅಧ್ಯಯನದಿಂದ ತಿಳಿದು ಬರುವದು. ಒಂದಿಲ್ಲೊಂದು ತರದ ಧಾರ್ಮಿಕ ವಿಧಿಗಳನ್ನು ಜರುಗಿಸಿದ ಹೊರತು ಲಗ್ನವು ಯಾವ ಸಮಾಜದಲ್ಲಿಯೂ ಸರ್ವಸಮ್ಮತವಾದದ್ದಾಗುವದಿಲ್ಲ.

ಹಿಂದಿನ ಸಮಾಜಶಾಸ್ತ್ರಜ್ಞರು ಸಮಾಜದಲ್ಲಿ ವಿವಾಹಕ್ರಮವು ಪ್ರಚಾರದಲ್ಲಿ ಇಲ್ಲದೆ ಇದ್ದು, ಅಂದರೆ ಸ್ತ್ರೀಪುರುಷರು ದನಗಳಂತೆ ಸ್ವೇಚ್ಛಾವಿಹಾರಿಗಳಾಗಿದ್ದ ಒಂದು ಕಾಲವು ಆಗಿಹೋಗಿರುವದೆಂದು ತಿಳಿದಿದ್ದರು. ಆದರೆ ಈ ವಿಚಾರವನ್ನು ಸಾಂಪ್ರತದ ಸಮಾಜಶಾಸ್ತ್ರಜ್ಞರು ಸಮ್ಮತಿಸುವದಿಲ್ಲ. ಅವರು ಹೇಳುವದೇನಂದರೆ, "ಸ್ತ್ರೀಪುರುಷರು ಮನಬಂದಂತೆ ವ್ಯವಹಾರ ಮಾಡುವದು ಸಮಾಜದ ಲೋಕಸಂಖ್ಯೆಯ ಬೆಳವಣಿಗೆಗೆ ಅತ್ಯಂತ ಘಾತಕವಾಗಿರುವದೆಂಬದು ಉತ್ಕ್ರಾಂತಿತತ್ವದ ವಿಚಾರದಿಂದ ಗೊತ್ತಾಗುವದು. ಹಾಗು ಮನುಷ್ಯಪ್ರಾಣಿಯು

ಜನ್ಮತಃ ದುರ್ಬಲವಾಗಿರುವದರಿಂದ ಇತರ ಪ್ರಾಣಿಗಳಿಂದ ಸಂತತಿಯನ್ನು ಸಂರಕ್ಷಿಸಲಿಕ್ಕೂ ಬೆಳಿಸಲಿಕ್ಕೂ ತಂದೆ ತಾಯಿಗಳ ಅವಶ್ಯಕತೆಯು ಇದ್ದೇ ಇರುವದು. ಆದರೆ ಸಮಾಜದ ಆರಂಭದ ಸ್ಥಿತಿಯಲ್ಲಿ ವಿವಾಹವು ಕೆಲವೊಂದು ನಿಶ್ಚಿತವಾದ ರೀತಿಯಿಂದ ನಡೆದು ಧಾರ್ಮಿಕ ದೃಷ್ಟಿಯಿಂದ ಸ್ಥಿರವಾಗಿ ನಡೆಯುತ್ತಿತ್ತೆಂದು ಮಾತ್ರ ತಿಳಿಯಲಾಗದು. ಕೇವಲ ಪತಿ ಪತ್ನಿಯರು ಕೂಡಿ ಉಳಿದು ಕುಟುಂಬವು ಅಸ್ತಿತ್ವದಲ್ಲಿ ಬರುವ ಮಟ್ಟಿಗೆ ಮಾತ್ರ ಈ ವಿವಾಹಸಂಬಂಧವು ಕಾರಣವಾಗಿತ್ತೆಂದು ಹೇಳಬಹುದು. ಮನುಷ್ಯೇತರ ಪ್ರಾಣಿಗಳಲ್ಲಿಯೂ ಈ ತರದ ಸಂಬಂಧವು ಕೆಲವು ಕಾಲದ ವರೆಗೆ ನಡೆಯುವದೆಂಬದು ಶೋಧದಿಂದ ಗೊತ್ತಾಗಿದೆ. ಪಕ್ಷಿಗಳಲ್ಲಿ ಅನೇಕ ಜಾತಿಯ ಪಕ್ಷಿಗಳು ಪತಿಪತ್ನೀಭಾವವನ್ನು ಅರಿತು ನಡೆಯುವವು; ಇಷ್ಟೇ ಅಲ್ಲ, ಕೆಲವು ಪ್ರಕಾರದ ಪಕ್ಷಿಗಳು ಏಕಪತ್ನೀವ್ರತವನ್ನು ಸಹ ಪಾಲಿಸುವವೆಂದು ಪಕ್ಷಿಗಳನ್ನು ವಿಶೇಷವಾಗಿ ನಿರೀಕ್ಷಿಸಿದ ಜನರು ಹೇಳುವರು. ಮರ್ಕಟಗಳು ಪತಿಪತ್ನೀಭಾವವನ್ನು ಅರಿತು ನಡೆಯುವವು; ಹಾಗು ಅವುಗಳಲ್ಲಿ ಹೆಣ್ಣುಗಂಡುಗಳು ಕೂಡಿ ವಾಸಿಸುವವು. ಇದರ ಮೇಲಿಂದ ವಿವಾಹ ಸಂಬಂಧವು ನಡೆಯದೆ ಇದ್ದ ಕಾಲವು ಸಮಾಜದ ಇತಿಹಾಸದಲ್ಲಿ ಬಹುಶಃ ಬಂದಿರಲಿಕ್ಕಿಲ್ಲವೆಂದು ಊಹಿಸಬಹುದು.

ಮೊಟ್ಟಮೊದಲು ಒಂದೇ ಕುಟುಂಬದೊಳಗಿನ ಗಂಡು ಹೆಣ್ಣುಗಳು ಪತಿಪತ್ನೀಭಾವದಿಂದ ನಡೆದು ದೊಡ್ಡ ದೊಡ್ಡ ಮನೆತನಗಳುಂಟಾದವೆಂತಲೂ, ಇಂಥ ಅನೇಕ ಮನೆತನಗಳು ಕೂಡಿ ಬೇರೆ ಬೇರೆ ಜಾತಿಗಳುಂಟಾದವೆಂತಲೂ ಸಮಾಜಶಾಸ್ತ್ರಜ್ಞರು ಹೇಳುವರು. ಮುಂದೆ ಬರಬರುತ್ತ ಸುಧಾರಣೆಯಾಗಿ ಜನರಲ್ಲಿ ಅಗಮ್ಯಗಮನಾದಿ ವಿಚಾರಗಳುಂಟಾದ ಬಳಿಕ ಒಂದೇ ಮನೆತನದೊಳಗಿನ ಗಂಡು ಹೆಣ್ಣುಗಳಲ್ಲಿ ವಿವಾಹವು ನಡೆಯಕೂಡದೆಂದು ನಿರ್ಣಯವಾಯಿತು. ಹಾಗು ಎರಡನೇ ಕುಟುಂಬದೊಳಗಿನ ಹೆಣ್ಣುಗಳನ್ನು ಓಡಿಸಿಕೊಂಡು ತಂದು ಮದುವೆಯನ್ನು ಮಾಡಿಕೊಳ್ಳುವ ರೂಢಿಯು ಉಂಟಾಯಿತು. ಇದಕ್ಕೆ ರಾಕ್ಷಸ ವಿವಾಹವೆನ್ನುವರು. ಕ್ಷತ್ರಿಯ-ಮರಾಠಾ ಜಾತಿಯವರಲ್ಲಿ ಲಗ್ನದಲ್ಲಿ ವರನ ಬಳಿಯಲ್ಲಿ ಒಂದು ಶಸ್ತ್ರವನ್ನು ಇಟ್ಟಿರುವ ರೂಢಿಯು ಈಗಲೂ

ಇರುವದು. ಇದು ಈ ರಾಕ್ಷಸವಿವಾಹ ಪದ್ಧತಿಯ ಅವಶೇಷವೆಂದು ಹೇಳುವದುಂಟು.

ಮುಂದೆ ಕೆಲಕಾಲದ ಮೇಲೆ ಸಮಾಜದಲ್ಲಿ ಪ್ರೇಮ, ಮಿತ್ರತ್ವ ಮುಂತಾದ ಗುಣಗಳು ಬೆಳವಣಿಗೆಯನ್ನು ಹೊಂದಿದ ಬಳಿಕ ಈ ರೀತಿಯಾಗಿ ಕಪಟ-ಬಲಾತ್ಕಾರಗಳನ್ನು ಅವಲಂಬಿಸಿರುವ ರಾಕ್ಷಸವಿವಾಹ ಪದ್ಧತಿಯು ಅವರಿಗೆ ತಾಜ್ಯವಾಗಿ ತೋರಿತು. ಹಾಗು ಕನ್ಯೆಯ ತಂದೆಗೆ ಹಣಕೊಟ್ಟು ಕನ್ಯೆಯನ್ನು ಕೊಂಡುಕೊಂಡು ವಿವಾಹ ಮಾಡಿಕೊಳ್ಳುವ ಪದ್ಧತಿಯು ಪ್ರಚಾರದಲ್ಲಿ ಬಂದಿತು. ಇದಕ್ಕೇ ಆರ್ಷ ವಿವಾಹವೆನ್ನುವರು.

ಸಮಾಜದಲ್ಲಿ ವಿಶೇಷ ಸುಧಾರಣೆಯುಂಟಾದ ಬಳಿಕ, ಅಂದರೆ ವಾತ್ಸಲ್ಯಾದಿ ಸದ್ಗುಣಗಳು ತಲೆದೋರಿದ ಬಳಿಕ, ಹೊಟ್ಟೆಯ ಮಕ್ಕಳನ್ನು ದನಕರುಗಳಂತೆ ಮಾರಿ ಹಣ ಗಳಿಸುವ ವಿಚಾರವು ತಂದೆ ತಾಯಿಗಳಿಗೆ ಅಸಹ್ಯವಾಗಿ ತೋರಹತ್ತಿದ್ದರಿಂದ ಈ ಆರ್ಷವಿವಾಹ ಪದ್ಧತಿಯು ನಿಂತುಹೋಯಿತು; ಹಾಗು ವಿವಾಹ ಕಾಲದಲ್ಲಿ ಮಗಳಿಗೂ ಅಳಿಯನಿಗೂ ತಕ್ಕ ಅಲಂಕಾರಾದಿಗಳನ್ನು ಕೊಟ್ಟು ಮದುವೆ ಮಾಡಿಕೊಡುವ ರೂಢಿಯು ಪ್ರಚಾರದಲ್ಲಿ ಬಂದಿತು. ಈ ಸಾಲಂಕಾರ ಕನ್ಯಾದಾನ ಪದ್ಧತಿಯೇ ಬೆಳೆ ಬೆಳೆದು ವಿಪರೀತವಾಗಿ ನಮ್ಮ ಸಮಾಜದೊಳಗಿನ ಸಾವಿರ ಸಾವಿರ ರೂಪಾಯಿಗಳನ್ನು ವರದಕ್ಷಿಣೆಯೆಂದು ಕೊಟ್ಟು ಕನ್ಯಾಪಿತನು ಅಳಿಯನನ್ನು ಕೊಂಡುಕೊಳ್ಳುವ ದುಷ್ಟ ಪದ್ಧತಿಯಾಗಿ ಪರಿಣಮಿಸಿರುವದು.

ಕುಟುಂಬರಚನೆಯ ದೃಷ್ಟಿಯಿಂದ ವಿಚಾರ ಮಾಡಿದರೆ, ವಿವಾಹದಲ್ಲಿ (೧) ಏಕ ಪತ್ನೀತ್ವ ಅಥವಾ ಏಕ ಪತೀತ್ವ, (೨) ಬಹು ಪತ್ನೀತ್ವ, (೩) ಬಹು ಪತೀತ್ವ ಎಂಬ ಮೂರು ಬೇರೆ ಬೇರೆ ಪ್ರಕಾರಗಳು ಕಂಡು ಬರುವವು. ಬಹು ಪತೀತ್ವವು, ಅಂದರೆ ಒಬ್ಬ ಹೆಂಗಸು ಅನೇಕ ಮಂದಿ ಗಂಡಸರನ್ನು ಮದುವೆ ಮಾಡಿಕೊಳ್ಳುವ ಪ್ರಕಾರವು ಕೆಲವು ವಿಶೇಷ ಪ್ರಸಂಗಗಳಲ್ಲಿ ಮಾತ್ರ ಕಂಡುಬರುವದು. ಆದರೆ ಬಹು ಪತ್ನೀತ್ವವು, ಅಂದರೆ ಒಬ್ಬ ಗಂಡಸು ಅನೇಕ ಮಂದಿ ಹೆಂಗಸರನ್ನು ಮದುವೆ ಮಾಡಿಕೊಳ್ಳುವ ರೂಢಿಯು ಮಾತ್ರ ಸಮಾಜದಲ್ಲಿ ಮೊದ

ಮೊದಲು ಪ್ರಚಾರದಲ್ಲಿ ಇತ್ತೆಂದು ಇತಿಹಾಸದಿಂದ ಗೊತ್ತಾಗುವದು, ಇದಕ್ಕೆ ಆಗಿನ ಕಾಲದ ಪರಿಸ್ಥಿತಿಯೆ ಕಾರಣವು. ಸ್ತ್ರೀಯಳನ್ನು ಬಲಾತ್ಕಾರದಿಂದ ಅಪಹರಿಸುವದು ನ್ಯಾಯವೆಂದು ತಿಳಿಯಲ್ಪಡುತ್ತಿದ್ದದರಿಂದ, ಅಂಥ ಅಪಹೃತಳಾದ ಸ್ತ್ರೀಯಳ ಸ್ವಾತಂತ್ರ್ಯ ವಿಚಾರವಂತೂ ಉಳಿಯಲೇ ಇಲ್ಲ. ಮೇಲಾಗಿ ಈ ರೀತಿಯಾಗಿ ಸ್ತ್ರೀಯಳನ್ನು ಅಪಹರಿಸುವದು ಗಂಡಸರ ಶೌರ್ಯದ ದ್ಯೋತಕವೆಂಬ ವಿಚಾರವು ಸಮಾಜದಲ್ಲಿ ಇತ್ತು; ಹಾಗು ಸ್ತ್ರೀಯರನ್ನು ದಾಸಿಯರಂತೆ ನಡಿಸಿಕೊಳ್ಳುತ್ತಿದ್ದದರಿಂದ ಆದಷ್ಟು ಹೆಚ್ಚು ಜನರಿದ್ದರೆ ಯಜಮಾನನಿಗೆ ಹೆಚ್ಚು ಸಹಾಯವಾಗುವದರಿಂದ, ಅವನು ಆದಷ್ಟು ಹೆಚ್ಚು ಹೆಂಗಸರನ್ನು ಮದುವೆ ಮಾಡಿಕೊಳ್ಳಲಿಕ್ಕೆ ಯತ್ನಿಸುತ್ತಿದ್ದನು. ಈ ಎಲ್ಲ ಕಾರಣಗಳಿಂದಲೂ, ಸ್ತ್ರೀಯಳು ಪುರುಷನ ಒಂದು ಪ್ರಕಾರದ ಸ್ವತ್ತೆಂದು ತಿಳಿಯಲ್ಪಡುತ್ತಿದ್ದದರಿಂದಲೂ ಬಹು ಪತ್ನೀತ್ವವು ರಾಕ್ಷಸ ಹಾಗು ಆರ್ಷ ವಿವಾಹ ಪದ್ಧತಿಗಳು ನಷ್ಟವಾದಮೇಲೆ ಸಹ ಸಮಾಜದಲ್ಲಿ ಬಹುಕಾಲದ ವರೆಗೆ ಉಳಿಯಲಿಕ್ಕೆ ಕಾರಣವಾಯಿತು.

ಇಲ್ಲಿಯುವರೆಗೆ ವಿವರಿಸಿದ ಎಲ್ಲ ಬಗೆಯ ವಿವಾಹ ಪದ್ಧತಿಗಳಲ್ಲಿ ಸ್ತ್ರೀಯರ ಮೇಲೆ ಪುರುಷರ ಅಪ್ರತಿಹತವಾದ ಸತ್ತೆಯು ಇದ್ದೇ ಇರುವದು. ಮಗಳು ತಂದೆಯ ಸ್ವತ್ತೆಂದು ತಿಳಿಯಲ್ಪಡುವಳು. ಅವಳನ್ನು ಆತನ ಕಡೆಯಿಂದ ಬಲಾತ್ಕಾರದಿಂದ ಅಪಹರಿಸಿಕೊಂಡಾಗಲಿ, ಹಣ ಕೊಟ್ಟು ಕೊಂಡುಕೊಂಡಾಗಲಿ ವರನು ಮದುವೆ ಮಾಡಿಕೊಳ್ಳುವನು; ಇಲ್ಲವೆ ತಂದೆಯು ತನ್ನ ಮನಬಂದವನಿಗೆ ಅವಳನ್ನು ದಾನಮಾಡಿ ಬಿಡುವನು ಈ ಮೂರು ಪ್ರಕಾರದ ವಿವಾಹಗಳಲ್ಲಿ ಕನ್ಯೆಯ ಸಮ್ಮತಿಯ ಇಲ್ಲವೆ ಅಸಮ್ಮತಿಯ ಸಂಬಂಧದ ಯಾವ ವಿಚಾರವೂ ಇರುವದಿಲ್ಲ. ಆದರೆ ಸಮಾಜವು ಇನ್ನೂ ಹೆಚ್ಚು ಪ್ರಗತಿಯನ್ನು ಹೊಂದಿದ ಬಳಿಕ, ಅಂದರೆ ನೀತಿವಿಷಯಕ ಕಲ್ಪನೆಗಳೂ ಪ್ರೇಮಾದಿ ಮನೋವಿಕಾರಗಳೂ ಸಮಾಜದಲ್ಲಿ ಹೆಚ್ಚು ಜಾಗ್ರತವಾದ ಬಳಿಕ, ಮೇಲೆ ಹೇಳಿದ ಸಾಲಂಕಾರ ಕನ್ಯಾದಾನದ ಪದ್ಧತಿಯಲ್ಲಿಯೂ ಸುಧಾರಣೆಯಾಗಿ ಕನ್ಯೆಯ ಮೇಲಿನ ತಂದೆಯ ಅಧಿಕಾರವು ಕಡಿಮೆಯಾಗಿ ಸ್ವಯಂವರ ಪದ್ಧತಿಯು ಪ್ರಚಾರದಲ್ಲಿ ಬಂದಿತು

ಸ್ವಯಂವರ ಪದ್ಧತಿಯಿಂದ ಆಗುವ ವಿವಾಹವು ಪರಸ್ಪರರ ಸಮ್ಮತಿಯಿಂದಲೂ ಪರಸ್ಪರರ ಪ್ರೀತಿಯಿಂದಲೂ ಆಗುವದು. ಇದರಲ್ಲಿ ತಂದೆ ತಾಯಿಗಳ ಸಮ್ಮತಿಯು ಕೇವಲ ಔಪಚಾರಿಕವಾದದ್ದಿರುವದು; ಹಾಗು ಇದರೊಳಗಿನ ವಧೂವರರು ಪ್ರೌಢರಿರುವದರಿಂದ ಸಮಾಜದಲ್ಲಿ ಏಕಪತ್ನೀವ್ರತವು ಪ್ರಚಾರದಲ್ಲಿ ಬರಲಿಕ್ಕೆ ಕಾರಣವಾಗುವದು.

ಸಮಾಜ ಶಾಸ್ತ್ರವನ್ನು ಅನುಸರಿಸಿ ಸಮಾಜದೊಳಗಿನ ವಿವಾಹ ಪದ್ಧತಿಯಲ್ಲಿ ಕ್ರಮವಾಗಿ ಆಗುತ್ತ ಬಂದ ಸುಧಾರಣೆಯ ಬೇರೆ ಬೇರೆ ಮೆಟ್ಟಿಗಳ ವಿವೇಚನವು ಇಲ್ಲಿಗೆ ಮುಗಿದಂತಾಯಿತು. ಸಾರಾಂಶವೇನಂದರೆ, ಸಮಾಜದಲ್ಲಿ ಸ್ತ್ರೀಪುರುಷರ ಸ್ವೇಚ್ಛಾವಿಹಾರಕ್ರಮವು ಎಂದೂ ಇದ್ದಿಲ್ಲ. ಮೊಟ್ಟಮೊದಲು ಸ್ತ್ರೀಪುರುಷರು ಅಪತ್ಯಸಂಗೋಪನದಸಲುವಾಗಿ ಕೆಲವೊಂದು ಸಂಬಂಧವುಳ್ಳವರಾಗಿ ಕೂಡಿ ಇರುತ್ತಿದ್ದರು. ಮುಂದೆ ಕೆಲವು ಕಾಲದ ಮೇಲೆ ರಾಕ್ಷಸವಿವಾಹ ಪದ್ಧತಿಯೂ, ತರುವಾಯ ಆರ್ಷವಿವಾಹವೂ ಪ್ರಚಾರದಲ್ಲಿ ಬಂದವು. ಹಾಗು ಬಹುಪತ್ನೀತ್ವ ಬಹು-ಪತೀತ್ವಗಳು ಇದೇ ಸುಮಾರಕ್ಕೆ ಸಮಾಜದಲ್ಲಿ ಸೇರಿದವು. ಆದರೆ ಬಹುಪತೀತ್ವವು ಕೇವಲ ಅಪವಾದದಂತೆ ಇತ್ತು. ಮುಂದೆ ಸಾಲಂಕಾರ ಕನ್ಯಾದಾನ ಪದ್ಧತಿಯೂ, ತರುವಾಯ ಸ್ವಯಂವರ ವಿವಾಹ ಪದ್ಧತಿಯೂ ಸಮಾಜದಲ್ಲಿ ಉದಯ ಹೊಂದಿದವು.

ಇನ್ನು, ಈ ರೀತಿಯಾದ ಸಮಾಜಶಾಸ್ತ್ರಾನುರೋಧದಿಂದ ನಿರ್ಣಯಿಸಿದ ವಿವಾಹ ಪದ್ಧತಿಯಲ್ಲಾದ ಸುಧಾರಣೆಯ ಮೆಟ್ಟಿಗಳು ನಮ್ಮ ಹಿಂದೂ ಸಮಾಜದ ಸಂಬಂಧದಿಂದ ಎಷ್ಟರ ಮಟ್ಟಿಗೆ ನಿಜವಿರುವವೆಂಬದನ್ನು ನೋಡೋಣ. ನಮ್ಮ ಹಿಂದೂ ಸ್ಮೃತಿಕಾರರು ವಿವಾಹಪದ್ಧತಿಯಲ್ಲಿ ಎಂಟು ಬೇರೆ ಬೇರೆ ಪ್ರಕಾರಗಳನ್ನು ಹೇಳಿರುವರೆಂಬದು ಎಲ್ಲರಿಗೂ ಗೊತ್ತಿದ್ದ ಸಂಗತಿಯೇ ಸರಿ. ಈ ಎಂಟು ಪ್ರಕಾರಗಳನ್ನು ಮೊದಲು ಮನುವು ತನ್ನ ಸ್ಮೃತಿಯಲ್ಲಿ ಉಲ್ಲೇಖಿಸಿದನು. ಅದನ್ನೇ ಉಳಿದ ಸ್ಮೃತಿಕಾರರು ಅನುಸರಿಸಿದರು. ಮನುವಿನ ಅಭಿಪ್ರಾಯದಂತೆ ನೋಡಿದರೆ, ಈ ಎಂಟೂ ಪ್ರಕಾರಗಳು ಒಂದೇ ಕಾಲದಲ್ಲಿ ಪ್ರಚಾರದಲ್ಲಿ ಇದ್ದವೆಂದು ಹೇಳಬೇಕಾಗುವದು. ಈ ಎಂಟು ಪ್ರಕಾರಗಳಲ್ಲಿ ಕೆಲವು ಗೌಣವೆಂತ

ಲೂ, ಕೆಲವು ಶಿಷ್ಟಸಮ್ಮತವಾದವುಗಳೆಂತಲೂ, ಕೆಲವು ಕೆಲವೊಂದು ವಿಶಿಷ್ಟ ಜಾತಿಯಲ್ಲಿ ಮಾತ್ರ ನಡೆಯತಕ್ಕವೆಂತಲೂ ಮನುವು ಹೇಳಿರುವನು.

ನಿಜವಾಗಿ ವಿಚಾರಮಾಡಿ ನೋಡಿದರೆ ಮನುವು ಹೇಳಿದಂತೆ ಎಂಟೂ ಪ್ರಕಾರದ ವಿವಾಹ ಪದ್ಧತಿಗಳು ನಮ್ಮ ಸಮಾಜದಲ್ಲಿ ಒಂದೇ ಕಾಲದಲ್ಲಿ ಪ್ರಚಾರದಲ್ಲಿದ್ದವೆಂದು ಮಾತ್ರ ಹೇಳಲಿಕ್ಕಾಗುವದಿಲ್ಲ. ಆದ ಈ ಪ್ರಕಾರಗಳು ವಿವಾಹ ಪದ್ಧತಿಯಲ್ಲುಂಟಾದ ಸುಧಾರಣೆಯ ಎಂಟ ಬೇರೆ ಬೇರೆ ಮೆಟ್ಟುಗಳೆಂದು ಹೇಳಬಹುದು. ಮನುವೇ ಮೊದಲಾ ನಮ್ಮ ಸ್ಮೃತಿಕಾರರು ಹೇಳಿರುವ ವಿವಾಹದ ಎಂಟು ಪ್ರಕಾರಗಳು ಯಾ ವೆಂದರೆ:—

(೧) ಬ್ರಾಹ್ಮವಿವಾಹ—ವಧುವಿನ ತಂದೆಯು ಒಳ್ಳೇ ವರನನ್ನು ನೋಡಿ ಮಗಳನ್ನು ಅಲಂಕಾರ ಸಹಿತವಾಗಿ ಮದುವೆ ಮಾಡಿಕೊಡ ವದು.

(೨) ದೈವವಿವಾಹ—ಯಜ್ಞವು ನಡೆದಿರುವಾಗ ಋತ್ವಿಜನ ಕೆ ಸವನ್ನು ಮಾಡತಕ್ಕವನಿಗೆ ತಂದೆಯು ಮಗಳನ್ನು ಅಲಂಕಾರ ಸಹಿತವಾಗಿ ಮದುವೆ ಮಾಡಿಕೊಡುವದು.

(೩) ಆರ್ಷವಿವಾಹ—ವರನ ಕಡೆಯಿಂದ ನಾಲ್ಕಾರು ಗೋವು ಳನ್ನು ತೆಗೆದುಕೊಂಡು ಮಗಳನ್ನು ಮದುವೆ ಮಾಡಿಕೊಡುವದು.

(೪) ಪ್ರಾಜಾಪತ್ಯ ವಿವಾಹ—ತಂದೆಯು ವರನಿಗೆ " ನೀವಿಬ್ಬರು ಬಹುಕಾಲದವರೆಗೆ ಸುಖದಿಂದ ಬಾಳಿರಿ " ಎಂದು ಆಶೀರ್ವಾದ ಮಾ ಮದುವೆ ಮಾಡಿಕೊಡುವದು.

(೫) ಆಸುರ ವಿವಾಹ—ಕನ್ಯೆಯ ಸಂಬಂಧಿಕರಿಗೆ ವರನು ಶಕ್ತ ವಿದ್ದಷ್ಟು ಹಣವನ್ನು ಕೊಟ್ಟು ಕೊಂಡುಕೊಂಡು ಮದುವೆ ಮಾಡಿಕೊ ಳ್ಳುವದು.

(೬) ಗಾಂಧರ್ವ ವಿವಾಹ—ವಧೂವರರು ಪರಸ್ಪರರನ್ನು ಪ್ರೀತಿ ಯಿಂದ ಆರಿಸಿಕೊಂಡು ಮದುವೆ ಮಾಡಿಕೊಳ್ಳುವದು.

(೭) ರಾಕ್ಷಸ ವಿವಾಹ—ವರನು ಕನ್ಯೆಯನ್ನು ಆಕೆಯ ಸಂಬಂ ಧಿಕರೊಡನೆ ಬಡಿದಾಡಿ ಸೋಲಿಸಿ ಬಲಾತ್ಕಾರದಿಂದ ಅಪಹರಿಸಿಕೊಂಡು ಹೋಗಿ ಮದುವೆ ಮಾಡಿಕೊಳ್ಳುವದು.

(೮) **ಪೈಶಾಚ ವಿವಾಹ** — ಮಲಗಿದ ಅಥವಾ ಮದ್ದು ಮಾಟಗಳಿಂದ ಎಚ್ಚರದಪ್ಪಿ ಬಿದ್ದ ಕೂಸನ್ನು ತೆಗೆದುಕೊಂಡು ಹೋಗಿ ಬಲಾತ್ಕಾರದಿಂದ ಮದುವೆ ಮಾಡಿಕೊಳ್ಳುವದು.

ಮೇಲೆ ಹೇಳಿದ ಕ್ರಮವು ಸೃಷ್ಟಿಯ ಉತ್ಕ್ರಾಂತಿ ಕ್ರಮಕ್ಕೆ ಅನುರೂಪವಾಗಿಲ್ಲವೆಂತಲೂ ಅವುಗಳ ಯೋಗ್ಯತೆಯ ಮೇರೆಗೆ ಕ್ರಮಗೊಳಿಸಿದ್ದಿರುವದೆಂತಲೂ ಸಹಜವಾಗಿ ನೋಡಿದರೂ ಗೊತ್ತಾಗುವಂತಿರುವದು. ರಾಕ್ಷಸ ಹಾಗು ಪೈಶಾಚ ವಿವಾಹಗಳು ತೀರ ನಿಂದ್ಯವಾದವುಗಳೆಂದು ನಮ್ಮ ಧರ್ಮಶಾಸ್ತ್ರಕಾರರು ನಿರ್ಣಯಿಸಿರುವರು. ಅದರಂತೆ, ಆಸುರ ವಿವಾಹದ ಕ್ರಮವನ್ನು ಸಹ ನಮ್ಮವರು ಮನ್ನಿಸಿಲ್ಲ. ಇದರ ಮೇಲಿಂದ ನೋಡಿದರೆ ಆರ್ಯರು ತಮಗಿಂತ ನೀಚ ವರ್ಗದವರಲ್ಲಿರುವ ಈ ವಿವಾಹ ಪದ್ಧತಿಗಳನ್ನು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿರುವರೆಂತಲೂ, ಅವು ಆ ಕಾಲದಲ್ಲಿ ಸಮಾಜಕ್ಕೆ ಗ್ರಾಹ್ಯವಾಗಿರಲಿಲ್ಲವೆಂತಲೂ ಕಲ್ಪಿಸಬಹುದಾಗಿದೆ. ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ ಎಂಬ ನಾಲ್ಕು ತರದ ವಿವಾಹಗಳು ಮಾತ್ರ ಆರ್ಯ ಋಷಿಗಳಿಗೆ ಸಮ್ಮತವಾಗಿದ್ದವು. ಬ್ರಾಹ್ಮ ಹಾಗು ದೈವ ವಿವಾಹಗಳು ಒಂದನ್ನೊಂದು ಹೋಲುವವು. ಪ್ರಾಜಾಪತ್ಯ ವಿವಾಹದಲ್ಲಿ ತಂದೆ ತಾಯಿಗಳು ವಧೂವರರಿಗೆ ಕೇವಲ ಆಶೀರ್ವಾದವನ್ನು ಮಾತ್ರ ಮಾಡುವದರಿಂದ ಅದು ಗಾಂಧರ್ವ ವಿವಾಹ ಪದ್ಧತಿಯ ಅವಶೇಷವೆಂದು ಹೇಳಬಹುದಾಗಿದೆ.

ಒಟ್ಟಿನ ಮೇಲೆ, ಸಮಾಜಶಾಸ್ತ್ರಜ್ಞರು ಸಾಂಪ್ರತಕ್ಕೆ ನಿರ್ಣಯಿಸಿದ ಬಲಾತ್ಕಾರದ ವಿವಾಹ, ಕನ್ಯಾವಿಕ್ರಯ ಕ್ರಮ, ವರನಿಗೆ ದಕ್ಷಿಣೆಯನ್ನು ಕೊಟ್ಟು ಮದುವೆ ಮಾಡಿಕೊಡುವದು ಎಂಬ ಮೂರು ಮೆಟ್ಟುಗಳು ನಮ್ಮ ಆರ್ಯರ ವಿವಾಹ ಪದ್ಧತಿಗಳಲ್ಲಿಯಾದರೂ ಇದ್ದು ಅವು ಅದೇ ಕ್ರಮದಿಂದಲೇ ಪ್ರಚಾರದಲ್ಲಿ ಬಂದವೆಂಬದಕ್ಕೆ ಸಂಸ್ಕೃತವಾಙ್ಮಯದಲ್ಲಿ ತಕ್ಕ ಆಧಾರಗಳು ದೊರೆಯುವವು. ಅದರಂತೆ ವಧೂವರರು ಪರಸ್ಪರ ಪ್ರೇಮದಿಂದ ಮಾಡಿಕೊಳ್ಳತಕ್ಕ ಗಾಂಧರ್ವ ವಿವಾಹದ ಸಂಬಂಧದಿಂದಲೂ ಆ ವಾಙ್ಮಯದಲ್ಲಿ ಬೇಕಾದಷ್ಟು ಉಲ್ಲೇಖಗಳು ಇರುವವು. ಆದರೆ ಸ್ವಯಂವರ-ವಿವಾಹಪದ್ಧತಿಯಲ್ಲಿ ಪರಸ್ಪರರ ಪ್ರೇಮವೇ ಮೂಲಕಾರಣವಾಗಿರುವದರಿಂದ ಅದು ಕಾಮವಾಸನಾಮೂಲವಾಗಿರುವದೆಂತಲೂ

ಅದರಲ್ಲಿ ಪವಿತ್ರಭಾವನೆಯು ಇರುವದಿಲ್ಲವೆಂತಲೂ ಆರ್ಯಋಷಿಗಳು ಅದನ್ನು ಅಷ್ಟು ಅನುಮೋದಿಸಿಲ್ಲ. ಈ ತರದ ಗಾಂಧರ್ವ ವಿವಾಹವು ಕ್ಷತ್ರಿಯರಿಗೆ ಮಾತ್ರ ಯೋಗ್ಯವೆಂದು ಅವರು ಅನ್ನುತ್ತಿದ್ದರು. ಹಾಗು ಜಾತಿಭೇದದ ಸಂಬಂಧದ ದುರ್ಲಂಘ್ಯವಾದ ಕಟ್ಟಳೆಗಳು ಸಮಾಜದಲ್ಲಿ ಉಂಟಾಗುವದಕ್ಕಿಂತ ಮೊದಲು ಈ ಗಾಂಧರ್ವವಿವಾಹ ಪದ್ಧತಿಯು ಪ್ರಚಾರದಲ್ಲಿ ಇದ್ದೇ ಇತ್ತು. ಆದರೆ ಮುಂದೆ ಬಾಲವಿವಾಹ ಪದ್ಧತಿಯು ಪ್ರಚಾರದಲ್ಲಿ ಬಂದ ಬಳಿಕ ಈ ಗಾಂಧರ್ವವಿವಾಹ ಕ್ರಮವು ಹಿಂದೆ ಬಿದ್ದಿತು.

ನಮ್ಮ ಸಮಾಜದಲ್ಲಿ ಬಾಲವಿವಾಹವು ಪ್ರಚಾರದಲ್ಲಿ ಬರಲಿಕ್ಕೆ ಕೆಲವು ಕಾರಣಗಳುಂಟಾದವು. ಅವು ಯಾವವೆಂದರೆ:—(೧) ಹುಡುಗರು ಪ್ರೌಢರಾಗುವವರೆಗೆ ಹಾಗೇ ಉಳಿದರೆ ಅವರ ಆಚರಣೆಯಲ್ಲಿ ಕಲಂಕವುಂಟಾಗಬಹುದೆಂದು ತಂದೆ ತಾಯಿಗಳು ಅಂಜಿ, ಹುಡುಗರು ಇನ್ನೂ ಚಿಕ್ಕವರಿರುವಾಗಲೇ ಅವರನ್ನು ವಿವಾಹ ರಜ್ಜುವಿನಿಂದ ಬಿಗಿದು ಬಿಡಹತ್ತಿದರು. (೨) ಪ್ರಾಚೀನ ಕಾಲದಲ್ಲಿ ಗಂಡಸರಿಗಿರುವಂತೆ ಹೆಂಗಸರಿಗೂ ವೇದಾಧ್ಯಯನ ಮಾಡುವ ಅಧಿಕಾರವು ಇತ್ತು. ಹಾಗು ಅವರಿಗೆ ಎಂಟನೆಯ ವರ್ಷದಲ್ಲಿ ಉಪನಯನ ಮಾಡುತ್ತಿದ್ದರು. ಮುಂದೆ ಈ ಉಪನಯು ಮಾಡುವ ಕ್ರಮವು ನಿಂತು ಸ್ತ್ರೀಯರ ವೇದಾಧ್ಯಯನದ ಅಧಿಕಾರವು ನಷ್ಟವಾದದ್ದರಿಂದ ಅದೇ ಕಾಲಕ್ಕೆ ಸ್ತ್ರೀಯರಿಗೆ ಮದುವೆಯನ್ನು ಮಾಡಿ ಬಿಡುವ ರೂಢಿಯುಂಟಾಯಿತು. (೩) ಪೂರ್ವಕಾಲದಲ್ಲಿ ಅರಸರೂ ಬಲಶಾಲಿಗಳೂ ಮದುವೆಯಾಗದೆ ಇದ್ದ ಹೆಣ್ಣು ಮಕ್ಕಳನ್ನು ಓಡಿಸಿಕೊಂಡು ಹೋಗುತ್ತಿದ್ದರಾದ್ದರಿಂದಲೂ ಆದಷ್ಟು ಬೇಗನೆ ತಂದೆ ತಾಯಿಗಳು ತಮ್ಮ ಮಕ್ಕಳ ಮದುವೆಯನ್ನು ಮಾಡಿ ಬಿಡಹತ್ತಿದರು.

ಈ ರೀತಿಯಾಗಿ ಬಾಲವಿವಾಹವು ಪ್ರಚಾರದಲ್ಲಿ ಬಂದ ಬಳಿಕ ಬ್ರಾಹ್ಮವಿವಾಹ ಪದ್ಧತಿಯು ಅವರಿಗೆ ಹೆಚ್ಚು ಸುಲಭವೂ ಯೋಗ್ಯವೂ ಆಗಿ ತೋರಿದ್ದರಿಂದ, ಆ ವಿವಾಹ ಪದ್ಧತಿಯೇ ಸಮಾಜದಲ್ಲಿ ಹೆಚ್ಚಾಗಿ ನೆಲೆಗೊಂಡಿತು. ಹಾಗು ಗಾಂಧರ್ವವಿವಾಹ ಪದ್ಧತಿಯೂ ಅದನ್ನು ಆಶ್ರಯಿಸಿದ್ದ ಏಕಪತ್ನೀ ವ್ರತದ ವಿಚಾರವೂ ಹಿಂದೆ ಬಿದ್ದವು. ಮತ್ತು ಅನೇಕಪತ್ನೀತ್ವವು ಹಿಂದೂ ಶಾಸ್ತ್ರಗಳ ಮೇರೆಗೆ ಸರ್ವಮಾನ್ಯವಾದದ್ದೆಂದು ನಿರ್ಣಯವಾಯಿತು.

ಸುಧಾರಿಸಿದ ಯಾವತ್ತು ರಾಷ್ಟ್ರಗಳಲ್ಲಿರುವ ವಿವಾಹ ಪದ್ಧತಿಯ ಹಾಗು ವೈವಾಹಿಕ ಬಂಧನಗಳ ಪ್ರಗತಿಯ ಇತಿಹಾಸವನ್ನು ನೋಡಿದರೆ ಈ ವಿಚಾರಗಳು ವ್ಯಕ್ತಿಗಳ ಸ್ವಾತಂತ್ರ್ಯದ ಸಂಬಂಧದ ವಿಚಾರಗಳ ಸಂಗಡಲೇ ಪ್ರಗತಿಯನ್ನು ಹೊಂದಿದವೆಂಬದು ಕಂಡು ಬರುವದು. ವಿವಾಹವು ವ್ಯಕ್ತಿಗಳ ಆಯುಷ್ಯಕ್ರಮದೊಳಗಿನ ಒಂದು ಅತಿ ಮಹತ್ವದ ಸಂಗತಿಯಾಗಿರುವದರಿಂದ, ಇದರಲ್ಲಿ ಅವರ ಪ್ರತ್ಯಕ್ಷ ಸಂಬಂಧವು ಇರಲೇ ಬೇಕಾಗುವದು. ಮುಂದಿನ ಆಯುಷ್ಯದೊಳಗಿನ ಯಾವತ್ತು ಸುಖದುಃಖಗಳಿಗೆ ವಧೂವರರೇ ಬಾಧ್ಯಸ್ಥರಾಗುವದರಿಂದ ಈ ವಿಷಯದಲ್ಲಿ ಅವರ ತಂದೆ ತಾಯಿಗಳು ಬಲಾತ್ಕಾರದಿಂದ ಈ ಸಂಬಂಧದ ಯಾವ ಕಾರ್ಯವನ್ನೂ ಮಾಡುವದು ಯೋಗ್ಯವೆನಿಸುವದಿಲ್ಲ. ಮಕ್ಕಳು ವಯಸ್ಸಿಗೆ ಬರುವದಕ್ಕಿಂತ ಮೊದಲು ತಮ್ಮ ಮನಸ್ಸಿಗೆ ಬಂದಂತೆ ಅವರನ್ನು ಒಯಿದು ಹಾದಿಗೆ ಹಚ್ಚಿ ಬಿಡುವ, ಅಂದರೆ ಎರಡನೆಯವರ ಅಧಿಕಾರಕ್ಕೆ ಒಳಪಡಿಸುವ ಹಕ್ಕು ತಂದೆ ತಾಯಿಗಳಿಗೆ ಇರಲಾರದು. ಈ ಸಮಯದಲ್ಲಿ ಇನ್ನೊಂದು ಸಂಗತಿಯನ್ನು ಹೇಳುವದು ಅವಶ್ಯವು. ತಂದೆ ತಾಯಿಗಳು ತಮ್ಮ ಸಂತೋಷಕ್ಕಾಗಿಯಾಗಲಿ, ತಮ್ಮ ಅವಿಚಾರದ ಲವಲವಿಕೆಯಿಂದಾಗಲಿ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡಿ ಸಂಸಾರಸಾಗರಕ್ಕೆ ತಳ್ಳಿ ಬಿಡುವರು. ಮುಂದೆ ಅಂಥ ಅಜ್ಞಾನವುಳ್ಳ ಬಾಲಿಕೆಯರು ಸೃಷ್ಟಿಸಹಜವಾದ ನಾನಾ ಬಗೆಯ ಕಷ್ಟನಷ್ಟಗಳಿಗೆ ಗುರಿಯಾಗಬೇಕಾಗುವದು. ಒಮ್ಮೊಮ್ಮೆ ಇಂಥ ಅಜ್ಞಾನಿಗಳಾದ ಬಾಲಿಕೆಯರು ವೈಧವ್ಯ ಪಂಕದಲ್ಲಿ ಬಿದ್ದು ಆಮರಣ ಕಷ್ಟಪಡಬೇಕಾಗುವದು. ಇಂಥ ಪ್ರಸಂಗದಲ್ಲಿ ನಮ್ಮ ಸಮಾಜದವರು ಆ ಚಿಕ್ಕ ಮಗುವಿನ ಬಟ್ಟೆ ಬರೆಗಳನ್ನೆಲ್ಲ ಸುಲಿದುಕೊಂಡು ತಲೆಯನ್ನು ಬೋಳಿಸಿ ಕಾವಿಯ ಶಾಟಿಯನ್ನು ಉಡಿಸುವರು! ಎಂಥ ಅನ್ಯಾಯವಿದು! ಯಾರ ತಪ್ಪಿಗೆ ಯಾರು ಶಿಕ್ಷೆಯನ್ನು ಅನುಭವಿಸಬೇಕು!

ಇನ್ನು, ಹಿಂದೂ ಸಮಾಜದೊಳಗಿನ ಸ್ತ್ರೀಯರ ಯೋಗ್ಯತೆಯ ಸಂಬಂಧದಿಂದ ವಿಚಾರ ಮಾಡುವಾಗ ಸಮಾಜದವರು ಅವರ ಮೇಲೆ ನಡೆಯಿಸಿರುವ ಬಾಲವಿವಾಹ ಪದ್ಧತಿಯ ಮೂಲಕವಾದ ಅತ್ಯಾಚಾರ, ಅವರ ಬಾಧ್ಯತೆ, ಅವರ ಶಿಕ್ಷಣ, ಹಿಂದೂ ವಿಧವೆಯರ ದುಃಸ್ಥಿತಿ ಎಂಬ

ನಾಲ್ಕು ಮಾತುಗಳನ್ನು ಮುಖ್ಯವಾಗಿ ಎಣಿಸತಕ್ಕದ್ದು. ಇವುಗಳಲ್ಲಿ ಮೊದಲನೇ ಮಾತಿನ ಸಂಬಂಧದಿಂದ ಮೇಲೆ ತಕ್ಕ ಮಟ್ಟಿಗೆ ವಿಚಾರ ಮಾಡಿರುವೆವು. ಹಾಗು ಸ್ತ್ರೀಯರ ಬಾಧ್ಯತೆಯ ಸಂಬಂಧದಿಂದಲೂ ಹಿಂದೆ ಒಂದು ಪ್ರಸಂಗದಲ್ಲಿ ಕೆಲವು ವಿಚಾರಗಳನ್ನು ಹೇಳಿರುವೆವು. ಸಮಾಜದೊಳಗಿನ ಪ್ರತಿಯೊಬ್ಬ ವ್ಯಕ್ತಿಯು, ಹೆಂಗಸೇ ಇರಲಿ, ಗಂಡಸೇ ಇರಲಿ, ಸಮಸಾಧಿಕಾರಿಯು ಮತ್ತು ಸಮಾನಸ್ವತಂತ್ರತೆಯುಳ್ಳದ್ದು. ಒಂದು ವರ್ಗದವರು ಇನ್ನೊಂದು ವರ್ಗದವರನ್ನು ಹಿಂದಕ್ಕೊತ್ತಿ ಅವರಿಗೆ ಪರತಂತ್ರತೆಯನ್ನು ಸಾರುವದು ಎಷ್ಟು ಮಾತ್ರವೂ ಸರಿಯಲ್ಲ ಎಂಬದು ಸಮಾಜಶಾಸ್ತ್ರದ ಒಂದು ಮುಖ್ಯ ತತ್ವವಾಗಿರುವದು. ಸ್ತ್ರೀಪುರುಷರ ಸರ್ವಾಂಗಸಂಪೂರ್ಣತೆಗೆ ಅಡ್ಡ ಬರುವಂಥ ಯಾವ ನಿಯಮವೂ ಸಮಾಜಶಾಸ್ತ್ರಕ್ಕೆ ಸಮ್ಮತವಿರಲಾರದು. ಅದರಿಂದ ಸಾಮಾಜಿಕ ಸಂಗತಿಗಳಲ್ಲಿಯೂ ರಾಜಕೀಯ ಸಂಗತಿಗಳಲ್ಲಿಯೂ ಸ್ತ್ರೀಯರಿಗೆ ಪುರುಷರ ಸಮಾನವಾದ ಬಾಧ್ಯತೆಯು ಇರತಕ್ಕದ್ದು ಅವಶ್ಯವು. ಹಿಂದೂ ಸಮಾಜದೊಳಗಿನ ಸ್ತ್ರೀಯರ ಯೋಗ್ಯತೆಯು ಕಡಿಮೆತರದ್ದೆಂಬ ಭಾವನೆಯನ್ನು ತೆಗೆದುಹಾಕುವದೂ ಅವರಿಗೆ ಗಂಡಸರಂತೆಯೇ ಎಲ್ಲ ಬಗೆಯ ಶಿಕ್ಷಣವನ್ನು ಕೊಡುವದೂ ಸಮಾಜಶಾಸ್ತ್ರದ ದೃಷ್ಟಿಯಿಂದ ಅತ್ಯವಶ್ಯವಾಗಿರುವದು.

ಸಾಮಾಜಿಕ ಸಂಗತಿಗಳಲ್ಲಿ ಸ್ತ್ರೀಪುರುಷರು ಸಮಾನಾಧಿಕಾರಿಗಳು ಎಂಬ ಸಂಗತಿಯು ನಿರ್ಣಯವಾದ ಮೇಲೆ ಸ್ತ್ರೀಯರ ಸಂಬಂಧದ ಎಲ್ಲ ಪ್ರಶ್ನೆಗಳು ತಾವಾಗಿಯೇ ನಿರ್ಣಯವಾಗುವವು. ಗಂಡಸಿಗೆ ತನ್ನ ಹೆಂಡತಿಯು ಸತ್ತರೆ ಮತ್ತೊಂದು ಹೆಂಡತಿಯನ್ನು ಮಾಡಿಕೊಳ್ಳಲಿಕ್ಕೆ ನಮ್ಮ ಸಾಮಾಜಿಕ ನಿಯಮಗಳ ಮೇರೆಗೆ ಪ್ರತಿಬಂಧವಿರುವದಿಲ್ಲ. ಅದರಂತೆ ಸ್ತ್ರೀಯರಿಗೂ ಒಬ್ಬ ಗಂಡನು ಸತ್ತರೆ ಇನ್ನೊಬ್ಬ ಗಂಡನನ್ನು ಮಾಡಿಕೊಳ್ಳಲಿಕ್ಕೆ ಸಾಮಾಜಿಕ ನಿರ್ಬಂಧವು ಇರಕೂಡದು. ವಿಧವೆಯ ಅಥವಾ ವಿಧುರನ ಪುನರ್ವಿವಾಹದ ಸಂಬಂಧದಲ್ಲಿ ಸಮಾಜದವರು ಕೈಹಾಕುವದು ಸರಿಯಲ್ಲ. ಇದು ಆಯಾ ವ್ಯಕ್ತಿಗಳ ಸ್ವಭಾವವನ್ನೂ ಇಚ್ಛೆಯನ್ನೂ ಅವಲಂಬಿಸಿ ಇರತಕ್ಕದ್ದು. ಒಟ್ಟಿನ ಮೇಲೆ, ಏಕಪತ್ನೀವ್ರತ ಹಾಗು ಏಕಪತಿವ್ರತ ಇವುಗಳೂ ಇವುಗಳಿಗೆ ಆಧಾರವಾದ ಗಾಂಧರ್ವ

ವಿವಾಹ ಪದ್ಧತಿಯೂ ಸಮಾಜದಲ್ಲಿ ಪ್ರಚಾರಕ್ಕೆ ಬರತಕ್ಕದ್ದು. ಹಾಗು ವಿಧವಾವಿವಾಹಕ್ಕೆ ಸಾಮಾಜಿಕ ನಿಯಮಗಳ ಪ್ರತಿಬಂಧವಿರಕೂಡದು. ಇವೇ ಸಮಾಜಶಾಸ್ತ್ರಾನುಗುಣವಾದ ವಿವಾಹಪದ್ಧತಿಯ ಸಂಬಂಧದ ನಿಯಮಗಳು. ಸಮಾಜದೊಳಗಿನ ಸರ್ವವ್ಯಕ್ತಿಗಳೂ ಸಮಾನಾಧಿಕಾರಿಗಳು. ಅದರಿಂದ ಸ್ತ್ರೀಯರಿಗೆ ಪಾರತಂತ್ರ್ಯವನ್ನು ಸಾರುವದಾಗಲಿ ಅವರು ತಮ್ಮ ಸ್ವತ್ತೆಂದು ತಿಳಿದುಕೊಳ್ಳುವದಾಗಲಿ ಪುರುಷರ ಅಧಿಕಾರಕ್ಕೆ ಒಳಪಡುವದಿಲ್ಲ. ಈ ವಿಚಾರಗಳನ್ನು ಪ್ರಚಾರದಲ್ಲಿ ತರುವದು ಸಮಾಜಶಾಸ್ತ್ರದ ದೃಷ್ಟಿಯಿಂದ ಅತಿ ಮಹತ್ವದ್ದಾಗಿರುವದು.

ಅಲಂಕಾರದರ್ಪಣ.

(ಶಾಲಾಪತ್ರಕದ ೧೯೧೧ನೆಯ ಇಸವಿಯ ಜೂನ ತಿಂಗಳ ಸಂಚಿಕೆಯ ೨೫ನೆಯ ಪುಟದಿಂದ ಮುಂದೆ ಸಾಗಿದ್ದು)

೮೬. ಪಿಹಿತಾಲಂಕಾರವು. ಲಕ್ಷಣ:—ಮರ್ಮೋದ್ಘಾಟನಕ್ಕಾಗಿ ನೀನು ಮಾಡಿದ ಕೃತ್ಯವು ನನಗೆ ಗೊತ್ತದೆ" ಎಂಬ ಅಭಿಪ್ರಾಯವನ್ನು ಚೇಷ್ಟೆಯಿಂದ ಸೂಚಿಸಲು ಅಲ್ಲಿ ಈ ಅಲಂಕಾರವಾಗುವದು. ಉದಾ:-

॥ಕಂದ॥ ಬೆಳ್ಳನೆ ಬೆಳಗಾಗಲು ತ।
ನ್ನಲ್ಲಿಗೆ ಬಂದಿರುವ ವಲ್ಲಭನ ಕಂಡವಳು ॥
ಮಲ್ಲಿಗೆ ಮಾಲತಿ ಪುಷ್ಪದೆ ।
ಮೇಲ್ವಾಸಿಗೆಯನ್ನು ರಚಿಸಿ ಪವಡಿಸಿರೆಂದಳ್॥

ಲ್ಲಿ ಓರ್ವಕಾಮಿನಿಯ ತಲ್ಪನಿರ್ಮಾಣರೂಪ ಚೇಷ್ಟೆಯು "ರಾತ್ರಿಯ ವಾರನಾರಿಯರ ಸಂಗದಿಂದ ನಿದ್ದೆಗೆಟ್ಟವನಾಗಿದ್ದೀ. ಕಾರಣ ಮಲಗೋ" ಎಂಬ ಅಭಿಪ್ರಾಯವನ್ನು ಸೂಚಿಸುವದಾಗಿ ಅವಳ ಪತಿಯ ಮರ್ಮೋದ್ಘಾಟನವನ್ನು ಮಾಡುವದು.

ಸೂಕ್ಷ್ಮಾಲಂಕಾರದಲ್ಲಿಯ ಚೇಷ್ಟೆಯು ಭಾವ್ಯರ್ಥಕ್ಕೆ ಅನುಕೂಲವಾಗಿರುವದು. ಆದರೆ ಪಿಹಿತಾಲಂಕಾರದಲ್ಲಿಯ ಚೇಷ್ಟೆಯು ಭೂತಾರ್ಥವನ್ನು ಸೂಚಿಸುವದು.

೮೭. ವ್ಯಾಜೋಕ್ತ್ಯಲಂಕಾರವು. ಲಕ್ಷಣ:—ಬೇರೆ ಹೇತುಗಳನ್ನು ಹೇಳಿ ಆಕಾರವನ್ನು ಗೋಪನ ಮಾಡಿಕೊಳ್ಳಲು ಅಲ್ಲಿ ಈ ಅಲಂಕಾರವಾಗುವದು. ಉದಾ:—

ಭಾಮಿನಿ || ದೂರದಲಿ ಬರುತಿರುವ ಕೃಷ್ಣನ |
ಮೋರೆಯನು ನೋಡುತಲೆ ಭರದಲಿ |
ತೋರುತಿರೆ ರೋಮಾಂಚಕಂಪಗಳಾಗ ಭಾಮಿನಿಗೆ ||
ಬೇರೆನಾರಿಯರೊಳಗೆ ತನ್ನಯ |
ಏರಿದನುರಾಗವನು ತೋರದೆ |
ಸಾರಿದಳು ಭಕುತಿಯಲಿ ನಮಿಸಲು ದಾರಿಯೊಳು ಜವದೆ ||

ಇಲ್ಲಿ ಕಾಮೋದ್ರೇಕದಿಂದುಂಟಾದ ರೋಮಾಂಚಾದಿ ದೇಹದ ಆಕಾರವು ಭಕ್ತಿರೂಪವಾದ ಬೇರೆ ಹೇತುವಿನಿಂದ ಗೋಪನ ಮಾಡಲ್ಪಟ್ಟಿದೆ. ಮತ್ತೆ ಉದಾ:—

ಭಾಮಿನಿ || ಬೇಡ ಬೇಡೆನೆ ನೀನು ಭೃಂಗದೆ |
ಕೂಡಿರುವ ಕಮಲವನು ಮೂಸಿದೆ |
ನೋಡಿ ಸವ್ರಣದಧರವನು ಪ್ರಿಯನೀಗ ಕೋಪಿಸನೇ! ||

ಇಲ್ಲಿ ಮಿಂಡನಿಂದ ಖಂಡಿತಾಧರಳಾದ ನಾಯಿಕೆಯ ಹತ್ತರ ಅವಳ ಪತಿಯು ಬರುತ್ತಿರುವದನ್ನು ನೋಡದವಳಂತೆಯೇ ನಾಯಿಕೆಯ ಸಖಿಯು ನಾಯಿಕೆಗೆ ಹಿತೋಪದೇಶವ್ಯಾಜದಿಂದ ಆಡಿದಂಥ ಮೇಲಿನ ವಾಕ್ಯದಿಂದ ನಾಯಿಕೆಯ ಅಪರಾಧವು ಗೋಪನಮಾಡಲ್ಪಟ್ಟಿದೆ. ಛೇಕಾಪನ್ಹುತಿಯಲ್ಲಿ ಆಡಿದ ವಾಕ್ಯವು ಹೇತ್ವಂತರಕಥನದಿಂದ ಗೋಪನಮಾಡಲ್ಪಡುವದು. ಆದರೆ ಇಲ್ಲಿ ಹೇತ್ವಕಥನದಿಂದ ಆಕಾರವು ಗೋಪನ ಮಾಡಲ್ಪಡುವದು.

ವ್ಯಂಗ್ಯಾರ್ಥವು ಶಬ್ದಾರ್ಥಗಳಿಂದ ಆಕ್ಷಿಪ್ತವಾಗಿರಲು ಧ್ವನಿಯೆನಿಸುವದೆಂತಲೂ, ಕವಿನುಡಿಯಿಂದ ಹೊರಪಟ್ಟಿರಲು ಅಲಂಕಾರತ್ವವನ್ನು ಹೊಂದುವದೆಂತಲೂ ಪ್ರಾಚೀನರ ಮತವುಂಟು. ಉತ್ತರಾದಿ ಅಲಂಕಾರಚತುಷ್ಟಯದ ಕೆಲವು ಉದಾಹರಣೆಗಳಲ್ಲಿ ಭಾವವು ಸ್ವೋಕ್ತಿಗಳಿಂದ ಆವಿಷ್ಕೃತವಾಗಿಲ್ಲ. ಚೇಷ್ಟೆಗಳನ್ನು ಮಾಡತಕ್ಕ ಹಾಗು ತಿಳುಕೊಳ್ಳತಕ್ಕ ವ್ಯಕ್ತಿಗಳ ಯೋಜನೆಯಿಂದಲೂ ವಸ್ತುಸೌಂದರ್ಯಬಲದಿಂದಲೂ ತಿಳಿಯತಕ್ಕದ್ದಾಗಿದೆ. ಕಾರಣ ಇವು ಅಲಂಕಾರಗಳಾಗದೆ ಧ್ವನಿಗಳಾಗಬಹುದು. ಆದರೆ ಇವುಗಳಲ್ಲಿ ಅರ್ಥಾಂತಗಳನ್ನು ಕಲ್ಪಿಸಿ ಭಾವಗಳ ಆವಿಷ್ಕರಣಗಳನ್ನು ಮಾಡಿಕೊಳ್ಳಬಹುದು. ಹೇಗಂದರೆ:—

ಕಂದ|| ಮುಂದಿರುವ ಗಿಡದ ಹತ್ತರ |
ಚಂದದೆಹೊಳೆಯನ್ನು ದಾಟಬಾರೈ ನೀನು ||
ಎಂದು ಸುಮಾರ್ಗವ ಕೇಳಲು |
ಬಂದಿಹನಿಗೆ ಮನವಸೂಚಿಸಿದಳಂಗನೆಯು ||

ಈ ಉತ್ತರಾಲಂಕಾರದಲ್ಲಿ ಭಾವವು ಕವಿಯಿಂದಲೇ ಹೊರಡಿಸಲ್ಪಟ್ಟಿದೆ. ಇದರಂತೆ ಸೂಕ್ಷ್ಮಾಲಂಕಾರದಲ್ಲಿಯೂ ಉದಾಹರಿಸಬಹುದು. ಹೇಗೆಂದರೆ:—

ಕಂದ|| ನಿಶ್ಚಯ ಮಾಡಿದ ಸಮಯವ |
ಮೆಚ್ಚುತ ಬಂದಿರುವ ವಿಟಗೆ ಸೂಚಿಸಲವಳು ||
ಅಚ್ಚರಿಯೊಳವನಂ ನೋಡುತ |
ಮುಚ್ಚಿದಳೈಕೇಶದಿಂದೆ ಚೂಡಾಮಣಿಯಂ ||

ಇದರಂತೆ ಸಿಹಿತಾಲಂಕಾರದಲ್ಲಿಯೂ ಉದಾಹರಿಸಬಹುದು. ಹೇಗೆಂದರೆ:—

ಕಂದ|| ಅಲ್ಲಲ್ಲಿ ವಾರಯುವತಿಯ |
ರಲ್ಲಿಯೆ ಕ್ರೀಡಿಸುತ ರಜನಿಯದು ತಿಳಿಯದಲೆ ||
ಬೆಳ್ಳನೆ ಬೆಳಗಾಗಲು ತ |
ನ್ನಲ್ಲಿಗೆ ಬಂದಿರುವ ಪತಿಯ ಕೃತಿ ಸೂಚಿಸಲು ||
ಮಲ್ಲಿಗೆ ಮಾಲತಿಪುಷ್ಪದೆ |
ಮೆಲ್ಹಾಸಿಗೆಯನ್ನು ರಚಿಸಿ ಪವಡಿಸಿರೆಂದಳ್ ||

೬೮. ಗೂಢೋಕ್ತ್ಯಲಂಕಾರವು. ಲಕ್ಷಣ:—ಒಬ್ಬನಿಗೆ ಹೇಳತಕ್ಕದ್ದನ್ನು ಹತ್ತರದಲ್ಲಿದ್ದವರಿಗೆ ತಿಳಿಯಬಾರದೆಂದು ಮತ್ತೊಬ್ಬನನ್ನುದ್ದೇಶಿಸಿ ಅಲ್ಪಶ್ಲೇಷದಿಂದ ನುಡಿಯಲು ಅಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ || ಕತ್ತೆಯೆ ಪರಕ್ಷೇತ್ರಬಿಡೈ |
ಒತ್ತರದಿಂ ಕ್ಷೇತ್ರಪತಿಯು ಬರುತಿಹನೀಗಳ್ ||

ಇಲ್ಲಿ ಪರಕಲತ್ರದಲ್ಲಿ ರತನಾದವನಿಗೆ ಹೇಳತಕ್ಕದ್ದನ್ನು ಸಮೀಪದ ಹೊಲದಲ್ಲಿ ಮೇಯುತ್ತಿದ್ದ ಕತ್ತೆಯನ್ನು ನಿರ್ದೇಶಿಸಿ ನುಡಿದಿದ್ದಾನೆ. (ಕ್ಷೇತ್ರ=ಹೊಲ; ಹೆಂಡತಿ). ಮತ್ತೆ ಉದಾ:—

ಭಾಮಿನಿ|| ಕೂಡಿರುವ ಜನರೆಲ್ಲ ಡೊಂಬನು |
ಮಾಡಿದಾಟವ ನೋಡಿ ನಕ್ಕರು ||
ನೋಡಿಯುಂ ನಗದವರ ಮುಖವನು ಸುಟ್ಟುಬಿಡು ಶಿವನೇ ||
ಬೇಡದಲೆ ದುಡ್ಡುಗಳ ಕೊಟ್ಟರು |
ನೋಡಿರುವ ಜನರೆಲ್ಲ ಡೊಂಬಗೆ |
ಖೋಡಿಗಳ ಕೊಡದವರ ಕೈಗಳ ಕಡಿಯಲೀಶ್ವರನು |

ಅರ್ಥ — ಹಲವರು ಅರಳೀನಗಗಳನ್ನು ಹೇರಿಕೊಂಡು ಹೋಗುತ್ತಿರುವಾಗ ಒಂದು ಊರ ಹತ್ತರ ಬಾವಿಯಲ್ಲಿ ಇಳಿದು ಎಲ್ಲರೂ ನೀರು ಕುಡಿಯುತ್ತಿರಲು ನೀರು ತರಲಿಕ್ಕೆ ಪ್ರತಿಬಂಧಕವಾದದ್ದರಿಂದ ಮೇಲೆ ಬರಿಗೊಡಗಳನ್ನು ಹೊತ್ತುಕೊಂಡು ನಿಂತವರಲ್ಲಿ ಓರ್ವವಿದಗ್ಧೆಯು ಹತ್ತರಿದ್ದವರಿಗೆ ತಿಳಿಯದಂತೆ, ನೀರು ಕುಡಿಯುವವರನ್ನು ಬೇರೆ ಸಂಗತಿಯನ್ನುದ್ದೇಶಿಸಿ ಪೂರ್ವಾರ್ಧದ ಪದ್ಯದಿಂದ ಬಯ್ಯಲು, ಇದನ್ನು ತಿಳಿದ ಅವರೊಳಗಿನ ಓರ್ವ ವಿದಗ್ಧನು ಅದೇ ಸಂಗತಿಯನ್ನುದ್ದೇಶಿಸಿ ಉತ್ತರಾರ್ಧದ ಪದ್ಯದಿಂದ ಅವಳನ್ನು ಬಯ್ದಿದ್ದಾನೆ. (ನಗದವ=ಹಾಸ್ಯ ಮಾಡದವ; ಅರಳೀ ನಗದವ; ಕೊಡದವ=ದಾನ ಮಾಡದವ; ಕೊಡ ಹೊತ್ತವ).

ಈ ಅಲಂಕಾರದಲ್ಲಿ ವ್ಯಂಗತ್ವದಿಂದಾದರೂ ಕಾರ್ಯಕಾರಣಾದಿಸಂಬಂಧಗಳು ತೋರದ್ದರಿಂದ ಇದು ಅಪ್ರಸ್ತುತಪ್ರಶಂಸೆಯಾಗದು. ಅಪ್ರಕೃತಾರ್ಥವು ಪ್ರಕೃತಾರ್ಥದಲ್ಲಿ ಅನ್ವಯವನ್ನು ಹೊಂದುವದಿಲ್ಲವಾದ್ದರಿಂದ ಇದು ಶ್ಲೇಷವಾಗುವದಿಲ್ಲ. ಸಾರಾಂಶ, ಅಪ್ರಕೃತಾರ್ಥವು ಇಲ್ಲಿ ಕೇವಲ ಇತರವಂಚನಾರ್ಥವಾಗಿ ನಿರ್ದಿಷ್ಟವಾಗಿರುವದರಿಂದ ಇದು ಅವೆಲ್ಲವುಗಳಿಗಿಂತ ಬೇರೆ ತರದ್ದಾಗಿದೆ.

೮೯. ವಿವೃತೋಕ್ತ್ಯಲಂಕಾರವು. ಲಕ್ಷಣ: — ಶಬ್ದಶಕ್ತಿಯಿಂದಾಗಲಿ ಅರ್ಥಶಕ್ತಿಯಿಂದಾಗಲಿ ಗುಪ್ತವಾದ ವಸ್ತುವು ಕವಿಯಿಂದ ಆವಿಷ್ಕೃತವಾಗಲು ಅಲ್ಲಿ ಈ ಅಲಂಕಾರವಾಗುವದು. ಉದಾ: —

ಕಂದ|| ಕತ್ತೆಯೆ ಪರಕ್ಷೇತ್ರಬಿಡೈ |
ಒತ್ತರದಿಂದೆಂದು ಸೂಚಿಸಿದನವಗೋರ್ವಂ ||

ಇಲ್ಲಿ ಕವಿಯು ' ಸೂಚಿಸಿದನು, ಎಂಬ ಪದದಿಂದ ಗುಪ್ತವನ್ನು ಹೊರಪಡಿಸಿದ್ದಾನೆ.

ಮತ್ತೆ ಉದಾಹರಣೆ:—

ಭಾಮಿನಿ ॥ ಬಂದಿಲ್ಲವೂರಿಂದಲತ್ತೆಯು ।
ರಿಂದು ನಾಯಿಯು ಗಂಡನುಂ ಮಾ ।
ವಂದಿರುಗಳೈದಿಹರು ಕಣವನು ಕಾಯಲಾ ಹೊಲಕೆ ॥
ಇಂದೆ ನಾದಿನಿ ಪೋದಳತ್ತೆಯು ।
ಮಂದಿರಕೆ ಜೋಡಿಲ್ಲವೊಬ್ಬರ ।
ಇಂದಿನಿರುಳನು ಬಸವ ನೀನೇ ಕಳೆಯೊ ಜೋಡಿನಲಿ ॥
ಎಂದು ಗೆಳತಿಗೆ ನುಡಿದು ವಿಟನಿಗೆ ।
ಮಂದಿರಕೆ ನೀನಿಂದು ಬರುವದು ।
ಚಂದದಲಿ ರಮಿಸುವದು ನನ್ನೊಡನೆಂದು ತಿಳಿಸಿದಳು ॥

ಇಲ್ಲಿ 'ಬಸವ ನೀನೇ ಕಳೆಯೊ ಜೋಡಿನಲಿ' ಎಂಬ ವಾಕ್ಯದಲ್ಲಿ ಶ್ಲೇಷ ದಿಂದ ಗುಪ್ತವಾಗಿರುವ ಅಭಿಪ್ರಾಯವು 'ಎಂದು ತಿಳಿಸಿದಳು' ಎಂಬ ಮುಂದಿನ ವಾಕ್ಯದಲ್ಲಿ ಕವಿಯಿಂದಲೇ ನಿಬದ್ಧವಾಗಿದೆ. ಇಲ್ಲಿ ಎರಡನೆ ಯವರು ಬೇರೆ ಶಂಕಿಸಬಹುದೆಂದು ತಿಳಿದು ಅವರನ್ನು ವಂಚಿಸುವದ ಕ್ಕಾಗಿ ಮಾಡಿದ ವಕ್ತೃವಿನ ಗುಪ್ತವು ಕವಿಯಿಂದ ಆವಿಷ್ಕೃತವಾಗಿದೆ. ಇನ್ನು ಲಜ್ಜೆಯಿಂದ ಗುಪ್ತಮಾಡಿಕೊಂಡ ಅಭಿಪ್ರಾಯದ ಆವಿಷ್ಕರಣವು ಹೇಗಂದರೆ:—

ತ್ರಿಪುಡೆ ॥ ಕೋಪಬಿಡು ಬಿಗಿದಪ್ಪಿಕೊಂಡೆನು ನಿನ್ನನೀಗಲು ಕೇಶವ ।
ಗೋಪರಾಗಾಹತದ ದೃಷ್ಟಿಯೊಳೇನು ತಿಳಿಯದೆ ಮಾಧವ ॥
ತಂದೆಯಲ್ಲವೆ? ನೀನು ಕಾಮುನ ಜಗದೊಳಬಲರ ನಾಥನೇ ।
ಎಂದು ಗೊಲ್ಲತಿಯಿಂದ ಸೂಚಿತನಾದ ಕೃಷ್ಣನು ಕಾಯನೇ ॥

ಇಲ್ಲಿ ತನ್ನ ಹತ್ತರ ಬರುತ್ತಿರುವ ಕೃಷ್ಣನಿಗೆ ಕಾಮುಕಳಾದ ಗೊಲ್ಲ ತಿಯು ಗೋಧೂಳಿಯು ಮುಸುಕಲು ಅವನನ್ನು ಗಟ್ಟಿಯಾಗಿ ಅಪ್ಪಿಕೊಂ ಡು, ಕೃಷ್ಣನೇ ನನಗೆ ಈ ಗೋಧೂಳಿಯಲ್ಲಿ ದಿಕ್ಕು ತಪ್ಪಿದೆ. ದನಗಳ ಕಾಲೊಳಗೆ ಸಿಕ್ಕು ಪ್ರಾಣ ಬಿಟ್ಟೇನು? ಎಂಬ ಭೀತಿಯಿಂದ ನಿನ್ನನ್ನು ಗಟ್ಟಿಯಾಗಿ ಅಪ್ಪಿಕೊಂಡಿದ್ದೇನೆ. ಈ ವೇಳೆಯಲ್ಲಿ ಸಿಟ್ಟಾಗಿ ನನ್ನನ್ನು ಬಿಟ್ಟುಬಿಡಬೇಡ, ಇತ್ಯಾದಿ ಪ್ರಾರ್ಥನೆಯಲ್ಲಿ ಗುಪ್ತವಾಗಿರುವ ಅಭಿ ಪ್ರಾಯವು 'ಗೊಲ್ಲತಿಯಿಂದ ಸೂಚಿತನಾದ' ಎಂಬ ವಾಕ್ಯದಿಂದ ಹೊರ ಪಡಿಸಲ್ಪಟ್ಟಿದೆ. (ಗೋ + ಪರಾಗ + ಆಹತ=ಆಕಳುಗಳ ಧೂಳಿಯಿಂದ

ಮುಸುಕಿದ, ಗೋಪ + ರಾಗ + ಆಹತ=ಕೃಷ್ಣನಲ್ಲಿಯ ಆಸಕ್ತಿಯಿಂದ ಭ್ರಾಂತನಾದ)

ಇದು ಶಬ್ದಶಕ್ತಿಯಿಂದ ಗುಪ್ತವಾಗಿರುವ ಅಭಿಪ್ರಾಯದ ಆವಿಷ್ಕರಣವಾಯಿತು. ಧ್ವನಿವಿಕಾರದಿಂದ ಶಬ್ದಗಳಿಗೆ ಬೇರೆ ಬೇರೆ ಅರ್ಥಗಳು ತೋರಲು, ಅದು ಅರ್ಥಶ್ಲೇಷವೆನಿಸುವದು. ಇನ್ನು ಅರ್ಥಶಕ್ತಿಯಿಂದ ಗುಪ್ತವಾಗಿರುವ ಅರ್ಥದ ಆವಿಷ್ಕರಣವು ಹೇಗಂದರೆ:—

ಭಾಮಿನಿ || ಪೋಗುವೆನು ನಾನಿನ್ನು ಕೃಷ್ಣನೆ |
ನೀಗುವದೆ ತೃಪ್ತಿಯದು ನೋಡಲು |
ಹೀಗೆ ವಿಜನದೊಳಿರಲದನ್ಯರು ಬೇರೆ ತಿಳಿಯುವರೈ ||
ಆಗಮನವನು ಹೀಗೆ ಸೂಚಿಸಿ |
ಬಾಗಿ ಲಜ್ಜೆಯೊಳಿರುವ ಗೋಪಿಗೆ |
ವೇಗದಿಂ ಭೋಗವನು ಕೊಟ್ಟಹ ಹರಿಯೆ! ಪೊರೆಯನ್ನಂ ||

ಇಲ್ಲಿ "ಪೋಗುವೆನು" ಇತ್ಯಾದಿ ಆಮಂತ್ರಣದಲ್ಲಿ 'ನಿನ್ನೊಡನೆ ರಮಿಸುವ ಇಚ್ಛೆಯಿಂದ ನಿಂತಿದ್ದೆನು. ಅದು ಸಫಲವಾಗಲಿಲ್ಲ,' ಎಂಬ ಅಭಿಪ್ರಾಯವು ಅರ್ಥಶಕ್ತಿಯಿಂದ ಗುಪ್ತವಾಗಿದೆ. ಇದು ಕಡೆಯ ಪಾದದಲ್ಲಿ ಆವಿಷ್ಕೃತವಾಗಿದೆ.

ಇವೆಲ್ಲವುಗಳಲ್ಲಿ ವಕ್ತೃವಿನ ಗುಪ್ತದ ಆವಿಷ್ಕರಣವು ಕವಿಯಿಂದ ನಿಬದ್ಧವಾಗಿದೆ. ಇನ್ನು ಕವಿಯ ಗುಪ್ತದ ಆವಿಷ್ಕರಣವೆಂತೆಂದರೆ:—

ಭಾಮಿನಿ || ನೀನು ಕೋಪಿಸೆ ಕೂಳುಬಿಟ್ಟೆನು |
ಹೀನ ಸ್ತ್ರೀಯರ ಮಾತನಾದರು |
ಜಾನಿಸೆನು ಮಕರಂದ ಪುಷ್ಪಾದಿಗಳ ಧೂಪವನುಂ ||
ಮೌನಿ, 'ಸುಭ್ರುವೆ' ನಿನ್ನವಿರಹದೊ |
ಳೇನಿದೆಲ್ಲವು ಕತ್ತಲಿಯೆ ಸರಿ |
ನಾನು ಬಾಗಿಹೆನೀಗ ದೃಷ್ಟಿಯೆ ಸಿಟ್ಟುಬಿಡು ನೀನು ||

ಇಲ್ಲಿ ಈರ್ಷೆಯಿಂದ ಸಿಟ್ಟಾಗಿರುವ ವಲ್ಲಭೆಯನ್ನು ಪ್ರಸನ್ನೀಕರಿಸಿಕೊಳ್ಳುವ ವ್ಯಾಪಾರವು ತೋರುತ್ತಿದ್ದರೂ ಕಣ್ಣುನೋವುಳ್ಳವನು ತನ್ನ ಕಣ್ಣನ್ನು ಕುರಿತು ಆಕ್ರೋಶಮಾಡುವದು ವಿವಕ್ಷಿತವಾದ ಅರ್ಥವಿದೆ. ಅದು "ದೃಷ್ಟಿಯೆ," ಎಂಬ ಸಂಬೋಧನ ವಚನದಿಂದ ಆವಿಷ್ಕೃತವಾಗಿದೆ.

ವಕ್ತೃಗುಪ್ತವು ಪರವಂಚನಾರ್ಥವಾಗಿರುವದು. ಆದರೆ ಕವಿಗುಪ್ತವು ಸ್ವಪ್ರೌಢಿಯನ್ನು ತೋರಿಸುವ ಸಲುವಾಗಿರುವದು. (ಮಾನಿ=ಕೋಪವುಳ್ಳ; ಮರ್ಯಾದೆಯುಳ್ಳ; ಸುಭ್ರು=ಚಲೋಹುಬ್ಬುಳ್ಳಸ್ತ್ರೀಯೂ ದೃಷ್ಟಿಯೂ; ಕೋಪಿಸೆ=ಸಿಟ್ಟಾಗಲು; ವಿಕಾರಹೊಂದಲು).

---

೯೦. ಯುಕ್ತ್ಯಲಂಕಾರವು. ಲಕ್ಷಣ:— ಯಾವದಾದರೊಂದು ಕ್ರಿಯೆಯಿಂದ ಎರಡನೆಯವರನ್ನು ವಂಚಿಸಿ ತನ್ನ ಮರ್ಮವನ್ನು ಗೋಪನಮಾಡಿಕೊಂಡಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ || ನಿನ್ನಯ ರೂಪವ ಬರೆಯುತ |
ಅನ್ಯರ ನೋಡುತ್ತ ನನೆಯ ಬಿಲ್ಲನು ಕರದೆ ||
ಬಿನ್ನಣದೆ ಬರೆದು ಗೆಳತಿಗೆ |
ತನ್ನಯ ಮನಸಿಜನ ಚಿತ್ರವನು ನೋಡೆಂದಳ್ ||

ಇಲ್ಲಿ ನನೆಯ ಬಿಲ್ಲನ್ನು ಬರೆಯುವ ಕ್ರಿಯೆಯಿಂದ ಬೇರೆ ಜನರಿಗೆ ಮನ್ಮಥನು ಇವಳಿಂದ ಬರೆಯಲ್ಪಟ್ಟಿದ್ದಾನೆ, ಎಂಬ ಭ್ರಾಂತಿಯನ್ನು ಹುಟ್ಟಿಸಿ "ಇದು ತಾನು ನೋಡಿದ ರಾಜನ ಚಿತ್ರವು" ಎಂಬ ಮರ್ಮವು ಗೋಪನಮಾಡಿಕೊಳ್ಳಲ್ಪಟ್ಟದೆ.

ಮತ್ತೆ ಉದಾ:—

ಭಾಮಿನಿ|| ಇರುಳಿನಲಿ ದಂಪತಿಗಳೀರ್ವರು |
ತರತರದೊಳಾಡಿರುವ ನುಡಿಗಳ |
ನಿರದೆ ಪಂಜರಶುಕವದಾಲಿಸಿ ಪಗಲೊಳೆಲ್ಲವನು ||
ಹಿರಿಯರಿಗೆ ಕೇಳಿಸುವ ತೆರದಿಂ |
ತಿರುತಿರುಗಿ ಪಠಿಸುವದು ನಾರಿಯು |
ಮರಿತು ನಾಚಿಕೆಯಿಂದ ತನ್ನಯ ಕಿವಿಯೊಳಿರುತಿರುವ ||
ವರಪದ್ಮರಾಗವನು ಬಾಯೊಳು |
ತ್ವರದೆ ದಾಡಿಮ ಬೀಜನೆಪದಿಂ |
ದಿರಿಸಿ ನೀ ತಿನ್ನೆಂದು ಮುಚ್ಚಿಸಿದಳೆದರ ನುಡಿಗಳನು ||

ಇಲ್ಲಿ ಗಿಳಿಗೆ ದಾಡಿಮಬೀಜವನ್ನು ತಿನ್ನಿಸುವ ಕ್ರಿಯೆಯಿಂದ ವನಿತೆಯು ಸ್ವಗೋಪ್ಯದ ಮರ್ಮವು ಗೋಪಿತವಾಗಿದೆ.

---

೯೧. ಲೋಕೋಕ್ತ್ಯಲಂಕಾರವು. ಲಕ್ಷಣ:— ಕವಿತೆಯಲ್ಲಿ ಯಾವದಾದರೊಂದು ನಾಣ್ನುಡಿಯು ಇಲ್ಲವೆ ಗಾದೆಯು ಅನುಕರಿಸಲ್ಪಟ್ಟರೆ ಅಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ || ಕಂಗಳನು ಮುಚ್ಚಿ ತೊಲಗಿಸು |
ಅಂಗನೆ, ಕೆಲದಿನಗಳನ್ನು ಹೀಗೆಯೆ ನೀನು ||

ಇಲ್ಲಿ "ಕೆಲವು ದಿನಗಳನ್ನು ಕಣ್ಣು ಮುಚ್ಚಿ ಕಳೆ (ಅವಸರ ಮಾಡಬೇಡ)" ಎಂಬ ನಾಣ್ನುಡಿಯು ಅನುಕರಿಸಲ್ಪಟ್ಟದೆ (ಸ್ವಲ್ಪ ದಮ್ಮು ಹಿಡಿ ಎಂಬಂತೆ).

---

೯೨. ಛೇಕೋಕ್ತ್ಯಲಂಕಾರವು. ಲಕ್ಷಣ:— ಯಾವ ಕವಿತೆಯಲ್ಲಿ ಲೋಕಪ್ರವಾದವು ಭಿನ್ನಾರ್ಥದಿಂದ ಯುಕ್ತವಾಗಿ ಸಂಗ್ರಹಿಸಲ್ಪಡುವದೋ ಅಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ || ಭುಜಗನ ಚರಣವು ತಿಳಿವುದು |
ಭುಜಗನಿಗೈ ತಿಳಿಯದನ್ಯ ಜನರಿಗೆ ನಿಜದಿಂ ||

ಅರ್ಥ— ಒಬ್ಬನು ಇನ್ನೊಬ್ಬನನ್ನು ಒಂದು ಸಂಗತಿಯನ್ನು ಕೇಳಲು ಅವನು "ಹಾವಿನ ಹೆಜ್ಜೆಯು ಹಾವಿಗೆ ಗೊತ್ತು" ಎಂಬ ಲೋಕವಾದವನ್ನು ನುಡಿದು ಮತ್ತೊಬ್ಬನನ್ನು ತೋರಿಸಿದನು. ಇಲ್ಲಿ ಈ ಸಂಗತಿಯು ಗುಪ್ತವಾಗಿದ್ದದರಿಂದ ಇವನ ಹೊರ್ತು ಬೇರೆ ಜನರಿಗೆ ಇದು ಗೊತ್ತಿಲ್ಲವೆಂಬದು ಸಾಮಾನ್ಯಾರ್ಥವು. ರಹಸ್ಯವಾದ ಅನಂಗವ್ಯಾಪಾರದಲ್ಲಿಯೂ ಇವರೀರ್ವರೂ ಸಹಚರರು ಎಂಬ ಮರ್ಮೋದ್ಘಾಟನವು ಗರ್ಭಿತಾರ್ಥವು. (ಭುಜಗ= ಹಾವು; ವಿಟ).

---

೯೩. ವಕ್ರೋಕ್ತ್ಯಲಂಕಾರವು. ಲಕ್ಷಣ:— ಶ್ಲೇಷದಿಂದಾಗಲಿ ಧ್ವನಿವಿಕಾರದಿಂದಾಗಲಿ ಒಬ್ಬನು ಆಡಿದ ವಾಕ್ಯದ ಅರ್ಥವನ್ನು ಇನ್ನೊಬ್ಬನು ಬೇರೊಂದರ್ಥವನ್ನಾಗಿ ಊಹಿಸಿದರೆ ಅಲ್ಲಿ ಈ ಅಲಂಕಾರವಾಗುವದು. ಇಲ್ಲಿ ಶ್ಲೇಷವು ಮುಖ್ಯವಾಗಿ ಸಭಂಗವೆಂತಲೂ ಅಭಂಗವೆಂತಲೂ ವಿಕೃತವೆಂತಲೂ ಮೂರು ವಿಧವಾಗಿದೆ.

ಕಂದ || ಬಿರುನುಡಿಯಿಂದಿವನಾಡನು |
ತರುಣನೆ ಬಿಡು ಕರುಣದಿಂದೆ ಹೊಡೆಯದೆ ನೀನು ||
ತುರುಮಂದಿಯೊಳಿವನಾಡನು |
ಮರುಳನೆ ಹಿಡಿದೊಯ್ದು ಬಿಡುವೆ ತಡೆಯದಿರಿನ್ನು ||

ಇಲ್ಲಿ 'ಇಂದು ಇವನು ಬಿರುನುಡಿಯ ಆಡನು' ಎಂದು ಒಬ್ಬನು ಆಡಿದ ವಾಕ್ಯದಲ್ಲಿ ಸಭಂಗದಿಂದ 'ಬಿರುನುಡಿಯಿಂದ ಇವನ ಆಡನು (ಅಜವನ್ನು), ಎಂಬ ಅರ್ಥಾಂತರವನ್ನು ಇನ್ನೊಬ್ಬನು ಕಲ್ಪಿಸಿದ್ದು ಉತ್ತರಾರ್ಧದಿಂದ ತಿಳಿಯುವದು. ಇನ್ನು ಪದಚ್ಛೇದವಿಲ್ಲದೆ ಇಡೀ ಶಬ್ದಕ್ಕೆ ದ್ವಂದ್ವಾರ್ಥಗಳಿರಲು ಅದು ಅಭಂಗವೆನಿಸುವದು. ಉದಾ:-

ಕಂದ || ಬೇಡಿದರು ದಾರು ಕುಡಿವರು |
ನೋಡದಿರ್ಕೆ ದಾರು ಕುಡಿವ ಮನುಜನ ಮೊಗಮಂ ||

ಇಲ್ಲಿ 'ಕುಡಿಯುವಂಥವರು ಇದನ್ನು ಯಾರು ಬೇಡಿದರು? ಎಂದು ಒಬ್ಬನು ಕೇಳಿದ ವಾಕ್ಯದಲ್ಲಿ ಅಭಂಗದಿಂದ 'ಸೆರೆಯನ್ನು ಕುಡಿಯುವವರು ಬೇಡಿದರು, ಎಂಬ ಅರ್ಥಾಂತರವನ್ನು ಇನ್ನೊಬ್ಬನು ಕಲ್ಪಿಸಿದು ಉತ್ತರಾರ್ಧದಿಂದ ತಿಳಿಯುವದು. (ದಾರು=ಯಾರು; ಸೆರೆ). ಮತ್ತೆ ಉದಾ: —

ಕಂದ || ಒಡಲಿದು ಬೆನ್ನಿಗೆ ಹತ್ತಿದೆ |
ಬಡಿಗೆಯ ಮೂಡಿದಿರಿ ನಿಮ್ಮದೀ ದೆಸೆಯಾಯ್ತೆ? ||
ಒಡಲಿಗು ಬೆನ್ನಿಗು ಬಿಟ್ಟದೆ |
ಬಡಿಗನು ಮಾಡಿರಲು ಬಡಿಗೆಯನು ಕೊಂಡೆನು ಕೇಳ್ ||

ಇಲ್ಲಿ ಏಕಾದಶಿಯಲ್ಲಿ ಉಪವಾಸ ಮಾಡಿ ಕೈಯಲ್ಲಿ ಬಡಿಗೆಯನ್ನು ಹಿಡುಕೊಂಡು ಬರುವದನ್ನು ನೋಡಿ ಒಬ್ಬನು ಅವನಿಗೆ ಪೂರ್ವಾರ್ಧದಿಂದ ಪ್ರಶ್ನಮಾಡಲು ಅದಕ್ಕೆ ಅವನು ಅರ್ಥಾಂತರವನ್ನು ಕಲ್ಪಿಸಿ ಉತ್ತರಾರ್ಧವನ್ನು ನುಡಿದಿದ್ದಾನೆ. (ಆಯ್ತು ಇತಿರೂಪಂ ಇತಾವೇರ್ಯಶ್ಚ ಶ. ಶಾ. ೫೦೧ ಸೂತ್ರೇಣಸಿದ್ಧಂ). ಮತ್ತೆ ಉದಾ: —

ವಾರ್ಧಿಕ || ನೀನಾರು? ಹರಿ ನಾನು; ಮರದೆ ಕುಳಿತಿರು ನೀನು |
ನಾನು ಮಾಧವನು ಕೇಳ್; ವನದೊಳಿರು ಲತೆಗಳಲಿ |
ಮಾನಿನಿಯೆ ಕೇಳ್ಧರಣಿಧರನಾನು; ಸರ್ಪರಾಜನೆ ಪೋಗು ಪಾತಾಳಕ್ಕೆ||

ಮೀನಾಕ್ಷಿ ಬಂದಿಹನು ಗೋಪನಂದನನು ತಿಳಿ ।
ನೀನು ಕಾಯಲೊ ಜನರ ದನಕರುಗಳೀಗೆನಲು ।
ಏನು ಮಾತಾಡದಲೆ ಸುಮ್ಮನಾಗಿಹ ಕೃಷ್ಣನೆಮಗೀಗೆ ಸಮ್ಮದವನು ॥

ಇಲ್ಲಿ ರಾಧೆಯು ಕೃಷ್ಣನು ಆಡಿದ ಪ್ರತಿಯೊಂದು ವಾಕ್ಯದಲ್ಲಿ ಅಭಂಗದಿಂದ ಅರ್ಥಾಂತರಗಳನ್ನು ಕಲ್ಪಿಸಿದ್ದು ಸ್ಪಷ್ಟವೇ ಅದೆ. (ಹರಿ= ವಿಷ್ಣು; ಕಪಿ. ಮಾಧವ=ವಿಷ್ಣು; ವಸಂತ. ಧರಣಿಧರ=ವರಾಹರೂಪಿ ಯಾದ ವಿಷ್ಣು; ಶೇಷ. ಗೋಪನಂದನ=ನಂದಗೋಪನ ಮಗನು; ಗೊ ಲ್ಲರ ಹುಡುಗನು). ಉಕ್ತವಾಗಿರುವ ಶಬ್ದದ ಕೆಲವು ವರ್ಣಗಳನ್ನು ಹೆಚ್ಚು ಕಡಿಮೆ ಮಾಡಿ ಅರ್ಥಾಂತರಗಳನ್ನು ಕಲ್ಪಿಸಿದರೆ ಅದು ವಿಕೃತ ಶ್ಲೇಷವೆನಿಸುವದು. ಉದಾ: —

ಕಂದ ॥ ಹಚಡವ ಕೇಳಿದನೊಬ್ಬನು ।
ಕಿಚಡಿಯು ಮಾಡಿಲ್ಲವೆಂದು ಪೇಳಿದನೋರ್ವಂ ॥

ಇಲ್ಲಿ ಹಚಡ ಶಬ್ದಕ್ಕೆ ವರ್ಣಪಲ್ಲಟದಿಂದ ಕಿಚಡಿಯೆಂಬ ಅರ್ಥಾಂ ತರವು ಕಲ್ಪಿಸಲ್ಪಟ್ಟದೆ. ಮತ್ತೆ ಉದಾ: —

ಭಾಮಿನಿ ॥ ಅಣುಗನೀಂ ಪೇಳಯ್ಯ ನಿಜವನು ।
ಹೆಣದ ಚೀಲವಿದೆಲ್ಲಿ ಸಿಕ್ಕಿತು ।
ಹೆಣದ ಚೀಲವಿದಲ್ಲ ಮರುಳನೆ ಹೆಣೆದು ಮಾಡಿದೆನ್ನೈ ॥

ಇಲ್ಲಿ "ಹೆಣದ" ಎಂಬ ಶಬ್ದಕ್ಕೆ "ಹೆಣೆದ" ಎಂಬ ಅರ್ಥಾಂತರವು ಕಲ್ಪಿಸಲ್ಪಟ್ಟಿದೆ. ಇನ್ನು ಧ್ವನಿವಿಕಾರದಿಂದ ಕಲ್ಪಿಸಲ್ಪಟ್ಟ ಅರ್ಥಾಂತರವು ಹೇಗಂದರೆ: —

ಕಂದ ॥ ಅಗಸಿಗಳಿಲ್ಲೀ ವೂರೊಳು ।
ಅಗಸಿಗಳೇಳುಂಟು ವಿಜಯಪುರಕೋಟೆಯಲಿ ॥

ಇಲ್ಲಿ ಒಬ್ಬ ವ್ಯಾಪಾರಸ್ಥನು "ಈ ಊರಲ್ಲಿ ಅಗಸಿಗಳು (ಧಾನ್ಯ ವಿಶೇಷ) ಇಲ್ಲ" ಎಂದು ಆಡಿದ ವಾಕ್ಯದಲ್ಲಿ ಧ್ವನಿವಿಕಾರದಿಂದ ಮತ್ತೊ ಬ್ಬನು "ಅಗಸಿಗಳು (ಬಾಗಿಲುಗಳು) ಏಳು ಉಂಟು, ಎಂಬ ಅರ್ಥಾಂ ತರವನ್ನು ಕಲ್ಪಿಸಿದ್ದು ಉತ್ತರಾರ್ಧದಿಂದ ತಿಳಿಯುವದು.

---

೯೪. ಸ್ವಭಾವೋಕ್ತ್ಯಲಂಕಾರವು. ಲಕ್ಷಣ: — ನ್ಯೂನಾಧಿಕ್ಯಗ ಳಿಲ್ಲದಂತೆ ಜಾತಿ-ಗುಣ-ಕ್ರಿಯಾ-ದ್ರವ್ಯಾದಿಗಳ ಸ್ವಭಾವವನ್ನು ಮನೋ ಹರವಾಗುವಂತೆ ವರ್ಣಿಸಿದಲ್ಲಿ ಈ ಅಲಂಕಾರವಾಗುವದು. ಉದಾ: —

ಕಂದ || ಚಿಗರೆಯು ನೋಳ್ಪುದು ನಮ್ಮನು |
ನಿಗರಿಸಿ ಕಿವಿಗಳನು ಕಣ್ಗಳಗಲವ ಮಾಡಿ ||

ಇದು ಕುರಂಗಜಾತಿಯ ಸ್ವಭಾವವರ್ಣನೆಯು. ಇನ್ನು ಗುಣಕ್ಕೆ ಉದಾ:—

ಕಂದ || ಒಡಲೊಳಗಿರುವದು ವಿದ್ಯೆಯು |
ನಡೆದರೆ ತಾ ಭಾರವಲ್ಲ ಕಳ್ಳರು ಕದಿಯರ್ ||
ಪೊಡನಿಪರು ಮುನಿದುಕೊಳ್ಳರು |
ಒಡಹುಟ್ಟಿರುವವರು ಪಾಲು ಬೇಡರದೆಂದುಂ ||

ಇದು ವಿದ್ಯಾಗುಣದ ಸ್ವಾಭಾವಿಕವರ್ಣನೆಯು. ಇನ್ನು ಕ್ರಿಯೆಗೆ ಉದಾ: —

ಬಾಮಿನಿ || ಶಿರದೆ ದೇವಗೆ ನಮಿಸಿ ನಾರಿಯು |
ತಿರುಗಿ ಬರುತಿರಲವಳ ಗಂಡನು |
ಬರಲು ಮಾರ್ಗದೊಳಿದಿರು ಲಜ್ಜಿತರಾಗಿ ಸಂಭ್ರಮದೆ ||
ತ್ವರದೊಳೆಡಬಲಗಳಲಿ ಭರದಿಂ |
ಸರಿಯಲೀರ್ವರು ಬಿಡಲು ದಾರಿಯು |
ಸರಿಗೆರಿಗಳಾಡುವರ ತೆರದಿಂ ಮೆರೆದರಂಗಣದೆ ||

ಇದು ಗಂಡಹೆಂಡರ ಸಲಜ್ಜಕ್ರಿಯಾಸ್ವಭಾವವರ್ಣನೆಯು.

ಸ್ವಭಾವೋಕ್ತಿಯು ಬಹು ವಿಸ್ತಾರವಾಗಿದೆ. ಸ್ವಭಾವಸ್ವರೂಪವೂ ನ್ಯೂನಾಧಿಕ್ಯಗಳೂ ಕವಿಗಳಿಂದಲೇ ತಿಳಿಯತಕ್ಕಂಥವುಗಳಾಗಿವೆ. ಜಾತ್ಯಾದಿಗಳ ಸ್ವರೂಪವು ನೈಯ್ಯಾಯಿಕರಿಂದ ತಿಳಿಯತಕ್ಕಂಥಾದ್ದು. ಮನೋಹರವಾಗುವಂತೆ ಎಂದು ಹೇಳಿದ್ದರಿಂದ "ಗಿಳಿಯ ಮೂಗು ಡೊಂಕವಿದೆ, ಕತ್ತೆಯ ಬಾಲವು ಮೊಂಡವಿದೆ," ಇತ್ಯಾದಿಗಳಲ್ಲಿ ಸ್ವಭಾವೋಕ್ತಿಯಾಗದು.

---

೫೫. ಭಾವಿಕಾಲಂಕಾರವು. ಲಕ್ಷಣ:— ಭೂತ-ಭಾವ್ಯರ್ಥಗಳ ಸಾಕ್ಷಾತ್ಕಾರವೆಂದರೆ ವರ್ತಮಾನ ಕಾಲದಲ್ಲಿ ಅನುಭವಿಸಿದಂತೆ ವರ್ಣಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ || ನಾನಿನ್ನು ನೋಡುತಿರುವೆನು |
ದಾನವಸುರರಲ್ಲಿ ಕಲಹ ಮಾಡುವ ಪರಿಯಂ ||

ಇಲ್ಲಿ "ಇನ್ನು ನೋಡುತಿರುವೆನು" ಎಂದು ಹೇಳಿದ್ದರಿಂದ ಭೂತ ರ್ಹವು ವರ್ತಮಾನ ಕಾಲದಲ್ಲಿ ನಡೆದಂತೆಯಾಯಿತು. ಇದು ಸ್ಥಾನ ನ್ನು ನೋಡುವದರಿಂದ ಉಂಟಾದ ಭಾವನೆಯು. ಮತ್ತೆ ಉದಾ:—

ಭಾಮಿನಿ || ಮೂರುಗೂಡಿಪ್ಪತ್ತುವರ್ಷವು |
ನೂರೆ ಮೇಲಾಧಿಕರ ತಾಪವು |
ಬೇರೆ ಶಿಕ್ಷಣ ಕೃತ್ಯಭಾರವದಿಳಿಯಲಾ ಕ್ಷಣದೆ ||
ಸಾರೆ ಕೃಷ್ಣಾತೀರಯಲಗುರ |
ಮಾರುತಿಯ ಸನ್ನಿಧಿಗೆ ಪ್ರೇಮದ |
ಧಾರೆಗಳು ಸೋರುವದದೀಗಲು ತೋರುವದು ಕಣ್ಗೆ |

ಇಲ್ಲಿ ಕವಿಯು ಪೇನ್ಶನರನಾದ ಮೇಲಿನ, ಅಂದರೆ ಬಾವೀಕಾ ದಲ್ಲಿ ಉಂಟಾಗುವ ಆನಂದದ ಸಾಕ್ಷಾತ್ಕಾರದ ವರ್ಣನೆಯದೆ. ಇದ ಮುಂದಿನ ಸಂಗತಿಯು ಸ್ಮರಣೆಯಿಂದುಂಟಾದ ಭಾವನೆಯು.

---

೫೬. ಉದಾತ್ತಾಲಂಕಾರವು. ಲಕ್ಷಣ:—ಸಂಪತ್ತಿಯು ಚರಿತ್ರ ವಾಗಲಿ ಶ್ಲಾಘ್ಯಚರಿತ್ರವಾಗಲಿ ಬೇರೊಂದಕ್ಕೆ ಅಂಗವಾಗಿದ್ದರೂ ಅಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ || ರತ್ನದ ಕಂಬದೆ ತೋರುವ |
ನೂತ್ನದೆ ಪ್ರತಿಬಿಂಬಶತಗಳಿಂ ವೇಷ್ಟಿತರೊಳ್ ||
ಪ್ರತ್ನದ ರಾವಣನರಿದನು |
ಯುತ್ನದೆ ಮಾರುತಿಗೆ ರಾಕ್ಷಸರ ಸಂಘದಲಿ ||

ಇಲ್ಲಿ ಹೊಗಳತಕ್ಕಂಥ ಸಂಪತ್ತಿಯು ರಾವಣನ ಮಹತ್ವವನ್ನು ಸೂಚಿಸುವದು. ಮತ್ತೆ ಉದಾ:—

ಭಾಮಿನಿ || ಒತ್ತರದೆ ಮಧುವನ್ನು ಕುಡಿಯಲು |
ಮುತ್ತಿದಂತಿರೆ ಜೇನುನೊಣಗಳು |
ಮತ್ತೆ ಕಂಪಿನ ಸುಮಕೆ ಭ್ರಮರಗಳೋಡಿ ಬಂದಂತೆ ||
ಸುತ್ತೆಲ್ಲ ಜನರಿಂದ ಮುತ್ತಿದ |
ತತ್ವಮತಿ ಶ್ರೀಪತ್ತಚಾರ್ಯರ |
ನತ್ಯಂತ ಕೃಛ್ರದಲಿ ಕಂಡೆನುದಾತ್ತಗುಣಯುತರ ||

ಇದು ಶ್ಲಾಘ್ಯಚರಿತ್ರವು. ಶ್ರೀಪತ್ತಾಚಾರ್ಯ ಉಮರ್ಜಿ ಇವರ ಮಹತ್ವವನ್ನು ಸೂಚಿಸುವದು. ಮತ್ತೆ ಉದಾ:—

ಕಂದ || ಆಶಿವಪಾರ್ಥರ ಯುದ್ಧವ |
ದ್ರೀಶಿಖರದೆ ಜರಗಿತ್ತೈ ಮಹಾ ರಭಸದಲಿ ||

ಇದು ಹಿಮಾಲಯದ ಶ್ಲಾಘ್ಯಚರಿತವು. ಬೇರೊಂದು ವೃತ್ತಾಂತದಲ್ಲಿ ಹೇಳಲ್ಪಟ್ಟಿದ್ದರಿಂದ ಅದಕ್ಕೆ ಇದು ಅಂಗವಾಗಿದೆ.

---

೯೭. ಅತ್ಯುಕ್ತ್ಯಲಂಕಾರವು. ಲಕ್ಷಣ:— ಆಶ್ಚರ್ಯಕರವಾದಂಥ, ಹಾಗು ಅಸತ್ಯವಾದಂಥ ಔದಾರ್ಯ-ಶೌರ್ಯಾದಿಗಳ ವರ್ಣನೆಗಳಲ್ಲಿ, ಅಂದರೆ ಒಂದಕ್ಕಿಂತ ಹೆಚ್ಚಿನ ಅತಿಶಯೋಕ್ತಿಗಳಿದ್ದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ || ದಾತನು ನೀನಿರೆ ರಾಜನೆ |
ಮಾತೇಂ ಯಾಚಕರು ಕಲ್ಪತರುಗಳೆ ನಿಜದಿಂ ||

ಇಲ್ಲಿ ಯಾಚಕರಿಗೆ ಕಲ್ಪಶಾಖಿತ್ವವು ದೊರಕಿದ್ದರಿಂದ ಅವರಿಗ ಆಶ್ಚರ್ಯವೆನಿಸುವದಲ್ಲದೆ ರಾಜನಿಗೂ ಆಶ್ಚರ್ಯವೆನಿಸುವದು. ಇದು ಔದಾರ್ಯಾತ್ಯುಕ್ತಿಯು. ಮತ್ತೆ ಉದಾ:—

ಕಂದ || ಕಡಲುಗಳೊಣಗಿದವೇಳುಂ |
ಬಿಡದೀ ನೃಪವರನ ಶೌರ್ಯದಗ್ನಿಯೊಳಾಗಳ್ ||
ಪಡೆದವು ಪೂರ್ಣತೆಯಂ ರಿಪು |
ಮಡದಿಯರಶ್ರುಗಳ ಧಾರೆಯಿಂದಲೆ ಮರಳಿ ||

ಇಲ್ಲಿ ಒಂದಕ್ಕಿಂತ ಹೆಚ್ಚಿನ ಅತಿಶಯೋಕ್ತಿಗಳಿಂದ ರಾಜನ ಶೌರ್ಯವು ವರ್ಣಿಸಲ್ಪಟ್ಟಿದೆ. ಕಾರಣ ಇದು ಶೌರ್ಯಾತ್ಯುಕ್ತಿಯು. ಸಂಪದತ್ಯುಕ್ತಿಯಲ್ಲಿ ಉದಾತ್ತಾಲಂಕಾರವಾಗುವದು. ಆದಿಪದದಿಂದ ಬೇರೆ ಅತ್ಯುಕ್ತಿಗಳು ಸಂಗ್ರಹಿಸಲ್ಪಡುವವು. ಉದಾ:—

ಭಾಮಿನಿ || ದಿನದಿನಕೆ ವರ್ಧಿಸುವ ನಿನ್ನಯ |
ಘನಕುಚಂಗಳಿಗಿನಿತು ಸಾಲದು |
ವನಿತೆ ನಿನ್ನಯ ಬಾಹುಯುಗಲದ ನಡುವಿನಂತರವು ||
ಸ್ತನದ ಬೆಳವಣಿಗೆಯನು ಭಾವಿಯು |
ಮನದೊಳಾಲೋಚಿಸದೆ ಬ್ರಹ್ಮನು |
ತನುತರದೊಳಾಕಾಶವನು ನಿರ್ಮಾಣ ಮಾಡಿದನೌ ||

೯೮. ನಿರುಕ್ತ್ಯಲಂಕಾರವು. ಲಕ್ಷಣ:— ಯಾವದಾದರೊಂದು ವ್ಯುತ್ಪತ್ತಿಯಿಂದ ನಾಮಗಳ ಪ್ರಸಿದ್ಧಾರ್ಥವನ್ನು ಬಿಟ್ಟು ಬೇರೊಂದರ್ಥವನ್ನು ಕಲ್ಪಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ || ಚರಿತವನೋಡುತ ನಿನ್ನಯ |
ಅರಿತೆನು ನಿಜವಾಗಿ ನೀನು ದೋಷಾಕರನೈ ||

ಇದು ವಿರಹಿಯು ಚಂದ್ರನಿಗೆ ಆಡಿದ ವಾಕ್ಯವು. ಇಲ್ಲಿ ಚಂದ್ರನಿಗೆ ದೋಷವುಳ್ಳವನೆಂಬ ಅರ್ಥವು ಕಲ್ಪಿಸಲ್ಪಟ್ಟದೆ. (ದೋಷಾಕರಃ= ದೋಷಾ ಕರೋತೀತಿ= ರಾತ್ರಿಯನ್ನು ಉಂಟು ಮಾಡುವವನು; ದೋಷಾಣಾಂ ಆಕರಃ= ಅನೇಕದೋಷಗಳುಳ್ಳವನು ಚಂದ್ರನು)

ಮತ್ತೆ ಉದಾ:—

ಭಾಮಿನಿ || ಕನ್ನಡದ ಕವಿಗಳನು ಗಣಿಸಲು |
ಮುನ್ನಲಕ್ಷ್ಮೀಶನಿಗೆ ಕಿರಿಬೆರ |
ಳನ್ನು ಕೊಟ್ಟರು ಸಭೆಯೊಳಾಪಂಡಿತರು ತೀವ್ರದಲಿ ||
ಇನ್ನುವರೆಗಾತನಿಗೆ ಸರಿಯೂ |
ದುನ್ನತರು ದೊರಕದ್ದರಿಂದಲೆ |
ಬನ್ನದಿನ್ನೊಂದನ್ನನಾಮಿಕೆಯೆಂದು ಕರೆಯುವರು ||

ಇಲ್ಲಿ ಅನಾಮಿಕಾ ಶಬ್ದಕ್ಕೆ ಬೇರೊಂದರ್ಥವು ಕಲ್ಪಿಸಲ್ಪಟ್ಟದೆ. (ಅನಾಮಿಕಾ=ಕಿರಿಬೆರಳಿನ ಹತ್ತರದ ಬೆರಳು; ಹೆಸರು ಇಲ್ಲದ್ದು)

---

೯೯. ಪ್ರತಿಷೇಧಾಲಂಕಾರವು. ಲಕ್ಷಣ:—ಪ್ರಸಿದ್ಧವಾದ ನಿಷೇಧದ ವರ್ಣನೆಯು ಅರ್ಥಾಂತರದಿಂದ ಗರ್ಭಿತವಾಗಿದ್ದರೆ ಅಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ || ಕಿತವನೆ! ದ್ಯೂತವಿದಲ್ಲವು |
ಕತಿಪಯ ಶರ ಬಿಡುವ ಕಡಿವ ಚದುರಾಟವಿದೈ ||

ಇದು ಅರ್ಜುನನು ಯುದ್ಧದಲ್ಲಿ ತನಗೆ ಎದುರಾಗಿ ಬರುವ ಶಕುನಿಗೆ ಆಡಿದ ವಚನವು. "ಯುದ್ಧವು ದ್ಯೂತವಲ್ಲ" ಎಂಬದನ್ನು ಯಾರಿಗೂ ಹೇಳಬೇಕಾಗಿಲ್ಲ. ಆದರೂ ಇಲ್ಲಿ ಆನಿಷೇಧವಿಧಾನವು "ದ್ಯೂತದಲ್ಲಿಯೇ ಮಾತ್ರ ನಿನ್ನ ಚಾತುರ್ಯವು, ಎಂಬ ಅರ್ಥಾಂತರದಿಂದ ಗರ್ಭಿತವಾದದ್ದೆಂಬದು "ಕಿತವ" ಶಬ್ದದಿಂದ ಸೂಚಿತವಾಗುವದು. ಮತ್ತೆ ಉದಾ:—

ಭಾಮಿನಿ || ಸಾಲೆಯಲಿ ನಾನಿರಲು ಬಾಲ್ಯದ |
ಕಾಲದಲಿ ಮೇಲೆನಿಸಿ ಕೊಂಡಿಹ |
ಕಾಲವಲ್ಲವು ವೇಳೆಯಿದು ಪಂಡಿತರು ಪ್ರತಿಭೆಯನು ||
ಮೇಲೆ ತೋರಿಪ ಕಾಲನೀಗಲು |
ಮೇಲೆನಿಸಿದೊಡೆ ನಾನು ನಿನ್ನಯ |
ಕಾಲುಗಳಿಗೆರಗುವೆನು ವಿದ್ಯಾಶಾಲಿ ಕವಿಯೆನುತ ||

ಇಲ್ಲಿ 'ಇದು ಆ ಸಮಯವಲ್ಲ' ಎಂಬ ನಿಷೇಧವಿಧಾನವು 'ಆ ಸಮಯದಲ್ಲಿ ಮಾತ್ರ ನಿನ್ನ ಚಾತುರ್ಯವಿತ್ತು, ಎಂಬ ಅರ್ಥಾಂತರದಿಂದ ಗರ್ಭಿತವಾದದ್ದೆಂಬದು "ಈಗಲು ಮೇಲೆನಿಸಿದೊಡೆ" ಎಂಬ ವಾಕ್ಯದಿಂದ ಸೂಚಿತವಾಗುವದು. (ಮೇಲೆ ತೋರಿಪ=ಹೊರಗೆ ತೋರಿಸುವ). ಮತ್ತೆ ಉದಾ: —

ಕಂದ|| ಆಗಿಲ್ಲ ವಿಷದೆ ಶಸ್ತ್ರದೆ |
ಆಗಿಲ್ಲವದಗ್ನಿಯಿಂದೆ ಮೃತ್ಯುವಿನಿಂದುಂ ||
ಆಗಿರುವ ಸ್ತ್ರೀಯರ್ಕ್ಕಳ್ ||
ದಾಗಲು ಸ್ತ್ರೀಯರುಗಳಿಂದಲಪ್ರತಿಹತರು ||

ಇಲ್ಲಿ ಸ್ತ್ರೀಯರು ವಿಷಾದಿಗಳಿಂದ ನಿರ್ಮಿತರಾಗಿಲ್ಲವೆಂಬದನ್ನು ಯಾರಿಗೂ ಹೇಳಬೇಕಾಗಿಲ್ಲ. ಆದರೂ ಈ ನಿಷೇಧವಿಧಾನವು "ಸ್ತ್ರೀಯರು ವಿಷಾದಿಗಳಿಗಿಂತ ಕ್ರೂರರು" ಎಂಬ ಅರ್ಥಾಂತರದಿಂದ ಸಂಕ್ರಮಿತವಾದದ್ದೆಂಬದು "ಅಪ್ರತಿಹತರು" ಎಂಬ ಶಬ್ದದಿಂದ ಸೂಚಿತವಾಗುವದು.

---

೧೦೦. ವಿಧ್ಯಲಂಕಾರವು. ಲಕ್ಷಣ: — ಪ್ರಸಿದ್ಧವಾದ ವಿಧಿಯು

रसानुगुणशब्दार्थचिंतास्तिमितचेतसः ।
क्षणं स्वरूप स्पर्शोत्था प्रज्ञैव प्रतिभा कवेः ॥
सा हि चक्षुर्भगवतस्तृतीयमिति गीयते ।
येन साक्षात्करोत्येष भावांस्त्रैकाल्यवर्तिनः ॥

೧ ತಿಕರಿಣರುಗಳ್

ವರ್ಣನೆಯು ಅರ್ಥಾಂತರದಿಂದ ಗರ್ಭಿತವಾಗಿದ್ದರೆ ಅಲ್ಲಿ ಈ ಅಲಂಕಾರ ವಾಗುವದು. ಉದಾ:—

ಕಂದ|| ಕೋಗಿಲೆಯು ಕೋಗಿಲೆನಿಪುದು |
ರಾಗದೆ ಪಂಚಮುದಸ್ವರವ ಗೈಯುವ ದಿನದೊಳ್ ||

ಇಲ್ಲಿ "ಕೋಗಿಲೆಯು ಕೋಗಿಲೆನಿಪುದು" ಎಂಬ ವಿಧಾನವು ಅನುಪಯುಕ್ತವಾದದ್ದು. ಆದರೂ ಇದು "ಅತಿಮಧುರವಾದ ಪಂಚಮದ ಸ್ವರವನ್ನು ಗೈಯುತ್ತ ಜನರಿಗೆ ಪ್ರಿಯವಾಗುವದು" ಎಂಬ ಅರ್ಥದಿಂದ ಗರ್ಭಿತವಾದದ್ದೆಂಬದು "ಪಂಚಮದ ಸ್ವರವ ಗೈಯ್ಯುವ ದಿನದೊಳ್" ಎಂಬ ವಾಕ್ಯದಿಂದ ಸೂಚಿತವಾಗುವದು. ಮತ್ತೆ ಉದಾ:—

ಭಾಮಿನಿ|| ದ್ವಿಜನ ತನುಜನ ಬದುಕಿಸಲು ಬಲ |
ಭುಜವೆ ನೀನೀ ತವಸಿಯಲಿ ಶೂ |
ದ್ರಜನಲಿಡು ಖಡ್ಗವನದೀಗಲು ಬಹುಲ ತೀವ್ರದಲಿ ||
ನಿಜಸತಿಯು ಬಹುಗರ್ಭಭರಜನ |
ಕಜೆಯ ವಿಜನದೊಳಿಟ್ಟ ರಾಮನ |
ಕುಜನಗಾತ್ರವೆ! ನಿನಗೆ ಕರುಣವು ಬರದು ನಿಶ್ಚಯದೆ ||

ಇಲ್ಲಿ ರಾಮನು ತನ್ನ ಭುಜಕ್ಕೆ "ರಾಮನ ಕುಜನ ಗಾತ್ರವೆ?" ಎಂದು ನುಡಿದದ್ದು ಅನುಪಯುಕ್ತವಾದದ್ದು. ಇದು ತಾನು "ಅತಿನಿಷ್ಠುರಣಿಯು" ಎಂಬ ಅರ್ಥದಿಂದ ಗರ್ಭಿತವಾದದ್ದೆಂಬದು ' ನಿಜಸತಿಯು.... ....ವಿಜನದೊಳಿಟ್ಟ" ಎಂಬ ವಾಕ್ಯದಿಂದ ಸೂಚಿತವಾಗುವದು. ಇದರಂತೆ 'ಜಾನಕಿಯ ಮಗನಿದಕೆ ಬೆದರುವೆನೆ?' ಇತ್ಯಾದಿ ಕಡೆಗಳಲ್ಲಿ ಊಹಿಸತಕ್ಕದ್ದು.

---

೧೦೧. ಹೇತ್ವಲಂಕಾರವು. ಲಕ್ಷಣ:—ಕಾರಕ ಹೇತುವನ್ನಾಗಲಿ ಜ್ಞಾಪಕ ಹೇತುವನ್ನಾಗಲಿ ಅದರ ಕಾರ್ಯದೊಡನೆ ಒಂದೇ ವಾಕ್ಯದಲ್ಲಿ ವರ್ಣಿಸಿದರೆ ಅಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ|| ತರಣಿಯುರ ಮಾನಭೇದಕೆ |
ಕರಗಳ ಪಸರಿಪನು ಜಗದೊಳೀ ಚಂದ್ರಮನು ||

ಇಲ್ಲಿ 'ಕಿರಣಪ್ರಸಾರವು' ಹೇತುವು. "ಮಾನಭೇದವು" ಕಾರ್ಯ

ತ್ತೆ. ಬೇರೆ ಫಲಗಳನ್ನು ನಿಷೇಧಿಸುವದಕ್ಕಾಗಿ ಇವೆರಡೂ ಒಂದೇ ವಾಕ್ಯದಲ್ಲಿ ವರ್ಣಿತವಾಗಿವೆ. ಮತ್ತೆ ಉದಾ:—

ಭಾಮಿನಿ|| ಕೆಡಿಸುವದು ದೇಹವನು ವ್ಯೆಮುರಿ |
ಹೊಡಿಸುವದು ಮಾನವನು ಕಳೆವುದು |
ಬಡಿಸುವದು ಬಡತನವ ದೇಶಾಂತರಕೆ ಕಳಿಸುವದು ||
ಜಡಿಸುವದು ನಾಚಿಕೆಯು ಹೆಂಡವ |
ಕುಡಿಸುವದು ಕಲಿಸುವದು ತುಡುಗಿನ |
ನಡತೆಯನು ದುರ್ವಿಷಯಲಂಪಟತನವು ಮಾನವಗೆ ||

ಇಲ್ಲಿ "ವಿಷಯಲಂಪಟತನವು" ಹೇತುವು. 'ದೇಹವನು ಕೆಡಿಸುವದು' ಮೊದಲಾದವುಗಳು ಕಾರ್ಯಗಳು. ಇನ್ನು ನೋಡುವದರಿಂದ ಉಂಟಾಗುವ ಕಾರ್ಯದ ಹೇತುವು ಜ್ಞಾಪಕವೆನಿಸುವದು. ಇದಕ್ಕೆ ಉದಾ:—

ಭಾಮಿನಿ|| ಜಾಣನಿಗು ವಿಷಯಾಭಿಲಾಷೆಯ |
ಮಾಣದಲೆ ಪುಟ್ಟಿಸುತ ಸೊಕ್ಕಿನ |
ಕೋಣನನು ಮಾಡುವದು ಬಹುತೀವ್ರದಲಿ ನಾಟಕವು ||
ಮೇಣುಳಿದ ಜನರನ್ನು ಪೋಹವ |
ಗಾಣದಲಿ ಹಿಡಿಕೊಂಡು ತನ್ನಯ |
ತಾಣಕೆಳದೊಯ್ಯುತಲಿ ಸತ್ವವ ಹೀರಿ ಬಿಡುತಿಹುದು ||

೨. ಹೇತುವಿಗೂ ಕಾರ್ಯಕ್ಕೂ ಅ*ಭೇದವನ್ನು ಹೇಳಿದಲ್ಲಿಯೂ ಈ ಅಲಂಕಾರವಾಗುವದು. ಉದಾ:—

ಕಂದ|| ವೆಂಕಟನ ಕಟಾಕ್ಷವು ನಿಃ |
ಶಂಕದೆ ಲಕ್ಷ್ಮೀವಿಲಾಸವದು ಬುಧಜನಕೆ ||

ಇಲ್ಲಿ "ಕಟಾಕ್ಷವು" ಹೇತುವು. "ಲಕ್ಷ್ಮೀವಿಲಾಸವು" ಕಾರ್ಯವು. ಕಾರ್ಯವು ಅವಶ್ಯವಾಗಿಯೂ ಶೀಘ್ರವಾಗಿಯೂ ಆಗಬೇಕೆಂದು ಇವೆರಡಕ್ಕೂ ಅಭೇದವು ಹೇಳಲ್ಪಟ್ಟಿದೆ. ಮತ್ತೆ ಉದಾ:—

ಇದನ್ನು ಹಿಂದೆ ಬರೆಯತಕ್ಕದ್ದು. ಮೊದಲು ಆಕ್ಷೇಪಾಲಂಕಾರದ ೩|೨ನೇ ಭೇದಗಳಲ್ಲಿ ಬಾಧಿತವಾದ ವಿಧಿ-ಪ್ರತಿಷೇಧಗಳು ಹೇಳಲ್ಪಟ್ಟವು. ಅವುಗಳಿಗೆ ಇವು ಪ್ರತಿದ್ವಂದ್ವಗಳಾಗಿವೆ.

ಭಾಮಿನಿ|| ಪೂಸವರ ಶಮರೂಪ ದೇವನು |
ತಾನು ಬಡವರ ಕಾಮಧೇನುವು |
ಏನು ಸಂಶಯವಿಲ್ಲವೀತನೆ! ಪ್ರೇಮದಾಕೃತಿಯು ||
ಆನತರ ನಂಬಿಗೆಯ ಮೂರ್ತಿಯು |
ದಾನದಿರವು ಪ್ರತಾಪಕೀರ್ತಿಯು |
ಸ್ಥಾನವೈದನೆ ಜಾರ್ಜರಾಜನು ನಮಗೆ ನಿಶ್ಚಯದೆ ||

ಶ್ರೀಸಾರ್ವಭೌಮ ಜಾರ್ಜರಾಜರಿಂದ ನಮಗೆ "ಶಾಂತಿ" ಮೊದಲಾದವುಗಳು ಶೀಘ್ರವಾಗಿ ದೊರಕುವವು. ಆದ್ದರಿಂದಲೇ ಇಲ್ಲಿ ಅವರಿಗೆ "ಶಮರೂಪದೇವನು, ಇತ್ಯಾದಿ ಅಭೇದೋಕ್ತಿಗಳು ಹೇಳಲ್ಪಟ್ಟವೆ. ಇದು ರೂಪಕಕ್ಕಿಂತಲೂ ಮನೋಹರವಾಗಿರುವದರಿಂದ ಅದರಲ್ಲಿ ಅಂತರ್ಭೂತವಾಗದು.

---

೧೦೨. ಆಶೀರಲಂಕಾರವು. ಲಕ್ಷಣ:—ದೊರೆಯದ್ದು ದೊರೆಯಬೇಕೆಂಬ ಇಚ್ಛೆಯು, ಅಂದರೆ ಪ್ರಿಯೋಕ್ತಿಯು ಆಶಿಷವೆನಿಸುವದು. ಇಂಥ ಪ್ರಿಯೋಕ್ತಿಗಳು ಆಶೀರರ್ಥದ ಕ್ರಿಯಾಪದಗಳಿಂದ ಸಂಪಾದಿಸಲ್ಪಟ್ಟದ್ದರೆ, ಅಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ || ರಕ್ಷಿಸಲಿ ಜಾರ್ಜರಾಜರ |
ನಕ್ಷಯ ಸುಖವಿತ್ತು ಹಿಂದು ದೇಶದೊಳೀಶಂ ||
ಶಿಕ್ಷಿಸಲಿ ಸಕಲಕಡೆಯಲಿ |
ದಕ್ಷತೆಯಿಂದಾಂಗ್ಲನೃಪ ವಿಪಕ್ಷಗಳನ್ನು ||

ಇಲ್ಲಿ ಶ್ರೀಜಾರ್ಜರ ಪ್ರಿಯೋಕ್ತಿಯು "ರಕ್ಷಿಸಲಿ, ಶಿಕ್ಷಿಸಲಿ" ಇತ್ಯಾದಿ ಆಶೀರರ್ಥಗಳಿಂದ ಸಂಪಾದಿತವಾಗಿದೆ. ಮತ್ತೆ ಉದಾ:—

ಭಾಮಿನಿ|| ಚರಣದಲಿ ಬಿದ್ದಿರುವ ಪ್ರಿಯನೊಳು |
ತರುಣಿ ಬಿಡು, ಬಿಡು, ಪ್ರಣಯಕೋಪವ |
ಭರದೆ ಬಿಗಿ ಬಿಗಿದಪ್ಪಿಕೊಳ್ಳಲಿ ಬಾಹುಯುಗಲದಲಿ ||
ಗಿರಿಯೊಳುನ್ನತ ವಿಂಧ್ಯದಲಿ ಮಳೆ |
ಸುರಿಸುವಂತಿರೆ ಘನವು ಸಮಯದೆ |
ಹರುಷವಾರಿಗಳಿಂದ ತೊಯಿಸಲಿ ನಿನ್ನ ದೇಹವನು ||

ಇಲ್ಲಿ "ಕೋಪವ ಬಿಡು" ಅಪ್ಪಿಕೊಳ್ಳು, ಇತ್ಯಾದಿ ಆಶೀರರ್ಥಗ

ಳಿಂದ ಒಬ್ಬ ನಾಯಕನ ಪ್ರಿಯೋಕ್ತಿಯು ಸಂಪಾದಿತವಾಗಿದೆ. ಮತ್ತೆ
ುದಾ: —
ಭಾಮಿನಿ|| ಕರಿತುರಗರಥಪತ್ತಿಯಿಲ್ಲದ||
ತರತರದ ಭಟ-ವಣಿಜರಿಲ್ಲದ |
ಪರಿಪರಿಯ ವಿಪಣಿಗಳ ಸಾಲುಗಳಿಂದ ಶೋಭಿಸದ |
ಮೆರೆವ ಮಂದಿರ ಕೋಟಿಕೊತ್ತಳ |
ಎರದೆ ತವ ತೇಜದಲಿ ಹುರಿದಿಹ |
ಪುರವನೋಡಲಿ! ಜನರು ಜಾರ್ಜರೆ ನಿಮ್ಮ ವೈರಿಗಳ||

ಇಲ್ಲಿ ಶ್ರೀ ಜಾರ್ಜರಾಜರ ಪ್ರಿಯೋಕ್ತಿಯು "ಕರಿತುರಗ-ರಥಪ ಯಿಲ್ಲದ ನಿಮ್ಮ ವೈರಿಗಳ ಪುರವ ಜನರು ನೋಡಲಿ" ಇತ್ಯಾದಿ ಆಶೀರ ್ವದ ವಾಕ್ಯಗಳಿಂದ ಸಂಪಾದಿತವಾಗಿದೆ.

ಭಾಮಿನಿ|| ಹನುಮತನುಜನ ವಾಗ್ವಿನೋದದೊ |
ಳನುನಯದೊಳಗ್ರಿಮ ವಿನೋದವು |
ಜನರ ತನುಮನ-ವಾಗ್ವಿನೋದವದಿನಿತು ಪೂರೈಸೆ ||
ವಿನುತಯಲಗುರದೀಶ ಹನುಮನ |
ನೆನೆನೆನೆದು ತನು-ಮನ-ವಿನೋದನ |
ಜನನಿ-ಸೀತೆಯು ಮನವಿನೋದನ ಮನವೆ ಕಾರಣವು ||

ಇತಿ ಅಲಂಕಾರದರ್ಪಣದಲ್ಲಿ
ಸಾಮಾನ್ಯಾರ್ಥ ವರ್ಣನೆಯ ಪ್ರಥಮ ವಿನೋದವು.

ರಸಾದ್ಯರ್ಥ ವರ್ಣನೆಯ ದ್ವಿತೀಯ ವಿನೋದವು.

ರಸಲಕ್ಷಣ: — ರತ್ಯಾದಿಸ್ಥಾಯಿ ಭಾವಗಳಿಗೆ ಕಾರಣವಾದವುಗಳು ವಿಭಾವಗಳೆನಿಸುವವು. ಇವುಗಳಿಂದ ಉಂಟಾಗುವ ಕಾರ್ಯಗಳೂ ಅವುಗಳ ಸಹಕಾರಿಗಳೂ ಅನುಭಾವಗಳೆನಿಸುವವು. ವಿಭಾವಗಳಿಂದಲೂ ಅನುಭಾವಗಳಿಂದಲೂ ವ್ಯಭಿಚಾರಿಭಾವಗಳು ಹುಟ್ಟುವವು. ವಿಭಾವಗಳಿಂದಲೂ ಅನುಭಾವಗಳಿಂದಲೂ ವ್ಯಭಿಚಾರಿಭಾವಗಳಿಂದಲೂ ಸ್ಥಾಯಿಭಾವಗಳು ಹುಟ್ಟುವವು. ಇವುಗಳಿಂದುಂಟಾಗುವ ಚಿತ್ತವೃತ್ತಿವಿಶೇಷವು ರಸವೆನಿಸುವದು. ಉದಾಹರಣಾರ್ಥವಾಗಿ, ಅಡವಿಯಲ್ಲಿ ನಮ್ಮೆದುರಿಗೆ ಹುಲಿಯು ಬರಲು ಭಯವುಂಟಾಗುವದು. ಇಲ್ಲಿ ಭಯವೆಂಬ ಸ್ಥಿರವಾದ ಭಾವನೆಗೆ ಕಾರಣವಾದ ಹುಲಿಯು ವಿಭಾವವೆನಿಸುವದು. ಬಳಿಕ ಹುಟ್ಟುವ 'ಕೈ ನಡುಗುವದು' "ಎದೆ ಹಾರು

ವದು" ಮೊದಲಾದ ಕಾರ್ಯಗಳೂ, 'ಮುಂದಕ್ಕೆ ಹೋಗಲಿಕ್ಕೆ ಬಾರದಿ ವದು, ಬೆವರೊಡೆಯುವದು," ಮೊದಲಾದ ಈ ಕಾರ್ಯಗಳ ಸ ಕಾರಿಗಳೂ ಅನುಭಾವಗಳೆನಿಸುವವು. ಆ ಮೇಲೆ, ಇವುಗಳಿಂ ಹುಟ್ಟುವ 'ಮೂರ್ಛೆಬೀಳುವದು, ಓಡಿಹೋಗುವದು, ಮೊ ಲಾದವುಗಳು ವ್ಯಭಿಚಾರಿಭಾವಗಳೆನಿಸುವವು. ಬಳಿಕ, ಇವೆಲ್ಲವು ಗಳಿಂದ ಭಯವೆಂಬ ಸ್ಥಿರವಾದ ಭಾವವು ಹುಟ್ಟುವದು. ಆಗ ಉಂಟಾ ಗುವ ಚಿತ್ತವೃತ್ತಿವಿಶೇಷವು ಭಯಾನಕವೆನಿಸುವದು. ರತಿ-ಹಾಸ-ಶೋಕ-ಕ್ರೋಧ-ಉತ್ಸಾಹ - ಭಯ-ಜುಗುಪ್ಸಾ-ವಿಸ್ಮಯ - ಶಮಗಳೆಂಬ ಈ ಸ್ಥಾಯಿಭಾವಗಳಿಂದ ಕ್ರಮವಾಗಿ ಶೃಂಗಾರ-ಹಾಸ್ಯ-ಕರುಣ-ರೌದ್ರ-ವೀರ-ಭಯಾನಕ-ಬೀಭತ್ಸ-ಅದ್ಭುತ-ಶಾಂತಗಳೆಂಬ ಈ ರಸಗಳು* ಹುಟ್ಟು ವವು.

ರಸಾದಿಗಳು ಯಾವ ಕಡೆಯಲ್ಲಿ ಮುಖ್ಯತೆಯನ್ನು ಹೊಂದುವವೋ, ಅಲ್ಲಿ ಅವು ರಸಾದಿಧ್ವನಿಗಳೆನಿಸುವವು. ಯಾವ ಕಡೆಯಲ್ಲಿ ರಸಾದಿ ×ರಸಾದಿಗಳಿಂದ ಪೋಷಿಸಲ್ಪಡುವವೋ, ಅಲ್ಲಿ ಅವು ಅಲಂಕಾರಗಳೆ ವವು. ಹೇಗಂದರೆ:—

ಕಂದ|| ಎಲ್ಲಿ ರಸಾದಿಯು ಮುಖ್ಯತೆ |
ಯಲ್ಲಿಯು ರಸವಂಗುವೂ ರಸಾದಿಧ್ವನಿಯಿಂ ||
ಎಲ್ಲಿ ರಸಾದಿಯು ಪೋಷಕ ||
ವಲ್ಲಿ ರಸಾದ್ಯರ್ಥವೂದಲಂಕೃತಿಯುಕ್ಕುಂ ||

೧೧೨. ರಸವದಲಂಕಾರವು. ಲಕ್ಷಣ:—ಒಂದು ರಸವು ೬

---

*ಮ. ಸ್ರ.|| ಮುದದಿಂ ಶೃಂಗಾರ ಮುದ್ಯತ್ಪ್ರಹಸನ ವಿಧಿಯಿಂ ಹಾಸ್ಯವೂಕ್ಷಿಪ್ತಕೋಪಾ
ಸ್ಪದದಿಂ ರೌದ್ರಂ ಕೃಪಾರ್ತೋಕ್ತಿಯೊಳೆ ಕರುಣ ಮುತ್ಸಾಹದಿ ವೀರ ಮೂಜೊ
ದ್ಯದ ಪೆರ್ಚಿಂದದ್ಭುತಂ ಕುತ್ಸಿತದೊಗಡಿಕೆಯಿಂದ್ಯೆದೆ ಬೀಭತ್ಸಷ
ದ್ಮದೊಳುದ್ಯದ್ಭೀತಿಯಿಂದಂ ಭಯಮುಪಶಮದಿಂ ಪುಟ್ಟುಗುಂ ಶಾಂತಭಾವಂ||

×रस-भाव-तदाभास-भावशांति-भावोदय-भावस्ति-भावसंधि-भावशबलत्वे

ಸಕ್ಕೆ, ಇಲ್ಲವೆ ಬೇರೊಂದು ರಸಕ್ಕೆ ಇಲ್ಲವೆ ಭಾವಕ್ಕೆ ಅಂಗವು, ಅಂದರೆ ಪೋಷಕವು ಆಗಿದ್ದರೆ, ಅಲ್ಲಿ ಈ ಅಲಂಕಾರವಾಗುವದು. ಉದಾ: —

ಕಂದ|| ಅರರೆ! ಶಿವನರ್ಧವೆಲ್ಲವು |
ಗಿರಿಜೆಯ ಪಾಲಾದುದಕಟ! ಮರುಳಾದುದರಿಂ ||

ಇಲ್ಲಿ ಅದ್ಭುತರಸವು ಮುಖ್ಯವಾಗಿದೆ. ಶೃಂಗಾರವು ಅದಕ್ಕೆ ಅಂಗವಾಗಿದೆ. ಕಾರಣ, ಇದು ರಸವದಲಂಕಾರವೆನಿಸುವದು. ಮತ್ತೆ ಉದಾ: —

ಭಾಮಿನಿ|| ಇಂದು ಗೆಲ್ಲಲಿ ಸಕಲ ಮುನಿಕುಲ |
ಚಂದಿರನು ಜಗದೊಳಗೆ ಮಹಿಮೆಯ |
ಮಂದಿರನು ಶರಧಿಯನದಾಪೋಶನಕೆ ಕೊಂಡಿರಲು ||
ಅಂದು ಹರಿಯುವ ತಾರರೂಪಗ |
ಳಿಂದ ಪುಟ್ಟಿದ ಮಕರ-ಕಮಠಗ |
ಳೊಂದೆ ಸೆರೆ ನೀರೊಳಗೆ ಕಂಡಿಹ ಕುಂಭಸಂಭವನು ||

ಇಲ್ಲಿ ವಿಷ್ಣುವಿನ ಮುನಿವಿಷಯದ ರತಿರೂಪಭಾವಕ್ಕೆ ಅದ್ಭುತ ರಸವು ಅಂಗವಾಗಿದೆ. (ದೇವ-ಮುನಿವಿಷಯದ ಮುದವು ರತಿಭಾವವೆನಿಸುವದು). ಮತ್ತೆ ಉದಾ: —

ಭಾಮಿನಿ|| ಆರು ನೀನಾ? ಮೋರೆ ಮುಚ್ಚಿದ |
ನಾರಿ ನಿನ್ನಯ ಸಹಚರಿಯ ತಿಳಿ |
ಯೂರಿರದೆ ನೀನೊಬ್ಬಳೇಕೀ ಗೃಹದೆ ನಿಂತಿರುವೆ? ||
ದಾರಿ ನೋಡುತಲಿದ್ದೆ ನಿನ್ನಯ |
ಮೋರೆ ತೋರಿಸೆ ಎಂದು ಹತ್ತರ |
ಸಾರಿ ಗಂಡನ ಮೋರೆಯನು ನೋಡುತಲೆ ವಿಸ್ಮಯದೆ ||

ಇಲ್ಲಿ ಶೃಂಗಾರವು ಎಲ್ಲ ವಾಕ್ಯಾರ್ಥಭೂತವಾಗಿದೆ. ಅದಕ್ಕೆ ಅದ್ಭುವು ಅಂಗವಾಗಿದೆ. ಮತ್ತೆ ಉದಾ: —

ಚಂಪಕ|| ಎನಗಿದರಿಂದಲೇನು ತೆಗೆ; ಹಾಸ್ಯವನಿನ್ನೆಲೊ, ಘಾಸಿಮೂಡದಿರ್ |
ಎನಗಿದುವೇಕೆ? ನಿಷ್ಕರುಣ, ದೇಶ ಪ್ರವಾಸವು ಬಂಧುವರ್ಗದ ||
ಜನರು ಬಿಟ್ಟು ಪೋದುದಕೆ, ಕಾರಣವೇನದು ನಿನ್ನ ಕಂಡಿಹ |
ದಿನವಿದು ಧನ್ಯವೆಂದೆನುತ, ಸ್ವಪ್ನದೆ ನಲ್ಲನ ತಳ್ಕುಬಿದ್ದಿರಲ್ |
ಕನಸದು ತೀರೆ ಚೀರುವರು, ರಿಕ್ತಭುಜಾಂತರವಾಗೆ ನಿನ್ನಯ |
ಘನರಿಪುರಾಜಪತ್ನಿಯರು, ರೋದಿಸುದಿರ್ಪರರಣ್ಯವಾಸದೊಳ್ ||

ಇಲ್ಲಿ ಕರುಣವು ಎಲ್ಲ ವಾಕ್ಯಾರ್ಥಭೂತವಾಗಿದೆ. ಅದಕ್ಕೆ ವಿಪ್ರಲಂಭಶೃಂಗಾರವು ಅಂಗವಾಗಿದೆ. ಮತ್ತೆ ಉದಾ:—

ಭಾಮಿನಿ|| ಏಸು ವಿಷಮವು ದೈವಗತಿಯದು |
ನಾನು ಕಾಲೇಜದಲಿ ಮೇಲಿರೆ |
ಹೀನ ತರಗತಿಯೊಳಗೆ ಬಂದೆನು ಕೊನೆಯ ಭಾಗದಲಿ ||
ಆ ನನಗೆ ತಗಲಿರುವ ಹೇತುವೆ |
ತಾನದೀಗಲು ಮತ್ತೆ ಹೆಚ್ಚಿನ |
ಹೀನ ತರಗತಿಯೊಳಗೆ ನನ್ನನು ಯತ್ನಿಪುದು ತರಲು ||

ಇಲ್ಲಿ ಮೊದಲಿನ ಅರ್ಧದ ಸಂಗತಿಯಿಂದುಂಟಾದ ವಿಸ್ಮಯವು ಎರಡನೇ ಅರ್ಧದ ಸಂಗತಿಯ ವಿಸ್ಮಯವನ್ನು ಉತ್ಕರ್ಷಿಸುವದು. ಅಂದರೆ, ಒಂದು ವಿಸ್ಮಯವು ಮತ್ತೊಂದು ವಿಸ್ಮಯಕ್ಕೆ ಅಂಗವಾಗಿದೆ.

ಭಾವಲಕ್ಷಣ:— ದೇವತಾ-ಗುರು- ಶಿಷ್ಯ-ದ್ವಿಜ--ಪುತ್ರಾದಿಗಳಲ್ಲಿ ತೋರುವ ರತಿಯೂ, ಮತಿ-ಲಜ್ಜಾದಿ ೩೩ ವ್ಯಭಿಚಾರಿಗಳೂ* ಕಾವ್ಯದಲ್ಲಿ ಭಾವಗಳೆನಿಸುವವು.† ಇವು ಸ್ಥಿತಿ-ಉದಯ-ಪ್ರಶಮ-ಸಂಧಿ-ಶಬಲತ್ವಧ

---

* ಮ, ಸ || ಮತಿ[1]-ಲಜ್ಜಾ[2]ವೇಗ[3]-ಶಂಕಾ[4]-ಮರಣ[5]-ಚಪಲತಾ[6]-ಹರ್ಷ[7]-ನಿರ್ವೇದ[8]-ದೈನ್ಯ[9]
ಸ್ಮೃತಿ[10]-ಮೋಹಾ[11]ಲಸ್ಯ[12]-ಗರ್ವ[13]-ಶ್ರಮ[14]-ಮದ[15]-ಜಡತಾ[16]-ಗ್ಲಾನಿ[17]- ಸಂಸುಪ್ತಿ[18]-
ನಿದ್ರಾ[19] ||
ಧೃತಿ[20]-ತರ್ಕೋ[21]ನ್ಮಾದ[22]-ಬೋಧಾ[23]ಮಯ[24]-ಭಯ[25]- ಸವಿಷಾದೋ[26]ತ್ಸುಕಾ[27]
ಮರ್ಷ[28]-ಚಿಂತಾ[29]
ಸತತಾಸೂಯಾ[30]ವಹಿತ್ಥೋ[31]ಗ್ರ[32]-ಸುವಿಳಸದಪಸ್ಮಾರ[33]ಕಾಖ್ಯಾನದಿಂದಂ
(ಶೃ. ರ.)

† रतिर्देवादिविषया व्यभिचारितयाञ्चितः ।
भावः प्रोक्तस्तदाभासास्त्वनौचित्यप्रवर्तितः ॥ का. प्र. ॥

ಇವುಗಳ ವಿಸ್ತಾರವಾದ ವರ್ಣನೆಯನ್ನು ಕವಿಕಾಮನ ಶೃಂಗಾರರತ್ನಾಕರದಲ್ಲಿಯಾಗಲಿ, ರಸತರಂಗಿಣಿ-ರಸವಿಲಾಸಾದಿ ಬೇರೆ ಸಾಹಿತ್ಯಗ್ರಂಥಗಳಲ್ಲಿಯಾಗಲಿ, ನೋಡಿಕೊಳ್ಳತಕ್ಕದ್ದು.

ರ್ಮವುಳ್ಳವಾಗಿರುವವು. ಸ್ಥಿತಿಯೆಂದರೆ ಯಾವ ಭಾವವು ಯಾವರಸಕ್ಕೆ ಪೋಷಕವೋ, ಅದರಂತೆ ವರ್ಣಿಸುವದು. ಉದಯವೆಂದರೆ ಉತ್ಪತ್ತಿ. ಪ್ರಶಮವೆಂದರೆ ಶಾಂತಿ. ಸಂಧಿಯೆಂದರೆ ಎರಡು ವಿರುದ್ಧ ಭಾವಗಳ ಕೂಡುವಿಕೆಯು. ಶಬಲತ್ವವೆಂದರೆ ಪೂರ್ವಪೂರ್ವ ಭಾವಗಳನ್ನು ತಿರಸ್ಕರಿಸುತ್ತ ಹುಟ್ಟಿದ ಅನೇಕ ಭಾವಗಳ ಸಮೂಹವು. ಇಂಥ ಒಂದೊಂದು ಧರ್ಮದಿಂದ ಕೂಡಿದ ಭಾವವು ರಸಾದಿಗಳಿಗೆ ಅಂಗವಾದಲ್ಲಿ ಆಯಾ ನಾಮಗಳ ಅಲಂಕೃತಿಗಳಾಗುವವು.

ಇದಲ್ಲದೆ ಕೆಲವು ವೀರಶೃಂಗಾರಾದಿಗಳಲ್ಲಿ ರೋಷಾದಿಗಳು ವ್ಯಭಿಚಾರಿತ್ವವನ್ನು, ಅಂದರೆ ಅಸ್ಥಿರ ಭಾವವನ್ನು ಹೊಂದುವವು. ಆಗ ಅವಾದರೂ ಭಾವಗಳೆನಿಸುವವು.

---

೧೦೪. ಪ್ರೇಯೋಲಂಕಾರವು. (ಲಕ್ಷಣ):—ಭಾವವು ರಸಾದಿಗಳಿಗೆ ಅಂಗವಾದಲ್ಲಿ ಭಾವಾಲಂಕಾರವಾಗುವದು. ಇದಕ್ಕೇ ಪ್ರೇಯೋಲಂಕಾವೆಂತಲೂ ಹೆಸರು. ಉದಾ:—

ಕಂದ || ಸುಡು! ನನ್ನೀ ಜನ್ಮನಮಂ |
ಮಡದಿಯನಗಲಿದೆನು ಸುಂದರಾಂಗಿಯ ನಿಂದು ||

ಇಲ್ಲಿ ನಿರ್ವೇದವೆಂಬ ವ್ಯಭಿಚಾರಿಭಾವವು ವಿಪ್ರಲಂಭಶೃಂಗಾರಕ್ಕೆ ಅಂಗವಾಗಿದೆ. (ನಿರ್ವೇದಃಸ್ವಾವಮಾನನಂ). ಮತ್ತೆ ಉದಾ:—

ವಾರ್ಧಿಕ || ನಿನ್ನ ಮೋರೆಯ ನೋಡಲತಿ ಕೂತೂಹಲವುಳ್ಳ |
ನಿನ್ನ ನುಡಿಗಳ ಕೇಳಲತ್ಯಾಶೆ ಬಟ್ಟಿರುವ |
ನಿನ್ನ ತನುವನು ಭರದೊಳಪ್ಪಿಕೊಳ್ಳಲು ಬಹಳ ಲಾಲಸವನಾಶ್ರಯಿಸಿದ ||
ಎನ್ನ ದೃಷ್ಟಿಗೆ ಕಿವಿಗೆ ದೇಹಕ್ಕೆ ಜಗದೊಳಗೆ |
ಇನ್ನಿರದು ಬೇರೆ ವಿಶ್ರಾಮವದು ಭಾಮಿನಿಯೆ |
ನಿನ್ನ ವಿರಹದೊಳೀಗ ಹೊಂದಿರುವೆನತ್ಯಂತ ಹೀನ ದೆಸೆಯನ್ನು ||

ಇಲ್ಲಿ ಚಿಂತೆಯೆಂಬ ವ್ಯಭಿಚಾರಿಭಾವವು ವಿಪ್ರಲಂಭಶೃಂಗಾರಕ್ಕೆ ಅಂಗವಾಗಿದೆ. (ಲಾಲಸಾ=ಬಹಳ ಆಶೆ.) ಮತ್ತೆ ಉದಾ:—

ಕಂದ|| ಹುಬ್ಬುಬ್ಬಿ ಬಿತ್ತುತಿರುವರು |
ಹಬ್ಬದ ಮಳೆಯೊಳಗೆ ಮತ್ತೆ ಹತ್ತಿಯುನವರು ||
ಮಬ್ಬಾದರು ಗಳೆಬಿಡದಲೆ |
ತಿಬ್ಬದೆ ಕೊಳ್ಳವನು ಮಾಳ್ಪೆನೆಂಬುಬ್ಬಿನಲಿ ||

ಇಲ್ಲಿ ಹರ್ಷವೆಂಬ ವ್ಯಭಿಚಾರಿಭಾವವು ಉತ್ಸಾಹ ಭಾವಕ್ಕೆ ಅಂಗವಾಗಿದೆ. (ಹರ್ಷಃ ಚೇತಃ ಪ್ರಸಾದಃ; ಸಂರಂಭಃಸ್ಥೇಯಾನುತ್ಸಾಹಃ) ಮತ್ತೆ ಉದಾ:—

ಭಾಮಿನಿ|| ಗಿರಿಗಳುನ್ನತವಾಗಿ ಹಬ್ಬಿವೆ |
ಶರಧಿಗಳು ವಿಸ್ತಾರವಾಗಿವೆ |
ಶಿರದೊಳೀ ಭಾರವನು ಸಂತತ ಪೊತ್ತಿರುವ ಕ್ಷಿತಿಯೇ ||
ಅರರೆ! ಬಲುದಣಿದಿರುವಿ ನಿನ್ನಯ |
ಚರಣಕೆರಗುವೆನೆಂದು ಧರಣಿಯ |
ಸ್ಮರಿಸುತಿರೆ ವಿಸ್ಮಯದೊಳಾಗೀಧರೆಯ ಧರಿಸಿರುವ ||
ಅರಸ ನಿನ್ನಯ ಭುಜವು ಸ್ಮರಣೆಗೆ |
ಬರಲು ಮೊದಲಿಸ ಸ್ತುತಿಯ ನುಡಿಗಳ |
ಹೊರಳಿಸಿದೆ ನಾನಾಗ ನಿನ್ನಯ ಸ್ತೋತ್ರಪರವಾಗಿ ||

ಇಲ್ಲಿ ಅರಸನ ವಿಷಯದ ರತಿಭಾವಕ್ಕೆ ಭೂಮಿಯ ವಿಷಯದ ರತಿಭಾವವು ಅಂಗವಾಗಿದೆ.

---

೧೦೫. ಊರ್ಜಸ್ವದಲಂಕಾರವು. (ಲಕ್ಷಣ):—ಅಯೋಗ್ಯ ರೀತಿಯಿಂದ ಪ್ರವರ್ತಿತವಾದ, ಇಲ್ಲವೆ ಪಶು-ವೃಕ್ಷಾದಿಗಳಲ್ಲಿ ಆರೋಪಿತವಾದ ರಸವೂ ಭಾವವೂ ರಸಾಭಾಸವೆಂತಲೂ ಭಾವಾಭಾಸವೆಂತಲೂ ಹೇಳಲ್ಪಡುವದು. ಇಂಥ ಆಭಾಸವು ರಸಾದಿಗಳಿಗೆ ಅಂಗವಾದಲ್ಲಿ ಈ ಅಲಂಕಾರವಾಗುವದು. ಉದಾ:—

ಭಾಮಿನಿ|| ಅರಸು ಚಾರ್ಜರೆ ನಿಮ್ಮರಿಪುಗಳ |
ತರುಣಿಯರು ಭಯದಿಂದರಣ್ಯಕೆ |
ತ್ವರದೆ ತೆರಳುವ ಸಮಯದಲಿ ಸುಲಿಕೊಳ್ಳಬೇಕೆಂದು ||
ಭರದೆ ಬಂದಿಹ ಶಬರವೃಂದವು |
ಬೆರಗು ಬಟ್ಟುದು ವನಿತೆಯರ ಬಹು |
ತರಲನೋಟಕೆ ಬಡನಡುವು ಸ್ತನಜಘನವಿಸ್ತರಕೆ ||

ಶ್ರೀ ಸಿದ್ಧನಾಥ ವಾಚನಾಲಯ
ಮೊರಬ. ಜಿ ಧಾರವಾಡ.

ಹರುಷರೋಮಗಳೇಳೆ ಮೈಯಲ್ಲಿ |
ಮರೆತು ಬಿಟ್ಟಿತು ತಮ್ಮ ಕೆಲಸವ |
ಮಿರಿಮಿರಿಯ ಕಣ್ಣಿಡುತ ನಿಂತಿತು ಸ್ತ್ರೀಯರೆದುರಿನಲಿ ||

ಇಲ್ಲಿ ಶ್ರೀ ಜಾರ್ಜ ರಾಜರ ವಿಷಯದ ರತಿಭಾವಕ್ಕೆ ಶೃಂಗಾರಾಭಾಸವು ಅಂಗವಾಗಿದೆ. ಮತ್ತೆ ಉದಾ:—

ಭಾಮಿನಿ|| ಕೇಳು ಶ್ರೀಯುತ ಜಾರ್ಜರಾಜರು |
ಕಾಳಗದೊಳೆದುರಿನಲಿ ಕಣ್ಣಿಗೆ |
ಬೀಳುತಲೆ ನಮಗಿಂದು ಜನ್ಮವು ಸಫಲವಾಯ್ತೆಂದು ||
ಹೇಳುವರು ವೈರಿಗಳು ಜನರಿಗೆ |
ತಾಳುವರು ಹರುಷವನು ಮನದಲಿ |
ಬೀಳುವರು ನಾಮೊದಲು ನೀಮೊದಲೆಂದು ಕಾಳಗದೆ ||

ಇಲ್ಲಿ ಶ್ರೀ ಜಾರ್ಜರಾಜರ ವಿಷಯದ ಕವಿಯ ರತಿಭಾವಕ್ಕೆ ವೈರಿಗಳಲ್ಲಿರುವ ಅವರ (ಜಾರ್ಜರ) ವಿಷಯದ ರತಿರೂಪ ಭಾವಾಭಾಸವು ಅಂಗವಾಗಿದೆ. (ಮಡಿದು ವೀರಸ್ವರ್ಗವನ್ನು ಹೊಂದುವರೆಂಬದು ಪದ್ಯದ ಭಾವಾರ್ಥವು). ಮತ್ತೆ ಉದಾ:—

ಉತ್ಪಲ|| ದೂರದ ಮಾರ್ಗದಿಂದೆಳೆವ, ಮಂತ್ರದವೋಲಿರುವವಳ ನಾಮಮಂ |
ನಾರಿಯರಾಡೆ ಕೇಳುತಲೆ, ಜಗ್ಗ ಪಳಾವಳೀ ನನ್ನ ಭಾವಮಂ |
ಮೀರಿದ ಚಿಂತೆಯಿಂದ ಬಹು, ಕ್ಷೀಣತೆಯಾಂತಿಹ ರಾವಣಂಗೆ ತಾಂ |
ತೋರುವಳೆಂದೊ! ತೋಷವನು, ಜಾನಕಿಯೆಂಬುದು ತಿಳಿಯೆ!
ನಿಶ್ಚಯಂ ||

ಇಲ್ಲಿ ವಿಪ್ರಲಂಭಶೃಂಗಾರಾಭಾಸವು ಔತ್ಸುಕ್ಯವೆಂಬ ವ್ಯಭಿಚಾರಿ ಭಾವವನ್ನು ಪೋಷಿಸುವದು.

---

೧೦೬. ಸಮಾಹಿತಾಲಂಕಾರವು. ಲಕ್ಷಣ:-ಭಾವಶಾಂತಿಯು ರಸಾ ಗಳಿಗೆ ಅಂಗವಾದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ || ಘನಗರ್ಜನೆಯಿಂದಂಜಿದ |
ವನಿತೆಯು ತಾನಾಗಿ ತನ್ನ ಮಾನವ ತೊರೆದಳ್ ||

ಇಲ್ಲಿ ಅಮರ್ಷವೆಂಬ ಭಾವದ ಶಾಂತಿಯು ಶೃಂಗಾರಕ್ಕೆ ಅಂಗವಾ ದೆ. (ಅಮರ್ಷಃ ಪ್ರತಿಚಿಕೀರ್ಷಾ; ಮಾನ=ಸಿಟ್ಟು.) ಮತ್ತೆ ಉದಾ:—

ಭಾಮಿನಿ|| ಏನು ಮಾಡುವಳಿವಳದೆನ್ನುತ |
ನಾನು ಧೈರ್ಯವ ಹಿಡಿದು ನಿಂತಿರೆ |
ತಾನು ಕೋಪಿಸಿಕೊಂಡು ನಿಂತಳು ಕೇಳಲಿವನೆಂದು ||
ಮೌನದಲಿ ಹೀಗಿರುವ ಸಮಯದೆ |
ನಾನು ವ್ಯಾಜಾಂತರದೆ ನಕ್ಕೆನು |
ಮಾನಿನಿಯು ಕಣ್ಬನಿಯ ಸುರಿಸಿದಳೆನ್ನೆದೆಯು ಕರಗೆ ||

ಇಲ್ಲಿ ವನಿತೆಯ ಕೋಪಶಾಂತಿಯು ಶೃಂಗಾರಕ್ಕೆ ಅಂಗವಾಗಿದೆ.

---

೧೧೭. ಭಾವೋದಯಾಲಂಕಾರವು. ಲಕ್ಷಣಃ — ಭಾವದ ಉತ್ಪತ್ತಿಯು ರಸಾದಿಗಳಿಗೆ ಅಂಗವಾದಲ್ಲಿ ಈ ಅಲಂಕಾರವಾಗುವದು. ಉದಾ.—

ಕಂದ|| ನಲ್ಲನ ನೋಡುತ ನಾರಿಯು |
ಗಲ್ಲದೆ ಬೆರಳಿಟ್ಟು ಶಿರವ ಬಾಗಿಸಿ ನಿಂತಳ್ ||

ಇಲ್ಲಿ ಲಜ್ಜೆಯೆಂಬ ವ್ಯಭಿಚಾರಿಭಾವದ ಉತ್ಪತ್ತಿಯು ಶೃಂಗಾರಕ್ಕೆ ಅಂಗವಾಗಿದೆ. (ವ್ರೀಡಾ ಚಿತ್ತಸಂಕೋಚಃ). ಮತ್ತೆ ಉದಾಃ —

ಭಾಮಿನಿ|| ಅಂದು ಹಂಸವು ಬರೆದು ತೋರಿದ |
ಸುಂದರಾಂಗನೆ! ಬಂದು ನನ್ನಯ |
ಮುಂದೆ ನಿಂತಿಹ ತೆರದೆ ತೋರ್ಪುದು ನಿನ್ನ ನೋಡುತಲೆ ||
ಬಂದ ಶ್ರಮವನು ಕಳೆದುಕೊಳ್ಳುವೆ |
ನೆಂದು ದಯಮಾಡಿಂದು ನಿಂತರೆ |
ಚಂದದಲಿ ಕಳೆಯುವೆನು ನಿನ್ನನು ನೋಡುತೀ ದಿನವ ||

ಇಲ್ಲಿ ನಲನ ವಿಷಯದ ಔತ್ಸುಕ್ಯರೂಪಭಾವದ ಉತ್ಪತ್ತಿಯು ಶೃಗಾರಕ್ಕೆ ಅಂಗವಾಗಿದೆ. (ಔತ್ಸುಕ್ಯಂ ಕಾಲಾಕ್ಷಮತ್ವಂ). ಉದಾಃ —

ಉತ್ಪಲ|| ಒಂದಿನ ಶಯನಮಂದಿರದೆ, ಸವತಿಯ ನಾಮವ ಕೊಳ್ಳಲಾಕ್ಷಣಂ |
ಸುಂದರಿ ಕೋಪದಿಂದೆ ಚತು, ರೋಕ್ತಿಗಳಾಡುವ ನೂಕೆ ನಲ್ಲನ ||
ಒಂದೆಡೆಯಲ್ಲಿ ಸುಮ್ಮನಿರೆ, ಧಿಕ್ಕೃತನಾಗಿಹ ನಲ್ಲನಾಕ್ಷಣಂ |
ಬಂದಳು ನಿದ್ದೆ ಮಾಡುವವ, ನಂದದೆ ಬಿದಿ ಹನಸ್ನು ನೋಡುತ ||

ಇಲ್ಲಿ ಔತ್ಸುಕ್ಯವೆಂಬ ಭಾವದ ಉದಯವು ಶೃಂಗಾರಕ್ಕೆ ಅಂಗವಾಗಿದೆ.

---

೧೦೪. ಭಾವಸಂಧ್ಯಲಂಕಾರವು. (ಲಕ್ಷಣ):—ಎರಡು ವಿರುದ್ಧ ಭಾವಗಳ ಪರಸ್ಪರ ಸ್ಪರ್ಧೆಯು ಭಾವಸಂಧಿಯೆನಿಸುವದು. ಭಾವ ಸಂಧಿಯು ರಸಾದಿಗಳಿಗೆ ಅಂಗವಾದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ || ಒತ್ತರದೆ ನಡೆಯುತಿರುವಳು |
ಹೊತ್ತನು ನೋಡುತ್ತ ಮತ್ತೆ ತಡಮಾಡುವಳು ||
ಅತ್ತಿತ್ತ ಸುತ್ತನೋಡುತ |
ಹತ್ತರದೊಳಗಿರುವ ಪ್ರಿಯನ ಬಳಿಯುಲಿ ಬಂದಳ್ ||

ಇಲ್ಲಿ ಔತ್ಸುಕ್ಯ ಹಾಗು ಶಂಕಾ ಇವುಗಳ ಸಂಧಿಯು ಶೃಂಗಾರಕ್ಕೆ ಅಂಗವಾಗಿದೆ. ಮತ್ತೆ ಉದಾ:—

ಭಾಮಿನಿ || ಮುಂದೆ ಬಹ ವಿರಹವನು ಸಹಿಸದ |
ಸುಂದರಿಯು ಮೊಗವನ್ನು ನೋಡುತ |
ಬಂಧುರದೊಳಾಹವದ ಕ್ರಂದನವನ್ನು ಕೇಳುತಲಿ ||
ಕಂದರ್ಪತೂಣೀರವೆಂದೆನ |
ಲೊಂದು ಗಲ್ಲವು ನಿಮಿರೆ ಪುಲಕಗ |
ಳಿಂದೆ ಶುಭಪಾಲಿಕೆಯ ತೆರದಲಿ ತೋರುತಿನ್ನೊಂದು ||

ಇಲ್ಲಿ ರಮಣಿಯ ವಿಷಯದ ಪ್ರೇಮಭಾವ ಹಾಗು ರಣವಿಷಯ ದ ಔತ್ಸುಕ್ಯಭಾವ ಇವುಗಳ ಸಂಧಿಯು ಪ್ರಭುವಿಷಯದ ಪ್ರೇಮಭಾವ ಕ್ಕೆ ಅಂಗವಾಗಿದೆ. (ಶುಭಪಾಲಿಕೆ=ಕುಶಾದಿಗಳಿಂದ ಮಾಡಿದ ತೋರಣ). ಮತ್ತೆ ಉದಾ:—

ಭಾಮಿನಿ || ಹೇಗೆ ಕಳುಹಲಿ? ಮಗನ ಮುನಿಗಳ |
ಯಾಗರಕ್ಷಣೆಗಾಗಿ ಹಿಂದಕೆ |
ಹೇಗೆ ಕಳುಹಲಿ? ಸಕಲಮುನಿಕುಲತಪನಕೌಶಿಕನ ||

ಇದು ವಿಶ್ವಾಮಿತ್ರನು ಯಜ್ಞರಕ್ಷಣೆಗಾಗಿ ರಾಮಲಕ್ಷ್ಮಣರನ್ನು ಕರೆಯಲಿಕ್ಕೆ ಬಂದಾಗ ದಶರಥನು ಆಡಿದ ವಾಕ್ಯವು. ಇಲ್ಲಿ ಸುತ-ಮು ನಿವಿಷಯದ ರತಿಭಾವಗಳ ಸಂಧಿಯು ಚಿಂತೆಯೆಂಬ ವ್ಯಭಿಚಾರಿಭಾವಕ್ಕೆ ಅಂಗವಾಗಿದೆ. ಮತ್ತೆ ಉದಾ:—

ಭಾಮಿನಿ || ಅಂದಚಂದದ ಮುತ್ತುರತ್ನಗ |
ಳಿಂದೆ ಮಾಲ್ಯಾಂಬರದೆ ಶೋಭಿತ |
ಸುಂದರಿಯ ಸ್ಯಂಧವರ ಮೊಗವನು ಮುಂದೆ ನೋಡುತಲೇ ||

ಒಂದುಕಡೆಯಲಿ ನೇತ್ರಧಾರೆಯು ।
ನೊಂದುಕಡೆಯಲಿ ಶಸ್ತ್ರಧಾರೆಯು ।
ನಂದುಧರಿಸಿದ ಭಟನು ನಿಂದನು ಮುಂದುಗಾಣದಲೆ ॥

ಇಲ್ಲಿ ಸ್ನೇಹಾಖ್ಯರತಿಭಾವ ಹಾಗು ರಣೌತ್ಸುಕ್ಯಗಳ ಸಂಧಿಯು ಚಿಂತಾಖ್ಯವ್ಯಭಿಚಾರಿಭಾವಕ್ಕೆ ಅಂಗವಾಗಿದೆ. (ಸೈಂಧವ=ಕುದುರೆ).

---

೧೧೯. ಭಾವಶಬಲಾಲಂಕಾರವು. (ಲಕ್ಷಣ):— ಭಾವಶಬಲತೆಯು, ಅಂದರೆ ಅನೇಕ ಭಾವಗಳ ಸಮೂಹವು ರಸಾದಿಗಳಿಗೆ ಅಂಗವಾದಲ್ಲಿ ಈ ಅಲಂಕಾರನಾಗುವದು. ಉದಾ:—

ಕಂದ ॥ ಸುಡು! ಸನ್ನಿೀಜನ್ಮದ ಪರ ।
ಮಡದಿಯುರೊಳಗಾದುದಕಟ! ಜನರೇನೆಂಬರ್? ॥
ಹೊಡೆಯಿರಿ! ಸನ್ನಿೀನೀಚನ ।
ತಡೆ, ತಡೆ, ಕಡೆತನಕವಿದನು ಬಿಡುವೆನು ನಿಜದಿಂ ॥

ಇಲ್ಲಿ ನಿರ್ವೇದ-ಶಂಕಾ-ವಿಷಾದ-ವಿತರ್ಕ-ಮತಿಗಳು ಶಾಂತರಸಕ್ಕೆ ಅಂಗವಾಗಿವೆ. (ನಿರ್ವೇದಃಸ್ವಾವಮಾನನಂ; ಪಾರದಾರ್ಯಾದೇಃಶಂಕಾ; ವಿಷಾದೋಮುಖಶೋಷಾದಿಕೃತ್; ಸಂದೇಹಾದೇರ್ವಿತರ್ಕಃ; ಮತಿರರ್ಥನಿಶ್ಚಯಃ)

ಕಂದ ॥ ಬಂದಿಲ್ಲ ಸಾಲೆಗೊಂದಿನ ।
ಕಂದಪ್ಪನು ಹಿಂದೆ ಮೂರು ತಿಂಗಳಿನಿಂದ ॥
ಒಂದಕ್ಕರವದು ಬಂದರೆ ।
ಹಿಂದಿಸ ಫೀಕೊಡುವೆನೆಂದು ನಿಂದಿಸುತೋರ್ವಳ್ ॥
ಮುಂದಿಯೊಳಬ್ಬರದಿಂದಲಿ ।
ನಂದನ ಕರಕೊಂಡು ಮುಂದೆ ಬಂದಳು ಮಠಕೆ ॥

ಇಲ್ಲಿ ವಿತರ್ಕ-ಮತಿ-ಉನ್ಮಾದ-ಆವೇಗಗಳೆಂಬ ಭಾವಗಳ ಶಬಲತೆಯು ರೋಷಭಾವಕ್ಕೆ ಅಂಗವಾಗಿದೆ. (ವಿಮರ್ಶಾದೇರ್ವಿತರ್ಕಃ ಅರ್ಥನಿಶ್ಚಯೋಮತಿಃ; ಧನನಾಶಾದೇಶ್ಚಿತ್ತವಿಪ್ಲವಃ ಉನ್ಮಾದಃ; ಆವೇಗಃ ತ್ವರಿತಾಪಸರ್ಪಣಾದಿಕೃತ್). ಮತ್ತೆ ಉದಾಃ—

ಭಾಮಿನಿ ॥ ಎತ್ತ ಶಶಿಕುಲವೆತ್ತಕಾರ್ಯವು ।
ಮತ್ತೆಂದು ನಾನಿವನನೋಡುವೆ ।
ಕತ್ತರಿಸಲೀಯಘವನಾಶ್ರುತನಲ್ಲವೇ? ನನಗೆ ॥

ಸುತ್ತಿರಲು ಖತಿಯುವಳ ಮುಖವದು ।
ಮತ್ತೆಬಹುಮಂಜುಳವೆ ತೋರ್ಪುದು ।
ಚಿತ್ತವೇ! ಸುಕೃತಿಗಳು ಮುನಿಗಳು ನಿನ್ನ ನಿಂದಿಸರೇ? ॥
ಮತ್ತೆದುರ್ಲಭಳಿವಳು ಸ್ವಪ್ನಕು ।
ಸುಸ್ಥಿತಿಯ ಹೊಂದಿಸ್ಸು ಚಿತ್ತವೆ ।
ಅತ್ಯಧಿಕ ಧರ್ಮಿಷ್ಠನಾವನೊ? ಇವಳ ಪ್ರಿಯತಮನು ॥

ಇದು ಶುಕ್ರನ ಮಗಳಾದ ದೇವಯಾನಿಯನ್ನು ನೋಡಿದ ಯಯಾತಿರಾಜನ ವಾಕ್ಯವು. ಇಲ್ಲಿ ವಿತರ್ಕ-ಔತ್ಸುಕ್ಯ-ಮತಿ-ಸ್ಮರಣ-ಶಂಕಾ-ದೈನ್ಯ-ಧೃತಿ-ಚಿಂತೆಗಳ ಶಬಲತ್ವವು ವಿಪ್ರಲಂಭಶೃಂಗಾರಕ್ಕೆ ಅಂಗವಾಗಿದೆ. (ಸ್ಮರಣಂಸ್ಮೃತಿಃ; ಮನಸ್ತಾಪಾದೇರನೌಜಸ್ಯಂದೈನ್ಯಂ; ಜ್ಞಾನಾದೇರ್ಧೃತಿಃ ಸಂತೋಷಃ; ಶ್ರುತವು=ವೇದಶಾಸ್ತ್ರಾದಿಗಳನ್ನು ಓದಿದ್ದು; ಅಘ=ದೋಷ; ಪಾಪ) ಖತಿ=ಸಿಟ್ಟು. ಮತ್ತೆ ಉದಾ:—

(೧೨ ಮಾತ್ರೆಗೆ ಯತಿಯುಳ್ಳ ಉತ್ಪಲ ಜಾತಿಯು).

ಕೊಡುವದು ಯೋಗ್ಯವಲ್ಲ ಸಿಸು, ರಘುಕುಲದೊಳ್ಮನಿರೋಷಿಪಂ ಕಣಾ।
ಪಡುವರು ದುಃಖವನ್ನಿವನ ಭ್ರಾತೃಗಳೆಲ್ಲರು, ಗೆಲ್ವನಾತನು॥
ಕಡುತರ ಕಷ್ಟವೀಗಿವನ ಕಳಿಸಲು, ಸ್ವಾರ್ಥಪರಾರ್ಥದಿಂದಲೇ।
ತಡೆಯುರು ಮಂತ್ರಿಮುಖ್ಯರುಗಳಿವನ ನಿಯೋಗವ ಪ್ರೀತಿಪಂ ಮುನಿ॥

ಇದು ರಾಮಚಂದ್ರನನ್ನು ಮುನಿಗಳ ಯಾಗರಕ್ಷಣೆಗೆ ಕಳಿಸಲು ಉದ್ಯುಕ್ತನಾದ ದಶರಥನ ವಚನವು. ಇಲ್ಲಿ ಪುತ್ರ-ಸಹೋದರ-ಆತ್ಮ-ಮಂತ್ರಿಗಳ ವಿಷಯದ ರತಿಭಾವವನ್ನು ಉಪಮರ್ದಿಸಿದ ಮುನಿವಿಷಯದ ರತಿಭಾವವು, ಅಂದರೆ ಅನೇಕ ರತಿಭಾವಗಳ ಶಬಲತ್ವವು ರಾಮಚರಿತ್ರಕ್ಕೆ ಅಂಗವಾಗಿದೆ.

ರಸಾದಿಗಳು ಬೇರೆ ರಸಾದಿಗಳಿಗೆ ಅಂಗವಾಗಿದ್ದಲ್ಲಿ ಅಲಂಕಾರಗಳಾಗುವವೆಂತಲೂ ರಸಾದಿಗಳ ಪ್ರಾಧಾನ್ಯತೆಯಿರಲು ಅವು ಧ್ವನಿಗಳೆನಿಸುವವೆಂತಲೂ ಹಿಂದೆ ಹೇಳಿದ್ದೇವೆ.*

---

* प्रधानतां यत्र रसादयो गता रसो रसादि ध्वनिगोचरो भवेत् ।
भवंति ते यत्र रसादिपोषका रसाद्यलंकारदशा हि सा पृथक् ॥

ಪ್ರಮಾಣಾರ್ಥವರ್ಣನೆಯ

ತೃತೀಯ ವಿನೋದವು.

ಭಾಮಿನಿ || ಸದ್ವೈತದಿಂ ಜೀವಗಣಗಳು |
ತದ್ಧರಿಗೆ ನೀಚೋಚ್ಚಭಾವದ |
ಪದ್ಧತಿಯೊಳನುಚರಗಳಾ ಶ್ರುತಿವೇದ್ಯ ಹರಿಯೆಂದು ||
ತದ್ಮುಕ್ತಿಸಾಧನವು ಭಕ್ತಿಯು |
ದಿದ್ದು ಸತ್ಯವಿದೆಂದು ತತ್ಸದೆ |
ಸಿದ್ಧಿಸಿದ ಮೂರೇ ಪ್ರಮಾಣದ ಮಧ್ವರಂ ವಂದೇ* ||

ಮೀಮಾಂಸಕರು ತಮ್ಮ ಪ್ರಮೇಯಗಳನ್ನು ಪ್ರತ್ಯಕ್ಷ-ಅನುಮಾನ ಉಪಮಾನ-ಶಬ್ದ-ಅರ್ಥಾಪತ್ತಿ-ಅನುಪಲಬ್ಧಿ-ಸಂಭವ-ಐತಿಹ್ಯಗಳೆಂಬ ಎಂಟು ಬಗೆಯ ಆಧಾರಗಳಿಂದ ಸಿದ್ಧಿಸುವರು. ಇವೇ ಎಂಟು ಪ್ರಮಾಣ ಗಳನ್ನು ಕವಿಗಳು ಪ್ರಕೃತಾರ್ಥದ ಸಮರ್ಥನೆಗಾಗಿ ಉಪಯೋಗಿಸಿ ಕೊಂಡಲ್ಲಿ ಆಯಾ ನಾಮದ ಅಲಂಕೃತಿಗಳಾಗುವವು. ಇವು ಬಹುಳವಾಗಿ ಲಿಂಗವನ್ನು ಹೋಲುವವು:—

ಕಂದ || ಅಕ್ಷಾದ್ಯಷ್ಟ ಮಾಣದೆ |
ಲಕ್ಷ್ಯದೆ ಸಿದ್ಧಿಸಲು ಪ್ರಕೃತದರ್ಥವು ನಿಜದಿಂ ||
ಲಕ್ಷಣದೆ ಕಾವ್ಯಲಿಂಗದ |
ಲಕ್ಷ್ಯವ ಪೋಲುವದು ಕೃತಿಗಲಂಕೃತಿಯಕ್ಕುಂ ||

೧೧೦. ಪ್ರತ್ಯಕ್ಷಾಲಂಕಾರವು. ಲಕ್ಷಣ:—ಶ್ರವಣ-ಸ್ಪರ್ಶ-ದರ್ಶನ ರಸನ-ಘ್ರಾಣ-ಮಾನಸಗಳೆಂಬ ಆರು ವಿಧದ ಇಂದ್ರಿಯಗಳ ಜ್ಞಾನವರ್ಣ ನೆಯಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ || ತರತರದೆ ಮಾಳ್ಪ ಸುದ್ದಿಯ |
ಸರಸದೆ ಕೇಳುತ್ತ ಮುಟ್ಟಿ ನೋಡುತ ಮೂಸಿ ||
ಹರುಷವ ಮನದಲಿ ಧರಿಸುವ |
ಕರದಿಹ ಬುರಬುರಿಯನಿಂದು ತಿಂದೆನೊ ಗೆಳೆಯಾ ||

ಇಲ್ಲಿ ಕ್ರಮವಾಗಿ ಶ್ರವಣ-ಸ್ಪರ್ಶ-ದರ್ಶನ-ಘ್ರಾಣ-ಮಾನಸಗಳೆಂ ಬ ಆರು ವಿಧದ ಇಂದ್ರಿಯಗಳ ಜ್ಞಾನವರ್ಣನೆಯದೆ.

ಉಪೇಂದ್ರಶರ್ಮಾ ತೋಳಮಟ್ಟಿ.

---

* ವಂದೇ-ಜಯಜಯ-ಜಯಜಯತು ಎಂಬ ಪದಗಳನ್ನು ಕನ್ನಡದಲ್ಲಿ ಉಪ ಯೋಗಿಸುವ ರೂಢಿಯದೆ.

ವಿದ್ಯಾಖಾತೆಯ ನೋಟೀಸುಗಳು.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲೆಗಳಲ್ಲಿ ಹೊಲಿಗೆಯನ್ನು ಕಲಿಸುವ ಬಗ್ಗೆ ಧಾರವಾಡ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ಲೇಡೀ ಸುಪರಿಂಟೆಂಡೆಂಟರಾದ ಮಿಸ್ ಮ್ಯಾಕ್‌ಆಫೀಯವರು ಮಾಡಿದ ಸೂಚನೆಗಳು.

(ಮೆ. ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬ ದಕ್ಷಿಣಭಾಗದವರ ಅಪ್ಪಣೆಯ ಮೇರೆಗೆ ಪ್ರಸಿದ್ಧಮಾಡಿದವುಗಳು.)

ಬಾಲಿಕೆಯರ ವರ್ಗ.

ಮುಂದಿನ ಇಯತ್ತೆಗಳಲ್ಲಿ ಹೊಲಿಗೆಯ ಕೆಲಸವನ್ನು ಕಲಿಯಲಿಕ್ಕೆ ತಕ್ಕವರನ್ನಾಗಿ ಮಾಡುವದಕ್ಕಾಗಿ, ಉಸುಕಿನ ಪ್ರತಿಮೆಗಳನ್ನು ಮಾಡುವದಕ್ಕೂ ಕಾಗದದ ಹೂಮಾಲೆಗಳನ್ನು ಮಾಡುವದಕ್ಕೂ, ಮಣಿಗಳನ್ನು ಪೋಣಿಸುವದಕ್ಕೂ ಕಲಿಸಬೇಕು.

೧ನೇ ಇಯತ್ತೆ.

ವರ್ಗದಲ್ಲಿ ಕಲಿಸಲ್ಪಡುವ ಪಾಠಗಳಿಗೆ ಸಂಬಂಧಿಸಿದ ಸಾದಾ ಆಕೃತಿಗಳನ್ನು ಬಿಳೀ ಕಾಗದದ ಮೇಲೆ ತೆಗೆಯುವದು; ಬಣ್ಣದ ನೂಲಿನಿಂದ ಈ ಆಕೃತಿಗಳಲ್ಲಿ ಎಳೆ ತುಂಬುವದು. ಕಾಗದ ಮಡಿಚಿ ಸಾದಾ ಆಕೃತಿಗಳನ್ನು ಮಾಡುವದು. ವರ್ಷದ ಕೊನೆಗೆ ಹುಡುಗಿಯರಿಗೆ ಹೊಲಿಗೆಯ ಸಾಯತವನ್ನು (ಕೆಲವು ಪಾಠಗಳನ್ನು ಮಾತ್ರ) ಕಲಿಸುವದು.

೨ನೇ ಇಯತ್ತೆ.

ಕ್ಯಾನ್ವಾಸ ಅಥವಾ ಉರುಟು ಅರಿವೆಯ ಮೇಲೆ ತಿಬ್ಬಿ ಹಾಕುವದು, ಲೋಡಿ ಕಟ್ಟುವದು, ಕಸೂತಿ ಹಾಕುವದು. ಈ ತಿಬ್ಬಿಗಳನ್ನು ಚನ್ನಾಗಿ ಹಾಕಲಿಕ್ಕೆ ಬಂದ ಬಳಿಕ, ಸಾಮಾನುಗಳನ್ನು ಇಡತಕ್ಕಂಥ ಚೀಲಗಳನ್ನೂ, ರೊಕ್ಕ ಇಡುವ ಚೀಲಗಳನ್ನೂ, ಪಾಟಿ ಪುಸ್ತಕಗಳನ್ನು ಇಡುವ ಚೀಲಗಳನ್ನೂ, ತಲೆಗಿಂಬಿನ ಚೀಲಗಳನ್ನೂ, ಕಿಡಕಿಗಳಿಗೆ ಹಾಕುವ ಪರದೆಗಳನ್ನೂ ಮಾಡಲಿಕ್ಕೆ ಕಲಿಸಬೇಕು. ಕರವಸ್ತ್ರಗಳಿಗೂ ತಲೆಗಿಂಬಿನ ಗವಸಣಿಕೆಗೂ, ಕರೇ ಹಲಿಗೆಯನ್ನು ಒರಿಸುವ ಅರಿವೆಗೂ ಲೋಡೀ ಕಟ್ಟುವದು.

೩ನೇ ಇಯತ್ತೆ.

ಬಣ್ಣದ ಸಣ್ಣ ಅಂಗಿಗಳನ್ನೂ, ಕೂಸಿನ ಕುಲಾಯಿಗಳನ್ನೂ ಮಾಡಿ ಅವುಗಳ ಮೇಲೆ ತಿಬ್ಬಿಗಳನ್ನು ಹಾಕುವದು, ಹಾಗೂ ಲೋಡೀ ಕಟ್ಟುವದು. ಸಾದಾ ಗಿರ್ದೀಯ ಗವಸಣಿಕೆಗಳಿಗೂ ಕುಪ್ಪಸಗಳಿಗೂ ತಿಬ್ಬಿ ಹಾಕುವದೂ ಲೋಡೀ ಕಟ್ಟುವದೂ. (ಇವುಗಳನ್ನು ಕತ್ತರಿಸಿ ಜೋಡಿಸಿಕೊಡುವ ಕೆಲಸವನ್ನು ಶಿಕ್ಷಕರು ಮಾಡತಕ್ಕದ್ದು.) ಹುಡುಗಿಯರು ಹರಿ ವಸ್ತ್ರಗಳನ್ನು ಶಾಲೆಯಲ್ಲಿಯೇ ಅವರಿಂದಲೇ ಶಿಕ್ಷಕನು ಹೊಲಿಸುವದು

೪ನೇ ಇಯತ್ತೆ.

ಲೋಡೀಕಟ್ಟುವದು, ತಿಬ್ಬಿಗಳನ್ನು ಹಾಕುವದು, ಗುಂಡಿಗಳನ್ನು ಮಾಡುವದು, ಬಂಡಿಗಳ ಹಾಗೂ ಪೈರಣಗಳ ತೂತುಗಳನ್ನು ಮಾಡುವದು.

ಕುಂಚಿಗಳ ಮೇಲೂ ಕುಲಾಯಿಗಳ ಮೇಲೂ ಸಾದಾ ಕಸೂತಿ ಹಾಕಲಿಕ್ಕೆ ಕಲಿಸುವದು; ಅಥವಾ ಒಂದು ಬಣ್ಣದ ಉಣ್ಣೆಯಿಂದ ಕೊಳಪಟ್ಟಿಯನ್ನು ಹೆಣೆಯುವದು. (ಬೇರೆ ಬೇರೆ ಬಣ್ಣದ ಉಣ್ಣೆಯನ್ನು ಚಂದ ಕಾಣುವಂತೆ ಕೂಡಿಸಲಿಕ್ಕೆ ಶಿಕ್ಷಕರಿಗೆ ಬರಲಿಕ್ಕಿಲ್ಲದ ಕಾರಣ ಒಂದೇ ಬಣ್ಣದ ಉಣ್ಣೆಯೆಂದು ಹೇಳಿದೆ.)

ಬೇರೆ ಬೇರೆ ಅಳತೆಯ ಬಂಡಿಗಳ ಅರಿವೆಯನ್ನು ಕತ್ತರಿಸುವದು, ಬಿಳೇ ಬಟ್ಟೆಯ ಮೇಲೆ ಬೇರೆ ಬೇರೆ ಆಕೃತಿಯ ಠೇಪೆ ಹಚ್ಚಿ ತೋರಿಸುವದು.

೫ನೇ ಇಯತ್ತೆ.

ಸಾದಾ ಗೋಟು ಕಟ್ಟುವದು, ಒಂದೇ ಬಣ್ಣದ ಉಣ್ಣೆಯಿಂದ ಸಾದಾ ನಮೂನೆಯ ಸಣ್ಣ ಮಕ್ಕಳ ಕಾಲಚೀಲಗಳನ್ನೂ ಜುಬಲಿಗಳನ್ನೂ ತಯಾರಿಸುವದು, ಅಥವಾ ಕುಪ್ಪಸದ ಮೇಲೆ ಕಸೂತಿ ತೆಗೆಯುವದು ಅಥವಾ ಏಣದ ಅಂಗೀ ಹೆಣೆಯುವದು; ಮತ್ತು ಬಿಳೇ ಅರಿವೆಯ ಮೇಲೆ ನಾನಾತರದ ತಿಬ್ಬಿಗಳನ್ನು ಹಾಕುವದು; ಮತ್ತು ನೂಲಿನ ಹಾಗು ಉಣ್ಣೆಯ ವಸ್ತ್ರಗಳ ಮೇಲೆ ಠೇಪೆ ಹಚ್ಚುವದು, ರಫೂ ಮಾಡುವದು, ಅಥವಾ ಬಿಳೇ ಅರಿವೆಯ ಎಳೆಗಳನ್ನು ತೆಗೆದು ಅದರಿಂದ ಕೈವಸ್ತ್ರವನ್ನು ಮಾಡುವದು, ಹೆಚ್ಚು ಕಡಿಮೆ ಅಳತೆಗಳ ಕುಪ್ಪಸಗಳನ್ನು ಕತ್ತರಿಸುವದು.

ಮೇಲೆ ಹೇಳಿದ ಅರಿವೆಗಳಲ್ಲಿ ಶಿಕ್ಷಕರು ತಮಗೆ ಯೋಗ್ಯ ಕಂಡ ವಸ್ತ್ರ ಆರಿಸಬಹುದು.

ಶಿಕ್ಷಕರಿಗೆ ಸೂಚನೆಗಳು.

(೧) ವ್ಯವಹಾರದಲ್ಲಿ ಉಪಯೋಗಕ್ಕೆ ಬಾರದಂಥ ಯಾವ ಕೆಲಸವನ್ನೂ ಹುಡುಗರ ಕಡೆಯಿಂದ ಮಾಡಿಸಕೂಡದು. ನಿರುಪಯೋಗಿಯಾದ ಅರಿವೆಯ ತುಣುಕುಗಳ ಮೇಲೆ ಹೊಲಿಗೆಯ ಕೆಲಸವನ್ನು ಕಲಿಸುವದು ಬಹಳ ಅಯೋಗ್ಯವು. (೨) ಹೊಲಿಗೆ ಹಾಕುವಾಗ ಅಥವಾ ತಿಬ್ಬಿ ಹಾಕುವಾಗ ಅರಿವೆಯನ್ನು ಹಿಡಿಯುವ ಬಗ್ಗೆ ಶಿಕ್ಷಕರು ಬಹಳ ಎಚ್ಚರಪಡತಕ್ಕದ್ದು. ಯಾಕಂದರೆ ಬೆವತ ಕೈಯಿಂದ ಬಹಳ ಹೊತ್ತು ಅರಿವೆಯನ್ನು ಹಿಡಿಸುವದರಿಂದ ಅರಿವೆಗಳು ಹೊಲಸಾಗುತ್ತವೆ. (೩) ಹೊಸದಾಗಿ ದಾರದ ತುಣುಕನ್ನು ತಕ್ಕೊಂಡ ಕೂಡಲೆ [illegible] ಬಾರದು. (೪) ಎಲ್ಲ ತರದ ಕೆಲಸವನ್ನು ಅಚ್ಚುಕಟ್ಟಾಗಿಯೂ ಬೇಗನೆಯಾಗಿಯೂ ಮುಗಿಸತಕ್ಕದ್ದು.

ದಾರಪೋಣಿಸುವ ಕ್ರಮವು.

ಶಿಕ್ಷಕರ ಅಪ್ಪಣೆ.	ಹುಡುಗರು ಮಾಡುವ ಕೃತಿ.
(೧) ಎಳೆ ತೆಗೆದುಕೊಳ್ಳಿರಿ.	[illegible]
(೨) ದಾರದ ತುದಿಯನ್ನು ಚೂಪ ಮಾಡಿರಿ.	ಎಡಗೈಯ [illegible] ಗಳಿಂದ ಹಿಡಿಯುವರು.
(೩) ಸೂಜಿಯನ್ನು ತಕ್ಕೊಳ್ಳಿರಿ.	[illegible]

೩ನೇ ಇಯತ್ತೆ.

ಬಣ್ಣದ ಸಣ್ಣ ಅಂಗಿಗಳನ್ನೂ, ಕೂಸಿನ ಕುಲಾಯಿಗಳನ್ನೂ ಮಾಡಿ, ಅವುಗಳ ಮೇಲೆ ತಿಬ್ಬಿಗಳನ್ನು ಹಾಕುವದು, ಹಾಗೂ ಲೋಡೀ ಕಟ್ಟುವದು. ಸಾದಾ ಗಿರ್ದಿಯ ಗವಸಣಿಕೆಗಳಿಗೂ ಕುಪ್ಪಸಗಳಿಗೂ ತಿಬ್ಬಿ ಹಾಕುವದೂ ಲೋಡೀ ಕಟ್ಟುವದೂ. (ಇವುಗಳನ್ನು ಕತ್ತರಿಸಿ ಜೋಡಿಸಿಕೊಡುವ ಕೆಲಸವನ್ನು ಶಿಕ್ಷಕರು ಮಾಡತಕ್ಕದ್ದು.) ಹುಡುಗಿಯರು ಹರಿದ ವಸ್ತ್ರಗಳನ್ನು ಶಾಲೆಯಲ್ಲಿಯೇ ಅವರಿಂದಲೇ ಶಿಕ್ಷಕರು ಹೊಲಿಸುವದು.

೪ನೇ ಇಯತ್ತೆ.

ಲೋಡೀಕಟ್ಟುವದು, ತಿಬ್ಬಿಗಳನ್ನು ಹಾಕುವದು, ಗುಂಡಿಗಳನ್ನು ಮಾಡುವದು, ಬಂಡಿಗಳ ಹಾಗೂ ಪೈರಣಗಳ ತೂತುಗಳನ್ನು ಮಾಡುವದು.

ಕುಂಚಿಗಳ ಮೇಲೂ ಕುಲಾಯಿಗಳ ಮೇಲೂ ಸಾದಾ ಕಸೂತಿ ಹಾಕಲಿಕ್ಕೆ ಕಲಿಸುವದು; ಅಥವಾ ಒಂದು ಬಣ್ಣದ ಉಣ್ಣೆಯಿಂದ ಕೊರಳಪಟ್ಟಿಯನ್ನು ಹೆಣೆಯುವದು. (ಬೇರೆ ಬೇರೆ ಬಣ್ಣದ ಉಣ್ಣೆಯನ್ನು ಚಂದ ಕಾಣುವಂತೆ ಕೂಡಿಸಲಿಕ್ಕೆ ಶಿಕ್ಷಕರಿಗೆ ಬರಲಿಕ್ಕಿಲ್ಲದ ಕಾರಣ ಒಂದೇ ಬಣ್ಣದ ಉಣ್ಣೆಯೆಂದು ಹೇಳಿದೆ.)

ಬೇರೆ ಬೇರೆ ಅಳತೆಯ ಬಂಡಿಗಳ ಅರಿವೆಯನ್ನು ಕತ್ತರಿಸುವದು. ಬಿಳೀ ಬಟ್ಟೆಯ ಮೇಲೆ ಬೇರೆ ಬೇರೆ ಆಕೃತಿಯ ತೇಪೆ ಹಚ್ಚಿ ತೋರಿಸುವದು.

೫ನೇ ಇಯತ್ತೆ.

ಸಾದಾ ಗೋಟು ಕಟ್ಟುವದು, ಒಂದೇ ಬಣ್ಣದ ಉಣ್ಣೆಯಿಂದ ಸಾದಾ ಮಾದರಿಯ ಸಣ್ಣ ಮಕ್ಕಳ ಕಾಲಚೀಲಗಳನ್ನೂ ಜುಬಲೆಗಳನ್ನೂ ತಯಾರಿಸುವದು, ಅಥವಾ ಕುಪ್ಪಸದ ಮೇಲೆ ಕಸೂತಿ ತೆಗೆಯುವದು; ಅಥವಾ ಖಣದ ಅಂಗೀ ಹೊಲೆಯುವದು; ಮತ್ತು ಬಿಳೀ ಅರಿವೆಯ ಮೇಲೆ ನಾನಾತರದ ತಿಬ್ಬಿಗಳನ್ನು ಹಾಕುವದು; ಮತ್ತು ನೂಲಿನ ಹಾಗೂ ಉಣ್ಣೆಯ ವಸ್ತ್ರಗಳ ಮೇಲೆ ತೇಪೆ ಹಚ್ಚುವದು, ರಫೂ ಮಾಡುವದು, ಅಥವಾ ಬಿಳೀ ಅರಿವೆಯ ಎಳೆಗಳನ್ನು ತೆಗೆದು ಅದರಿಂದ ಕೈವಸ್ತ್ರವನ್ನು ಮಾಡುವದು, ಹೆಚ್ಚು ಕಡಿಮೆ ಅಳತೆಗಳ ಕುಪ್ಪಸಗಳನ್ನು ಕತ್ತರಿಸುವದು.

ಮೇಲೆ ಹೇಳಿದ ಅರಿವೆಗಳಲ್ಲಿ ಶಿಕ್ಷಕರು ತಮಗೆ ಯೋಗ್ಯ ಕಂಡದ್ದನ್ನು ಆರಿಸಬಹುದು.

ಶಿಕ್ಷಕರಿಗೆ ಸೂಚನೆಗಳು.

(೧) ವ್ಯವಹಾರದಲ್ಲಿ ಉಪಯೋಗಕ್ಕೆ ಬಾರದಂಥ ಯಾವ ಕೆಲಸವನ್ನೂ ಹುಡುಗರ ಕಡೆಯಿಂದ ಮಾಡಿಸಕೂಡದು. ನಿರುಪಯೋಗಿಯಾದ ಅರಿವೆಯ ತುಣುಕುಗಳ ಮೇಲೆ ಹೊಲಿಗೆಯ ಕೆಲಸವನ್ನು ಮಾಡಿಸುವದು ಬಹಳ ಅಯೋಗ್ಯವು. (೨) ಲೋಡೀ ಕಟ್ಟುವಾಗ ಅಥವಾ ತಿಬ್ಬಿ ಹಾಕುವಾಗ ಅರಿವೆಯನ್ನು ಮಡಿಚುವ ಬಗ್ಗೆ ಶಿಕ್ಷಕರು ಒಳ್ಳೆ ಎಚ್ಚರಪಡತಕ್ಕದ್ದು. ಯಾಕಂದರೆ ವಾಡಿಕೆಯಾಗಿ ಬಹಳೇ ಸ್ವಲ್ಪ ಅರಿವೆಯನ್ನು ಮಡಿಸುವದರಿಂದ ಅರಿವೆಗಳು ಅಸಹ್ಯ ಕಾಣುತ್ತವೆ. (೩) ಹೊಸದಾಗಿ ದಾರದ ತುಣಕನ್ನು ತಕ್ಕೊಂಡ ಕೂಡಲೆ ಅದಕ್ಕೆ ಗಂಟು ಹಾಕಬಾರದು. (೪) ಎಲ್ಲ ತರದ ಕೆಲಸವನ್ನು ಅಚ್ಚುಕಟ್ಟಾಗಿಯೂ ಬಿಗಿಯಾಗಿಯೂ ಮುಗಿಸತಕ್ಕದ್ದು.

ದಾರಪೋಣಿಸುವ ಕವಾಯತು.

ಶಿಕ್ಷಕರ ಅಪ್ಪಣೆ.	ಹುಡುಗರು ಮಾಡುವ ಕೃತಿ.
(೧) ಎಳೆ ತೆಗೆದುಕೊಳ್ಳಿರಿ.	ಬಲಗೈಯ ಹೆಬ್ಬೆರಳು ಹಾಗೂ ತೋರ ಬೆರಳುಗಳಿಂದ ಮೇಲೆ ಸ್ವಲ್ಪ ಕಾಣಿಸುವಂತೆ ದಾರ ಹಿಡಿಯುವದು.
(೨) ದಾರದ ತುದಿಯನ್ನು ಚೂಪ ಮಾಡಿರಿ.	ಎಡಗೈಯ ಹೆಬ್ಬೆರಳು ತೋರ ಬೆರಳುಗಳಿಂದ ಚೂಪಮಾಡುವದು.
(೩) ಸೂಜಿಯನ್ನು ತಕ್ಕೊಳ್ಳಿರಿ.	ಎಡಗೈ ಹೆಬ್ಬೆರಳು ತೋರಬೆರಳು ಹಾಗೂ ನಡು ಬೆರಳುಗಳಿಂದ ಸೂಜಿಯನ್ನು ಎತ್ತಿ ಹಿಡಿಯುವದು. ಸೂಜಿಯ ಎಜ್ಜವು ತೋರ ಬೆರಳಿನ ಮೇಲೆ ಕಾಣಿಸುವಂತೆ ತಮ್ಮ ಗದ್ದಕ್ಕಿಂತ ಸ್ವಲ್ಪ ಕಡಿಮೆ ಎತ್ತರದ ಮೇಲೆ ಹಿಡಿಯುವದು.

(೪) ಎಜ್ಜಕ್ಕೆ ದಾರವನ್ನು ಹಚ್ಚಿರಿ. ಬಲಗೈ ಹೆಬ್ಬೆರಳನ್ನು ಎಡಗೈ ಹೆಬ್ಬೆರಳ
ಉಗುರಿನ ಮೇಲೆ ಇಟ್ಟು ಸೂಜಿಯ
ಜ್ಜಕ್ಕೆ ದಾರವನ್ನು ಹಚ್ಚುವದು.

(೫) ಪೋಣಿಸಿರಿ. ದಾರವು ಎಜ್ಜದೊಳಗೆ ಸ್ವಲ್ಪ ಹ
ಕೂಡಲೆ ಸೂಜಿಯು ತಲೆಯನ್ನು
ಗೈಯ ಹೆಬ್ಬೆರಳು ತೋರ ಬೆರ
ಳಿಂದ ಹಿಡಿಯುವದು.

(೬) ದಾರ ಹಿಡಿಯಿರಿ. ಎಡಗೈಯಿಂದ ದಾರದ ತುದಿಯ
ಹಿಡಿದು ಒಂದು ಎಳೆಯು ಉದ್ದ,
ತ್ತೊಂದು ಗಿಡ್ಡ ಆಗುವಂತೆ ಎಳ
ವದು.

(೭) ತೋರಿಸಿರಿ. ದಾರದ ತುದಿಗಳು ಜೋತಾಡು
ಬಲಗೈಯಲ್ಲಿ ಸೂಜಿಯನ್ನು ಮೇ
ಹಿಡಿಯುವದು.

ವರ್ನ್ಯಾಕ್ಯುಲರ್ ಫಾಯನಲ್ ಪರೀಕ್ಷೆಯು.

ದಕ್ಷಿಣಭಾಗ.

ಈ ನೋಟೀಸಿನಿಂದ ತಿಳಿಸುವದೇನಂದರೆ:—ಸನ್ ೧೯೦೩ನೇ ಇಸವಿಯ ತಾ|| ೧೦ನೇ ನವಂಬರ ತಿಂಗಳ ಮುಂಬಯಿ ಗವರ್ನಮೆಂಟ ಗ್ಯಾಝೀಟಿನ ೧ನೇ ಭಾಗದ ೧೪೫೪ರಿಂದ ೧೪೭೭ನೇ ಪುಟಗಳಲ್ಲಿ ಪ್ರಸಿದ್ಧವಾಗಿದ ನಿಯಮಗಳಿಗನುಸಾರವಾಗಿ ವರ್ನ್ಯಾಕ್ಯುಲರ ಫಾಯನಲ ಪರೀಕ್ಷೆಯು ಸೋಮವಾರ ತಾರೀಖ ೨೦ನೇ ನವ್ಹಂಬರ ೧೯೦೩ ದಿವಸ ಹಾಗೂ ತದುತ್ತರ ದಿವಸಗಳಲ್ಲಿ ದಕ್ಷಿಣಭಾಗದ ಕೆಳಗೆ ಕಾಣಿಸಿದ ಊರುಗಳಲ್ಲಿ ನಡೆಯುವದು:—

ಧಾರವಾಡ.	ಕಾರವಾರ.
ಬೆಳಗಾವ.	ರತ್ನಾಗಿರಿ.
ವಿಜಾಪುರ.	ಅಲೀಬಾಗ.
	ಕೊಲ್ಹಾಪುರ.

೨. ಪ್ರತಿಯೊಂದು ಸೆಂಟರಿನಲ್ಲಿ ಈ ಪರೀಕ್ಷೆಯು ಒಂದು ಕಮಿಟಿಯ ಮುಖಾಂತರವಾಗಿ ನಡೆಯುವದು; ಮತ್ತು ಧಾರವಾಡ, ಬೆ

ಗಾವ, ವಿಜಾಪುರ, ಕಾರವಾರ, ರತ್ನಾಗಿರಿ ಹಾಯಸ್ಕೂಲುಗಳ ಹೆಡ್‌ಮಾ ಸ್ತರರು ಸದರೀ ಪರೀಕ್ಷಾಕಮಿಟಿಗಳ ಅಧ್ಯಕ್ಷರಿರುವರು. ಅಲೀಬಾಗ ದಲ್ಲಿ ಕುಲಾಬಾ ಜಿಲ್ಹೆಯ ಡಿ॥ ಎ॥ ಇನ್ಸ್ಪೆಕ್ಟರರೂ ಕೊಲ್ಹಾಪುರದಲ್ಲಿ ಕೊಲ್ಹಾಪುರ ಸಂಸ್ಥಾನದ ಎ॥ ಇನ್ಸಪೆಕ್ಟರರೂ ಅಧ್ಯಕ್ಷರಿರುವರು.

೩. ಪರೀಕ್ಷೆಗೆ ಕೂಡ್ರುವ ಪರವಾನಗಿಯ ಬಗ್ಗೆ ಅರ್ಜಿಗಳನ್ನು ಉಮೇದವಾರನು ಯಾವ ಜಿಲ್ಹೆಯಲ್ಲಿ ಇರುವನೋ ಆ ಜಿಲ್ಹೆಯ ಪರೀ ಕ್ಷಾ ಕಮಿಟಿಯ ಪ್ರೆಸಿಡೆಂಟರಿಗೆ ತಾ॥ ೧ನೇ ಅಗಸ್ಟ ೧೯೧೫ ನೇ ದಿವಸ ಅಥವಾ ಅದಕ್ಕೂ ಪೂರ್ವದಲ್ಲಿ ತಲಪುವಂತೆ ಕಳಿಸತಕ್ಕದ್ದು. ಆ ಅರ್ಜಿ ಗಳನ್ನು ಈ ವಿಷಯದಲ್ಲಿ ವಿಧಿಸಲ್ಪಟ್ಟ ಅರ್ಜಿಯ ಛಾಪೀ ನಮೂನೆಗಳ ಮೇಲೆಯೇ ಮಾಡಲಿಕ್ಕೆಬೇಕು. ಈ ನಮೂನೆಗಳ ಬಗ್ಗೆ ಪ್ರೆಸಿಡೆಂಟರ ಕಡೆಗೆ ಅರ್ಜಿಯನ್ನು ಮಾಡಿದರೆ ಅವು ಪುಕ್ಕಟೆಯಾಗಿ ಕೊಡಲ್ಪಡು ವವು.

೪. ಧಾರವಾಡದ ಮಾನ್ಯವಾದ ದೇಶಭಾಷೆಯು ಕನ್ನಡ ಇರುವ ದು. ಬೆಳಗಾವ, ವಿಜಾಪುರ, ಕಾನಡಾ ಜಿಲ್ಹೆಗಳ ಮಾನ್ಯವಾದ ದೇಶಭಾ ಷೆಗಳು ಕನ್ನಡ, ಮರಾಠಿ ಇವುಗಳಿರುವವು. ರತ್ನಾಗಿರಿ, ಕುಲಾಬಾ, ಕೊಲ್ಹಾಪುರಗಳ ದೇಶಭಾಷೆಯು ಮರಾಠಿ ಇರುವದು. ಧಾರವಾಡ ಜಿಲ್ಹೆ ಯ ಮರಾಠಿಯ ಉಮೇದವಾರರು ಧಾರವಾಡದಲ್ಲಿ ಪರೀಕ್ಷೆಗೆ ಕೂಡ್ರ ಬೇಕೋ ಬೆಳಗಾವಿಯಲ್ಲಿ ಪರೀಕ್ಷೆಗೆ ಕೂಡ್ರಬೇಕೋ ಎಂಬದನ್ನು ತರು ವಾಯದಲ್ಲಿ ಎಜ್ಯುಕೇಶನಲ್ ಇನ್ಸಪೆಕ್ಟರ ಸಾಹೇಬರವರು ನಿರ್ಣಯಿ ಸುವರು. ತಾ॥ ೮ ನೇ ಜನವರಿ ೧೯೧೪ ಇಸವಿಯ ಮುಂಬಯಿ ಸರಕಾ ರೀ ಗ್ಯಾಝೇಟದ ೧ ನೇ ಭಾಗದ ೩೧ ನೇ ಪುಟದಲ್ಲಿ ಮುದ್ರಿಸಲ್ಪಟ್ಟ ವಿದ್ಯಾಖಾತೆಯ ಸರಕಾರೀ ಜಾಹೀರಾತ ನಂ. ೩೮೩೪ ತಾ॥ ೨೩ ನೇ ಡಿಸೆಂಬರ ೧೯೧೩ ನೆಯ ಪ್ರಕಾರ ಎಲ್ಲ ವಿಷಯುಗಳಲ್ಲಿ ಊರ್ದು ಭಾಷೆ ಯ ದ್ವಾರಾ ಪರೀಕ್ಷಿಸಲ್ಪಡಲಪೇಕ್ಷಿಸುವ ಉಮೇದವಾರರಿಗೋಸ್ಕರ ಎಲ್ಲ ವಿಷಯಗಳಲ್ಲಿ ಊರ್ದು ಭಾಷೆಯ ಪ್ರಶ್ನಕಾಗದಗಳು ಕೊಡಲ್ಪ ಡುವವು.

೫. ಕುಲಾಬಾ ಜಿಲ್ಹೆಯ ಕರ್ಜತ ತಾಲೂಕಿನ ಉಮೇದವಾರರು ಪುಣಾಸೆಂಟರಿನಲ್ಲಿ ಆಗುವ ಪರೀಕ್ಷೆಗೆ ಕೂಡ್ರಬಹುದು, ಮತ್ತು ಸಾಂಗಲಿ

(೪) ಎಜ್ಜಕ್ಕೆ ದಾರವನ್ನು ಹಚ್ಚಿರಿ. ಬಲಗೈ ಹೆಬ್ಬೆರಳನ್ನು ಎಡಗೈ ಹೆಬ್ಬೆ ಉಗುರಿನ ಮೇಲೆ ಇಟ್ಟು ಸೂಜಿಯ ಜ್ಜಕ್ಕೆ ದಾರವನ್ನು ಹಚ್ಚುವದು.

(೫) ಪೋಣಿಸಿರಿ. ದಾರವು ಎಜ್ಜದೊಳಗೆ ಸ್ವಲ್ಪ ಹೊ ಕೂಡಲೆ ಸೂಜಿಯ ತಲೆಯನ್ನು ಗೈಯ ಹೆಬ್ಬೆರಳು ತೋರ ಬೆರ ಳಿಂದ ಹಿಡಿಯುವದು.

(೬) ದಾರ ಹಿಡಿಯಿರಿ. ಎಡಗೈಯಿಂದ ದಾರದ ತುದಿಯ ಹಿಡಿದು ಒಂದು ಎಳೆಯು ಉದ್ದ, ತ್ತೊಂದು ಗಿಡ್ಡ ಆಗುವಂತೆ ಎಳೆ ವದು.

(೭) ತೋರಿಸಿರಿ. ದಾರದ ತುದಿಗಳು ಜೋತಾಡು ಬಲಗೈಯಲ್ಲಿ ಸೂಜಿಯನ್ನು ಮೇ ಹಿಡಿಯುವದು.

ವ್ಹರ್ನ್ಯಾಕ್ಯುಲರ್ ಫಾಯನಲ್ ಪರೀಕ್ಷೆಯು.

ದಕ್ಷಿಣಭಾಗ.

ಈ ನೋಟೀಸಿನಿಂದ ತಿಳಿಸುವದೇನಂದರೆ:—ಸನ್ನ ೧೯೦೭ನೇ ಇ ವಿಯ ತಾ|| ೧೧ನೇ ನವಂಬರ ತಿಂಗಳ ಮುಂಬಯಿ ಗವ್ಹರ್ನಮೆ ಗ್ಯಾಝೇಟಿನ ೧ನೇ ಭಾಗದ ೧೯೯೯ಳರಿಂದ ೧೯೯೭ನೇ ಪುಟಗಳಲ್ಲಿ ಪ್ರ ದ್ಧಮಾಡಿದ ನಿಯಮಗಳಿಗನುಸಾರವಾಗಿ ವ್ಹರ್ನ್ಯಾಕ್ಯುಲರ ಫಾಯನ ಪರೀಕ್ಷೆಯು ಸೋಮವಾರ ತಾರೀಖು ೨೧ನೇ ಸಪ್ಟಂಬರ ೧೯೧೫ ದಿ ಹಾಗೂ ತದುತ್ತರ ದಿವಸಗಳಲ್ಲಿ ದಕ್ಷಿಣಭಾಗದ ಕೆಳಗೆ ಕಾಣಿಸಿದ ಸ ರುಗಳಲ್ಲಿ ನಡೆಯುವದು:—

ಧಾರವಾಡ.	ಕಾರವಾರ.
ಬೆಳಗಾವ.	ರತ್ನಾಗಿರಿ.
ವಿಜಾಪೂರ.	ಅಲೀಬಾಗ.
	ಕೊಲ್ಹಾಪುರ.

೨. ಪ್ರತಿಯೊಂದು ಸೆಂಟರಿನಲ್ಲಿ ಈ ಪರೀಕ್ಷೆಯು ಒಂದು ಕಮಿ ಟಿಯ ಮುಖಾಂತರವಾಗಿ ನಡೆಯುವದು; ಮತ್ತು ಧಾರವಾಡ, ಬೆ

ಗಾವ, ವಿಜಾಪುರ, ಕಾರವಾರ, ರತ್ನಾಗಿರಿ ಹಾಯಸ್ಕೂಲುಗಳ ಹೆಡ್‍ಮಾಸ್ತರರು ಸದರೀ ಪರೀಕ್ಷಾಕಮಿಟಿಗಳ ಅಧ್ಯಕ್ಷರಿರುವರು. ಅಲೀಬಾಗದಲ್ಲಿ ಕುಲಾಬಾ ಜಿಲ್ಹೆಯ ಡಿ॥ ಎ॥ ಇನ್ಸಸ್ಪೆಕ್ಟರರೂ ಕೊಲ್ಹಾಪುರದಲ್ಲಿ ಕೊಲ್ಹಾಪುರ ಸಂಸ್ಥಾನದ ಎ॥ ಇನ್ಸಪೆಕ್ಟರರೂ ಅಧ್ಯಕ್ಷರಿರುವರು.

೩. ಪರೀಕ್ಷೆಗೆ ಕೂಡ್ರುವ ಪರವಾನಗಿಯ ಬಗ್ಗೆ ಅರ್ಜಿಗಳನ್ನು ಉಮೇದವಾರನು ಯಾವ ಜಿಲ್ಹೆಯಲ್ಲಿ ಇರುವನೋ ಆ ಜಿಲ್ಹೆಯ ಪರೀಕ್ಷಾ ಕಮಿಟಿಯ ಪ್ರೆಸಿಡೆಂಟರಿಗೆ ತಾ॥ ೧ನೇ ಅಗಸ್ಟ ೧೯೧೫ ನೇ ದಿವಸ ಅಥವಾ ಅದಕ್ಕೂ ಪೂರ್ವದಲ್ಲಿ ತಲಪುವಂತೆ ಕಳಿಸತಕ್ಕದ್ದು. ಆ ಅರ್ಜಿಗಳನ್ನು ಈ ವಿಷಯದಲ್ಲಿ ವಿಧಿಸಲ್ಪಟ್ಟ ಅರ್ಜಿಯ ಛಾಪೀ ನಮೂನೆಗಳ ಮೇಲೆಯೇ ಮಾಡಲಿಕ್ಕೆಬೇಕು. ಈ ನಮೂನೆಗಳ ಬಗ್ಗೆ ಪ್ರೆಸಿಡೆಂಟರ ಕಡೆಗೆ ಅರ್ಜಿಯನ್ನು ಮಾಡಿದರೆ ಅವು ಪುಕ್ಕಟೆಯಾಗಿ ಕೊಡಲ್ಪಡುವವು.

೪. ಧಾರವಾಡದ ಮಾನ್ಯವಾದ ದೇಶಭಾಷೆಯು ಕನ್ನಡ ಇರುವದು. ಬೆಳಗಾವ, ವಿಜಾಪುರ, ಕಾನಡಾ ಜಿಲ್ಹೆಗಳ ಮಾನ್ಯವಾದ ದೇಶಭಾಷೆಗಳು ಕನ್ನಡ, ಮರಾಠಿ ಇವುಗಳಿರುವವು. ರತ್ನಾಗಿರಿ, ಕುಲಾಬಾ, ಕೊಲ್ಹಾಪುರಗಳ ದೇಶಭಾಷೆಯು ಮರಾಠಿ ಇರುವದು. ಧಾರವಾಡ ಜಿಲ್ಹೆಯ ಮರಾಠಿಯ ಉಮೇದವಾರರು ಧಾರವಾಡದಲ್ಲಿ ಪರೀಕ್ಷೆಗೆ ಕೂಡ್ರಬೇಕೋ ಬೆಳಗಾವಿಯಲ್ಲಿ ಪರೀಕ್ಷೆಗೆ ಕೂಡ್ರುಬೇಕೋ ಎಂಬದನ್ನು ತರುವಾಯದಲ್ಲಿ ಎಜ್ಯುಕೇಶನಲ್ ಇನ್ಸಪೆಕ್ಟರ ಸಾಹೇಬರವರು ನಿರ್ಣಯಿಸುವರು. ತಾ॥ ೮ ನೇ ಜನವರಿ ೧೯೧೪ ಇಸವಿಯ ಮುಂಬಯಿ ಸರಕಾರೀ ಗ್ಯಾಝೇಟದ ೧ ನೇ ಭಾಗದ ೩೧ ನೇ ಪುಟದಲ್ಲಿ ಮುದ್ರಿಸಲ್ಪಟ್ಟ ವಿದ್ಯಾಖಾತೆಯ ಸರಕಾರೀ ಜಾಹೀರಾತ ನಂ. ೩೪೩೪ ತಾ॥ ೨೩ ನೇ ಡಿಶಂಬರ ೧೯೧೩ ನೆಯ ಪ್ರಕಾರ ಎಲ್ಲ ವಿಷಯಗಳಲ್ಲಿ ಊರ್ದು ಭಾಷೆಯ ದ್ವಾರಾ ಪರೀಕ್ಷಿಸಲ್ಪಡಲಪೇಕ್ಷಿಸುವ ಉಮೇದವಾರರಿಗೋಸ್ಕರ ಎಲ್ಲ ವಿಷಯಗಳಲ್ಲಿ ಊರ್ದು ಭಾಷೆಯ ಪ್ರಶ್ನಕಾಗದಗಳು ಕೊಡಲ್ಪಡುವವು.

೫. ಕುಲಾಬಾ ಜಿಲ್ಹೆಯ ಕರ್ಜತ ತಾಲೂಕಿನ ಉಮೇದವಾರರು ಠಾಣಾಸೆಂಟರಿನಲ್ಲಿ ಆಗುವ ಪರೀಕ್ಷೆಗೆ ಕೂಡ್ರುಬಹುದು, ಮತ್ತು ಸಾಂಗಲಿ

ಸಂಸ್ಥಾನದ ಕುರಲಿ ತಾಲೂಕಿನ ಉಮೇದವಾರರು ಸಾತಾರಾ ಸೆಂಟರಿನಲ್ಲಿ ಆಗುವ ಪರೀಕ್ಷೆಗೆ ಕೂಡ್ರಬಹುದು.

೬. ಇದಕ್ಕೂ ಹೆಚ್ಚಿನ ಮಾಹಿತಿಯು ಬಗ್ಗೆ ಧಾರವಾಡ, ಬೆಳಗಾವ, ವಿಜಾಪೂರ, ಕ್ಯಾನರಾ, ರತ್ನಾಗಿರಿ ಮತ್ತು ಕುಲಾಬಾಜಿಲ್ಲೆಗಳ ಕಲೇಕ್ಟರ ಸಾಹೇಬರವರಿಂದ ಮತ್ತು ಕೊಲ್ಹಾಪುರ ದಿವಾನರಿಂದ ಪ್ರಸಿದ್ಧಿಸಲ್ಪಡುವ ಜಾಹೀರಾತುಗಳನ್ನು ನೋಡತಕ್ಕದ್ದು.

ಧಾರವಾಡ ಎಜ್ಯುಕೇಶನಲ್
ಇನ್ಸಪೆಕ್ಟರ ದಕ್ಷಿಣಭಾಗರವರ ಆಫೀಸು
ತಾ|| ೩-೭-೦೫

A. C. Miller,
Ag. Educational
Inspector S. D.

ಧಾರವಾಡ ಟ್ರೇನಿಂಗ ಕಾಲೇಜದ ಪ್ರ್ಯಾಕ್ಟಿಸಿಂಗ ಸ್ಕೂಲಿನಲ್ಲಿ ಮಹಮ್ಮಡನ್ ಬರ್ಸರೀ ಫಂಡದ ಒಂದು ಸ್ಕಾಲರಶೀಪು ಕೊಡುವ ಬಗ್ಗೆ ಮುಂಬಯಿ ಸರಕಾರೀ ಗ್ಯಾಝೀಟ ತಾರೀಖು ೩ನೇ ದಿಸೆಂಬರ ೧೯೦೪ ಭಾಗ ೧ ಪುಟ ೨೦೬೫ ರಿಂದ ೨೦೬೭ ರಲ್ಲಿ ಕೊಟ್ಟ ನಿಯಮಗಳ ಪ್ರಕಾರ ಸದರೀ ಸ್ಕಾಲರಶೀಪಿನ ಬಗ್ಗೆ ಪರೀಕ್ಷೆಯು ಧಾರವಾಡ ಗಂಡು ಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ಗುರುವಾರ ತಾ|| ೧೬ನೇ ಸಪಟಂಬರ ೧೯೦೫ ನೇ ದಿವಸ ೧೧ ಘಂಟೆಗೆ ಪ್ರಾರಂಭವಾಗುವದು.

೨. ಶಾಳಾಖಾತೆಯಿಂದ ಮಾನ್ಯವಾದ ಧಾರವಾಡ ಜಿಲ್ಲೆಯೊಳಗಿನ ಬೇಕಾದ ಶಾಲೆಯ ಮುಸಲ್ಮಾನ ವಿದ್ಯಾರ್ಥಿಗಳು ಈ ಪರೀಕ್ಷೆಗೆ ಬರಬಹುದು. ಆದರೆ ಅವರು ತಾವು ನಿಜವಾಗಿ ಧಾರವಾಡ ಜಿಲ್ಲೆಯಲ್ಲಿ ವಾಸ ಮಾಡುವರೆಂಬ ಬಗ್ಗೆಯೂ, ಧಾರವಾಡ ಟ್ರೇನಿಂಗ ಕಾಲೇಜದ ಪ್ರ್ಯಾಕ್ಟಿಸಿಂಗ ಸ್ಕೂಲಿನಲ್ಲಿ ಇದ್ದು ದೇಶಭಾಷೆಯ ಅಭ್ಯಾಸ ಮಾಡಲಿಕ್ಕೆ ತಾಗುವ ಖರ್ಚನ್ನು ಕೊಡಲಿಕ್ಕೆ ಆಗದಷ್ಟು ಬಡವರಿದ್ದ ಬಗ್ಗೆಯೂ ಇಬ್ಬರು ಸಂಭಾವಿತ ಗೃಹಸ್ಥರ ಸರಟೀಫೀಕೇಟನ್ನು ಹಾಜರ ಮಾಡಲಿಕ್ಕೆ ಬೇಕು. ಆದರೆ ಪರೀಕ್ಷೆಯ ಮೊದಲು ಕನಿಷ್ಟ ೧೨ ತಿಂಗಳವರೆಗೆ ಶಾಲಿಯಲ್ಲಿ ನಿಜವಾಗಿ ಇರದಂಥ ಉಮೇದವಾರರನ್ನು ಈ ಪರೀಕ್ಷೆಗೆ ಕೂಡ್ರಗೊಡಲಿಕ್ಕಿಲ್ಲ.

೩. ಮೇಲಿನ ೨ನೇ ನಿಯಮದಲ್ಲಿ ಹೇಳಿದ ಶರ್ತುಗಳಿಗನುಸಾರವಾಗಿ ತಿಂಗಳಿಗೆ ೪ ರೂಪಾಯಿ ಬೆಲೆಯುಳ್ಳ ಎರಡು ವರ್ಷಗಳ ವರೆ

ನಡೆಯುವಂಥ ಒಂದು ಸ್ಕಾಲರಶೀಪು ಕೆಳಗೆ ಬರೆದ ಶರ್ತುಗಳ ಪ್ರಕಾರ ಧಾರವಾಡ ಪ್ರ್ಯಾಕ್ಟಿಸಿಂಗಸ್ಕೂಲಿನಲ್ಲಿ ಕೊಡಲ್ಪಡುವದು.

(೧) ಉಮೇದವಾರನ ವಯಸ್ಸು ೧೫ ವರ್ಷಕ್ಕಿಂತ ಹೆಚ್ಚು ಇರಬೇಕು.

(೨) ಕನ್ನಡ ಅಥವಾ ಉರ್ದು ೫ನೇ ಇಯತ್ತೆಯ ಪ್ರಕಾರ ತೆಗೆದುಕೊಂಡ ಪರೀಕ್ಷೆಯಲ್ಲಿ ಅವನು ಎಲ್ಲರಲ್ಲಿ ಹೆಚ್ಚು ಗುಣಗಳನ್ನು ದೊರಕಿಸಬೇಕು, ಮತ್ತು ಹೆಚ್ಚು ಚುರುಕತನವನ್ನು ತೋರಿಸಬೇಕು.

(೩) ಅವನು ಪ್ರ್ಯಾಕ್ಟಿಸಿಂಗಸ್ಕೂಲಿಗೆ ತಪ್ಪಿಸದೆ ಹೋಗಬೇಕು; ಮತ್ತು ಅವನ ನಡತೆಯೂ, ಅಭ್ಯಾಸವೂ ಸಮಾಧಾನಕರವಾಗಿರಬೇಕು.

(೪) ಅವನು ವ್ಹರ್ನ್ಯಾಕ್ಯೂಲರ ಫಾಯನಲ್ ಪರೀಕ್ಷೆಯನ್ನು ಪಾಸಾದ ನಂತರ ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ಕಲಿತು ಟ್ರೇಂಡ ಶಿಕ್ಷಕನಾಗಲಿಕ್ಕೂ ಮತ್ತು ಆ ಪ್ರಕಾರ ಯೋಗ್ಯ ಜಾಮೀನುಗಳನ್ನು ಕೊಟ್ಟು ಕರಾರಪತ್ರ ಬರಕೊಡಲಿಕ್ಕೂ ಕಬೂಲ ಇರಬೇಕು.

೪. ಈ ಪರೀಕ್ಷೆಯು ಒಂದು ಕಮಿಟಿಯ ಮುಖಾಂತರ ತೆಗೆದುಕೊಳ್ಳಲ್ಪಡುವದು. ಆ ಕಮಿಟಿಗೆ ಧಾರವಾಡ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರು ಪ್ರೆಸಿಡೆಂಟರಿರುವರು. ಈ ಪರೀಕ್ಷೆಗೆ ಕೂಡ್ರುವದಕ್ಕೆ ಪರವಾನಗಿಯ ಬಗ್ಗೆ ಮಾಡತಕ್ಕ ಅರ್ಜಿಯನ್ನು ವ್ಹರ್ನ್ಯಾಕ್ಯೂಲರ ಫಾಯನಲ್ ಪರೀಕ್ಷೆಯ ಛಾಪಿಸಿದ ನಮೂನೆಯಲ್ಲಿ ತಕ್ಕ ಬದಲಾವಣೆಗಳನ್ನು ಮಾಡಿ ಅದರ ಮೇಲೆ ಮಾಡತಕ್ಕದ್ದು. ಈ ನಮೂನೆಯ ಪ್ರತಿಗಳು ಮೆ॥ ಎಜ್ಯೂಕೇಶನಲ್ ಇನಸ್ಪೆಕ್ಟರ ಸಾಹೇಬರವರ ಕಡೆಯಿಂದ, ಅಥವಾ ಪರೀಕ್ಷಾ ಕಮಿಟಿಯ ಪ್ರೆಸಿಡೆಂಟರ ಕಡೆಯಿಂದ ಕಿಮ್ಮತ್ತು ಬೀಳದೆ ದೊರೆಯುವವು. ಪರೀಕ್ಷೆಯ ಅರ್ಜಿಗಳನ್ನು ಪ್ರೆಸಿಡೆಂಟರ ಕಡೆಗೆ ೧೦ನೇ

ಸಪ್ಟಂಬರ ೧೯೧೫ನೇ ದಿವಸ ಅಥವಾ ಅದಕ್ಕೂ ಪೂರ್ವದಲ್ಲಿ ಮುಟ್ಟುವಂತೆ ಕಳಿಸಬೇಕು. ಅನಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ

A. C. Miller

ಅ. ಎಜ್ಯುಕೇಶನಲ್ ಇನಸ್ಪೇಕ್ಟರ, ದಕ್ಷಿಣಭಾಗ.

ಧಾರವಾಡ ಟ್ರೇನಿಂಗಕಾಲೇಜದ ಸರಟೀಫಿಕೇಟ ಪರೀಕ್ಷೆಯು ಸೋಮವಾರ ತಾ|| ೨೭ನೇ ಸಪ್ಟಂಬರ ೧೯೧೫ನೇ ಇಸವಿ ದಿವಸ ಪ್ರಾರಂಭವಾಗುವದು. ಈ ಪರೀಕ್ಷೆಯ ಡ್ರಾಯಿಂಗ ಪರೀಕ್ಷೆಯು ಸೋಮವಾರ ತಾ|| ೪ನೇ ಅಕ್ಟೋಬರ ೧೯೧೫ನೇ ದಿವಸ ಪ್ರಾರಂಭವಾಗುವದು ಹೊರಗಿನಿಂದ ಪರೀಕ್ಷೆಗೆ ಬರುವವರು ಮೆ|| ಎಜ್ಯೂಕೇಶನಲ್ ಇನಸ್ಪೇಕ್ಟರ ಸಾ|| ಬಾ|| ದಕ್ಷಿಣಭಾಗ ಇವರ ಅಪ್ಪಣೆಯನ್ನು ಪಡೆದುಕೊಂಡು ಪರೀಕ್ಷೆಗೆ ಕೂಡ್ರಬಹುದು. ಹಾಗೂ ಹೊರಗಿನಿಂದ ೧ನೇ ವರ್ಷದ ಸರ್ಟಿಫಿಕೀಟನ ಪರೀಕ್ಷೆಗೆ ಬರುವವರು ತಮ್ಮ ಮುಲ್ಕೀ ಅಥವಾ ವರ್ನ್ಯಾಕ್ಯೂಲರ ಫಾಯನಲ್ ಪರೀಕ್ಷೆಯ ಸರ್ಟಿಫಿಕೀಟನ್ನು ತಮ್ಮ ಸಂಗಡ ತರಬೇಕು. ಈ ಸರ್ಟಿಫಿಕೀಟನ್ನು ಹಾಜರ ಮಾಡದವರು ಪರೀಕ್ಷೆಗೆ ಕೂಡ್ರಗೊಡಲ್ಪಡಲಿಕ್ಕಿಲ್ಲ.

V. B. Joshi.

ಪ್ರಿನ್ಸಿಪಾಲ, ಟ್ರೇನಿಂಗಕಾಲೇಜ, ಧಾರವಾಡ.

ಮುಂಬಯಿ ಇಲಾಖೆಯ ದೇಶ ಭಾಷೆಯ ಶಾಲೆಗಳ ಶಿಕ್ಷಕರ ಮತ್ತು ಶಿಕ್ಷಕಿಯರ ಕಾಯಿದೆ (೧೯೧೧) ಯಲ್ಲಿ ಮಾಡಿದ ಹೆಚ್ಚು ಕಡಿಮೆಗಳೂ ತಿದ್ದುಪಡಿಗಳೂ.

ತಿದ್ದುಪಡಿ ನಂಬರ ೭.

೧ನೇ ಪ್ರಕರಣ ೫ನೇ ನಿಯಮ.

೨ದ ಕೊನೆಗೆ ಕೆಳಗೆ ಬರೆದದ್ದನ್ನು ಸೇರಿಸಿರಿ:—"೨ನೇ, ೩ನೆ, ೪ನೇ ನಿಯಮಗಳ ಪ್ರಕಾರ ಅವರ ಸಂಬಳವನ್ನು ನಿರ್ಣಯಿಸುವದಕ್ಕೆ ಅವರ ನೌಕರಿಯನ್ನು ಅವರ ಮೊದಲನೆಯ ವರ್ಷದ ಸರ್ಟಿಫಿಕೀಟನ ತಾರೀಖಿನಿಂದ ಹಿಡಿಯತಕ್ಕದ್ದು. ಶಿಕ್ಷಕಿಯರ ಸಂಬಂಧವಾಗಿ ಪಬ್ಲಿಕ್ ಸರ್ವಿಸ ಅಥವಾ ವ್ಹರ್ನ್ಯಾಕ್ಯೂಲರ್ ಫಾಯನಲ್ ಸರ್ಟಿಫಿಕೀಟನ್ನು ಪಡೆದಿರಬೇಕೆಂಬ ಶರ್ತನ್ನು ಬಿಟ್ಟು ಬಿಡಬಹುದು."

ಶಾಲಾಪತ್ರಕೆ.

ಸಂಪುಟ ೫೧. } ಅಗಸ್ಟ ೧೯೧೫. { ಸಂಚಿಕೆಗಳು ೮.

ಸ್ಫುಟವಿಷಯಗಳು.

---

೧. ಹಲ್ಲುಗಳೂ, ಆರೋಗ್ಯವೂ. ಈಗಿನ ಯುರೋಪದ ಯುದ್ಧದಲ್ಲಿ ಗಾಯ ಹೊಂದಿದ ಫ್ರೆಂಚ ಸೈನಿಕರಲ್ಲಿ ಅಮೇರಿಕದ ಡಾಕ್ಟರರ ಚಿಕಿತ್ಸೆಗೆ ಒಳಪಟ್ಟವರು, ಬೇರೆ ಡಾಕ್ಟರರ ಚಿಕಿತ್ಸೆಗೆ ಒಳಪಟ್ಟವರಿಗಿಂತ ೧೦ ದಿವಸ ಮುಂಚೆ ಆರೋಗ್ಯವನ್ನು ಹೊಂದುತ್ತಿರುವರೆಂದು ಅಮೇರಿಕದ ಒಂದು ಪತ್ರಿಕೆಯಿಂದ ತಿಳಿಯುತ್ತದೆ. ಫ್ರೆಂಚರೂ, ಇಂಗ್ಲಿಷರೂ ಇದಕ್ಕೆ ಬಹಳ ಆಶ್ಚರ್ಯಬಡುತ್ತಿರುವರು. ಆದರೆ ಆ ಪತ್ರಿಕೆಯ ಮತದಂತೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಹಲ್ಲುಗಳಿಗೂ, ಆರೋಗ್ಯಕ್ಕೂ ನಿಕಟ ಸಂಬಂಧವಿರುವದು; ಯಾರ ಹಲ್ಲುಗಳು ಎಷ್ಟು ಸ್ವಚ್ಛವಾಗಿರುವವೋ ಅವರ ಆರೋಗ್ಯವು ಅಷ್ಟು ಉತ್ತಮವಾಗಿರುವದು. ಅಮೇರಿಕದ ಡಾಕ್ಟರರು ಹಲ್ಲಿನ ಚಿಕಿತ್ಸೆಯಲ್ಲಿ ನಿಷ್ಣಾತರು. ಅವರು ಗಾಯಹೊಂದಿದ ಸೈನಿಕರ ಹಲ್ಲುಗಳನ್ನು ತಿಕ್ಕಿ ತೊಳೆದು ಸ್ವಚ್ಛವಿಡುವರು. ಮುರಿದ, ಕೆಟ್ಟ ಹಲ್ಲುಗಳನ್ನು ಸರಿಪಡಿಸುವರು. ಇದರಿಂದ ಮೈಮೇಲಿನ ಗಾಯಗಳು ಒಣಗುತ್ತ ಬರುವವು. ಮೋರೋಕೋ-ಅಲಜೀರಿಯಾಗಳ (ಅರಬಿ) ಸೈನಿಕರ ಹಲ್ಲುಗಳು ಬಹಳ ಸ್ವಚ್ಛವಿರುವವು. ಇದಕ್ಕೆ ಮುಸಲ್ಮಾನಿ ಧರ್ಮಶಾಸ್ತ್ರಗಳಲ್ಲಿ ಹಲ್ಲುಗಳನ್ನು ಸ್ವಚ್ಛವಿಡಬೇಕೆಂದು ವಿಧಿಸಿದ್ದೇ ಕಾರಣವು. ಹಿಂದು ಧರ್ಮಶಾಸ್ತ್ರದಲ್ಲಿಯೂ ದಂತಧಾವನವಿಧಿಯು ಬೆಳಗಿನ ಅವಶ್ಯ ಕರ್ತವ್ಯಗಳಲ್ಲೊಂದಾಗಿರುವದು.

---

೨. ಫೀ ಇಲ್ಲದ ಶಾಲೆಗಳು. ಅಮೇರಿಕಾಖಂಡದ ಯುನಾಯಿಟೆಡ್ ಸ್ಟೇಟ್ಸ ಗಳಲ್ಲಿ ಎಲ್ಲ ವಿದ್ಯಾರ್ಥಿಗಳು ಶಾಲೆಗಳಲ್ಲಿ ಫೀ ಇಲ್ಲದೆ ಪ್ರಾಥಮಿಕ, ಮತ್ತು ಉಚ್ಚತರದ ಶಿಕ್ಷಣವನ್ನು ಹೊಂದುವರು. ಇಂಗ್ಲಂಡದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಫೀಯಿಲ್ಲ. ಸಿಂಹಲದ್ವೀಪದಲ್ಲಿ ದೇಶೀಯ ಭಾಷೆಯಲ್ಲಿ ಶಿಕ್ಷಣವನ್ನು ಕೊಡುವ ಶಾಲೆಗಳಲ್ಲಿ ಫೀ ಕೊಡಬೇಕಾಗುವದಿಲ್ಲ. ಮಲಕ್ಕಾ, ಪೆನಾಂಗ ದ್ವೀಪ, ವೆಲೇಸ್‌ಲಿ ಈ ದೇಶಗಳಲ್ಲಿ ಬಾಲಕರು ಫೀಯಿಲ್ಲದೆ ಮಾತೃಭಾಷೆಯಲ್ಲಿ ಶಿಕ್ಷಣವನ್ನು ಪಡೆಯುವರು. ಮಾರೀಶಸ್ ದ್ವೀಪದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಫೀಯಿಲ್ಲ. ಕಾನಡಾದ ವಿದ್ಯಾಲಯಗಳಲ್ಲಿ ಹುಡುಗರೂ ಹುಡುಗೆಯರೂ ಖರ್ಚಿಲ್ಲದೆ ಶಿಕ್ಷಣವನ್ನು ಹೊಂದುವರು. ಬ್ರಿಟಿಶ್ ಕೊಲಂಬಿಯದಲ್ಲಿ ವಿದ್ಯಾಲಯಗಳಲ್ಲೆಲ್ಲ ಫೀ ಕೊಡಬೇಕಾಗುವದಿಲ್ಲ. ನೋವ್ಹಾಸ್ಕೋಶಿಯಾದಲ್ಲಿಯೂ, ನ್ಯೂಬ್ರನ್ಸವಿಕದಲ್ಲಿಯೂ ಇದೇ ಪ್ರಕಾರವಿರುವದು. ಜಮೇಕಾದ್ವೀಪದ ಸರಕಾರೀ ಶಾಲೆಗಳಲ್ಲಿ ಫೀಯಿಲ್ಲ. ಆಸ್ಟ್ರೇಲಿಯದ ನ್ಯೂಸೌಥವೇಲ್ಸದಲ್ಲಿ ಪ್ರಾಥಮಿಕ ಶಾಲೆಗಳಲ್ಲಿಯೂ, ಉಚ್ಚತರದ ಶಾಲೆಗಳಲ್ಲಿಯೂ ಫೀ ತೆಗೆದುಕೊಳ್ಳಲ್ಪಡುವದಿಲ್ಲ. ವ್ಹಿಕ್ಟೋರಿಯಾದ ವಿದ್ಯಾಲಯಗಳಲ್ಲಿ ಮಾಫಿ ಶಿಕ್ಷಣವು ನಡೆಯುವದು. ಕ್ವೀನ್ಸಲ್ಯಾಂಡದಲ್ಲಿಯೂ ಪ್ರಾಥಮಿಕ ಶಿಕ್ಷಣವು ಅದೇಮೇರೆಗೆ ನಡೆಯುವದು. ದಕ್ಷಿಣ ಆಸ್ಟ್ರೇಲಿಯದಲ್ಲಿ ಫೀಯಿಲ್ಲದೆ ಓದುಬರಹಗಳು ಕಲಿಸಲ್ಪಡುವವು. ನ್ಯೂಜೀಲಂಡದ ಶಾಲೆಗಳಲ್ಲಿ ಶಿಕ್ಷಣಕ್ಕೆ ಫೀಯಿಲ್ಲ. ದಕ್ಷಿಣ ಅಮೇರಿಕದ ಆರ್ಗೆಂಟಾಯಿನದ ಪ್ರಜಾಸತ್ತಾತ್ಮಕ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣವು ಮಾಫಿಯಾಗಿರುವದು. ಬೆಲ್ಜಿಯಮದಲ್ಲಿ ಬ್ರೂಸೆಲ್ಸ, ಮತ್ತು ಲೂವ್ಹೇನ ಎಂಬ ಎರಡು ವಿಶ್ವವಿದ್ಯಾಲಯಗಳಲ್ಲಿ ಫೀಯಿಲ್ಲದೆ ಶಿಕ್ಷಣವು ಸಿಗುವದು; ಅಲ್ಲಿ ಫೀಯಿಲ್ಲದ ಖಾಸಗಿ ಶಾಲೆಗಳೂ ಎಷ್ಟೋ ಇರುವವು. ಅಮೇರಿಕದ ಸಾಲ್ವಾಡೋರ, ಪಾರಾಗ್ವೇ, ಹೊಂಡುರಾಸ, ಗ್ವಾಟಮಾಲಾ, ಇಕ್ವೇಡೋರ, ಕೋಲಂಬಿಯಾ, ಬೋಲಿವಿಯಾ ಈ ಪ್ರಜಾಸತ್ತಾತ್ಮಕ ರಾಜ್ಯಗಳಲ್ಲಿ ಪ್ರಾಥಮಿಕ ಶಿಕ್ಷಣವು ಮಾಫಿಯಾಗಿರುವದು. ಚಿಲಿಯಲ್ಲಿಯೂ, ಬ್ರಾಜಿಲದಲ್ಲಿಯೂ ಎಲ್ಲ ಪ್ರಕಾರದ ಶಿಕ್ಷಣವು ಮಾಫಿಯಾಗಿರುವದು. ಬುಲ್ಗೇರಿಯಾದಲ್ಲಿಯೂ ಇದೇಮೇರೆ

ಇರುವದು. ಡೆನ್ಮಾರ್ಕದ ಶಾಲೆಗಳು (ಒಂದೆರಡು ಮಧ್ಯಮತರದ ಶಾಲೆಗಳನ್ನು ಬಿಟ್ಟು) ಮಾಫಿಯಾಗಿರುವವು. ಫ್ರಾನ್ಸದಲ್ಲಿ ಪ್ರಾಥಮಿಕ ಶಿಕ್ಷಣದ ಸರಕಾರಿ ಶಾಲೆಗಳಲ್ಲೆಲ್ಲ ಮಾಫಿಯಿರುವದು. ಜರ್ಮನ್‌ಸಾಮ್ರಾಜ್ಯದ ಪ್ರತಿಯೊಂದು ರಾಜ್ಯದಲ್ಲಿಯೂ, ಬೇರೆ ರಾಜ್ಯಗಳಲ್ಲಿಯೂ ಪ್ರಾಥಮಿಕಶಾಲೆಗಳಲ್ಲಿ ಫೀ ತೆಗೆದುಕೊಳ್ಳುವದು ಬಂದಾಗಿರುವದು. ಹಾಇಟಿ ದ್ವೀಪವು ಪ್ರಜಾಸತ್ತಾಕವು. ಇಲ್ಲಿ ಬಹುತರ ನಿಗ್ರೋಜನರ ವಸತಿಯು ಇರುವದು. ಇಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಫೀಯಿಲ್ಲ. ಇಟಾಲಿಯಲ್ಲಿ ಕೆಳಗಿನ ತರಗತಿಯ ಮತ್ತು ಮೇಲಿನ ತರಗತಿಯ ಪ್ರಾಥಮಿಕ ಶಾಲೆಗಳಲ್ಲಿ ಫೀಯು ತೆಗೆದುಕೊಳ್ಳಲ್ಪಡುವದಿಲ್ಲ. ಜಪಾನದಲ್ಲಿ ಪ್ರಾಥಮಿಕಶಾಲೆಗಳಲ್ಲಿ ಫೀ ಇಲ್ಲ. ಅಲ್ಲಿ ೧೯೧೨ ರಲ್ಲಿ ೧೦೦ ಕ್ಕೆ ೧೪ ಹುಡುಗರು ಮಾತ್ರ ಫೀ ಕೊಡುತ್ತಿದ್ದರು. ಈಗ ಒಬ್ಬನೂ ಕೊಡಬೇಕಾಗಿಲ್ಲ. ಮೆಕ್ಸಿಕೋದಲ್ಲಿ ಹುಡುಗರಿಗೂ ಹುಡಿಗೆಯರಿಗೂ ಫೀಯಿಲ್ಲ. ಮಾಂಟನಿಗ್ರೋದಲ್ಲಿಯೂ ಇದರಂತೆಯೇ. ಪೇರೂದಲ್ಲಿ ಸರಕಾರಿ ಶಾಲೆಗಳಲ್ಲಿ ಫೀ ತೆಗೆದುಕೊಳ್ಳಲ್ಪಡುವದಿಲ್ಲ. ರುಮೇನಿಯಾದಲ್ಲಿ ಶಿಕ್ಷಣವು ಮಾಫಿಯಾಗಿರುವದು. ಸಾನ್‌ಡೊಮಿಂಗೋದ ಶಾಲೆಗಳಲ್ಲೆಲ್ಲ ಫೀಯಿಲ್ಲ. ಸರ್ವಿಯಾದಲ್ಲಿಯೂ ಹಾಗೆಯೇ. ಸ್ಪೇನದಲ್ಲಿ ಬಹುತರ ಹುಡುಗರೂ ಹುಡಿಗೆಯರೂ ಫೀಯಿಲ್ಲದೆ ಕಲಿಯುವರು. ಸ್ವೀಡನದಲ್ಲಿ ಹುಡುಗರು ಫೀಯಿಲ್ಲದೆ ಪ್ರಾಥಮಿಕ ಶಿಕ್ಷಣವನ್ನು ಹೊಂದುವರು. ಸ್ವಿತ್ಸರ್ಲಂಡದಲ್ಲಿಯೂ ಹೀಗೆಯೇ. ಈ ದೇಶದ ಶಾಲೆಗಳಲ್ಲಿ ಹುಡುಗರಿಗೂ ಹುಡಿಗೆಯರಿಗೂ ಪುಸ್ತಕ, ಪಾಟಿ, ಪೆನ್ಸಿಲು, ಕಾಗದಗಳು ಕೂಡ ಕ್ರಯವಿಲ್ಲದೆ ಕೊಡಲ್ಪಡುವವು. ಬೇರೆ ಹಲವು ದೇಶಗಳಲ್ಲಿಯೂ ಈ ತರದ ವ್ಯವಸ್ಥೆ ಇರುವದು. ತುರ್ಕಸ್ಥಾನದಲ್ಲಿಯೂ ವೆಚ್ಚವಿಲ್ಲದೆ ಪ್ರಾಥಮಿಕ ಶಿಕ್ಷಣವು ದೊರೆಯುವದು. ವೆನಿಝುಯೆಲಾದಲ್ಲಿಯೂ ಇದೇ ತರದ ವ್ಯವಸ್ಥೆಯಿರುವದು.

ಇದರ ಮೇಲಿಂದ ಪ್ರಾಯಶಃ ಎಲ್ಲ ಸುಧಾರಿಸಿದ ದೇಶಗಳಲ್ಲಿ ಬಹುತರ ಪ್ರಾಥಮಿಕ ಶಿಕ್ಷಣವು ಫೀಯಿಲ್ಲದೆ ಕೊಡಲ್ಪಡುವದೆಂಬದು ಗೊತ್ತಾಗುವದು.

"ಸತ್ಪುರುಷ ಪರೀಕ್ಷೆ"

ಒಂದು ದಿನ ವರವಾರಣಾಸಿಯೊ ।
ಳಿಂದುಶೇಖರ-ವಿಶ್ವನಾಥನ ।
ಮಂದಿರದ ಮುಂಗಡೆಯೊಳುದುರಿತು, ಹೊನ್ನಿನುರುಪದಕ ॥
ಚಂದದಿಂ ಬರೆದಿರ್ದರದರೊಳು ।
"ಸಂದ ಸತ್ಕರ್ಮಗಳ ಗೈದವ ।
ಗಿಂದಿರೆಂಬ ವರನೊಲಿದು ಕಳುಹಿದನೀಮಹಾವರವ" ॥೧॥
ನೆರೆದ ಭೂಸುರರಿದನು ಕಾಣುತ ।
ಭರದಿ ಸಾರಿದರೆಲ್ಲ ಕಡೆಯಲಿ ।
"ಬರುವದಿಲ್ಲಿಗೆ ವರವಕೊಳ್ಳಲು ಯೋಗ್ಯರಾದವರು"
ನೆರೆದ ಸಭೆಯಲಿ ಪೇಳೆತಾವೆಸ ।
ಗಿರುವ ಸತ್ಕಾರ್ಯಗಳ ಸರ್ವರು ।
ಪರಮಪೂಜ್ಯನ ನೋಡಿ ಕೊಡುವೆವು ವರವನೆಂ"ದೆನುತ ॥೨॥
ಅರಿವುತೀಸೋಜಿಗದ ಸುದ್ದಿಯ ।
ಹರುಷದಲಿ ಬಹುಜನರು-ಮುನಿಗಳು, ।
ಪರಮಭಕ್ತರು, ಧರ್ಮನಿಷ್ಠರು, ಸುಕೃತಶಾಲಿಗಳು ॥
ತರತರದ ಬಿರುದಾಂತು ಮೆರೆಯುವ ।
ವರಮಠಾಧಿಪರಾರ್ಯರರಸರು, ।
ಹರಿದು ಬಂದರು ವಾರಣಾಸಿಗೆ ತಾನು ತಾನೆನುತ ॥ ೩ ॥
ತಂಡ ತಂಡದಿ ಬರ್ಪ ಜನರನು ।
ಕಂಡು ಭೂಸುರವರರು ವರಸಭೆ ।
ಗೊಂಡು, ಕೇಳುತಲವರ ಕಾರ್ಯವ, ತಿರುಗಿ ಕಳುಹಿದೊಡೆ ॥
ಕಂಡು ಕಾಣದೆ ಮೋಹವಶದಿಂ ।
ಕೆಂಡವನು ಪಿಡಿವುತ್ತ ಮನದೊಳ ।
ಗಂಡಲೆವ ಕೀಟಕದ ತೆರದಲಿ ಮರುಗುತ್ತೈದಿದರು ॥ ೪ ॥
ಸಂದುವೀಪರಿಯಿಂದ ವರುಷಗ ।
ಳೊಂದೆರಡು, ಬಳಿಕೊಂದು ದಿನ ತಾ ।
ಬಂದನಲ್ಲಿಗೆ ಪರಮ ಧಾರ್ಮಿಕನೆನಿಪ ಭೂವರನು ॥

ಸಂದ ಸಾಮ್ರಾಜ್ಯವನು ಧನವನು ।
ಮಂದಿ ಮಾರ್ಬಲ ಹಾನೆ ಕುದುರೆಗ ।
ಳೊಂದುಳಿಯದಂದದಲಿ ದಾನವ ಮಾಡಿ ದೀನರಿಗೆ ॥ ೫ ॥
ಬಂದ ಭೂಪನ ಕಂಡು ಸಭಿಕರು ।
ವಂದಿಸುತ, "ಭೂವರನೆ, ನಿನ್ನಯ ।
ಸಂದ ಸದ್ಗುಣಗಣವ ನಿನ್ನಯ ದಾನಶೂರತೆಯ ॥
ಚಂದದಿಂ ಕೇಳಿಹೆವು ಕೊಳ್ಳಿ ।
ಇಂದಿರೆಯ ವರನಿತ್ತವರವನು" ।
ಎಂದೆನುತ ನೀಡಿದರು ಪದಕವನಾ ಮಹೀಪತಿಗೆ ॥ ೬ ॥
ಪರಮ ಧಾರ್ಮಿಕ ನೆನಿಪ ಭೂಪನು ।
ಹರುಷದಿಂ ಸಭಿಕರನು ವಂದಿಸಿ ।
ವರವ ಕೊಂಡನು, ನೋಡು, ನೋಡೀ ಮಹಾಚಮತ್ಕೃತಿಯ ॥
ವರ ಸುವರ್ಣದ ಪದಕವರಸನು ।
ಕರದಿ ಪಿಡಿವನಿತರೊಳು ತಟ್ಟನೆ ।
ಉರುಳಿ ಬಿದ್ದಿತು, ನೋಡೆ ಸಭಿಕರು, ಮಣ್ಣಹಂಚಾಯ್ತು ॥ ೭ ॥
ಅರರೆ! ಏನಚ್ಚರಿಯೊ! ಭೂಪನು ।
ಮರುಗಿ ಮನದೊಳು ಪೋಗಲಿತ್ತಲು ।
ತಿರುಗಿ ಪದಕವು ಮೊದಲಿನಂತಾಯ್ತೇನ ಪೇಳುವೆನು ॥
ವರಮಹೀಸುರ ರೊಲಿದು ಕೊಟ್ಟರು ।
ವರವ ನೀಪರಿಯಿಂದ ಮೂವರಿ ।
ಗರರೆ! ಚೋದ್ಯವು! ಧಿಕ್ಕರಿಸಿತದು ಮೊದಲಿನಂದದಲಿ ॥ ೮ ॥
ಈಯವಧಿಯಲಿ ಹಲವು ಕಡೆಯಿಂ ।
ಕಾಯಕಷ್ಟವ ಮಾಡಲಾರದ ।
ರಾಯವಿಲ್ಲದೆ ದೀನರಾಗಿಹ ಬಡಕುಟುಂಬಿಕರು ॥
ಬಾಯಿಯಿಲ್ಲದ ರಂಗಹೀನರು ।
ತಾಯಿಯರಸುವ ಕರುವಿನಂದದಿ ।
ಜೀಯ! ದಯಮಾಡೆನುತ ಬಂದರು ನಿಂದರಾಪುರದಿ ॥ ೯ ॥

ಜನರೊಳುರೆ ಕೀರ್ತಿಯನು ಪಡೆದಿಹ ।
ಘನಸುಶೀಲರು ವರವ ಪಡೆಯಲು ।
ಘನತರದ ಸಂಭ್ರಮದಿ ಬರುತಿರೆ ನೋಡುತಾ ಜನರ ॥
ಮನದಿ ಕನಿಕರವಿನಿತು ಮಾತ್ರವು ।
ಜನಿಸದಿರ್ದರು ಧನವ ಧಾನ್ಯವ ।
ಜನರು ಸೈ ಸೈಯೆನ್ನುವಂದದಿ ಸೂರೆಗೈಯುವರು ॥ ೧೦ ॥
ಇರುತಿರಲು, ವರವಿಶ್ವನಾಥನ ।
ದರುಶನಕೆನುತ ವಾರಣಾಸಿಗೆ ।
ಹೊರಟನೊಬ್ಬನು ತೊಳಲಿಬಳಲುತ ದೀನವೇಷದಲಿ ॥
ಅರಿಯನವನೀ ವರದ ವಾರ್ತೆಯ ।
ನರಿಯ ಸಾಡಂಬರದ ನಡತೆಯ ।
ಸೊರಗಿ ಸಣ್ಣಾಗುವನು ದೀನರ ದುಃಖವನು ನೋಡಿ ॥ ೧೧ ॥
ಒಂದು ದಿನ ಮಧ್ಯಾಹ್ನ ಸಮಯದಿ ।
ಬಂದ ನಾತನು ವಾರಣಾಸಿಗೆ ।
ಸಂದ ವಿಶ್ವೇಶ್ವರನ ಮಂದಿರದೆಡೆಗೆ ಮುದದಿಂದ ॥
ಮಂದಿರದ ಸುತ್ತಲಿನ ಮಾರ್ಗದಿ ।
ನಿಂದಿಹರು ದುಃಖದಲಿ ಬಹುವಿಧ ।
ದಿಂದ ಗೋಳಿಡುವದನು ಕೇಳುತ ಮನದಿ ಮರುಗಿದನು ॥ ೧೨ ॥
ನೊಂದು ಮನದಲಿ ಮುಂದೆ ಬರುತಿರ ।
ಲೊಂದು ಕಡೆಯಲಿ ಬಹಳ ದುಃಖದಿ ।
"ತಂದೆಯೇ! ಕಣ್ಣಿಲ್ಲ, ಕುಂಟನು ಮೂರು ದಿನದಿಂದ ।
ಒಂದು ಹಿಡಿ ಕೂಳಿಲ್ಲ, ಸಾಯುವೆ ।
ನೆಂದೆನುತ ಮೊರೆಯಿಡಲು ಕೇಳುತ ।
ಮುಂದಕಡಿಯಿಡಲಾರದೆ ತಾ ನಡೆದನವನೆಡೆಗೆ ॥ ೧೩ ॥
ಓಡುತೋಡುತ್ತಲ್ಲಿ ಗೈದುತ ।
ನೋಡುತಾತನ ತನುವ " ಕಂದನೆ, ।
ಮಾಡಲೇಂ ಕೊಡಲಾರೆನಿನ್ನವ ದೀನನಾಗಿಹೆನು ॥

ಬೇಡಿಕೊಳ್ಳೈ ಹರಿಯನಾತನು ।
ಮಾಡುವನು ಕರುಣೆಯನು, ಪೂರ್ವದಿ ।
ಮಾಡಿರುವ ಕರ್ಮಗಳ ಫಲವನು ಮೀರಲಾರಳವು ॥ ೧೪ ॥
ಎನುತೆನುತ ಕಣ್ಣೀರು ಸುರಿಸುತ ।
ಮನದಿ ಕಳವಳ ಬಡುತ ತಾತನ ।
ಸನುಮತಿಸುತ್ತೈದಿದನು ವಿಶ್ವೇಶ್ವರನ ಮಂದಿರಕೆ ॥
ಜನರ ಸಂದಣಿಯಲ್ಲಿ ತಾನತಿ ।
ವಿನಯದಿಂದೊಳಗೈದಿ ದೇವರಿ ।
ಗನುನಯದಿ ಪೊಡಮಟ್ಟು ಕಣ್ಣೀರಿಡುತ ಭಕ್ತಿಯಲಿ ॥೧೫ ॥
ಮರಳಿಬರುತಿರಲಲ್ಲಿ ನೆರೆದಿಹ ।
ವರ ಸಭಾಪತಿ ಕಂಡು ವಿನಯದಿ ।
ಕರೆವುತಾತನ ನಿತ್ತನವನಿಗೆ ವರದ ಪದಕವನು ॥
ಅರಿಯದಲದೇನೆಂಬುದನು ತಾ ।
ಕರದಿ ಪಿಡಿಯಲು, ಸಭಿಕರೆಲ್ಲರು,
ಹರುಷ ವಿಸ್ಮಯಗಳಲಿ ಬೆಪ್ಪಾಗಿರ್ದರೇನೆಂಬೆ ॥ ೧೬ ॥
ಕರದಿ ಪಿಡಿಯಲು, ಪದಕವಾತನು ।
ಪರಮತೇಜಃಪುಂಜವಾಯಿತು ।
ವರಸುವರ್ಣದ ವರ್ಣವುಜ್ವಲವಾಗಿ ಬೆಳಗಿದುದು ॥
ಭರದಿ ಸಭಿಕರು ಬಂದು ವಿನಯದೊ ।
ಳೆರಗಿ ಪೇಳಿದರಾಮಹಾತ್ಮಗೆ ।
ಪರಮ ಮಹಿಮನ ವರದ ಪೂರ್ವಾಪರ ವಿಚಾರಗಳ ॥ ೧೭ ॥
ನೋಡಿ ವಸ್ತ್ರಾಭರಣ ಕಾಂತಿಯು ।
ನೋಡಿ ಬಾಹ್ಯಾಚರಣೆ ನುಡಿಗಳ ।
ಮಾಡದಿರು ನಿರ್ಣಯವನೀಂ ಸತ್ಪುರುಷರಿವರೆಂದು ॥
ನೋಡು ಮೊದಲವರಂತರಂಗದ ।
ನೋಡು ಬಳಿಕಾ ಜನರ ಕೃತ್ಯವ ।
ಮಾಡದಿರು ನಿಂದೆಯನು ದೀನರ ಹೀನ ರಿವರೆಂದು ॥ ೧೮ ॥

ನಾ. ವೆ. ಕುರಡಿ

ಅನುಭವದ ಮಾತುಗಳು

ಮೌನ:—ಹಿಂದಕ್ಕೆ ಗ್ರೀಸದೇಶದಲ್ಲಿ ಝೀನೋ ಎಂಬ ಒಬ್ಬ ತತ್ವಜ್ಞಾನಿಯು ಇದ್ದನು; ಅವನು "ಮೌನವು ಬಹು ದೊಡ್ಡ ಸದ್ಗುಣವುಂಟು; ಅದನ್ನು ಸ್ವೀಕರಿಸುವದರಿಂದ ಪರರ ದೋಷಗಳು ಮಾತ್ರ ತಿಳಿಯುವವು. ಆದರೆ ತಮ್ಮ ದೋಷಗಳು ಯಾರಿಗೂ ತಿಳಿಯುವದಿಲ್ಲ" ಎಂದು ಅನ್ನುತ್ತಿದ್ದನು.

ಮೂರ್ಖನೂ ಬುದ್ಧಿವಂತನೂ:—ನನಗೇನೂ ಜ್ಞಾನವಿಲ್ಲೆಂದು ಅನ್ನುತ್ತಿರುವ ಬುದ್ಧಿವಂತನು, ಹೆಚ್ಚು ಬುದ್ಧಿವಂತನೆಂದು ತಿಳಿಯತಕ್ಕದ್ದು. ಮತ್ತು ನನ್ನಷ್ಟು ಜ್ಞಾನವು ಯಾರಿಗೂ ಇಲ್ಲೆಂದು ಅನ್ನುವ ಮೂರ್ಖನು, ಮೂರ್ಖಶಿರೋಮಣಿಯೆಂದು ತಿಳಿಯತಕ್ಕದ್ದು.

ಮುಖಸ್ತುತಿಯ ಜನರು:—ಗ್ರೀಸದೇಶದ ವಿದ್ವತ್ ಸಪ್ತಕದಲ್ಲಿ ಬಿಯಾಸನೆಂಬ ಒಬ್ಬ ತತ್ವಜ್ಞಾನಿಯು ಇದ್ದನು; ಅವನಿಗೆ ಯಾರೋ ಒಬ್ಬರು ಅತಿ ಭಯಂಕರ ಮನುಷ್ಯರು ಯಾರು? ಎಂದು ಪ್ರಶ್ನಮಾಡಲು ಅದಕ್ಕೆ ಅವನು " ಪರಕೀಯರೊಳಗಿನ ಪ್ರಬಲವೈರಿಯೂ, ಸ್ವಕೀಯರೊಳಗಿನ ಮುಖಸ್ತುತಿಸಾಠಕನೂ ಭಯಂಕರ ಮನುಷ್ಯರೆಂದು ತಿಳಿಯಬೇಕೆಂ"ದು ಉತ್ತರ ಕೊಟ್ಟನು.

ಕಾಯಿದೆಗಳು:—ಕಾಯಿದೆಗಳು ಜೇಡ ಹುಳದ ಜಾಳಿಗೆಯಂತೆ ಇರುವವು; ಅವುಗಳಲ್ಲಿ ನೊಣದಂಥ ಸರಳ ಮನಸಿನವರು ಕೂಡಲೆ ಸಿಗಬೀಳುತ್ತಾರೆ; ಆದರೆ ಕಡಿಜೇರಿಗೆಯ ಹುಳದಂಥ ಧೂರ್ತರು ಅವುಗಳೊಳಗಿಂದ ಪಾರಾಗಿ ಹೋಗುತ್ತಾರೆ.

ಸದಾಚರಣೆ:—ಸೇನಿಕಾ ಎಂಬ ರೋಮನ್ ತತ್ವಜ್ಞಾನಿಯು—"ಪರಮೇಶ್ವರನು ನೋಡದಿದ್ದರೂ, ರಾಜಪ್ರತಿನಿಧಿಗಳಿಂದಾಗಲಿ, ಬೇರೆ ಮನುಷ್ಯರಿಂದಾಗಲಿ, ಶಿಕ್ಷೆಯ ಅಂಜಿಕೆಯು ಇಲ್ಲದಿದ್ದರೂ, ನಾನು ಪಾಪ ಕೃತ್ಯಗಳನ್ನು ಮಾಡುವದಿಲ್ಲೆಂದು ತನ್ನ ಗ್ರಂಥದಲ್ಲಿ ಬರೆದಿದ್ದಾನೆ. ಇದೇ ನಿಜವಾದ ಸದಾಚರಣೆಯು.

ಮನೋವೃತ್ತಿ:—ನಾವು ನಮ್ಮ ಎಷ್ಟೋ ಮನೋವೃತ್ತಿಗಳನ್ನು ಆವರಿಸಿಕೊಳ್ಳುವೆವು. ಇದರಲ್ಲಿ ನಮ್ಮ ಪರಾಕ್ರಮವೇನೂ ಇರದೆ, ಆ ಮನೋವೃತ್ತಿಗಳಲ್ಲಿ ದೌರ್ಬಲ್ಯ ಉಂಟೆಂಬದನ್ನು ಲಕ್ಷ್ಯದಲ್ಲಿಡತಕ್ಕದ್ದು.

ಹಿಂದೂ ಸಮಾಜದ ಸುಧಾರಣೆಯ ವಿಷಯದಲ್ಲಿ ಪುರಾತನಾಭಿಮಾನಿಗಳ ಅಭಿಪ್ರಾಯಗಳು.

(ಜಗದ್ವಿಖ್ಯಾತ ಕವಿಗಳಾದ ರವೀಂದ್ರನಾಥ ಟಾಗೋರರವರ ವಿಚಾರಗಳು)

ಹಿಂದೂ ಸಮಾಜವು ಅವನತ ಸ್ಥಿತಿಯಲ್ಲಿರುವದು; ಅದರಲ್ಲಿ ಸುಧಾರಣೆಯಾಗುವದು ಅವಶ್ಯವು, ಎಂಬ ಮಾತು ಸರ್ವಸಮ್ಮತವಾದದ್ದಿರುವದು. ಆದರೆ ಯಾವ ರೀತಿಯಾಗಿ ಸುಧಾರಣೆ ಮಾಡಬೇಕೆಂಬ ವಿಷಯಲ್ಲಿ ಮಾತ್ರ ಎಲ್ಲರ ಅಭಿಪ್ರಾಯಗಳು ಒಂದೇ ಇಲ್ಲ. ಹಲವರು ಹಲವು ರೀತಿಯಾಗಿ ಅಭಿಪ್ರಾಯ ಪಡುವರು. ಈ ಜನರಲ್ಲಿ ಸಾಮಾನ್ಯವಾಗಿ ಎರಡು ವರ್ಗಗಳನ್ನು ಮಾಡಬಹುದಾಗಿದೆ:—(೧) ಯೌರೋಪ್ಯ ಸುಧಾರಣಾಭಿಮಾನಿಗಳು, (೨) ಪುರಾತನಾಭಿಮಾನಿಗಳು. ಯೌರೋಪ್ಯ ಸುಧಾರಣಾಭಿಮಾನಿಗಳಿಗೆ ಹಿಂದೂ ಸಮಾಜವೂ ಅದರ ಆಚಾರವಿಚಾರಗಳೂ ತೀರ ನಿಂದ್ಯವಾಗಿ ತೋರುವವು. ಅವರಿಗೆ ವಿಶ್ವಾಮಿತ್ರನಂತೆ ನೂತನ ಸೃಷ್ಟಿಯನ್ನೇ ಮಾಡಬೇಕೆನ್ನಿಸುವದು. ಅವರೆದುರಿಗೆ ಪುರಾತನಾಭಿಮಾನಿಗಳಲ್ಲಿ ಯಾರಾದರೂ "ನೀವು ಸಮಾಜದ ಸುಧಾರಣೆಯ ವಿಚಾರಗಳನ್ನು ಹೇಳುವಾಗ ನಾವು ಹಿಂದೂಗಳು ಎಂಬ ಮಾತನ್ನು ಲಕ್ಷ್ಯದಲ್ಲಿಟ್ಟುಕೊಂಡು ಮಾತಾಡಿರಿ" ಎಂದರೆ ಅವರಿಗೆ ಮನಸ್ಸಿಗೆ ಸಮಾಧಾನವೆನಿಸುವದಿಲ್ಲ. ಅವರು—"ನಿಮ್ಮಲ್ಲೇನಿದೆ? ಮಣ್ಣು! ಮನೆಗೊಂದು ಜಾತಿ; ತಲೆಗೊಂದು ಭಾಷೆ; ನಿಮ್ಮ ಪುರಾಣಗಳು ಎಲ್ಲಾ ಕಟ್ಟುಕಥೆಗಳು; ನಿಮ್ಮ ಧರ್ಮಶಾಸ್ತ್ರಗಳು ಹಳೆಯ ಮಾತಾಗಿ ಹೋದವು; ಅವು ಹೊಲದಲ್ಲಿ ಹಕ್ಕಿಗಳನ್ನು ಬೆದರಿಸುವದಕ್ಕಾಗಿ ನಿಲ್ಲಿಸಿದ ಹುಲ್ಲಿನ ಬೆಚ್ಚನಂತಿರುವವು. ಈ ಬೆಚ್ಚುಗಳಿಗೆ ಹೆದರಿ ಹಿಂದುಳಿದ ಹಕ್ಕಿಗಳು ಹಿಂದೆ ಉಳಿಯುವವು; ಧೈರ್ಯಮಾಡಿ ಮುಂದೆ ಬಂದು ಮೇದು ಹೋಗುವ ಹಕ್ಕಿಗಳು ಹೋಗೇ ಹೋಗುವವು. ನಿಮ್ಮ ತತ್ವಜ್ಞಾನದ ವಿಚಾರಗಳಂತೂ ಮನುಷ್ಯನ ಮನುಷ್ಯತ್ವವನ್ನೇ ಕಳೆದು ಬಿಡುವವು", ಇತ್ಯಾದಿ. ಈ ರೀತಿ ಒಂದು ಉಸುರಿಗೆ ನೂರೆಂಟು ಮಾತಾಡಿ ದೊಡ್ಡದೊಂದು ತಿರಸ್ಕಾರದ ಹೊರೆಯನ್ನೇ ಮೋರೆಯ ಮೇಲೆ ಒಗೆಯುವರು. ಇದಕ್ಕೆ ಪುರಾತನಾಭಿಮಾನಿಗಳು ಏನು ಹೇಳಬಹುದು?

ಪುರಾತನಾಭಿಮಾನಗಳು ತಮ್ಮ ವಿರೋಧಗಳ ಈ ತರದ ಆವೇಶದ ಮಾತುಗಳಿಗೆ ಹೇಳಬಹುದಾದ ಕೆಲವು ಸಂಗತಿಗಳನ್ನು ಇಲ್ಲಿ ಸಂಕ್ಷೇಪವಾಗಿ ಹೇಳುವೆವು:—

(೧) ಪಾಶ್ಚಾತ್ಯ ಸುಧಾರಣಾಭಿಮಾನಿಗಳಾದ ಹಿಂದೂಗಳು ತಮ್ಮ ಅಂತಃಕರಣವನ್ನು ಕಳೆದು ಕೊಂಡಿರುವರು. ಇದು ಅವರ ದೋಷವಲ್ಲ; ಕಾಲದ ಮಹಿಮೆಯು. ಪಾಶ್ಚಾತ್ಯರ ಸಂಸರ್ಗದಿಂದ ಅವರಲ್ಲಿ ಈ ವಿಚಾರಗಳುಂಟಾಗಿರುವವು. ಅವರು ನಿಜವಾದ ಹಿಂದೂ ಧರ್ಮದ ಅಂತರಂಗ ಸ್ವರೂಪವನ್ನು ಅಭ್ಯಾಸ ಮಾಡಿಲ್ಲ; ಹಿಂದೂ ಸಮಾಜವನ್ನು ಸಹೃದಯತೆಯಿಂದ ನಿರೀಕ್ಷಿಸಿಲ್ಲ. ಕೆಲವೊಂದು ವರ್ಗದ ಬಹಿರಂಗದ ಆಚಾರವಿಚಾರಗಳು ನಮ್ಮ ಸಮಾಜದ ಆಚಾರವಿಚಾರಗಳೆಂದು ನಾವು ಒಪ್ಪಿಕೊಳ್ಳಲಾರೆವು. ಸಮುದ್ರದ ತೆರೆಗಳನ್ನು ನೋಡಿದರೆ ಅದರ ಅಂತರಂಗದಲ್ಲಿ ಅಡಗಿಕೊಂಡಿರುವ ಅಮೂಲ್ಯ ರತ್ನಗಳು ಕಾಣಿಸಲಾರವು. ಮೇಲೆ ಕಾಣಿಸುವ ನೀರಿನ ಹನಿಗಳನ್ನು ತೋರಿಸಿ, ಇವೇ ಏನು ನೀವು ಹೇಳುವ ಮುತ್ತುರತ್ನಾದಿಗಳು? ಎಂದು ಕೇಳಿದರೆ ಏನು ಹೇಳಬೇಕು? ಅಸಾಧಾರಣವಾದ ಬುದ್ಧಿಶಕ್ತಿಯ ಸಹಾಯದಿಂದ ಆ ಮಹಾಸಾಗರದಲ್ಲಿ ಧುಮ್ಮಿಕ್ಕಿ ತಳದಲ್ಲಿ ಶೋಧಿಸ ಹತ್ತಿದರೆ, ಆಗ ಕಂಡು ಬರುವದು. ಹಿಂದೂ ಸಮಾಜವು ನಿಃಸತ್ವವಾದದ್ದಲ್ಲ; ಅರ್ವಾಚೀನವಾದದ್ದಲ್ಲ; ಗುಣರಹಿತವಾದದ್ದಲ್ಲ. ಹಸುರು ಬಣ್ಣದ ಕಾಜಿನ ಉಪನೇತ್ರವನ್ನು ಹಾಕಿಕೊಂಡು ನೋಡಿದರೆ ಎಲ್ಲ ಪದಾರ್ಥಗಳು ಹಸುರಾಗಿ ತೋರುವದು ಸಹಜವು. ಅದರಂತೆ ಹಿಂದೂ ಸಮಾಜದ ಆಚಾರವಿಚಾರಗಳನ್ನು ಪಾಶ್ಚಾತ್ಯ ಸಾಹಿತ್ಯದ ಆಧಾರದಿಂದ ಅವಲೋಕನೆ ಮಾಡಿದರೆ ಅವುಗಳ ನಿಜವಾದ ಸ್ವರೂಪವು ಕಂಡು ಬರಲಾರದು; ಇಷ್ಟೇ ಅಲ್ಲ, ಅವು ಹೇಯವಾಗಿ ತೋರುವವು. ಪೌರ್ವಾತ್ಯರ ಸುಧಾರಣೆಗಳನ್ನು ಹೇಯವೆಂದು ತಿಳಿಯುವದು ಪಾಶ್ಚಾತ್ಯರ ಸಹಜಧರ್ಮವಾಗಿದೆ. ಈ ವಿಚಾರದ ಛಾಯೆಯು ಅವರು ತಮ್ಮ ಸಾಹಿತ್ಯದಲ್ಲಿ ಸಂಗ್ರಹಿದ ಹಿಂದೂಗಳ ಸಾಮಾಜಿಕ ಧಾರ್ಮಿಕ ವಿಚಾರಗಳ ಮೇಲೆ ಬೀಳುವದರಿಂದ ಅವು ಮಲಿನವಾಗಿ ತೋರುವದರಲ್ಲಿ ಸಂಶಯವಿಲ್ಲ. ಅದರಂತೆ ಅವರ ಸಾಹಿತ್ಯದಲ್ಲಿ ಕಂಡು ಬರುವ ಪಾಶ್ಚಾತ್ಯ ಸುಧಾರಣೆಯ ವಿಚಾರಗಳು ಹೆಚ್ಚು ಉಜ್ವಲವಾಗಿಯೂ ಚಿತ್ತಾಕರ್ಷಕವಾಗಿಯೂ ತೋರುವದು ಅರಿದಲ್ಲ. ಅಂದ ಮೇಲೆ,

ಬರೇ ಪಾಶ್ಚಾತ್ಯ ಸಾಹಿತ್ಯವನ್ನು ಅವಲೋಕನೆ ಮಾಡಿದ ಹಿಂದೂ ತರುಣರು ತಮ್ಮ ಅಂತಃಕರಣವನ್ನು ಕಳೆದುಕೊಂಡದ್ದರಲ್ಲಿಯಾದರೂ ಆಶ್ಚರ್ಯವೇನು? ಜಗತ್ತಿನಲ್ಲಿ ದೋಷರಹಿತವಾದ ವಸ್ತುಗಳು ಇಲ್ಲವೇ ಇಲ್ಲ. ಅದರಂತೆ ನಿರುಪಯುಕ್ತವಾದ ವಸ್ತುವೂ ತೀರ ಕಡಿಮೆ. ಕೆಲವು ವಸ್ತುಗಳಲ್ಲಿ ಗುಣವು ಹೆಚ್ಚಾಗಿದ್ದರೆ, ಮತ್ತೆ ಕೆಲವು ಪದಾರ್ಥಗಳಲ್ಲಿ ದೋಷಗಳು ಹೆಚ್ಚಾಗಿರುವವು. ಈ ಸಂಗತಿಯು ಸರಳ ಮನಸ್ಸಿನಿಂದಲೂ ಶಾಂತರೀತಿಯಿಂದಲೂ ವಿಚಾರ ಮಾಡಿ ನೋಡಿದರೆ ಕಂಡು ಬರುವದು. ಆದರೆ ಅಭಿಮಾನ ತಿರಸ್ಕಾರಾದಿ ಮನೋವಿಕಾರಗಳಿಗೆ ಒಳಗಾಗಿ ಪದಾರ್ಥಗಳನ್ನು ನೋಡ ಹತ್ತಿದರೆ ಅವುಗಳ ನಿಜವಾದ ಸ್ವರೂಪವು ಕಂಡು ಬರಲಾರದು. ಅಭಿಮಾನದಿಂದ ನೋಡುವ ವಸ್ತುಗಳೊಳಗಿನ ಗುಣಗಳೂ, ತಿರಸ್ಕಾರದೃಷ್ಟಿಯಿಂದ ನೋಡುವ ಪದಾರ್ಥಗಳ ದೋಷಗಳೂ ರಾವುಗನ್ನಡಿಯಲ್ಲಿ ನೋಡುವ ಒಡವೆಗಳಂತೆ ಹೆಚ್ಚು ದೊಡ್ಡವಾಗಿಯೂ ಉಜ್ವಲವಾಗಿಯೂ ತೋರುವವು. ಇದು ಸೃಷ್ಟಿಯ ನಿಯಮವು. ಇದೇ ನಿಯಮವು ಹಿಂದೂ ಸಮಾಜದ ಸುಧಾರಕರ ವಿಷಯದಲ್ಲಿಯೂ ಸರಿ ಬೀಳುವದು. ಮೇಲೆ ಹೇಳಿದ ರೀತಿಯಾಗಿ ಅಂತಃಕರಣವನ್ನು ಕಳೆದುಕೊಂಡ ಸುಧಾರಕ ವರ್ಗದವರಿಗೆ ಹಿಂದೂಸಮಾಜದೊಳಗಿನ ಬರೇ ಹುಳುಕೇ ಕಾಣಿಸುವದೂ, ಅದು ಕಃಪದಾರ್ಥವಾಗಿ ತೋರುವದೂ ಸತ್ಯವೇ ಸರಿ. ಅದರಿಂದಲೇ ಅಂತಃಕರಣವನ್ನು ಕಳೆದುಕೊಂಡು ಅನ್ಯರ ಸುಧಾರಣೆಗಳ ಮೋಹಕ್ಕೆ ಒಳಗಾದವರ ಹೇಳಿಕೆಯು ನಿರ್ದುಷ್ಟವಾದದ್ದಾಗಲಾರದು.

(೨) ಪಾಶ್ಚಾತ್ಯ ಸುಧಾರಣಾಭಿಮಾನಿಗಳು ನಮ್ಮ ಸಮಾಜಪುರುಷನ ದೇಹವನ್ನು ಸಂಪೂರ್ಣವಾಗಿ ನಿರೀಕ್ಷಿಸುವದಿಲ್ಲ. ಒಂದಾನೊಂದು ಕಾಲದಲ್ಲಿ ಹಿಂದೂ ಸಮಾಜವು ಜಗತ್ತಿನೊಳಗಿನ ಯಾವತ್ತು ಸಮಾಜಗಳಿಗಿಂತ ಹೆಚ್ಚು ಸುಧಾರಿಸಿತ್ತೆಂಬದು ಇತಿಹಾಸಸಿದ್ಧವಾದ ಸಂಗತಿಯು. ಈಗ ತಾನು ತಾನೆಂದು ಎದೆ ತಟ್ಟಿಕೊಂಡು ಮುಂದೆ ಬರುವ ಪಾಶ್ಚಾತ್ಯ ಸಮಾಜಗಳು ಕೇವಲ ವನಚರಸ್ಥಿತಿಯಲ್ಲಿದ್ದಾಗ ಹಿಂದೂ ಸುಧಾರಣೆಯು ಶಿಖರಕ್ಕೆ ಮುಟ್ಟಿತ್ತು; ಹಿಂದೂಗಳು ಆ ಸುಧಾರಣೆಯ ಮಧುರವಾದ ಫಲಗಳನ್ನು ಅನುಭವಿಸಿದರು. ಪಾಶ್ಚಾತ್ಯ ದೇಶಗಳಿಗೆ ಹೋದ ಆರ್ಯರ ತಂ

ಡದವರು ಹಿಂದೂ ಆರ್ಯರಿಂದ ಹಲವು ಸುಧಾರಣೆಗಳನ್ನು ಕಲಿತುಕೊಂಡರೆಂದು ಹಲವು ಆಧಾರಗಳಿಂದ ಸಿದ್ಧವಾಗುವದು. ಆದರೆ ಸ್ವಾಭಾವಿಕವಾದ ಸೃಷ್ಟಿಯ ನಿಯಮಗಳಿಂದ ಆ ಹಿಂದೂ ಸಮಾಜವು ತನ್ನ ಉಜ್ವಲ ಸ್ವರೂಪವನ್ನು ಕಳೆದುಕೊಳ್ಳ ಹತ್ತಲು ಅದರ ಅವನತಿಗೆ ಆರಂಭವಾಯಿತು. ಕಾಲಕಾಲಕ್ಕೆ ಏರಿಬಂದ ಅನೇಕಾನೇಕ ಶತ್ರುಗಳ ಹೊಡತದಿಂದ ಹಿಂದೂ ಸಮಾಜಪುರುಷನು ಮೃತಿಯನ್ನು ಹೊಂದಿದನು; ಅವನ ಆತ್ಮವು ಅಡಗಿ ಹೋಯಿತು; ಉಳಿಯಿತು, ಕೇವಲ ಮೃಣ್ಮಯವಾದ ದೇಹ; ಅದೂ ಹಳೆಯದಾಗಿ ಜೀರ್ಣವಾಗಿ ಹೋಯಿತು. ಈಗ ಪಾಶ್ಚಾತ್ಯಸುಧಾರಣೆಯ ಅಭಿಮಾನಿಗಳಾದ ಹಿಂದೂಗಳು ಪಾಶ್ಚಾತ್ಯರ ಸಾಹಿತ್ಯದ ಆಧಾರದಿಂದ ಅಲ್ಲೊಂದು ಇಲ್ಲೊಂದು ಸಂಗತಿಗಳನ್ನು ಕಲಿತುಕೊಂಡು ಆ ಮೃತ ಮೃಣ್ಮಯ ದೇಹದ ಒಂದೊಂದೇ ಅವಯವಗಳನ್ನು ಕಿತ್ತು, ನೋಡಿ, ಇದೇ ಏನು? ನಿಮ್ಮ ಸಮಾಜಪುರಷನ ತನ್ನ ಅಸಾಧಾರಣವಾದ ತೇಜಸ್ಸಿನಿಂದ ಜಗತ್ತಿಗೆಲ್ಲ ದಿಗ್ಭ್ರಮೆಯನ್ನುಂಟು ಮಾಡಿದ ದೇಹದ ಅವಯವಗಳು? ಎಂದು ಕೇಳುವರು. ಆತನ ಅಸ್ಥಿಮಾತ್ರಾವಶಿಷ್ಟವಾದಂಥ ಅಸಂಖ್ಯ ಕೀಟಕಗಳಿಂದ ಕೂಡಿದಂಥ ತಲೆ ಬರುಡೆಯನ್ನು ಕಿತ್ತು ಜಗತ್ತಿಗೆ ತೋರಿಸಿ ನೋಡಿರಿ! ಇದು ಹಿಂದೂ ಸಮಾಜಪುರುಷನ ತತ್ವಜ್ಞಾನಪೂರ್ಣವಾದ|ಮಸ್ತಿಷ್ಕವು ಎಂದು ಹಾಸ್ಯ ಮಾಡುವರು. ಹಾಗು ಸಮಾಜ ಪುರುಷನ ಬಾಹುವಿನ ಎಲುವುಗಳನ್ನು ಕಿತ್ತು ಇದು ಹಿಂದೂಸಮಾಜದ ಕ್ಷತ್ರಿಯ ವರ್ಗವು ಎಂದು ಹೇಳುವರು. ಇದರಂತೆ ಪ್ರತಿಯೊಂದು ಅವಯವದ ಮೂಳೆಗಳನ್ನು ಬೇರೆ ಬೇರೆಯಾಗಿ ಕಿತ್ತು ನೋಡುವರು. ಇದರಿಂದ ಅವರಿಗೆ ನಮ್ಮ ಸಮಾಜವು ತೀರ ಹೇಯವಾಗಿ ತೋರುವದು. ಮೃತ ಮನಷ್ಯನ ಮೃಣ್ಮಯವಾದ ದೇಹವೇ ಆಗಲೊಲ್ಲದೇಕೆ? ಅದರಲ್ಲಿ ಬರೀ ಎಲುವುಗಳಷ್ಟೇ ಉಳಿದಿರಲೊಲ್ಲವೇಕೆ? ಅದನ್ನು ಸಂಪೂರ್ಣವಾಗಿ ಶಾಂತಚಿತ್ತದಿಂದ ನಿರೀಕ್ಷಿಸಿದರೆ ಆ ಅಸ್ಥಿಪಂಜರದೊಳಗಿನ ವಿಲಕ್ಷಣವಾದ ಸಂವಿಧಾನವನ್ನು ನೋಡಿ ಮನುಷ್ಯನು ಬೆರಗಾಗದಿರನು. ಅದರಂತೆ ಹಿಂದೂ ಸಮಾಜಪುರುಷನ ದೇಹಕ್ಕೆ ಅನೇಕ ಕಾರಣಗಳಿಂದಲೂ ಕಾಲಕಾಲಕ್ಕೆ ಉಂಟಾದ ಹಲವು ಸಮಾಜಗಳ ಸಂಸ್ಕಾರಗಳ ಸಂಸರ್ಗದಿಂದಲೂ ಅದರ ತೇಜಃಪೂರ್ಣವಾದ ಪೂರ್ವಸ್ಥಿತಿಯು ಈಗ ಇಲ್ಲದೆ ಇದ್ದ

ರೂ ಅದರ ರಚನೆಯ ಅನೇಕ ತತ್ವಗಳು ಅತಿ ಪವಿತ್ರವಾದವುಗಳೂ ಜಗತಿನೊಳಗಿನ ಎಲ್ಲ ಸುಧಾರಣೆಗಳಿಗಿಂತಲೂ ಹೆಚ್ಚು ಉನ್ನತವಾದ ವಿಚಾರಗಳುಳ್ಳವುಗಳೂ ಇರುವವೆಂಬದರಲ್ಲಿ ಸಂದೇಹವಿಲ್ಲ. ಪಾಶ್ಚಾತ್ಯ ಸುಧಾರಣೆಯ ಮೋಹಕ್ಕೆ ಒಳಗಾದನಮ್ಮ ಸುಧಾರಕ ವರ್ಗದವರಿಗೆ ಈ ಸಂಗತಿಗಳನ್ನು ತಿಳಿದುಕೊಳ್ಳುವಷ್ಟು ಅಂತರಂಗದ ಸ್ಥಿರತೆಯಿಲ್ಲದ್ದರಿಂದ ಲೋ, ಅವರಿಗೆ ಪರಿಸ್ಥಿತಿಯಿಂದುಂಟಾದ ಅನ್ಯ ಸಾಮಾಜಿಕ ಸಂಸ್ಕಾರಗಳ ಬಾಹ್ಯಸ್ವರೂಪದ ಮೋಹದಿಂದಲೋ, ಅವರು ಈ ನಮ್ಮ ಸಮಾಜದ ನಿಜವಾದ ಸ್ವರೂಪವನ್ನು, ಅಂದರೆ ಅಂತರಂಗಸ್ವರೂಪವನ್ನು ದುರ್ಲಕ್ಷಿಸಿ ಹೊರಗಿನ ಹುಳುಕನ್ನೇ ಎತ್ತಿ ಆಡಿ, ಅದನ್ನು ನಿಂದಿಸುತ್ತಿರುವರು. ಅದರಿಂದ ಅವರು ಹಿಂದೂ ಸಮಾಜಕ್ಕೆ ಹೊರಿಸುವ ಬಾಹ್ಯಾಂಗದ ದೋಷಗಳು ಆ ಸಮಾಜಕ್ಕೆ ಅಷ್ಟೊಂದು ಹೀನತ್ವವನ್ನು ಕೊಡಲಾರವು. ಹಿಂದೂಗಳು ತಮ್ಮ ತೇಜಸ್ಸನ್ನು ಕಳೆದುಕೊಂಡಿರುವದೇನೋ ನಿಜ. ಆದರೆ ಅವರು ಅನ್ಯರನ್ನು, ಅಂದರೆ ಈಗಿನ ಯುರೋಪದ ಸುಧಾರಣೆಯನ್ನು ನೋಡಿ ತಮ್ಮ ಅಂತರಂಗದ ಉನ್ನತಿಯನ್ನು ಪಡೆಯಬೇಕೆಂಬ ಸಂಗತಿಯು ಮಾತ್ರ ಸರ್ವಥಾ ಗ್ರಾಹ್ಯವಲ್ಲ.

(೩) ಪಾಶ್ಚಾತ್ಯ ಸುಧಾರಣಾಭಿಮಾನಿಗಳು ಹೇಳುವ ಸಮಾಜಶಾಸ್ತ್ರದ ನಿಯಮಗಳನ್ನು ಮುಂದಿಟ್ಟುಕೊಂಡು ನಮ್ಮ ಸಮಾಜದ ಆಚಾರವಿಚಾರಗಳನ್ನು ಬದಲು ಮಾಡಲು ಪ್ರಕೃತಕ್ಕೆ ಸಾಧ್ಯವಿಲ್ಲ. ಉದಾಹರಣೆಗಾಗಿ, ಹಿಂದೂ ಸಮಾಜದ ಜಾತಿಭೇದ ವಿಚಾರವನ್ನು ತೆಗೆದುಕೊಳ್ಳೋಣ. ಅವರು ಹೇಳುವಂತೆ ಹಿಂದೂ ಸಮಾಜದೊಳಗಿನ ಸಕಲ ಜಾತಿಗಳೂ ನೈಸರ್ಗಿಕ ಕಾರಣಗಳಿಂದಲೇ ಉಂಟಾಗಿರುವವು. ಇರಬಹುದು. ಸೃಷ್ಟಿಯಲ್ಲಿ ಅನಾವಶ್ಯಕವಾಗಿರುವ ಪದಾರ್ಥಗಳು ತಾವಾಗಿಯೇ ಹಿಂದೆ ಬಿದ್ದು ನಾಶವಾಗಿ ಹೋಗುವವು; ಅವಶ್ಯವಿದ್ದ ಸಂಗತಿಗಳಷ್ಟೇ ಮುಂದೆ ಬಂದು ಬೆಳುವಣಿಗೆಯನ್ನು ಹೊಂದುವವು, ಎಂಬ ಸಂಗತಿಯು ಆಧುನಿಕ ಸೃಷ್ಟಿಶಾಸ್ತ್ರಜ್ಞರಿಗೆ ಸಮ್ಮತವಾದ ಸಂಗತಿಯೇ ಸರಿ. ಈ ನಿಯಮಾನುಸಾರವಾಗಿ ನೋಡಿದರೆ, ಹಿಂದೂ ಸಮಾಜದೊಳಗಿನ ಜಾತಿಭೇದಗಳು ಆ ಸಮಾಜಕ್ಕೆ ಅನಾವಶ್ಯಕವಾದವಲ್ಲವೆಂದು ಸಿದ್ಧವಾಗುವದು. ಹಾಗೆ ಅನಾವಶ್ಯಕವಾಗಿದ್ದರೆ, ಅವು ನೈಸರ್ಗಿಕ

ಕಾರಣಗಳಿಂದ ಉಂಟಾಗುತ್ತಿದ್ದೇ ಇಲ್ಲ; ಒಂದು ವೇಳೆ ಉಂಟಾದರೂ ಕೆಲವು ದಿವಸಗಳಲ್ಲಿಯೇ ನಾಮಶೇಷವಾಗಿ ಹೋಗುತ್ತಿದ್ದವು. ಡಾರ್ವಿನ್ನನ ಉತ್ಕ್ರಾಂತಿ ವಿಚಾರದಲ್ಲಿ ಹೇಳಿದಂತೆ, ಮರ್ಕಟಗಳ ಬಾಲವು ಅನಾವಶ್ಯಕ ಪದಾರ್ಥವಾಗಿದ್ದದರಿಂದ ಅದು ಸವೆದು ಹೋದಂತೆ, ಹಿಂದೂಗಳ ಜಾತಿಭೇದ ವಿಚಾರವೂ ಕೆಲ ದಿನಗಳಲ್ಲಿಯೇ ಅಡಗಿಹೋಗುತ್ತಿತ್ತು. ಮನುಷ್ಯನ ಬೆನ್ನು ಹುರಿಯ ಕೆಳಭಾಗದಲ್ಲಿ ಉಳಿದಿರುವ ವಾಲಪರ್ವದ ಕುರುಹಿನಷ್ಟು ಸಹ ಜಾತಿಭೇದಗಳ ಕುರುಹು ಉಳಿಯುತ್ತಿತ್ತೋ ಇಲ್ಲವೋ ಸಂಶಯವೇ ಸರಿ.

ಇನ್ನು, ಹಿಂದೂ ಸಮಾಜದವರ ವಿಚಾರಸರಣಿಯ ದಿಶೆಯೇ ಬೇರೆ, ಪಾಶ್ಚಾತ್ಯ ಸಮಾಜದವರ ವಿಚಾರದ ಮಾರ್ಗವೇ ಬೇರೆ, ಎಂಬ ಮಾತಿಗೆ ನಾವು ಒಪ್ಪಿಕೊಳ್ಳುವೆವು. ಆದರೆ ನಮ್ಮ ವಿಚಾರಸರಣಿಯು ಯೋಗ್ಯವಾದದ್ದೋ, ಅವರದು ಯೋಗ್ಯವಾದದ್ದೋ ಎಂಬದು ಮಾತ್ರ ನಿರ್ಣಯಿಸತಕ್ಕ ಸಂಗತಿಯಾಗಿರುತ್ತದೆ. ಅವರು ತಮ್ಮ ವಿಚಾರಕ್ರಮದಂತೆ ತಮ್ಮ ಸಮಾಜದ ಸ್ಥಿತಿಗತಿಗಳಿಗೆ ಅನುರೂಪವಾದ ಸಮಾಜಶಾಸ್ತ್ರವನ್ನು ಸಿದ್ಧಮಾಡಿಕೊಂಡಿರುವರು. ಆ ಸಮಾಜಶಾಸ್ತ್ರದ ನಿಯಮಗಳು ನಮ್ಮ ಸಮಾಜಕ್ಕೆ ಸರಿಹೊಂದುವದಿಲ್ಲವೆಂದು ಅವರೇ ಹೇಳುವರು. ಸಮಾಜಶಾಸ್ತ್ರದ ನಿಯಮಗಳನ್ನು ಐತಿಹಾಸಿಕ ಪದ್ಧತಿಯಿಂದ ಶೋಧಿಸಿ ನಿರ್ಣಯಿಸತಕ್ಕದ್ದು; ಸ್ಥಾನಕಾಲಗಳನ್ನು ಸೂಕ್ಷ್ಮರೀತಿಯಿಂದ ನಿರೀಕ್ಷಿಸಿ ಕಾರ್ಯಕಾರಣಭಾವಗಳನ್ನು ಗೊತ್ತುಪಡಿಸಿಕೊಂಡು, ಸಿದ್ಧಾಂತಗಳನ್ನು ಸ್ಥಾಪಿಸತಕ್ಕದ್ದು. ಇದೇ ಹಿಂದೂಸಮಾಜದೊಳಗಿನ ಪ್ರತಿಯೊಂದ ವಿಚಾರಕ್ಕೂ ಪಾಶ್ಚಿಮಾತ್ಯ ಸಮಾಜಶಾಸ್ತ್ರದ ನಿಯಮಗಳು ಸರಿ ಹೊದಲಾರವು. ನಮ್ಮ ಸಮಾಜವನ್ನು ನಿರೀಕ್ಷಿಸಿ ಸಮಾಜ ಶಾಸ್ತ್ರದ ನಿಯಮಗಳನ್ನು ನಿರ್ಣಯಿಸತಕ್ಕದ್ದು ಅನ್ಯರ ಸಮಾಜ ಶಾಸ್ತ್ರದ ನಿಯಮಗಳನ್ನು ಮುಂದಿಟ್ಟುಕೊಂಡು ನಮ್ಮ ಸಮಾಜದ ಆಚಾರ ವಿಚಾರಗಳನ್ನು ಗ ಪ್ಪಿಸುವದು ಅಸಂಮಂಜಸವು. ಪಾಶ್ಚಾತ್ಯ ಸುಧಾರಣಾಭಿಮಾನಿಗಳು ಹೇಳುವಂತೆ ಹಿಂದೂಗಳಲ್ಲಿ ಪಾಶ್ಚಾತ್ಯರ ವಿಚಾರಸರಣಿಗೆ ಅನುರೂಪವಾದ ಆಚಾರಪದ್ಧತಿಯು ಇದ್ದಿದ್ದರೆ ಒಳ್ಳೆಯದಾಗುತ್ತಿತ್ತು. ಆದರೆ ವಸ್ತುಸ್ಥಿತಿಯ ಹಾಗಿಲ್ಲ. ವೈಚಿತ್ರ್ಯವು ವಿಶ್ವದ ಸಹಜ ಧರ್ಮವಾಗಿದೆ, ಉತ್ತರಹಿಂದ

ಸ್ಥಾನದ ಪೂರ್ವಭಾಗದಲ್ಲಿ ಗಂಗಾ-ಯಮುನಾ ನದಿಗಳು ಅಸಂಖ್ಯ ಶಾಖೋಪಶಾಖೆಗಳಿಂದೊಡಗೂಡಿ ಹರಿದಂತೆ ಪಶ್ಚಿಮದಲ್ಲಿ ಸಿಂಧೂ ನದಿಯು ರಜಪೂತಸ್ಥಾನದ ಉಸುಕಿನ ಬೈಲಿನಲ್ಲಿ ಹರಿದಿದ್ದರೆ, ಮಾರವಾಡದ ಮರು ಭೂಮಿಯು ಉಂಟಾಗುತ್ತಿದ್ದಿಲ್ಲ. ಆದರೆ ಮಾಡುವದೇನು? ಹೀಗೆಂದ ಮಾತ್ರಕ್ಕೆ, ಹಿಂದೂ ಸಮಾಜದೊಳಗಿನ ಸಾವಿರಾರು ಜಾತಿಗಳು ಅದರ ಉನ್ನತಿಗೆ ಕಾರಣವಾಗಿರುವವೆಂದು ಮಾತ್ರ ನಮ್ಮ ಅಭಿಪ್ರಾಯವೆಂದು ತಿಳಿಯಲಾಗದ. ಜಾತಿ ಜಾತಿಗಳ ಅಂತರಂಗದ ಮತ್ಸರ ಭಾವವು ಎಲ್ಲಿಯವರೆಗೆ ಅಡಗುವದಿಲ್ಲವೋ ಅಲ್ಲಿಯವರೆಗೆ ಅವು ಅಪಾಯಕರವಾದವುಗಳೇ ಸರಿ. ಸಮಾಜದ ಅವನತಿಯ ಬೀಜವು ಅದರೊಳಗಿನ ವ್ಯಕ್ತಿಗಳ ಮತ್ಸರಭಾವದಲ್ಲಿರುವದು; ಅವರ ಅಜ್ಞಾನದಲ್ಲಿರುವದು; ಜಾತಿಭೇದದಲ್ಲಿಲ್ಲ. ಸಮಾಜದ ಹಿತಕಾಂಕ್ಷಿಗಳು ಆ ಮತ್ಸರ ಭಾವವನ್ನೂ ಅಜ್ಞಾನವನ್ನೂ ಕಳೆಯುವದಕ್ಕೆ ಯತ್ನಿಸಬೇಕು. ಬರೇ ಜಾತಿಭೇದದ ಹೆಸರಿನಿಂದ ಕಲ್ಲು ಒಡೆಯುತ್ತಾ ಕುಳಿತುಕೊಂಡರೆ, ಏನೂ ಪ್ರಯೋಜನವಾಗಲಾರದು. ಆಸೇತುಹಿಮಾಚಲವ್ಯಾಪಿಯಾದ ಭರತ ಖಂಡಕ್ಕೆಲ್ಲಾ ಒಂದೇ ಜಾತಿಯಾಗಬೇಕಾದರೆ, ಎಲ್ಲರೂ ಯಾವ ಜಾತಿಯವರಾಗಬೇಕು? ಎಲ್ಲರೂ ಬ್ರಾಹ್ಮಣರಾಗಬೇಕೇ? ಶೂದ್ರರಾಗಬೇಕೆ? ಅಥವಾ ಕ್ರೈಸ್ತರಾಗಬೇಕೆ? ಹೀಗೆ ಎಂದು ಆಗಬೇಕು? ಹ್ಯಾಗೆ ಆಗಬೇಕು? ಹಿಂದಕ್ಕೆ ಬುದ್ಧ, ನಾನಕ ಮೊದಲಾದ ಮಹಾಪುರುಷರು ಉದಯಹೊಂದಿ ಹಿಂದೂ ದೇಶವನ್ನು ಉದ್ಧರಿಸಲು ಯತ್ನಿಸಿದರು. ಆದರೆ ಸೃಷ್ಟಿಯ ಸಹಜ ಧರ್ಮಾನುಸಾರವಾಗಿಯೇ ಆ ಮಾತು ಕೊನೆಗಾಣಲಿಲ್ಲ. ಎಲ್ಲ ಧರ್ಮಗಳ ಅಂತರಂಗ ಸ್ವರೂಪವು ಒಂದೇ ಇರುವದು; ನಾವೆಲ್ಲರೂ ಒಂದೇ ಒಂದು ಸದುದ್ದೇಶದಿಂದ ಜಗತ್ತಿನಲ್ಲಿ ಜನ್ಮ ತಾಳಿರುರುವೆವು; ನಮ್ಮೆಲ್ಲರ ಧ್ಯೇಯವು ಒಂದೇ ಇರುವದು ಎಂಬ ಸುವಿಚಾರಗಳು ಜನರ ಮನಸ್ಸಿನಲ್ಲಿ ಬಿಂಬಿಸಬೇಕು; ಅಂದರೆ, ಭಿನ್ನ ಭಿನ್ನ ಜಾತಿಯವರೊಳಗಿನ ಮತ್ಸರ ಭಾವವು ತಾನಾಗಿಯೇ ಅಡಗುವದು. ಈ ರೀತಿಯಾದ ತಿಳುವಳಿಕೆಯುಂಟಾಗಬೇಕಾದರೆ ಜನರಲ್ಲಿ ಜ್ಞಾನೋದಯವಾಗಲಿಕ್ಕೆ ಬೇಕು. ಎಂದು ನಮ್ಮ ಸಾಮಾಜಿಕ ವ್ಯಕ್ತಿಗಳಲ್ಲಿ ಈ ತರದ ಜ್ಞಾನವು ಉದಯವನ್ನು ಹೊಂದುವದೋ, ಅಂದೇ ಜಾತಿಭೇದದಿಂದು

ಟಾಗುವ ದುಷ್ಪರಿಣಾಮಗಳು ಇಲ್ಲದಂತಾಗುವವು. ಈ ವಿಚಾರವನ್ನು ಸುಧಾರಕ ವರ್ಗದವರು ಲಕ್ಷ್ಯದಲ್ಲಿಟ್ಟಿರಬೇಕು. ಜಾತಿಭೇದವನ್ನು ತೆಗೆದುಹಾಕಿ ಸಮಾಜವನ್ನು ಸುಧಾರಿಸುವದೂ ಸಿಂಧೂ ನದಿಯನ್ನು ಮಾರವಾಡದಲ್ಲಿ ಹರಿಯಿಸುವದೂ ಒಂದೇ ಸರಿ. ಇದೇ ತರದ ಕೋಟಿಕ್ರಮವು ಪಾಶ್ಚಾತ್ಯ ಸಮಾಜಶಾಸ್ತ್ರದ ತತ್ವಗಳನ್ನು ಮುಂದಿಟ್ಟುಕೊಂಡು ನಮ್ಮ ಸಮಾಜದವರಲ್ಲಿ ವಿಚಾರಕ್ರಾಂತಿಯನ್ನುಂಟು ಮಾಡಬೇಕೆಂಬ ಪ್ರತಿಯೊಂದು ಪ್ರಸಂಗದಲ್ಲಿಯೂ ಬಂದೇ ಬರುವದು. ಆದ್ದರಿಂದ ಆ ಸಮಾಜ ಶಾಸ್ತ್ರದ ತತ್ವಗಳು ನಮ್ಮ ಸಮಾಜದ ಆಚಾರವಿಚಾರಗಳಿಗೆ ಸರಿಹೊಂದದೆ ಇದ್ದ ಮಾತ್ರಕ್ಕೆ ನಮ್ಮವರ ವಿಚಾರಗಳು ಹೇಯವೆಂದು ತಿಳಿಯುವದು ಸರಿಯಲ್ಲ.

(ಳ) ಪಾಶ್ಚಾತ್ಯ ಸುಧಾರಣಾಭಿಮಾನಿಗಳು ಹೇಳುವ ಮೇರೆಗೆ, ನಮ್ಮ ಸಮಾಜದಲ್ಲಿ ಕೆಲವೊಂದು ಆಚಾರವನ್ನು ಪ್ರಚಾರದಲ್ಲಿ ತಂದ ಮಾತ್ರಕ್ಕೆ ಅದು ಸುಧಾರಿಸಬಹುದೆಂಬ ಗ್ರಹಿಕೆಯು ನಿಜವಾದದ್ದಲ್ಲ. ಅವರು ಹೇಳುವ ಮೇರೆಗೆ ಸ್ಪರ್ಶಾಸ್ಪರ್ಶವಿಚಾರ, ತಿಂಬುಂಬುವ ಪದಾರ್ಥಗಳು ಇವುಗಳಲ್ಲಿ ವಿಧಿನಿಷೇಧಗಳಿಲ್ಲದಿರೋಣ, ವಿಧವಾವಪನ ಮಾಡದಿರೋಣ, ಪುನರ್ವಿವಾಹ ಮಾಡೋಣ, ಸ್ತ್ರೀಯರಿಗೆ ಸ್ವಾತಂತ್ರ್ಯವನ್ನು ಕೊಡೋಣ ಇವೇ ಮುಂತಾದ ಕೆಲವು ಆಚಾರಗಳನ್ನು ನಮ್ಮ ಸಮಾಜದಲ್ಲಿ ಪ್ರಚಾರಕ್ಕೆ ತಂದ ಮಾತ್ರಕ್ಕೆ ಅದರಲ್ಲಿ ಎಂದೂ ಸುಧಾರಣೆಯಾಗಲಾರದು. ಹಾಗೆ ಆಗುವ ಸಂಭವವಿದ್ದರೆ, ನಮ್ಮ ಸಮಾಜದಲ್ಲಿಯೇ ಕೆಲವು ವರ್ಗದ ಜನರಲ್ಲಿ ಈ ವಿಚಾರಗಳು ಪ್ರಚಾರದಲ್ಲಿ ಇದ್ದೇ ಇರುವವು. ಇಷ್ಟೇ ಮಾತಿನಿಂದ ಆ ವರ್ಗದವರು ಇತರರಿಗಿಂತ ಹೆಚ್ಚು ಸುಧಾರಿಸಿದವರೆಂದು ಹೇಳಲಿಕ್ಕೆ ಬರುವಂತಿಲ್ಲ. ಆ ಜನರಲ್ಲಿ ಈ ವಿಚಾರಗಳಿಂದ ಸುಧಾರಣೆಯಾಗುವದಕ್ಕೆ ಬದಲಾಗಿ ಅಷ್ಟು ಇನ್ನಷ್ಟು ಕುಧಾರಣೆಗೇ ಕಾರಣವಾದದ್ದು ಕಂಡು ಬರುವದು. ಆದ್ದರಿಂ ಸಮಾಜದಲ್ಲಿ ಕೆಲವೊಂದು ಆಚಾರಗಳನ್ನು ಪ್ರಚಾರದಲ್ಲಿ ತಂದಮಾತ್ರಕ್ಕೆ ಅದರಲ್ಲಿ ಸುಧಾರಣೆಯಾಗಬಹುದೆಂಬ ಕಲ್ಪನೆಯು ಕೇವಲ ತಪ್ಪಾದದ್ದು. ಇದರಂತೆ ಪಾಶ್ಚಾತ್ಯ ಸಮಾಜಗಳಿಗಾದರೂ ಈ ಆಚಾರಗಳು ಅಮೋಘವಾದ ಸುಖಶಾಂತಿಗಳನ್ನು ಕೊಟ್ಟಿಲ್ಲವೆಂಬ ಮಾತು ಆ ಸಮಾಜಗಳನ್ನು ಸೂಕ್ಷ್ಮ ರೀತಿಯಿಂದ ನಿರೀಕ್ಷಿಸಿದರೆ ಕಂಡುಬರ

ವದು. ನಮ್ಮ ದೇಶದಲ್ಲಿ ವಿಧವೆಯರ ಸಂಖ್ಯೆಯು ಹೆಚ್ಚಾಗಿದ್ದರೆ, ಆ ದೇಶಗಳಲ್ಲಿ ಅವಿವಾಹಿತ ಸ್ತ್ರೀಯರ ಸಂಖ್ಯೆಯು ಹೆಚ್ಚಾಗಿರುವದು. ನಮ್ಮಲ್ಲಿ ಜಾತಿಭೇದದಿಂದ ಒಡಕು ಹುಟ್ಟಿ ಸಮಾಜವು ಒಡೆದು ಚೂರಾಗಿದ್ದಂತೆ ಅವರಲ್ಲಿಯಾದರೂ ಅಸಂಖ್ಯ ಉಪಭೇದಗಳು ಇದ್ದೇ ಇರುವವು. ಒಂದು ವರ್ಗದವರು ಇನ್ನೊಂದು ವರ್ಗದವರ ಸಂಗಡ ಐಕ್ಯದಿಂದ ನಡೆಯುವದೇ ಇಲ್ಲ. ಇಂಗ್ಲಂಡದೊಳಗಿನ ಲಾರ್ಡ ಮನೆತನದ ಜನರು ಕಡಿಮೆ ತರದ ಜನರಿಗೆ ತಮ್ಮ ಕನ್ಯೆಯರನ್ನು ಕೊಡಲಿಕ್ಕೆ ಸಮ್ಮತಿಸುವರೋ? ಆ ರೀತಿಯು ಪ್ರಚಾರದಲ್ಲಿರುವದೋ? ಲಾರ್ಡರು ಸಾಮಾನ್ಯಜನರ ಸಂಪತ್ತಿಯಲ್ಲಿ ಕೂತು ಊಟ ಮಾಡುವರೋ? ಇದೇ ತರದ ಅನೇಕ ಹುಳುಕುಗಳು ಅವರಲ್ಲಿಯೂ ಇದ್ದೇ ಇರುವವು. ಊರು ಇದ್ದಲ್ಲಿ ಹೊಲೆಗೇರಿಯು ಇರಲಿಕ್ಕೇ ಬೇಕು. ಒಟ್ಟಿನ ಮೇಲೆ, ಸಮಾಜದಲ್ಲಿ ಸುಧಾರಣೆಯಾಗಬೇಕಾದರೆ ಆದರೊಳಗಿನ ವ್ಯಕ್ತಿಗಳ ಮನಸು ಸುಸಂಸ್ಕೃತವಾಗಿ ಅವರಲ್ಲಿ ಉದಾತ್ತ ವಿಚಾರಗಳು ಹುಟ್ಟಲಿಕ್ಕೆ ಬೇಕು; ಅವರು ಸುಮಾರ್ಗಗಾಮಿಗಳಾಗಲಿಕ್ಕೆ ಬೇಕು. ಕೇವಲ ಯೌರೋಪ್ಯ ಸಮಾಜದ ಅನುಕರಣ ಮಾಡುವದರಿಂದ ನಮ್ಮ ಸಮಾಜವು ಸುಧಾರಿಸಲಾರದು; ಇಷ್ಟೇ ಅಲ್ಲ; ಇತೋ ಭ್ರಷ್ಟ ತತೋ ಭ್ರಷ್ಟರಾಗಿ ತ್ರಿಶಂಕುವಿನ ಅವಸ್ಥೆಯನ್ನು ಅನುಭವಿಸಬೇಕಾಗುವದು; ಹಾಗೂ ಜಗತ್ತಿನಲ್ಲಿ ಹಾಸ್ಯಕ್ಕೆ ಕಾರಣವಾಗುವದು.

(೫) ಆದರೆ, ಪಾಶ್ಚಾತ್ಯ ಸುಧಾರಣೆಯು ನಮಗೆ ಬೇಡವೇ ಬೇಡ, ನಮ್ಮ ಸದ್ಯದ ಸ್ಥಿತಿಯೇ ಉಚ್ಚತರದ್ದಾಗಿರುವದು, ಎಂದು ಮಾತ್ರ ನಮ್ಮ ಅಭಿಪ್ರಾಯವಲ್ಲ. ಆ ಸುಧಾರಣೆಯು ಆ ಜನಾಂಗಕ್ಕೆ ಕೊಡುತ್ತಿರುವ ಸಹಾಯಸಂಪತ್ತಿಗಳು, ಆ ಸುಧಾರಣೆಯ ಮಹಾರ್ಘತೆ ಇವು ಸಾಧಾರಣ ತರದವೆಂದು ಹೇಳುವದು ಸುಲಭವಲ್ಲ; ಹಾಗು ಆ ಸುಧಾರಣೆಯು ನಿಕೃಷ್ಟತರದ್ದೆಂದು ತಿರಸ್ಕರಿಸುವದು ನಮ್ಮ ಸದ್ಯದ ಉದ್ದೇಶವಲ್ಲ. ಆದರೆ ನಮ್ಮ ಸರ್ವಸ್ವವನ್ನೂ ಕಳೆದುಕೊಂಡು ಸರ್ವತೋಪರಿ ಪರರನ್ನೇ ಅವಲಂಬಿಸಬೇಕೆಂದು ಹೇಳುವದು ಮಾತ್ರ ಸರಿಯಲ್ಲ. ಪಾಶ್ಚಾತ್ಯಸುಧಾರಣೆಯೇ ಸುಧಾರಣೆಯು; ನಮ್ಮಲ್ಲಿ ಏನೂ ಇಲ್ಲವೇ ಇಲ್ಲ, ಎಂದು ಹೇಳಲಿಕ್ಕೆ ನಮ್ಮವರ ಅಂತಃಕರಣದಲ್ಲಿ ಸೇರಿದ ಅಂಧಾನುಕರ

ಣದ ಬೀಜದ ವಿಷಮಯವಾದ ಫಲವೇ ಕಾರಣವಾಗಿರುವದು. ಇದರಂಥ ಆತ್ಮಘಾತಕ ವಿಚಾರವು ಬೇರೊಂದಿಲ್ಲ.

ನಮಗೆ ಪಾಶ್ಚಾತ್ಯ ಸುಧಾರಣೆಯು ಬೇಡವೆಂತಲ್ಲ; ನಾವು ಅದನ್ನೇ ಸ್ವೀಕರಿಸುವದು ಅವಶ್ಯವು. ಆದರೆ ಆ ಕ್ರಮವು ಮಾತ್ರ ಯೋಗ್ಯವಾದ್ದಿರಬೇಕು. ಅನ್ಯರ ಶಸ್ತ್ರಗಳನ್ನು ಸ್ವೀಕರಿಸಲೆಳಸಿದ ಮಾತ್ರಕ್ಕೆ ನಮ್ಮ ಕೈಗಳನ್ನು ಕತ್ತರಿಸಿ ಚಲ್ಲಬೇಕೆಂದು ಹೇಳುವದು ಸರಿಯಲ್ಲ. ಧನುರ್ವಿದ್ಯಾಶಿಕ್ಷಕನಾದ ಗುರುವಿನ ಗುರುದಕ್ಷಿಣೆಯೆಂದು ಬಲಗೈಯ ಹೆಬ್ಬೆರಳನ್ನು ಕೊಯ್ದು ಕೊಡುವದು ಕುಶಲತನದ ಕೃತ್ಯವಲ್ಲ. ಮೊದಲು ತನ್ನ ಪ್ರಕೃತಿಯನ್ನು ನೋಡಿಕೊಳ್ಳಬೇಕು, ಆ ಮೇಲೆ ಅದಕ್ಕನುಗುಣವಾದ ಆಹಾರವನ್ನು ತೆಗೆದುಕೊಳ್ಳಬೇಕು. ಸಿಂಹದ ಆಹಾರವು ಪುಷ್ಟಿಕರವೆಂದು ತಿಳಿದು ಆನೆಯು ಆ ಆಹಾರವನ್ನು ತೆಗೆದುಕೊಂಡರೆ ಪ್ರಾಣಕ್ಕೆ ಎರವಾಗುವದು ನಿಶ್ಚಯವು. ನಮ್ಮವರಲ್ಲನೇಕರು ಮೋಹವಶರಾಗಿ ತಮ್ಮ ಪ್ರಕೃತಿಯ ನಿಯಮವನ್ನು ಮೀರಿ ನಡೆಯಹತ್ತಿರುವರು. ನಮ್ಮವರ ಧರ್ಮಕರ್ಮಗಳಲ್ಲಿಯೂ ಆಚಾರವಿಚಾರಗಳಲ್ಲಿಯೂ ದಿನ ದಿನಕ್ಕೆ ಕ್ರಾಂತಿಯುಂಟಾಗುತ್ತ ನಡೆದಿರುವದು. ಅದರಿಂದ ನಮ್ಮ ಸಮಾಜದವರ ಉನ್ನತಿಸಮಸ್ಯೆಯು ದಿನ ದಿನಕ್ಕೆ ಹೆಚ್ಚು ಹೆಚ್ಚು ಜಟಿಲವಾಗುತ್ತ ನಡೆದಿರುವದು. ನಮ್ಮ ಪೂರ್ವಜರ ಪ್ರತಿಭಾಬಲವು ಕುಂದಿ ಹೋಗುತ್ತಿರುವದು. ಅದರಿಂದಲೇ ಜಗನ್ಮಾನ್ಯರೆನಿಸಿಕೊಂಡ ಹಿಂದೂ ಆರ್ಯರ ಸಂತತಿಯವರಾದ ನಾವು ಜಗಚ್ಚಕ್ರದ ಕೆಳಗೆ ಸಿಕ್ಕು ನುಚ್ಚು ನುರಿಯಾಗುತ್ತಿರುವೆವು.

ಆಹಾರವು ನಮ್ಮ ಶರೀರಕ್ಕೆ ಅವಶ್ಯವು. ಆದರೆ ಅದು ಇದ್ದಕ್ಕಿದ್ದಂತೆ ನಮ್ಮ ಶರೀರವನ್ನು ಪ್ರವೇಶಿಸಲಾರದು. ಅದು ಮೊದಲು ಬೇರೆ ಬೇರೆ ಸಂಸ್ಕಾರಗಳನ್ನು ಹೊಂದಬೇಕು; ಆ ಮೇಲೆ ಹಲ್ಲುಗಳಿಂದ ಚನ್ನಾಗಿ ನುರಿಸಲ್ಪಡಬೇಕು; ತರುವಾಯ ಒಳಭಾಗದಲ್ಲಿರುವ ಅನೇಕ ಪಾಚಕಾವಯವಗಳ ಸಹಾಯದಿಂದ ಜೀರ್ಣವಾಗಿ ರಕ್ತದ ರೂಪಕ್ಕೆ ಬರಬೇಕು. ಆಗ ಮಾತ್ರ ಅದು ಶರೀರದ ಪೋಷಣೆಗೆ ತಕ್ಕದ್ದಾಗುವದು. ಅದರಂತೆ, ನಾವು ಪಾಶ್ಚಾತ್ಯರಿಂದ ಸ್ವೀಕರಿಸತಕ್ಕ ಸುಧಾರಣೆಯ ವಿಚಾರಗಳಾದರೂ ನಾನಾ ಬಗೆಯ ಸಂಸ್ಕಾರಗಳನ್ನು ಹೊಂದಿ, ರೂಪಾಂತರವಾಗಿ,

ನಮ್ಮ ಸಾಮಾಜಿಕ ತಂತ್ರಗಳ ಸ್ವರೂಪವನ್ನು ಹೊಂದಿದಾಗ ಮಾತ್ರ ಅವು ನಮಗೆ ಗ್ರಾಹ್ಯವಾಗುವವು; ಆಗ ಅವುಗಳಿಂದ ನಮಗೆ ಹಿತವಾಗ ಬಹುದು. ಪಾಶ್ಚಾತ್ಯ ಸುಧಾರಣೆಯ ಕೆಲವು ತತ್ವಗಳು ನಮ್ಮ ಭಾರತ ಪ್ರಕೃತಿಯ ಮೂಲಕವಾಗಿ ಜೀರ್ಣವಾದರೆ ಮಾತ್ರ ಅವು ಹಿತಕರ ವಾಗುವವು. ಎಲ್ಲಿಯವರೆಗೆ ಅವುಗಳ ವಿದೇಶೀಯತ್ವವು ವ್ಯಕ್ತವಾಗುತ್ತ ಲಿರುವದೋ ಅಲ್ಲಿಯವರೆಗೆ ಅವು ಎಂದೂ ಗ್ರಾಹ್ಯವಾಗಲಾರವು. ಪಾಶ್ಚಾತ್ಯ ಸರಸ್ವತಿಯ ಪೋಷ್ಯ ಪುತ್ರರು ಈ ಮರ್ಮವನ್ನು ಧ್ಯಾನದಲ್ಲಿಟ್ಟುಕೊಂಡಿರಬೇಕು. ನಮ್ಮ ಸಮಾಜದೇವತೆಯ ಶರೀರವು ಬೇರೆ ಬೇರೆ ಕಾರಣಗಳಿಂದ ಧೂಳಿಧೂಸರಿತವಾಗಿದ್ದರೂ ಅದರಲ್ಲಿ ಅನೇಕ ಉಜ್ವಲವಾದ ರತ್ನಗಳಿರುವವು. ನಮ್ಮ ಸಾಮಾಜಿಕ ತಂತ್ರಗಳು, ನಮ್ಮ ಸಾಮಾಜಿಕ ಭಾಷೆ, ಸಾಹಿತ್ಯ, ನಮ್ಮವರ ಉದಾತ್ತ ಕಲ್ಪನೆಗಳು ನಮ್ಮವರ ಶಿಲ್ಪವಿದ್ಯೆ, ನಮ್ಮವರ ರುಚಿ ವೈಚಿತ್ರ್ಯ ಇವುಗಳ ಕಡೆಗೆ ಕಣ್ಣೆತ್ತಿ ಸಹ ನೋಡದೆ, ಕೇವಲ ಪರರ ಅನುಕರಣವನ್ನೇ ಮಾಡಬೇಕೆಂದು ಸುಧಾರಕರ ಸೋಗಿನಿಂದ ಘಂಟಾ ಘೋಷ ಮಾಡುತ್ತಿರುವ ತರುಣ ವರ್ಗವು ಅನ್ಯರ ಮನೆಯ ಉಪ್ಪಿನಕಾಯಿಯನ್ನು ನೋಡಿ, ಬಾಯೊಳಗೆನೀರು ತರುವದು ಹಿಂದೂಗಳಾದ ನಮಗೆ ಯೋಗ್ಯವಲ್ಲವೆಂಬದನ್ನು ಮರೆಯು ವಂತಿಲ್ಲ. ಈ ತರದ ಹವ್ಯಾಸವು ನಮ್ಮವರಿಗೆ ಉಚಿತವಲ್ಲ. ಪಾಶ್ಚಾತ್ಯ ವಿಮಾನನಿರೀಕ್ಷಣೆಯಲ್ಲಿ ಆಕಾಶದಲ್ಲಿ ದೃಷ್ಟಿಯನ್ನಿಟ್ಟು ನಡೆದರೆ ಅಧಃಪತಿತರಾಗುವದು ನಿಶ್ಚಯವು.

ಕೈ. ವಾ. ವಿನಾಯಕ ಕೋಂಡದೇವ ಓಕರವರ ಚರಿತ್ರೆ.

(ಬರೆದು ಬಂದದ್ದು.)

ಜ್ಞಾನವಂತರು ಮರಣಹೊಂದಿದ ಮೇಲೆ ದೇಹದಿಂದ ಇರದಿದ್ದರೂ ಕೀರ್ತಿರೂಪದಿಂದ ಪೃಥ್ವಿಯಲ್ಲಿ ಚಿರಕಾಲ ವಾಸಮಾಡುತ್ತಿರುವರು. ಈ ಕೀರ್ತಿಸಂಪಾದನೆಗೆ ಅನೇಕ ಸಾಧನಗಳಿರುತ್ತವೆ. ಅವುಗಳಲ್ಲಿ ವಿದ್ಯಾವ್ಯಾಸಂಗ, ಉದ್ಯೋಗಶೀಲತೆ ಇವೆರಡು ಮುಖ್ಯವಾದವುಗಳು. ಈ ಗುಣಗಳಿಂದ ಪ್ರಸಿದ್ಧಿ ಪಡೆದ ಮನುಷ್ಯಶ್ರೇಷ್ಠರ ಚರಿತ್ರಗಳು ಅತ್ಯಂತ ಅನುಕರಣೀಯವಾಗಿರುವವು. ತುಸು ದಿವಸಗಳ ಹಿಂದೆ, ಅಂದರೆ

ಕಳೆದ ಅಕ್ಟೋಬರ ತಿಂಗಳಿನ ೯ ನೆಯ ತಾರೀಖಿನ ದಿವಸ ಮಹಾರಾಷ್ಟ್ರದಲ್ಲಿ ಮೃತ್ಯುವಿನಿಂದ ಅಪಹರಿಸಲ್ಪಟ್ಟ ವಿನಾಯಕ ಕೋಂಡದೇವ ಓಕರೆಂಬವವರು ಈ ಬಗೆಯ ಸದ್ಗೃಹಸ್ಥರಾಗಿದ್ದರು. ಅವರ ಚರಿತ್ರವು ಬೋಧಪ್ರದವಾಗಿರುವವರಿಂದ ಅದನ್ನು ಇಲ್ಲಿ ಕೊಡುತ್ತೇವೆ:—

ಶ್ರೀಯುತ ವಿನಾಯಕ ಕೋಂಡದೇವ ಓಕರವರ ಮೂಲಸ್ಥಳವು ರತ್ನಾಗಿರಿಜಿಲ್ಲೆಯೊಳಗಿನ ಹೇದವೀಗ್ರಾಮವು. ಇವರು ಇ. ಸ. ೧೮೪೦ ರಲ್ಲಿ ಗುಹಾಗರವೆಂಬ ಊರಲ್ಲಿ ಹುಟ್ಟಿದರು. ಬಾಲ್ಯದಲ್ಲಿಯೇ ಅವರು ತಾಯಿ-ತಂದೆಗಳಿಬ್ಬರನ್ನೂ ಕಳೆದುಕೊಂಡದ್ದರಿಂದ ದಾಜೀ ಕಾಶೀನಾಥ ಓಕ ಎಂಬವನೊಬ್ಬ ಅವರ ಆಪ್ತನು ಅವರನ್ನು ಹೇದವೀಯಲ್ಲಿ ದೊಡ್ಡವರನ್ನು ಮಾಡಿದನು. ವಿನಾಯಕರಾಯರ ಪ್ರಾಥಮಿಕ ಶಿಕ್ಷಣವು ಗುಹಾಗರದಲ್ಲಿಯೂ ಚಿಪಳೂಣದಲ್ಲಿಯೂ ಸಾಗಿತು. ಆಗಿನ ಕಾಲದಲ್ಲಿ ಇಂಗ್ಲಿಷ ಕಲಿಯುವದೆಂದರೆ ವಿದ್ಯಾರ್ಥಿಗಳಿಗೂ ಅವರ ತಾಯಿ-ತಂದೆಗಳಿಗೂ ಅತಿಶಯ ಗೌರವದ ಮಾತಾಗಿತ್ತು. ಆದರಿಂದ, ವಿನಾಯಕರಾಯರು ರಾಜಭಾಷೆಯನ್ನಭ್ಯಾಸಿಸುವುದಕ್ಕಾಗಿ ೧೮೫೭ ರಲ್ಲಿ ಸಾತಾರೆಗೆ ಬಂದರು. ಅಲ್ಲಿ ಅವರು ಅತ್ಯಂತ ಪರಿಶ್ರಮದಿಂದ ಅಭ್ಯಾಸಮಾಡತೊಡಗಿದರು. ಆದರೆ ಅವರು ಚಿಕ್ಕಂದಿನಲ್ಲಿಯೇ ವಿವಾಹಿತರಾಗಿದ್ದದರಿಂದ ಹೆಚ್ಚು ಅಭ್ಯಾಸಮಾಡುವ ಅನುಕೂಲಸ್ಥಿತಿಯು ಅವರಿಗಿರಲಿಲ್ಲ. ಆದ್ದರಿಂದ, ಅವರು ಅಹಮ್ಮದನಗರದ ಹತ್ತರ ಒಂದು ಗ್ರಾಮದಲ್ಲಿ ತಿಂಗಳೊಂದಕ್ಕೆ ೮ ರೂಪಾಯಿಯ ಸಂಬಳದ ಮೇಲೆ ಮರಾಠೀ ಶಾಲೆಯ ಉಪಶಿಕ್ಷಕನ ಕೆಲಸವನ್ನು ಕೈಕೊಂಡರು. ತಮ್ಮ ಮೇಲಾದ ಶಿಕ್ಷಣಪದ್ಧತಿಯಿಂದಲೂ, ನಿಯಮಿತತನದಿಂದಲೂ ಪ್ರಸಿದ್ಧರಾಗುತ್ತ ಕಡೆಗೆ ಮುಂಬಯಿಯಲ್ಲಿಯ "ನಾನಾ ಶಂಕರಶೇಟ ಎ. ವ್ಹಿ. ಸ್ಕೂಲ" ಎಂಬ ಶಾಲೆಯಲ್ಲಿ ಅಸಿಸ್ಟಂಟ ಮಾಸ್ತರರಾಗಿ ನಿಯಮಿಸಲ್ಪಟ್ಟರು. ಈಯವಧಿಯಲ್ಲಿ ಅವರು ತಮ್ಮ ವಿಶ್ರಾಂತಿಯ ವೇಳೆಯನ್ನು ಗ್ರಂಥವಾಚನದಲ್ಲಿಯೂ, ಗ್ರಂಥಲೇಖನದಲ್ಲಿಯೂ ಕಳೆಯುತ್ತಿದ್ದರು. ವಿನಾಯಕರಾಯರ ವರ್ಣನೀಯವಾದ ಶಿಕ್ಷಣಪದ್ಧತಿ, ವಿದ್ಯಾವ್ಯಾಸಂಗದ ಚಟ, ಯಾವತ್ತು ಕೆಲಸಗಳಲ್ಲಿಯ ನಿಯಮಿತತನ ಇವೆಲ್ಲ ವರಿಷ್ಠ ಅಧಿಕಾರಸ್ಥರ ಲಕ್ಷವನ್ನೆಳೆದುಕೊಂಡವು. ಕಡೆಗೆ ಅವರು ಆಸಿಸ್ಟಂಟ ಡೆಪ್ಯೂಟ ಎಜ್ಯುಕೇಶನಲ್ ಇನ್ಸ್ಪೆಕ್ಟರರ

ಸ್ಥಳಕ್ಕೆ ತಿಂಗಳಿಗೆ ೧೦೦ ರೂಪಾಯಿ ಸಂಬಳದ ಮೇಲೆ ನಿಯಮಿಸ ಲ್ಪಟ್ಟರು. ಪೆನ್‌ಶನ್ ತೆಗೆದುಕೊಳ್ಳುವ ವರೆಗೆ ವಿನಾಯಕರಾಯರು ಅದೇ ಸ್ಥಳದ ಮೇಲೆ ಇದ್ದರು. ಹೀಗೆ, ವಿನಾಯಕರಾಯರು ವಿದ್ಯಾಖಾ ಯಲ್ಲಿ ೩೪ ವರುಷ ಸರಕಾರದ ಸೇವೆಯನ್ನು ಮಾಡಿದರು.

ಈ ೩೪ ವರುಷದ ಅವಧಿಯಲ್ಲಿ ವಿನಾಯಕರಾಯರು ಬೇರೆ ಬೇರೆ ಅಧಿಕಾರಸ್ಥರ ಕೈಕೆಳಗೆ ಕೆಲಸಮಾಡಿದರು. ಎಲ್ಲ ಅಧಿಕಾರಸ್ಥರಲ್ಲಿ ವಿನಾಯಕರಾಯರ ವಿಷಯವಾಗಿ ಪ್ರೇಮಭಾವನೆಯನ್ನು ವ್ಯಕ್ತಪಡಿ ಸದವರೇ ಇರಲಿಲ್ಲ. ಈ ದೀರ್ಘಾವಧಿಯಲ್ಲಿ ಓಕರವರಿಗೆ ಶಿಕ್ಷಣದ ಅನುಭವವು ವಿಶೇಷವಾಗಿ ದೊರೆಯಿತು. ಈ ಅನುಭವದ ಸಾರವು ಅವರ ಮುಖದಿಂದ ಆಗಾಗ್ಗೆ ಹೊರಬೀಳುತ್ತಿತ್ತು. ಅದರಲ್ಲಿಯ ಮು ಖ್ಯಾಂಶಗಳು ವಿದ್ಯಾರ್ಥಿಗಳೂ, ಶಿಕ್ಷಕರೂ ಅವಶ್ಯವಾಗಿ ಮನನಮಾ ಡತಕ್ಕಂಥವುಗಳಾಗಿರುವುದರಿಂದ, ಅವುಗಳನ್ನು ಇಲ್ಲಿ ಬರೆಯುತ್ತೇವೆ:-

೧. ಮಕ್ಕಳಿಗೆ ನಿಜವಾದ ಶಿಕ್ಷಣವು ಅವರ ತಾಯಿತಂದೆಗಳಿಂದಲೇ ದೊರೆಯುತ್ತದೆ.

೨. ಶಿಕ್ಷಣದಲ್ಲಿ ಶಿಕ್ಷೆಗಿಂತ ಈರ್ಷೆಯೇ ಹೆಚ್ಚು ಉಪಯೋಗ ವುಳ್ಳದ್ದು.

೩. ಯಾವ ವಿಷಯದಲ್ಲಿಯೇ ಆಗಲಿ, ವ್ಯಾಖ್ಯಾನ ಪದ್ಧತಿಗಿಂತ ಉದಾಹರಣೆಗಳಿಂದ ವಿವರಿಸುವ ಪದ್ಧತಿಯಿಂದ ವಿದ್ಯಾರ್ಥಿಗಳಿಗೆ ಹೆಚ್ಚು ಸಹಾಯವಾಗುತ್ತದೆ.

೪. ಮುಂದೆ ಮುಂದೆ ಹೆಚ್ಚೆಚ್ಚು ಕಲಿಯುತ್ತ ಹೋಗುವುದಕ್ಕಿಂತ ಕಲಿ ತ ವಿಷಯವನ್ನು ವಿಶೇಷವಾಗಿ ವಿಮರ್ಶಿಸುವದರಿಂದ ವಿದ್ಯಾರ್ಥಿ ಗಳಿಗೆ ಹೆಚ್ಚು ಉಪಯೋಗವಾಗುತ್ತದೆ.

೫. ತಮ್ಮ ಮಕ್ಕಳ ಶಿಕ್ಷಣದ ಕಾರ್ಯವನ್ನು ಜನರು ಸ್ವತಃ ಕೈಕೊಂ ಡ ಹೊರತು, ಮಕ್ಕಳು ಉತ್ತಮವಾಗಿಯೂ ಪೂರ್ಣವಾಗಿಯೂ ಬೆಳೆಯಲಾರರು

ಇದರಲ್ಲಿ ಒಂದು ಸಂಗತಿಯು ಮಾತ್ರ ವಿಶೇಷವಾಗಿ ಅನುಸರಣೀ ಯವಾಗಿರುವುದು. ಶ್ರೀಯುತ ಓಕರವರು ತಮ್ಮ ಯಾವತ್ತೂ ಕೆಲಸ ಗಳನು ತೀರಿಸಿಕೊಂಡು, ಉಳಿದ ವೇಳೆಯಲ್ಲಿ ತಮ್ಮ ಇಬ್ಬರು ಮಕ್ಕ

ಳಿಗೂ, ನಾಲ್ಕು ಜನ ಬೇರೆ ವಿದ್ಯಾರ್ಥಿಗಳಿಗೂ ಅವರನ್ನು ಯಾವ ಶಾ
ಗೂ ಕಳುಹಿಸದೆ, ಮನೆಯಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು ಕೊಟ್ಟ
ನಾಲ್ಕೈದು ಇಯತ್ತೆಗಳ ವರೆಗೆ ಇಂಗ್ಲಿಷ ಅಭ್ಯಾಸವನ್ನು ಸ್ವತಃ ಮಾ
ಸಿದರು. ಈ ಶಿಕ್ಷಣದ ಫಲವು ಅವರಿಗೆ ಉತ್ತಮವಾಗಿ ಪರಿಣಮಿಸಿ
ವದು. ಈ ಪದ್ಧತಿಯನ್ನು ಯಾವತ್ತು ತಾಯಿತಂದೆಗಳು ಸಾಧ್ಯವಿ
ಮಟ್ಟಿಗೆ ಅನುಸರಿಸುವುದು ಶ್ರೇಯಸ್ಕರವಾದದ್ದು.

ವಿನಾಯಕರಾಯರು ಇಂಗ್ಲಿಷ ಅಭ್ಯಾಸಕ್ಕಾಗಿ ಸಾತಾರೆಯಲ್ಲಿ
ಇದ್ದಾಗಿನಿಂದಲೇ ಮಹಾರಾಷ್ಟ್ರ ಭಾಷೆಯಲ್ಲಿ ಇತಿಹಾಸ, ಚರಿತ್ರೆ
ಶಾಲೋಪಯೋಗವುಳ್ಳ ಪಾಠಗಳು, ನೀತಿವಿಷಯಕವಾದ ನಿಬಂಧ ಕ
ವಿಷಯಗಳನ್ನು ಕುರಿತು ಲೇಖಗಳನ್ನು ಬರೆದು ಆಗಿನ ವರ್ತಮಾ
ಪತ್ರಗಳಿಗೂ ಮಾಸಿಕ ಪುಸ್ತಕಗಳಿಗೂ ಪ್ರಸಿದ್ಧಪಡಿಸುವುಕ್ಕೆ ಕಳುಹ
ತ್ತಿದ್ದರು. ಬರಬರುತ್ತ ಸ್ವತಂತ್ರವಾಗಿ ಪುಸ್ತಕಗಳನ್ನು ಬರೆಯಲಿಕ್ಕೂ
ಪ್ರಾರಂಭಮಾಡಿದರು. ಅವರು ಬರೆದ ಹಿಂದುಸ್ತಾನದ ಇತಿಹಾಸ, ಕ್ರಮಿಕ
ವಾಚನ ಪುಸ್ತಕಗಳು ಇವು ವಿದ್ಯಾರ್ಥಿಗಳಿಗೆ ಬಹಳ ಉಪಯೋಗವು
ಳ್ಳವೆಂದು ಕಂಡು ಬಂದದರಿಂದ ಶಾಲಾಖಾತೆಯವರು ಅವುಗಳನ್ನು
ಶಾಲೆಯಲ್ಲಿಯೂ, ವಾಚನಾಲಯಗಳಲ್ಲಿಯೂ, ಇನಾಮುಕೊಡುವದರ
ಲ್ಲಿ ಉಪಯೋಗಿಸಬಹುದೆಂದು ಒಪ್ಪಿಗೆಯನ್ನು ಕೊಟ್ಟಿರುವರು.
ವಾಚಕರನ್ನು ಬಹುಶ್ರುತರನ್ನಾಗಿ ಮಾಡಿ, ಸದಾಚಾರದ ಕಡೆಗೆ ಅವರಲ್ಲಿ
ಪ್ರವೃತ್ತಿಯನ್ನುಂಟುಮಾಡಲಿಕ್ಕೆ ಓಕರವರು ಬರೆದ ಪುಸ್ತಕಗಳು ವಿಶೇ
ಷವಾಗಿ ಸಹಾಯಮಾಡುತ್ತವೆ.

ಪ್ರಸಿದ್ಧವಾದ "ನಿರ್ಣಯಸಾಗರ" ಮುದ್ರಾಲಯದ ಒಡೆಯರ
ಸಹಾಯದಿಂದ ವಿನಾಯಕರಾಯರು "ಬಾಲಬೋಧ"ವೆಂಬ ಚಿಕ್ಕ ಮಾಸಿ
ಕ ಪುಸ್ತಕವನ್ನು ಹೊರಡಿಸುವುದಕ್ಕೆ ಪ್ರಾರಂಭಿಸಿದರು. ಈ ಪುಸ್ತಕವು
ವಿದ್ಯಾರ್ಥಿಗಳ ಹೃದಯದಲ್ಲಿ ಸತ್ಯಾಭಿರುಚಿಯನ್ನೂ, ಜ್ಞಾನಲಾಲಸೆಯ
ನ್ನೂ ಹುಟ್ಟಿಸಿ, ಅವರನ್ನು ಸನ್ಮಾರ್ಗಕ್ಕೆ ಹಚ್ಚುವ ಮಹತ್ಕಾರ್ಯವನ್ನು
ಸುಮಾರು ೩೦ ವರುಷ ಸತತವಾಗಿ ಮಾಡಿತು; ಹಾಗೂ ಈಗಲೂ
ಮಾಡುತ್ತಿರುವುದು. ಇ. ಸ. ೧೮೮೦ ರಿಂದ ಕೆಲವು ವರುಷಗಳ ವರೆಗೆ

ಪ್ರಸಿದ್ಧವಾದ "ಇಂದುಪ್ರಕಾಶ" ವರ್ತಮಾನಪತ್ರದ ಸಂಪಾದಕತ್ವವೂ ಇವರ ಕಡೆಗೇ ಇತ್ತು. ಇವುಗಳ ಹೊರ್ತು, "ಮನೋರಂಜನ" ಮುಂತಾದ ಮಾಸಿಕ ಪತ್ರಗಳಲ್ಲಿಯೂ ಇವರ ಹೃದಯಂಗಮವಾದ ಲೇಖಗಳು ಪ್ರಸಿದ್ಧವಾಗುತ್ತಿದ್ದವು. ವಿನಾಯಕರಾಯರ ಕೈಯಿಂದ ಇಷ್ಟು ಗ್ರಂಥಲೇಖನವು ಘಟಿಸಿದ್ದಕ್ಕೆ ಅವರ ಉದ್ಯೋಗಶೀಲತೆಯೇ ಮುಖ್ಯ ಕಾರಣವಾಗಿತ್ತು. ಅಲ್ಲದೆ, ಅವರು ಚಿಕ್ಕಂದಿನಿಂದಲೇ ಸ್ವಾವಲಂಬಿಗಳಾಗಿದ್ದದರಿಂದ ಈ ಪ್ರಕಾರದ ಗುಣವು ಅವರಲ್ಲಿ ಉಂಟಾಗಿರಬಹುದೆಂದೂ ತರ್ಕಿಸಬಹುದು.

ವಿನಾಯಕರಾಯರಲ್ಲಿ ನೆಲಿಸಿದ್ದ ಎರಡನೆಯ ಗುಣವು ನಿಯಮಿತತನವು. ಬೇಕಾದ ವೇಳೆಯಲ್ಲಿ ಅವರ ದರ್ಶನಕ್ಕಾಗಿ ಹೋದರೂ ಅವರು ಯಾವದೊಂದು ಕಾರ್ಯದಲ್ಲಿ ನಿಮಗ್ನರೇ. ಆದಾಗ್ಯೂ, ಅವರು ಯಾರೊಬ್ಬರನ್ನೂ ವಿಮುಖರನ್ನಾಗಿ ಕಳುಹುತ್ತಿದ್ದಿಲ್ಲ. ಪರರ ಮನಸ್ಸನ್ನು ನೋಯಿಸುವಂಥ ಮಾತುಗಳನ್ನೆಂದಿಗೂ ಆಡಬಾರದೆಂದೂ, ಅಂಥ ಲೇಖಗಳನ್ನೂ ಬರೆಯಬಾರದೆಂದೂ ಅವರು ಯಾವಾಗಲೂ ಅನ್ನುತ್ತಿದ್ದರು.

ಮನೆಯೊಳಗಿನ ಉತ್ತಮ ಪ್ರಕಾರದ ಸಿಸ್ತು ಅವರಲ್ಲಿ ಕಂಡು ಬರುತ್ತಿದ್ದದ್ದು ಬೇರೊಂದು ಅನುಸರಣೀಯವಾದ ಗುಣವು. ಬೇಕಾದಾಗ್ಗೆ ಅವರ ಮನೆಗೆ ಹೋದರೂ ಅಲ್ಲಿ ಒಂದು ತರದ ಸಿಸ್ತು ದೃಷ್ಟಿಗೆ ಬಿದ್ದು, ನೋಡುವವರಿಗೆ ಅತಿಶಯ ಆನಂದವನ್ನೂ, ವಿನಾಯಕರಾಯರ ವಿಷಯದಲ್ಲಿ ಆದರಬುದ್ಧಿಯನ್ನೂ ಉಂಟುಮಾಡದೆ ಇರುತ್ತಿರಲಿಲ್ಲ. ಈ ಪ್ರಕಾರದ ಸಿಸ್ತಿನ ಉತ್ತಮವಾದ ಪರಿಣಾಮವು ಈ ಹೊತ್ತಿನ ವರೆಗೂ ಅವರ ಪುತ್ರ-ಪೌತ್ರರ ವಿದ್ಯಾ-ವಿನಯ-ಸಂಪನ್ನತೆಯಲ್ಲಿ ಸಂಪೂರ್ಣವಾಗಿಯೂ ಸ್ಪಷ್ಟವಾಗಿಯೂ ಕಂಡು ಬರುತ್ತಿದೆ.

ಅಂಧಶ್ರದ್ಧೆಯಿಂದ ಯಾವ ಪಕ್ಷವನ್ನೂ ಸ್ವೀಕರಿಸದೆ ತಟಸ್ಥವೃತ್ತಿಯಲ್ಲಿರುವದು ವಿನಾಯಕರಾಯರ ಸ್ವಭಾವವಾಗಿದ್ದಿಲ್ಲ. ಯಾವದು ಉತ್ತಮ ಫಲಕಾರಿಯಾಗುವದೋ, ಯಾವದು ವಿಚಾರ ಪೂರ್ವಕವಾಗಿ ನೋಡಿದರೆ ಗ್ರಹಿಸಲಿಕ್ಕೆ ಯೋಗ್ಯವೋ ಅಂತಹ ಕಾರ್ಯವನ್ನೇ ಅವರು ಕೈಕೊಳ್ಳುತ್ತಿದ್ದರು. ಮಧ್ಯದಲ್ಲಿ ಏನಾದರೂ ಅಡಚಣಿಗಳು ಬಂದೊದ

ಗಿದರೂ ಅದನ್ನು ಕೊನೆಗಾಣಿಸದೆ ಬಿಡುತ್ತಿದ್ದಿಲ್ಲ. ಇದೇ ಬುದ್ಧಿಯ ಮೇಲಾದ ಲಕ್ಷಣವು. ಈ ಸ್ವಭಾವಕ್ಕನುಸಾರವಾಗಿಯೇ ಅವರಲ್ಲಿ ಉದ್ಯೋಗಶೀಲತೆಯೂ, ನಿಯಮಿತತನವೂ, ವಿದ್ಯಾವ್ಯಾಸಂಗದ ಚಟವೂ ಪೂರ್ಣವಾಗಿ ನೆಲೆಗೊಳ್ಳುವದಕ್ಕೆ ಅವಕಾಶವಾಯಿತು.

"सत्यंब्रूयात् प्रियंब्रूयात् । न ब्रूयात् सत्यमप्रियम्" ॥ ಎಂಬ ತತ್ವವು ಪರಲೋಕವಾ. ಗಳಾದ ವಿನಾಯಕರಾಯರ ಲೇಖನ ಕಲೆಯ ಮುಖ್ಯವಾದ ಇಂಗಿತವಾಗಿತ್ತು. ಯಾರ ಮನಸ್ಸನ್ನೂ ನೋಯಿಸಬಾರದು; ಯಾರ ಮರ್ಮದ ಮೇಲೆಯೂ ಆಘಾತವನ್ನು ಮಾಡಬಾರದು; ಯಾವಾಗಲೂ ಮಧುರ ಶಬ್ದಗಳಿಂದಲೇ ಉಪದೇಶ ಮಾಡುತ್ತಿರಬೇಕು, ಎಂಬ ಮಹತ್ವದ ಅಂಶಗಳನ್ನು ಅವರು ತಮ್ಮ ಪ್ರತಿದಿನದ ವ್ಯವಹಾರದಲ್ಲಿ ಸಹ ಜನರಿಗೆ ತೋರಿಸಿ ಕೊಡುತ್ತಿದ್ದರು. ಆದ್ದರಿಂದಲೇ, ಅವರ ಲೇಖಗಳು ಪ್ರಸಿದ್ಧಿಯನ್ನು ಹೊಂದಿ,ಯಾವತ್ತು ಮಹಾರಾಷ್ಟ್ರಾಭಿಮಾನಿಗಳ ಆದರಕ್ಕೆ ಪಾತ್ರವಾಗಿವೆ. ಮನೆ ಮನೆಯಲ್ಲಿಯೂ ಅವರ ಹೆಸರು ಅತಿ ಪ್ರೀತಿಯಿಂದ ಉಚ್ಚರಿಸಲ್ಪಡುತ್ತಿರುವದು.

ಧಾರವಾಡ ಟ್ರೇ. ಕಾಲೇಜ — ಅನಂತ ಬಾಳಾಜಿ ಜೋಶಿ,

ತಾರೀಖು ೨೪-೭-೧೫ ಇಸ್ವಿ — ೩ನೇ ವರ್ಷದ ವಿದ್ಯಾರ್ಥಿ-

ಶತಾಯುರ್ವೈ ಪುರುಷಃ.

ಈ ಶಿರೋಲೇಖದ ವಾಕ್ಯವು ಋಗ್ವೇದ ಸಂಹಿತೆಗೆ ಜೋಡಿಸಲ್ಪಟ್ಟ ಬ್ರಾಹ್ಮಣ (ಪಂಚಕ) ವೆಂಬ ಪದ್ಯ ಗ್ರಂಥದ ಒಂದು ಖಂಡದಲ್ಲಿ ಉಲ್ಲೇಖಿಸಿರುವದು. ಇದೇ ಅರ್ಥವನ್ನು ಪ್ರತಿಪಾದಿಸುವ शतमानं भवति; शतंजीवशरदोवर्धमानः ಎಂಬ ವಾಕ್ಯಗಳು ವೇದದಲ್ಲಿ ಅಲ್ಲಲ್ಲಿಗೆ ತೋರೆಯುತ್ತಿರುವವು. ಇದರಂತೆ ''जीवेद्वर्षशतंसुखी'' ಎಂಬ ವಾಕ್ಯಗಳು ವೈದ್ಯ ಶಾಸ್ತ್ರದಲ್ಲಿಯೂ ಜ್ಯೋತಿಷ ಶಾಸ್ತ್ರದಲ್ಲಿಯೂ ದೊರೆಯುವವು. ಇವೆಲ್ಲವುಗಳ ಮೇಲಿಂದ ಮಾನವ ಪ್ರಾಣಿಯ ಆಯುಷ್ಯವು ವ್ಯವಹಾರ ದೃಷ್ಟಿಯಂತೆ ನೂರು ವರ್ಷವಿರಬಹುದೆಂದು ಕಂಡು ಬರುತ್ತದೆ. ಆದರೆ

ಈ ಆಯುರ್ಮರ್ಯಾದೆಯನ್ನು ಹೆಚ್ಚಿಸುವ ಬಲವಾದ ಪ್ರಮಾಣಗಳು ನಮ್ಮ ಧರ್ಮಶಾಸ್ತ್ರದಲ್ಲಿರುವವು. ಇವುಗಳ ಯೋಗದಿಂದ ಪೂರ್ವದಲ್ಲಿ ಕೆಲವರು ಹಲವು ಶತಮಾನಗಳ ವರೆಗೆ ಬದುಕಿದರೆಂತಲೂ, ಬೇರೆ ಕೆಲವರಂತೂ ಚಿರಂಜೀವಿಗಳೇ ಆಗಿರುವರೆಂತಲೂ ಆಖ್ಯಾಯಿಕೆಗಳುಂಟು. ಇವು ನಮಗೆ ಈಗ ಸಂಶಯಾಸ್ಪದವಾದ ಸಂಗತಿಗಳಾಗಿ ತೋರುತ್ತಿರುವವು.

ಯಾವದೊಂದು ಮಾತಿನ ನಿದರ್ಶನವಾಗುವವರೆಗೆ ಈತರದ ಭಾಸವಾಗುವದು ಸ್ವಾಭಾವಿಕವಾದದ್ದು. ಮುಂಚಿನ ಕಾಲದಲ್ಲಿ ದೇವತೆಗಳು ವಿಮಾನಗಳಲ್ಲಿ ಕುಳಿತುಕೊಂಡು ಆಕಾಶಮಾರ್ಗವಾಗಿ ಸಂಚಾರ ಮಾಡುತ್ತಿದ್ದದ್ದನ್ನು ಪುರಾಣಗಳ ದ್ವಾರದಿಂದ ತಿಳಿದು ಆಶ್ಚರ್ಯಬಡುತ್ತಿದ್ದೆವು. ಆದರೆ ಈಗ ಮನುಷ್ಯರೇ ವೈಮಾನಿಕರಾಗಿ ವೈರಿಗಳ ಮೇಲೆ ಬೆಂಕಿಯ ಮಳೆಗರೆಯುತ್ತಿರುವರಲ್ಲ! ಕಾಲಗತಿಯು ವಿಚಿತ್ರವಾದದ್ದು. ದೇವತೆಗಳಂತೆ ಮನುಷ್ಯರು ಇನ್ನೂ ಅಮರರಾಗುವ ಸಮಯ ಮಾತ್ರ ಬಂದಿಲ್ಲ. ಭಗವದನುಗ್ರಹದಿಂದ ಭಾರತೀಯರು ಇಂಗ್ಲಿಷರ ಕೃಪಾಕಟಾಕ್ಷಕ್ಕೆ ಒಳಗಾದಂದಿನಿಂದ ಇವರ ಭಾಗ್ಯೋದಯವಾಗಿದೆ. ಪಾಶ್ಚಾತ್ಯರಾಷ್ಟ್ರಗಳ ವಾಙ್ಮಯದ ಪ್ರಭಾವದಿಂದ ಎಷ್ಟೋ ಅಘಟಿತಕಾರ್ಯಗಳು ಬಳಕೆಯಲ್ಲಿ ಬಂದಿವೆ. ಮನುಷ್ಯನ ಸುಖಾಭಿವೃದ್ಧಿಯು ಇಮ್ಮಡಿಯಾಗಿದೆ. ಈ ಬಗೆಯಾಗಿ ಒತ್ತರದಿಂದ ನಡೆದ ಸುಧಾರಣೆಯ ಕಟ್ಟಕಡೆಯ ಮೆಟ್ಟು ಮನುಷ್ಯನ ಚಿರಂಜೀವಿತ್ವವು ಯಾಕೆ ಇರಬಾರದು? ಇರಲಿ.

ಚಿರಂಜೀವಿಯಾಗುವದು ಸುಲಭಸಾಧ್ಯವಲ್ಲದಿದ್ದರೂ ಶತಂಜೀವಿಯಾಗುವದು ಅಸಾಧ್ಯವಿರುವದಿಲ್ಲ. ಪ್ರಾಣಿಗಳ ಆಯುಷ್ಯವು ವರ್ಷಗಳ ಎಣಿಕೆಯಿಂದ ನಿರ್ಬಂಧಿಸಲ್ಪಡದೆ ಶ್ವಾಸೋಚ್ಛ್ವಾಸಗಳ ಸಂಖ್ಯೆಯನ್ನವಲಂಬಿಸಿರುವದು ಅವರವರ ಪೂರ್ವಾರ್ಜಿತ ಫಲಗಳಂತೆ ಶ್ವಾಸೋಚ್ಛ್ವಾಸಗಳು ಹೆಚ್ಚು ಕಡಿಮೆ ಪ್ರಮಾಣದಿಂದ ದೊರೆದಿರುವವು. ಜನ್ಮಿಸಿದಾಗಲೆ ಇವುಗಳ ವೆಚ್ಚಕ್ಕೆ ಅರಂಭವಾಗಿ ಸಂಚಯು ತೀರುತ್ತಲೆ ಮರಣ ಒದಗುವದು. ಪ್ರಾಣಾಯಾಮ, ನ್ಯಾಸ, ಯೋಗ ಇವು ಆಯುರ್ವರ್ಧನದ ಉಪಾಯಗಳಾಗಿವೆ. ಪ್ರಾಪಂಚಿಕರಿಗೆ ದೀರ್ಘಾಯುಷಿಯಾಗ

ಗಿದರೂ ಅದನ್ನು ಕೊನೆಗಾಣಿಸದೆ ಬಿಡುತ್ತಿದ್ದಿಲ್ಲ. ಇದೇ ಬುದ್ಧಿಯ ಮೇಲಾದ ಲಕ್ಷಣವು. ಈ ಸ್ವಭಾವಕ್ಕನುಸಾರವಾಗಿಯೇ ಅವರಲ್ಲಿ ಉದ್ಯೋಗಶೀಲತೆಯೂ, ನಿಯಮಿತತನವೂ, ವಿದ್ಯಾವ್ಯಾಸಂಗದ ಚಟವೂ ಪೂರ್ಣವಾಗಿ ನೆಲೆಗೊಳ್ಳುವದಕ್ಕೆ ಅವಕಾಶವಾಯಿತು.

"सत्यंब्रूयात् प्रियंब्रूयात्। न ब्रूयात् सत्यमप्रियम्" ॥ ಎಂಬ ತತ್ವವು ಪರಲೋಕವಾ. ಗಳಾದ ವಿನಾಯಕರಾಯರ ಲೇಖನ ಕಲೆಯ ಮುಖ್ಯವಾದ ಇಂಗಿತವಾಗಿತ್ತು. ಯಾರ ಮನಸ್ಸನ್ನೂ ನೋಯಿಸಬಾರದು; ಯಾರ ಮರ್ಮದ ಮೇಲೆಯೂ ಆಘಾತವನ್ನು ಮಾಡಬಾರದು; ಯಾವಾಗಲೂ ಮಧುರ ಶಬ್ದಗಳಿಂದಲೇ ಉಪದೇಶ ಮಾಡುತ್ತಿರಬೇಕು, ಎಂಬ ಮಹತ್ವದ ಅಂಶಗಳನ್ನು ಅವರು ತಮ್ಮ ಪ್ರತಿದಿನದ ವ್ಯವಹಾರದಲ್ಲಿ ಸಹ ಜನರಿಗೆ ತೋರಿಸಿ ಕೊಡುತ್ತಿದ್ದರು. ಆದ್ದರಿಂದಲೇ, ಅವರ ಲೇಖಗಳು ಪ್ರಸಿದ್ಧಿಯನ್ನು ಹೊಂದಿ,ಯಾವತ್ತು ಮಹಾರಾಷ್ಟ್ರಾಭಿಮಾನಿಗಳ ಆದರಕ್ಕೆ ಪಾತ್ರವಾಗಿವೆ. ಮನೆ ಮನೆಯಲ್ಲಿಯೂ ಅವರ ಹೆಸರು ಅತಿ ಪ್ರೀತಿಯಿಂದ ಉಚ್ಚರಿಸಲ್ಪಡುತ್ತಿರುವದು.

ಧಾರವಾಡ ಟ್ರೇ. ಕಾಲೇಜ | ಅನಂತ ಬಾಳಾಜಿ ಜೋಶಿ
ತಾರೀಖ ೨೪-೭-೧೫ ಇಸ್ವಿ. | ೩ನೇ ವರ್ಷದ ವಿದ್ಯಾರ್ಥಿ

ಶತಾಯುರ್ವೈ ಪುರುಷಃ.

ಈ ಶಿರೋಲೇಖದ ವಾಕ್ಯವು ಋಗ್ವೇದ ಸಂಹಿತೆಗೆ ಜೋಡಿಲ್ಪಟ್ಟ ಬ್ರಾಹ್ಮಣ (ಪಂಚಕ) ವೆಂಬ ಪದ್ಯ ಗ್ರಂಥದ ಒಂದು ಖಂಡದಲ್ಲಿ ಉಲ್ಲೇಖಿಸಿರುವದು. ಇದೇ ಅರ್ಥವನ್ನು ಪ್ರತಿಪಾದಿಸುವ शतमा भवति; शतंजीवशरदोवर्धमान: ಎಂಬ ವಾಕ್ಯಗಳು ವೇದದಲ್ಲಿ ಅಲ್ಲಲ್ಲಿ ಹೊಳೆಯುತ್ತಿರುವವು. ಇದರಂತೆ ''जीवेद्वर्षशतंसूखी'' ಎಂಬ ವಾಕ್ಯಗಳ ವೈದ್ಯ ಶಾಸ್ತ್ರದಲ್ಲಿಯೂ ಜ್ಯೋತಿಷ ಶಾಸ್ತ್ರದಲ್ಲಿಯೂ ದೊರೆಯುವವು ಇವೆಲ್ಲವುಗಳ ಮೇಲಿಂದ ಮಾನವ ಪ್ರಾಣಿಯ ಆಯುಷ್ಯವು ವ್ಯವಹಾರ ದೃಷ್ಟಿಯಂತೆ ನೂರು ವರ್ಷವಿರಬಹುದೆಂದು ಕಂಡು ಬರುತ್ತದೆ. ಆದ

ಈ ಆಯುರ್ಮರ್ಯಾದೆಯನ್ನು ಹೆಚ್ಚಿಸುವ ಬಲವಾದ ಪ್ರಮಾಣಗಳು ನಮ್ಮ ಧರ್ಮಶಾಸ್ತ್ರದಲ್ಲಿರುವವು. ಇವುಗಳ ಯೋಗದಿಂದ ಪೂರ್ವದಲ್ಲಿ ಕೆಲವರು ಹಲವು ಶತಮಾನಗಳ ವರೆಗೆ ಬದುಕಿದರೆಂತಲೂ, ಬೇರೆ ಕೆಲವರಂತೂ ಚಿರಂಜೀವಿಗಳೇ ಆಗಿರುವರೆಂತಲೂ ಆಖ್ಯಾಯಿಕೆಗಳುಂಟು. ಇವು ನಮಗೆ ಈಗ ಸಂಶಯಾಸ್ಪದವಾದ ಸಂಗತಿಗಳಾಗಿ ತೋರುತ್ತಿರುವವು.

ಯಾವದೊಂದು ಮಾತಿನ ನಿದರ್ಶನವಾಗುವವರೆಗೆ ಈತರದ ಭಾಸವಾಗುವದು ಸ್ವಾಭಾವಿಕವಾದದ್ದು. ಮುಂಚಿನ ಕಾಲದಲ್ಲಿ ದೇವತೆಗಳು ವಿಮಾನಗಳಲ್ಲಿ ಕುಳಿತುಕೊಂಡು ಆಕಾಶಮಾರ್ಗವಾಗಿ ಸಂಚಾರ ಮಾಡುತ್ತಿದ್ದದ್ದನ್ನು ಪುರಾಣಗಳ ದ್ವಾರದಿಂದ ತಿಳಿದು ಆಶ್ಚರ್ಯಬಡುತ್ತಿದ್ದೆವು. ಆದರೆ ಈಗ ಮನುಷ್ಯರೇ ವೈಮಾನಿಕರಾಗಿ ವೈರಿಗಳ ಮೇಲೆ ಬೆಂಕಿಯ ಮಳೆಗರೆಯುತ್ತಿರುವರಲ್ಲ! ಕಾಲಗತಿಯು ವಿಚಿತ್ರವಾದದ್ದು. ದೇವತೆಗಳಂತೆ ಮನುಷ್ಯರು ಇನ್ನೂ ಅಮರರಾಗುವ ಸಮಯ ಮಾತ್ರ ಬಂದಿಲ್ಲ. ಭಗವದನುಗ್ರಹದಿಂದ ಭಾರತೀಯರು ಇಂಗ್ಲಿಷರ ಕೃಪಾಕಟಾಕ್ಷಕ್ಕೆ ಒಳಗಾದಂದಿನಿಂದ ಇವರ ಭಾಗ್ಯೋದಯವಾಗಿದೆ. ಪಾಶ್ಚಾತ್ಯರಾಷ್ಟ್ರಗಳ ವಾಙ್ಮಯದ ಪ್ರಭಾವದಿಂದ ಎಷ್ಟೋ ಅಘಟಿತಕಾರ್ಯಗಳು ಬಳಕೆಯಲ್ಲಿ ಬಂದಿವೆ. ಮನುಷ್ಯನ ಸುಖಾಭಿವೃದ್ಧಿಯು ಇಮ್ಮಡಿಯಾಗಿದೆ. ಈ ಬಗೆಯಾಗಿ ಒತ್ತರದಿಂದ ನಡೆದ ಸುಧಾರಣೆಯು ಕಟ್ಟಕಡೆಯ ಮೆಟ್ಟು ಮನುಷ್ಯನ ಚಿರಂಜೀವಿತ್ವವು ಯಾಕೆ ಇರಬಾರದು? ಇರಲಿ.

ಚಿರಂಜೀವಿಯಾಗುವದು ಸುಲಭಸಾಧ್ಯವಲ್ಲದಿದ್ದರೂ ಶತಂಜೀವಿಯಾಗುವದು ಅಸಾಧ್ಯವಿರುವದಿಲ್ಲ. ಪ್ರಾಣಿಗಳ ಆಯುಷ್ಯವು ವರ್ಷಗಳ ಎಣಿಕೆಯಿಂದ ನಿರ್ಬಂಧಿಸಲ್ಪಡದೆ ಶ್ವಾಸೋಚ್ಛ್ವಾಸಗಳ ಸಂಖ್ಯೆಯನ್ನವಲಂಬಿಸಿರುವದು ಅವರವರ ಪೂರ್ವಾರ್ಜಿತ ಫಲಗಳಂತೆ ಶ್ವಾಸೋಚ್ಛ್ವಾಸಗಳು ಹೆಚ್ಚು ಕಡಿಮೆ ಪ್ರಮಾಣದಿಂದ ದೊರೆದಿರುವವು. ಜನ್ಮಿಸಿದಾಗಲೆ ಇವುಗಳ ವೆಚ್ಚಕ್ಕೆ ಆರಂಭವಾಗಿ ಸಂಚಯು ತೀರುತ್ತಲೆ ಮರಣ ಒದಗುವದು. ಪ್ರಾಣಾಯಾಮ, ನ್ಯಾಸ, ಯೋಗ ಇವು ಆಯುರ್ವರ್ಧನದ ಉಪಾಯಗಳಾಗಿವೆ. ಪ್ರಾಪಂಚಿಕರಿಗೆ ದೀರ್ಘಾಯುಷಿಯಾಗ

ಲಿಕ್ಕೆ ಮೊದಲಿನವೆರಡು ಉತ್ತಮ ಸಾಧನಗಳಾಗಿವೆ. ಪ್ರತಿಯೊಂದು ಕಾಲಕ್ಕೆ ವೆಚ್ಚವಾಗುವ ಶ್ವಾಸೋಚ್ಛ್ವಾಸಗಳ ಸಂಖ್ಯೆಯು ಗೊತ್ತಾಗಿದೆ. ಪ್ರಾಣಾಯಾಮಗಳಿಂದ ಈ ಕೊರತೆಯ ಪೂರೈಕೆಯಾಗುವದಲ್ಲದೆ ಇವು ಗಳ ಸಂಖ್ಯೆಯನ್ನು ಬೇಕಾದಷ್ಟು ಬೆಳೆಯಿಸುವದಕ್ಕೆ ಸಮರ್ಥರಾಗಬ ಹುದು. ಆದರೆ ಬರೆ ಕುಂಭಕ (ಉಚ್ಛ್ವಾಸ ಬಂದ ಮಾಡುವದು) ದಿಂದ ವಿಶೇಷ ಲಾಭವಿದ್ದಂತೆ ತೋರುವದಿಲ್ಲ. ಆದ್ದರಿಂದ ಅವಶ್ಯಕರು ಪ್ರಾಣಾಯಾಮಪದ್ಧತಿಯನ್ನು ಚನ್ನಾಗಿ ಬಲ್ಲವರಿಂದ ಅರಿತುಕೊಳ್ಳ ಬೇಕು.

ಕಾಲಪರತ್ವದಿಂದ ಧರ್ಮದಲ್ಲಿ ನಮ್ಮ ಶ್ರದ್ಧೆಯು ಕಡಿಮೆಯಾಗ ಹತ್ತಿದ್ದರಿಂದ ಇಂತಹ ಪದ್ಧತಿಗಳು ಗ್ರಂಥದಲ್ಲಿ ಮಾತ್ರ ಉಳಿದಿರುವವೆಂ ದರೂ ಅಡ್ಡಿಯಿಲ್ಲ. ಜಪಾನ ದೇಶದ ಒಬ್ಬ ಪ್ರಸಿದ್ಧ ಡಾಕ್ಟರರು ಶತಾ ಯುಷಿಯಾಗುವ ಬಗ್ಗೆ ಕೆಳಗಿನ ನಿಯಮಗಳನ್ನು ಪ್ರಕಟಿಸಿರುವರು. ಅವುಗಳನ್ನು ವಾಚಕರಿಗೋಸ್ಕರ ಇದರಡಿಯಲ್ಲಿ ಕೊಟ್ಟಿರುವೆನು:—

೧. ಆದಷ್ಟು ವೇಳೆಯನ್ನು ಸ್ವಚ್ಛ ಹವೆಯುಳ್ಳ ಸ್ಥಳದಲ್ಲಿ ಕಳೆಯಿರಿ.

೨. ಪೂರ್ವರಾತ್ರಿಯಲ್ಲಿ ಬೇಗ ಮಲಗಿ ಉತ್ತರ ರಾತ್ರಿಯಲ್ಲಿ ಬೇಗ ಏಳಿರಿ.

೩. ಕಿಡಕಿಗಳನ್ನು ತೆರೆದು ಕತ್ತಲೆಯ ಕೋಣೆಯಲ್ಲಿ ಮಲಗಿರಿ. ಕನಿ ಷ್ಟ ೬ ತಾಸಿನಿಂದ ಪರಮಾವಧಿ ೭॥ ತಾಸು ಮಾತ್ರ ನಿದ್ರೆಮಾಡಿರಿ.

೪. ಚಹಾ, ಕಾಫಿಗಳನ್ನು ಬಹಳ ನೇಮದಿಂದ ಉಪಯೋಗಿಸಿರಿ.

೫. ತಂಬಾಕ, ಮತ್ತು ಶೆರೆ ಇವುಗಳನ್ನು ಎಷ್ಟು ಮಾತ್ರವೂ ಸೇವಿಸ ಬಾರದು.

೬. ಸೋಸುವಷ್ಟು ಮಟ್ಟಿಗೆ ಒಳ್ಳೇ ಬಿಸಿ ಬಿಸಿ ನೀರಿನಿಂದ ದಿನಾಲು ಜಳಕ ಮಾಡಬೇಕು.

೭. ಪ್ರತಿಯೊಂದು ವಾರದಲ್ಲಿ ಒಂದು ದಿವಸ ಪೂರ್ಣ ವಿಶ್ರಾಂತಿಯ ನ್ನು ತೆಗೆದುಕೊಳ್ಳಬೇಕು. ಆ ದಿವಸ ಓದು ಬರಹವನ್ನು ಸಹ ಬಂದ ಇಡಬೇಕು.

೮. ಮನೋವಿಕಾರಗಳನ್ನು ಒಳಗಿಂದೊಳಗೆ ನುಂಗಬಾರದು. ಮತ್ತು

ಬುದ್ಧಿಯ ಕೆಲಸದ (Brain work) ಅತಿರೇಕವನ್ನು ಮಾಡ ಬಾರದು.

೯. ಅಬಡದಬಡ ಅರಿವೆಗಳಿಂದ ಮಾಡಿದ ವಸ್ತ್ರಗಳನ್ನೇ ಉಪಯೋಗಿಸುವದು ಒಳ್ಳೇದು.

೧೦. ದಿವಸದಲ್ಲಿ ಒಂದು ವೇಳೆ ಮಾತ್ರ ಮಾಂಸದ ಉಪಯೋಗವನ್ನು ಮಾಡಬೇಕು.

೧೧. ವಿಧುರ, ವಿಧವೆಯರು ಆದಷ್ಟು ಬೇಗ ಲಗ್ನಮಾಡಿಕೊಳ್ಳಬೇಕು.

೧೨ ಯಾವದೇ ಕಾರಣದಿಂದ ವಿಶೇಷ ಉಷ್ಣತೆ ಬರುವ ಕೋಣೆಯನ್ನು ಉಪಯೋಗಿಸಬಾರದು.

ಶಿಂದೀ ಕುರಬೇಟ.
ತಾ. ಗೋಕಾಕ
ತಾ. ೨೦-೬-೧೫.

ಚಿದಂಬರ ಅನಂತಭಟ್ಟ ರಾಮದುರ್ಗ.
ಹೆಡ್‌ಮಾಸ್ತರ ಕನ್ನಡಶಾಲಾ.

ಕೂಟಪ್ರಶ್ನ.

"ಹದಿನೈದು ಮಂದಿ ಸದ್ಗೃಹಸ್ಥರು ಕಾರ್ಯನಿಮಿತ್ತವಾಗಿ ಪರಗ್ರಾಮಕ್ಕೆ ಹೊರಟು ಮಾರ್ಗವನ್ನು ಕ್ರಮಿಸುತ್ತಿರುವಾಗ ಸೂರ್ಯಾಸ್ತವಾಗಲು ಬೇರೆ ಹದಿನೈದು ಜನರು ಪಥಿಕರ ವೇಷದಿಂದ ಅವರನ್ನು ಕೂಡಿದರು. ಆವರು ತಮ್ಮ ನೂತನ ಸಂಗಡಿಗರು ಚೋರರೆಂಬುದನ್ನು ಅರಿಯದೆ, ತಮೋಮಯ ಮಾರ್ಗದಲ್ಲಿ ಮುಂದಕ್ಕೆ ನಡೆಯಲಾರದೆ, ಬೆಳಕಿಗೋಸ್ಕರ ನಡುವೆ ಉರಿ ಮಾಡಿ ಅದರ ಸುತ್ತಲು ಎಲ್ಲರೂ ಕುಳಿತುಕೊಂಡರು. ಇಷ್ಟರಲ್ಲಿ ಒಂದು ವ್ಯಾಘ್ರವು ಘುಡಿಘುಡಿಸುತ್ತ ಆ ಸಜ್ಜನ ದುರ್ಜನ ಸಂಯೋಗಸ್ಥಲಕ್ಕೆ ಬಂದು, ಎಂಟು ಜನರನ್ನು ಎಣಿಸುತ್ತಲೂ ಮೇಲೊಬ್ಬನನ್ನು ಭಕ್ಷಿಸುತ್ತಲೂ ವರ್ತುಲಾಕೃತಿಯಾಗಿ ಸುತ್ತುವರಿಯಲು ಕಳ್ಳರೆಲ್ಲ ವ್ಯಾಘ್ರಕ್ಕೆ ಆಹುತಿಯಾದರು. ಅಷ್ಟರಿಂದ ಅದು ತೃಪ್ತಿ ಹೊಂದಿ ಮಿಕ್ಕುಳಿದ ಸತ್ಪುರುಷರನ್ನು ಪರಿತ್ಯಜಿಸಿ ಹೊರಟು ಹೋಯಿತು." ಹಾಗಾದರೆ ಆ ವರ್ತುಲಾಕೃತಿಯಲ್ಲಿ ಚೋರರೂ ಸದ್ಗೃಹಸ್ಥರೂ ಯಾವ ಬಗೆಯಿಂದ ಮಿಲಿತರಾಗಿದ್ದರೆಂಬುದೇ ನಮ್ಮ ಪ್ರಶ್ನೆಯು.

ಸೂಚನೆ: — ಈ ಪ್ರಶ್ನಕ್ಕೆ ಸಪ್ಟಂಬರ ಮಾಸಾಂತ್ಯದೊಳಗಾಗಿ ಯಾರಿಂದಲೂ ಸರಿಯಾದ ಉತ್ತರವು ಪ್ರಸಿದ್ಧಿಸಲ್ಪಡದಿದ್ದರೆ, ಅಕ್ಟೋಬರ ತಿಂಗಳಲ್ಲಿ ಅದು ಪೃಚ್ಛಕನಿಂದಲೇ ಪ್ರಕಟಿಸಲ್ಪಡುವದು.

ಟ್ರೇನಿಂಗಕಾಲೇಜ ಘಾರಮೆನ್
ಧಾರವಾಡ.

ವಿಧೇಯ.
ಭೀಮಾಜಿ ಜೀವಾಜಿ ಹುಲಿಕವಿ
೨ನೆಯ ವರ್ಷದ ವಿದ್ಯಾರ್ಥಿ.

ಅಲಂಕಾರದರ್ಪಣ.

(ಕಳೆದ ಜೂನ-ಜುಲೈ ತಿಂಗಳುಗಳ ಸಂಚಿಕೆಯ ೫೬ ನೆಯ ಪುಟದಿಂದ ಮುಂದೆ ಸಾಗಿದ್ದು.)

ಪ್ರತ್ಯಕ್ಷಾಲಂಕಾರವು: — ಮತ್ತೆ ಉದಾ: —

ಭಾಮಿನಿ|| ಸಹಕಾರ ಪಲ್ಲವದೆ ಕೂಡಿದ |
ಬಹುಸ್ವಾದು ಸೌಗಂಧಿಯಾಗಿಹ |
ತುಹಿನ ಸಂಚಯದಂತೆ ಶೀತಳ ಭಾವದಿಂದಿರುವ ||
ಸಹಚರಿಯ ಪ್ರತಿಬಿಂಬ ಶೋಭಿತ |
ಬಹುಳ ಗುಂಜಾರವದ ಮದ್ಯದೆ |
ಅಹಹ! ಇಂದ್ರಿಯ ಗಣವದೇಂ ನಿರ್ವೃತಿಯನೇರಿದುದೋ ||

ಇಲ್ಲಿ ಕ್ರಮವಾಗಿ ರಸನ-ಘ್ರಾಣ-ಸ್ಪರ್ಶ-ದರ್ಶನ-ಶ್ರವಣ-ಮಾನಸಗಳೆಂಬ ಇಂದ್ರಿಯಗಳ ತೃಪ್ತಿಯ ವರ್ಣನೆಯದೆ. ಮತ್ತೆ ಉದಾ: —

ಭಾಮಿನಿ|| ಏನಿದೇನಿದು? ಸರಸಿಜವೊ? ಸೋ |
ಮೇನಿದೇನಿದು? ಯುವತಿವದನವೊ? |
ಏನಿದೇನಿದು? ನಯನ ಕಾನಂದನವನೀಯುವದು ||
ಧ್ಯಾನಿಸುತ ಕೆಲ ಹೊತ್ತು ಕಮಲವೆ |
ಕಾಣದಿಹ ಬಿಬ್ಬೋಕದಿಂದಲೆ* |
ನಾನು ನಿಶ್ಚಯಿಸಿದೆನು ಕಾಂತಾಮಣಿಯ ಮುಖವೆಂದು ||

---

* ಪರಮ ಪ್ರಿಯನೊಳ್ಬೆಚ್ಚಂ |
ತಿರುತುಂ ತನ್ನೊಲವನಾರ್ಗಮರಿಸದೆ ಬಾಹ್ಯಂ ||
ತರದೊಳೆ ಮೆರೆಯಿಸಕಾಂತೆಯ |
ಪರಿಣತಿ ಬಿಬ್ಬೋಕಮೆಂಬ ಪೆಸರಂ ಪಡೆಗುಂ || ಶೃ. ರತ್ನಾಕರ.

ಇಲ್ಲಿ ಬಿಬ್ಬೋಕವನ್ನು ನೋಡಿದ್ದರಿಂದ ಇ... ...ಾಗಿರಬೇಕೆಂದು ಸಂದೇಹಪಟ್ಟಿರುವನು. ಆದ್ದರಿಂದ ಇದು ಸಂಶಯೋತ್ತರ ಪ್ರತ್ಯಕ್ಷವಾಗಿದೆ.

---

೧೧೧. ಅನುಮಾನಾಲಂಕಾರವು. ಲಕ್ಷಣ:—ದೋಷರಹಿತವಾದ, ಅಂದರೆ ಬೇರೆ ಕಡೆಯಲ್ಲಿ ಕಾಣದ ಚಿಹ್ನಗಳಿಂದ ಅರ್ಥವು ಗೊತ್ತುಹಚ್ಚಲ್ಪಟ್ಟರೆ ಅಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ|| ಎಲ್ಲಿಂದ ಹೊಗೆಯು ಬರುವದೊ |
ಅಲ್ಲಿರುವದು ಬೆಂಕಿಯೆಂದು ಪೇಳ್ವೆನು ನಿಜದಿಂ ||

ಇಲ್ಲಿ ಹೊಗೆಯ ಚಿಹ್ನದಿಂದ ಅಲ್ಲಿ ಬೆಂಕಿಯಿರುವದೆಂಬ ಅರ್ಥವು ಅನುಮಾನ ಸಿದ್ಧವಾದದ್ದು. ಮತ್ತೆ ಉದಾ:—

ಭಾಮಿನಿ|| ಜವದಿ ನೋಡದ ಘನವಾಕಾ |
ಶವನು ಮುಸುಕಿದರಿಂದೆ ಕಿಡಿಗಳು |
ಭುವಿಗೆ ಪಸರಿಸಿದಂತೆ ಹೊನ್ನೇಹುಳದ ರೂಪದಲಿ ||
ಅವನಿ ಚರಿಸುವ ಪಥಿಕರಲಿ ಸ್ಮರ |
ದವವು ಹಬ್ಬುವದೆಂದು ತಿಳಿಯುವೆ |
ದಿವದೆ ವಿದ್ಯುಲ್ಲತೆಯು ಪಿಂಗಟವರ್ಣ ಜನಿಸಿರಲು ||

ಆಕಾಶದಲ್ಲಿಯ ಮಿಂಚನ್ನೂ, ಪಿಂಗಟವರ್ಣವನ್ನೂ ನೋಡುವದರಿಂದ ಪಥಿಕರಲ್ಲಿ ಸ್ಮರದವವು ಹಬ್ಬುವದೆಂಬ ಮಾತು ಅನುಮಾನಸಿದ್ಧವಾದದ್ದು; ಅಂದರೆ, ಇಲ್ಲಿ ಒಂದು ಸಂಗತಿಯಿಂದ ಅದೇ ತರದ ಮತ್ತೊಂದು ಸಂಗತಿಯ ಅನುಮಾನವು ಮಾಡಲ್ಪಟ್ಟಿದೆ. ಮತ್ತೆ ಉದಾ:—

ಭಾಮಿನಿ|| ನಾರಿಯರು ಚಂಚಲದ ನೋಟದೆ |
ಬೀರುವರೊ ಹುಬ್ಬುಗಳ ನಾವಗೆ |
ಸೇರುವವು ಸ್ಮರಶರಗಳೆವನಲ್ಲೆಂಬ ಕಾರಣದೆ ||
ಮಾರನೀವನಿತೆಯರ ಶಾಸನ |
ತೋರುವವ ಮುಂದೆಂದು ತಿಳಿಯುವೆ |
ಧೀರತನದಲಿ ಮಣಿಸಿ ಚಾಪಕೆ ಶರವ ಸೇರಿಸುತ ||

ಇಲ್ಲಿ ಒಂದು ಸಂಗತಿಯಿಂದ ಮತ್ತೊಂದರ ಅಂದರೆ "ಮಾರನು ವನಿತೆಯರ ಶಾಸನವನ್ನು ಮುಂಭಾಗದಲ್ಲಿ ಒಯ್ಯುವವನು" ಎಂಬ ಸಂಗತಿಯ ಅನುಮಾನವು ಮಾಡಲ್ಪಟ್ಟಿದೆ. ಮತ್ತೆ ಉದಾ:—

ಭಾಮಿನಿ|| ಸರಸಿಜಂಗಳು ಮುಚ್ಚುವದರಿಂ |
ದರಳುವಂತಿಹ ಮಾಲತಿಗಳಿಂ |
ದರಿಯುವದು ರವಿ ಹೋದನಸ್ತಂಗಿರಿಯೊಳೆಂಬುವದ ||

ಇಲ್ಲಿ ಸರಸಿಜಾದಿಗಳ ದೃಷ್ಟಾಂತಗಳಿಂದ ರವಿಯು ಮುಳುಗಿ ದೆಂಬದು ಅನುಮಾನಿಸತಕ್ಕದ್ದಾಗಿದೆ. ಇದು ಶುದ್ಧವಾದ ಅನುಮಾನವು ಮತ್ತೆ ಉದಾ:—

ಉತ್ಪಲ|| ಬಾರೆಲೊ! ಈಮಹೀರುಹವೆ ಕೂಡುವೆನೀಗಳು ನಾನು ಲಕ್ಷ್ಮಣಾ |
ಮೀರಿದ ತಾಪದಿಂದೆ ರವಿಯೇರಿದನೀಗಳು ನೋಡೊ ಮೂಡಲೊಳ್
ಶ್ರೀರಘುವಲ್ಲ ಸೂರ್ಯನಿವ ಚಂದ್ರಮನೀಗಿರುಳೆಲ್ಲಿ ಮೂಡಿದಂ |
ತೋರುವದೆಂತು! ವತ್ಸ! ನಿನಗಾತೆರವೇಳೊ! ಮೃಗಾಂಕವಿರ್ಪುದೈ|
ಹಾ! ರಮೆ! ಈಗಳೆಲ್ಲಿಮೃಗನೇತ್ರೆಯೆ! ಸುಂದರಗಾತ್ರೆ! ಜಾನಕಿ! |

ಇಲ್ಲಿ ಮೃಗಾಂಕವಿರುವದರಿಂದ 'ಇವನು ಚಂದ್ರಮನು' ಎಂದ ಅನುಮಾನವು ಮಾಡಲ್ಪಟ್ಟದೆ.

---

೧೧೨. ಉಪಮಾನಾಲಂಕಾರವು. ಲಕ್ಷಣ:—ಸದೃಶತ್ವದಿಂದ ವಸ್ತುವನ್ನು ನಿಶ್ಚಯಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ|| ಅರಿಯಿರಿ ನನ್ನಯ ಮಿತ್ರನ |
ಕರಿವಾಗಿಹ ಕಪಿಯು ಚಪಲೆಯನು ಪೋಲುವನ ||

ಇಲ್ಲಿ ಕಪಿಯ ಸಾದೃಶ್ಯದಿಂದ ಒಂದು ವ್ಯಕ್ತಿಯನ್ನು ಗೊತ್ತುಹಚ್ಚ ತಕ್ಕದ್ದಾಗಿದೆ. ಮತ್ತೆ ಉದಾ:—

ಭಾಮಿನಿ|| ಆಗಳಾಕಾಶದಲಿ ರೋಹಿಣಿ |
ಬೇಗದಲಿ ತಿಳಿಯುವದು ಸುಂದರಿ ||
ಹೀಗೆ ಶಕಟಾಕಾರವಾಗಿಹ ತಾರಕೆಗಳಿರಲು ||

ಇಲ್ಲಿ ಹೊರಸಿನಾಕಾರವಾಗಿರುವ ಚಿಕ್ಕೆಗಳ ಸಾದೃಶ್ಯದಿಂದ ರೋಹಿಣಿ ಎಂಬ ನಕ್ಷತ್ರವನ್ನು ಗೊತ್ತುಹಚ್ಚತಕ್ಕದ್ದಾಗಿದೆ. ಮತ್ತೆ ಉದಾ:—

ಭಾಮಿನಿ|| ಮುದುಕಿಯನು ಸತಿ ಧನಿಕಳನು ಬಹು |
ವಿಧದ ಸೌಖ್ಯವ ಬಡುವಿಯೆಂದರೆ |
ಮದುವೆಯುಪ್ಪದು ನಮಗೆ ಸೇರದ ತೆರದೆ ಬಾಲಕಿಗೆ ||

ಮುದುಕಗಂಡನು ರುಚಿಸನೆಂಬುದ |
ನೆದೆಯೊಳಗೆ ತಿಳಿಕೊಂಡ ವಿಬುಧರು |
ಬದುಕುಗಳ ನುಂಗುವರು ಜೀವದ ಪೆಣಕೆ ಶಿಸುವಿಡುತ ||

ಇಲ್ಲಿ ಪ್ರತಿಯೊಬ್ಬನು ತನ್ನ ಆತ್ಮದ ಸಾದೃಶ್ಯದಿಂದ 'ಬಾಲಕಿಗೆ ಮುದುಕಗಂಡನು ಸೇರನು' ಎಂಬದು ನಿಶ್ಚಯಿಸತಕ್ಕದ್ದಾಗಿದೆ. ಅನುಮಾನಕ್ಕಿಂತ ಉಪಮಾನವು ಹೆಚ್ಚಿಗೆ ದೃಢವಾಗಿರುವದು. ಮತ್ತೆ ಉದಾ:—

ಭಾಮಿನಿ|| ಮಾರನಂತಿರೆ ರೂಪವುಳ್ಳನ |
ವಾರಿಜಾಕ್ಷನ ತೇಜವುಳ್ಳನ |
ಘೋರತರಗಿರಿರಾಜನಂತಿರೆ ಧೈರ್ಯವುಳ್ಳವನ ||
ಶ್ರೀ ರಮಣ ಸೇವಕನ ಯುಲಗುರ |
ವೀರ ಮಾರುತಿಯಂಥ ಶೂರನ |
ನಾರಿ ನೀನರಿ ಜಾರ್ಜರಾಜರ ನೀಗಭಾರತದೆ ||

ಇಲ್ಲಿ ಕೆಲವರ ರೂಪ ತೇಜಾದಿಗಳ ಸಾದೃಶ್ಯದಿಂದ ಶ್ರೀ ಜಾರ್ಜ ರಾಜರನ್ನು ಗೊತ್ತು ಹಚ್ಚತಕ್ಕದ್ದಾಗಿದೆ.

---

೧೧೩. ಶಬ್ದಪ್ರಮಾಣಾಲಂಕಾರವು. ಲಕ್ಷಣ:— ಶ್ರುತಿ ಸ್ಮೃತಿ ಪುರಾಣಾಗಮಾದಿಗಳಿಂದ ಪ್ರಕೃತಾರ್ಥವನ್ನು ಸಮರ್ಥಿಸಿದಲ್ಲಿ ಈ ಅಲಂಕಾರ ವಾಗುವದು. ಅಪೌರುಷೇಯ ವಚನವು ಶ್ರುತಿಯೆನಿಸುವದು. ಮತ್ತೆ ಉದಾ:—

ಕಂದ|| ಸಿರಿಹರಿ ಪರತರನೆಂಬುದು |
ಸಗಸಪೆ ತಿಳಿಯುವದು ವೇದಗಳ ಸರಣಿಯಲಿ ||

ಇಲ್ಲಿ 'ಲಕ್ಷ್ಮಿಯಿಂದ ಸಹಿತನಾದ ಹರಿಯು ಎಲ್ಲಕ್ಕೂ ಶ್ರೇಷ್ಠನು, ಎಂಬ ಅರ್ಥಕ್ಕೆ ವೇದ ವಾಕ್ಯಗಳು ಪ್ರಮಾಣಗಳಾಗಿವೆ. ಮತ್ತೆ ಉದಾ:--

ಭಾಮಿನಿ|| ವರವಟುವೆ, ಸಾಕಿನ್ನು ನಿನ್ನಯ |
ಬಿರಿನುಡಿಗಳಿಂದೇನು ಸುಮ್ಮನೆ |
ಅರಿಯುವದೆ! ಅವನಿರವು ನಿನಗಿನ್ನೆತ್ತವರ ರಮಣೀ ||
ಸರಸಿಜನಿಗೀಶ್ವರನೆ ಕಾರಣ |
ನಿರುವನೆಂಬುವ ಮಾತು ನಿನ್ನಿಂ |
ಮರೆತು ಹೊರಬತ್ತವನ ದೋಷವ ವಿವರಿಸುವ ಭರದೆ ||

ಇಲ್ಲಿ 'ಬ್ರಹ್ಮನಿಗೂ ಈಶ್ವರನು ಕಾರಣನು' ಎಂಬ ಅರ್ಥಕ್ಕೆ ವೇದ ವಾಕ್ಯವು ಪ್ರಮಾಣವಾಗಿದೆ. ಶ್ರುತಿಯ ಅರ್ಥವನ್ನು ಸ್ಮರಿಸುವದು ಸ್ಮೃತಿಯೆನಿಸುವದು. ಮತ್ತೆ ಉದಾ: —

ಭಾಮಿನಿ|| ಋತುಮತಿಯು ಸತಿಯಪ್ಪಳಲ್ಲದೆ |
ಕ್ಷಿತಿಯೊಳಗೆ ಬಾಲಕಿಯು ತಮ್ಮಯ |
ಸತಿಯೆಂದು ಭಾವಿಸುತ ತಲೆಬೋಳಿಸುತ ವಿಧವಿಧದೆ ||
ಸತತ ಕಾಯಕ್ಲೇಶ ಬಡಿಸುವ |
ಹತಭಾಗಿ! ಹಿಂದುಗಳ ಶಿಕ್ಷಿಸಿ |
ಜತನ ಮಾಳ್ಪುದು ಜಾರ್ಜರಾಜರೆ, ಭರತವನಿತೆಯನು ||

ಇಲ್ಲಿ 'ಋತುಮತಿಯು ಸತಿಯಪ್ಪಳು, ಎಂಬ ಅರ್ಥಕ್ಕೆ "ಕ್ಲೀಬೇಚ ಪತಿತೇ, ಪತೌ" ಎಂಬ ಪರಾಶರ ಸ್ಮೃತಿಯು ಪ್ರಮಾಣವಾಗಿದೆ. ಮತ್ತೆ ಉದಾ: —

ಕಂದ|| ನರರೆಲ್ಲರು ಪಾಪಂಗಳ |
ನರಿಯದೆ ಮಾಡುವದು ಸರ್ವಕೃತ್ಯಂಗಳಲಿ ||
ಒರೆದನು ಮನು ತಾನರಿಯದೆ |
ಸರಸೊಳು ಪಾಪವದು ಬರುವದಿಲ್ಲೆಂಬುದನು ||

ಇಲ್ಲಿ 'ಅರಿಯದೆ ಮಾಡಿದ ಪಾಪವು ತನಗೆ ಬರದು, ಎಂಬ ಅರ್ಥಕ್ಕೆ ಮನುಸ್ಮೃತಿಯು ಪ್ರಮಾಣವಾಗಿದೆ. ಮತ್ತೆ ಉದಾ: —

ಭಾಮಿನಿ|| ಸುಮ್ಮ ಸುಮ್ಮನೆ ಕಲಹ ಮಾಳ್ಪುದು |
ತಮ್ಮ ತಮ್ಮೊಳು ನೆಚ್ಚಗಲ್ಲವು |
ಸುಮ್ಮ ಸುಮ್ಮನೆ ಕಲಹವದು ಯಾದವರ ಕುಲವೆಲ್ಲ ||
ಒಮ್ಮೆ ನಾಶವ ಮಾಡಿತೆಂಬುದ |
ತಮ್ಮ ಸೀನರಿಯುತ್ತ ಬಮ್ಮನೆ |
ಸುಮ್ಮನಿರುವುದು ನಮ್ಮ ನಮ್ಮೊಳು ಕಲಹವಾದದಲೇ ||

ಇಲ್ಲಿ 'ಸುಮ್ಮ ಸುಮ್ಮನೆ ಕಲಹವು ಯಾದವರ ಕುಲವನ್ನೆಲ್ಲ ನಾಶ ಮಾಡಿತು' ಎಂಬ ಅರ್ಥಕ್ಕೆ ಪುರಾಣಗಳು ಪ್ರಮಾಣಗಳಾಗಿವೆ. ಆಪ್ತವಚನವು ಆಗಮವೆನಿಸುವದು. ಇದರಲ್ಲಿ ಧರ್ಮಪ್ರವರ್ತಕರಾದ ಆಚಾರ್ಯರ ಮತಗಳೂ, ಗುರು ಹಿರಿಯರ ವಾಕ್ಯಗಳೂ ಸಂಗ್ರಹಿಸಲ್ಪಡುವವು.

ಉಪೇಂದ್ರಶರ್ಮಾ ತೋಳವಟ್ಟಿ.

ಶಾಲಾಪತ್ರಕ.

ಪುಟ ೫೧. | ಸಪ್ಟಂಬರ ೧೯೧೫. | ಸಂಚಿಕೆ ೯

ಸ್ಫುಟವಿಷಯಗಳು.

೧. ವಾಟರಪ್ರೂಫ ದೀಪದ ಕಡ್ಡಿಗಳು.

ಸ್ವಲ್ಪ ಬಿಸಿಯಾದ ಕರಗಿದ ಮೇಣಬತ್ತಿಯ ರಸದಲ್ಲಿ ಕೆಲವು ದೀಪದ ಕಡ್ಡಿಗಳನ್ನು ಮುಳುಗಿಸಿ ಹಿಡಿದರೆ ಅವುಗಳ ಮೇಲೆ ಮೇಣಬತ್ತಿಯ ತೆಳುವಾದ ಒಂದು ಪರೆಯು ಕೂಡ್ರುವದು. ಅದು ಆರಿ ಗಟ್ಟಿಯಾಗಲು, ಈ ಪರೆಯು ಚನ್ನಾಗಿ ಹಿಡಿದುಕೊಳ್ಳುವದು. ಆ ಮೇಲೆ ದೀಪದ ಕಡ್ಡಿಗಳು ತಾಸೆರಡು ತಾಸು ನೀರಲ್ಲಿ ಮುಳುಗಿದ್ದರೂ ಕೆಡುವದಿಲ್ಲ. ಅವುಗಳನ್ನು ಉಪಯೋಗಿಸುವಾಗ ಮೊದಲು ಒಮ್ಮೆ ಕುಕ್ಕಿ ಮೇಣಬತ್ತಿಯ ಪರೆಯನ್ನು ತೆಗೆಯಬೇಕು. ಎರಡನೆಯ ಸಾರೆ ಕುಕ್ಕಿದ ಕೂಡಲೆ ಆ ಕಡ್ಡಿಗಳಿಗೆ ಸಹಜವಾಗಿ ಉರಿಹತ್ತುವದು. ಮಳೆಗಾಲದಲ್ಲಿ ದೀಪದ ಕಡ್ಡಿಗಳು ತೊಯ್ದಂತಾಗಿ ಬಹಳ ತೊಂದರೆಯಾಗುವದು. ಆಗ ಈ ಸಹಜವಾದ ಉಪಾಯವು ಗೊತ್ತಿದ್ದರೆ ಆ ತೊಂದರೆಯನ್ನು ಅನುಭವಿಸಬೇಕಾಗುವದಿಲ್ಲ.

---

೨. ಚಂದ್ರನ ಉತ್ಪತ್ತಿ.

ಕೋಟ್ಯವಧಿ ವರ್ಷಗಳ ಪೂರ್ವದಲ್ಲಿ ನಮ್ಮ ಈ ಪೃಥ್ವಿಯೂ, ಆಕಾಶದಲ್ಲಿರುವ ಚಂದ್ರನೂ ಒಂದೇ ದೇಹದಿಂದ, ಕೂಡಿಕೊಂಡು ಇದ್ದರು. ಪೃಥ್ವಿಯು ಈಗಿನಂತೆ ಇರದೆ ಈಗಿನಕಿಂತ ದೊಡ್ಡದಾಗಿಯೂ ವಾಹಿರೂಪವಾಗಿಯೂ ಇದ್ದಿತು; ಹೆಚ್ಚು ಕಂಪನವುಳ್ಳದ್ದೂ, ಚಂಚಲ ದದ್ದೂ ಆಗಿತ್ತು. ಒಂದು ದಿನ ಒಮ್ಮಿಂದೊಮ್ಮೆ ಅದು ಇಬ್ಭಾಗವಾ ತು. ಅದರದೊಂದು ಭಾಗವೇ ಚಂದ್ರನು. ಮೊದಲು ಮೊದಲು ಚಂದ್ರ ಪೃಥ್ವಿಯ ಸಮೀಪದಲ್ಲಿಯೇ ತಿರುಗುತ್ತಿದ್ದನು. ಆದರೆ ಕ್ರಮದಿಂದ

ಸರಿಯುತ್ತ ಸರಿಯುತ್ತ ಈಗಿನ-ಸ್ಥಳಕ್ಕೆ ಹೋಗಿರುವನು. ಪೃಥ್ವಿ ಚಂದ್ರನು ಬೇರೆಯಾಗುವಾಗ ಭಯಂಕರವಾದ ದಾಹ್ಯಶ ಉಂಟಾಗಿರಬೇಕೆಂಬದು ಸ್ಪಷ್ಟವಿದೆ. ಮತ್ತು ಪೃಥ್ವಿಯು ಹಾರಿದ ಪಲವು ಸಣ್ಣ ಸಣ್ಣ ಗೋಲಗಳು ವೇಗದಿಂದ ಅನಂತ ಶದಲ್ಲಿ ಹರಡಿಕೊಂಡಿರುವವು. ಕೆಲವು ಸಣ್ಣ ಸಣ್ಣ ಗೋಲಗಳು ದಿಂದ ಬಹು ದೂರದಲ್ಲಿ, ಅಂದರೆ ಪೃಥ್ವಿಯ ಆಕರ್ಷಣದ ಸಹ ಹೋಗಿರುವವು. ನಾವು ನೋಡುವ ಉಲ್ಕೆಗಳು ಅವೇ ಸಣ್ಣ ಗೋಲಗಳು. ಅವೇ ಬಹು ದೂರದಿಂದ ಪೃಥ್ವಿಯ ಮೇಲೆ ತಿರಿಗಿ ಬೀಳುವವು.. ಉಲ್ಕಾಪಾತವೆಂದರೆ ಮತ್ತೇನೂ ಅಲ್ಲ.

---

೩. ಯಾವ ಬಣ್ಣದ ಬೆಳಕು ಬಹು ದೂರದಿಂದ ಕಾಣುವದು?

ಕೆಂಪು ಬಣ್ಣದ ಬೆಳಕು ಬಹಳ ದೂ ಕಾಣಿಸುವದು. ಒಂದು ಮೇಣಬತ್ತಿಯ ಪ್ ದಷ್ಟು ಪ್ರಕಾಶಶಕ್ತಿಯುಳ್ಳ ಕೆಂಪು ಪ್ರಕ ಒಂದು ಮೈಲಿನಿಂದ, ಮೂರು ಮೇಣಬ ಶಕ್ತಿಯುಳ್ಳ ಪ್ರಕಾಶವು ಎರಡು ಮೈಲು ದೂರದಿಂದ, ೧೦ ಮೇಣಬ ಶಕ್ತಿಯುಳ್ಳ ಪ್ರಕಾಶವು ದುರ್ಬೀನಿನ ಸಹಾಯದಿಂದ ೪ ಮೈಲು ದಿಂದ, ೩೩ ಮೇಣಬತ್ತಿಗಳ ಶಕ್ತಿಯುಳ್ಳ ಕೆಂಪು ಪ್ರಕಾಶವು ೫ ದೂರದಿಂದ ಕಣ್ಣಿಗೆ ಬೀಳುವದು. ಅತಿಸ್ವಚ್ಛವಾದ ರಾತ್ರಿಯಲ್ಲಿ ಮೇಣಬತ್ತಿಗಳ ಶಕ್ತಿಯುಳ್ಳ ಬಿಳಿಯ ಪ್ರಕಾಶವು ಕೂಡ ೩ ದೂರದಿಂದ ಕಂಡು ಬರುವದು.

---

೪. ಡೇವಿಡ ಸಾಸೂನರವರ ಉದ್ಯೋಗ ಶಾಲೆಯು.

ಇ. ಸ. ೧೮೪೩ನೇ ಇಸವಿಯಲ್ಲಿ, ಅಲ್ಪ ಸ್ಸಿನ ಗುನ್ಹೆಗಾರರಿಗೆ ಸುಶಿಕ್ಷಣವನ್ನೂ ಔ ಗಿಕ ಶಿಕ್ಷಣವನ್ನೂ ಕೊಡುವದಕ್ಕಾಗಿ ಯಲ್ಲಿ ಒಂದು ಸಂಸ್ಥೆಯು ಸ್ಥಾಪಿಸಲ್ಪಟ್ಟಿರು ಆ ಕಾಲಕ್ಕೆ ಮುಂಬಯಿಯಲ್ಲಿ ಸರ್ ಡೇವಿಡ ಸಾಸೂನರೆಂಬ ಒಬ್ಬ ಪರೋಪಕಾರಿಗಳಾದ ಜ್ಯೂ ಅಥವಾ ಇಸ್ರಾಯಿಲ್ ಜಾತಿಯ ಗೃ ರಿದ್ದರು. ಅವರು ಎಷ್ಟೋ ಸಂಸ್ಥೆಗಳಿಗೆ ಉದಾರತನದಿಂದ ಸಹ

ಮಾಡಿದಂತೆಯೇ ಈ ಸಂಸ್ಥೆಗೂ ಮಾಡಿದರು; ಮತ್ತು ಇದಕ್ಕೆ ಜೋಡಿ ಲ್ಪಟ್ಟ ಒಂದು ಔದ್ಯೋಗಿಕ ಶಾಲೆಯು ಸಲುವಾಗಿ ಬಹುದೊಡ್ಡ ಮಂದಿ ವನ್ನು ಕಟ್ಟಿಸಿಕೊಟ್ಟಿರುವರು. ಈ ಶಾಲೆಯಲ್ಲಿ ಅಲ್ಪವಯಸ್ಸಿನ ಗುನ್ಹೆ ರರಾದ ಹುಡುಗರಿಗೆ ಇರಲಿಕ್ಕೂ ಊಟ ಮಾಡಲಿಕ್ಕೂ ಅನುಕೂಲತೆ ದ್ದು ಬೇರೆ ಬೇರೆ ಪ್ರಕಾರದ ಉದ್ಯೋಗಗಳು ಕಲಿಸಲ್ಪಡುತ್ತವೆ. ಹಾಗು ವರಿಗೆ ಸಾಮಾನ್ಯ ಶಿಕ್ಷಣವೂ ನೈತಿಕ ಶಿಕ್ಷಣವೂ ಕೊಡಲ್ಪಡುವವು. ೀಟದ ವ್ಯವಸಾಯವನ್ನು ಕಲಿಸುವರು. ಸಾರಾಂಶವೇನಂದರೆ, ಹುಡು ರು ದೊಡ್ಡವರಾಗಿ ಈ ಶಾಲೆಯನ್ನು ಬಿಟ್ಟು ಹೊರಬಿದ್ದ ಬಳಿಕ ಅವರ ದರ ನಿರ್ವಾಹಕ್ಕೆ ಯಾವ ಪ್ರಕಾರದ ಕೊರತೆಯೂ ಆಗದಂತೆ ಶಿಕ್ಷ ವು ಕೊಡಲ್ಪಡುತ್ತದೆ. ಸದಾಚರಣೆಯಿಂದ ನಡೆಯುವದರಿಂದ ಸ್ವತಃ ್ಕೂ ಸಮಾಜಕ್ಕೂ ಎಷ್ಟು ಲಾಭಗಳಾಗುತ್ತವೆ, ಎಂಬದು ಅವರ ಮನ ದಲ್ಲಿ ಚನ್ನಾಗಿ ಬಿಂಬಿಸಲಿಕ್ಕೆ ಯತ್ನವು ಮಾಡಲ್ಪಡುವದು. ಅದ ದ ಅವರ ಮುಂದಿನ ಆಯುಷ್ಯದ ನಡಾವಳಿಯು ಅಯೋಗ್ಯವಾ ದ್ದೂ ಸಮಾಜಕ್ಕೆ ತೊಂದರೆಯನ್ನುಂಟುಮಾಡುವಂಥದೂ ಆಗುವದಿಲ್ಲ. ದರಿಂದ ಈ ಸಂಸ್ಥೆಯು ಲೋಕಾಶ್ರಯಕ್ಕೆ ಪಾತ್ರವಾದದ್ದಿರುವದು.

---

೫. ಟೆಲಿಫೋನದ ಹಾಯದಿಂದ ಶರೀರ ಲ್ಲಿ ಸೇರಿದ ಗುಂಡು ನ್ನು ಗೊತ್ತು ಹ ವದು.

ದೀ ಲ್ಯಾನ್ಸೆಟ್ (The Lancet) ಎಂಬ ಹೆಸರಿನ ವೈದ್ಯಕ ಪತ್ರಿಕೆಯಲ್ಲಿ ಯುದ್ಧದಲ್ಲಿ ಗಾಯಪಟ್ಟ ಸೈನಿಕರ ಶರೀರದಲ್ಲಿ ಸೇರಿದ ಗುಂಡುಗಳು ಇರುವ ಸ್ಥಳವನ್ನು ಗೊತ್ತುಹಚ್ಚುವ ಸಂಬಂಧದ ಹೊಸದೊಂದು ಯುಕ್ತಿಯು ವರ್ಣಿಸಲ್ಪಟ್ಟಿರುವದು. ವಿದ್ಯುತ್ತಿನ ಕಿರಣಗಳ ಸಹಾಯದಿಂದ ೀರದಲ್ಲಿ ಗುಂಡು ಇರುವ ಸ್ಥಳವನ್ನು ನಿರ್ಣಯಿಸಲಿಕ್ಕೆ ಕೆಲಕೆಲವು ರೆ ಬರುತ್ತಿರುವದಿಲ್ಲ. ಅದರಿಂದ ಈಗ ಯುರೋಪದಲ್ಲಿ ಟೆಲಿಫೋನದ ಹಾಯದಿಂದ ಈ ಕೆಲಸವನ್ನು ಮಾಡಹತ್ತಿರುವರು. ಅಲೆಕ್ಝಾಂಡರ ಹಾಮ ಟೇಲನೆಂಬವನು ಈ ವಿಚಾರವನ್ನು ಮೊಟ್ಟಮೊದಲು ಕಂಡು ದನು. ಟೆಲಿಫೋನಕ್ಕೆ ಸಂಬಂಧಿಸಿದ ತಂತಿಯ ಒಂದು ತುದಿಗೆ ದು ಧಾತುವಿನ ಸೂಕ್ಷ್ಮವಾದ ಸೂಜಿಯನ್ನು ಕೂಡ್ರಿಸಿರುವರು;

ಹಾಗು ಆ ತಂತಿಯು ಎರಡನೇ ತುದಿಗೆ ಅದೇ ಧಾತುವಿನ ಒಂದು ಕ
(ಬಟ್ಟಲ)ನ್ನು ಜೋಡಿಸಿರುವರು. ಡಾಕ್ಟರರು ಆ ಕಪ್ಪನ್ನು ಕಿವಿಗೆ ಹ
ಕೊಂಡು ಶರೀರದ ಯಾವ ಭಾಗದಲ್ಲಿ ಗುಂಡು ನಟ್ಟಿರುವದೋ ಆ ಭಾ
ದಲ್ಲಿ ಸುಮಾರು ಅಂದಾಜುನೋಡಿ ಆ ಸೂಜಿಯನ್ನು ಚುಚ್ಚುವರು. ಆ ಸ
ಜಿಯು ಗುಂಡಿಗೆ ತಗಲಲು ಟೆಲಿಫೋನದ ಕಪ್ಪಿನಲ್ಲಿ "ಟಕ್‌ಟಕ್" ಎಂ
ಸಪ್ಪಳವಾಗುವದು. ಸರ್‌ಜೇಮ್ಸ್ ಮೇಕೆಂಝಿ ಡೆವಿಡ್‌ಸನ್‌ರೆಂಬವ
ಹಲವು ಬಗೆಯಿಂದ ಪರೀಕ್ಷಿಸಿ ಇದರ ಉಪಯೋಗವನ್ನು ಕಂಡು ಹಿಡಿ
ಈ ಕ್ರಮದಿಂದ ಶರೀರದಲ್ಲಿ ಗುಂಡು ಸೇರಿರುವ ಸ್ಥಳವನ್ನು ಕಂಡು ಹಿ
ಯುವ ಹೊಸಬಗೆಯ ಯಂತ್ರವನ್ನು ರಚಿಸಿದರು. ಈ ಯಂತ್ರದ ಸ
ಯದಿಂದ ಬರೇ ಗುಂಡುಗಳನ್ನಷ್ಟೇ ಅಲ್ಲ, ಶರೀರದಲ್ಲಿ ಸೇರಿದ ಯಾ
ಇತರ ಪದಾರ್ಥವನ್ನಾದರೂ ಕಂಡು ಹಿಡಿಯಬಹುದು. ಹಾಗು ಆ ಪ
ರ್ಥವು ಇರುವ ಸ್ಥಳವನ್ನು ಚನ್ನಾಗಿ ನಿರ್ಣಯಿಸಿಕೊಂಡು ಶರೀರದ ಆ
ರಷ್ಟೇ ಪ್ರದೇಶವನ್ನು ಮಾತ್ರ ಕೊಯಿದು ಆ ಪದಾರ್ಥವನ್ನು ಹೊ
ತೆಗೆಯುವರು. ಹಿಂದಕ್ಕೆ ಇಂಥ ಪ್ರಸಂಗದಲ್ಲಿ ಶಸ್ತ್ರಕ್ರಿಯೆಯನ್ನು ನ
ಯಿಸುವಾಗ ತಕ್ಕಷ್ಟಕ್ಕಿಂತ ಹೆಚ್ಚು ಭಾಗವನ್ನು ಕೊಯ್ಯಬೇಕಾ
ತ್ತಿತ್ತು. ಹಾಗು ಇದರಿಂದ ಗಾಯಪಟ್ಟವರು ಹೆಚ್ಚು ಕಷ್ಟಪಡಬೇಕಾ
ತ್ತಿತ್ತು. ಆದರೆ ಈ ಹೊಸ ಯಂತ್ರದ ಸಹಾಯದಿಂದ ಆ ಕಷ್ಟ
ತುಸುಮಟ್ಟಿಗೆ ಕಡಿಮೆಯಾಗಿರುವದು.

---

೬. ಯುರೋಪದ ಮಹಾ ಯುದ್ಧದಲ್ಲಿ ನಾಯಿಗಳ ಉಪಯೋಗವು.

ಪ್ರತಿಯೊಂದು ಪ್ರಾಣಿಯಲ್ಲಿ ಒಂದಿಲ್ಲೊಂ
ನೈಸರ್ಗಿಕ ದೇವದತ್ತಬುದ್ಧಿಶಕ್ತಿಯು ಇ
ಇರುತ್ತದೆ. ಮನುಷ್ಯ ಪ್ರಾಣಿಯು ಈ ತ
ಬುದ್ಧಿಶಕ್ತಿಯ ವಿಕಾಸವನ್ನು ಪ್ರಯತ್ನದಿ
ಮಾಡಿಕೊಳ್ಳ ಬಲ್ಲನು. ಇದೇ ತತ್ವವ
ಅನುಸರಿಸಿ, ಸಿಂಹ, ಹುಲಿ, ಮೊದಲಾದ ಕ್ರೂರ ಪಶುಗಳು ಸಹ ಮ
ಷ್ಯರಿಗೆ ಈಲಾಗುವಂತೆ ಮಾಡಲ್ಪಡುತ್ತವೆ. ತರುವಾಯ ಅವುಗಳಿ
ಆಶ್ಚರ್ಯಕರವಾದ ಅನೇಕ ಕೆಲಸಗಳು ಮಾಡಿಸಲ್ಪಡುತ್ತವೆ.
ಮೇರೆಗೆ ಮನುಷ್ಯನು ಇಂಥ ಹಿಂಸ್ರ ಪಶುಗಳನ್ನೇ ತನ್ನ ಅಂಕಿತ

ದು ಕೊಳ್ಳುತ್ತಾನೆಂದ ಮೇಲೆ ಬಡ ನಾಯಿಯನ್ನು ಅಧೀನಪಡಿಸಿ
ಳ್ಳುವದರಲ್ಲಿ ಆಶ್ಚರ್ಯವೇನು? ಸದ್ಯಕ್ಕೆ ಯುರೋಪ ಖಂಡದಲ್ಲಿ
ಡಿಯುವ ಮಹಾ ಯುದ್ಧದಲ್ಲಿ ನಾಯಿಗಳಿಂದ ಬಹು ಮಹತ್ವದ ಕೆಲ
ಳು ಜರಗುತ್ತಿರುವವು. ಪ್ರತ್ಯಕ್ಷವಾಗಿ ಯುದ್ಧವು ನಡೆದ ಕಾಲಕ್ಕೆ
ಣವನ್ನು ಹೊಂದಿದ ಈ ನಾಯಿಗಳು ಚೂಣಿಯಲ್ಲಿರುವ ಶಿಪಾಯಿ
ಗೆ ಒಳ್ಳೇ ಚಪಲತೆಯಿಂದಲೂ, ದಿಟ್ಟತನದಿಂದಲೂ, ಕೌಶಲ್ಯದಿಂ
ೂ, ಮದ್ದು ಗುಂಡುಗಳ ಪೂರೈಕೆಯನ್ನು ಮಾಡಿಕೊಡುವವು. ಮದ್ದು
ಡುಗಳನ್ನು ತುಂಬಿದ ಚೀಲಗಳನ್ನು ಈ ನಾಯಿಗಳ ಬೆನ್ನ ಮೇಲೆ
ಬಿಟ್ಟ ಕೂಡಲೆ ಅವು ಭರದಿಂದ ಓಡಿ ಹೋಗಿ ಯುದ್ಧದಲ್ಲಿ ತೊಡ
ಶಿಪಾಯಿಗಳ ಹತ್ತರ ನಿಲ್ಲುವವು. ಅವರು ಅವುಗಳ ಬೆನ್ನ ಮೇಲಿನ
ಲಗಳನ್ನು ತಕ್ಕೊಂಡ ಕೂಡಲೆ ಪುನಃ ಅವು ತಿರುಗಿ ಓಡಿ ಬಂದು
ಡನೇ ಸಾರೆ ಹೋಗಲಿಕ್ಕೆ ಸಿದ್ಧವಾಗುವವು. ಯುದ್ಧವು ನಡೆದಾಗ
ಸೈನ್ಯದ ಛಾವಣಿಯ ಸುತ್ತು ಮುತ್ತಲಿನ ಪ್ರದೇಶವನ್ನು ನಿರೀಕ್ಷಿ
ದಕ್ಕಾಗಿ, ಬೇರೆ ಬೇರೆ ದಿಕ್ಕಿನಿಂದ ಸೋಲ್ಜರರ ಗುಂಪುಗಳನ್ನು
ಹಬೇಕಾಗುವದು. ಈ ಸೋಲ್ಜರರು ಸದ್ದು ಮಾಡದೆ ಬಹಳ ದೂರ
ರೆಗೆ ಹೋಗಲಾರರೆಂಬದು ಸಹಜವು. ಆದರೆ ನಾಯಿಗಳು ಈ ಕೆಲ
ನ್ನು ಬಹಳ ಚನ್ನಾಗಿ ಮಾಡುತ್ತವೆ. ಈ ನಾಯಿಗಳು ಸದ್ದು ಮಾಡದೆ
ಳ ದೂರದ ವರೆಗೆ ಹೋಗಿ, ಶತ್ರುಗಳು ಇರುವ ಸ್ಥಳವನ್ನು ಗೊತ್ತು
ವವು. ಈ ನಾಯಿಗಳಿಗೆ "ಗುಪ್ತ ಪೋಲೀಸ ಶಿಪಾಯಿಗಳೆಂ"ದು
ಕೆ ಅನ್ನಬಾರದು? ಈ ನಾಯಿಗಳು ಮಾಡುವ ಇನ್ನೊಂದು ಮಹ
ಕೆಲಸವು ಯಾವದೆಂದರೆ, ಇವು ಒಳ್ಳೇ ವಿಶ್ವಾಸವುಳ್ಳ ಉತ್ತಮ
ಲುಗಾರರ ಕೆಲಸವನ್ನು ಮಾಡುವವು. ಅವು ಕೋಟೆಯನ್ನೂ
ಣವನ್ನೂ ದಂಡಿನ ಛಾವಣಿಗಳನ್ನೂ ಒಳ್ಳೇ ಜಾಗ್ರತೆಯಿಂದ
ಯುವವು. ನಾಯಿಯ ಘ್ರಾಣೇಂದ್ರಿಯವೂ, ಶ್ರವಣೇಂದ್ರಿಯವೂ,
ಯೂ ಬಹು ತೀಕ್ಷ್ಣವಾಗಿರುವವು. ಅದರಿಂದ ಇಂಥ ನಾಯಿ
ಕಾವಲು ಇರುವಾಗ ಶಿಪಾಯಿಗಳು ನಿಶ್ಚಿಂತೆಯಿಂದ ಇರುವರು.
ದೂರದಲ್ಲಿರುವ ಶತ್ರುಗಳ ಸುಳುವನ್ನು ನಾಯಿಗಳು ಬಹು
ಡು ಹಿಡಿಯುವವು. ಅದರಿಂದ ಶತ್ರುಗಳಿಗೆ ಎದುರಾ

ಗುವ ಸಿದ್ಧತೆಯನ್ನು ಮಾಡಲಿಕ್ಕೆ ಸಾಕಷ್ಟು ಅವಕಾಶವು ದೊರೆಯು ವದು. ಈ ಎಲ್ಲ ತರದ ಕೆಲಸಗಳನ್ನು ಮಾಡಲಿಕ್ಕೆ ನಾಯಿಗಳಿಗೆ ಶಿಕ್ಷಣವು ಕೊಡಲ್ಪಡುವದು; ಇದಕ್ಕಾಗಿ ಚಪಲವಾದ ಚತು ನಾಯಿಗಳನ್ನು ಆರಿಸುವರು; ಸ್ಥೂಲವಾದ ಮೈಕಟ್ಟಿನ ದೊಡ್ಡ ನಾಯಿಗಳು ಈ ಕೆಲಸಕ್ಕೆ ಉಪಯೋಗಿಸುವದಿಲ್ಲ. ಮೊದಲು ಈ ನಾಯಿಗಳಿಗೆ ತಮ್ಮ ಒಡೆಯನ ಬೆನ್ನು ಹತ್ತಿ ಹೋಗಲಿಕ್ಕೆ ಕಲಿಸುತ್ತಾರೆ. ತರುವಾಯ ಅಪರಿಚಿತ ಮನುಷ್ಯನನ್ನು ಕಂಡಕೂಡಲೆ ಗುರುಗುಟ್ಟುವ ರೂಢಿಯನ್ನು ಹಚ್ಚುವರು. ಆ ಬಳಿಕ ರಾತ್ರಿಯಲ್ಲಿ ನಾಯಿಯೂ, ಅದರ ಒಡೆಯನೂ ಒತ್ತಟ್ಟಿಗೆ ಒಂದು ಸ್ಥಳದಲ್ಲಿ ನಿಂತುಕೊಳ್ಳುವರು; ಅನಂತರ ಬೇರೊಬ್ಬ ಮನುಷ್ಯನು ಅದರ ಹತ್ತರ ಬರುವನು; ಈ ಮನುಷ್ಯನು ಬರುವ ಸುಳುವು ಕಂಡು ನಾಯಿಯು ಗುರುಗುಟ್ಟ ಹತ್ತುವದು; ಆಗ ಅದರ ಒ ಯನು ಸುಮ್ಮನಿರುವನು; ಆದರೆ ಅದು ಒದರ ಹತ್ತಿದ ಕೂಡಲೆ ಅವ ಅದನ್ನು ಒತ್ತಿ ಹಿಡಿದು ಒದರುವದನ್ನು ನಿಲ್ಲಿಸುವನು. ಯಾಕಂದ ಆ ಪ್ರಸಂಗದಲ್ಲಿ ಒದರುವ ರೂಢಿಯು ಬಹಳ ಘಾತಕವಾದದ್ದು. ನಾ ಯು ದೊಡ್ಡ ಧ್ವನಿಯಿಂದ ಒದರಹತ್ತಿದ ಕೂಡಲೆ ಶತ್ರುಗಳಿಗೆ ಗೊತ್ತಾ ಅವರು ಓಡಿ ಹೋಗಬಹುದು. ಆದ ಕಾರಣ ಶತ್ರುಗಳು ತಮ್ಮ ಛಾ ಣಿಯ ಸಮೀಪಕ್ಕೆ ಬಂದಾಗ ಗುರುಗುಟ್ಟಿ ಆ ಸಂಗತಿಯನ್ನು ತಮ ಒಡೆಯನಿಗೆ ಗೊತ್ತು ಮಾಡಿಕೊಡುವದಿಷ್ಟೇ ನಾಯಿಗಳ ಕರ್ತವ್ಯವಾ ರುವದು.

ಪ್ರಸ್ತುತದ ಯುದ್ಧದಲ್ಲಿ ಗಾಯಹೊಂದಿದ ಶಿಪಾಯಿಗಳಿಗೆ ನಾ ಗಳಿಂದ ಬಹಳ ಉಪಯೋಗವಾಗುತ್ತಿರುವದು. ಅನ್ನ ನೀರುಗಳ ಚೀ ಗಳನ್ನು, ಕಾಗದ ಸೀಸಪೇನ್ಸೀಲು, ಗಾಯಗಳಿಗೆ ಕಟ್ಟುವ ಮಲಮಿ ಪಟ್ಟಿಗಳು, ಚಿಂದಿಗಳು ಇತ್ಯಾದಿ ಸಾಮಾನುಗಳನ್ನು ನಾಯಿಗಳ ಬೆ ಮೇಲಾಗಲಿ, ಕೊರಳೊಳಗಾಗಲಿ ಕಟ್ಟಿ ಬಿಟ್ಟುಬಿಡುತ್ತಾರೆ. ಆ ಗಾಯ ಹೊಂದಿದ ಶಿಪಾಯಿಯ ಬಳಿಗೆ ಹೋಗಿ ನಿಲ್ಲುವವು. ಆಗ ಶಿಪಾ ಯಿಯು ಕೈಕಾಲುಗಳನ್ನು ಅಲ್ಲಾಡಿಸಲಿಕ್ಕೆ ಸಮರ್ಥನಿದ್ದರೆ, ನಾಯಿ ಬೆನ್ನಮೇಲಿನ ಅನ್ನ ನೀರುಗಳನ್ನು ತಕ್ಕೊಂಡು ಚನ್ನಾಗಿ ಚೇತರಿಸಿಕೊ ಳ್ಳುವನು. ಮತ್ತು ಕಾಗದ ಸೀಸಪೇನ್ಸೀಲುಗಳನ್ನು ತಕ್ಕೊಂಡು ಸ್ಥಿತಿಗತಿಯನ್ನು ಬರೆದು ಅವುಗಳನ್ನು ಪುನಃ ಮೊದಲಿದ್ದಂತೆ ಇಡುವ

ಗು ಮಲಮಿನ ಪಟ್ಟಿಯನ್ನು ಬಿಚ್ಚಿಕೊಂಡು ಸಾಯಿಗೆ ಹೋಗಲಿಕ್ಕೆ
ಪ್ಪಿ ಮಾಡುವನು. ಕೂಡಲೆ ಅದು ಒಳ್ಳೇ ವೇಗದಿಂದ ಓಡುತ್ತ ನೆಟ್ಟಗೆ
ಡಿನ ಛಾವಣಿಗೆ ಹೋಗುವದು. ಅಲ್ಲಿಯ ಯೋಗ್ಯ ಅಧಿಕಾರಿಗಳು
ಕಾಗದವನ್ನು ಓದಿಕೊಂಡ ಕೂಡಲೆ ಆ ಗಾಯ ಹೊಂದಿದ ಶಿಪಾಯಿ
ನ್ನು ತರುವದಕಾಗಿ ಜನರದೊಂದು ಗುಂಪು ಹೊರಡುವದು. ಇತ್ತ
ಶಿಪಾಯಿಯು ತನ್ನ ಗಾಯವನ್ನು ಹರಕು ಚಿಂದಿಗಳಿಂದ ಒರಿಸಿಕೊಂಡು
ಲಾಮಿನ ಪಟ್ಟಿಯನ್ನು ಕಟ್ಟಿಕೊಂಡು ಅವರ ಹಾದಿಯನ್ನೇ ನೋಡುತ್ತ
ಪ್ಪುಕೊಂಡಿರುವನು. ಅಷ್ಟರಲ್ಲಿ ಆ ಗುಂಪಿನವರು ಬಂದು ಅವನನ್ನು
ತ್ತಿಕೊಂಡು ಹೋಗುವರು.

ಈ ಮೇರೆಗೆ ಯುದ್ಧದಲ್ಲಿ ನಾಯಿಗಳಂಥ ಮೂಕ ಜೀವಿಗಳಿಂದ
ನೇಕ ಮಹತ್ವದ ಕಾರ್ಯಗಳು ಮಾಡಲ್ಪಡುತ್ತವೆ.

ಜಾವಾದ್ವೀಪವು.

ಫಾಸಿಫಿಕ್ ಮಹಾಸಾಗರದಲ್ಲಿ "ಮಲಾಯೇಶಿಯಾ" ಎಂಬ ಹೆಸ
ನ ದ್ವೀಪಸಮುದಾಯವುಂಟು; ಅವುಗಳಲ್ಲಿ ಜಾವಾ ಇದೊಂದು ದ್ವೀಪ
ಾಗಿರುವದು. ಈ ದ್ವೀಪದೊಳಗಿನ ಖನಿಜ ಸಂಪತ್ತಿಯಿಂದಲೂ, ನಾನಾ
ಕಾರದ ಬೆಲೆಯುಳ್ಳ ಪದಾರ್ಥಗಳ ಹುಟ್ಟುವಳಿಯಿಂದಲೂ, ಸೃಷ್ಟಿ
ಂದರ್ಯದಿಂದಲೂ, ಇದಕ್ಕೆ "ಮಲಾಯೇಶಿಯಾ ದ್ವೀಪಸಮೂಹದೊ
ನ ಮುತ್ತು" ಎಂದು ಅನ್ನುವರು.

ಈ ದ್ವೀಪವು ಸುಮಾರು ೩೦೦ ವರ್ಷಗಳಿಂದ ಡಚ್ಚರು, ಅಂದರೆ
ರೋಪದೊಳಗಿನ ಹಾಲಂಡ ದೇಶದವರ ವಶದಲ್ಲಿ ಇರುವದು. ಇದರ
ತ್ರಫಲವು ೫೦ ಸಾವಿರ ಚೌರಸಮೈಲು, ಅಂದರೆ ಹಾಲಂಡ ದೇಶದ
ಲ್ಕು ಮಡಿಯಷ್ಟು ಇರುವದು. ಇಲ್ಲಿಯ ಜನಸಂಖ್ಯೆಯು ೩೫ ಕೋಟಿ,
ದರೆ ಹಾಲಂಡ ದೇಶದ ಅಯ್ದು ಮಡಿಯಷ್ಟು ಇರುವದು. ಕ್ಷೇತ್ರಫ
ಮಾನದಿಂದ ಜನಸಂಖ್ಯೆಯು ಬಹಳ ಹೆಚ್ಚಿರುವದು ಮಲಾಯೇ
ಯಾ ದ್ವೀಪಸಮುದಾಯದಲ್ಲಿ ಈ ದ್ವೀಪದಷ್ಟು ಜನವಸತಿಯು
ೆ ಯಾವ ದ್ವೀಪದಲ್ಲಿಯೂ ಇಲ್ಲ. ಒಕ್ಕಲತನವೇ ಇಲ್ಲಿಯ ಜನ
ಖ್ಯ ಜೀವನೋಪಾಯವಾಗಿರುವದು. ಈ ದ್ವೀಪದಲ್ಲಿ ನಾಲ್ಕೂ
ಗೆ ಹೊಲಗಳೂ, ತೋಟಪಟ್ಟಿಗಳೂ ಇರುವವು. ಇಲ್ಲಿ ಚಹಾ,

ಕಾಫಿ, ಸಕ್ಕರೆ, ಅಕ್ಕಿ, ಸಾಬುಅಕ್ಕಿ, ಸಿಂಕೋನಾ, ರಬ್ಬರ ಮೊದಲಾ ಜಿನಸುಗಳು ಹುಟ್ಟುವವು.

ಈ ದ್ವೀಪದ ನಿವಾಸಿಗಳು ಸ್ವಭಾವದಿಂದ ಮರ್ಯಾದೆಯುಳ್ಳವರು ಕರ್ತೃತ್ವಶಕ್ತಿಯುಳ್ಳವರೂ, ಉದ್ಯೋಗಿಗಳೂ ಆಗಿರುವರು. ವ್ಯಾಪ ರದ ಸಲುವಾಗಿ ಈ ದ್ವೀಪಕ್ಕೆ ಬರುತ್ತಿರುವ ಚೀನೀ ಮಲಾಯೀ ಜನ ದುರ್ಗುಣಗಳಿಂದಲೂ, ದುರ್ವ್ಯಸನಗಳಿಂದಲೂ ಇಲ್ಲಿಯ ಜನರು ದೂ ಇರುವರು. ಇವರ ಭಾಷೆಯು ಮಲಾಯಿ ಜನರ ಭಾಷೆಯಂತೆ ಇ ವದು. ಆದರೆ ಇವರ ಮೂಲಾಕ್ಷರಗಳು ಮಲಾಯೀ ಜನರ ಮೂ ಕ್ಷರಗಳಿಂದ ಭಿನ್ನವಾಗಿರುವವು. ಡಚ್ಚ ಸರಕಾರದವರು ಇತ್ತೀತ್ತಲಾ ಈ ದ್ವೀಪದಲ್ಲಿ ಎಷ್ಟೋ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿರುತ್ತಾ ಶಿಕ್ಷಣದ ವಿಷಯವಾಗಿ ಜನರು ದಿನದಿನಕ್ಕೆ ಹೆಚ್ಚು ಹೆಚ್ಚು ಉತ್ಸಾ ವನ್ನು ತೋರಿಸುತ್ತಿರುವರು. ಸರಕಾರದವರಿಂದಲೂ ಈ ವಿಷಯದ ಜನರಿಗೆ ಹೆಚ್ಚು ಹೆಚ್ಚು ಸಹಾಯವು ದೊರೆಯುಹತ್ತಿರುವದು.

ಈ ದ್ವೀಪದ ಮಧ್ಯ ಭಾಗದೊಳಗಿಂದ ಒಂದು ಪರ್ವತಾವಳಿಯ ಹೋಗಿರುವದು. ಅದರಲ್ಲಿ ೧೨೦ ಜ್ವಾಲಾಮುಖಿಗಳು ಇರುವವು. ಅ ಗಳಲ್ಲಿ ೧೪ ಜ್ವಾಲಾಮುಖಿಗಳು ಜಾಗ್ರತವಾಗಿರುವವು. ಈ ದ್ವೀಪದ ಮೇಲಿಂದಮೇಲೆ ಭೂಕಂಪಗಳು ಆಗುತ್ತಿರುವವು. ಈ ಕಾರಣದ ಮೂ ಕವಾಗಿ ಇಲ್ಲಿಯ ಮನೆಗಳು ಬಹುಶಃ ಒಂದೇ ಅಂತಸ್ತಿನವಿದ್ದು ಅವ ಳನ್ನು ಕಟ್ಟಿಗೆಗಳಿಂದಲೂ ಬಿದಿಗಿಗಳಿಂದಲೂ ಕಟ್ಟಿರುತ್ತಾರೆ. ದ್ವೀಪ ಮಧ್ಯಭಾಗದಲ್ಲಿ ಪರ್ವತದ ಓರೆಗುಂಟ ಒಂದು ಲೋಹಮಾರ್ಗವು ಹ ಯ್ದಿರುವದು. ಅದರ ಶಾಖೆಗಳನ್ನು ದ್ವೀಪದೊಳಗಿನ ಮುಖ್ಯ ಮುಖ ಸ್ಥಳಗಳ ವರೆಗೆ ಒಯ್ದಿದ್ದಾರೆ.

ಡಚ್ಚ ಸರಕಾರದವರು ಈ ದ್ವೀಪದ ರಾಜ್ಯಕಾರಭಾರವನ್ನು ಇ ಯ ಸರದಾರರ ಹಾಗು ವಾನಕರಿಗಳ ಸಹಾಯದಿಂದ ಸಾಗಿಸುತ್ತಿ ವರು. ಈ ದ್ವೀಪದ ಉತ್ಪನ್ನವೂ ವ್ಯಾಪಾರವೂ ಬಹಳಿರುವದರಿಂ ಜನರ ಸಾಂಪತ್ತಿಕ ಸ್ಥಿತಿಯು ಚನ್ನಾಗಿರುವದು. ಇಡೀ ಜನಸಂಖ್ ಯಲ್ಲಿ ನೂರಕ್ಕೆ ೯೭ ಜನರು ಮುಸಲ್ಮಾನರಿರುವರು. ಉಳಿದವರು ರೋ ಮನ್ ಕ್ಯಾಥೋಲಿಕರೂ ಪ್ರೋಟೆಸ್ಟೆಂಟರೂ ಇರುವರು.

ಪ. ವಾ. ನಾಮದಾರ ಗೋಪಾಳರಾವ ಗೋಖಲೆಯವರ ಚರಿತ್ರ.

नरपतिहितकर्ता द्वेष्यतां याति लोके
जनपदहितकर्ता त्यज्यते पार्थिवेंद्रैः ।
इति महति विरोधे वर्तमाने समाने
नृपति जनपदानां दुर्लभः कार्यकर्ता ॥ पं. तं.

ಯಾವ ಮಹನೀಯರು ಸ್ವಾರ್ಥವನ್ನು ಬದಿಗೊತ್ತಿ, ನಿರ್ಮಲವೂ ನಿಷ್ಕಲವೂ ಆದ ಮನಸ್ಸಿನಿಂದ ತಮ್ಮ ದೇಶದ ಹಿತಕ್ಕಾಗಿಯೇ ಹಗಲಿರುಳು ಹೆಣಗುತ್ತಿರುವರೊ, ಅಂಥವರಿಗೇ ರಾಷ್ಟ್ರದೊಳಗಿನ ಮಹಾಪುರುಷರ ಮಾಲಿಕೆಯಲ್ಲಿ ಅತ್ಯುಚ್ಚಪದವು ದೊರೆಯುವದು; ಅವರೇ ಜಗತ್ತಿನೊಳಗಿನ ಆಬಾಲವೃದ್ಧರಿಗೂ ವಂದನೀಯರಾಗುವರು; ಅವರೇ ಸ್ವಾರ್ಥತ್ಯಾಗಿಗಳೂ ಪರಾರ್ಥಸಾಧಕರೂ ಎನ್ನಿಸಿಕೊಳ್ಳುವರು; ಇಂಥ ಮಹಾತ್ಮರೇ ಆಯುಷ್ಯಮಾರ್ಗದಲ್ಲಿ ತಮ್ಮ ಸತ್ಕಾರ್ಯರೂಪವಾದ ಹೆಜ್ಜೆಗಳನ್ನು ಬಲವಾಗಿ ಊರಿ ಗುರುತು ಮಾಡುತ್ತಾ ಸಾಗಿ ಹೋಗುವರು; ಹಾಗು ಸಾಮಾನ್ಯ ಜನರು ಆ ಕುರುಹುಗಳನ್ನು ಅನುಲಕ್ಷಿಸಿ ಅವರನ್ನು ಹಿಂಬಾಲಿಸಿ ತಮ್ಮ ಜನ್ಮದ ಸಾರ್ಥಕತೆಯನ್ನು ಮಾಡಿಕೊಳ್ಳುವದಕ್ಕೆ ಅನುಕೂಲವಾಗುವದು. ಅದರಿಂದಲೇ ಇಂಥ ಮಹಾತ್ಮರ ಅದ್ವಿತೀಯವಾದ ಬುದ್ಧಿ-ಸಾಮರ್ಥ್ಯಗಳ ಕುರುಹುಗಳು ಜನರ ಎದುರಿಗೆ ಉಳಿದು, ಜನರಿಗೆ ಅವರ ಸ್ಮರಣೆಯು ಮೇಲಿಂದ ಮೇಲೆ ಬರುತ್ತಿರಲೆಂಬ ಸದುದ್ದೇಶದಿಂದ ಅಂಥವರ ಪ್ರತಿಮೆಗಳನ್ನು ಸ್ಥಾಪಿಸುವ, ಇಲ್ಲವೆ ಅವರ ಹೆಸರಿನಿಂದ ಯಾವದೊಂದು ಸಂಸ್ಥೆಯನ್ನು ಆರಂಭಿಸುವ ರೂಢಿಯು ಬಿದ್ದಿರುವದು. ಸ್ವಲ್ಪ ದಿವಸಗಳ ಹಿಂದೆ ಪರಲೋಕವಾಸಿಗಳಾದ ನಾಮದಾರ ಗೋಪಾಳ ಕೃಷ್ಣ ಗೋಖಲೆಯವರು ಇಂಥ ಮಾನವ ರತ್ನಗಳಲ್ಲಿ ಒಬ್ಬರಾಗಿರುವರು. ಮರಣಕಾಲಕ್ಕೆ ಅವರಿಗೆ ೪೯ ವರುಷಗಳು ಮಾತ್ರ ಆಗಿದ್ದವು. ಅವರ ಮರಣಕಾಲಮರಣದಿಂದ ಆಸೇತುಹಿಮಾಚಲವ್ಯಾಪಿಯಾದ ಭರತಖಂಡವೇ ಕಣ್ಣೀರಿಟ್ಟಿತು. ತೀರ ಸಾಮಾನ್ಯ ಸ್ಥಿತಿಯ ಕುಟುಂಬದಲ್ಲಿ ಹುಟ್ಟಿ, ಕೇವಲ ಸ್ವಸಾಮರ್ಥ್ಯದಿಂದಲೇ ಅತ್ಯುಚ್ಚ ಪದವನ್ನು ಹೊಂದಿ, ಸರಕಾರಕ್ಕೂ ಸಮಾಜಕ್ಕೂ ಅಷ್ಟೇ ಮಾನನೀಯರಾದ ಈ ಮಹಾನುಭಾವರ ಚರಿತ್ರವು ಬೋಧಪ್ರದವೂ ಅನುಕರಣೀಯವೂ ಆಗಿರುವದರಿಂದ ಅದನ್ನು ಇಲ್ಲಿ ಸಂಕ್ಷೇಪವಾಗಿ ಬರೆಯಲು ಆರಂಭಿಸುವೆವು.

ನಮ್ಮ ಚರಿತ್ರನಾಯಕರಾದ ಗೋಪಾಳರಾಯರು ರತ್ನಾಗಿರೀ ಜಿಲ್ಹೆಯ ಚಿಪಳೂಣ ತಾಲೂಕಿನೊಳಗಿನ ಕೌತುಳಕವೆಂಬ ಸಣ್ಣ ಹಳ್ಳಿಯೊಳಗೆ ತಮ್ಮ ಅಜ್ಜನ ಮನೆಯಲ್ಲಿ ಸನ್ ೧೮೪೬ನೇ ಇಸವಿಯ ಮೇ ತಿಂಗಳ ೯ನೇ ತಾರೀಖಿನ ದಿವಸ ಜನ್ಮ ತಾಳಿದರು. ಇವರ ತಂದೆಯವರಾದ ಕೃಷ್ಣರಾಯರು ಕಾಗಲವೆಂಬಲ್ಲಿ ಮೊದಲು ಒಬ್ಬ ಸಣ್ಣ ಕಾರಕೂನರಾಗಿದ್ದರು. ಮುಂದೆ ತಮ್ಮ ಉತ್ತಮವಾದ ನಡತೆಯಿಂದಲೂ ಕರ್ತವ್ಯದಕ್ಷತೆಯೇ ಮೊದಲಾದ ಸದ್ಗುಣಗಳಿಂದಲೂ ಕಾಗಲದ ಫೌಜದಾರನ ಕೆಲಸದವರೆಗೆ ಏರಿದರು. ಅವರು ಇನ್ನೂ ಏರಿಕೆಯ ಸ್ಥಿತಿಯಲ್ಲಿರುವಾಗಲೇ ದುರ್ದೈವದಿಂದ ಅಕಾಲ ಮೃತ್ಯುವಿಗೆ ತುತ್ತಾದರು. ಮರಣ ಕಾಲಕ್ಕೆ ಕೃಷ್ಣರಾಯರು ೪೭ ವರುಷದವರಾಗಿದ್ದರು. ಇವರು ಕರ್ತವ್ಯದಕ್ಷರೂ ನಿಯಮಿತತನವುಳ್ಳವರೂ ಸ್ವಾಭಿಮಾನಿಗಳೂ ಸರಳತನದಿಂದ ವ್ಯವಹಾರ ಮಾಡುವವರೂ ಆಗಿದ್ದರು. ಇದರಂತೆ ಗೋಪಾಳರಾಯರ ತಾಯಿಯವರಾದ ಸತ್ಯಭಾಮಾ ಬಾಯಿಯವರೂ ಸುಸ್ವಭಾವದವರೂ ಸಹನಶೀಲರೂ ನಿಷ್ಠಾವಂತರೂ ಆಗಿದ್ದರು. ತಂದೆ ತಾಯಿಗಳ ಗುಣಗಳು ಐಕ್ಯವಾಗಿ ಮಕ್ಕಳಿಗೆ ಬರುವವೆಂಬ ಸಂಗತಿಯನ್ನು ನಾವು ಗೋಪಾಳರಾಯರ ಚರಿತ್ರದಲ್ಲಿ ಸ್ಪಷ್ಟವಾಗಿ ನೋಡಬಹುದಾಗಿದೆ.

ಗೋಪಾಳರಾಯರು ಕಾಗಲದೊಳಗಿನ ಮರಾಠೀ ಸಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಹೊಂದಿದರು. ಪ್ರಾಥಮಿಕ ಶಾಲೆಯಲ್ಲಿದ್ದಾಗ ನಡೆದ ಒಂದು ಸಣ್ಣ ಸಂಗತಿಯಿಂದ ಇವರು ತಮ್ಮ ಮುಂದಿನ ಆಯುಷ್ಯದಲ್ಲಿ ತೋರಿಸಿದ ಅಸಾಧಾರಣವಾದ ಸತ್ಯಪ್ರಿಯತೆಯ ಅಂಕುರವು ಇವರ ಶರೀರದಲ್ಲಿ ತೀರ ಬಾಲ್ಯದಲ್ಲಿಯೇ ಮೊಳೆತು ಆಗಲೇ ಅದರ ಪ್ರತಿಭೆಯಿಂದ ಜನರು ಆಶ್ಚರ್ಯಗೊಳ್ಳಹತ್ತಿದ್ದರೆಂಬುದು ಗೊತ್ತಾಗುವದು. ಒಂದು ದಿನ ಇವರ ಶಿಕ್ಷಕರು ವರ್ಗದೊಳಗಿನ ಎಲ್ಲ ಹುಡುಗರಿಗೆ ಮನೆಯೊಳಗೆ ಮಾಡಿಕೊಂಡು ಬರುವದಕ್ಕಾಗಿ ಒಂದು ಗಣಿತದ ಉದಾಹರಣೆಯನ್ನು ಹೇಳಿದ್ದರು. ಮರುದಿವಸ ಶಾಲೆಗೆ ಬಂದ ಕೂಡಲೆ ಶಿಕ್ಷಕರು ಎಲ್ಲ ಹುಡುಗರ ಪಾಟಿಗಳನ್ನು ನೋಡಿದರು. ವರ್ಗದೊಳಗಿನ ಯಾವ ಹುಡುಗರೂ ಅದನ್ನು ಸರಿಯಾಗಿ ಮಾಡಿದ್ದಿಲ್ಲ. ಗೋಪಾಳರಾಯರೊಬ್ಬರೇ ಸುಲಭವೂ ಸರಳವೂ ಆದ ರೀತಿಯಿಂದ ಬಿಡಿಸಿಕೊಂಡು

ಬಂದಿದ್ದರು. ಅದನ್ನು ನೋಡಿ ಶಿಕ್ಷಕರು ಉಳಿದ ಹುಡುಗರ ಎದುರಿಗೆ ಗೋಪಾಳರಾಯರನ್ನು ಚನ್ನಾಗಿ ಸ್ತುತಿಸಿ ಮೊದಲನೇ ನಂಬರಕ್ಕೆ ಕೂಡ್ರಿಸಿದರು; ಹಾಗು ಉಳಿದ ಹುಡುಗರನ್ನು ನಿಂದಿಸಹತ್ತಿದರು. ಕೂಡಲೇ ಗೋಪಾಳರಾಯರು ಬಿಕ್ಕಿ ಬಿಕ್ಕಿ ಅಳಹತ್ತಿದರು! ಇದಕ್ಕೆ ಕಾರಣವೇನು ಎಂದು ಮುಂದೆ ಶಿಕ್ಷಕರು ವಿಚಾರಿಸಲಾಗಿ ಗೋಪಾಳರಾಯರು ಆ ಉದಾಹರಣೆಯನ್ನು ತಾನು ಸ್ವತಃ ಬಿಡಿಸಿಲ್ಲವೆಂತಲೂ ಅದನ್ನು ಎರಡನೆಯವರನ್ನು ಕೇಳಿಕೊಂಡು ಮಾಡಿಕೊಂಡು ಬಂದಿರುವೆನೆಂತಲೂ ಈ ರೀತಿಯಾಗಿ ವಂಚನೆಯಿಂದ ವರ್ಗದೊಳಗಿನ ಎಲ್ಲ ಹುಡುಗರಿಗಿಂತ ಹೆಚ್ಚಿನ ಮರ್ಯಾದೆಯನ್ನು ಪಡಿಯಲಿಕ್ಕೆ ತಾನು ಇಚ್ಛಿಸುವದಿಲ್ಲವೆಂತಲೂಹೇಳಿದರು. ನೋಡಿರಿ! ಆ ಅಜ್ಞಾನ ಬಾಲಕನ ಅಸಾಧಾರಣವಾದ ಸತ್ಯಪ್ರಿಯತೆಯನ್ನು! ಹಲವು ನೈತಿಕ ಧಾರ್ಮಿಕ ಗ್ರಂಥಗಳನ್ನು ಅಭ್ಯಾಸಿಸಿ ಜನರಿಗೆ ಉಪದೇಶ ಮಾಡುವಂಥ ಸಭ್ಯಗೃಹಸ್ಥರೆನಿಸಿಕೊಂಡು, ಹೊತ್ತು ಬಂದರೆ ಅಸತ್ಯದ ತೊಳ್ಳಾಗಿ ಸುಳ್ಳಿನ ಮಾಲೆಯನ್ನೇ ರಚಿಸಲಿಕ್ಕೆ ಎಳ್ಳಷ್ಟಾದರೂ ಹಿಂಜರಿಯದಂಥ ಶಬ್ದಾಡಂಬರವನ್ನು ಮೆರೆಯಿಸುವಂಥವರ ಸತ್ಯಪ್ರಿಯತೆಯೆತ್ತ? ನಿರ್ಮಲವಾದ ಅಂತಃಕರಣದಲ್ಲಿ ನಿಸರ್ಗದೇವತೆಯು ಬಿತ್ತಿದ ಸತ್ಯಪ್ರೀತಿಯ ಬೀಜದ ಉಜ್ವಲವಾದ ಈ ಕಳಿಕೆಯೆತ್ತ?

ಮುಂದೆ ಗೋಪಾಳರಾಯರು ಸುಮಾರು ಹತ್ತು ವರುಷದವರಾದಾಗ ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ ಕೊಲ್ಹಾಪುರಕ್ಕೆ ಹೋಗಿ ಅಲ್ಲಿ ಇಂಗ್ಲಿಷನ್ನು ಕಲಿಯಲಾರಂಭಿಸಿದರು. ಮುಂದೆ ಕೆಲವು ದಿವಸಗಳಲ್ಲಿಯೇ ಇವರ ಕುಟುಂಬದ ಮೇಲೆ ಭಯಂಕರವಾದದ್ದೊಂದು ಕಷ್ಟವು ಬಂದೊದಗಿತು. ಕುಟುಂಬದ ಚಾಲಕರಾದ ಕೃಷ್ಣರಾಯರು ಬಹುಮೂತ್ರರೋಗದಿಂದ ೧೮೭೯ನೇ ಇಸ್ವಿಯಲ್ಲಿ ಮರಣ ಹೊಂದಿದರು. ಐದಾರು ಮಂದಿ ಸಣ್ಣ ಸಣ್ಣ ಮಕ್ಕಳು; ಮೇಲಾಗಿ ಮನೆತನದ ಉತ್ಪನ್ನವೂ ತಕ್ಕಷ್ಟು ಇಲ್ಲ. ಮುಂದೇನು ಗತಿ! ಸತ್ಯಭಾಮಾಬಾಯಿಯವರು ಕುಸಿಕೂತರು. ಅವರ ಮೇಲೆ ಆಕಾಶವೇ ಕಡಿದುಕೊಂಡು ಬಿದ್ದಂತಾಯಿತು. ಆಗ ಗೋಪಾಳರಾಯರು ೧೩ ವರ್ಷದವರೂ ಅವರ ಅಣ್ಣಂದಿರಾದ ಗೋವಿಂದರಾಯರು ೧೮ ವರ್ಷದವರೂ ಆಗಿದ್ದರು. ಉಳಿದ ನಾಲ್ವರು ಇನ್ನೂ ಚಿಕ್ಕವರಾಗಿದ್ದರು. ಕೃಷ್ಣರಾಯರ ತಮ್ಮಂದಿರಾದ

ಅಂತಾಜಿಯವರು ಕೊಂಕಣದೊಳಗಿನ ಮನೆಯಲ್ಲಿ ತಕ್ಕಮಟ್ಟಿಗೆ ಬಾಳು ವೆ ಮಾಡಿಕೊಂಡು ಇದ್ದರು. ಅವರು ಅಣ್ಣನ ಅಕಾಲ ಮರಣದ ವಾರ್ತೆಯನ್ನು ಕೇಳಿ ಕಾಗಲಕ್ಕೆ ಬಂದರು. ಹಾಗು ಹಿರಿಯರಾದ ಗೋವಿಂದರಾಯರ ಶಿಕ್ಷಣವನ್ನು ಅಲ್ಲಿಗೇ ನಿಲ್ಲಿಸಿ ಬಿಟ್ಟು, ಅವರಿಗೆ ಕಾಗ ಲದಲ್ಲಿ ೧೫ ರೂಪಾಯಿಯ ಒಂದು ನೌಕರಿಯನ್ನು ಕೊಡಿಸಿದರು. ಮತ್ತು ಸತ್ಯಭಾಮಾಬಾಯಿಯವರನ್ನೂ ಉಳಿದ ಚಿಕ್ಕ ಮಕ್ಕಳನ್ನೂ ಸಂಗಡ ಕರೆ ದುಕೊಂಡು ಕೊಂಕಣಕ್ಕೆ ಹೋದರು. ಗೋವಿಂದರಾಯರು ತಮ್ಮ ಹದಿ ನೈದು ರೂಪಾಯಿಗಳಲ್ಲಿ ಸಂಸಾರವನ್ನು ಹಾಗೂ ಹೀಗೂ ಸಾಗಿಸಿಕೊಂಡು ಕೊಲ್ಹಾಪುರದಲ್ಲಿದ್ದ ತಮ್ಮನಿಗೆ ತಿಂಗಳಿಗೆ ೮ ರೂಪಾಯಿಗಳನ್ನು ಕಳುಹಿ ಸಿಕೊಡುತ್ತಿದ್ದರು. ಗೋಪಾಳರಾಯರಾದರೂ ತಮ್ಮ ಮನೆತನದ ಬಡಸ್ಥಿ ತಿಯನ್ನು ಚನ್ನಾಗಿ ಅರಿತುಕೊಂಡು ಅತ್ಯಂತ ಮಿತವ್ಯಯದಿಂದಲೂ ಹಿತ ವಾದ ಆಚರಣೆಯಿಂದಲೂ ನಡೆಯುತ್ತಿದ್ದರು. ಬಂಧುಪ್ರೇಮದ ಅಸಾಧಾ ರಣವಾದ ಉದಾಹರಣೆಯನ್ನು ನಾವು ಈ ಕುಟುಂಬದಲ್ಲಿ ನೋಡಬಹು ದಾಗಿದೆ. ಗೋಪಾಳರಾಯರು ೧೮೮೧ನೆ ಇಸ್ವಿಯಲ್ಲಿ ಮೆಟ್ರಿಕ್ಯುಲೇ ಶನ ಪರಿಕ್ಷೆಯಲ್ಲಿ ಉತ್ತೀರ್ಣರಾದರು. ಆಗ ಅವರಿಗೆ ೧೫ ವರುಷಗ ಳಾಗಿದ್ದವು.

ಈ ರೀತಿಯಾಗಿ ಗೋಪಾಳರಾಯರು ತಮ್ಮ ಅಣ್ಣನ ಆಶ್ರಯ ದಿಂದ ಕೊಲ್ಹಾಪುರದಲ್ಲಿ ಇಂಗ್ಲಿಷ ಕಲಿಯುತ್ತಿದ್ದಾಗ ನಡೆದ ಕೆಲವು ವಿಶೇಷ ಸಂಗತಿಗಳಿಂದ ಅವರೊಳಗಿನ ಸ್ವಾಭಿಮಾನ, ಮಿತವ್ಯಯ, ಮನಸ್ಸಿನ ಸ್ಥಿರತೆ, ಪಾಪಭೀರುತೆ ಮುಂತಾದ ಅನೇಕ ಸದ್ಗುಣಗಳು ಚನ್ನಾಗಿ ನಿದರ್ಶನಕ್ಕೆ ಬಂದವು. ಈ ಬಗ್ಗೆ ಹಲವು ಆಖ್ಯಾಯಿಕೆಗಳಿ ರುವವು.

ಮುಂದೆ ೧೮೮೦ನೇ ಇಸ್ವಿಯ ಜಾನೇವರೀ ತಿಂಗಳಿನಲ್ಲಿ ಗೋಖಲೆ ಯವರು ಕೊಲ್ಹಾಪುರದೊಳಗಿನ ರಾಜಾರಾಮ ಕಾಲೇಜವನ್ನು ಸೇರಿ ವಿಶ್ವವಿದ್ಯಾಲಯದ ಮೊದಲನೇ ವರುಷದ ಅಭ್ಯಾಸವನ್ನು ಮುಗಿಸಿದರು. ಮುಂದಿನ ಎರಡನೇ ಮೂರನೇ ವರುಷಗಳ ಅಭ್ಯಾಸವನ್ನು ಕ್ರಮವಾಗಿ ಪುಣೆಯೊಳಗಿನ ಡೆಕ್ಕನ್ ಕಾಲೇಜದಲ್ಲಿಯೂ ಮುಂಬಯಿಯೊಳಗಿನ ಎಲ್‌ಫಿನ್‌ಸ್ಟನ್ ಕಾಲೇಜದಲ್ಲಿಯೂ ಮಾಡಿದರು. ಹಾಗು ತಮ್ಮ

ವಯಸ್ಸಿನ ೧೮ನೆಯ ವರುಷದಲ್ಲಿ ಬೀ. ಎ. ಪರೀಕ್ಷೆಯಲ್ಲಿ ಪಾಸಾಗಿ ಎರಡನೆ ವರ್ಗದಲ್ಲಿ ಬಂದರು. ಇವರು ಗಣಿತವನ್ನು ತಮ್ಮ ಸ್ವೇಚ್ಛಾ ವಿಷಯವಾಗಿ ಆರಿಸಿಕೊಂಡಿದ್ದರು. ಕಾಲೇಜದಲ್ಲಿದ್ದಾಗ ಇವರು ಅಪ್ರತಿಮವಾದ ಬುದ್ಧಿಕೌಶಲ್ಯವನ್ನೇನೂ ತೋರಿಸಲಿಲ್ಲ. ವಿಷಯಗಳನ್ನು ಚಟ್ಟನೆ ಗ್ರಹಿಸುವಂಥ ಹಾಗು ಅದನ್ನು ಸ್ಥಿರವಾಗಿಟ್ಟುಕೊಳ್ಳುವಂಥ ಅದ್ವಿತೀಯವಾದ ಬುದ್ಧಿ ಸಾಮರ್ಥ್ಯವೂ ಇವರಲ್ಲಿದ್ದಂತೆ ಕಂಡು ಬರಲಿಲ್ಲ. ಗೋಪಾಳರಾಯರು ಅತ್ಯುಚ್ಚತರದವರೂ, ಅಂಥ ಕಡಿಮೆತರದವರೂ ಅಲ್ಲದಂಥ ಒಬ್ಬ ಸಾಮಾನ್ಯ ವರ್ಗದ ವಿದ್ಯಾರ್ಥಿಯಾಗಿದ್ದರು. ಆದರೆ ಅಸಾಧಾರಣವಾದ ಪಾಠಶಕ್ತಿ, ಸತತ ಪರಿಶ್ರಮಮಾಡೋಣ, ನಿಯಮಿತತನ, ಮಹತ್ವಾಕಾಂಕ್ಷೆ ಮುಂತಾದ ಸದ್ಗುಣಗಳಲ್ಲಿ ಮಾತ್ರ ಇವರು ಹೆಸರಾಗಿದ್ದರು. ಇವರು ಆಯಾ ವರ್ಷಗಳಲ್ಲಿ ಅಭ್ಯಾಸಕ್ಕಾಗಿ ಗೊತ್ತುಪಡಿಸಿದ ಪುಸ್ತಕಗಳನ್ನು ಅಧ್ಯಾಯ ಅಧ್ಯಾಯಗಳಂತೆ ಪಾಠ ಅನ್ನುತ್ತಿದ್ದರಂತೆ! ನಮಗೆ ದೇವರು ಅಂಥ ತೈಲಬುದ್ಧಿಯನ್ನು ಕೊಟ್ಟಿಲ್ಲವಲ್ಲಾ! ಎಂದು ದೇವರ ಮೇಲೆ ಹೊರೆಯನ್ನು ಚಲ್ಲುವ ವಿದ್ಯಾರ್ಥಿಗಳು ಗೋಪಾಳರಾಯರ ಈ ಗುಣಗಳನ್ನು ಸ್ಮರಿಸಿಕೊಳ್ಳತಕ್ಕದ್ದು. ಗೋಪಾಳರಾಯರು ಕಾಲೇಜದಲ್ಲಿದ್ದಾಗ ಆಗಿನ ವಾತಾವರಣಕ್ಕೆ ತಕ್ಕಂತೆ ಅವರಲ್ಲಿ ದೇಶಸೇವೆಯ ಸಂಬಂಧದ ಉತ್ಕಟವಾದ ಸದಿಚ್ಛೆಯು ಉಂಟಾಗಿತ್ತು. ಆದರೆ ಉಳಿದ ಅನೇಕ ವಿದ್ಯಾರ್ಥಿಗಳಂತೆ ತಮ್ಮ ಅಭ್ಯಾಸಕ್ರಮವನ್ನು ದುರ್ಲಕ್ಷಿಸಿ ದೇಶ ದೇವಕರ ಸೋಗು ಹಾಕಿಕೊಂಡು ಕುಣಿದಾಡುವ ಭರಕ್ಕೆ ಇವರು ಎಂದೂ ಬೀಳಲಿಲ್ಲ.

ಬೀ. ಎ. ಪರೀಕ್ಷೆಯಲ್ಲಿ ಪಾಸಾದ ಬಳಿಕ ಗೋಪಾಳರಾಯರು ಮುಂದೆ ಯಾವ ಉದ್ಯೋಗವನ್ನು ಕೈಕೊಳ್ಳಬೇಕೆಂಬ ಬಗ್ಗೆ ಒಳ್ಳೇ ವಿಚಾರ ಮಾಡಬೇಕಾಯಿತು. ಅವರು ವಿಲಾಯತಿಗೆ ಹೋಗಿ ಆಯ್. ಸಿ. ಎಸ್. ಪರೀಕ್ಷೆಯ ಸಲುವಾಗಿ ಅಭ್ಯಾಸ ಮಾಡಬೇಕೆಂದು ಒಮ್ಮೆ ಆಲೋಚಿಸಿದರು. ಅವರಿಗೆ ವಯಸ್ಸಿನ ಅನುಕೂಲತೆಯು ಚನ್ನಾಗಿ ಇತ್ತು. ಆದರೆ ಹಣದ ಅನುಕೂಲತೆಯು ಇರದೆ ಇದ್ದದರಿಂದ ಆ ವಿಚಾರವನ್ನು ಬಿಡಬೇಕಾಯಿತು. ಮತ್ತೊಮ್ಮೆ ಇಂಜನೀಯರಿಂಗ ಕಾಲೇಜಕ್ಕೆ ಹೋಗಿ ಎಲ್. ಸಿ ಇ. ಪರೀಕ್ಷೆಯ ಅಭ್ಯಾಸ ಮಾಡಬೇಕೆಂದು

ಆಲೋಚನೆ ಮಾಡಿ ಕೆಲವು ದಿವಸಗಳವರೆಗೆ ಅಭ್ಯಾಸವನ್ನು ಸಹ ಮಾಡಿದ್ದರು. ಮುಂದೆ ಆ ಮಾರ್ಗವನ್ನು ಬಿಡಬೇಕಾಯಿತು. ಕೊನೆಗೆ ಅವರು ಪುಣೆಯೊಳಗಿನ ನ್ಯೂ ಇಂಗ್ಲಿಷ ಸ್ಕೂಲಿನಲ್ಲಿ ಶಿಕ್ಷಕರ ಕಾರ್ಯವನ್ನು ಕೈಕೊಂಡರು; ಹಾಗು ಅದೇ ಕಾಲಕ್ಕೆ ಎಲ್. ಎಲ್. ಬೀ. ಪರೀಕ್ಷೆಯ ಸಲುವಾಗಿ ಕಾಯದೆಯ ಅಭ್ಯಾಸವನ್ನೂ ನಡೆಸಿದ್ದರು. ಮೊದ ಮೊದಲು ರೂಢಿಯಿಲ್ಲದ ಮೂಲಕ ಅವರ ಶಿಕ್ಷಣದ ಕಾರ್ಯವು ತಕ್ಕಷ್ಟು ಸಮಾಧಾನಕರವಾಗಿ ನಡೆಯಲಿಲ್ಲವಂತೆ. ಈ ವಿಚಾರವು ಅವರಿಗೆ ಗೊತ್ತಾಗಲು ಅವರು ತಾವು ಕಲಿಸಬೇಕಾಗುವ ವಿಷಯವನ್ನು ವರ್ಗಕ್ಕೆ ಹೋಗುವದಕ್ಕಿಂತ ಮೊದಲು ಉತ್ತಮ ರೀತಿಯಿಂದ ಸಿದ್ಧ ಮಾಡಿಕೊಂಡು ಅವಶ್ಯವಿದ್ದ ಭಾಗಗಳನ್ನು ಅಕ್ಷರಶಃ ಪಾಠಮಾಡಿಕೊಂಡು ಹೋಗಹತ್ತಿದರು. ಅದರಿಂದ ಅವರಿಗೆ ವರ್ಗದಲ್ಲಿ ಕಲಿಸಲಿಕ್ಕೆ ಹತ್ತಿದಾಗ ಪುಸ್ತಕವನ್ನು ನೋಡುವ ಪ್ರಸಂಗವೇ ಬರುತ್ತಿದ್ದಿಲ್ಲ. ಈ ರೀತಿಯಾದ ಸತತ ಪರಿಶ್ರಮದಿಂದಲೂ ದೃಢನಿಶ್ಚಯದಿಂದಲೂ ಉತ್ಸಾಹದಿಂದಲೂ ಗೋಪಾಳರಾಯರು ಮುಂದೆ ತುಸು ದಿನಗಳಲ್ಲಿಯೇ ಶಿಕ್ಷಣದ ಕಾರ್ಯದಲ್ಲಿ ಸಂಪೂರ್ಣ ಯಶವನ್ನು ಪಡೆದರು. ತಕ್ಕಷ್ಟು ಪೂರ್ವಸಿದ್ಧತೆಯಿಲ್ಲದೆ ವರ್ಗಕ್ಕೆ ಹೋಗಿ ಕಲಿಸಹತ್ತಿದಾಗ ಸರಿಯಾಗಿ ಮಾತು ಸಹ ಹೊರಡದೆ ಗುಣುಗುಣು ಮಾಡುವ ತರುಣ ಶಿಕ್ಷಕರು ಈ ಮಾತನ್ನು ಲಕ್ಷದಲ್ಲಿಡುವಂತಿದೆ

೧೮೮೫ನೆಯ ಇಸ್ವಿಯಲ್ಲಿ ಗೋಪಾಳರಾಯರ ಮನಸ್ಸಿನಲ್ಲಿ ಇಂಗ್ಲಿಷ ಭಾಷೆಯನ್ನು ಚನ್ನಾಗಿ ಕಲಿತು ಹೆಸರು ಪಡೆಯಬೇಕೆಂಬ ಅಭಿಲಾಷೆಯು ಹುಟ್ಟಿತು. ಆಗ ಅವರು ಆ ಭಾಷೆಯೊಳಗಿನ ಉತ್ತಮೋತ್ತಮ ಗ್ರಂಥಗಳನ್ನೂ "ಬರ್ಕ" ಮೊದಲಾದವರ ಉಚ್ಚತರದ ಭಾಷಣಗಳನ್ನೂ ಆರಿಸಿಕೊಂಡು ಪಾಠಮಾಡಹತ್ತಿದರು; ಹಾಗು ಆ ವಿಷಯದಲ್ಲಿ ಇನ್ನು ಅನೇಕತರದ ಪರಿಶ್ರಮಗಳನ್ನು ಮಾಡಹತ್ತಿದರು. ಅವರು ಕೆಲಕೆಲವು ಉದ್ಗ್ರಂಥಗಳನ್ನು ಆರಂಭದಿಂದ ಕೊನೆಯವರೆಗೆ ಅಕ್ಷರಶಃ ಪಾಠ ಅನ್ನುತ್ತಿದ್ದರಂತೆ!

ಇದೇ ಸಮಯದಲ್ಲಿ ಗೋಪಾಳರಾಯರ ಮನಸ್ಸಿನಲ್ಲಿ ಸ್ವದೇಶಹಿತದ ಸಂಬಂಧದ ಕೆಲವು ಸದ್ಭಾವನೆಗಳು ತಲೆದೋರಿದವು. ಈ ಕಾಲ

ಕ್ಕೆ ಮಹಾರಾಷ್ಟ್ರ ಪ್ರಾಂತದೊಳಗಿನ ಜನರಲ್ಲಿ ಒಂದು ಪ್ರಕಾರದ ಉಚ್ಚತರದ ಜಾಗ್ರತೆಯು ಉಂಟಾಗಿತ್ತು. ಟಿಳಕ, ಆಗರಕರ, ಆಪಟೆ, ನಾಮಜೋಶಿ, ಧಾರಪ, ಗೋಳೆ ಎಂಬ ಡೆಕ್ಕನ್ ಎಜ್ಯುಕೇಶನ್ ಸೊಸಾಯಿಟಿಯ ಆಜೀವ ಸಭಾಸದರು ಸ್ವದೇಶದ ಉನ್ನತಿಗಾಗಿಯೂ ದೇಶ ಬಾಂಧವರಿಗೆ ವಿದ್ಯಾದಾನ ಮಾಡುವದಕ್ಕಾಗಿಯೂ ಆತ್ಮಸುಖವನ್ನು ತೃಣಕ್ಕೆ ಬಗೆದು ಹಗಲಿರುಳು ಯತ್ನಮಾಡುವದನ್ನು ನೋಡಿ ಗೋಪಾಳರಾಯರ ಅಂತಃಕರಣದಲ್ಲಿಯೂ ಒಂದು ತರದ ಜಾಗೃತಿಯುಂಟಾಯಿತು. ಹಾಗು ಆ ಮಹನೀಯರ ಮಾರ್ಗವನ್ನು ಅನುಸರಿಸಿ ಸ್ವಾರ್ಥವನ್ನು ಬದಿಗೊತ್ತಿ ಡೆ. ಎ. ಸೊಸಾಯಿಟಿಯ ಆಜೀವ ಸಭಾಸದರಾಗಿ ವಿದ್ಯಾಪ್ರಸಾರದ ಪವಿತ್ರವಾದ ಕರ್ತವ್ಯವನ್ನು ಕೈಕೊಂಡು ಲೋಕ ಸೇವೆಯನ್ನು ಮಾಡಬೇಕೆಂಬ ಉದಾತ್ತ ಭಾವನೆಯು ಅವರ ಹೃದಯವನ್ನು ಸೇರಿತು. ಮತ್ತು ಆ ಭಾವನೆಯು ಲೋಕಮಾನ್ಯರಾದ ಆಗರಕರರವರ ಸ್ಫೂರ್ತಿದಾಯಕವಾದ ಉಪದೇಶದಿಂದ ಮತ್ತಷ್ಟು ಉಜ್ವಲ ಸ್ವರೂಪವನ್ನು ಹೊಂದಿತು. ಆ ಸದ್ಭಾವನೆಯಿಂದ, ಹಣವನ್ನು ಸಂಪಾದಿಸಿ ನಾಲ್ಕು ಜನರಲ್ಲಿ ಮರ್ಯಾದೆಯನ್ನೂ ಸರಕಾರದಿಂದ ದೊಡ್ಡ ಅಧಿಕಾರವನ್ನೂ ಪಡೆಯಬೇಕೆಂಬ ಅವರ ಮನಸ್ಸಿನೊಳಗಿನ ಮೊದಲಿನ ಮಹತ್ವಾಕಾಂಕ್ಷೆಯು ಅಡಗಿಹೋಯಿತು. ಗೋಪಾಳರಾಯರು ಡೆ. ಎ. ಸೊಸಾಯಿಟಿಯ ಆಜೀವ ಸಭಾಸದರಾಗಿಬಿಟ್ಟರು! ಈ ರೀತಿಯಾಗಿ ಕಾಲಮಾಹಾತ್ಮ್ಯದಿಂದಲೂ ಕೆಲವಂಶದಿಂದ ತಾತ್ಕಾಲಿಕ ಸ್ಫೂರ್ತಿಯಿಂದಲೂ ಪೂಜ್ಯಪುರುಷರ ಸಹವಾಸದಿಂದಲೂ ಲೋಕಹಿತದ ಕಾರ್ಯಕ್ಕಾಗಿ ಗೋಪಾಳರಾಯರು ತಮ್ಮ ಮುಂದಿನ ಆಯುಷ್ಯವನ್ನೆಲ್ಲ ಧಾರೆಯೆರೆದು ಆ ಕಾರ್ಯವನ್ನು ಆರಂಭಿಸಿದರು. ಇಲ್ಲಿಂದ ಮುಂದೆ ಅವರ ಸಾರ್ವಜನಿಕ ಚರಿತ್ರಕ್ಕೆ ಆರಂಭವಾಗುವದು. ೧೮೮೮-೮೭ ನೆಯ ಇಸ್ವಿಯಲ್ಲಿ ಗೋಪಾಳರಾಯರು ಒಂದು ಅಂಕಗಣಿತವನ್ನು ಇಂಗ್ಲಿಷಿನಲ್ಲಿ ಬರೆದರು. ಈ ಅಂಕಗಣಿತದ ಕನ್ನಡಭಾಷಾಂತರವನ್ನು ಈಗ ಸಾಮಾನ್ಯವಾಗಿ ಕರ್ನಾಟಕದೊಳಗಿನ ಮೇಲಿನ ಇಯತ್ತೆಯನ್ನು ಕಲಿಯುವ ಪ್ರತಿಯೊಬ್ಬ ವಿದ್ಯಾರ್ಥಿಯ ಕೈಯಲ್ಲಿಯೂ ನೋಡಬಹುದಾಗಿದೆ. ಇದು ಮರಾಠಿ ಮೊದಲಾದ ಭಾಷೆಗಳಲ್ಲಿಯೂ ಅದರ ಭಾಷಾಂತರವಾಗಿ

ಆಲೋಚನೆ ಮಾಡಿ ಕೆಲವು ದಿವಸಗಳವರೆಗೆ ಅಭ್ಯಾಸವನ್ನು ಸಹ ಮಾಡಿದ್ದರು. ಮುಂದೆ ಆ ಮಾರ್ಗವನ್ನು ಬಿಡಬೇಕಾಯಿತು. ಕೊನೆಗೆ ಅವರು ಪುಣೆಯೊಳಗಿನ ನ್ಯೂ ಇಂಗ್ಲಿಷ ಸ್ಕೂಲಿನಲ್ಲಿ ಶಿಕ್ಷಕರ ಕಾರ್ಯವನ್ನು ಕೈಕೊಂಡರು; ಹಾಗು ಅದೇ ಕಾಲಕ್ಕೆ ಎಲ್. ಎಲ್. ಬೀ. ಪರೀಕ್ಷೆಯ ಸಲುವಾಗಿ ಕಾಯದೆಯ ಅಭ್ಯಾಸವನ್ನೂ ನಡೆಸಿದ್ದರು. ಮೊದ ಮೊದಲು ರೂಢಿಯಿಲ್ಲದ ಮೂಲಕ ಅವರ ಶಿಕ್ಷಣದ ಕಾರ್ಯವು ತಕ್ಕಷ್ಟು ಸಮಾಧಾನಕರವಾಗಿ ನಡೆಯಲಿಲ್ಲವಂತೆ. ಈ ವಿಚಾರವು ಅವರಿಗೆ ಗೊತ್ತಾಗಲು ಅವರು ತಾವು ಕಲಿಸಬೇಕಾಗುವ ವಿಷಯವನ್ನು ವರ್ಗಕ್ಕೆ ಹೋಗುವದಕ್ಕಿಂತ ಮೊದಲು ಉತ್ತಮ ರೀತಿಯಿಂದ ಸಿದ್ಧ ಮಾಡಿಕೊಂಡು ಅವಶ್ಯವಿದ್ದ ಭಾಗಗಳನ್ನು ಅಕ್ಷರಶಃ ಪಾಠಮಾಡಿಕೊಂಡು ಹೋಗಹತ್ತಿದರು. ಅದರಿಂದ ಅವರಿಗೆ ವರ್ಗದಲ್ಲಿ ಕಲಿಸಲಿಕ್ಕೆ ಹತ್ತಿದಾಗ ಪುಸ್ತಕವನ್ನು ನೋಡುವ ಪ್ರಸಂಗವೇ ಬರುತ್ತಿದ್ದಿಲ್ಲ. ಈ ರೀತಿಯಾದ ಸತತ ಪರಿಶ್ರಮದಿಂದಲೂ ದೃಢನಿಶ್ಚಯದಿಂದಲೂ ಉತ್ಸಾಹದಿಂದಲೂ ಗೋಪಾಳರಾಯರು ಮುಂದೆ ತುಸು ದಿನಗಳಲ್ಲಿಯೇ ಶಿಕ್ಷಣದ ಕಾರ್ಯದಲ್ಲಿ ಸಂಪೂರ್ಣ ಯಶವನ್ನು ಪಡೆದರು. ತಕ್ಕಷ್ಟು ಪೂರ್ವಸಿದ್ಧತೆಯಿಲ್ಲದೆ ವರ್ಗಕ್ಕೆ ಹೋಗಿ ಕಲಿಸಹತ್ತಿದಾಗ ಸರಿಯಾಗಿ ಮಾತು ಸಹ ಹೊರಡದೆ ಗುಣುಗುಣು ಮಾಡುವ ತರುಣ ಶಿಕ್ಷಕರು ಈ ಮಾತನ್ನು ಲಕ್ಷದಲ್ಲಿಡುವಂತಿದೆ

೧೮೮೫ನೆಯ ಇಸ್ವಿಯಲ್ಲಿ ಗೋಪಾಳರಾಯರ ಮನಸ್ಸಿನಲ್ಲಿ ಇಂಗ್ಲಿಷಭಾಷೆಯನ್ನು ಚನ್ನಾಗಿ ಕಲಿತು ಹೆಸರು ಪಡೆಯಬೇಕೆಂಬ ಅಭಿಲಾಷೆಯು ಹುಟ್ಟಿತು. ಆಗ ಅವರು ಆ ಭಾಷೆಯೊಳಗಿನ ಉತ್ತಮೋತ್ತಮ ಗ್ರಂಥಗಳನ್ನೂ "ಬರ್ಕ" ಮೊದಲಾದವರ ಉಚ್ಚತರದ ಭಾಷಣಗಳನ್ನೂ ಆರಿಸಿಕೊಂಡು ಪಾಠಮಾಡಹತ್ತಿದರು; ಹಾಗು ಆ ವಿಷಯದಲ್ಲಿ ಇನ್ನೂ ಅನೇಕತರದ ಪರಿಶ್ರಮಗಳನ್ನು ಮಾಡಹತ್ತಿದರು. ಅವರು ಕೆಲಕೆಲವು ಉದ್ಗ್ರಂಥಗಳನ್ನು ಆರಂಭದಿಂದ ಕೊನೆಯವರೆಗೆ ಅಕ್ಷರಶಃ ಪಾಠ ಅನ್ನುತ್ತಿದ್ದರಂತೆ!

ಇದೇ ಸಮಯದಲ್ಲಿ ಗೋಪಾಳರಾಯರ ಮನಸ್ಸಿನಲ್ಲಿ ಸ್ವದೇಶಹಿತದ ಸಂಬಂಧದ ಕೆಲವು ಸದ್ಭಾವನೆಗಳು ತಲೆದೋರಿದವು. ಈ ಕಾಲ

ಕ್ಕೆ ಮಹಾರಾಷ್ಟ್ರ ಪ್ರಾಂತದೊಳಗಿನ ಜನರಲ್ಲಿ ಒಂದು ಪ್ರಕಾರದ ಉಚ್ಚತರದ ಜಾಗ್ರುತೆಯು ಉಂಟಾಗಿತ್ತು. ಟಿಳಕ, ಆಗರಕರ, ಆಪಟೆ, ನಾಮಜೋಶಿ, ಧಾರಪ, ಗೋಳೆ ಎಂಬ ಡೆಕ್ಕನ್ ಎಜ್ಯುಕೇಶನ್ ಸೊಸಾಯಿಟಿಯ ಆಜೀವ ಸಭಾಸದರು ಸ್ವದೇಶದ ಉನ್ನತಿಗಾಗಿಯೂ ದೇಶ ಬಾಂಧವರಿಗೆ ವಿದ್ಯಾದಾನ ಮಾಡುವದಕ್ಕಾಗಿಯೂ ಆತ್ಮಸುಖವನ್ನು ತೃಣಕ್ಕೆ ಬಗೆದು ಹಗಲಿರುಳು ಯತ್ನಮಾಡುವದನ್ನು ನೋಡಿ ಗೋಪಾಳರಾಯರ ಅಂತಃಕರಣದಲ್ಲಿಯೂ ಒಂದು ತರದ ಜಾಗೃತಿಯುಂಟಾಯಿತು. ಹಾಗು ಆ ಮಹನೀಯರ ಮಾರ್ಗವನ್ನು ಅನುಸರಿಸಿ ಸ್ವಾರ್ಥವನ್ನು ಬದಿಗೊತ್ತಿ ಡೆ. ಎ. ಸೊಸಾಯಿಟಿಯ ಆಜೀವ ಸಭಾಸದರಾಗಿ ವಿದ್ಯಾಪ್ರಸಾರದ ಪವಿತ್ರವಾದ ಕರ್ತವ್ಯವನ್ನು ಕೈಕೊಂಡು ಲೋಕಸೇವೆಯನ್ನು ಮಾಡಬೇಕೆಂಬ ಉದಾತ್ತ ಭಾವನೆಯು ಅವರ ಹೃದಯವನ್ನು ಸೇರಿತು. ಮತ್ತು ಆ ಭಾವನೆಯು ಲೋಕಮಾನ್ಯರಾದ ಆಗರಕರವರ ಸ್ಫೂರ್ತಿದಾಯಕವಾದ ಉಪದೇಶದಿಂದ ಮತ್ತಷ್ಟು ಉಜ್ವಲಸ್ವರೂಪವನ್ನು ಹೊಂದಿತು. ಆ ಸದ್ಭಾವನೆಯಿಂದ, ಹಣವನ್ನು ಸಂಪಾದಿಸಿ ನಾಲ್ಕು ಜನರಲ್ಲಿ ಮರ್ಯಾದೆಯನ್ನೂ ಸರಕಾರದಿಂದ ದೊಡ್ಡಅಧಿಕಾರವನ್ನೂ ಪಡೆಯಬೇಕೆಂಬ ಅವರ ಮನಸ್ಸಿನೊಳಗಿನ ಮೊದಲಿನ ಮಹತ್ವಾಕಾಂಕ್ಷೆಯು ಅಡಗಿಹೋಯಿತು. ಗೋಪಾಳರಾಯರು ಡೆ. ಎ. ಸೊಸಾಯಿಟಿಯ ಆಜೀವ ಸಭಾಸದರಾಗಿಬಿಟ್ಟರು! ಈ ರೀತಿಯಾಗಿ ಕಾಲಮಾಹಾತ್ಮ್ಯದಿಂದಲೂ ಕೆಲವಂಶದಿಂದ ತಾತ್ಕಾಲಿಕ ಸ್ಫೂರ್ತಿಯಿಂದ ಆ ಪೂಜ್ಯಪುರುಷರ ಸಹವಾಸದಿಂದಲೂ ಲೋಕಹಿತದ ಕಾರ್ಯಕ್ಕಾಗಿ ಗೋಪಾಳರಾಯರು ತಮ್ಮ ಮುಂದಿನ ಆಯುಷ್ಯವನ್ನೆಲ್ಲ ಧಾರೆಯೆರೆದು ಆ ಕಾರ್ಯವನ್ನು ಆರಂಭಿಸಿದರು. ಇಲ್ಲಿಂದ ಮುಂದೆ ಅವರ ಸಾರ್ವಜನಿಕ ಚರಿತ್ರಕ್ಕೆ ಆರಂಭವಾಗುವದು. ೧೮೮೬-೮೭ ನೆಯ ಇಸ್ವಿಯಲ್ಲಿ ಗೋಪಾಳರಾಯರು ಒಂದು ಅಂಕಗಣಿತವನ್ನು ಇಂಗ್ಲಿಷಿನಲ್ಲಿ ಬರೆದರು. ಈ ಅಂಕಗಣಿತದ ಕನ್ನಡಭಾಷಾಂತರವನ್ನು ಈಗ ಸಾಮಾನ್ಯವಾಗಿ ಕರ್ನಾಟಕದೊಳಗಿನ ಮೇಲಿನ ಇಯತ್ತೆಯನ್ನು ಕಲಿಯುವ ಹಿರಿಯ ವಿದ್ಯಾರ್ಥಿಯ ಕೈಯಲ್ಲಿಯೂ ನೋಡಬಹುದಾಗಿದೆ. ಇದರ ಮರಾಠಿ ಮೊದಲಾದ ಭಾಷೆಗಳಲ್ಲಿಯೂ ಅದರ ಭಾಷಾಂತರವಾಗಿ

ರುವದು. ಇದರಿಂದ ಆ ಅಂಕಗಣಿತದ ಯೋಗ್ಯತೆಯೂ ಉಪಯುಕ್ತತೆಯೂ ವ್ಯಕ್ತವಾಗುವವು.

ಇದೇ ಸುಮಾರಿಗೆ, ಸದ್ಯಕ್ಕೆ ಪುಣೆಯಲ್ಲಿ ಪ್ರಸಿದ್ಧವಾಗಿರುವ "ಫರ್ಗ್ಯೂಸನ್ನ ಕಾಲೇಜ"ವೆಂಬ ಉಚ್ಚ ವಿದ್ಯಾವಿಷಯಕ ಸಂಸ್ಥೆಯು ಡೆ. ಎ. ಸೊಸಾಯಿಟಿಯುವರಿಂದ ಸ್ಥಾಪಿತವಾಯಿತು. ಆ ಸಂಸ್ಥೆಯಲ್ಲಿ ಗೋಪಾಳರಾಯರು ಸೊಸಾಯಿಟಿಯು ಉಳಿದ ಕೆಲವರು ಸಭಾಸದರಂತೆ ಶಿಕ್ಷಣದ ಕಾರ್ಯವನ್ನು ವಹಿಸಿದರು. ಇಷ್ಟು ದಿವಸ ಹಾಯಸ್ಕೂಲಿನ ಶಿಕ್ಷಕರಾಗಿದ್ದ ಗೋಪಾಳರಾಯರು ಈಗ ಕಾಲೇಜದ ಪ್ರೊಫೇಸರರಾದರು. ಪ್ರಾರಂಭದಲ್ಲಿ ಇವರು ಇಂಗ್ಲಿಷ ಭಾಷೆಯನ್ನೂ ಅಂಕಗಣಿತವನ್ನೂ ಕಲಿಸುತ್ತಿದ್ದರು. ಆದರೆ ಕಾಲೇಜದ ಅವರ ಇಪ್ಪತ್ತು ವರ್ಷದ ನೌಕರಿಯಲ್ಲಿ ಇತಿಹಾಸ ಅರ್ಥಶಾಸ್ತ್ರ ಇವುಗಳನ್ನೇ ಹೆಚ್ಚಾಗಿ ಕಲಿಸುತ್ತಿದ್ದರು. ಇವೇ ಅವರ ಪ್ರೀತಿಯ ವಿಷಯಗಳಾಗಿದ್ದವು. ಈ ವಿಷಯಗಳನ್ನು ಅವರು ಮನಮುಟ್ಟಿ ಅಭ್ಯಾಸ ಮಾಡಿದ್ದರು. ಅದರಿಂದ ಅವರ ವಿದ್ಯಾರ್ಥಿಗಳಿಗೆ ಒಳ್ಳೇ ಪ್ರಯೋಜನವಾಗುತ್ತಿತ್ತು. ಹಾಗು ಅದರಿಂದ ಅವರ ದೇಶಸೇವೆಯ ಕಾರ್ಯವೆಂಬ ಉದಾತ್ತವಾದ ಧ್ಯೇಯದ ಸಾಧನೆಗೂ ಬಹು ಮಟ್ಟಿಗೆ ಸಹಾಯುವಾಯಿತು.

ಮುಂದೆ ಕೆಲವು ದಿನಸಗಳವರೆಗೆ ಕೆಲಸವು ಸುರಳೀತವಾಗಿ ನಡೆಯಿತು. ಆದರೆ ೧೮೮೬ರ ಸುಮಾರಕ್ಕೆ ಡೆ. ಎ. ಸೊಸಾಯಿಟಿಯೊಳಗಿನ ಸಭಾಸದರಲ್ಲಿ ಬೇರೆ ಬೇರೆ ಕಾರಣಗಳಿಂದ ಎರಡು ಪಕ್ಷಗಳುಂಟಾದವು. ಹಾಗೂ ಅದರ ಕೆಲಸವು ಸರಿಯಾಗಿ ನಡೆಯದಂತಾಯಿತು. ಇದಲ್ಲದೆ ಕಾಲೇಜದ ಸಂಸ್ಥೆಯು ದಿನ ದಿನಕ್ಕೆ ಬೆಳೆಯುತ್ತ ನಡೆದದ್ದರಿಂದ ಹಣದ ಕೊರತೆಯು ಹೆಚ್ಚುತ್ತ ನಡೆಯಿತು. ಇಲ್ಲಿಯವರೆಗೆ ಸಂಸ್ಥೆಯ ಕೆಲಸಗಳನ್ನು ಮಾಡುತ್ತಿದ್ದ ಕೆಲವರಲ್ಲಿ ವೈಮನಸ್ಸುಂಟಾದದ್ದರಿಂದ ಅವರು ಅದರ ಸಂಬಂಧವನ್ನೇ ಬಿಟ್ಟು ಬಿಟ್ಟರು. ಉಳಿದ ಕೆಲವರು ಮನಃಪೂರ್ವಕವಾಗಿ ಕೆಲಸ ಮಾಡದಂತಾದರು. ಅದರಿಂದ ಗೋಪಾಳರಾಯರೇ ಈ ಎಲ್ಲ ಕೆಲಸಗಳನ್ನು ಮಾಡಬೇಕಾಯಿತು. ಸೊಸಾಯಿಟಿಯು ಸೇಕ್ರೆಟರಿಯ ಕೆಲಸವನ್ನೇ ಇವರು ಮಾಡಬೇಕಾಯಿತೆಂದರೂ ಅಡ್ಡಿಯಿಲ್ಲ. ಕಾಲೇಜದ ಸಲುವಾಗಿ ಹಣ ಕೂಡಿಸುವದಕ್ಕಾಗಿ ಸೂಟಿಯು ದಿವಸಗಳಲ್ಲಿ ಇವರು ಇಡೀ ಮುಂ

ಬಯಿ ಇಲಾಖೆಯಲ್ಲಿ ಸಂಚಾರ ಮಾಡಬೇಕಾಯಿತು. ಸಾರ್ವಜನಿಕ ಕೆಲಸಗಳಿಗಾಗಿ ವರ್ಗಣಿ ಕೂಡಿಸುವವರು ಜನರ ಕಡೆಯಿಂದ ಎಂಥೆಂಥ ಮಾತುಗಳನ್ನು ಆಡಿಸಿಕೊಳ್ಳಬೇಕಾಗುವದು? ಎಷ್ಟು ರೀತಿಯಿಂದ ಅವರ ಒಲವನ್ನು ಹಿಡಿದು ಬೇಡ ಬೇಕಾಗುವದು? ಇವೇ ಮುಂತಾದ ಸಂಗತಿಗಳು ಅನುಭವಿಕರಿಗೇ ಗೊತ್ತಾಗುವವು. ಗೋಪಾಳರಾಯರು ಈ ಎಲ್ಲ ಪ್ರಸಂಗಗಳಲ್ಲಿ ತಮ್ಮ ಉಚ್ಚ ಧ್ಯೇಯವನ್ನು ಲಕ್ಷದಲ್ಲಿಟ್ಟುಕೊಂಡು ಮನಸ್ಸಿಗೆ ಎಷ್ಟು ಮಾತ್ರವೂ ಕೆಡಕೆನಿಸಿಕೊಳ್ಳದೆ ಕೆಲಸ ಮಾಡಿದರು.

ಈ ಸಮಯದಲ್ಲಿ ದಕ್ಷಿಣದಲ್ಲಿ ನ್ಯಾಯಮೂರ್ತಿಗಳಾದ ರಾನಡೆಯವರು ಯಾವತ್ತು ಸಾರ್ವಜನಿಕ ಕಾರ್ಯಗಳಲ್ಲಿ ಮುಂದಾಳುಗಳಾಗಿದ್ದರು. ದೇಶಸೇವೆಯನ್ನು ಮಾಡುವದಕ್ಕಾಗಿ ತರುಣ ಜನರನ್ನು ಆರಿಸುವದರಲ್ಲಿಯೂ ಅವರ ಮನಸ್ಸನ್ನು ತಿದ್ದಿ ಅವರಲ್ಲಿ ಪಾತ್ರತೆಯನ್ನು ಉಂಟು ಮಾಡುವದರಲ್ಲಿಯೂ ಈ ಮಹಾ ಪುರುಷರು ಅಪ್ರತಿಮ ಬುದ್ಧಿಶಾಲಿಗಳಾಗಿದ್ದರು. ಗೋಪಾಳರಾಯರು ಇವರ ಶಿಷ್ಯತ್ವವನ್ನು ಅಂಗೀಕರಿಸಿದರು. ಗೋಖಲೆಯವರು ನ್ಯಾಯಮೂರ್ತಿ ರಾನಡೆಯವರ ಆಸ್ತಿಯೆಂತಲೂ ಅವರ ಸ್ಮಾರಕವೆಂತಲೂ ಜನರಲ್ಲಿ ಅನ್ನುವ ವಾಡಿಕೆಯುಂಟಾಗಿದೆ. ಇವರು ರಾನಡೆಯವರಲ್ಲಿ ೧೩-೧೪ ವರುಷಗಳವರೆಗೆ ಶಿಷ್ಯವೃತ್ತಿಯನ್ನು ಅಂಗೀಕರಿಸಿ ಜಗತ್ತಿನ ಸರಿಯಾದ ಜ್ಞಾನವನ್ನೂ ಆಯುಷ್ಯದ ಇತಿಕರ್ತವ್ಯತೆಯನ್ನೂ ಇನ್ನೂ ಅನೇಕ ವಿಷಯಗಳನ್ನೂ ಅಧ್ಯಯನ ಮಾಡಿದರು.

ಈ ಸಮಯದಲ್ಲಿ ಪುಣೆಯೊಳಗಿನ ಸಾರ್ವಜನಿಕ ಸಭೆಯೆಂಬ ಸಂಸ್ಥೆಯು ಸರಕಾರಕ್ಕೂ ಪ್ರಜೆಗಳಿಗೂ ಒಳ್ಳೇ ಪ್ರಯೋಜನಕರವಾಗಿತ್ತು. ಈ ಸಭೆಯ ಮುಖಾಂತರವಾಗಿ ಒಂದು ತ್ರೈಮಾಸಿಕವು ಹೊರಡುತ್ತಿತ್ತು. ಅದರೊಳಗಿನ ಅರ್ಧಕ್ಕಿಂತ ಹೆಚ್ಚು ಕೆಲಸವನ್ನು ನ್ಯಾ ರಾನಡೆಯವರು ಮಾಡುತ್ತಿದ್ದರು. ಅದರಲ್ಲಿ ಹಿಂದುಸ್ಥಾನದ ಜಮಾಖರ್ಚಿನ ವಿಷಯವಾಗಿಯೂ ರಾಜ್ಯಕಾರಭಾರದ ವಿಷಯವಾಗಿಯೂ ಅನೇಕ ಲೇಖಗಳಿರುತ್ತಿದ್ದವು. ಮುಂದೆ ೧೮೮೭ ನೇ ಇಸ್ವಿಯಲ್ಲಿ, ಅಂದರೆ ಗೋಪಾಳರಾಯರು ೨೧ ವರುಷದವರಿದ್ದಾಗ ಈ ತ್ರೈಮಾಸಿಕದ ಎಡಿಟರರಾಗಿ ನೇಮಿಸಲ್ಪಟ್ಟರು. ಹಾಗು ಸಾರ್ವಜನಿಕ ಸಭೆಯ ಸೆಕ್ರೆ

ರುವದು. ಇದರಿಂದ ಆ ಅಂಕಗಣಿತದ ಯೋಗ್ಯತೆಯೂ ಉಪಯುಕ್ತತೆಯೂ ವ್ಯಕ್ತವಾಗುವವು.

ಇದೇ ಸುಮಾರಿಗೆ, ಸದ್ಯಕ್ಕೆ ಪುಣೆಯಲ್ಲಿ ಪ್ರಸಿದ್ಧವಾಗಿರುವ "ಫರ್ಗ್ಯೂಸನ್ನ ಕಾಲೇಜ"ವೆಂಬ ಉಚ್ಚ ವಿದ್ಯಾವಿಷಯಕ ಸಂಸ್ಥೆಯು ಡೆ. ಎ. ಸೊಸಾಯಿಟಿಯವರಿಂದ ಸ್ಥಾಪಿತವಾಯಿತು. ಆ ಸಂಸ್ಥೆಯಲ್ಲಿ ಗೋಪಾಳರಾಯರು ಸೊಸಾಯಿಟಿಯ ಉಳಿದ ಕೆಲವರ ಸಭಾಸದರಂತೆ ಶಿಕ್ಷಣದ ಕಾರ್ಯವನ್ನು ವಹಿಸಿದರು. ಇಷ್ಟು ದಿವಸ ಹಾಯಸ್ಕೂಲಿನ ಶಿಕ್ಷಕರಾಗಿದ್ದ ಗೋಪಾಳರಾಯರು ಈಗ ಕಾಲೇಜದ ಪ್ರೊಫೇಸರರಾದರು. ಪ್ರಾರಂಭದಲ್ಲಿ ಇವರು ಇಂಗ್ಲಿಷ ಭಾಷೆಯನ್ನೂ ಅಂಕಗಣಿತವನ್ನೂ ಕಲಿಸುತ್ತಿದ್ದರು. ಆದರೆ ಕಾಲೇಜದ ಅವರ ಇಪ್ಪತ್ತು ವರ್ಷದ ನೌಕರಿಯಲ್ಲಿ ಇತಿಹಾಸ ಅರ್ಥಶಾಸ್ತ್ರ ಇವುಗಳನ್ನೇ ಹೆಚ್ಚಾಗಿ ಕಲಿಸುತ್ತಿದ್ದರು. ಇವೇ ಅವರ ಪ್ರೀತಿಯ ವಿಷಯಗಳಾಗಿದ್ದವು. ಈ ವಿಷಯಗಳನ್ನು ಅವರು ಮನಮುಟ್ಟಿ ಅಭ್ಯಾಸ ಮಾಡಿದ್ದರು. ಅದರಿಂದ ಅವರ ವಿದ್ಯಾರ್ಥಿಗಳಿಗೆ ಒಳ್ಳೇ ಪ್ರಯೋಜನವಾಗುತ್ತಿತ್ತು. ಹಾಗು ಅದರಿಂದ ಅವರ ದೇಶಸೇವೆಯ ಕಾರ್ಯವೆಂಬ ಉದಾತ್ತವಾದ ಧ್ಯೇಯದ ಸಾಧನೆಗೂ ಬಹು ಮಟ್ಟಿಗೆ ಸಹಾಯವಾಯಿತು.

ಮುಂದೆ ಕೆಲವು ದಿವಸಗಳವರೆಗೆ ಕೆಲಸವು ಸುರಳೀತವಾಗಿ ನಡೆಯಿತು. ಆದರೆ ೧೮೮೭ರ ಸುಮಾರಕ್ಕೆ ಡೆ. ಎ. ಸೊಸಾಯಿಟಿಯೊಳಗಿನ ಸಭಾಸದರಲ್ಲಿ ಬೇರೆ ಬೇರೆ ಕಾರಣಗಳಿಂದ ಎರಡು ಪಕ್ಷಗಳುಂಟಾದವು. ಹಾಗೂ ಅದರ ಕೆಲಸವು ಸರಿಯಾಗಿ ನಡೆಯದಂತಾಯಿತು. ಇದಲ್ಲದೆ ಕಾಲೇಜದ ಸಂಸ್ಥೆಯು ದಿನ ದಿನಕ್ಕೆ ಬೆಳೆಯುತ್ತ ನಡೆದದ್ದರಿಂದ ಹಣದ ಕೊರತೆಯು ಹೆಚ್ಚುತ್ತ ನಡೆಯಿತು. ಇಲ್ಲಿಯವರೆಗೆ ಸಂಸ್ಥೆಯ ಕೆಲಸಗಳನ್ನು ಮಾಡುತ್ತಿದ್ದ ಕೆಲವರಲ್ಲಿ ವೈಮನಸ್ಸುಂಟಾದದ್ದರಿಂದ ಅವರು ಅದರ ಸಂಬಂಧವನ್ನೇ ಬಿಟ್ಟು ಬಿಟ್ಟರು. ಉಳಿದ ಕೆಲವರು ಮನಃಪೂರ್ವಕವಾಗಿ ಕೆಲಸ ಮಾಡದಂತಾದರು. ಅದರಿಂದ ಗೋಪಾಳರಾಯರೇ ಈ ಎಲ್ಲ ಕೆಲಸಗಳನ್ನು ಮಾಡಬೇಕಾಯಿತು. ಸೊಸಾಯಿಟಿಯ ಸೇಕ್ರೆಟರಿಯ ಕೆಲಸವನ್ನೇ ಇವರು ಮಾಡಬೇಕಾಯಿತೆಂದರೂ ಅಡ್ಡಿಯಿಲ್ಲ. ಕಾಲೇಜದ ಸಲುವಾಗಿ ಹಣ ಕೂಡಿಸುವದಕ್ಕಾಗಿ ಸೂಟಿಯ ದಿವಸಗಳಲ್ಲಿ ಇವರು ಇಡೀ ಮುಂ

ಬಯಿ ಇಲಾಖೆಯಲ್ಲಿ ಸಂಚಾರ ಮಾಡಬೇಕಾಯಿತು. ಸಾರ್ವಜನಿಕ ಕೆಲಸಗಳಿಗಾಗಿ ವರ್ಗಣಿ ಕೂಡಿಸುವವರು ಜನರ ಕಡೆಯಿಂದ ಎಂಥೆಂಥ ಮಾತುಗಳನ್ನು ಆಡಿಸಿಕೊಳ್ಳಬೇಕಾಗುವದು? ಎಷ್ಟು ರೀತಿಯಿಂದ ಅವರ ಒಲವನ್ನು ಹಿಡಿದು ಬೇಡ ಬೇಕಾಗುವದು? ಇವೇ ಮುಂತಾದ ಸಂಗತಿಗಳು ಅನುಭವಿಕರಿಗೇ ಗೊತ್ತಾಗುವವು. ಗೋಪಾಳರಾಯರು ಈ ಎಲ್ಲ ಪ್ರಸಂಗಗಳಲ್ಲಿ ತಮ್ಮ ಉಚ್ಚಧ್ಯೇಯವನ್ನು ಲಕ್ಷದಲ್ಲಿಟ್ಟುಕೊಂಡು ಮನಸ್ಸಿಗೆ ಎಷ್ಟು ಮಾತ್ರವೂ ಕೆಡಕೆನಿಸಿಕೊಳ್ಳದೆ ಕೆಲಸ ಮಾಡಿದರು.

ಈ ಸಮಯದಲ್ಲಿ ದಕ್ಷಿಣದಲ್ಲಿ ನ್ಯಾಯಮೂರ್ತಿಗಳಾದ ರಾನಡೆಯವರು ಯಾವತ್ತು ಸಾರ್ವಜನಿಕ ಕಾರ್ಯಗಳಲ್ಲಿ ಮುಂದಾಳುಗಳಾಗಿದ್ದರು. ದೇಶಸೇವೆಯನ್ನು ಮಾಡುವದಕ್ಕಾಗಿ ತರುಣ ಜನರನ್ನು ಆರಿಸುವದರಲ್ಲಿಯೂ ಅವರ ಮನಸ್ಸನ್ನು ತಿದ್ದಿ ಅವರಲ್ಲಿ ಪಾತ್ರತೆಯನ್ನು ಉಂಟು ಮಾಡುವದರಲ್ಲಿಯೂ ಈ ಮಹಾ ಪುರುಷರು ಅಪ್ರತಿಮ ಬುದ್ಧಿಶಾಲಿಗಳಾಗಿದ್ದರು. ಗೋಪಾಳರಾಯರು ಇವರ ಶಿಷ್ಯತ್ವವನ್ನು ಅಂಗೀಕರಿಸಿದರು. ಗೋಖಲೆಯವರು ನ್ಯಾಯಮೂರ್ತಿ ರಾನಡೆಯವರ ಆಸ್ತಿಯೆಂತಲೂ ಅವರ ಸ್ಮಾರಕವೆಂತಲೂ ಜನದಲ್ಲಿ ಅನ್ನುವ ವಾಡಿಕೆಯುಂಟಾಗಿದೆ. ಇವರು ರಾನಡೆಯವರಲ್ಲಿ ೧೪-೧೫ ವರುಷಗಳವರೆಗೆ ಶಿಷ್ಯವೃತ್ತಿಯನ್ನು ಅಂಗೀಕರಿಸಿ ಜಗತ್ತಿನ ಸರಿಯಾದ ಜ್ಞಾನವನ್ನೂ ಆಯುಷ್ಯದ ಇತಿಕರ್ತವ್ಯತೆಯನ್ನೂ ಇನ್ನೂ ಅನೇಕ ವಿಷಯಗಳನ್ನೂ ಅಧ್ಯಯನ ಮಾಡಿದರು.

ಈ ಸಮಯದಲ್ಲಿ ಪುಣೆಯೊಳಗಿನ ಸಾರ್ವಜನಿಕ ಸಭೆಯೆಂಬ ಸಂಸ್ಥೆಯು ಸರಕಾರಕ್ಕೂ ಪ್ರಜೆಗಳಿಗೂ ಒಳ್ಳೇ ಪ್ರಯೋಜನಕರವಾಯಿತ್ತು. ಈ ಸಭೆಯ ಮುಖಾಂತರವಾಗಿ ಒಂದು ತ್ರೈಮಾಸಿಕವು ಹೊರಡುತ್ತಿತ್ತು. ಅದರೊಳಗಿನ ಅರ್ಧಕ್ಕಿಂತ ಹೆಚ್ಚು ಕೆಲಸವನ್ನು ನ್ಯಾ ರಾನಡೆಯವರು ಮಾಡುತ್ತಿದ್ದರು. ಅದರಲ್ಲಿ ಹಿಂದುಸ್ತಾನದ ಜಮಾಖರ್ಚಿನ ವಿಷಯವಾಗಿಯೂ ರಾಜ್ಯಕಾರಭಾರದ ವಿಷಯವಾಗಿಯೂ ಅನೇಕ ಲೇಖಗಳಿರುತ್ತಿದ್ದವು. ಮುಂದೆ ೧೮೮೭ ನೇ ಇಸ್ವಿಯಲ್ಲಿ, ಅಂದರೆ ಗೋಪಾಳರಾಯರು ೨೧ ವರುಷದವರಿದ್ದಾಗ ಈ ತ್ರೈಮಾಸಿಕದ ಎಡಿಟರರಾಗಿ ನೇಮಿಸಲ್ಪಟ್ಟರು. ಹಾಗು ಸಾರ್ವಜನಿಕ ಸಭೆಯ ಸೆಕ್ರೆ

ಟರಿಯ ಕೆಲಸವನ್ನು ವಹಿಸಿದರು. ಇವೆರಡೂ ಕೆಲಸಗಳನ್ನು ಆ ಸಂಸ್ಥೆಯಲ್ಲಿ ಒಡಕು ಹುಟ್ಟುವವರೆಗೆ ಅವರು ಒಂದೇಸವನೆ ಮಾಡಿದರು. ೧೮೮೮ನೇ ಇಸ್ವಿಯಲ್ಲಿ ಪುಣೆಯಲ್ಲಿ "ಸುಧಾರಕ"ವೆಂಬ ಪತ್ರವು ಹೊರಟಿತು. ಗೋಪಾಳರಾಯರು ಅದರಲ್ಲಿ ಅನೇಕ ಇಂಗ್ಲಿಷ ಲೇಖಗಳನ್ನು ಆಗಾಗ ಬರೆದು ಪ್ರಕಟಿಸಹತ್ತಿದರು. ೧೮೮೯ನೇ ಇಸ್ವಿಯಲ್ಲಿ ಮುಂಬಯಿಯಲ್ಲಿ ನೆರೆದ ರಾಷ್ಟ್ರೀಯ ಸಭೆಗೆ ಸಂಬಂಧಿಸಿದ ಅನೇಕ ಕೆಲಸಗಳನ್ನು ಇವರು ಮಾಡಬೇಕಾಯಿತು. ಹಾಗು ಇವೆರಡೂ ತರದ ಸಾರ್ವಜನಿಕ ಕೆಲಸಗಳಲ್ಲಿ ಇವರ ಸಂಬಂಧವು ದಿನದಿನಕ್ಕೆ ಬೆಳೆಯುತ್ತ ನಡೆಯಿತು. ಮುಂದೆ ಇವರು ಸುಧಾರಕ ಪತ್ರದ ಇಂಗ್ಲೀಷ ಭಾಗಕ್ಕೆ ನಾಲ್ಕು ವರುಷಗಳ ವರೆಗೆ ಎಡಿಟರರಾದರು; ಹಾಗು ರಾಷ್ಟ್ರೀಯ ಸಭೆಯ ಜಾಯಿಂಟ ಸೆಕ್ರೆಟರಿಗಳಾದರು. ೧೮೯೫ನೇ ಇಸ್ವಿಯಲ್ಲಿ ಪುಣೆಯಲ್ಲಿ ನೆರೆದ ರಾಷ್ಟ್ರೀಯ ಸಭೆಯ ಕಾರ್ಯಗಳ ಎಲ್ಲ ವ್ಯವಸ್ಥೆಯು ಗೋಪಾಳರಾಯರಿಗೆ ಒಪ್ಪಿಸಲ್ಪಟ್ಟಿತ್ತು.

೧೮೯೭ನೇ ಇಸ್ವಿಯಲ್ಲಿ ಲಾರ್ಡ ವೆಲ್ಬಿ ಎಂಬವರ ಅಧ್ಯಕ್ಷತೆಯ ಕೆಳಗೆ ನೇಮಿಸಲ್ಪಟ್ಟ ಕಮಿಶನ್ನದ ಮುಂದೆ ಹಿಂದುಸ್ಥಾನದ ಜಮಾಖರ್ಚಿನ ಬಗ್ಗೆ ಸಾಕ್ಷಿಯನ್ನು ಕೊಡುವ ಬಗ್ಗೆ ಗೋಪಾಳರಾಯರು ವಿಲಾಯತಿಗೆ ಹೋಗಬೇಕಾಯಿತು. ಕಮಿಶನ್ನದ ಮುಂದೆ ಕೊಟ್ಟ ಇವರ ಸಾಕ್ಷಿಯು ಅತ್ಯುತ್ಕೃಷ್ಟತರದ್ದೆಂದು ಅಂಗೀಕರಿಸಲ್ಪಟ್ಟಿದೆ.

೧೯೦೦-೧೯೦೧ನೇ ಇಸ್ವಿಯಲ್ಲಿ ಗೋಪಾಳರಾಯರು ಪ್ರಜಾಪಕ್ಷದಿಂದ ಮುಂಬಯಿಯ ಕಾಯದೆಯ ಕೌನ್ಸಿಲಿನ ಮೆಂಬರರಾಗಿ ಆರಿಸಲ್ಪಟ್ಟರು. ಈ ಕಾಲದಲ್ಲಿ ಅವರು ಮಾಡಿದ ಐದಾರು ಭಾಷಣಗಳಿಂದ ಅವರು ಎಂಥ ಜವಾಬದಾರಿಯ ಪರಿಸ್ಥಿತಿಯಲ್ಲಿ ಈ ಕೆಲಸವನ್ನು ಕೈಕೊಂಡರೆಂಬುದು ವ್ಯಕ್ತವಾಗುವದು.

ಇ. ಸ. ೧೯೦೨ರಲ್ಲಿ ನಾಮದಾರ ಮಿ. ಮೇಥಾ ಇವರು ವ್ಹಾಯಿಸರಾಯರ ಕೌನ್ಸಿಲಿನ ಮೆಂಬರರ ಸ್ಥಳದಿಂದ ನಿವೃತ್ತರಾದ ಬಳಿಕ ಆ ಸ್ಥಳಕ್ಕೆ ಗೋಪಾಳರಾಯರೇ ಯೋಗ್ಯ ಪುರುಷರಾಗಿದ್ದರು; ಹಾಗು ಅವರೇ ಆರಿಸಲ್ಪಟ್ಟರು. ಮುಂಬಯಿ ಇಲಾಖೆಯ ಕಾಯದೆ ಕೌನ್ಸಲಿನ ಲೋಕನಿಯುಕ್ತ ಸಭಾಸದರ ವತಿಯಿಂದ ಈ ಕೆಲಸವನ್ನು

ಅವರು ಆಮರಣ ಮಾಡುತ್ತಿದ್ದರು. ನಾಮದಾರ ಮಿ. ಮೇಥಾ ಹಾಗು ನಾಮದಾರ ಮಿ. ಗೋಖಲೆ ಇವರಿಬ್ಬರು ವರಿಷ್ಠಕಾಯದೆಯ ಕೌನ್ಸಿಲಿನಲ್ಲಿ ನಡೆಯುತ್ತಿರುವ ವಾದವಿವಾದಗಳ ಬಗ್ಗೆ ಹೊಸ ಪ್ರೋತ್ಸಾಹನವನ್ನು ಹುಟ್ಟಿಸಿದ್ದನ್ನು ನೋಡಿ ಇಡೀ ಹಿಂದುಸ್ಥಾನದ ಪ್ರಜೆಗಳೂ ಸರಕಾರೀ ಅಧಿಕಾರಿಗಳೂ ಆಶ್ಚರ್ಯಚಕಿತರಾದರು. ಗೋಪಾಳರಾಯರು ಇನ್ನೂ ತುಸು ಹೆಚ್ಚಿಗೆ ಮುಂದಕ್ಕೆ ಹೋಗಿ, ಬಜೆಟ್ಟಿನ ವಿಷಯವಾಗಿ ವಾದವಿವಾದಗಳನ್ನು ನಡಿಸಿ ಅದರಲ್ಲಿ ಹೊಸ ಕಳೆಯನ್ನು ತುಂಬಿಸಿದರು.

೧೯೦೨ನೇ ಇಸ್ವಿಯ ಕಡೆಯ ಭಾಗದಲ್ಲಿ ಗೋಪಾಳರಾಯರು ಫರ್ಗ್ಯೂಸನ್ನ ಕಾಲೇಜದೊಳಗಿನ ಶಿಕ್ಷಕನ ಉದ್ಯೋಗದಿಂದ ನಿವೃತ್ತರಾದರು. ಅವರ ನೌಕರಿಯು ತುಂಬಲಿಕ್ಕೆ ಇನ್ನೂ ಎರಡು ವರುಷಗಳು ಕಡಿಮೆ ಇದ್ದದರಿಂದ ಅಷ್ಟುಕಾಲ ಫರ್ಲೋ ರಜೆಯನ್ನು ತೆಗೆದುಕೊಂಡು ಅದು ಮುಗಿದಮೇಲೆ ಪೆನ್‌ಶನ್ ತೆಗೆದುಕೊಂಡರು. ಈ ವಿದ್ಯಾಸಂಸ್ಥೆಯಲ್ಲಿ ಗೋಪಾಳರಾಯರು ತಮ್ಮ ಆಯುಷ್ಯದ ಒಳ್ಳೇ ಭರದ ಮುಖ್ಯ ಭಾಗವನ್ನು, ಅಂದರೆ ೧೮ನೇ ವರುಷದಿಂದ ೩೬ನೇ ವರ್ಷದ ವರೆಗಿನ ಭಾಗವನ್ನು ಕಳೆದರು. ಆಗ ಅವರಿಗೆ ಬರೇ ೭೫ ರು. ಪಗಾರವು ಸಿಗುತ್ತಿತ್ತು. ಗೋಪಾಳರಾಯರು ಕಾಲೇಜದ ಕೆಲಸದಿಂದ ನಿವೃತ್ತರಾಗುವಾಗ ಅಂದದ್ದೇನಂದರೆ,—"ಸಾರ್ವಜನಿಕ ಕೆಲಸಗಳಲ್ಲಿ ಇನಾಮುಗಳು ಬಹು ಸ್ವಲ್ಪವಿದ್ದಾಗ್ಯೂ ಈ ದೇಶದಲ್ಲಿ ಅಂಥ ಪ್ರಸಂಗಗಳು ಮಾತ್ರ ಅನೇಕವಿರುವವು. ಈ ಸಂಗತಿಯು ನನಗೆ ಗೊತ್ತಿದ್ದರೂ ಯಾವದೋ ಒಂದು ಅನಿವಾರ್ಯವೂ ಅಜ್ಞಾತವೂ ಆದ ಕಾರಣದಿಂದ ನನ್ನ ಮನಸ್ಸು ಸಾರ್ವಜನಿಕ ಕೆಲಸಗಳಲ್ಲಿ ತೊಡಗಿರುವದು. ಆದ್ದರಿಂದ ಇನ್ನುಮೇಲೆ ಆ ಕೆಲಸಗಳಲ್ಲಿಯೇ ನಾನು ನನ್ನ ಆಯುಷ್ಯವನ್ನು ಕಳೆಯುತ್ತೇನೆ."

೧೯೦೪ನೇ ಇಸ್ವಿಯಲ್ಲಿ ಗೋಪಾಳರಾಯರು ರಾಷ್ಟ್ರೀಯ ಸಭೆಯ ಜಾಯಿಂಟ ಸೆಕ್ರೆಟರಿಗಳಾಗಿ ನೇಮಿಸಲ್ಪಟ್ಟರು. ಹಾಗು ಆಗ ಮದ್ರಾಸಕ್ಕೆ ಹೋಗಲು ಅಲ್ಲಿಯ ನಿವಾಸಿಗಳು ಇವರಿಗೆ ಒಳ್ಳೇ ಸನ್ಮಾನ ಮಾಡಿದರು. ಅದೇ ಕಾಲಕ್ಕೆ ಮೈಲಾಪುರ (ಮದ್ರಾಸ) ಎಂಬಲ್ಲಿ ಇವರ ಸ್ಮಾರ

ಕವೆಂದು ಸ್ಥಾಪಿಸಲ್ಪಟ್ಟ ಲಾಯಬ್ರರಿಯ ಅಸ್ತಿವಾರದ ಕಲ್ಲು ಇವರಿಂದ ಕೂಡ್ರಿಸಲ್ಪಟ್ಟಿತು.

೧೯೦೫ ನೇ ಇಸ್ವಿಯಲ್ಲಿ ಗೋಪಾಳರಾಯರು ಸುಪ್ರೀಮ ಕೌನ್ಸಿಲಿನಲ್ಲಿ ಪ್ರಾಂತಿಕ ಸರಕಾರದ ಆಡಳಿತದ ಮೇಲೆ, ವಿಶೇಷವಾಗಿ ಆ ಸರಕಾರಗಳ ಅನಿಯಮಿತತನ, ಅಜ್ಞಾನ, ಹಟ ಈ ಸಂಗತಿಗಳ ಬಗ್ಗೆ ಒಳ್ಳೇ ನಿಕರದ ವಾಗ್ವಾದವನ್ನು ಹೂಡಿದರು. ಅದರಿಂದ ತಕ್ಕಷ್ಟು ಪರಿಣಾಮವಾಗದೆ ಇದ್ದರೂ ಪ್ರಾಂತಿಕ ಸರಕಾರದವರ ಅಜ್ಞಾನ, ಅನಿಯಮಿತತನ, ಹಟವಾರಿತನ ಮುಂತಾದ ಗುಣಗಳು ಜಗತ್ತಿನ ಮುಂದೆ ಬಂದವು. ಈ ಕೆಲಸಕ್ಕಾಗಿ ಗೋಪಾಳರಾಯರು ಬಹಳ ಮಾನಸಿಕ ಶ್ರಮಮಾಡಬೇಕು.

ಆ ವರ್ಷದ ಬಜೆಟ್ಟಿನ ವಾದವಿವಾದದಲ್ಲಿ ಆಗಿನ ವ್ಹಾಯಿಸರಾಯರಾದ ಲಾರ್ಡಕರ್ಝನ್ನರವರು, ನೋಡುವವರಿಗೆ ಒಳ್ಳೇ ಔದಾರ್ಯವನ್ನು ತೋರ್ಪಡಿಸುವಂಥ ಕೆಲವು ಸಂಗತಿಗಳನ್ನು ಕೌನ್ಸಿಲಿನ ಮುಂದೆ ಇಟ್ಟಿದ್ದರು. ಆ ಸಂಗತಿಗಳಿಂದ ಹಿಂದೀ ಜನರಿಗೆ ರಾಜ್ಯಕಾರಭಾರದಲ್ಲಿ ದೊಡ್ಡ ದೊಡ್ಡ ಅಧಿಕಾರಗಳನ್ನು ಕೊಟ್ಟಂತೆ ಭಾಸವಾಗುವಂತಿತ್ತು. ಆ ಸಂಗತಿಗಳಿಗೆ ಬ್ರಿಟಿಶ ಸಭಾಸದರೂ ಒಡಂಬಟ್ಟಿದ್ದರು. ಆದರೆ ಗೋಪಾಳರಾಯರು ತಮ್ಮ ಬಧ್ಧಿ ಕುಶಲತೆಯಿಂದಲೂ ವಾಕ್ಚಾತುರ್ಯದಿಂದಲೂ ಇವು ಕೇವಲ ತೋರಿಕೆಯ ಸಂಗತಿಗಳೆಂತಲೂ ಇದನ್ನು ನೋಡಿ ಜನರು ಭ್ರಾಂತಿಪಡಬಾರದೆಂತಲೂ ಸಿದ್ಧಮಾಡಿ ತೋರಿಸಿದರು.

ಇ. ಸ. ೧೯೦೫ನೇ ಜೂನ ೧೨ನೇ ತಾರೀಖಿನ ದಿವಸ ಗೋಪಾಳರಾಯರು "ಭಾರತ ಸೇವಕ ಸಮಾಜ" ಎಂಬ ದೇಶಸೇವಕರ ಸಂಸ್ಥೆಯನ್ನು ಸ್ಥಾಪಿಸಿದರು. ಈಗ ನಾಗಪುರ, ಅಲಾಹಾಬಾದ, ಮದ್ರಾಸು ಮುಂಬಯಿ ಮೊದಲಾದ ಕಡೆಗಳಲ್ಲಿ ಈ ಸಂಸ್ಥೆಯ ಬೇರೆ ಬೇರೆ ಶಾಖೆಗಳುಂಟಾಗಿ ಸುಮಾರು ೨೫ ಮಂದಿ ದೇಶಸೇವಕರು ಆ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವರು. ಪುಣೆಯಲ್ಲಿ ಆ ಸಂಸ್ಥೆಯ ಮಂದಿರವಿದ್ದು ಅಲ್ಲಿ ಹಿಂದುಸ್ತಾನದ ರಾಜಕೀಯ ಸಾಂಪತ್ತಿಕ ಸಾಮಾಜಿಕ ಸ್ಥಿತಿಗೆ ಸಂಬಂಧದ ಅಭ್ಯಾಸವನ್ನು ಮಾಡುವವರಿಗೆ ಅನುಕೂಲವಾದ ಗ್ರಂಥಗಳ ಸಂಗ್ರಹವು ಇರುವದು.

ಕಳೆದ ವರ್ಷದ ರಾಷ್ಟ್ರೀಯ ಸಭೆಯವರು ಮುಂಬಯಿ ಇಲಾಖೆ ಯ ಪ್ರತಿನಿಧಿಗಳೆಂದು ಗೋಖಲೆಯವರನ್ನು ಆರಿಸಿದ್ದರಿಂದ ಅವರು ಪುನಃ ಇಂಗ್ಲಂಡಕ್ಕೆ ಹೋಗಬೇಕಾಯಿತು. ಹಾಗು ೧೯೦೫ನೇ ಇಸ್ವಿಯಲ್ಲಿ ಬನಾರಸದಲ್ಲಿ ನೆರೆಯತಕ್ಕ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನವನ್ನು ಗೋಖಲೆಯವರೇ ಸ್ವೀಕರಿಸಬೇಕೆಂದು ಜನರು ಆಗ್ರಹ ತೊಟ್ಟಿದ್ದರಿಂದ ಇವರು ಅದನ್ನು ಒಪ್ಪಿಕೊಳ್ಳಬೇಕಾಯಿತು. ಈ ರೀತಿಯಾಗಿ ಅವರು ೧೯೦೫ನೇ ಇಸ್ವಿಯಲ್ಲಿ ಬಹಳ ಶ್ರಮಮಾಡಬೇಕಾಯಿತು.

೧೯೦೫ನೇ ಇಸ್ವಿಯು ಗೋಖಲೆಯವರಚರಿತ್ರದಲ್ಲಿಯಷ್ಟೇ ಯಾಕೆ, ಇಡೀ ಹಿಂದುಸ್ತಾನದ ಇತಿಹಾಸದಲ್ಲಿಯೇ ಅತಿ ಗೊಂದಲದ ವರ್ಷವಾಗಿರುವದು. ಆಗಿನ ವ್ಹಾಯಿಸರಾಯರಾದ ಲಾರ್ಡ ಕರ್ಝನ ಸಾಹೇಬರ ಆಡಳಿತದ ಧೋರಣವು ಒಳ್ಳೇ ವಿಚಾರಣೀಯವಾದದ್ದಾಗಿತ್ತು. ಹಿಂದೀ ಜನರ ಯೋಗ್ಯತೆಯನ್ನು ಇದ್ದಂತೆ ಇಟ್ಟು, ಬ್ರಿಟಿಶ ಅಮಲದಾರರು ರಾಜ್ಯಕಾರಭಾರವನ್ನು ಒಳ್ಳೇ ನಿಯಮಿತತನದಿಂದ ನಡೆಸತಕ್ಕದ್ದು; ಹಿಂದುಸ್ತಾನವು ಬ್ರಿಟಿಶ ಅಮಲ್ದಾರರಿಗೆ ರಾಜಕೀಯ ಶಿಕ್ಷಣವನ್ನು ಕೊಡತಕ್ಕ ಶಾಲೆಯಾಗಿರಬೇಕು. ಇವೇ ಮೊದಲಾದ ಸಂಗತಿಗಳನ್ನು ಅವರು ಧ್ಯೇಯವಾಗಿಟ್ಟುಕೊಂಡಿದ್ದರು. ಹಿಂದೀ ಜನರನ್ನು ಕೆಲವೊಂದು ಮೆಟ್ಟಿನವರೆಗೆ ಮಾತ್ರ ಏರಗೊಡಬೇಕು; ಆದಕ್ಕು ಮೇಲಿನ ಯಾವತ್ತು ಕಾರ್ಯಕ್ಷೇತ್ರವು ಬ್ರಿಟಿಶರ ಕೈಯಲ್ಲಿರತಕ್ಕದ್ದು; ಅಂದರೆ ಮಾತ್ರ ಬ್ರಿಟಿಶರ ಸತ್ತೆಯು ಹಿಂದುಸ್ತಾನದ ಮೇಲೆ ಸ್ಥಿರವಾಗಿ ಉಳಿಯುವದು, ಎಂದು ಅವರು ಸಿದ್ಧಾಂತ ಮಾಡಿದ್ದರು. ಜಾತಿಮತಗಳ ಭೇದವನ್ನು ಎಣಿಸದೆ ಎಲ್ಲರನ್ನೂ ಒಂದೇ ರೀತಿಯಾಗಿ ನಡಿಸಿಕೊಳ್ಳುವೆವೆಂಬ ೧೮೫೮ನೇ ಇಸ್ವಿಯ ಮಹಾರಾಣಿಯವರ ಜಾಹೀರನಾಮೆಯು ಆಚರಣೆಯಲ್ಲಿ ತರುವದಕ್ಕೆ ಅಶಕ್ಯವಾದಂಥ ಸನದು ಎಂದು ಕರ್ಝನ್ನರವರು ಸ್ಪಷ್ಟವಾಗಿ ಅನ್ನುತ್ತಿದ್ದರು. ಅವರ ಕಾಲದಲ್ಲಿ ಹಿಂದೀಜನರ ಆಶಾಂಕುರಗಳನ್ನು ನಿಷ್ಕರುಣೆಯಿಂದ ಚಿವುಟಿ ಒಗೆಯುವಂಥ, ಹಿಂದೀ ಜನರನ್ನು ಹಿಂದಕ್ಕೊತ್ತುವಂಥ ಅನೇಕ ಕಾಯದೆಗಳೂ ಕರಾರುಗಳೂ ಪ್ರಸಿದ್ಧವಾದವು. ಅವರು ಬಂಗಾಲಪ್ರಾಂತವನ್ನು ಪ್ರಜೆಗಳ ಮನಸ್ಸು ನೋಯುವಂತೆ ದ್ವಿಭಾಗಿಸಿ ಬಿಟ್ಟರು. ಈ ಕಾರಣಗಳಿಂದ ಹಿಂದೀ ಪ್ರಜೆಗಳ ಮನಸ್ಸಿನಲ್ಲಿ ಒಂದು

ತರದ ಅಸಂತೋಷವೂ ಉದ್ವೇಗವೂ ಉಂಟಾದವು. ಇಂಥ ಕಠಿಣವಾದ ಪರಿಸ್ಥಿತಿಯಲ್ಲಿ ಗೋಖಲೆಯವರು ಹಿಂದುಸ್ತಾನದ ನಿಜವಾದ ಸ್ಥಿತಿಯನ್ನು ಇಂಗ್ಲಂಡದ ಮುಂದೆ ಇಡಬೇಕಾಗಿತ್ತು; ಹಾಗು ರಾಷ್ಟ್ರೀಯ ಸಭೆಯನ್ನು ಜೀವಂತ ಇಟ್ಟುಕೊಳ್ಳಬೇಕಾಗಿತ್ತು. ಇವೆರಡೂ ಕಾರ್ಯಗಳನ್ನು ಅವರು ಒಳ್ಳೇ ದಕ್ಷತೆಯಿಂದ ನೆರವೇರಿಸಿದರು. ಇವರು ಆಗ ತಮ್ಮ ಎಲ್ಲ ಖಾಸಗೀ ಕೆಲಸಗಳನ್ನು ಮಾಡಿಕೊಳ್ಳುತ್ತ ೫೦ ದಿವಸಗಳಲ್ಲಿ ೪೫ ಸಾರ್ವಜನಿಕ ಸಭೆಗಳಲ್ಲಿ ಉಪನ್ಯಾಸ ಮಾಡಿದರು. ಆ ಪ್ರತಿಯೊಂದು ಉಪನ್ಯಾಸದಲ್ಲಿಯೂ ಅವರು ಬಂಗಾಲ ಮೊದಲಾದ ಹಿಂದುಸ್ತಾನದ ಪ್ರಾಂತಗಳ ಸ್ಥಿತಿಯನ್ನು ಜನರ ಮುಂದೆ ಇಡಲೇಬೇಕಾಗುತ್ತಿತ್ತು. ಹಾಗು ಬ್ರಿಟಿಶ ಸರ್ವಾಧಿಪತಿಗಳೂ ಅವರ ಸರಕಾರವೂ ಹಿಂದುಸ್ತಾನದಲ್ಲಿ ಏನೇನು ಸಂಗತಿಗಳನ್ನು ನಡೆಸಿರುವವು? ಸದ್ಯಕ್ಕೆ ಏನೇನು ಮಾಡಬೇಕಾಗಿರುವದು? ಹಿಂದುಸ್ತಾನದ ಬೇಡಿಕೆಗಳುಯೇನು? ಅವುಗಳನ್ನು ಹೊಂದಲಿಕ್ಕೆ ಎಷ್ಟರಮಟ್ಟಿಗೆ ಅವರ ಪಾತ್ರತೆಯಿರುವದು? ಎಂಬ ಸಂಗತಿಗಳನ್ನು ಅವರು ಸಮಂಜಸವಾಗಿಯೂ ಜನರ ಮನಸ್ಸಿನಲ್ಲಿ ಬಿಂಬಿಸುವಂತೆಯೂ ಹೇಳಬೇಕಾಗುತ್ತಿತ್ತು. ಅವರ ಉಪನ್ಯಾಸವು ನಡೆದಾಗ ಬೇಕಾದವರು ನಡುನಡುವೆ ಪ್ರಶ್ನೆಗಳನ್ನು ಕೇಳುತ್ತಿದ್ದರು. ಅವರಿಗೆ ಸರಿಯಾದ ಉತ್ತರಗಳನ್ನು ಇವರು ಕೊಡಬೇಕಾಗುತ್ತಿತ್ತು. ಈ ರೀತಿಯಾಗಿ ಅವಿಶ್ರಾಂತ ಪರಿಶ್ರಮ ಮಾಡಿ ಹಿಂದುಸ್ತಾನದ ಪಕ್ಷದ ಎಲ್ಲ ನಿಜವಾದ ಸಂಗತಿಗಳನ್ನು ಇಂಗ್ಲಂಡದ ಮುಂದೆ ಇಟ್ಟದ್ದರಿಂದ ನಮ್ಮ ಈ ಸದ್ಯದ ಸುಖದಾಯಕವೂ ಸಮಾಧಾನಕರವೂ ಆದ ಸ್ಥಿತಿಯು ಒದಗಿರುವದೆನ್ನಲಿಕ್ಕೆ ಅಡ್ಡಿಯಿಲ್ಲ. ಈ ತರದ ನಿರಂತರ ಪರಿಶ್ರಮದಿಂದ ಗೋಪಾಳರಾಯರು ಬೇನೆ ಬಿದ್ದು ಗಂಟೀ ಸೋವಾಗಿ ಮಾತಾಡಲಿಕ್ಕೆ ಬರದಂತಾಯಿತು. ಮುಂದೆ ಹಿಂದುಸ್ತಾನಕ್ಕೆ ತಿರುಗಿ ಬಂದ ಕೂಡಲೆ ಬನಾರಸದಲ್ಲಿ ನೆರೆಯುತಕ್ಕ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದರಿಂದ ಅಲ್ಲಿಗೆ ಹೋಗಬೇಕಾಯಿತು ಅವರು ಆ ಸಭೆಯೊಳಗೆ ಮಾಡಿದ ಭಾಷಣವು ಒಳ್ಳೇ ಪರಿಣಾಮಕಾರವಾದದ್ದೂ ಉಪದೇಶಪರವಾದದ್ದೂ ಇತ್ತು.

೧೯೦೬ ನೇ ಇಸ್ವಿಯಲ್ಲಿ ಗೋಪಾಳರಾಯರು ಪುನಃ ಇಂಗ್ಲಂಡಕ್ಕೆ

ಹೋಗಬೇಕಾಯಿತು. ಆಗ ಅವರು ಇಂಗ್ಲಂಡದ ಪಾರ್ಲಮೆಂಟಿನ ಮುಖ್ಯ ಮುಖ್ಯ ಸಭಾಸದರಿಗೆ ಭೆಟ್ಟಿಯಾಗಿ ಹಿಂದುಸ್ಥಾನದ ಬೇಡುವಿಕೆ, ಅದರ ಪರಿಸ್ಥಿತಿ ಮುಂತಾದ ಸಂಗತಿಗಳ ಸಂಬಂಧದಿಂದ ಅವರಿಗೆ ನಿಜವಾದ ವಿಚಾರಗಳನ್ನು ತಿಳಿಸುತ್ತಿದ್ದರು. ಹಿಂದುಸ್ಥಾನದ ಸ್ಟೇಟ ಸೆಕ್ರೆಟರಿಗಳಾದ ಲಾರ್ಡ ಮೋರ್ಲೆ ಸಾಹೇಬರಿಗೆ ಎಷ್ಟೋ ಸಾರೆ ಭೆಟ್ಟಿಯಾಗಿ ಅವರಿಗೆ ಈ ವಿಚಾರಗಳನ್ನು ತಿಳಿಸಿದ್ದರು.

೧೯೦೭ನೇ ಇಸ್ವಿಯಲ್ಲಿ ಉತ್ತರಹಿಂದುಸ್ಥಾನದಲ್ಲಿ ಪ್ರವಾಸ ಮಾಡಿ ಅಲ್ಲಿಯ ತರುಣರ ಮನಸ್ಸನ್ನು ಸತ್ಸಂಗತಿಗಳ ಕಡೆಗೆ ಒಲಿಸುವಂಥ ಹಾಗು ಹಿಂದೂ-ಮುಸಲ್ಮಾನರಲ್ಲಿ ಉಂಟಾದ ಒಡಕನ್ನು ಮುರಿಯುವ ಸಂಬಂಧದ ಅನೇಕ ಭಾಷಣಗಳನ್ನು ಮಾಡಿದರು.

೧೯೧೮ನೇ ಇಸ್ವಿಯಲ್ಲಿ ಬಜೆಟ್ಟಿನ ಸಂಬಂಧದಿಂದ ಭಾಷಣಮಾಡುವಾಗ ಗೋಖಲೆಯವರು ಅನೇಕ ಮಹತ್ವದ ಸಂಗತಿಗಳನ್ನು ಸರಕಾರಕ್ಕೆ ಸೂಚಿಸಿದರು. ಅವರು ಆ ಸಮಯದಲ್ಲಿ — "ರಾಜ್ಯಕಾರಭಾರದಲ್ಲಿ ಮಾಡತಕ್ಕ ಸುಧಾರಣೆಯನ್ನು ಆದಷ್ಟು ಬೇಗನೆ ಮಾಡಿರಿ. ಯೋಗ್ಯ ವೇಳೆಯಲ್ಲಿ ಸುಧಾರಣೆ ಮಾಡಿರುವ ಸಂಗತಿಯನ್ನು ಪ್ರಸಿದ್ಧಿಸಿ ಪ್ರಜೆಗಳಲ್ಲುಂಟಾದ ಅಸಮಾಧಾನವನ್ನೂ ನಿರಾಶೆಯನ್ನೂ ತೆಗೆದು ಹಾಕದಿದ್ದರೆ ಸುಮ್ಮನೆ ಗೊಂದಲಕ್ಕೆ ಕಾರಣವಾಗುವದು," ಇವೇ ಮುಂತಾದ ವಿಚಾರಗಳನ್ನು ಪ್ರಾಂಜಲ ಮನಸ್ಸಿನಿಂದ ಸರಕಾರದ ಮುಂದಿರಿಸಿದರು.

೧೯೦೮ನೇ ಇಸ್ವಿಯ ಉತ್ತರಾರ್ಧದಲ್ಲಿ ಗೋಪಾಳರಾಯರ ಬೇಡುಕೆಯಂತೆ ಸುಧಾರಣೆಯಾದ ಸಂಗತಿಯು ಪ್ರಸಿದ್ಧಿಸಲ್ಪಟ್ಟಿತು. ಆದರೆ ಈಗಿನ ಪರಿಸ್ಥಿತಿಯಿಂದ ಆಗತಕ್ಕಷ್ಟು ಸತ್ಪರಿಣಾಮವು ಮಾತ್ರ ಆದಂತೆ ಕಂಡು ಬರಲಲ್ಲ.

ಇ. ಸ. ೧೯೦೮-೧೨ರ ವರೆಗಿನ ಕಾಲದಲ್ಲಿ ಗೋಖಲೆಯವರಿಗೆ ದೃಭಾವದಲ್ಲಿ ತಕ್ಕಮಟ್ಟಿಗೆ ವಿಶ್ರಾಂತಿಯಿತ್ತೆಂದು ಹೇಳಬಹುದು. ಅವರು ಬೇಡಿದ ಅಧಿಕಾರವಿಭಾಗಸಂಬಂಧದ ಕಮಿಶನವು ದೊರಕಿತ್ತು. ಹಾಗು ಅದರ ಮುಂದೆ ಅವರು ತಮ್ಮ ಸಾಕ್ಷಿಯನ್ನು ಕೊಟ್ಟರು. ಇವರು ಈ ಸಮಯದಲ್ಲಿ ಮಾಡಿದ ಮಹತ್ಕಾರ್ಯವೆಂದರೆ "ಫೀ ಇಲ್ಲದಂಥ ಮತ್ತು ಬಲಾತ್ಕಾರದ ಶಿಕ್ಷಣದ" ಸಂಬಂಧದ ವಿಚಾರವನ್ನು ಸರಕಾರದ ಮುಂದೆ ಇರಿಸಿದ್ದು. ಇದರಿಂದ ಆಗತಕ್ಕಷ್ಟು ಪ್ರಯೋಜನವು ಆಗದೆ ಇದ್ದರೂ, ಸರಕಾರದ ಶಿಕ್ಷಣದ ಸಂಬಂಧದ ಧೋರಣವು ಬದಲಾ

ಗಿ ಶಿಕ್ಷಣಪ್ರಸಾರದ ಸಂಬಂಧದಿಂದ ಮುಂಜೂರ ಮಾಡತಕ್ಕ ಹಣದ ಮಾನವು ಬೆಳೆಯಿತೆನ್ನಲಿಕ್ಕೆ ಅಡ್ಡಿಯಿಲ್ಲ. ಅವರು ಈ ಸಮಯದಲ್ಲಿ ಮಾಡಿದ ಭಾಷಣದಿಂದ ಈ ಕಾಯದೆಯ ಮಸೂದೆಯ ವಿರುದ್ಧ ಅಭಿಪ್ರಾಯವುಳ್ಳವರ ಮನಸ್ಸಿನಲ್ಲಿ ಸಹ ಇವರ ವಿಚಾರದ ಸಲುವಾಗಿ ಆದರ ಬುದ್ಧಿಯು ಉಂಟಾಯಿತು. ರಾಜಕೀಯ ವಿಷಯದಲ್ಲಿ ಹಿಂದು-ಮುಸಲ್ಮಾನರಲ್ಲಿ ಐಕ್ಯವನ್ನುಂಟು ಮಾಡಿದ ಶ್ರೇಯವು ಗೋಖಲೆಯವರಿಗೇ ಸಲ್ಲುವದು. ದಕ್ಷಿಣ ಆಫ್ರಿಕದೊಳಗೆ ಬ್ರಿಟಿಶ ಹಾಗು ಹಿಂದೀ ಜನರ ಸಂಬಂಧದ ಬಡಿದಾಟದಲ್ಲಿ ಮಾಡಿದ ನಿರ್ಣಯವೇ ಗೋಪಾಳರಾಯರು ನೆರವೇರಿಸಿದ ಕೊನೆಯ ಸತ್ಕಾರ್ಯವು.

೧೯೧೪ನೇ ಇಸ್ವಿಯಲ್ಲಿ ಗೋಪಾಳರಾಯರ ಪ್ರಕೃತಿಯು ನೆಟ್ಟಗಿಲ್ಲದಿದ್ದರೂ ಪಬ್ಲಿಕ್ ಸರ್ವ್ಹಿಸ ಕಮಿಶನ್ನದ ಸಂಗಡ ಇಂಗ್ಲಂಡಕ್ಕೆ ಹೋದರು. ಈ ಕೆಲಸದ ಸಲುವಾಗಿ ಇವರು ಬಹಳ ಹಳಹಳಿಪಡುತ್ತಿದ್ದರು. ಅವರು "ನಾನು ಕೈಕೊಂಡಿರುವ ಈ ಕೆಲಸವು ಪೂರ್ಣವಾದ ಬಳಿಕ ನನಗೆ ಮರಣ ಬಂದರೆ ಏನೂ ಚಿಂತೆಯಿಲ್ಲ," ಎಂದು ಅನ್ನುತ್ತಿದ್ದರಂತೆ. ಆದರೆ ಈಶ್ವರನು ಅವರ ಆ ಇಚ್ಛೆಯನ್ನು ಈಡೇರಿಸಲಿಲ್ಲ. ಹಿಂದುಸ್ತಾನದ ಸತ್ಪುತ್ರರಲ್ಲೊಬ್ಬರಾದ ಈ ಮಹನೀಯರು ೧೯೧೫ ನೇ ಇಸ್ವಿ ಫೆಬ್ರುವರಿ ೧೯ನೇ ತಾರೀಖಿನ ದಿವಸ ರಾತ್ರಿಯಲ್ಲಿ ನಶ್ವರವಾದ ಈ ದೇಹವನ್ನು ತ್ಯಜಿಸಿ ಪರಲೋಕಕ್ಕೆ ಪ್ರಯಾಣ ಮಾಡಿದರು; ಹಾಗೂ ಭಯಂಕರವಾದ ಕಾಳರಾತ್ರಿಯ ದುಃಖಾಂಧಕಾರವು ಸಕಲ ಹಿಂದೀ ಪ್ರಜೆಗಳ ಅಂತಃಕರಣವನ್ನು ವ್ಯಾಪಿಸಿತು. ಬ್ರಿಟಿಶ ಸರಕಾರದೊಳಗಿನ ಹಿಂದುಸ್ತಾನಕ್ಕೆ ಸಂಬಂಧಿಸಿದ ಅಧಿಕಾರಿಗಳಿಗಷ್ಟೇ ಅಲ್ಲ, ಉಳಿದ ಅಧಿಕಾರಿಗಳಿಗೂ ಗೋಖಲೆಯವರ ಮರಣದಿಂದ ಅತ್ಯಂತ ಕೆಡಕೆನಿಸಿತು. ಆದರೆ ಮಾಡಬೇಕೇನು? ದೈವದ ಮೇಲೆ ಹೊರೆಯನ್ನು ಚಲ್ಲಿ, ಇದ್ದದ್ದರಲ್ಲಿಯೇ ಸಮಾಧಾನ ಮಾಡಿಕೊಳ್ಳಬೇಕು. ದಯಾಮಯನಾದ ಪರಮೇಶ್ವರನು ಈ ಮಹಾಪುರುಷರ ಆತ್ಮಕ್ಕೆ ಶಾಂತಿಯನ್ನೀಯಲಿ; ಹಾಗೂ ಇವರಂಥ ಅನೇಕ ಮಹನೀಯರು ಭರತಖಂಡದಲ್ಲಿ ಉದ್ಭವಿಸಿ ಶಿರೋಭಾಗದ ಶ್ಲೋಕದ ಕೊನೆಯಲ್ಲಿ ಹೇಳಿದ "नृपति जनपदानां दुर्लभः कार्यकर्ता" ಎಂಬ ವಾಕ್ಯವನ್ನು ಸುಳ್ಳುಮಾಡಿ ತೋರಿಸಲಿ!

ಕನ್ನಡಿಗರೂ ಅವರ ಸಾಹಿತ್ಯವೂ.

ಸಂಸ್ಕೃತವನ್ನರಿತ ಪಂಡಿತರನೇಕರು, "ಕನ್ನಡದಲ್ಲಿ ಏನಿರುವದು? ಎಲ್ಲಾ ಸಂಸ್ಕೃತದ ಎಂಜಲು; ಸಂಸ್ಕೃತ ಕವಿಗಳು ತಿಂದುಗಿದ ಕಬ್ಬಿನ ಸಿಪ್ಪೆ!" ಎನ್ನುವರು. ಮತ್ತೆ ಕೆಲವರು "ಕನ್ನಡದಲ್ಲಿ ಮೂಲ ಗ್ರಂಥ ಗಳೇ ಇಲ್ಲ; ಎಲ್ಲಾ ಅನ್ಯಭಾಷೆಗಳಿಂದ ಕದ್ದವುಗಳು. ಆಧುನಿಕ ಲೇಖ ಕರ ಬರಹವನ್ನು ನೋಡಿರಿ. ಮೈಸೂರ ಪ್ರಾಂತದವರಲ್ಲಿ ಹಲವರು ಬರೆಯುವದು ಕೇವಲ ಬಂಗಾಲೀ ಭಾಷೆಯ ಆಧಾರದಿಂದ; ಧಾರವಾಡ ಪ್ರಾಂತದವರಿಗೆ ಮರಾಠೀ ಭಾಷೆಯೇ ಗತಿ; ಇನ್ನು ದೊಡ್ಡ ದೊಡ್ಡ ಮಾತುಗಳನ್ನು ಹೇಳಿ ನಾ ಮುಂದೆ ನೀ ಮುಂದೆ ಎಂದು ಎದೆ ತಟ್ಟಿ ಕೊಂಡು ಮುಂದೆ ಬರುವ ಭಾಷಾಸೇವಕರಿಗೂ ವಿದ್ಯಾ-ಇಲಾಖೆಯೊಳ ಗಿನ ಜನರಿಗೂ ಇಂಗ್ಲಿಷ ಭಾಷೆಯನ್ನು ಬಿಟ್ಟರೆ ಜಗತ್ತೇ ಇಲ್ಲವೆನಿಸು ವದು. ಅಹಹಾ! ಎಂತಹ ದುರವಸ್ಥೆಯಿದು!" ಎಂದು ಹೇಳುವರು. ಇಂಥವರಿಗೂ ಅನ್ಯಭಾಷೆಗಳ ಆಧಾರದಿಂದ ಕನ್ನಡದಲ್ಲಿ ಲೇಖಗಳನ್ನು ಬರೆಯಲಿಚ್ಛಿಸುವ ತರುಣರಿಗೂ ಕೂಡೇ ಸರಿಯಾದ ಮಾರ್ಗವನ್ನು ಸೂಚಿಸುವಂಥ ಕೆಲವು ವಿಚಾರಗಳನ್ನು ಕನ್ನಡಿಗರ ಮುಂದೆ ಇರಿಸುವ ಉದ್ದೇಶದಿಂದ, ಶ್ರೀಯುತ ರಾಮಾನಂದ ಚಟರ್ಜಿಯವರು "ಪ್ರವಾಸಿ" ಎಂಬ ತಮ್ಮ ಮಾಸಿಕ ಪುಸ್ತಕದಲ್ಲಿ ಪ್ರಸಂಗಾಂತರದಲ್ಲಿ ಪ್ರಕಟಿಸಿದ ಕೆಲವು ಅಭಿಪ್ರಾಯಗಳನ್ನು ರೂಪಾಂತರಿಸಿ ಇಲ್ಲಿ ಬರೆಯುವೆವು:—

ಕೆಲವರು, ಇಂಗ್ಲಿಷ ಭಾಷೆಯನ್ನು ಕಲಿತವರ ಭಾಷಾಶೈ ಲಿಯಲ್ಲಿಯೂ, ಕಾವ್ಯರಸದಲ್ಲಿಯೂ, ವಿಚಾರಪ್ರಣಾಲಿಗಳಲ್ಲಿಯೂ ಸೇರಿರುವ ವಿದೇಶೀಯತ್ವವನ್ನು ನೋಡಿ, ಅವುಗಳನ್ನು ನಿಂದಿಸುವರು. ಮನುಷ್ಯನು ಸಜೀವ ಪ್ರಾಣಿಯು. ಅವನು ಇರುವ ಪರಿಸ್ಥಿತಿಯ ಪರಿ ಣಾಮವು ಅವನ ಅಂತಃಕರಣದಲ್ಲಿ ಆಗುವದು ಸೃಷ್ಟಿಸಹಜವಾದ ಧರ್ಮವು. ಈ ವಿಷಯದಲ್ಲಿ ಅವನು ಬಾಹ್ಯವಾತಾವರಣವನ್ನು ಲಕ್ಷಿಸದೆ, ತಿಲಮಾತ್ರವೂ ಬಾಹ್ಯಪ್ರೇರಣೆಗಳ ಪರಿಣಾಮವನ್ನು ಗ್ರಹಿಸದೆ ಸರ್ವಥಾ ಇರಲಾರನು. ಹಾಗೆ ಇರಲು ಅವನು ಒಂದು ಕಗ್ಗಲ್ಲಿನ ವಿಗ್ರ ಹವಲ್ಲ. ಸುತ್ತಲಿನ ಸ್ಥಿತಿಯ ಪರಿಣಾಮಗಳನ್ನು ಗ್ರಹಿಸಿ ತನ್ನ ಆತ್ಮ

ವನ್ನು ರೂಪಾಂತರಿಸಿಕೊಳ್ಳುವದೇ ಮನುಷ್ಯತ್ವದ ಲಕ್ಷಣವು. ಅದೇ ಮೇರೆಗೆ ಇಂಗ್ಲಿಷ ಭಾಷೆಯನ್ನರಿತ ಕವಿಗಳ ಕವಿತ್ವದಲ್ಲಿ ಪಾಶ್ಚಾತ್ಯ ಸುಧಾರಣೆಯು, ಹಾಗು ಸಾಂಪ್ರತದ ಪರಿಸ್ಥಿತಿಯ ಛಾಯೆಯು ಕಂಡುಬರು ವದು ಸಹಜವೇ ಸರಿ. ಇವು ನಿಂದ್ಯವೆಂದು ಹೇಳುವಂತಿಲ್ಲ.

ವಿದೇಶೀಯ ವಸ್ತುಗಳನ್ನು ಗ್ರಹಿಸಿ, ಅವುಗಳನ್ನು ಜೀರ್ಣಿಸಿಕೊಂಡು ಪುನಃ ಬೇರೆ ದೇಶೀಯ ವಸ್ತುಗಳ ರೂಪದಿಂದ ಅವುಗಳನ್ನು ಪ್ರಕ ಟಿಸುವದು ಯೋಗ್ಯವೇ ಸರಿ; ಹಾಗು ಅವಶ್ಯವೇ ಸರಿ. ಆದರೆ ವಿದೇ ಶೀಯರ ಗೋದಿಯ ಹಿಟ್ಟನ್ನು, ಅಥವಾ ಅಕ್ಕಿಯನ್ನು, ಇಲ್ಲವೆ ದ್ರಾಕ್ಷೆ ಮುಂತಾದ ಹಣ್ಣು ಹಂಪಲಗಳನ್ನು ಹಸಿ ಬಿಸಿ ತಿಂದು ಅವುಗಳನ್ನು ದಕ್ಕಿ ಸಿಕೊಳ್ಳಲಾರದೆ ಮಂದಿಯ ಮುಂದೆ ಕಾರಿ ಬಿಡುವದು ಮಾತ್ರ ಎಷ್ಟು ಮಾತ್ರವೂ ಸರಿಯಲ್ಲ. ಅದರಿಂದ ಅವುಗಳನ್ನು ತಿಂದವನ ಆರೋಗ್ಯ ಕ್ಕೂ ನೆಟ್ಟಗಲ್ಲ. ಅದನ್ನು ನೋಡುವ ಸುತ್ತಲಿನ ಜನರಿಗೂ ಅಸಹ್ಯವೆ ನಿಸುವದು. ಅದೇ ಅವುಗಳನ್ನು ದಕ್ಕಿಸಿಕೊಂಡರೆ ತಿಂದವನ ಶಕ್ತಿಯೂ ವೃದ್ಧಿಯಾಗುವದು; ಅವನ ಸಹವಾಸಿಗಳಿಗೂ ಒಬ್ಬ ಸುದೃಢ ಮನು ಷ್ಯನನ್ನೂ ಅವನ ಕೃತಿಗಳನ್ನೂ ನೋಡಿ ಆನಂದವೆನಿಸುವದು. ಇದೇ ರೀತಿಯಾಗಿ ವಿದೇಶೀಯರ ವಿಚಾರ-ರಸವೈಚಿತ್ರ್ಯಗಳೆಂಬ ಮಾನಸಿಕ ಖಾದ್ಯಗಳನ್ನು ನಮ್ಮವರು ತಿಂದು ದಕ್ಕಿಸಿಕೊಳ್ಳುವದೂ ಅವುಗಳ ಛಾ ಯೆಗಳನ್ನು ತಮ್ಮ ಕಾವ್ಯಗಳಲ್ಲಿ ತೋರ್ಪಡಿಸುವದೂ ನಿಂದನೀಯವಲ್ಲ. ನಮ್ಮ ಪೂರ್ವಜರೂ ಇದೇ ರೀತಿಯಾಗಿ ಅನ್ಯ ಸಮಾಜದವರಿಂದ ಅನೇ ಕ ಸಂಗತಿಗಳನ್ನು ಗ್ರಹಿಸಿದರೆಂಬ ಬಗ್ಗೆ ಹಲವು ಆಧಾರಗಳಿರುವವು.

ಆತ್ಮನಿಗೆ ಜಾತಿಭೇದವಿಲ್ಲ. ಅದೇ ರೀತಿಯಾಗಿ ಉಚ್ಚ ವರ್ಗದ ತಾತ್ವಿಕ ವಿಚಾರಗಳಿಗೂ ಉಚ್ಚತರದ ಮನೋಭಾವನೆ, ವಿಚಾರಪ್ರಣಾ ಲಿ, ಕವಿತ್ವ ಇವುಗಳಿಗೂ ದೇಶಭೇದವಿಲ್ಲ; ವರ್ಣಭೇದವಿಲ್ಲ; ಜಾತಿಭೇ ದವಿಲ್ಲ. ಹಾಗಿದ್ದರೆ ಪಾಶ್ಚಾತ್ಯರು ಕಾಳಿದಾಸನೇ ಮೊದಲಾದ ಹಿಂದೂ ಕವಿಗಳ ಕಾವ್ಯಗಳನ್ನು ಓದಿ ತಲೆದೂಗುತ್ತಿರಲಿಲ್ಲ. ಹಿಂದೂ ರಸಿಕರ ಆತ್ಮವು ಪಾಶ್ಚಾತ್ಯ ಕವಿವರನಾದ ಶೇಕ್ಸಪೀಯರನ ಕಾವ್ಯಗಳನ್ನು ಓದು ವಾಗ ಆ ಕಾವ್ಯರಸದಲ್ಲಿ ತಲ್ಲೀನವಾಗುತ್ತಿರಲಿಲ್ಲ. ಉಚ್ಚತರದ ಲೇಖ ಕರ ಲೇಖಗಳನ್ನು ಓದುವಾಗ ರಸಿಕರ ಅಂತಃಕರಣವು ಹೆಚ್ಚೆಚ್ಚಿಗೆ

ಉಕ್ಕಿ ಬರುವದು. ಹಾಗು "ಅಹಹಾ! ಎಂತಹ ಸೃಷ್ಟಿಯ ನಿಯಮ ವನ್ನು ಪ್ರತಿಪಾದಿಸಿರುವನು! ಸೃಷ್ಟಿಯನ್ನು ಎಷ್ಟೊಂದು ಸೂಕ್ಷ್ಮವಾಗಿ ನಿರೀಕ್ಷಿಸಿರುವನು!" ಎಂಬ ಉದ್ಗಾರಗಳು ಅವರ ಮುಖದಿಂದ ಹೊರ ಡುವವು. ಆಗ ಲೇಖಕನ ವಿದೇಶೀಯತ್ವವು ವಾಚಕರ ಮನಸ್ಸಿನಲ್ಲಿ ಬರಲಾರದು. ಅಂದಮೇಲೆ, ಈ ವಿಚಾರಗಳು ವಿದೇಶೀಯವು, ಇವು ಮುಸಲ್ಮಾನ ಕವಿಯವು, ಇವು ಇಂಗ್ಲಿಷ ಭಾಷೆಯೊಳಗಿನವು ಎಂಬ ಭೇದಭಾವಗಳನ್ನು ಮುಂದೆ ತಂದು ಅವು ಅಗ್ರಾಹ್ಯವೆಂದು ಹೇಳುವದು ಕೇವಲ ದುರಭಿಮಾನದ ಮಾತೇ ಸರಿ.

ನಮ್ಮಲ್ಲಿ ಸ್ವದೇಶಾಭಿಮಾನವೂ ಸ್ವಭಾಷಾಭಿಮಾನವೂ ಇರುವದು ಅವಶ್ಯವು. ಆದರೆ ಅವು ಮಿತಿಮೀರಿದರೆ, ಅಂದರೆ ಅಲ್ಲದ ಪ್ರಸಂಗಗ ಳಲ್ಲಿ ಉಪಯೋಗಿಸಲ್ಪಟ್ಟರೆ ದುರಭಿಮಾನವೆನಿಸುವವು; ದುರ್ಗುಣಗಳಲ್ಲಿ ಎಣಿಸಲ್ಪಡುವವು. ಸ್ವದೇಶಾಭಿಮಾನವನ್ನು ತೋರಿಸುವಾಗ ವಿದೇಶೀ ಯರನ್ನು ನಿಂದಿಸುವದೂ ದ್ವೇಷಿಸುವದೂ ಹ್ಯಾಗೆ ಅಯೋಗ್ಯವೋ ಹಾಗೆ ಯೇ ಸ್ವಭಾಷಾಭಿಮಾನವನ್ನು ವ್ಯಕ್ತಪಡಿಸುವಾಗ ಪರಭಾಷೆಗಳ ವಿಷ ಯವಾಗಿ ಅನಾದರವನ್ನೂ ತಿರಸ್ಕಾರವನ್ನೂ ತೋರ್ಪಡಿಸುವದು ಸರಿ ಯಲ್ಲ. ನಾವು ಈ ವಿಷಯದಲ್ಲಿ ನಮ್ಮ ಪೂರ್ವಜರು ಹಾಕಿಕೊಟ್ಟ ಮೇಲ್ಪಙ್ತಿಯನ್ನು ನೋಡಿಕೊಂಡು ನಡೆಯಬೇಕು.

ಬೇರೆ ಬೇರೆ ದೇಶಗಳ ಬೀಜಗಣಿತದ ಸಾರಣಿಗಳನ್ನು ನೋಡಿರಿ; ಭೂಮಿತಿಯ ಪ್ರತಿಜ್ಞೆಗಳನ್ನು ನೋಡಿರಿ, ತರ್ಕಶಾಸ್ತ್ರದ ತತ್ವಗಳನ್ನು ನೋಡಿರಿ; ಎಲ್ಲಾ ಒಂದೇ ಇರುವವು. ಇದರಿಂದ ಮನುಷ್ಯ ಪ್ರಾಣಿಗೆ ಸಂಬಂಧಿಸಿದ ಕೆಲಕೆಲವು ಉಚ್ಚ ವಿಚಾರಗಳು ಜಗತ್ತಿನಲ್ಲೆಲ್ಲಾ ಒಂದೇ ಆಗಿರುವವೆಂಬದು ಕಂಡು ಬರುವದು. ಬೇರೆ ಬೇರೆ ದೇಶಗಳ ಹಾಗು ಬೇರೆ ಬೇರೆ ಧರ್ಮಗಳ ಸಾಧುಸಂತರ ಉಪದೇಶವಚನಗಳಲ್ಲಿ ಬಹ್ವಂ ಶದಿಂದ ಸಾಮ್ಯವಿರುವದು. ಮನುಷ್ಯಪ್ರಾಣಿಯ ಆತ್ಮಕ್ಕೆ, ಅಂತಃ ಕರಣಕ್ಕೆ ದೇಶಭೇದ-ಧರ್ಮಭೇದಗಳಿಲ್ಲದಿರುವದೇ ಇದಕ್ಕೆ ಕಾರಣವು. ಮನುಷ್ಯಪ್ರಾಣಿಯ ಬಾಹ್ಯಾಂಗವು ಪರಿಸ್ಥಿತಿಗನುಗುಣವಾಗಿ ಬದಲಾಗ ಬಹುದು; ಆದರೆ ಅವನ ಅಂತರಂಗದ ಉಚ್ಚ ಭಾವನೆಗಳು ಮಾತ್ರ ಸಕ ಲ ದೇಶಗಳಲ್ಲಿಯೂ ಸಕಲ ಕಾಲಗಳಲಿಯೂ ಸ್ಥಿರವಾಗಿಯೇ ಇರುವವು.

ನಾವು ಅನ್ಯರ ಭಾವನೆಗಳನ್ನೂ ರಸವೈಚಿತ್ರ್ಯಗಳನ್ನೂ ಗ್ರಹಿಸ ಬೇಕೆಂಬದಕ್ಕೆ ಕೆಲವು ಕಾರಣಗಳೂ ಇರುವವು. ಮನುಷ್ಯನು ಯಾವಾ ಗಲೂ ಮನೆಯ ಒಳಗೇ ಇರಹತ್ತಿದರೆ, ಅವನ ಆರೋಗ್ಯವು ಕೆಲವು ದಿವಸಗಳಲ್ಲಿ ಕುಂದಿ ಹೋಗುವದು. ಹೊರಗಿನ ಚಲಿತ ವಾತಾವರಣ ದಲ್ಲಿ ಸಂಚರಿಸುವದು ಮನುಷ್ಯನ ಆರೋಗ್ಯರಕ್ಷಣೆಗೆ ಅವಶ್ಯವು. ಇದೇ ಮೇರೆಗೆ ಮನುಷ್ಯನ ಮನಸ್ಸು ಸಹ ಕೇವಲ ತನ್ನ ಗ್ರಾಮ, ತನ್ನ ಪ್ರಾಂತ, ಹೆಚ್ಚಾದರೆ ತನ್ನ ದೇಶ ಇಷ್ಟೇ ಸ್ಥಳದಲ್ಲಿ ಸಂಚರಿಸುತ್ತಿ ದ್ದರೆ, ಪುನಃ ಪುನಃ ಅವೇ ವಿಚಾರಗಳು ಅವೇ ರಸವೈಚಿತ್ರ್ಯಗಳು ಇವು ಗಳನ್ನೇ ಅನುಭವಿಸುತ್ತಿದ್ದರೆ, ಅದು ತಕ್ಕಷ್ಟು ಉನ್ನತಿಯನ್ನು ಹೊಂದ ಲಾರದು. ನಾವು ವಿದೇಶೀಯರ ಯಾವ ಪ್ರಕಾರದ ಭಾವನೆಗಳನ್ನೂ ವಿಚಾರಗಳನ್ನೂ ಸ್ವೀಕರಿಸುವದು ಯೋಗ್ಯವಲ್ಲದೆ ಇದ್ದರೆ, ನಾವು ವಿದೇ ಶೀಯರ ಕಾಲೇಜಗಳಲ್ಲಿ ಕಲಿತು ಅವರ ಸಾಹಿತ್ಯಗಳನ್ನೂ ದರ್ಶನಗ ಳನ್ನೂ ಮುಖಸ್ಥ ಮಾಡಿಕೊಂಡು ಪರೀಕ್ಷೆಗಳನ್ನು ಕೊಡುವದರ ಉದ್ದೇ ಶಗಳೇನು? ಇದಕ್ಕೆ ಕೆಲವರು ದೊಡ್ಡ ದೊಡ್ಡ ಅಧಿಕಾರಗಳನ್ನು ಸಂಪಾ ದಿಸುವದಕ್ಕಾಗಿಯೂ ನೌಕರಿ ಮಾಡಿ ಹಣ ಗಳಿಸುವದಕ್ಕಾಗಿಯೂ ಕಲಿ ಯುವೆವೆಂದು ಹೇಳಬಹುದು. ಈ ಮಾತು ನಮ್ಮ ಅರ್ವಾಚೀನರ ವಿಚಾರದೃಷ್ಟಿಯಿಂದ ಕೆಲವು ಮಟ್ಟಿಗೆ ಸತ್ಯವೆನಿಸಿದರೂ, ಈ ವಿಚಾ ರವು ಉಚ್ಚತರದ್ದಲ್ಲ. ಇದರಿಂದ ಮನುಷ್ಯತ್ವಕ್ಕೇ ಕುಂದು ಬರುವದೆಂ ದರೂ ಅಡ್ಡಿ ಇಲ್ಲ.

ಇಲ್ಲಿಯ ವರೆಗೆ ಹೇಳಿದ ವಿಚಾರಗಳಿಂದ ನಮ್ಮವರು ಅನ್ಯಭಾಷೆ ಗಳ ಸಹಾಯದಿಂದ ನಮ್ಮ ಸಾಹಿತ್ಯವನ್ನು ಪರಿಶೋಧಿಸಿಕೊಳ್ಳುವದು ಅಯೋಗ್ಯವಲ್ಲವೆಂದು ಹೇಳಿದ ಹಾಗಾಯಿತು. ಆದರೆ ಈ ಪ್ರಸಂಗ ದಲ್ಲಿ ಲೇಖಕರು ಲಕ್ಷ್ಯದಲ್ಲಿಡತಕ್ಕ ಒಂದು ಮುಖ್ಯ ಸಂಗತಿಯನ್ನು ಹೇಳಿ ಈ ವಿಚಾರವನ್ನು ಇಲ್ಲಿಗೆ ಮುಗಿಸುವೆವು.

ಅನ್ಯ ಭಾಷೆಯೊಳಗಿನ ಗ್ರಂಥಗಳ ಸಹಾಯದಿಂದ ಸ್ವಭಾಷೆಯಲ್ಲಿ ಲೇಖಗಳನ್ನು ಬರೆಯುವ ಹಲವು ಜನರು ಅವುಗಳನ್ನು ಅಕ್ಷರಶಃ ಭಾಷಾಂತರಿಸ ಹೋಗುವರು. ಉದಾ:— "x Rays" ಎಂಬದನ್ನು "ಕ್ಷ ಕಿರಣಗಳು" ಎಂದು ಮಾಡುವರು; ಮತ್ತೆ ಕೆಲವರು ತಾವು ಓದುವ

ತಕ್ಕಷ್ಟು ಜ್ಞಾನವಿಲ್ಲದ್ದರಿಂದಲೋ ಓದುವ ಭಾಷೆಗೂ ಬರೆಯುವ ಭಾಷೆಗೂ ಇರುವ ವೈಷಮ್ಯಗಳನ್ನು ತಿಳಿದುಕೊಳ್ಳದೆ ಇದ್ದದರಿಂದಲೋ ತಮಗೆ ಕಠಿಣ ಹೋಗುವ ಭಾಗಗಳನ್ನು ಬಿಟ್ಟು ಬಿಟ್ಟು ಅಂಥಲ್ಲಿ ತಮ್ಮ ಮನಸ್ಸಿಗೆ ಬಂದ ವಿಚಾರಗಳನ್ನು ಸೇರಿಸಿ ಉಳಿದ ಭಾಗಗಳನ್ನು ಭಾಷಾಂತರಿಸುವರು. ಇವೆರಡೂ ಸರಿಯಲ್ಲ. ಚಕ್ಕಡಿಯನ್ನು ಹೊಡೆಯುವವನು ಯಾವಾಗಲೂ ನಡು ಹಾದಿಯಿಂದಲೇ ಹೋಗತಕ್ಕದ್ದು. ಮಾರ್ಗದ ಯಾವ ಅಂಚಿಗೆ ಹೋದರೂ ಕಾಲುವೆಯೇ ಬರುವದು. ಇಂಥ ಲೇಖಕರು ಹಿಂದೆ ೩ನೆಯ ಕಲಮಿನಲ್ಲಿ ಹೇಳಿದ ವಿಚಾರಗಳನ್ನು ಇನ್ನೊಮ್ಮೆ ಓದಿಕೊಳ್ಳತಕ್ಕದ್ದು.

ಪತ್ರವ್ಯವಹಾರ.

ರಾವಸಾಹೇಬ ಕನ್ನಡ ಶಾಲಾ ಪತ್ರಕದ ಎಡಿಟರ ಧೊರೆಗಳವರ ಸನ್ನಿಧಿಗೆ—

ರೋಣ ತಾಲೂಕ ಪೈಕಿ ಸವಡಿ ಶಾಲೆಯ ಪ್ರವೇಶ ಪರೀಕ್ಷೆಯ ವಿದ್ಯಾರ್ಥಿಯಾದ ಬ. ಫ. ಪಾಟೀಲನ ತಿ. ನ. ವಿನಂತಿ ವಿಜ್ಞಾಪನೆಗಳು.

ಅಗಷ್ಟ ತಿಂಗಳ ಸಂಚಿಕೆಯಲ್ಲಿ ಮಿ. ಹುಲಿಕವಿ ಇವರು ಕೊಟ್ಟ ಲೆಕ್ಕವನ್ನು ಕೆಳಗೆ ಬರೆದಂತೆ ಬಿಡಿಸಿರುವೆನು. ಯುಕ್ತವಿದ್ದದ್ದಾದರೆ ಸ್ಥಲ ದೊರತೀತೆಂದು ಕೋರುವೆನು.

ಕಳ್ಳರು ಮತ್ತು ಸಜ್ಜನರು ಕೂಡಿ ವರ್ತುಳಾಕಾರವಾಗಿ ಕೂತಿರುವರಷ್ಟೇ? ಅವರನ್ನು ಯಾವ ಸ್ಥಾನದಿಂದಾದರೂ ಎಣಿಸಿ ಅನುಕ್ರಮ ನಂಬರುಗಳನ್ನು ಕೊಡುವ.

ಕಳ್ಳರು ೧೫+ಸಜ್ಜನರು ೧೫=೩೦ ಜನರಾದರು. ಆ ಹುಲಿಯು ತಾನು ಮೊದಲಿನಿಂದ ಎಣಿಸಿ ೯ನೇ ಸ್ಥಾನದ ಮನುಷ್ಯನನ್ನು ತಿಂದಿರುವದು. ಅದರಿಂದ ನಾವು ಸೌಲಭ್ಯಕ್ಕಾಗಿ ಒಂದು ಅಂಕೆಯನ್ನು ಹಿಡಿದು ೩೦ ಜನರಲ್ಲಿ ೯ ರ ಭಾಗಗಳನ್ನು ಮಾಡುತ್ತ ಅವುಗಳ ಮೇಲೆ ಗುರ್ತು ಹಾಕುತ್ತ ಹೋಗಲು, ಅವು ೯, ೧೮, ೨೭ ಈ ಅಂಕೆಗಳ ಮೇಲೆ ಬೀಳುವವು. ಈ ಗುರ್ತುಗಳುಳ್ಳ ಜನ (ಕಳ್ಳ) ರನ್ನು ಹುಲಿಯು ತಿಂದು ಬಿಟ್ಟ

ರುವದು. ಅಂದ ಮೇಲೆ ೩೦-೩=೨೭ ಜನರು ಮಾತ್ರ ಉಳಿದಿರುವರು. ಹುಲಿಯು ತಾನು ತಿಂದ ಮನುಷ್ಯನನ್ನು ಬಿಟ್ಟು ಮುಂದಿನ ಒಂಬತ್ತನೆಯ ಸ್ಥಾನದ ಮನುಷ್ಯನನ್ನು ಮಾತ್ರ ತಿನ್ನುವದು. ಅದರಿಂದ ೨೭ ಈ ಅಂಕೆಯು ಮುಂದಿನ ೯ ಸ್ಥಾನಗಳನ್ನು ಎಣಿಸಿ ಗುರ್ತು ಕೊಡಲು, ಅದು ನಾವು ಮೊದಲು ಅಂಕೆಯನ್ನು ಹಾಕಿದ ೬ನೆಯ ಸ್ಥಾನದಲ್ಲಿ ಬರುವದು. ಮುಂದಿನ ಒಂಬತ್ತು ಅಂಕೆಗಳನ್ನು ಎಣಿಸಲು ನಾವು ಮೊದಲು ೧೬ನೆಯ ಅಂಕೆಯನ್ನು ಬರೆದ ಸ್ಥಾನದಲ್ಲಿ ಗುರ್ತು ಬೀಳುವದು.

∵ ನಡುವಿನ ೯ನೆಯ ಸ್ಥಾನದ ಮನುಷ್ಯನನ್ನು ಹುಲಿಯು ಮೊದಲಿಗೇ ತಿಂದಿರುವದು. ∴ ನಮ್ಮ ಒಂಬತ್ತರ ಗುರ್ತು ೧೬ನೇ ಸ್ಥಾನದಲ್ಲಿ ಬೀಳಲಿಕ್ಕೆ ಬೇಕಷ್ಟೇ? ಇದರಂತೆ ಹುಲಿಯು ತಿಂದ ಮನುಷ್ಯರನ್ನು ಲೆಕ್ಕದಲ್ಲಿ ಹಿಡಿಯದೆ ೧೬ರ ಮುಂದಿನ ಒಂಬತ್ತು ಸ್ಥಾನಗಳನ್ನು ಎಣಿಸಿ ಗುರ್ತು ಮಾಡಲು ಅದು ೨೬ರ ಮೇಲೆ ಬೀಳುವದು. ಇದರಂತೆಯೇ ಹುಲಿಯು ತಿಂದ ಸ್ಥಳಗಳನ್ನು ಬಿಟ್ಟು ಉಳಿದವುಗಳ ಮೇಲೆ ಗುರ್ತು ಮಾಡಲು, ಅವು ಕೆಲವು ಅಂಕೆಗಳ ಮೇಲೆ ಬೀಳುವವು.

ಲೆಕ್ಕದಲ್ಲಿ ಹುಲಿಯು ಸಜ್ಜನರನ್ನು ಮಾತ್ರ ಬಿಟ್ಟಿರುವದು. ಅದರಿಂದ ಅವರ ೧೫ ಸ್ಥಾನಗಳು ಉಳಿಯ ಬೇಕಾಗಿರುವವು.

∴ ನಾವಾದರೂ ೧೫ ಸ್ಥಾನಗಳು ಉಳಿಯುವವರೆಗೆ ಗುರ್ತು ಮಾಡುತ್ತ ಹೋಗಲು ಅವು ೫,೬,೭,೮,೯,೧೨,೧೬,೧೮,೧೯,೨೨,೨೩,೨೪,೨೬,೨೭,೩೦ ಈ ಅಂಕೆಗಳ ಮೇಲೆ ಬರುವವು. ∴ ಈ ಸ್ಥಳಗಳು ಕಳ್ಳರವಿರಲಿಕ್ಕೆ ಬೇಕು. ಇದಕ್ಕೆ ನಿಯಮಿತವಾದ ಉತ್ತರಗಳು ಇಲ್ಲ. ∵ ಒಬ್ಬರು ಒಂದು ಸ್ಥಾನದಿಂದ ಮೊದಲು ಎಣಿಸಿದರೆ, ಮತ್ತೊಬ್ಬರು ಮತ್ತೊಂದು ಸ್ಥಾನದಿಂದ ಮೊದಲು ಎಣಿಸುವರು. ಆದದ್ದರಿಂದ ಇದಕ್ಕೆ ೩೦ ಪ್ರಕಾರದ ಉತ್ತರಗಳು ಬರುವವು. ಆದಕಾರಣ ಮೇಲಿನ ವಿವರಣೆಯಿಂದ ಹೊರಟ ಸಾಮಾನ್ಯ ನಿಯಮವನ್ನು ಲಕ್ಷದಲ್ಲಿ ತಂದರೆ, ಯಾರಿಗೂ ತೊಂದರೆ ಎನಿಸಲಿಕ್ಕಿಲ್ಲ.

ನಿಯಮಃ— ಯಾರು ಎಲ್ಲಿಂದ ಎಣಿಸುವರೋ ಅದರ ಮೊದಲಿನ ನಾಲ್ಕು ಸ್ಥಾನಗಳು ಸಜ್ಜನರವು. ಅದರ ಮುಂದಿನ ಐದು ಸ್ಥಾನಗಳು ದುರ್ಜನರವು. ಅದರ ಮುಂದಿನ ಎರಡು ಸ್ಥಾನಗಳು ಸಜ್ಜನರವು. ಅದರ

ಮುಂದಿನ ಒಂದು ಸ್ಥಾನವು ಕಳ್ಳನದು. ಅದರ ಮುಂದಿನ ಮೂರು ಸ್ಥಾನಗಳು ಸಜ್ಜನರವು. ಅಲ್ಲಿಂದ ಮುಂದಿನ ಒಂದು ಸ್ಥಾನವು ದುರ್ಜನರದು. ಅಲ್ಲಿಂದ ಒಂದು ಸ್ಥಾನವು ಸಜ್ಜನರದು. ಅದರ ಮುಂದಿನ ಎರಡು ಸ್ಥಾನಗಳು ದುರ್ಜನರವು. ಅದರ ಮುಂದಿನ ಎರಡು ಸ್ಥಾನಗಳು ಸಜ್ಜನರವು. ಅದರ ಮುಂದಿನ ಮೂರು ಸ್ಥಾನಗಳು ದುರ್ಜನರವು. ಅದರ ಮುಂದಿನ ಒಂದು ಸ್ಥಾನವು ಸಜ್ಜನರದು. ಅದರ ಮುಂದಿನ ಎರಡು ಸ್ಥಾನಗಳು ದುರ್ಜನರವು. ಅದರ ಮುಂದಿನ ಎರಡು ಸ್ಥಾನಗಳು ಸಜ್ಜನರವು. ಕಡೆಯ ಸ್ಥಾನವು ದುರ್ಜನನದು.

ಉತ್ತರ:— ಪ್ರತಿಯೊಬ್ಬರು ಎಣಿಸುವ ೫,೬,೭,೮,೯,೧೨,೧೬,೧೮,೧೯,೨೨,೨೩,೨೪,೨೬,೨೭,೩೦ ನೇಯ ಸ್ಥಾನಗಳು ಕಳ್ಳರವಾಗುವವು. ಇತಿ ನಮಸ್ಕಾರ.

ಲೋಭವಿರಲಿ.

ಶಾಲಾ ಸವಡಿ.
ತಾ. ೨೨-೮-೧೯೧೫

ಬ. ಫ. ಪಾಟೀಲ,
ಪ್ರವೇಶ ಪರೀಕ್ಷೆಯ ವಿದ್ಯಾರ್ಥಿ.

ಮೇಲಿನ ಉದಾಹರಣೆಯ ಉತ್ತರವನ್ನು ಮಾತ್ರ ಹಲವು ಶಿಕ್ಷಕರು ಬರೆದು ಕಳುಹಿಸುವರು. ಆದಕಾರಣ, ಅವರ ಪತ್ರಗಳನ್ನು ಮುದ್ರಿಸುವ ಅವಶ್ಯಕತೆ ಇಲ್ಲ.

ಎ. ಶಾ. ಪ.

ರಾವಸಾಹೇಬ ಕನ್ನಡ ಶಾಲಾಪತ್ರಕದ ಎಡಿಟರ ದೊರೆಗಳವರ ಚರಣಸನ್ನಿಧಿಗೆ:—

ಸಾ. ನ. ವಿ. ವಿ. ಆಗಸ್ಟ ತಿಂಗಳಲ್ಲಿ ಕೊಟ್ಟ ಕೂಟಪ್ರಶ್ನೆಗೆ ನನ್ನ ವ್ಯವಸಾಯ ಬಂಧುಗಳಲ್ಲೋರ್ವರು ಉತ್ತರವನ್ನು ಬರೆದಿರುವರು. ಆ ಉತ್ತರವು ಉದ್ದವಾದದ್ದರಿಂದ, ಸ್ಮರಣದಲ್ಲಿಡಲಿಕ್ಕೆ ಕಷ್ಟಸಾಧ್ಯವಾದದ್ದೆಂಬದನ್ನು ಹೇಳಲವಶ್ಯವಿಲ್ಲ. ಯಾವದೊಂದು ಉದ್ದವಾದ ಸಂಗತಿಯನ್ನು ಸಂಕ್ಷಿಪ್ತ ರೀತಿಯಿಂದ ಸ್ಮರಣದಲ್ಲಿಡಲಿಕ್ಕೆ ಗದ್ಯಗಳಿಗಿಂತಲೂ ಪದ್ಯಗಳು ವಿಶೇಷ ಅನುಕೂಲವಾದವುಗಳು. ಅದರಲ್ಲಿಯೂ

ಕನ್ನಡಭಾಷೆಗಿಂತ ಸಂಸ್ಕೃತಭಾಷೆಯ ಶಬ್ದಗಳಲ್ಲಿ ಅರ್ಥ-ಗಾಂಭೀರ್ಯವೂ, ವ್ಯಾಪಕತೆಯೂ ಹೆಚ್ಚು. ಆದ್ದರಿಂದ ಆ ಉತ್ತರವನ್ನು ಕೆಳಗಿನ ಶ್ಲೋಕದಿಂದ ಸಹಜವಾಗಿ ಲಕ್ಷ್ಯದಲ್ಲಿಡಬಹುದು.

चतु:पञ्चद्वितीयाश्च एकत्रिण्येक एकयो: ।
द्विद्वित्रिण्येक द्विद्विश्च एकश्च परिकीर्तिता: ॥ १ ॥

ಸೂಚನೆ:—ಹುಲಿಯು ಎಣಿಸಲಿಕ್ಕೆ ಪ್ರಾರಂಭಿಸಿದ ಸ್ಥಳದಿಂದ ಶ್ಲೋಕದಲ್ಲಿ ಹೇಳಿದಂತೆ ಕ್ರಮದಿಂದ ಸಜ್ಜನರೂ, ಕಳ್ಳರೂ ಎಂದು ಭಾವಿಸಬೇಕು.

ಇಂತು ಸಾಷ್ಟಾಂಗ ನಮಸ್ಕಾರಗಳು,

ಟ್ರೇ. ಕಾ, ಧಾರವಾಡ.	ನಮ್ರಶಿಷ್ಯ
ತಾ|| ೨೭-೮-೧೯೧೫	ಭೀಮಾಜಿ ಜೀವಾಜಿ ಹುಲಿಕವಿ.

ವಿದ್ಯಾಖಾತೆಯ ನೋಟೀಸು.

ಮಿ. ಬಿ. ಅಶ್ವತ್ಥನಾರಾಯಣರವರು ಬರೆದ "ಧರ್ಮಪದ" (ಕ್ರಯ ೧೦ ಆಣೆ) ವೆಂಬ ಪುಸ್ತಕವು ಕನ್ನಡ ಪ್ರಾಥಮಿಕ ಶಾಲೆಗಳ ಲಾಯಬ್ರರಿಗಳಿಗೋಸ್ಕರ ಮೆ|| ಎಜ್ಯುಕೇಶನಲ್ ಇನಸ್ಪೆಕ್ಟರಸಾಹೇಬ ದಕ್ಷಿಣಭಾಗದವರ ಇಂಗ್ಲಿಷಪತ್ರ ನಂಬರ ೫೦೯೧ ತಾರೀಖು ೧೧ ಅಗಸ್ಟ ೧೯೧೫ನೆಯ ಮೇರೆಗೆ ಮಂಜೂರು ಮಾಡಲ್ಪಟ್ಟದೆ.

ಪತ್ರಗಳ ಸಾರಾಂಶ.

ಬೆಳಗಾವ ಜಿಲ್ಲಾ ಹಲಸಿ ಶಾಲೆಯನ್ನು ನೋಡುವದಕ್ಕೆ ಅರಳೀಕಟ್ಟಿಯ ಪ್ರಸಿದ್ಧ ಸಾಹುಕಾರರಾದ ಶ್ರೀ. ಹೊಳಿಯಪ್ಪಾ ಅಣ್ಣಾ ಸಂಗೊಳ್ಳಿ ಮತ್ತು ಶ್ರೀ. ಚನಮಲ್ಲಪ್ಪಾ ಅಣ್ಣಾ ಹೊಸಮನಿ ಈ ಉಭಯತರು ಹೋದಾಗ ಸದರೀ ಶಾಲೆಯ ಉತ್ತೇಜನಕ್ಕಾಗಿ ೧೦ ರೂಪಾಯಿಗಳನ್ನು ಉಚಿತವಾಗಿ ಕೊಟ್ಟರೆಂದು ಸದರೀ ಶಾಲೆಯ ಅಧ್ಯಾಪಕರಾದ ಮಿ. ಜೀವಾಜಿ ಅನಂತ ಕುಲಕರ್ಣಿ ಎಂಬವರು ಬರೆಯುತ್ತಾರೆ.

ಶ್ರೀ ನಾಥ ಗೂರಿ. ಹೊಂಬಳಿ

ಶಾಲಾಪತ್ರಿಕೆ.

ಪುಸ್ತಕ ೫೧. | ಅಕ್ಟೋಬರ ೧೯೧೫. | ಸಂಚಿಕೆ ೧೦

ಸ್ಫುಟವಿಷಯಗಳು.

೧. ಮೀನಗಳ ರಕ್ತದ ಉಷ್ಣತೆಯು.

ಜಗತ್ತಿನಲ್ಲಿ ಕೆಲವು ಪ್ರಾಣಿಗಳ ರಕ್ತವು ತಣ್ಣಗಿರುವದು; ಬೇರೆ ಕೆಲವುಗಳ ರಕ್ತವು ಬೆಚ್ಚಗಿರುವದು. ಮನುಷ್ಯಪ್ರಾಣಿಯ ರಕ್ತವು ಯಾವಾಗಲು ೯೮ ಅಂಶ ಉಷ್ಣತೆಯುಳ್ಳದ್ದಿರುವದು. ಈ ಉಷ್ಣತಾಮಾನದಲ್ಲಿ ಹೆಚ್ಚು ಕಡಿಮೆಯಾದರೆ ಅವನ ಶರೀರಪ್ರಕೃತಿಯಲ್ಲಿ ವ್ಯತ್ಯಾಸವಾಗಿರುವದೆಂದು ತಿಳಿಯತಕ್ಕದ್ದು. ಇನ್ನು, ಮೀನಗಳ ರಕ್ತವು ಉಷ್ಣವಾಗಿರುವದೋ ತಣ್ಣಗಿರುವದೋ ಎಂಬದನ್ನು ತುಸು ವಿಚಾರಿಸಲು, ಅದು ತಣ್ಣಗಿರುವದೆಂದು ಗೊತ್ತಾಗುವದು. ಹ್ಯಾಗಂದರೆ, ಮನುಷ್ಯಪ್ರಾಣಿಯ ರಕ್ತದ ಉಷ್ಣತಾಮಾನವು ನೀರಿನ ಸಾಧಾರಣ ಉಷ್ಣತಾಮಾನಕ್ಕಿಂತ ಹೆಚ್ಚಿರುವದರಿಂದ ಈ ಪ್ರಾಣಿಗೆ ಬಹಳ ಹೊತ್ತು ನೀರಿನಲ್ಲಿ ಇರಲಿಕ್ಕಾಗುವದಿಲ್ಲ. ತಕ್ಕಷ್ಟಕ್ಕಿಂತ ಹೆಚ್ಚು ಹೊತ್ತು ನೀರಿನಲ್ಲಿ ಉಳಿದರೆ, ಮನುಷ್ಯಪ್ರಾಣಿಯ ರಕ್ತವು ತಣ್ಣಗಾಗಿ ಶರೀರಕ್ಕೆ ಬಾಧೆಯಾಗುವದು. ಮೀನಗಳಂತೂ ಯಾವಾಗಲೂ ನೀರಿನಲ್ಲಿಯೇ ವಾಸಿಸುವ ಪ್ರಾಣಿಗಳು; ಆದರೆ ಇವುಗಳ ರಕ್ತದ ಉಷ್ಣತೆಯು, ನೀರಿನ ಸಾಧಾರಣ ಉಷ್ಣಮಾನದಷ್ಟೇ ಇರುವದರಿಂದ ಅವುಗಳಿಗೆ ಯಾವ ತರದ ಬಾಧೆಯೂ ತಟ್ಟುವದಿಲ್ಲ. ಇದರಿಂದ ಮೀನಗಳ ರಕ್ತವು ತಣ್ಣಗಿರುವದೆಂದು ತಿಳಿಯುವದು.

---

೨. ಚಂದ್ರನ ಮೇಲಿನ ಋತುಗಳು.

ಇದುವರೆಗೆ ಚಂದ್ರನ ಮೇಲೆ ವಾತಾವರಣವೂ, ನೀರೂ ಇಲ್ಲವೆಂದು ಜನರು ನಂಬಿದ್ದರು. ಅಲ್ಲಿ ಉಷ್ಣತೆಯೂ, ಶೈತ್ಯವೂ ಬಹಳ ಪುಟ್ಟಿಗೆ ಇರುವದು. ಚಂದ್ರನ ಮೇಲಿನ ಮಧ್ಯರಾತ್ರಿಯಲ್ಲಿ ಶೂನ್ಯ ಅಂಶದ ವರೆಗೆ ಶೀತವೂ, ಚಂದ್ರನ ಮಧ್ಯಾಹ್ನದಲ್ಲಿ ನಮ್ಮ ಪೃಥ್ವಿಯ

ವಿಷುವವೃತ್ತದ ಸಮೀಪದ ಪ್ರದೇಶದಂತೆ ಉಷ್ಣತೆಯೂ ಇರುವದು. ಪ್ರೊ. ಪಿಕಾರಿಂಗ್ ಎಂಬವರು ಹೇಳುವದೇನಂದರೆ, ಉಷ್ಣತೆಯಲ್ಲಾಗುವ ಈ ಹೆಚ್ಚು ಕಡಿಮೆಯು ನೀರೂ, ವಾತಾವರಣವೂ ಇಲ್ಲದೆ ಆಗುವ ಸಂಭವವಿಲ್ಲ; ಮತ್ತು ದುರ್ಬೀನಿನಿಂದ ಚಂದ್ರನ ಮೇಲೆ ಕಾಣುವ ಬದಲಾವಣೆಗಳು ಆ ಊಪಸರ-ಉಪಗ್ರಹದ ಮೇಲೆ ಮಳೆ, ನೀರು, ಮಂಜು, ಇಬ್ಬನ್ನಿ ಮೊದಲಾದವುಗಳಿಂದ ಉಂಟಾಗುವವಲ್ಲದೆ ಬೇರೆಯಿಲ್ಲ.

ದುರ್ಬೀನಿನಿಂದ ನೋಡಿ ಕಂಡುಬಂದಿರುವ ಚಂದ್ರನ ಮೇರು ಪ್ರದೇಶದ ಮತ್ತು ಪ್ರಸಿದ್ಧವಾದ ಪಿಕೋ ಪರ್ವತದ ನೋಟಗಳಿಂದ ಚಂದ್ರನ ಮೇಲೆ ಬರ್ಫವು ಬೀಳುತ್ತದೆಂದೂ, ಆದರ ಪರಿಮಾಣವು ಬೇರೆ ಬೇರೆ ಸಮಯಗಳಲ್ಲಿ ಬೇರೆ ಬೇರೆ ಆಗುತ್ತದೆಂದೂ ಕಂಡುಬಂದಿದೆ. ನಡುನಡುವೆ ಚಂದ್ರನ ಮೇಲಿರುವ ಬರ್ಫದ ಬಿಳಿಯ ಕಲೆಗಳಲ್ಲಿ ಉಂಟಾಗುವ ಅತಿಶಯವಾದ ಬದಲಾವಣೆಗಳಿಂದ ಅವು ಹಿಮವು, ಇಲ್ಲವೆ ಬರ್ಫದ ಮಳೆಯು ಎಂದು ಸ್ವೀಕರಿಸಿದ ಹೊರತು ಗತ್ಯಂತರವಿಲ್ಲ. ಪಿಕಾರಿಂಗ್ ಇವರು ಚಂದ್ರನ ಮೇಲೆ ಉಷ್ಣಜಲಪ್ರವಾಹಗಳು ಇರುವವೆಂಬದನ್ನೂ ಚಂದ್ರನ ಪ್ರಾತಃಕಾಲದಲ್ಲಿ ಸೂರ್ಯಕಿರಣಗಳಿಂದ ಬರ್ಫವು ಕರಗುವದನ್ನೂ ಕಂಡು ಹಿಡಿದಿರುವರು. ಪಿಕೋ ಪರ್ವತದ ಮೇಲೆ ಕಾಣಿಸುವ ಬಿಳಿಯ ಕಲೆಗಳು ಸೂರ್ಯಪ್ರಕಾಶವು ಅವುಗಳ ಮೇಲೆ ಹೆಚ್ಚು ಹೆಚ್ಚು ಬಿದ್ದಂತೆ ಕೂಡುತ್ತ ಹೋಗುವವೆಂದು ಕಂಡುಬಂದಿರುವದು. ಆದ್ದರಿಂದ ಆ ಬಿಳಿಯ ಪದಾರ್ಥವು ಬರ್ಫವಲ್ಲದೆ ಬೇರೆ ಏನೂ ಅಲ್ಲ. ಈ ಬರ್ಫವು ನೆಲದ ಮೇಲೆ ಒಟ್ಟಾಗಿ ಇರುವದೋ ಇಲ್ಲವೆ ಮೇಲೆ ಆಕಾಶದಲ್ಲಿ ಹಿಮದ ಇಲ್ಲವೆ ಮೋಡದ ರೂಪದಿಂದ ತೇಲುತ್ತ ಚಲಿಸುತ್ತಿರುವದೋ ಎಂಬದು ಮಾತ್ರ ನಿರ್ಣಯಿಸಲ್ಪಟ್ಟಿಲ್ಲ. ಆದರೂ ಅಲ್ಲಲ್ಲಿ ನೆಲದ ಮೇಲೆಯೇ ಜಮೆಯಾಗಿ ಇರಬಹುದೆಂದು ತೋರುವದು.

---

೩. ಕರ್ನಾಟಕ ಕಾಲೇಜ.

ಇದೇ ಸಂಚಿಕೆಯ ೧೩ನೆಯ ಪುಟದಲ್ಲಿ R ಎಂಬ ಗೃಹಸ್ಥರು ಬರೆದು ಕಳುಹಿದ ಕರ್ನಾಟಕ ಕಾಲೇಜದ ಸಂಬಂಧದ ಲೇಖವನ್ನು ಶಾಲಾಪತ್ರಕದ ವಾಚಕರಿಗೋಸ್ಕರ ಪ್ರಸಿದ್ಧಪಡಿಸಿದ್ದೇವೆ. ಕರ್ನಾಟಕವನ್ನಾಳಿದು

ಮುಂಬಯಿ ಇಲಾಖೆಯ ಪ್ರತಿ ಒಂದು ಭಾಗದಲ್ಲಿ ಕನಿಷ್ಟಪಕ್ಷಕ್ಕೆ ಒಂದೊಂದಾದರೂ ಉಚ್ಚಪ್ರತಿಯ ಶಿಕ್ಷಣದ ಕಾಲೇಜವಿದ್ದು ಕರ್ನಾಟಕಪ್ರಾಂತದಲ್ಲಿ ಮಾತ್ರ ಒಂದೂ ಇಲ್ಲದಿರುವದು ಕೇವಲ ಶೋಚನೀಯವಾದ ಸಂಗತಿಯಾಗಿರುತ್ತದೆ. ಇಂಥ ಕಾಲೇಜವಿಲ್ಲದಿರುವವರೆಗೆ ಕರ್ನಾಟಕದ ವಿದ್ಯಾಮಂದಿರಕ್ಕೆ ಕಳಸವೇ ಇಲ್ಲದಾಗಿ ಇರುವದೆಂದು R ರವರು ಬರೆದದ್ದು ಯಥಾರ್ಥವಾಗಿದೆ. ಈ ಪ್ರಾಂತದಲ್ಲಿ ಕಾಲೇಜವು ಈಗಲಾದರೂ ತೀವ್ರವಾಗಿ ಸ್ಥಾಪಿಸಲ್ಪಟ್ಟು, ಕನ್ನಡಿಗರ ವಿದ್ಯಾಸಂಪಾದನೆಗೆ ಸೌಲಭ್ಯವುಂಟಾಗುವದು ಅತ್ಯಂತ ಅವಶ್ಯವಾಗಿರುವದರಿಂದ ಅದರ ಸ್ಥಾಪನೆಗಾಗಿ ಜನರ ವತಿಯಿಂದ ಸರಕಾರಕ್ಕೆ ಕೊಡಲೊಪ್ಪಿದ ಹಣವನ್ನು ಕೂಡಿಸುವ ಯತ್ನವನ್ನು ಮಾಡುತ್ತಿರುವ ನಾಮದಾರ ರಾವಬಹದ್ದೂರ ರೊದ್ದರವರೇ ಮೊದಲಾದ ಗೃಹಸ್ಥರಿಗೆ ಪ್ರತಿ ಒಬ್ಬರು ತಮ್ಮ ಕೈಲಾದ ಮಟ್ಟಿಗೆ ಸಹಾಯಮಾಡುವರೆಂದು ನಾವು ತುಂಬಾ ನಂಬುತ್ತೇವೆ.

---

೪. ಜಗತ್ತಿನಲ್ಲಿ ಅತಿ ಪ್ರಚಂಡವಾದ ಮದ್ದಿನ ಕಾರಖಾನೆಯು.

ಯಾವದೊಂದು ಕಾರಖಾನೆಯನ್ನು ಪೂರ್ಣಾವಸ್ಥೆಗೆ ಮುಟ್ಟಿಸಬೇಕಾದರೆ, ಎಷ್ಟು ಅವಕಾಶವು ಹಿಡಿಯುವದು, ಕಡೆಗೆ ಅದರಿಂದ ಮಧುರವಾದ ಫಲಗಳು ದೊರೆಯುವ ತನಕ ಮನಸ್ಸನ್ನು ಹ್ಯಾಗೆ ಬಿಗಿಹಿಡಿಯ ಬೇಕಾಗುವದು, ಇವೇ ಮೊದಲಾದ ಸಂಗತಿಗಳ ಕಲ್ಪನೆಯು ನಮ್ಮ ವಾಚಕರ ಮನಸಿನಲ್ಲಿ ಬರಬೇಕೆಂದು, ಸದ್ಯದ ಯುರೋಪೀಯ ಯುದ್ಧದ ಕಾಲದಲ್ಲಿ ಜನರ ಬಾಯಿಂದ ಮೇಲಿಂದ ಮೇಲೆ ಕೇಳಬರುತ್ತಿದ್ದ ಜರ್ಮನೀ ದೇಶದ ಫ್ರೆಡರಿಕ್ ಕ್ರುಪ್‌ನೆಂಬವನು ಸ್ಥಾಪಿಸಿದ ಜಗತ್ತಿನಲ್ಲಿ ಅತಿಪ್ರಚಂಡವಾದ ಮದ್ದಿನ ಕಾರಖಾನೆಯ ಸಂಕ್ಷಿಪ್ತ ವರ್ಣನೆಯನ್ನು ಇಲ್ಲಿ ಕೊಡುವೆವು:—

ಈ ಕಾರಖಾನೆಯನ್ನು ಫ್ರೆಡರಿಕ್ ಕ್ರುಪ್‌ನೆಂಬವನು ೧೮೧೧ನೇ ಇಸವಿಯಲ್ಲಿ ಸ್ಥಾಪಿಸಿದನು. ಆ ಕಾಲಕ್ಕೆ ಈ ಕಾರಖಾನೆಯು ಒಂದು ಸಣ್ಣ ಮನೆಯಲ್ಲಿತ್ತು. ಕಾರಖಾನೆಯನ್ನು ನಡಿಸುವವನು ಸ್ವತಃ ಕಮ್ಮಾರನಿದ್ದದರಿಂದ ಅವನು ಮೊದಲು ಕಬ್ಬಿಣ ಉಕ್ಕುಗಳ ಸಾಮಾನುಗಳನ್ನು,

ಸಣ್ಣ ಪ್ರಮಾಣದಿಂದ ಸಿದ್ಧಮಾಡುತ್ತಿದ್ದನು. ಈ ವೊತ್ತಿಗೆ ಈ ಕಾರಖಾನೆಯಲ್ಲಿ ೨೦ ಸಾವಿರ ಜನರು ಕೆಲಸಮಾಡುತ್ತಿರುವರು; ಸುಮಾರು ಎರಡು ಲಕ್ಷ ಜನರು ಈ ಕಾರಖಾನೆಯಿಂದ ಉಪಜೀವಿಸುವರು. ಕ್ರುಪ್ಪನ ಉಕ್ಕು ಕಬ್ಬಿಣಗಳ ಕಾರಖಾನೆಯ ಬೇರೆ ಬೇರೆ ಶಾಖೆಗಳು ಇಡೀ ಯುರೋಪಖಂಡದಲ್ಲಿ ಐನೂರಕ್ಕಿಂತ ಹೆಚ್ಚಿರುವವು. ಮುಖ್ಯ ಕಾರಖಾನೆಯಲ್ಲಿ ಎಷ್ಟೋ ಬೇರೆ ಬೇರೆ ಖಾತೆಗಳಿದ್ದು, ಅದಕ್ಕೆ ಹೊಂದಿಕಲ್ಲಿದ್ದಲಿಯ ಕೆಲವು ಕಣಿಗಳು ಇರುವವು. ಮಾಲು ತರುವದಕ್ಕೂ ಒಯ್ಯುವದಕ್ಕೂ ಕಾರಖಾನೆಯ ಸ್ವಂತದ ಲೋಹಮಾರ್ಗಗಳು ಇರುವವು; ಮತ್ತು ಅದಕ್ಕೆ ಬೇಕಾಗುವ ಎಂಜಿನ್‌ಗಳನ್ನೂ ಉಗಿಬಂಡಿಯ ಡಬ್ಬಿಗಳನ್ನೂ ಮಾಡುವ ಕಾರಖಾನೆಯು ಮುಖ್ಯ ಕಾರಖಾನೆಗೆ ಜೋಡಿಸಲ್ಪಟ್ಟಿರುವದು. ಕಾರಖಾನೆಯೊಳಗಿನ ಕೆಲಸಗಳು ಅತಿಭಯಂಕರವಾದವುಗಳೂ ಒಮ್ಮೊಮ್ಮೆ ಜೀವದ ಮೇಲೆ ಪ್ರಸಂಗ ತರುವಂಥವುಗಳೂ ಇರುವವು. ಈ ಕಾರಖಾನೆಯಲ್ಲಿ ಒಂದು ತೋಫನ್ನು ಹೊಯ್ದರೆ ಅದರ ಬೆಲೆಯು ಐದು ಲಕ್ಷ ಡಾಲರ (ಡಾಲರ ಅಂದರೆ ಸುಮಾರು ಮೂರು ರೂಪಾಯಿ) ಆಗುವದು.

ಅಮೇರಿಕಾ ಖಂಡದೊಳಗಿನ ಯಾವದೊಂದು ಕಾರಖಾನೆಯೊಳಗಿನ ಜನರಿಗಿಂತ ಕ್ರುಪ್ಪನ ಕಾರಖಾನೆಯೊಳಗಿನ ಬಹು ಜನರು ದೃಢವಾದ ಮೈಕಟ್ಟುಳ್ಳವರೂ ತೇಜಸ್ವಿಗಳೂ ಆಗಿರುವರು. ಕಾರಖಾನೆಯಲ್ಲಿ ಪ್ರತಿದಿವಸ ಸಾವಿರಾರು ಜನರಿಗೆ ಸಣ್ಣಪುಟ್ಟ ಗಾಯುಗಳೂ ನೋವುಗಳೂ ಆಗುತ್ತಿರುವವು; ಆದರೆ ಅವರ ಉಪಚಾರಕ್ಕಾಗಿ ನಿಯಮಿಸಲ್ಪಟ್ಟ ಜನರು ಇಂಥ ಪ್ರತಿಯೊಂದು ಪ್ರಸಂಗದಲ್ಲಿ ಅವರಿಗೆ ಯೋಗ್ಯ ಔಷಧೋಪಚಾರವನ್ನು ಮಾಡುವದಕ್ಕಾಗಿ ಇದ್ದಲ್ಲಿಂದ ಓಡಿ ಬರುತ್ತಾರೆ. ಕಾರಖಾನೆಯಲ್ಲಿಯೇ ದವಾಖಾನೆಗಳೂ ಆಸ್ಪತ್ರಿಗಳೂ ಇರುವವು. ಕಾರಖಾನೆಯೊಳಗಿನ ಜನರ ಸಂಬಳದ ಸಲುವಾಗಿ ವರ್ಷಕ್ಕೆ ೫೦ ಲಕ್ಷ ಡಾಲರಗಳಿಗಿಂತ ಹೆಚ್ಚು ಹಣವು ವೆಚ್ಚವಾಗುವದು. ಕಾರಖಾನೆಯೊಳಗಿನ ಜನರು ಯಾವ ಸಂಬಂಧದಿಂದಲೂ ಹೊರಗಿನ ಜನರ ಕೂಡ ಸಂಬಂಧವನ್ನು ಇಡುವ ಪ್ರಸಂಗವು ಬರಬಾರದೆಂದು ಕಾರಖಾನೆಯ ಸಮೀಪಕ್ಕೆ ಬೇರೆ ಬೇರೆ ಊರುಗಳನ್ನು ನೆಲಿಸಿ, ಎಷ್ಟೋ

ಜನರಿಗೆ ಮನೆಗಳೂ ಕಟ್ಟಿಕೊಡಲ್ಪಟ್ಟಿರುವವು. ಅವುಗಳಲ್ಲಿ ಹೆಂಡರು ಮಕ್ಕಳೊಡನೆ ಇರುವವರ ಊರುಗಳು ಬೇರೆ ಕಡೆಗೆ ಇರುವವು. ಅವರ ಮಕ್ಕಳ ಶಿಕ್ಷಣದ ಸಲುವಾಗಿ ಸಾಲೆಗಳೂ ವಾಚನಾಲಯಗಳೂ ಸ್ಥಾಪಿಸಲ್ಪಟ್ಟಿರುವವು. ಇದಲ್ಲದೆ ಕೆಲಸ ಮಾಡುವ ಜನರ ಮನರಂಜನಾರ್ಥವಾಗಿ ಬೇಕಾಗುವ ಸಾಧನಗಳು ಒದಗಿಸಿ ಕೊಡಲ್ಪಟ್ಟಿರುವವು. ಇದಲ್ಲದೆ ಜಗತ್ತಿನೊಳಗಿನ ಎಲ್ಲ ಕಾರಖಾನೆಯೊಳಗಿನ ಜನರಿಗೆ ದೊರೆಯುವ ಸಂಬಳಕ್ಕಿಂತ ಈ ಕಾರಖಾನೆಯೊಳಗಿನ ಜನರಿಗೆ ಹೆಚ್ಚು ಸಂಬಳವು ದೊರೆಯುತ್ತಿದ್ದು ಅವರು ಒಳ್ಳೇ ಪ್ರೇಮದಿಂದ ನಡೆಯಿಸಿಕೊಳ್ಳಲ್ಪಡುವರು. ಅಧರಿಂದ ಅವರು ಎಂದೂ ಒಕ್ಕಟ್ಟು ಮಾಡಿ ಕೆಲಸಕ್ಕೆ ವಿಘ್ನವನ್ನುಂಟು ಮಾಡುವ ಗೊಂದಲದಲ್ಲಿ ಬೀಳುವದಿಲ್ಲ. ಅವರ ಸಲುವಾಗಿ ಮನೆಗಳನ್ನು ಕಟ್ಟಿಕೊಟ್ಟಿದ್ದರಿಂದ ಅವರ ಕೆಲಸಮಾಡುವ ಅವಧಿಯು ಮುಗಿದ ಮೇಲೆ ಸಹ ಅವರು ಅಲ್ಲಿಯೇ ಇರುವರು. ಅವರ ಸಲುವಾಗಿ ದೊಡ್ಡ ದೊಡ್ಡ ಸಂತೆ ಪೇಟೆಗಳೂ ಬ್ಯಾಂಕುಗಳೂ ಸ್ಥಾಪಿಸಲ್ಪಟ್ಟಿರುವವು. ಮತ್ತು ಎಷ್ಟೋ ಸಾರ್ವಜನಿಕ ತೋಟಗಳೂ ಕ್ರಿಕೆಟ್, ಫುಟ್‌ಬಾಲ, ಟೆನಿಸ್ ಮೊದಲಾದ ಆಟಗಳ ಬೈಲುಗಳೂ ಇರುವವು. ಹೆಣ್ಣುಮಕ್ಕಳಿಗೆ ಸಂಸಾರದ ಕೆಲಸಗಳನ್ನು ಕಲಿಸುವ ಸಾಲೆಗಳು ಸ್ಥಾಪಿಸಲ್ಪಟ್ಟಿರುವವು. ಇದಲ್ಲದೆ ಕಾರಖಾನೆಯಲ್ಲಿ ಕೆಲಸಮಾಡುತ್ತಿರುವ ಸಾವಿರಾರು ಹುಡುಗರಿಗೆ ರಾತ್ರಿಯಲ್ಲಿ ಶಿಕ್ಷಣವು ಕೊಡಲ್ಪಡುವದು. ಇನ್ನೊಂದು ಮಹತ್ವದ ಸಂಗತಿಯು ಯಾವದೆಂದರೆ, ಕಾರಖಾನೆಯೊಳಗಿನ ಎಲ್ಲ ಅಂಗಡಿಗಳಲ್ಲಿ ಕೂಲಿಕಾರರೇ ಜಿನಸುಗಳನ್ನು ಕೊಳ್ಳುವರಾದ ಕಾರಣ ಅಲ್ಲಿ ಆಗುವ ಲಾಭವನ್ನು ವರ್ಷಾಂತ್ಯಕ್ಕೆ ಆ ಕೂಲಿಕಾರರೊಳಗೇ ಹಂಚಿಕೊಡುವರು. ಕೂಲಿಕಾರರು ಮೂವತ್ತು ವರ್ಷ ಕೆಲಸಮಾಡುವರು; ಕೆಲಸದ ಅವಧಿಯು ಮುಗಿದ ಮೇಲೆ ಕಾರಖಾನೆಯ ಒಡೆಯರಿಂದ ಅರ್ಧ ಪೆನ್‌ಶನು ದೊರೆಯುವದು. ಇದಕ್ಕಾಗಿ ಕ್ರುಪ್ಪನು ಸರಕಾರಕ್ಕೆ ಕೆಲವು ಹಣವನ್ನು ಕೊಡಬೇಕಾಗುವದು. ಈ ಮೇರೆಗೆ ಕೂಲಿಕಾರರಿಗೆ ಅನೇಕ ಲಾಭಗಳು ಆಗುತ್ತಿರುವದರಿಂದ ಅವರು ತಮ್ಮ ತಮ್ಮೊಳಗೆ ಕೆಲವು ಫಂಡುಗಳನ್ನು ಕೂಡಿಸಿ ಆ ಹಣದಿಂದ ಬೇರೆ ಲಾಭವನ್ನು ಗಳಿಸುವರು. ಹೀಗೆ ಕೂಲಿಕಾರರಿಗೆ ಹಣದ ಅನುಕೂಲತೆಯಾಗುವದರಿಂದ ಯಾವನೊಬ್ಬ ಕೂಲಿ

ಕಾರನು ಮರಣಹೊಂದಿದರೆ ಅವನ ಹಿಂದೆ ಉಳಿಯುವ ಅವನ ಕುಟುಂಬದ ಜನರು ಹೊಟ್ಟೆಗಿಲ್ಲದೆ ಗೋಳಾಡುವ ಪ್ರಸಂಗವು ಒದಗುವದಿಲ್ಲ. ಸದ್ಯಕ್ಕೆ ಈ ಪ್ರಚಂಡ ಕಾರಖಾನೆಯ ಒಡೆತನವು ಕ್ರುಪ್ಪನ ಮಗಳ ವಶಕ್ಕೆ ಇರುವದು.

ಆದರೆ ಈ ಕಾರಖಾನೆಯ ಉದ್ದೇಶವು ಮನುಷ್ಯನ ಸುಖವನ್ನು ಬೆಳೆಯಿಸುವದಂತಿರಲಿ, ಮನುಷ್ಯನ ಸಂಹಾರವನ್ನು ಮಾಡುವದಕ್ಕೆ ಅತ್ಯದ್ಭುತವಾದ ಸಾಧನಗಳನ್ನೇ ಒದಗಿಸಿಕೊಡುವದಿರುವವರಿಂದ, ಅದು ಪಾಶ್ಚಾತ್ಯ ಸುಧಾರಣೆಯ ಮೋರೆಗೂ, ಅದರಲ್ಲಿ ಹೆಸರಾದ ಜರ್ಮನ್ನರ ನಾಗರಿಕತೆಯ ಮೋರೆಗೂ ಮಸಿಯನ್ನು ಚನ್ನಾಗಿ ತೊಡೆಯುತ್ತದೆಂದು ಹೇಳಲವಶ್ಯವಿಲ್ಲ.

ಸಹರಾ ಅರಣ್ಯದೊಳಗಿನ ಮಠವಾಸಿಗಳು.

ತಪಸಾಚರಣೆಗೆ ಸಂಪೂರ್ಣವಾದ ಶಾಂತತೆಯುಳ್ಳ ಏಕಾಂತ ಸ್ಥಳವು ಅವಶ್ಯವಿದ್ದದರಿಂದ ವಿರಕ್ತರು ಯಾವಾಗಲೂ ನಿರ್ಜನಪ್ರದೇಶದಲ್ಲಿ ಹೋಗಿ ಉಳಿದುಕೊಳ್ಳುವರು. ಅದರಿಂದ ತಪೋವನವು ಜನರ ವಸತಿಸ್ಥಾನದಿಂದ ದೂರದಲ್ಲಿ ಇರುವದು; ಹಾಗು ಸಾಧಕರಾದವರು ಸಂಸಾರಿಕರ ಕೋಲಾಹಲವು ಕೇಳಬರದಂಥ ಸ್ಥಳವನ್ನು ಸೇರಿ, ಮಠವನ್ನು ಕಟ್ಟಿಕೊಂಡು, ಕುಲಪತಿಯ ಆಜ್ಞೆಯಲ್ಲಿ ಉಳಿದುಕೊಂಡು ಹಗಲಿರುಳು ತಪಸ್ಸನ್ನಾಚರಿಸುವರು. ಇಂಥ ಕೆಲವು ಮಠವಾಸಿಗಳು ಆಫ್ರಿಕಾಖಂಡದೊಳಗಿನ ಸಹರಾ ಅರಣ್ಯದಲ್ಲಿ ಈಗಲೂ ವಾಸಿಸುವರು. ಕೆಲವು ದಿವಸಗಳ ಹಿಂದೆ ಒಬ್ಬ ಪ್ರವಾಸಿಕನು ಆ ಮಠದಲ್ಲಿ ಉಳಿದು ಬಂದಿರುವನು ಅವನು ಆ ಮಠವಾಸಿಗಳ ವಿಷಯವಾಗಿ ಬರೆದಿರುವ ಕೆಲವು ಸಂಗತಿಗಳನ್ನು ಇಲ್ಲಿ ಹೇಳುವೆವು:—

ಕ್ರಿಸ್ತೀ ಧರ್ಮದ ಉದಯಕಾಲದಲ್ಲಿ ಅನೇಕರು ಧರ್ಮಾಭಿಮಾನಿಗಳು ಕರ್ಮಸನ್ಯಾಸಿಗಳಾಗಿ ಧರ್ಮಪ್ರಸಾರಣೆಯನ್ನೇ ಧ್ಯೇಯವಾಗಿಟ್ಟುಕೊಂಡು, ಬೇರೆ ಬೇರೆ ಸ್ಥಳಗಳಿಗೆ ಹೋಗಿ ವಾಸಿಸಿದರು. ಈ ರೀತಿಯಾಗಿ ಅವರು ಏಕನಿಷ್ಠೆಯಿಂದ ಧಾರ್ಮಿಕ ಕಾರ್ಯಗಳನ್ನು ಕೈಕೊಂಡದ್ದರಿಂದ ಕ್ರಿಸ್ತೀಧರ್ಮವು ವಿಶೇಷವಾಗಿ ಪ್ರಸಾರ ಹೊಂದಲಿಕ್ಕೆ

ಅನುಕೂಲವಾಯಿತು. ಇದೇ ರೀತಿಯಿಂದ ಕೆಲವರು ಧರ್ಮಪ್ರವರ್ತಕರು ಸಹಾರಾ ಅರಣ್ಯದೊಳಗಿನ ನಾಯ್‌ಟ್ರಿಯಾ ಪ್ರಾಂತದಲ್ಲಿ ಹೋಗಿ ಉಳಿದರು. ಅವರಲ್ಲಿ ಕೆಲವರು ಆಶ್ರಮದಲ್ಲಿಯೂ ಮತ್ತೆ ಕೆಲವರು ದರಿಕಂದರಗಳಲ್ಲಿಯೂ ಇರುತ್ತಿದ್ದರು. ನಾಲ್ಕನೆಯ ಶತಮಾನದಲ್ಲಿಯಂತೂ ಅಲ್ಲಿ ನೂರಾರು ಆಶ್ರಮಗಳು ಉಂಟಾಗಿ ಅವುಗಳಲ್ಲಿ ಸುಮಾರು ೭ ಸಾವಿರ ಭಿಕ್ಷುಗಳು ಗುಂಪುಗೂಡಿ ಇರಹತ್ತಿದ್ದರು. ಅವರೊಳಗಿನ ಕೆಲವರ ಉಜ್ವಲವಾದ ತಪೋಮಹಿಮೆಯಿಂದ ಕ್ರೂರ ಪಶುಗಳೂ ತಮ್ಮ ಸ್ವಾಭಾವಿಕವಾದ ಕ್ರೂರತೆಯನ್ನು ಬಿಟ್ಟು ಮನುಷ್ಯರ ಸಂಗಡ ಸೌಮ್ಯ ರೀತಿಯಿಂದ ನಡೆಯುತ್ತಿದ್ದವು. ಮತ್ತನೇಕರು ಭಿಕ್ಷುಗಳು ವಿದ್ವಾಂಸರಿದ್ದು ಅವರು ಬರೆದ ಆರಣ್ಯಕಗಳು ಧರ್ಮಪ್ರಸಾರಣೆಯ ಕಾರ್ಯಕ್ಕೆ ಬಹಳ ಉಪಯೋಗವಾದವು. ಅವರ ಭಜನಾಲಯಗಳು ಸುಂದರವಾಗಿದ್ದು ಅವುಗಳ ಗೋಡೆಗಳ ಮೇಲೆ ಧಾರ್ಮಿಕ ವಿಚಾರಗಳನ್ನು ಸೂಚಿಸುವಂಥ ಅನೇಕ ಚಿತ್ರಗಳನ್ನು ಚಿತ್ರಕಲೆಯಲ್ಲಿ ಕುಶಲರಾದವರಿಂದ ಬರೆಯಿಸಿದ್ದರು.

ಈ ತಪೋನಿಷ್ಠರು ಈ ರೀತಿಯಾಗಿ ಧರ್ಮಕಾರ್ಯಗಳನ್ನು ನೆರವೇರಿಸುತ್ತಿದ್ದಾಗ ಒಮ್ಮೆ ದುರುಳರಾದ ಸಾರಾಸನ್ ಜನರು ಅವರ ಮೇಲೆ ದಾಳಿಯನ್ನುಮಾಡಿ ಅವರ ಮಠಗಳನ್ನು ಕೆಡಿಸಿ, ಅವರನ್ನು ಹಲವು ರೀತಿಯಾಗಿ ಪೀಡಿಸಿದರು; ಹಲವರನ್ನು ಕೊಂದರು. ಆದರೂ ಉಳಿದ ಕೆಲವರು ತಮ್ಮ ಕಾರ್ಯವನ್ನು ಮುಂದಕ್ಕೆ ಸಾಗಿಸಿ, ಅರಬೀ ಭಾಷೆಯಲ್ಲಿ ಧರ್ಮಗ್ರಂಥಗಳನ್ನು ಬರೆದು, ನೆರೆಹೊರೆಯಲ್ಲಿ ವಾಸಿಸುವ ಸಾರಾಸನ್ ಜನರಿಗೆ ತಮ್ಮ ಧರ್ಮವನ್ನು ಬೋಧಿಸಿ, ಅವರನ್ನು ತಮ್ಮೊಳಗೆ ಕೂಡಿಸಿಕೊಂಡರು. ಮುಂದೆ ಅವರು ಅಲ್ಲಿ ಹೊಸ ಆಶ್ರಮಗಳನ್ನು ಕಟ್ಟಿದರು; ಅವು ಈಗಲೂ ಅಬಾಧಿತವಾಗಿ ಇರುವವು. ಅಲ್ಲಿರುವ ಕೆಲವು ಸಾಧುಗಳ ಚಿತ್ರಗಳ ಸೌಂದರ್ಯವನ್ನು ನೋಡಿ ಭಾವಿಕರ ಅಂತಃಕರಣದಲ್ಲಿ ಆ ದೇವತಾಪುರುಷರ ನಾಗರಿಕತೆಯ ವಿಷಯವಾಗಿ ಅತ್ಯಂತ ಆದರವು ಉತ್ಪನ್ನವಾಗುವದು. ಸಾಂಪ್ರತದ ಆಶ್ರಮವು ಒಳ್ಳೇ ಶಾಂತವಾದ ಸ್ಥಳದಲ್ಲಿ ಇದ್ದು, ಅಲ್ಲಿ ಈಗ ನೂರಾರು ಮಠವಾಸಿಗಳು ಇರುವರು. ಆಶ್ರಮದ ಸುತ್ತಲೂ ಒಂದು ದೊಡ್ಡ ಗೋಡೆಯಿದ್ದು ಅದಕ್ಕೆ

ಒಂದೇ ಸಣ್ಣ ಬಾಗಿಲವಿರುವದು. ಹಾಗು ಅದನ್ನು ಯಾವಾಗಲೂ ಮು ಚ್ಚಿಯೇ ಇಡುವದರಿಂದ ಅತಿಥಿಗಳು ತಾವು ಬಂದಿರುವ ಸಂಗತಿಯನ್ನು ಅಲ್ಲಿರುವ ಒಂದು ಹಗ್ಗವನ್ನು ಜಗ್ಗಿ ಒಳಗಿರುವ ಗಂಟೆಯನ್ನು ಬಾರಿಸಿ ಆ ಮಠವಾಸಿಗಳಿಗೆ ತಿಳಿಸಬೇಕಾಗುವದು. ಆ ಯತಿಗಳು ಅತಿಥಿಗ ಳನ್ನು ಒಳ್ಳೇ ಪ್ರೀತಿಯಿಂದ ಸತ್ಕರಿಸುವರು; ಅತಿಥಿಗಳು ಬಂದಕೂಡಲೆ ಅವರ ಕೈಕಾಲುಗಳನ್ನು ತೊಳೆದು ಸಕ್ಕರೆಯ ಪಾನಕವನ್ನು ಕುಡಿಯ ಲಿಕ್ಕೆ ಕೊಡುವರು. ಅವರ ಕೈಯಲ್ಲಿ ಯಾವಾಗಲೂ ರುದ್ರಾಕ್ಷಮಾಲಿ ಯು ಇರುವದು; ಹಾಗೂ ಅವರು ಯಾವಾಗಲೂ ಜಪ ಮಾಡುತ್ತಲೇ ಇರುವರು. ಸದ್ಯದ ಕುಲಪತಿಯು ೯೪ ವರ್ಷದವನಿದ್ದು ಅವನು ಅರ್ವಾಚೀನ ಕಾಲದ ೧೭ನೆಯ ಕುಲಪತಿಯಾಗಿರುವನು. ಹಿಂದಿನ ಹದಿ ನಾರು ಕುಲಪತಿಗಳ ಸಮಾಧಿಗಳು ತೆರೆದಿದ್ದು, ಅವುಗಳಲ್ಲಿ ಔಷಧಿಗ ಳಲ್ಲಿ ಹೂಳಿಟ್ಟದ್ದ ಅವರ ಶವಗಳನ್ನು ಅತಿಥಿಗಳಿಗೆ ತೋರಿಸುವರು. ಅಲ್ಲಿ ಸನ್ಯಾಸಿಯಾಗಿ ಮರಣ ಹೊಂದಿದ ಒಬ್ಬ ಧನಾಢ್ಯನಾದ ವ್ಯಾಪಾರಸ್ಥನ ಗೋರಿಯೂ ಇರುವದು. ಮಠವಾಸಿಗಳು ಅತ್ಯಂತ ದೀನವತ್ಸಲರಾಗಿ ರುವರು. ಅವರು ಯಾರಾದರೂ ಭಿಕ್ಷುಕರು ಬಂದಕೂಡಲೆ ಅವರಿಗೆ ರೊಟ್ಟಿಯನ್ನೂ ಸಕ್ಕರೆಯ ಪಾನಕವನ್ನೂ ಕೊಡುವರು. ಅವರು "ತಾ ವು ಸ್ವತಃ ತಿನ್ನುವದರ ಇಮ್ಮಡಿಯಷ್ಟು ಬಡವರಿಗೆ ಕೊಡುವೆವು" ಎಂದು ಹೇಳುವರು; ಹಾಗು ಈ ರೀತಿಯಾದ ಭೂತಯಜ್ಞವು ಅವರ ನಿತ್ಯದ ಕರ್ತವ್ಯವೆಂದು ತಿಳಿಯಲ್ಪಡುವದು. ಅವರು ಅತ್ಯಂತ ದಯಾಳುಗಳೂ ಮಾಯಾಳುಗಳೂ ಮಾತುಕಥೆಗಳಲ್ಲಿಯೂ ನಡತೆಯಲ್ಲಿಯೂ ತೀರ ಸಾದಾ ರೀತಿಯವರೂ ಇರುವರು. ಅವರು ರೊಟ್ಟಿ, ಹಾಲು, ನೀರು, ಸೌತೇಕಾಯಿ ಮುಂತಾದ ಫಲಗಳು, ಮತ್ತು ಕೆಲವು ಕಂದಮೂಲ ಗಳು ಇವುಗಳನ್ನು ಮಾತ್ರ ಸೇವಿಸುವರು.

ಈ ಇಪ್ಪತ್ತನೆಯ ಶತಮಾನದಲ್ಲಿಯೂ ಆ ಮಠವಾಸಿಗಳ ಧರ್ಮ ಗ್ರಂಥಗಳು ಕೈಯಿಂದ ಬರೆದವೇ ಇರುವವು; ಹಾಗು ಎರಡನೆಯವ ರಿಗೆ ಕೊಡುವದಾದರೂ ಸಹ ಕೈಯಿಂದಲೇ ಬರೆದುಕೊಡುವರು. ಅವ ರು ಅಲೌಕಿಕ ನಿಷ್ಠಾವಂತರಾಗಿರುವರು.

ಉಕ್ತಲೇಖನ.

ಸಾಲೆಯಲ್ಲಿ ಉಕ್ತಲೇಖನವನ್ನು ಕಲಿಸುವ ಉದ್ದೇಶಗಳು ಎರಡು ಇರುತ್ತವೆ. ಅವು ಯಾವವೆಂದರೆ:—

(೧) ಹುಡುಗರು ಪ್ರತಿಯೊಂದು ಶಬ್ದವನ್ನು ಶುದ್ಧವಾಗಿ ಬರೆಯಲಿಕ್ಕೆ ಶಕ್ತರಾಗಬೇಕು.

(೨) ಹುಡುಗರು ಗ್ರಾಹಕ ಶಕ್ತಿಯುಳ್ಳವರಾಗಬೇಕು.

ಈ ಉದ್ದೇಶಗಳು ಕೊನೆಗಾಣುವಂತೆ ಪ್ರಾರಂಭದಿಂದ ಈ ವಿಷಯವನ್ನು ಯಾವ ರೀತಿಯಿಂದ ಕಲಿಸಬೇಕೆಂಬ ಬಗ್ಗೆ ಆಲೋಚಿಸುವ.

ಯಾವದೊಂದು ಶಬ್ದದ ವರ್ಣಗಳ ಸರಿಯಾದ ಉಚ್ಚಾರವು ಸ್ಪಷ್ಟವಾಗಿ ತಿಳಿದ ಹೊರ್ತು ಹುಡುಗರು ಅದನ್ನು ಶುದ್ಧವಾಗಿ ಬರೆಯಲಾರರೆಂಬದು ಸ್ಪಷ್ಟವಾದ ಸಂಗತಿಯು. ಉಚ್ಚ ಜಾತಿಯವರ ಹುಡುಗರ ಬರವಣಿಗೆಯಲ್ಲಿ ಅಶುದ್ಧಗಳ ಸಂಖ್ಯೆಯು ತೀರ ಕಡಿಮೆ ಇರುವದು ಅನುಭವಕ್ಕೆ ಬರುವದು; ಯಾಕಂದರೆ, ಆ ಹುಡುಗರ ತಾಯಿತಂದೆಗಳು ಮನೆಯಲ್ಲಿ ಸಾಧಾರಣ ಮಟ್ಟಿಗೆ ಶುದ್ಧವಾಗಿಯೂ ಸ್ಪಷ್ಟವಾಗಿಯೂ ಮಾತಾಡುವರು. ಕೀಳು ಜಾತಿಯ ಹುಡುಗರ ಕಿವಿಯಲ್ಲಿ ಅಶುದ್ಧ ಉಚ್ಚಾರಗಳು ಸೇರಿರುವದರಿಂದ ಶಿಕ್ಷಕರು ಶುದ್ಧವಾಗಿ ಹೇಳಿದರೂ ಆ ಹುಡುಗರು ಅಶುದ್ಧವಾಗಿಯೇ ಬರೆಯುವರು. ಆದಕಾರಣ ಬಾಲಕರ ವರ್ಗದಲ್ಲಿಯೇ ಹುಡುಗರಿಗೆ ಅಕ್ಷರಗಳ ಹಾಗು ಶಬ್ದಗಳ ಸ್ಪಷ್ಟೋಚ್ಚಾರವನ್ನು ಲಕ್ಷಪೂರ್ವಕವಾಗಿ ಕಲಿಸಲಿಕ್ಕೆ ಬೇಕು. ಹ್ರಸ್ವ, ದೀರ್ಘ, ಅಲ್ಪಪ್ರಾಣ, ಮಹಾಪ್ರಾಣ, ಅನುಸ್ವಾರ, ದ್ವಿತ್ವಾಕ್ಷರ ಒತ್ತಕ್ಷರಗಳನ್ನು ಹುಡುಗರು ಸ್ಪಷ್ಟವಾಗಿ ಉಚ್ಚರಿಸಿದ ಹೊರತು ಮುಂದೆ ಸಾಗಲೇ ಬಾರದು. ಇದು ಶುದ್ಧಲೇಖನಶಿಕ್ಷಣದಲ್ಲಿ ಮೊದಲನೆಯ ಮೆಟ್ಟೆಂದು ಹೇಳಬಹುದು. ಈ ಮೆಟ್ಟಿನಲ್ಲಿ ಕೆಳಗಿನ ವರ್ಗದ ಶಿಕ್ಷಕರು ಚಿಕ್ಕಮಕ್ಕಳಿಗೆ ಬರೆಯಿಸತಕ್ಕ ಅಕ್ಷರಗಳನ್ನೂ ಶಬ್ದಗಳನ್ನೂ ಅವರಿಂದ ಚನ್ನಾಗಿ ಉಚ್ಚರಿಸಲಿಕ್ಕೆ ಹಚ್ಚಬೇಕು. ಉಚ್ಚರಿಸಲಿಕ್ಕೆ ತಪ್ಪಿದ ಹುಡುಗರ ಉಚ್ಚಾರವನ್ನು ತಿದ್ದಿ ಆ ಶಬ್ದಗಳನ್ನು ಕರೇ ಹಲಿಗೆಯ ಮೇಲೆ ಬರೆಯಿಸಬೇಕು. ಒಮ್ಮೆಲೆ ಬರೆಯಲಿಕ್ಕೆ ಹೇಳುವದರಿಂದ ಆಗತಕ್ಕಷ್ಟು ಪ್ರಯೋಜನವಾಗುವದಿಲ್ಲ.

ಒಂದೇ ಸಣ್ಣ ಬಾಗಿಲವಿರುವದು. ಹಾಗು ಅದನ್ನು ಯಾವಾಗಲೂ ಮು ಚ್ಚಿಯೇ ಇಡುವದರಿಂದ ಅತಿಥಿಗಳು ತಾವು ಬಂದಿರುವ ಸಂಗತಿಯನ್ನು ಅಲ್ಲಿರುವ ಒಂದು ಹಗ್ಗವನ್ನು ಜಗ್ಗಿ ಒಳಗಿರುವ ಗಂಟೆಯನ್ನು ಬಾರಿಸಿ ಆ ಮಠವಾಸಿಗಳಿಗೆ ತಿಳಿಸಬೇಕಾಗುವದು. ಆ ಯತಿಗಳು ಅತಿಥಿಗ ಳನ್ನು ಒಳ್ಳೇ ಪ್ರೀತಿಯಿಂದ ಸತ್ಕರಿಸುವರು; ಅತಿಥಿಗಳು ಬಂದಕೂಡಲೆ ಅವರ ಕೈಕಾಲುಗಳನ್ನು ತೊಳೆದು ಸಕ್ಕರೆಯ ಪಾನಕವನ್ನು ಕುಡಿಯ ಲಿಕ್ಕೆ ಕೊಡುವರು. ಅವರ ಕೈಯಲ್ಲಿ ಯಾವಾಗಲೂ ರುದ್ರಾಕ್ಷಮಾಲೆ ಯು ಇರುವದು; ಹಾಗೂ ಅವರು ಯಾವಾಗಲೂ ಜಪ ಮಾಡುತ್ತಲೇ ಇರುವರು. ಸದ್ಯದ ಕುಲಪತಿಯು ೯೪ ವರ್ಷದವನಿದ್ದು ಅವನು ಅರ್ವಾಚೀನ ಕಾಲದ ೧೭ನೆಯ ಕುಲಪತಿಯಾಗಿರುವನು. ಹಿಂದಿನ ಹದಿ ನಾರು ಕುಲಪತಿಗಳ ಸಮಾಧಿಗಳು ತೆರೆದಿದ್ದು, ಅವುಗಳಲ್ಲಿ ಔಷಧಿಗ ಳಲ್ಲಿ ಹೂಳಿಟ್ಟಿದ್ದ ಅವರ ಶವಗಳನ್ನು ಅತಿಥಿಗಳಿಗೆ ತೋರಿಸುವರು. ಅಲ್ಲಿ ಸನ್ಯಾಸಿಯಾಗಿ ಮರಣ ಹೊಂದಿದ ಒಬ್ಬ ಧನಾಢ್ಯನಾದ ವ್ಯಾಪಾರಸ್ಥನ ಗೋರಿಯೂ ಇರುವದು. ಮಠವಾಸಿಗಳು ಅತ್ಯಂತ ದೀನವತ್ಸಲರಾಗಿ ರುವರು. ಅವರು ಯಾರಾದರೂ ಭಿಕ್ಷುಕರು ಬಂದಕೂಡಲೆ ಅವರಿಗೆ ರೊಟ್ಟಿಯನ್ನೂ ಸಕ್ಕರೆಯ ಪಾನಕವನ್ನೂ ಕೊಡುವರು. ಅವರು "ತಾ ವು ಸ್ವತಃ ತಿನ್ನುವದರ ಇಮ್ಮಡಿಯಷ್ಟು ಬಡವರಿಗೆ ಕೊಡುವೆವು" ಎಂದು ಹೇಳುವರು; ಹಾಗು ಈ ರೀತಿಯಾದ ಭೂತಯಜ್ಞವು ಅವರ ನಿತ್ಯದ ಕರ್ತವ್ಯವೆಂದು ತಿಳಿಯಲ್ಪಡುವದು. ಅವರು ಅತ್ಯಂತ ದಯಾಳುಗಳೂ ಮಾಯಾಳುಗಳೂ ಮಾತುಕಥೆಗಳಲ್ಲಿಯೂ ನಡತೆಯಲ್ಲಿಯೂ ತೀರ ಸಾದಾ ರೀತಿಯವರೂ ಇರುವರು. ಅವರು ರೊಟ್ಟಿ, ಹಾಲು, ನೀರು, ಸೌತೇಕಾಯಿ ಮುಂತಾದ ಫಲಗಳು, ಮತ್ತು ಕೆಲವು ಕಂದಮೂಲ ಗಳು ಇವುಗಳನ್ನು ಮಾತ್ರ ಸೇವಿಸುವರು.

ಈ ಇಪ್ಪತ್ತನೆಯ ಶತಮಾನದಲ್ಲಿಯೂ ಆ ಮಠವಾಸಿಗಳ ಧರ್ಮ ಗ್ರಂಥಗಳು ಕೈಯಿಂದ ಬರೆದವೇ ಇರುವವು; ಹಾಗು ಎರಡನೆಯವ ರಿಗೆ ಕೊಡುವದಾದರೂ ಸಹ ಕೈಯಿಂದಲೇ ಬರೆದುಕೊಡುವರು. ಅವ ರು ಅಲೌಕಿಕ ನಿಷ್ಠಾವಂತರಾಗಿರುವರು.

ಉಕ್ತಲೇಖನ.

ಸಾಲೆಯಲ್ಲಿ ಉಕ್ತಲೇಖನವನ್ನು ಕಲಿಸುವ ಉದ್ದೇಶಗಳು ಎರಡು ಇರುತ್ತವೆ. ಅವು ಯಾವವೆಂದರೆ:—

(೧) ಹುಡುಗರು ಪ್ರತಿಯೊಂದು ಶಬ್ದವನ್ನು ಶುದ್ಧವಾಗಿ ಬರೆಯಲಿಕ್ಕೆ ಶಕ್ತರಾಗಬೇಕು.

(೨) ಹುಡುಗರು ಗ್ರಾಹಕ ಶಕ್ತಿಯುಳ್ಳವರಾಗಬೇಕು.

ಈ ಉದ್ದೇಶಗಳು ಕೊನೆಗಾಣುವಂತೆ ಪ್ರಾರಂಭದಿಂದ ಈ ವಿಷಯವನ್ನು ಯಾವ ರೀತಿಯಿಂದ ಕಲಿಸಬೇಕೆಂಬ ಬಗ್ಗೆ ಆಲೋಚಿಸುವ.

ಯಾವದೊಂದು ಶಬ್ದದ ವರ್ಣಗಳ ಸರಿಯಾದ ಉಚ್ಚಾರವು ಸ್ಪಷ್ಟವಾಗಿ ತಿಳಿದ ಹೊರ್ತು ಹುಡುಗರು ಅದನ್ನು ಶುದ್ಧವಾಗಿ ಬರೆಯಲಾರರೆಂಬದು ಸ್ಪಷ್ಟವಾದ ಸಂಗತಿಯು. ಉಚ್ಚ ಜಾತಿಯವರ ಹುಡುಗರ ಬರವಣಿಗೆಯಲ್ಲಿ ಅಶುದ್ಧಗಳ ಸಂಖ್ಯೆಯು ತೀರ ಕಡಿಮೆ ಇರುವದು ಅನುಭವಕ್ಕೆ ಬರುವದು; ಯಾಕಂದರೆ, ಆ ಹುಡುಗರ ತಾಯಿತಂದೆಗಳು ಮನೆಯಲ್ಲಿ ಸಾಧಾರಣ ಮಟ್ಟಿಗೆ ಶುದ್ಧವಾಗಿಯೂ ಸ್ಪಷ್ಟವಾಗಿಯೂ ಮಾತಾಡುವರು. ಕೀಳು ಜಾತಿಯ ಹುಡುಗರ ಕಿವಿಯಲ್ಲಿ ಅಶುದ್ಧ ಉಚ್ಚಾರಗಳು ಸೇರಿರುವದರಿಂದ ಶಿಕ್ಷಕರು ಶುದ್ಧವಾಗಿ ಹೇಳಿದರೂ ಆ ಹುಡುಗರು ಅಶುದ್ಧವಾಗಿಯೇ ಬರೆಯುವರು. ಆದಕಾರಣ ಬಾಲಕರ ವರ್ಗದಲ್ಲಿಯೇ ಹುಡುಗರಿಗೆ ಅಕ್ಷರಗಳ ಹಾಗು ಶಬ್ದಗಳ ಸ್ಪಷ್ಟೋಚ್ಚಾರವನ್ನು ಲಕ್ಷಪೂರ್ವಕವಾಗಿ ಕಲಿಸಲಿಕ್ಕೆ ಬೇಕು. ಹ್ರಸ್ವ, ದೀರ್ಘ, ಅಲ್ಪಪ್ರಾಣ, ಮಹಾಪ್ರಾಣ, ಅನುಸ್ವಾರ, ದ್ವಿತ್ವಾಕ್ಷರ ಒತ್ತಕ್ಷರಗಳನ್ನು ಹುಡುಗರು ಸ್ಪಷ್ಟವಾಗಿ ಉಚ್ಚರಿಸಿದ ಹೊರತು ಮುಂದೆ ಸಾಗಲೇ ಬಾರದು. ಇದು ಶುದ್ಧಲೇಖನಶಿಕ್ಷಣದಲ್ಲಿ ಮೊದಲನೆಯ ಮೆಟ್ಟೆಂದು ಹೇಳಬಹುದು. ಈ ಮೆಟ್ಟಿನಲ್ಲಿ ಕೆಳಗಿನ ವರ್ಗದ ಶಿಕ್ಷಕರು ಚಿಕ್ಕಮಕ್ಕಳಿಗೆ ಬರೆಯಿಸತಕ್ಕ ಅಕ್ಷರಗಳನ್ನೂ ಶಬ್ದಗಳನ್ನೂ ಅವರಿಂದ ಚನ್ನಾಗಿ ಉಚ್ಚರಿಸಲಿಕ್ಕೆ ಹಚ್ಚಬೇಕು. ಉಚ್ಚರಿಸಲಿಕ್ಕೆ ತಪ್ಪಿದ ಹುಡುಗರ ಉಚ್ಚಾರವನ್ನು ತಿದ್ದಿ ಆ ಶಬ್ದಗಳನ್ನು ಕರೇ ಹಲಿಗೆಯ ಮೇಲೆ ಬರೆಯಿಸಬೇಕು. ಒಮ್ಮೆಲೆ ಬರೆಯಲಿಕ್ಕೆ ಹೇಳುವದರಿಂದ ಆಗತಕ್ಕಷ್ಟು ಪ್ರಯೋಜನವಾಗುವದಿಲ್ಲ.

೩ನೆಯ ಮೆಟ್ಟು, ಬರೆಯಲಿಕ್ಕೆ ಹೇಳುವದು.— ಕೆಳಗಿನ ಇಯತ್ತೆಗಳಲ್ಲಿ ಶಿಕ್ಷಕರು ಬಾಯಿಂದ ಹೇಳಿದ ಅಕ್ಷರಗಳನ್ನಾಗಲಿ, ಶಬ್ದಗಳನ್ನಾಗಲಿ, ವಾಕ್ಯಗಳನ್ನಾಗಲಿ, ವಾಕ್ಯಬೃಂದಗಳನ್ನಾಗಲಿ ಹುಡುಗರು ಕರಿಹಲಿಗೆಯ ಮೇಲೆ ಅಥವಾ ಪಾಟಿ-ಪುಸ್ತಕಗಳ ಮೇಲೆ ಬರೆಯುವರು. ಆಗ ಈ ವಿಷಯಕ್ಕೆ ಉಕ್ತಲೇಖನವೆಂಬ ಹೆಸರು ಚನ್ನಾಗಿ ಒಪ್ಪುವದು. ಉಕ್ತಲೇಖನದಿಂದ ಹುಡುಗರ ಗ್ರಾಹಕ ಶಕ್ತಿಯನ್ನು ಕ್ರಮಕ್ರಮವಾಗಿ ಬೆಳೆಯಿಸುವದೊಂದು ಉದ್ದೇಶವಿರುವದರಿಂದ ಸರತಿಗೆ ಎಷ್ಟೆಷ್ಟು ಶಬ್ದಗಳನ್ನು ಹೇಳತಕ್ಕದ್ದೆಂಬದನ್ನೂ ಹೇಳಿದ ಶಬ್ದಗಳನ್ನು ಬರೆಯಲಿಕ್ಕೆ ಎಷ್ಟು ಅವಕಾಶವನ್ನು ಕೊಡತಕ್ಕದ್ದೆಂಬದನ್ನೂ ಶಿಕ್ಷಕರು ವಿಚಾರಪೂರ್ವಕವಾಗಿ ಗೊತ್ತು ಮಾಡಲಿಕ್ಕೆ ಬೇಕು. ಮತ್ತು ಕಡೆತನಕ ತಪ್ಪದೆ ಅದೇ ಕ್ರಮವನ್ನು ಅನುಸರಿಸತಕ್ಕದ್ದು. ಶಿಕ್ಷಕರು ಹೇಳತಕ್ಕದ್ದೆಲ್ಲ ಮುಗಿಯುವವರೆಗೆ ಹುಡುಗರು ಬರೆಯಲಿಕ್ಕೆ ಪ್ರಾರಂಭಮಾಡಬಾರದು. ಹಾಗೆ ಮಾಡಿದರೆ ಅವರ ಲಕ್ಷವು ಎರಡು ಕಡೆಗೆ ಹೋಗಿ ಬರಹದಲ್ಲಿ ತಪ್ಪುಗಳು ಆಗುವವು. ಕೆಲ ಕೆಲವು ಶಿಕ್ಷಕರು ಒಂದು ಸಾರೆ ಹೇಳಿದ ಶಬ್ದಗಳನ್ನು ಮತ್ತೊಮ್ಮೆ ಅಥವಾ ಮೂರನೇ ಸಾರೆ ಹೇಳುವರು; ಈ ಪ್ರಕಾರ ಎರಡೆರಡು ಸಾರೆ, ಮೂರು ಮೂರು ಸಾರೆ ಹೇಳುವ ಅವಶ್ಯಕತೆಯಿಲ್ಲ. ಉಕ್ತಲೇಖನವನ್ನು ಯಾವಾಗಲೂ ಒಮ್ಮೆ ಮಾತ್ರ ಹೇಳತಕ್ಕದ್ದು. ಇನ್ನು, ಒಮ್ಮೆ ಹೇಳಿದ ಶಬ್ದಗಳನ್ನಾಗಲಿ, ವಾಕ್ಯಗಳನ್ನಾಗಲಿ ಹುಡುಗರು ಸರಿಯಾಗಿ ಬರೆದಿರುವರೋ ಇಲ್ಲವೋ ಎಂಬದನ್ನು ನೋಡಿಕೊಳ್ಳುವದಕ್ಕಾಗಿ ಮತ್ತೊಂದು ಸರತಿಯಾದರೂ ಹೇಳಬೇಕೆಂದು ಕೆಲವರು ಅನ್ನಬಹುದು. ಇದಕ್ಕಾಗಿ, ಹೇಳತಕ್ಕ ಎಲ್ಲ ಉಕ್ತಲೇಖನದ ಭಾಗವನ್ನು ಒಮ್ಮೆ ಹೇಳಿದನಂತರ ಕಡೆಗೆ ಎರಡನೆಯ ಸಾರೆ ಎಲ್ಲ ಭಾಗವನ್ನು ಶಿಕ್ಷಕನು ಓದಿ ಹೇಳಲಿಕ್ಕೆ ಅಡ್ಡಿ ಇಲ್ಲ. ಆದರೆ ಶಿಕ್ಷಕರು ಮೊದಲು ಹೇಳುವಾಗಲೇ ಸ್ಪಷ್ಟವಾಗಿಯೂ, ಶುದ್ಧವಾಗಿಯೂ ಹೇಳತಕ್ಕದ್ದು. ಅದನ್ನು ಹುಡುಗರು ಲಕ್ಷಪೂರ್ವಕವಾಗಿ ಕೇಳಿಕೊಂಡು ಆ ಮೇಲೆ ಬರೆಯತಕ್ಕದ್ದು. ಅಂದರೆ ಎರಡನೆಯ ಬಾರಿ ಹೇಳುವ ಅವಶ್ಯಕತೆಯೇ ಬೀಳಲಿಕ್ಕಿಲ್ಲ. ಉಕ್ತಲೇಖನವನ್ನು ಎಷ್ಟೋ ಶಿಕ್ಷಕರು ವರ್ಗದಲ್ಲಿ ತಿರುಗಾಡುತ್ತ ಹೇಳುವರು. ಆದರೆ ಇದು ತಪ್ಪು. ಶಿಕ್ಷಕನು ವರ್ಗದ ಎದು

ನಲ್ಲಿ ಎಲ್ಲ ಹುಡುಗರಿಗೂ ಕಾಣಿಸುವಂತೆ ಒತ್ತಟ್ಟಿಗೆ ನಿಂತು ವರ್ಗದೊಳಗಿನ ಎಲ್ಲ ಹುಡುಗರಿಗೂ ಕೇಳಿಸುವಷ್ಟು ಉಚ್ಚ ಸ್ವರದಿಂದ ಹೇಳತಕ್ಕದ್ದು.

ಈ ಮೆಟ್ಟಿನಲ್ಲಿ ಹೇಳತಕ್ಕ ಇನ್ನೊಂದು ಮಹತ್ವದ ಸಂಗತಿಯು ಉಕ್ತಲೇಖನಕ್ಕಾಗಿ ಆರಿಸತಕ್ಕ ಭಾಗವು. ಸದ್ಯಕ್ಕೆ, ಹುಡುಗರ ವಾಚನ ಪುಸ್ತಕದೊಳಗಿನ ಓದಿದ ಪಾಠದೊಳಗಿನ ಯಾವವಾದರೂ ಐದು ಸಾಲುಗಳನ್ನು ಹೇಳುವ ರೂಢಿಯು ಇರುವದು. ಆದರೆ ಹೀಗೆ ಮಾಡದೆ ಓದಿದ ಪಾಠದೊಳಗೆ ಯಾವ ಯಾವ ವಾಕ್ಯಗಳಲ್ಲಿ ಉಚ್ಚಾರಕ್ಕೂ ಲೇಖನಕ್ಕೂ ಕಠಿಣವಾದ ಶಬ್ದಗಳು ಬಂದಿರುವವೋ ಆ ವಾಕ್ಯಗಳನ್ನೇ ಆರಿಸಿ ಹೇಳುವದು ಒಳ್ಳೇದು; ಇಲ್ಲವೆ, ಆ ಪಾಠದೊಳಗಿನ ಎಲ್ಲ ಕಠಿಣ ಶಬ್ದಗಳನ್ನು ಆರಿಸಿ ಅವುಗಳಿಂದ ಹೊಸ ಹೊಸ ವಾಕ್ಯಗಳನ್ನು ರಚಿಸಿ ಹೇಳಬೇಕು. ಇದರಿಂದ ಎಲ್ಲ ಪ್ರಕಾರದ ಕಠಿಣ ಶಬ್ದಗಳು ಹುಡುಗರ ಕಣ್ಣಮುಂದೆ ಹಾಯ್ದು ಹೋಗುವವು. ವಾಚನ ಪುಸ್ತಕದೊಳಗಿನ ಶಬ್ದಗಳಲ್ಲದೆ ಇತಿಹಾಸ, ಭೂಗೋಲಗಳೊಳಗಿನ ಶಬ್ದಗಳಿಂದಲೂ ವಾಕ್ಯಗಳನ್ನು ರಚಿಸಿ ಹೇಳಬಹುದು.

ಉಚ್ಚಾರದಿಂದ ಕಿವಿಯ ಶಕ್ತಿಯು ಬೆಳೆಯುವಂತೆ ಶಬ್ದಗಳ ಸ್ವರೂಪವನ್ನು ಲಕ್ಷಪೂರ್ವಕವಾಗಿ ನೋಡುವದರಿಂದ ಕಣ್ಣಿನ ಶಕ್ತಿಯು ಬೆಳೆಯುವದು. ಶಿಕ್ಷಕರು ಈ ಮಾತನ್ನು ಲಕ್ಷದಲ್ಲಿಟ್ಟು ಹುಡುಗರಿಗೆ ಶಬ್ದದ ಸ್ವರೂಪವು ಚನ್ನಾಗಿ ಗೊತ್ತಾಗುವಂತೆ ಅವುಗಳನ್ನು ಕರೇ ಹಲಿಗೆಯ ಮೇಲೆ ಬರೆಯಿಸಿ ಅವರಿಂದ ಓದಿಸಬೇಕು. ಪ್ರತಿಯೊಂದು ಶಬ್ದದ ಸ್ವರೂಪವು ಹುಡುಗರ ಮಿದುಳಿನ ಮೇಲೆ ಸ್ಪಷ್ಟವಾಗಿ ಮೂಡಲಿಕ್ಕೆ ಬೇಕು. ಇದಕ್ಕಾಗಿ ಪ್ರತಿಯೊಂದು ವರ್ಗದಲ್ಲಿ, ಹುಡುಗರು ವಾಡಿಕೆಯಾಗಿ ತಪ್ಪುವ ಶಬ್ದಗಳದೊಂದು ಪಟವನ್ನು ಮಾಡಿ ಯಾವಾಗಲೂ ಅವರ ಕಣ್ಣಮುಂದೆ ತೂಗ ಹಾಕಿದರೆ ಬಹಳ ಪ್ರಯೋಜನವಾಗುವದು.

ವಿರಾಮ ಚಿಹ್ನಗಳ ಉಪಯೋಗ:—೨ನೆಯ ಇಯತ್ತೆಯವರು ಬರಿ ೨ ಪೂರ್ಣವಿರಾಮದ ಚಿಹ್ನಗಳನ್ನೂ ೩ನೆಯ ಇಯತ್ತೆಯವರು ಮುಖ್ಯ ವಿರಾಮಚಿಹ್ನಗಳನ್ನೂ ಶಿಕ್ಷಕರು ಹೇಳಿದಂತೆ ಬರೆಯಬೇಕು. ಆದರೆ ನೆಯ ಇಯತ್ತೆಯಲ್ಲಿ ಹುಡುಗರಿಗೆ ವ್ಯಾಕರಣವನ್ನು ತಕ್ಕಮಟ್ಟಿಗೆ ಕಲಿಸುವ ಕಾರಣ, ಈ ಇಯತ್ತೆ ಮೊದಲುಗೊಂಡು ಮೇಲಿನ ಎಲ್ಲ ಇಯತ್ತೆಗಳಲ್ಲಿ ಉಕ್ತಲೇಖನದಲ್ಲಿ ವಿರಾಮ ಚಿಹ್ನಗಳನ್ನು ಶಿಕ್ಷಕರು ಹೇಳುವ

ಅವಶ್ಯಕತೆ ಇಲ್ಲ. ಶಿಕ್ಷಕರು ಹೇಳದಲೆ ವಿದ್ಯಾರ್ಥಿಗಳು ಪೂರ್ಣವಿರಾಮ, ಪ್ರಶ್ನಚಿಹ್ನ, ಉದ್ಗಾರವಾಚಕಚಿಹ್ನ ಮುಂತಾದ ಮುಖ್ಯ ವಿರಾಮಚಿಹ್ನಗಳನ್ನು ಬರೆಯಲಿಕ್ಕೆ ಸಮರ್ಥರಾಗಿರಲಿಕ್ಕೆ ಬೇಕು. ಆದರೆ ಅಲ್ಪವಿರಾಮ, ಅರ್ಧವಿರಾಮ ಚಿಹ್ನಗಳನ್ನು ವಿದ್ಯಾರ್ಥಿಗಳು ಉಕ್ತಲೇಖನದಲ್ಲಿ ತಾವಾಗಿ ಸರಿಯಾಗಿ ಕಾಣಿಸದಿದ್ದರೆ, ಅವು ದೊಡ್ಡ ತಪ್ಪುಗಳೆಂದು ಎಣಿಸಬಾರದು.

೩ನೆಯಮೆಟ್ಟು ಹುಡುಗರ ಬರಹವನ್ನು ಪರೀಕ್ಷಿಸಿ ನೋಡು ವದು. ಹುಡುಗರ ಬರಹವನ್ನು ಪರೀಕ್ಷಿಸುವ ಕೆಲವು ರೀತಿಗಳು ಸಧ್ಯಕ್ಕೆ ಪ್ರಚಾರದಲ್ಲಿರುವವು.

(೧) ಹುಡುಗರ ಪಾಟಿಗಳನ್ನು ಶಿಕ್ಷಕರೇ ಓದಿ ನೋಡುವದು.

(೨) ಹುಡುಗರು ತಮ್ಮ ತಮ್ಮ ಪಾಟಿಗಳನ್ನು ತಾವೇ ನೋಡಿಕೊಳ್ಳುವದು.

(೩) ಹುಡುಗರು ಪಾಟಿಗಳನ್ನು ತಮ್ಮ ತಮ್ಮೊಳಗೆ ಅದಲುಬದಲು ಮಾಡಿ ತಪ್ಪುಗಳನ್ನು ತೆಗೆಯುವದು.

ಈ ಮೂರು ಉಪಾಯಗಳಲ್ಲಿ ಮೊದಲನೇ ಉಪಾಯವು ಎಲ್ಲಕ್ಕೂ ಶ್ರೇಷ್ಠವಾದದ್ದು; ಆದರೆ ಶಿಕ್ಷಕರು ತಮ್ಮ ಸ್ಥಳಬಿಟ್ಟು ವಿದ್ಯಾರ್ಥಿಗಳಿದ್ದಲ್ಲಿ ಹೋಗಬಾರದು. ತಾವಿದ್ದಲ್ಲಿಯೇ ಒಬ್ಬೊಬ್ಬ ವಿದ್ಯಾರ್ಥಿಯನ್ನು ಕರೆದು ಪಾಟಿಯನ್ನು ನೋಡಿಕೊಡಬೇಕು. ಅಲ್ಲಿಯವರೆಗೆ ಪಾಟಿಯನ್ನು ನೋಡಿಸಿಕೊಂಡ ಹುಡುಗರು ಸದ್ದುಮಾಡದೆ ತಪ್ಪಿದ ಶಬ್ದಗಳನ್ನು ಪುನಃ ಬರೆದು ತೋರಿಸಬೇಕು. ಹುಡುಗರು ಅಪ್ರಾಮಾಣಿಕತನವನ್ನು ಮಾಡದಂತೆ ಶಿಕ್ಷಕರು ಲಕ್ಷಕೊಟ್ಟು ೨ನೇ ೩ನೇ ಉಪಾಯಗಳನ್ನು ಉಪಯೋಗಿಸುವದು ಪ್ರಯೋಜನವುಳ್ಳದ್ದಾಗಿರುವದು. ಸಾಧ್ಯವಿದ್ದ ಮಟ್ಟಿಗೆ ಶಿಕ್ಷಕರು ಈ ಉಪಾಯಗಳನ್ನು ಯೋಜಿಸಬಹುದು.

೪ನೆಯಮೆಟ್ಟು ತಪ್ಪುಗಳನ್ನು ತಿದ್ದಿ ತಿಳಿಸಿ ಹೇಳುವದು. ಈ ಮೆಟ್ಟು ಬಹಳ ಮಹತ್ವದ್ದಾಗಿರುತ್ತದೆ. ಯಾಕಂದರೆ, ಹುಡುಗರು ತಪ್ಪಿದ ಶಬ್ದಗಳನ್ನು ತಿದ್ದದಿದ್ದರೆ ಅವರು ಪುನಃ ಅವೇ ತಪ್ಪುಗಳನ್ನು ಮಾಡುವರು. ಪ್ರತಿಯೊಬ್ಬರ ತಪ್ಪುಗಳನ್ನು ಒಬ್ಬೊಬ್ಬರಿಗೇ ತಿಳಿಸಿ ಹೇಳದೆ ಎಲ್ಲರ ಪಾಟಿಗಳನ್ನು ನೋಡಿಕೊಟ್ಟ ಮೇಲೆ ತಪ್ಪಿದ ಶಬ್ದಗಳನ್ನು ಸಾಮೂಹಿಕವಾಗಿ ತಿಳಿಸಿ ಹೇಳಬೇಕು.

ವಿಶೇಷಸೂಚನೆ:—ಉಕ್ತಲೇಖನದಲ್ಲಿ ಅಕ್ಷರಗಳನ್ನು ತಿದ್ದಿ ಬರೆಯುವ ಸಂಬಂಧದಿಂದಲೂ, ಶಬ್ದಗಳನ್ನು ವಿಂಗಡಿಸಿ ಬರೆಯುವ ಸಂಬಂಧದಿಂದಲೂ, ಸಾಲುಗಳನ್ನು ಸಮಾನ ಅಂತರದಿಂದ ನೀಟಾಗಿ ಬರೆಯುವ ಸಂಬಂಧದಿಂದಲೂ, ಎಡಕ್ಕೂ ಬಲಕ್ಕೂ ಮಾರ್ಜಿನವನ್ನು ಬಿಡುವ ಸಂಬಂಧದಿಂದಲೂ, ಪ್ಯಾರಾದ ಮೊದಲನೆಯ ಶಬ್ದವನ್ನು ಮಾರ್ಜಿನದಿಂದ ಸ್ವಲ್ಪ ಅಂತರಬಿಟ್ಟು ಬರೆಯುವ ಸಂಬಂಧದಿಂದಲೂ ತಿಳಿಸಿ ಹೇಳಬೇಕು. ಶುದ್ಧಲೇಖನದಲ್ಲಿ ಬಹಳ ತಪ್ಪುಗಳನ್ನು ಮಾಡುವ ಹುಡುಗರಿಗೆ ನಿತ್ಯದಲ್ಲಿಯೂ ವಾಚನಪುಸ್ತಕದೊಳಗಿನ ಐದೈದು ಸಾಲುಗಳನ್ನು ನೋಡಿ ಬರಕೊಂಡು ಬರಲಿಕ್ಕೆ ಹೇಳಬೇಕು. ಇಲ್ಲವೆ, ವಿಶೇಷವಾಗಿ ತಪ್ಪತಕ್ಕ ಶಬ್ದಗಳನ್ನು ಐದೈದುಸಾರೆ, ಹತ್ತು ಹತ್ತುಸಾರೆ ಬರಕೊಂಡು ಬರಲಿಕ್ಕೆ ಹೇಳಬೇಕು.

ಕರ್ನಾಟಕ ಕಾಲೇಜ.

(ಬರೆದು ಬಂದದ್ದು.)

ವಸ್ತುತಃ ಪ್ರಾಥಮಿಕ ಶಾಲೆಗಳಿಗೋಸ್ಕರವೇ ಪ್ರಸಿದ್ಧಿಸಲ್ಪಡು ...ದ್ದ ಮಾಸಪತ್ರಿಕೆಯಲ್ಲಿ, ಉಚ್ಚ ಶಿಕ್ಷಣದ ಚರ್ಚೆ ಏಕೆಂದು ನಮ್ಮ ...ಾಚಕರಲ್ಲಿ ಹಲವರು ಕೇಳಬಹುದು. ಆದರೆ ರಾಷ್ಟ್ರದಲ್ಲಿಯ ಶಿಕ್ಷ... ...ವು ಏಕಾಂಗವಾಗಿರದೆ, ಅನೇಕ ಅಂಗಗಳನ್ನೊಡಗೂಡಿರುತ್ತದೆ. ...ಾಥಮಿಕ ಶಿಕ್ಷಣವಿಲ್ಲದೆ ಮಧ್ಯಮ ಶಿಕ್ಷಣವು ಸಿಗುವಂತಿಲ್ಲ; ಹಾಗೂ ...ಲ ಶಿಕ್ಷಣಕ್ಕೂ ತವರಮನೆಯಾದ ಉಚ್ಚ ಶಿಕ್ಷಣವಿಲ್ಲದೆ ಪ್ರಾಥ... ...ಕ ಶಿಕ್ಷಣವಾಗಲಿ, ಮಧ್ಯಮ ಶಿಕ್ಷಣವಾಗಲಿ ದೇಶದಲ್ಲಿ ಹಬ್ಬುವ ...ದಿಲ್ಲ. ನಮ್ಮ ಕರ್ನಾಟಕವು ಎಲ್ಲ ಮಾತಿನಲ್ಲಿ ಇಷ್ಟು ಹಿಂದುಳಿದ ಮುಖ್ಯ ಕಾರಣವು ನಮ್ಮ ಭಾಗದಲ್ಲಿ ಒಂದಾದರೂ ಉಚ್ಚ ಶಿಕ್ಷಣದ ಕಾಲೇಜವಿಲ್ಲದಿರುವದೇ ಆಗಿರುತ್ತದೆಂದು ಧಾರಾಳವಾಗಿ ಹೇಳಬಹುದು. ಈ ವಿಷಯವನ್ನು ಕುರಿತು ಮುಂಬಯಿಯ ವಿಶ್ವವಿದ್ಯಾಲಯದಲ್ಲಿ ಮಾತನಾಡುವಾಗ್ಗೆ, ಸರ್ ನಾರಾಯಣ ಗಣೇಶ ಚಂದಾವರಕರು ಹೇಳಿದಂತೆ, ಪ್ರತಿವರ್ಷ, ಮಹಾರಾಷ್ಟ್ರದಿಂದ ಸುಮಾರು ೧೫೦

ಪದವೀಧರರು ಹೊರಡುತ್ತಿದ್ದು ದುರ್ದೈವಿಯಾದ ಕರ್ನಾಟಕದಿಂದ ೧೫-೨೦ ಮಂದಿ ಪದವೀಧರರು ಹೊರಡುವದಿಲ್ಲ. ರಾಷ್ಟ್ರೀಯ ಜೀವನದ ಮುಖ್ಯಾಂಗವಾದ ಉಚ್ಚ ಶಿಕ್ಷಣಕ್ಕೆ ಈ ಪ್ರಕಾರ ಎರವಾದ ಕರ್ನಾಟಕವು ಹಿಂದುಳಿದ ಕಾರಣವನ್ನು ಪುನಃ ಪುನಃ ಒಡೆದು ಹೇಳುವ ಕಾರಣವಿರುವದಿಲ್ಲ. ವಿಶ್ವವಿದ್ಯಾಲಯವು ಹೊರಟು ೨೫ ವರ್ಷಗಳಾಗುವವರೆಗೆ ಇಬ್ಬರಿಗಿಂತ ಹೆಚ್ಚು ಕನ್ನಡ ಪದವೀಧರರು ಹೊರಡಲಿಲ್ಲ. ಇತ್ತಲಾಗಿ ಪದವೀಧರರ ಸಂಖ್ಯೆಯು ಹೆಚ್ಚುತ್ತಿದ್ದು, ಸದ್ಯಕ್ಕೆ ಸುಮಾರು ೩೦೦-೩೫೦ ಪದವೀಧರರು ಆಗಿರಬಹುದು. ಆದರೆ ಉಳಿದ ಪ್ರಾಂತಗಳಿಗೆ ಕರ್ನಾಟಕವನ್ನು ಸರಿಹಚ್ಚಿ ನೋಡಿದರೆ, ನಾವು ಇನ್ನೂ ಸಾವಿರಾರು ಮೈಲು ಹಿಂದುಳಿದಿರುತ್ತೇವೆಂಬದು ಕಂಡುಬರುವದು. ಕಾಲೇಜವಿಲ್ಲದ ಕಾರಣ ಕರ್ನಾಟಕಕ್ಕೆ ಬಂದೊದಗಿದ ಸಂಕಟಪರಂಪರೆಯನ್ನು ಅವಲೋಕಿಸಿ ನಾಮದಾರ ರಾವಬಹದ್ದೂರ ರೊದ್ದರೇ ಮೊದಲಾದ ಮುಖಂಡರು ಈ ಪ್ರಶ್ನೆಯ ಊಹಾಪೋಹವನ್ನು ನಡೆಯಿಸಿದರು. ೧೯೧೯ ನೇ ಇಸವಿಯಿಂದ ಈ ವಿಷಯವಾಗಿ ವ್ಯವಸ್ಥಿತವಾದ ಪ್ರಯತ್ನಗಳು ನಡೆದಿದ್ದರೂ, ಈ ಪ್ರಶ್ನೆಯೇನೂ ಹೊಸದಲ್ಲ. ಸರ್ ರಿಚರ್ಡ ಟೆಂಪಲ್ ಸಾಹೇಬರ (೧೫೭೭) ಕಾಲದಿಂದ, ಧಾರವಾಡದಲ್ಲಿ ಕಾಲೇಜನ್ನು ಸ್ಥಾಪಿಸಬೇಕೆಂಬದರ ವಿಚಾರವು ನಡೆದಿರುತ್ತದೆ. ಆದರೆ ಗವ್ಹರ್ನರ ಸಾಹೇಬರು ಬಂದ ವೇಳೆಗೆಲ್ಲ ನಮಗೊಂದು ಕಾಲೇಜು ಬೇಕೆಂದು ಪ್ರಾರ್ಥಿಸುವದರ ಹೊರತಾಗಿ ಬೇರೊಂದು ಕೆಲಸವನ್ನು ಆಲಸ್ಯದ ಮಟ್ಟಿಯಾದ ಕರ್ನಾಟಕವು ಮಾಡದ್ದರಿಂದ, ಸುಮಾರು ನಾಲ್ವತ್ತು ವರ್ಷಗಳ ಹಿಂದೆಯೇ ಆಗಬೇಕಾದ ಕೆಲಸವನ್ನು ಕುರಿತು ನಾವು ಇನ್ನೂ ಗಂಭೀರ ವಿಚಾರವನ್ನು ಮಾಡಹತ್ತಿದ್ದೇವೆ. ವ್ಯವಸ್ಥಿತ ಪ್ರಯತ್ನ, ಕಾರ್ಯಾರಂಭವಾದಂದಿನಿಂದ ಕಾರ್ಯವು ಪೂರ್ಣವಾಗುವತನಕ ಅದರ ಬೆನ್ನು ಬಿಡದಿರುವ ಸ್ಥೈರ್ಯ, ಧೈರ್ಯ ಇವೇ ಮೊದಲಾದವುಗಳ ಅಭಾವದ ಮೂಲಕ ನಮ್ಮ ಮುತ್ತಾತರು ಮಾಡಬೇಕಾಗಿದ್ದ ಕಾರ್ಯವನ್ನು ನಮ್ಮ ಮೊಮ್ಮಕ್ಕಳಾದರೂ ಕಾಣುವರೋ ಇಲ್ಲವೋ ಎಂಬ ಪ್ರಬಲ ಸಂಶಯವು ಆಗಿಂದಾಗ್ಗೆ ತಲೆದೋರಹತ್ತಿರುತ್ತದೆ. ಉಳಿದ ಪ್ರಾಂತಗಳಂತೆ ನಾವೂ ಮುಂದೊರೆಯಬೇಕೆಂಬ ಹವ್ಯಾಸವು ನಮಗುಂಟು, ಕಾಲೇಜು ಎಲ್ಲರಿಗೂ

ಬೇಕು. ಮುಂಬಯಿ ಪುಣೆಗಳಲ್ಲಿ ಮುಂಜಾವಿನಲ್ಲಿ 'ಭವತಿ ಭಿಕ್ಷಾಂ ದೇಹಿ" ಎಂದೆನ್ನುವ ವಿದ್ಯಾರ್ಥಿಯು ಮಧ್ಯಾಹ್ನದಲ್ಲಿ ಬರ್ಕ-ಬೇಕನ್ನರ ಗ್ರಂಥಗಳ ಅಭ್ಯಾಸವನ್ನು ಮಾಡುತ್ತಿರುವನು. ಆದರೆ ಕರ್ನಾಟಕದಲ್ಲಿ ಒಳ್ಳೊಳ್ಳೇ ಶ್ರೀಮಂತರಿಗೂ ಕೂಡ ಕಾಲೇಜದ ಖರ್ಚನ್ನು ಕೊಡುವದಾಗುವದಿಲ್ಲ. "ಇಲ್ಲೇ ಯಾಕೆ ಕಾಲೇಜನ್ನು ಸ್ಥಾಪಿಸಬೇಕು?" "ಅಲ್ಲೇ ಹೋಗಿ ಕಲಿತರೆ ಆಗುವದಿಲ್ಲವೆ?" ಎಂದು ಕೇಳುವ ಎಬಡರಿಗೆ ಸ್ವಪರ ಜ್ಞಾನವು ಕಿಂಚಿತ್ತಾದರೂ ಇದ್ದಂತೆ ತೋರುವದಿಲ್ಲ. ಲಕ್ಷ್ಮೀ-ಸರಸ್ವತಿಯರ ವಿರೋಧವು ಸಾಮಾನ್ಯವಾಗಿದ್ದುದರಿಂದ ನಮ್ಮ ಅತ್ಯಂತ ಬುದ್ಧಿವಂತರಾದ ಹುಡುಗರು ಟ್ರೇನಿಂಗ ಕಾಲೇಜನ್ನು ಅನಿವಾರ್ಯಪಕ್ಷಕ್ಕೆ ಸೇರಬೇಕಾಗುತ್ತದೆ. ಪುಣೆ-ಮುಂಬಯಿಗೆ ಹೋಗಿ ಕಲಿಯುವ ಸಾಮರ್ಥ್ಯವು ಎಷ್ಟು ಮಂದಿಯಲ್ಲಿ ಅದೆ? ಸಾಮರ್ಥ್ಯವಿದ್ದರೆ, ಪುಣೆ ಮುಂಬಯಿಗೆ ಯಾಕೆ ಆಕ್ಸಫರ್ಡ-ಕೇಂಬ್ರಿಜ್ಜಕ್ಕೂ ಹೋಗಿ ಕಲಿಯಬಹುದು. ಆದರೆ ದೂರದೃಷ್ಟಿಯಿಂದ ಉಚ್ಚ ಶಿಕ್ಷಣದ ವ್ಯವಸ್ಥೆಯನ್ನು ಉಳಿದ ಎಲ್ಲ ಪ್ರಾಂತದವರು ತಮ್ಮಷ್ಟಕ್ಕೆ ಮಾಡಿಕೊಂಡಿದ್ದರೂ ನಾವು ಇನ್ನೂ ವಿನಮೇಕ ಮಾಡಹತ್ತಿದ್ದೇವೆ.

೧೯೧೯ನೇ ಇಸವಿಯಲ್ಲಿ ರಾವಬಹದ್ದೂರ ರೊದ್ದರಾಯರು ಕರ್ನಾಟಕಾಲೇಜಿನ ವಿಷಯ ಪ್ರಸ್ತಾಪವನ್ನು ತೆಗೆದು, ಸರಕಾರಕ್ಕೆ ಅರ್ಜಿಯನ್ನು ಕಳುಹಿದರು. ಸರಕಾರದವರಾದರೂ ಈ ಪ್ರಶ್ನೆಯ ವಿಚಾರವನ್ನು ಪೂರ್ಣ ಸಹಾನುಭೂತಿಯಿಂದ ಮಾಡಿ, ಆದಷ್ಟು ಬೆಂಬಲವನ್ನು ಕೊಟ್ಟರು. ಮುಂದೆ ೧೯೨೦ನೇ ಇಸವಿಯಲ್ಲಿ ನಾಮದಾರ ಬೆಳವಿಯವರು ಈ ಪ್ರಶ್ನೆಯನ್ನುದ್ದೇಶಿಸಿ, ಮುಂಬಯಿಯ ಕಾಯದೆ ಕೌನ್ಸಿಲದಲ್ಲಿ ಒಂದು ಠರಾವನ್ನು ತಂದರು. ಡಾಕ್ಟರ ಸರ್ ಫಿರೋಜಶಹಾ ಮೆಹತಾ ಮೊದಲಾದ ನಾಮದಾರರೆಲ್ಲರು ಈ ಠರಾವಕ್ಕೆ ಅನುಕೂಲರಾಗಿಯೇ ಮಾತನಾಡಿ ನಾಮದಾರ ರೊದ್ದ ಮತ್ತು ಬೆಳವಿಯವರ ಠರಾವುಗಳನ್ನು ಅನುಮೋದಿಸಿದರು. ಮೊನ್ನೆ ಸರಕಾರದವರು ಸ್ವತಃ ಒಂದು ಪತ್ರವನ್ನು ಮುಂಬಯಿ ವಿಶ್ವವಿದ್ಯಾಲಯಕ್ಕೆ ಬರೆದು ಅದರ ಅಭಿಪ್ರಾಯವನ್ನು ಕೇಳಿದರು. ಕಳೆದ ೬ನೇ ಅಗಸ್ಟಿನ ದಿವಸ, ಈ ಪ್ರಶ್ನೆಯ ವಿಚಾರವನ್ನು ಮಾಡಿ ಕರ್ನಾಟಕದಲ್ಲಿ ಕಾಲೇಜಿನ ಅವಶ್ಯಕ

ತೆಯಿರುತ್ತದೆಂದೂ, ಪ್ರತಿಯೊಂದು ಭಾಗದಲ್ಲಿ ಕಾಲೇಜು ಇರಬೇಕೆಂ ತಲೂ ಏಕಮತದಿಂದ ಸಿನೇಟದವರು ಠರಾವನ್ನು ಮಾಡಿದರು.

ಇಲ್ಲಿಗೆ ವಾದವಿವಾದವು ಮುಗಿದಂತಾಯಿತು. ಮುಂಬಯಿ ಕಾಯಿದೆಕೌನ್ಸಿಲ್ ಮತ್ತು ಯುನಿವ್ಹರಸಿಟಿಯವರು ಏಕಮತದಿಂದ ಒಪ್ಪಿದ ಸಂಗತಿಯ ಇಷ್ಟಾನಿಷ್ಟತೆಯನ್ನು ಕುರಿತು ವಾದವಿವಾದವನ್ನು ಹೂಡುವ ಅವಶ್ಯಕತೆಯು ತಿಲಮಾತ್ರವಾದರೂ ಇರುವದಿಲ್ಲ. ಮೇಲಾಗಿ ಸಾಕ್ಷಾತ್ ಸರಕಾರದವರೇ 'ಇಕ ಬ್ರೂಹಿ', ಎಂದು ಅನ್ನುತ್ತಿರಲು "ನಮಗೆ ಕಾಲೇಜು ಬೇಡ" ಎಂದೆನ್ನುವ ಸತ್ಪುತ್ರರು ಕರ್ನಾಟಕದಲ್ಲಿರುವರೆಂದು ನಮಗಂತೂ ತೋರುವದಿಲ್ಲ. ಕರ್ನಾಟಕಕಾಲೇಜದ ಅವಶ್ಯಕತೆಯನ್ನು ಬೇರೆ ಜನರು ಕದಾಚಿತ್ ಒಡಂಬಡಲಿಕ್ಕಿಲ್ಲ. ಆದರೆ ಸ್ವತಃ ಕನ್ನಡಿಗರಿಗೆ ಕರ್ನಾಟಕ ಕಾಲೇಜದ ಮಹತ್ವವನ್ನು ತಿಳಿಹೇಳ ಹೋಗುವದೆಂದರೆ ಗುಡ್ಡಕ್ಕೆ ಕಲ್ಲು ಹೊತ್ತಂತಿರುವದು.

ಇಲಾಖೆಯ ಪ್ರತಿಯೊಂದು ಭಾಗದಲ್ಲಿ ಒಂದಾದರೂ ಕಾಲೇಜು ಇರಬೇಕೆಂಬ ತತ್ವವು ಎಲ್ಲರಿಗೂ ಮಾನ್ಯವಾದಂತಾಯಿತು. ಆದರೆ 'ಸರ್ವಾರಂಭಾಸ್ತಂಡುಲಾಃ ಪ್ರಸ್ಥಮೂಲಾಃ' ಎಂಬಂತೆ ದುಡ್ಡಿನ ವ್ಯವಸ್ಥೆಯೇನು? ಸಣ್ಣದೊಂದು ಪ್ರಾಥಮಿಕ ಶಾಲೆಯನ್ನು ತೆಗೆಯಬೇಕಾದರೆ ಎಷ್ಟು ಶ್ರಮ ಬೀಳುತ್ತದೆಂಬದನ್ನು ತಿಳಿದು ನೋಡಲು, ಕಾಲೇಜನ್ನು ತೆಗೆಯುವದೆಂದರೆ ಹುಡುಗಾಟಿಕೆಯ ಮಾತಲ್ಲವೆಂದು ಗೊತ್ತಾಗುವದು. ಕರ್ನಾಟಕದಲ್ಲಿ ಕಾಲೇಜನ್ನು ತೆಗೆಯುವದು ಗೊತ್ತಾಗಿರುವಂತೆ, ಸರಕಾರದವರೇ ಕರ್ನಾಟಕ ಕಾಲೇಜು ಸ್ಥಾಪಿಸಬೇಕೆಂದೂ ಗೊತ್ತಾದಂತೆ ಇರುತ್ತದೆ. ಆದರೆ ಜನರು ಈ ಕೆಲಸದಲ್ಲಿ ಉದಾಸೀನರಾಗಿದ್ದಾರೆಯೋ, ಅಥವಾ ಉತ್ಸಾಹಭರಿತರಾಗಿರುವರೋ ಎಂಬದನ್ನು ನಿರ್ಣಯಿಸಿ ನೋಡಬೇಕೆಂದೆಣಿಸಿ, ಜನರು ಪೂರ್ವಖರ್ಚಿನ ಸಲುವಾಗಿ ಎರಡು ಲಕ್ಷ ರೂಪಾಯಿಗಳನ್ನು ಸರಕಾರಕ್ಕೆ ಕೊಟ್ಟರೆ, ಸರಕಾರದವರು ಈ ಕೆಲಸವನ್ನು ಕೈಕೊಳ್ಳುವರೆಂಬದಾಗಿ ನಮ್ಮ ಮುಖಂಡರಿಗೆ ಅವರು ತಿಳಿಸಿದ್ದಾರೆ. ಸನೂರು ೫-೬ ಲಕ್ಷ ರೂಪಾಯಿಗಳನ್ನು ಪ್ರಾರಂಭದಲ್ಲಿಯೇ ಕಾಲೇಜಿಗೋಸ್ಕರ ಸರಕಾರದವರಿಗೆ ವೆಚ್ಚ ಮಾಡಬೇಕಾಗುವದು. ಇದಲ್ಲದೆ ಪ್ರತಿವರ್ಷ ೫೦ ಸಾವಿರದಿಂದ ೧ ಲಕ್ಷದವರೆಗೆ ಕಾಲೇಜಿನ

ಸಲುವಾಗಿ, ಸರಕಾರದವರು ತೆಗೆದಿಡಬೇಕಾಗುವದು. ಈ ಅವಾಢವ್ಯವಾದ ಖರ್ಚನ್ನು ಮೈಮೇಲೆ ತೆಗೆದುಕೊಂಡು ಸರಕಾರದವರು ಎಲ್ಲ ಉಪಕರಣಸಾಹಿತ್ಯಗಳೊಂದಿಗೆ ಇಲಾಖೆಯ ಮುಖ್ಯ ಮುಖ್ಯ ಕಾಲೇಜುಗ್ಗಳಂತೆಯೇ ಸರ್ವಾಂಗಸಂಪೂರ್ಣವಾದ ಕರ್ನಾಟಕ ಕಾಲೇಜನ್ನು ಸ್ಥಾಪಿಸುತ್ತೇವೆಂದು ಆಶ್ವಾಸನವನ್ನು ಕೊಡುತ್ತಿರುವಾಗ, ನಾವು ಆದಷ್ಟು ತೀವ್ರ ಸರಕಾರದವರು ಬೇಡುವ ಎರಡು ಲಕ್ಷ ರೂಪಾಯಿಗಳನ್ನು ಅವರ ಉಡಿಯಲ್ಲಿ ಸುರುವಿ, ಕಾಲೇಜಿನ ವ್ಯವಸ್ಥೆಯನ್ನು ಮಾ ಕೊಳ್ಳುವದು ಶ್ರೇಯಸ್ಕರವಾಗಿರುತ್ತದೆ. ರಾವಬಹದ್ದೂರ ರುದ್ರಗೌಡ. ಅಣ್ಣಾ ಅರಟಾಳರವರು ಲಿಂಗಾಯತರ ಪತಿಯಿಂದ ಒಂದು ಲಕ್ಷ ರೂಪಾಯಿಗಳನ್ನು ಕೂಡಿಸಿ ಕೊಡುತ್ತೇವೆಂದು ಸರಕಾರದವರಿಗೆ ವಚನ ಕೊಟ್ಟಿದ್ದು, ಆ ಪ್ರಕಾರ ಆ ಮಹನೀಯರು ಲಕ್ಷ ರೂಪಾಯಿಗಳ ಚೀಲವನ್ನು ತುಂಬಿಟ್ಟಂತೆ ತಿಳಿದು ಬರುತ್ತದೆ. ನಾಮದಾರ ರೊದ್ದ, ನಾಮದಾರ ಬೆಳವಿ ಮೊದಲಾದ ಸದ್ಗೃಹಸ್ಥರು ಕರ್ನಾಟಕ ಕಾಲೇಜ ಅಸೋಶಿಯೇಶನ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಅದರ ಮುಖಾಂತರ ಸುಮಾರು ೫೫ ಸಾವಿರ ರೂಪಾಯಿ ರೋಖ ಕೂಡಿದ್ದು ೪೫,೦೦೦ ರುಪಾಯಿಗಳನ್ನು ಸರಕಾರದವರ ಕಡೆಗೆ ಕೊಟ್ಟಿದ್ದಾರೆ. ಇನ್ನು ಲಿಂಗಾಯಿತೇತರ ಜನರು ಕೂಡಿಸತಕ್ಕ ರಕಮು ಸುಮಾರು ೪೫ ಸಾವಿರ ರೂಪಾಯಿ ಆಗಿರುತ್ತದೆ.

ಈ ಹಣವನ್ನು ಕೂಡಿಸಲಿಕ್ಕೆ ಪ್ರತಿಯೊಬ್ಬ ಕನ್ನಡಿಗನು ತನ್ನ ಕೈಲಾದಷ್ಟು ಪ್ರಯತ್ನಗಳನ್ನು ಮಾಡಲೇ ಬೇಕು. ಈ ಹಣವನ್ನು ಕೂಡಿಸುವದಾಗದೆ, ನಾವು ಕಾಲೇಜನ್ನು ಕಳಕೊಂಡರೆ, ಕಾಲಕಾಲಾಂತರ ಅಪಕೀರ್ತಿಯನ್ನು ಕಟ್ಟಿಕೊಳ್ಳಬೇಕಾಗುವದು. ಮೇಲಾಗಿ ಕಲಿಯಬೇಕೆಂದಿದ್ದ ನೂರಾರು ಕನ್ನಡ ವಿದ್ಯಾರ್ಥಿಗಳನ್ನು ಎಲ್ಲಿ ಕಳಿಸುವಿರಿ? ಪುಣೆ ಮುಂಬಯಿ ಕಾಲೇಜುಗಳು ತುಂಬಿ ಸೂಸುತ್ತಿದ್ದ ಹೋದ ವರ್ಷವೇ ಅವು ತಮ್ಮ ಬಾಗಿಲುಗಳನ್ನು ಇಕ್ಕಿವೆ.

ಈಗ ಸದ್ಯಕ್ಕೆ ೧೬೦ ಕರ್ನಾಟಕದ ವಿದ್ಯಾರ್ಥಿಗಳು ಪುಣೆ ಮುಂಬಯಿಯಲ್ಲಿ ಕಲಿಯುತ್ತಿದ್ದಾರೆ. ಆದರೆ ಧಾರವಾಡದಲ್ಲಿ ಕಾಲೇಜು

ಹೊರಟರೆ, ಸಹಜವೇ ಈ ಸಂಖ್ಯೆಯು ಇಮ್ಮಡಿಸುವದೆಂಬ ಸರ್ ನಾರಾಯಣರಾವ ಚಂದಾವರಕರರು ಆಡಿ ತೋರಿಸಿದ್ದಾರೆ.

ಇವೆಲ್ಲ ಸಂಗತಿಗಳನ್ನು ಪರ್ಯಾಲೋಚಿಸಿ, ಕಾಲೇಜದಲ್ಲಿಯಾದ ದಟ್ಟಣೆಯನ್ನು ಲಕ್ಷದಲ್ಲಿ ತಂದು, ಸರಕಾರಕ್ಕೆ ನಾವು ಕೊಟ್ಟ ವಚನದಂತೆ ನಡೆಯುವದರ ಅವಶ್ಯಕತೆಯನ್ನು ಧ್ಯಾನದಲ್ಲಿಟ್ಟು, ಕರ್ನಾಟಕದ ಮೇಲೆ ಕರ್ನಾಟಕ ಕಾಲೇಜದಿಂದಾಗುವ ಉಪಕಾರಗಳನ್ನು ಸ್ಮರಿಸಿ, ಎಲ್ಲರೂ ಆದಷ್ಟು ಸಹಾಯವನ್ನು ಈ ಪವಿತ್ರ ಕೆಲಸಕ್ಕೆ ಮಾಡಬೇಕೆಂದು ನಾವು ಕೋರುತ್ತೇವೆ. ಇದು ನಮ್ಮ ಹಿತದ ಕೆಲಸವೇ ಇರುತ್ತದೆ. ನಮ್ಮ ದೇಶ ಬಾಂಧವರಾದ ಕನ್ನಡಿಗರಿಗೇ ಇದರಿಂದ ವಿಶೇಷ ಲಾಭಗಳುಂಟಾಗುತ್ತವೆ. ಹೀಗಿದ್ದು ಪುಣೆ ಮುಂಬಯಿ ಕಡೆಯ ಜನರು ಪ್ರತಿಯೊಂದು ರೀತಿಯಿಂದ ನಮಗೆ ಸಹಾಯವನ್ನು ಮಾಡುತ್ತಿರುವಾಗ, ನಾವು ಸೋಮಾರಿಗಳಂತೆ ವರ್ತಿಸುವದು ಶ್ಲಾಘನೀಯವಾಗಿರುವದೋ? ಇದೇನು ನಿಷ್ಕಾಮ ಕರ್ಮವಲ್ಲ. ಸದ್ಯಕ್ಕೆ ಫಲದಾಯಿಯಾದ ಕರ್ಮವೇ ಇರುತ್ತದೆ. ಅಕ್ರೋಡದ ಗಿಡವನ್ನು ನೆಟ್ಟು, ನಿಮ್ಮ ಮರಿಮಕ್ಕಳು ಉಣಲೆಂದು ನಾವು ಹೇಳುವದಿಲ್ಲ. ನಾಳೆ ಕಾಲೇಜು ಹೊರಟರೆ, ನಾಡದಿನ ದಿನವೇ ಇಡೀ ಕರ್ನಾಟಕದ ಬುದ್ಧಿಸಾಮರ್ಥ್ಯವೇ ಅತ್ಯಗಾಧವಾಗಿ ಬೆಳೆಯುವದು.

ನಾವು ಕೊಡುವ ಕಾಸಿನಿಂದೇನಾಗುವದೆಂದು [illegible]ಕ್ಷೆಯನ್ನು ಮಾತ್ರ ಯಾರೂ ಮಾಡಬಾರದು. ಈಗ ಕೂಡಿದ ೫೫ ಸಾವಿರ ರುಪಾಯಿಗಳಲ್ಲಿ ಸಣ್ಣ ಸಣ್ಣ ರಕಮುಗಳೇ ಬಹಳಿರುತ್ತವೆ.

ಕರ್ನಾಟಕದಲ್ಲಿಯ ವಿದ್ಯಾಮಂದಿರಕ್ಕೆ ಸದ್ಯಕ್ಕೆ ಕಳಸವಿಲ್ಲ. ಕಿಂಬಹುನಾ, ಆ ಮಂದಿರದಲ್ಲಿ ದೇವತಾಪ್ರತಿಷ್ಠಾಪನೆಯೇ ಆಗಿಲ್ಲವೆಂದರೂ ಸಲ್ಲುವದು.

ನಿಮ್ಮ ಕರ್ತವ್ಯದ ಚಿತ್ರವನ್ನು ನಿಮ್ಮ ಮುಂದೆ ಇಟ್ಟದೆ. ನಿಮಗೆ ಯೋಗ್ಯ ತೋರಿದ ಮಾರ್ಗವನ್ನು ನೀವು ಅವಲಂಬಿಸಬಹುದು.

R.

ವೈದಿಕಧರ್ಮದ ಐದು ಮುಖ್ಯ ಶಾಖೆಗಳು.

ವೇದವ್ಯಾಸರು ತಮ್ಮ ವೇದಾಂತ ಸೂತ್ರಗಳನ್ನು ಉಪನಿಷತ್ತುಗಳ ಆಧಾರದಿಂದ ರಚಿಸಿದರೆಂಬುದು ಸರ್ವಶ್ರುತವಾಗಿರುವದು. ವೇದಗಳು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಎಂದು ನಾಲ್ಕು ಇದ್ದು ಅವುಗಳಲ್ಲಿ ಪ್ರತಿಯೊಂದಕ್ಕೂ ಸಂಹಿತೆ, ಬ್ರಾಹ್ಮಣ, ಉಪನಿಷತ್ತುಗಳು ಎಂಬ ಮೂರು ಭಾಗಗಳಿರುವವು. ಅರ್ಥಾತ್, ಉಪನಿಷತ್ತುಗಳು ಶ್ರುತಿಗಳಲ್ಲಿ ಎಣಿಸಲ್ಪಡುತ್ತಿರುವದರಿಂದ ವೇದಾಂತ ಪ್ರಣೀತವಾದ ಧರ್ಮವು "ವೈದಿಕಧರ್ಮ"ವೆಂಬ ಸಂಜ್ಞೆಯಿಂದಲೇ ಪ್ರಸಿದ್ಧವಾಗಿರುವದು. ಅಂದಮೇಲೆ, ಶಿರೋಲೇಖದಲ್ಲಿಯ "ವೈದಿಕಧರ್ಮ"ವೆಂಬ ಶಬ್ದವಾದರೂ ಇದೇ ಅರ್ಥದಲ್ಲಿಯೇ ಉಪಯೋಗಿಸಿರುವದೆಂಬದನ್ನು ಪುನಃ ಹೇಳಬೇಕಾಗಿಲ್ಲ.

ಉಪನಿಷತ್ತುಗಳು, ಬ್ರಹ್ಮಸೂತ್ರಗಳು, ಭಗವದ್ಗೀತ ಇವೇ ವೇದಾಂತಶಾಸ್ತ್ರಕ್ಕೆ ಆಧಾರಭೂತವಾದ ಮುಖ್ಯ ಗ್ರಂಥಗಳು. ಇವುಗಳಿಗೆ ಕೆಲಕೆಲವರು "ಪ್ರಸ್ಥಾನತ್ರಯೀ" ಎಂತಲೂ ಹೇಳುವರು. ನಮ್ಮೀ ಭರತಖಂಡದಲ್ಲಿ ಇಂದಿನವರೆಗೆ ಆಗಿ ಹೋದ ಎಲ್ಲ ದೊಡ್ಡ ದೊಡ್ಡ ಧರ್ಮಸಂಸ್ಥಾಪಕ ಮಹಾಪುರುಷರು ಈ ಪ್ರಸ್ಥಾನ ತ್ರಯಿಯ ಮೇಲೆ ಬೇರೆ ಬೇರೆ ಭಾಷ್ಯಗಳನ್ನು ಬರೆದರು. ಆದರಿಂದ ಅವರಿಗೆ "ಆಚಾರ್ಯ"ರೆಂಬ ಸಂಜ್ಞೆಯು ಪ್ರಾಪ್ತವಾಯಿತು. ವೇದಾಂತಶಾಸ್ತ್ರದ ಮೂಲತತ್ವಗಳ ಸಂಬಂಧದಿಂದ ಎಲ್ಲ ಆಚಾರ್ಯರಲ್ಲಿ ಏಕ ವಾಕ್ಯತೆಯಿದ್ದರೂ "ತಲೆಗೊಂಡು ವಿಚಾರ"ವೆಂಬಂತೆ ಅವರಲ್ಲಿ ದೃಷ್ಟಿಭೇದವು ಮಾತ್ರ ಇದ್ದೇ ಇತ್ತು; ಹಾಗು ಅದು ಸಹಜವಾದದ್ದೇ ಸರಿ. ಈ ರೀತಿಯಾಗಿಯೇ ಅವರು ಹಿಂದೆ ಹೇಳಿದ ಮೂಲತತ್ವಗಳನ್ನು ತಮ್ಮ ತಮ್ಮ ದೃಷ್ಟಿಯಿಂದ ಪರ್ಯಾಲೋಚಿಸಿ, ಬೇರೆ ಬೇರೆ ಮತಗಳನ್ನು ಪ್ರತಿಪಾದಿಸಿದರು; ಹಾಗು ಆ ಮತಗಳಿಗನುಸಾರವಾಗಿಯೇ ನಮ್ಮ ದೇಶದಲ್ಲಿ ಬೇರೆ ಬೇರೆ ಶಾಖೆಗಳು ಅಥವಾ ಸಾಂಪ್ರದಾಯಗಳು ಆಯಾ ಆಚಾರ್ಯರ ಹೆಸರಿನಿಂದ ಇಂದಿಗೂ ಪ್ರಚಲಿತವಾಗಿರುವವು. ಅವುಗಳಲ್ಲಿ, ಶಂಕರಾಚಾರ್ಯರ ಮಾಯಾವಾದೀ ಅದ್ವೈತಸಾಂಪ್ರದಾಯ, ರಾಮಾನುಜಾಚಾ

ರ್ಯರ ಪರಿಣಾಮವಾದೀ ವಿಶಿಷ್ಟಾದ್ವೈತ ಸಾಂಪ್ರದಾಯ, ಮಧ್ವಾಚಾರ್ಯರ ತಾರತಮ್ಯವಾದೀ ದ್ವೈತಸಾಂಪ್ರದಾಯ, ಹಾಗು ವಲ್ಲಭಾಚಾರ್ಯರ ಬ್ರಹ್ಮವಾದೀಕೇವಲಾದ್ವೈತ ಸಾಂಪ್ರದಾಯ ಎಂಬ ನಾಲ್ಕು ಮುಖ್ಯ ಸಾಂಪ್ರದಾಯಗಳು ಅಥವಾ ಶಾಖೆಗಳು ಪ್ರಸಿದ್ಧವಾಗಿದ್ದರೂ ಸಾಂಪ್ರತಕ್ಕೆ ದೊರೆತಿರುವ ಆಧಾರಗಳಿಂದ ನೋಡಿದರೆ ನಮ್ಮ ದೇಶದ ಬೇರೆ ಬೇರೆ ಭಾಗಗಳಲ್ಲಿ ಮೇಲೆ ಹೇಳಿದವರಿಗಿಂತಲೂ ಹೆಚ್ಚು ಜನರು "ಆಚಾರ್ಯ" ಸಂಜ್ಞೆಯನ್ನು ಹೊಂದಿದವರಾಗಿ ಹೋಗಿರುವರೆಂತಲೂ ಅವರೆಲ್ಲರ ಹೆಸರಿನಿಂದ ಮತ್ತೂ ಕೆಲವು ಸಾಂಪ್ರದಾಯಗಳು ಸಾಂಪ್ರತ ಕಾಲದಲ್ಲಿ ನಡೆಯುತ್ತಿರುವವೆಂತಲೂ ಗೊತ್ತಾಗುವದು. ಪ್ರಸ್ತುತ ವಿಷಯದ ಮೇಲೆ ಮಿ. ಟಿ. ಎಸ್. ನಾರಾಯಣಶಾಸ್ತ್ರೀ ಬೀ. ಏ., ಬೀ. ಎಲ್. ಎಂಬ ಹೆಸರಿನ ಒಬ್ಬ ಮದ್ರಾಸದ ವಿದ್ವಾಂಸರು, "ಇಂಡಿಯನ್ ರಿವ್ಯೂ" ಎಂಬ ಮಾಸಪತ್ರಿಕೆಯಲ್ಲಿ ಒಂದು ವಾಚನೀಯವಾದ ನಿಬಂಧವನ್ನು ಬರೆದಿರುವರು. ಅದರ ಆಧಾರದಿಂದ ಕೆಲವು ಸಂಗತಿಗಳನ್ನು ಇಲ್ಲಿ ಬರೆಯುವೆವು. ಮಿ. ನಾರಾಯಣಶಾಸ್ತ್ರೀಯವರು ಈ ವಿಷಯವನ್ನು ಸಂಪೂರ್ಣವಾಗಿ ಪ್ರತಿಪಾದಿಸಿರುವದಿಲ್ಲ; ಹಾಗು ತಾವು ಯಾವ ಗ್ರಂಥದ ಆಧಾರದಿಂದ ಬರೆದಿರುವೆವೆಂಬದನ್ನು ಹೇಳಿರುವದಿಲ್ಲ; ಹೀಗಿದ್ದರೂ ಅವರ ಬರಹವು ಸಾಧಾರವಾದದ್ದಿರಬೇಕೆಂಬದು ಸಹಜವೇ ಸರಿ. ಅವರು ಹೇಳಿರುವದೇನಂದರೆ:—

ನಮ್ಮ ಭರತಖಂಡದೊಳಗಿನ ಯಾವತ್ತು ಧಾರ್ಮಿಕ ಗ್ರಂಥಗಳನ್ನು ನಿರೀಕ್ಷಿಸುವದರಿಂದ ದೇಶದ ಬೇರೆ ಬೇರೆ ಭಾಗಗಳಲ್ಲಿ ವೇದಾಂತಪ್ರಣೀತ ಧರ್ಮದ ಹನ್ನೊಂದು ಶಾಖೆಗಳು, ಅಥವಾ ಸಾಂಪ್ರದಾಯಗಳು ಸಾಂಪ್ರತಕ್ಕೆ ಪ್ರಚಾರದಲ್ಲಿರುವವೆಂಬದು ಕಂಡುಬರುವದು. ಪ್ರತಿಯೊಂದು ಶಾಖೆಗೂ ಒಬ್ಬೊಬ್ಬ ಆಚಾರ್ಯರಿದ್ದು ಅವರೆಲ್ಲರೂ ಭಗವಾನ ನಾರಾಯಣ ವ್ಯಾಸರು ರಚಿಸಿದ ವೇದಾಂತ ಸೂತ್ರದ ಮೇಲೆ ಬೇರೆ ಬೇರೆ ಭಾಷ್ಯಗಳನ್ನು ಬರೆದಿರುವರು. ಯಾವ ಯಾವ ಆಚಾರ್ಯರು ಯಾವ ಯಾವ ಶಾಖೆಗಳನ್ನು ಸ್ಥಾಪಿಸಿದರು, ಹಾಗು ಯಾವ ಯಾವ ಭಾಷ್ಯಗಳನ್ನು ಬರೆದರು ಎಂಬದು ಮುಂದಿನ ಪಟ್ಟಿಯಿಂದ ಗೊತ್ತಾಗುವದು.

(೧) ಶ್ರೀಶಂಕರ ಭಗವತ್ಪಾದಾಚಾರ್ಯ, ಅಥವಾ ಆದಿ ಶಂಕರಾಚಾರ್ಯ ವಿರಚಿತ ಶಾರೀರಕ ಭಾಷ್ಯ: ಈ ಭಾಷ್ಯವು ಅದ್ವೈತ ಪರವಾಗಿದ್ದು ಇದು ಬ್ರಹ್ಮಸೂತ್ರದ ವಿವರಣೆಗೆ ಆಧಾರಭೂತವಾದದ್ದೆಂದು ಇಡೀ ಭರತಖಂಡದಲ್ಲೆಲ್ಲ ಇಂದಿಗೂ ತಿಳಿಯಲ್ಪಡುವದು. ಅದೇ ರೀತಿಯಾಗಿ ಶಂಕರಾಚಾರ್ಯರ ಕಾಲದಿಂದ ಇಂದಿನವರೆಗೂ ವೇದಾಂತ ವಿಷಯದ ಮೇಲೆ ಉತ್ತಮೋತ್ತಮ ಗ್ರಂಥಗಳನ್ನು ಬರೆದ ಬಹುಶಃ ಯಾವತ್ತು ಜನರು ಇದೇ ಶಾಖೆಯ (ಅದ್ವೈತ) ಅನುಯಾಯಿಗಳಾಗಿದ್ದರು.

(೨) ಭಗವತ್ ವಿಜ್ಞಾನಭಿಕ್ಷು, ಅಥವಾ ವಿಜ್ಞಾನಮಿತ್ರಕೃತ ಬ್ರಹ್ಮಸೂತ್ರ ಭಾಷ್ಯ: ಈ ಭಾಷ್ಯವು ವಿಶಿಷ್ಟಾದ್ವೈತ ಪರವಾದದ್ದಿದ್ದು ಅದು ಕೇವಲ ವಿಷ್ಣುವಿಗೇ ಆಗಲಿ, ಶಿವನಿಗೇ ಆಗಲಿ ಪ್ರಾಧಾನ್ಯವನ್ನು ಕೊಟ್ಟು ಬರೆಯಲ್ಪಡಲಿಲ್ಲ; ಅಂದರೆ ಅದರಲ್ಲಿ ಯಾವದಾದರೂ ಒಂದು ವಿಶಿಷ್ಟ ದೇವತೆಗೆ ಪ್ರಾಧಾನ್ಯವನ್ನು ಪ್ರತಿಪಾದಿಸಿಲ್ಲ.

(೩) ಶ್ರೀಕಂಠ ಶಿವಾಚಾರ್ಯಕೃತ ಬ್ರಹ್ಮಮೀಮಾಂಸಾಭಾಷ್ಯ: ಇದೂ ವಿಶಿಷ್ಟಾದ್ವೈತ ಪರವಾದದ್ದೇ ಸರಿ; ಆದರೆ ಇದರಲ್ಲಿ ಶಿವನಿಗೇ ಹೆಚ್ಚು ಪ್ರಾಧಾನ್ಯವು ಪ್ರತಿಪಾದಿಸಲ್ಪಟ್ಟಿರುವದರಿಂದ ಇದಕ್ಕೆ ಶೈವವಿಶಿಷ್ಟಾದ್ವೈತಪರಭಾಷ್ಯವೆಂದು ಹೇಳಬಹುದು.

(೪) ಭಗವತ್ ರಾಮಾನುಜಾಚಾರ್ಯರ ಶ್ರೀಭಾಷ್ಯ: ಇದೂ ವಿಶಿಷ್ಟಾದ್ವೈತಪರವಾದದ್ದೇ ಸರಿ. ಆದರೆ ಇದರಲ್ಲಿ ವಿಷ್ಣುವಿಗೇ ಹೆಚ್ಚು ಮುಖ್ಯತ್ವವು ಕೊಡಲ್ಪಟ್ಟಿರುವದರಿಂದ ಇದಕ್ಕೆ ವೈಷ್ಣವ ವಿಶಿಷ್ಟಾದ್ವೈತ ಪರಭಾಷ್ಯವೆಂದು ಹೇಳಬಹುದು.

(೫) ಬಲದೇವಾಚಾರ್ಯಕೃತ ವೇದಾಂತಸೂತ್ರ ಭಾಷ್ಯ, ಅಥವಾ ಗೋವಿಂದ ಭಾಷ್ಯ: ಇದು ಶಂಕರಾಚಾರ್ಯಕೃತ ಅದ್ವೈತ ಸಾಂಪ್ರದಾಯದ್ದೂ ಅಲ್ಲ; ಅಥವಾ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಸಾಂಪ್ರದಾಯದ್ದೂ ಅಲ್ಲ; ಮಧ್ಯವರ್ತಿಯಾಗಿರುವದು

(೬) ಶ್ರೀ ಭಾಸ್ಕರಾಚಾರ್ಯಕೃತ ಬ್ರಹ್ಮಸೂತ್ರ ಭಾಷ್ಯ: ಇದು ದ್ವೈತ ಪರವಾದದ್ದಿದ್ದು ಮೇಲೆ ಎರಡನೇ ಶಾಖೆಯ ವಿಷಯದಲ್ಲಿ ಹೇಳಿದಂತೆ ವಿಶಿಷ್ಟದೇವತಾ ಪ್ರಾಧಾನ್ಯ ಹೀನವಾದದ್ದಿರುವದು.

(೭) ಶ್ರೀಕಂಠಾಚಾರ್ಯ, ಅಥವಾ ಶ್ರೀಪತ್ಯಾಚಾರ್ಯಕೃತ ಬ್ರಹ್ಮಸೂತ್ರಭಾಷ್ಯ: ಇದಕ್ಕೆ ಶ್ರೀಭಾಷ್ಯವೆಂತಲೂ ಹೇಳುವರು. ಇದು ಶಿವಪ್ರಧಾನದ್ವೈತಪರಭಾಷ್ಯವಾಗಿರುವದು.

(೮) ಶ್ರೀಮಧ್ವಾಚಾರ್ಯಕೃತ ಬ್ರಹ್ಮಸೂತ್ರಭಾಷ್ಯ ಅಥವಾ ದ್ವೈತಭಾಷ್ಯ: ಇದು ವಿಷ್ಣುಪ್ರಧಾನ ದ್ವೈತಶಾಖೆಯದಾಗಿದೆ.

(೯) ಶ್ರೀವಲ್ಲಭಾಚಾರ್ಯಕೃತ ಅನುಭಾಷ್ಯ: ಇದು ಶುದ್ಧಾದ್ವೈತ ಸಾಂಪ್ರದಾಯವು.

(೧೦) ಶ್ರೀನಿಂಬಾರ್ಕಾಚಾರ್ಯಕೃತ ಬ್ರಹ್ಮಸೂತ್ರಭಾಷ್ಯ: ಇದಕ್ಕೆ "ವೇದಾಂತ ಪಾರಿಜಾತ ಸೌರಭ" ಎಂದು ಮತ್ತೊಂದು ಹೆಸರಿರುವದು. ಇದು ದ್ವೈತಾದ್ವೈತ ಸಾಂಪ್ರದಾಯವು.

(೧೧) ಶ್ರೀಶುಕಭಗವತ್ಪಾದಾಚಾರ್ಯಕೃತ ಶುಕಭಾಷ್ಯ: ಇದಕ್ಕೇ 'ಸರ್ವವೇದಾಂತಸಾರ ಮೀಮಾಂಸಾಭಾಷ್ಯ' ಎಂತಲೂ ಹೇಳುವರು. ಈ ಭಾಷ್ಯದ ಧೋರಣವು ಶ್ರೀಭಾಗವತ ಪುರಾಣದಲ್ಲಿ ಪ್ರತಿಪಾದಿಸಲ್ಪಟ್ಟಿರುವ ಭಕ್ತಿಮಾರ್ಗವನ್ನು ಅನುಸರಿಸಿ ಇರುವದರಿಂದ ಇದಕ್ಕೆ "ಭಾಗವತಧರ್ಮಪರ" ಎಂದು ಹೇಳಬಹುದು.

ಈ ರೀತಿಯಾಗಿ ಒಟ್ಟಿಗೆ ಹನ್ನೊಂದು ಶಾಖೆಗಳಿದ್ದರೂ ಅವುಗಳಲ್ಲಿ ೧ನೇ, ೩ನೇ, ೫ನೇ, ೭ನೇ, ೮ನೇ ಎಂಬ ೫ ಶಾಖೆಗಳು ಮಾತ್ರ ಮುಖ್ಯವಾಗಿರುವವು. ಇವುಗಳ ಪ್ರವರ್ತಕರಲ್ಲಿ ಶ್ರೀ ಶಂಕರಾಚಾರ್ಯರು ಕ್ರಿ. ಶ. ಪೂ. ೭ನೇ ಶತಮಾನದಲ್ಲಿ ಆಗಿಹೋದರು. (ಜನ್ಮ ಕ್ರಿ. ಶ. ಪೂ. ೫೧೯). ಶ್ರೀಕಂಠಾಚಾರ್ಯರು ಕ್ರಿ. ಶ. ದ ೮ನೇ ಶತಮಾನದಲ್ಲಿ ಇದ್ದರು. ಮೇಲೆ ಹೇಳಿದ ಆದಿ ಶಂಕರಾಚಾರ್ಯರಿಂದ ೩೮ನೇ ತಲೆಯವರಾದ ಅವರ ಗಾದಿಯಮೇಲೆ ಬಂದ ಎರಡನೇ ಶಂಕರಾಚಾರ್ಯರು ಇ. ಸ. ೭೮೮ರಲ್ಲಿ ಜನ್ಮಿಸಿದರು. ಇವರೂ ಒಳ್ಳೇ ವಿದ್ವಾಂಸರಿದ್ದರು. ಸಾಮಾನ್ಯವಾಗಿ ಜನರು ಇವರೇ ಆದಿ ಶಂಕರಾಚಾರ್ಯರೆಂದು ಪ್ರತಿಪಾದಿಸುವರು. ಆದರೆ ಇದು ಸರಿಯಲ್ಲ. ಶ್ರೀಕಂಠಾಚಾರ್ಯ (ಶಿವಾಚಾರ್ಯ)ರೂ ಈ ಎರಡನೇ ಶಂಕರಾಚಾರ್ಯರೂ ಸಮಕಾಲೀನರಾಗಿದ್ದರು. ಇರಲಿ. ರಾಮಾನುಜಾಚಾರ್ಯರು ಕ್ರಿ. ಶ. ೧೧ನೇ ಶತಮಾನದಲ್ಲಿದ್ದರು (ಜನ್ಮ ಇ. ಸ. ೧೦೧೭) ಹಾಗು ಶ್ರೀಕ

ಕಾಚಾರ್ಯರು ಕ್ರಿ. ಶ. ೧೧ನೇ ಶತಮಾನದಲ್ಲಿಯೂ ಜನ್ಮ (ಇ. ಸ. ೧೦೭೬), ಶ್ರೀ ಮಧ್ವಾಚಾರ್ಯರು ಕ್ರಿ. ಶ. ೧೨ನೇ ಶತಮಾನದಲ್ಲಿಯೂ (ಜನ್ಮ ಇ. ಸ. ೧೧೯೯) ಇದ್ದರು.

ಸಾಮಾನ್ಯವಾಗಿ ಜನರು ಶಂಕರಾಚಾರ್ಯರು ೮ನೇ ಶತಮಾನ ದಲ್ಲಿ ಇದ್ದರೆಂದು ಹೇಳುವರು. ಆದರೆ ಶಾಸ್ತ್ರಿಯವರು ಹೇಳುವಂತೆ ನೋಡಿದರೆ, ಬ್ರಹ್ಮಸೂತ್ರದಮೇಲೆ ಶಾರೀರಕ ಭಾಷ್ಯವನ್ನು ಬರೆದ ಆದಿ ಶಂಕರಾಚಾರ್ಯರು ಕ್ರಿ. ಶ. ಪೂ. ೬ನೇ ಶತಮಾನದಲ್ಲಿ ಇದ್ದರೆಂತಲೂ ಅವರಿಂದ ೩೮ನೇ ತಲೆಯವರಾದ ೨ನೇ ಶಂಕರಾಚಾರ್ಯರು ೮ನೇ ಶತಮಾನದಲ್ಲಿ ಇದ್ದರೆಂತಲೂ ಕಂಡುಬರುವದು. ಇದಕ್ಕೆ ಆಧಾರವೇ ನೋ ತಿಳಿಯದು.

ಅಲಂಕಾರದರ್ಪಣ.

[ಅಗಸ್ಟ ತಿಂಗಳ ಸಂಚಿಕೆಯ ೩೨ನೆಯ ಪುಟದಿಂದ ಮುಂದೆ ಸಾಗಿದ್ದು]

೧೧೩. ಶಬ್ದಪ್ರಮಾಣಾಲಂಕಾರವು:— (ಮುಂದೆ ಸಾಗಿದ್ದು)

ಇದಲ್ಲದೆ ಆಚಾರ-ಆತ್ಮತುಷ್ಟಿಗಳೂ, ಶ್ರುತಿ-ಲಿಂಗಾದಿಗಳೂ ಮೀಮಾಂಸಕರಿಂದ ಪ್ರಮಾಣಿಸಲಿಕ್ಕೆ ಯೋಗ್ಯವಾದವುಗಳಾದ್ದರಿಂದ ಅವಾದರೂ ಇಲ್ಲಿಯೇ ಸಂಗ್ರಹಿಸಲ್ಪಡುವವು. ಉದಾ:—

ಭಾಮಿನಿ || ಸತಿಯ ನಾಮವ ತನ್ನ ನಾಮವ |
ಪಿತನ ನಾಮವ ತಾನೆ ನುಡಿಯಲು |
ಮತಿವಂತಗೀನಡತೆ ಸೇರುವದಿಲ್ಲವದರಿಂದೆ ||
ಯತಿಸದೆನ್ನಯ ಮನವು ಹೇಳಲು |
ಸ್ತುತಿಯ ಪಾಠಕರಿಂದೆ ತಿಳಿವುದು |
ಪೃಥ್ವಿಯಲಿ ನಿಂದಿಪರು ವಿಪರೀತಾಚರಣೆಯುವನ ||

ಇಲ್ಲಿ 'ಹೆಂಡತಿ ಮೊದಲಾದವರ ಹೆಸರನ್ನು ತಾನೇ ಹೇಳಬಾರದು, ಎಂಬ ಅರ್ಥಕ್ಕೆ ಮತಿವಂತ ಆಚಾರವು ಪ್ರಮಾಣವಾಗಿದೆ. ಮತ್ತೆ ಉದಾ-

ಭಾಮಿನಿ|| ಅವನಿಪತಿ ರಾಜರ್ಷಿಯೊಗಿರು |
ವವನ ನನ್ನಯ ಮನವದಿವಳಲಿ |
ಜವದೆ ಸೇರುತ ಬಹುಸ್ಥಿರದೆ ನಿಂತಿರುವದದರಿಂದೇ ||

ರ್ಯರ ಪರಿಣಾಮವಾದೀ ವಿಶಿಷ್ಟಾದ್ವೈತ ಸಾಂಪ್ರದಾಯ, ಮಧ್ವಾಚಾರ್ಯರ ತಾರತಮ್ಯವಾದೀ ದ್ವೈತಸಾಂಪ್ರದಾಯ, ಹಾಗು ವಲ್ಲಭಾಚಾರ್ಯರ ಬ್ರಹ್ಮವಾದೀಕೇವಲಾದ್ವೈತ ಸಾಂಪ್ರದಾಯ ಎಂಬ ನಾಲ್ಕು ಮುಖ್ಯ ಸಾಂಪ್ರದಾಯಗಳು ಅಥವಾ ಶಾಖೆಗಳು ಪ್ರಸಿದ್ಧವಾಗಿದ್ದರೂ ಸಾಂಪ್ರತಕ್ಕೆ ದೊರೆತಿರುವ ಆಧಾರಗಳಿಂದ ನೋಡಿದರೆ ನಮ್ಮ ದೇಶದ ಬೇರೆ ಬೇರೆ ಭಾಗಗಳಲ್ಲಿ ಮೇಲೆ ಹೇಳಿದವರಿಗಿಂತಲೂ ಹೆಚ್ಚು ಜನರು "ಆಚಾರ್ಯ" ಸಂಜ್ಞೆಯನ್ನು ಹೊಂದಿದವರಾಗಿ ಹೋಗಿರುವರೆಂತಲೂ ಅವರೆಲ್ಲರ ಹೆಸರಿನಿಂದ ಮತ್ತೂ ಕೆಲವು ಸಾಂಪ್ರದಾಯಗಳು ಸಾಂಪ್ರತ ಕಾಲದಲ್ಲಿ ನಡೆಯುತ್ತಿರುವವೆಂತಲೂ ಗೊತ್ತಾಗುವದು. ಪ್ರಸ್ತುತ ವಿಷಯದ ಮೇಲೆ ಮಿ. ಟಿ. ಎಸ್. ನಾರಾಯಣಶಾಸ್ತ್ರೀ ಬೀ. ಎ., ಬೀ. ಎಲ್. ಎಂಬ ಹೆಸರಿನ ಒಬ್ಬ ಮದ್ರಾಸದ ವಿದ್ವಾಂಸರು, "ಇಂಡಿಯನ್ ರಿವ್ಹ್ಯೂ" ಎಂಬ ಮಾಸಪತ್ರಿಕೆಯಲ್ಲಿ ಒಂದು ವಾಚನೀಯವಾದ ನಿಬಂಧವನ್ನು ಬರೆದಿರುವರು. ಅದರ ಆಧಾರದಿಂದ ಕೆಲವು ಸಂಗತಿಗಳನ್ನು ಇಲ್ಲಿ ಬರೆಯುವೆವು. ಮಿ. ನಾರಾಯಣಶಾಸ್ತ್ರೀಯವರು ಈ ವಿಷಯವನ್ನು ಸಂಪೂರ್ಣವಾಗಿ ಪ್ರತಿಪಾದಿಸಿರುವದಿಲ್ಲ; ಹಾಗು ತಾವು ಯಾವ ಗ್ರಂಥದ ಆಧಾರದಿಂದ ಬರೆದಿರುವೆವೆಂಬದನ್ನು ಹೇಳಿರುವದಿಲ್ಲ; ಹೀಗಿದ್ದರೂ ಅವರ ಬರಹವು ಸಾಧಾರವಾದದ್ದಿರಬೇಕೆಂಬದು ಸಹಜವೇ ಸರಿ. ಅವರು ಹೇಳಿರುವದೇನಂದರೆ:—

ನಮ್ಮ ಭರತಖಂಡದೊಳಗಿನ ಯಾವತ್ತು ಧಾರ್ಮಿಕ ಗ್ರಂಥಗಳನ್ನು ನಿರೀಕ್ಷಿಸುವದರಿಂದ ದೇಶದ ಬೇರೆ ಬೇರೆ ಭಾಗಗಳಲ್ಲಿ ವೇದಾಂತಪ್ರಣೀತ ಧರ್ಮದ ಹನ್ನೊಂದು ಶಾಖೆಗಳು, ಅಥವಾ ಸಾಂಪ್ರದಾಯಗಳು ಸಾಂಪ್ರತಕ್ಕೆ ಪ್ರಚಾರದಲ್ಲಿರುವವೆಂಬದು ಕಂಡುಬರುವದು. ಪ್ರತಿಯೊಂದು ಶಾಖೆಗೂ ಒಬ್ಬೊಬ್ಬ ಆಚಾರ್ಯರಿದ್ದು ಅವರೆಲ್ಲರೂ ಭಗವಾನ್ ನಾರಾಯಣ ವ್ಯಾಸರು ರಚಿಸಿದ ವೇದಾಂತ ಸೂತ್ರದ ಮೇಲೆ ಬೇರೆ ಬೇರೆ ಭಾಷ್ಯಗಳನ್ನು ಬರೆದಿರುವರು. ಯಾವ ಯಾವ ಆಚಾರ್ಯರು ಯಾವ ಯಾವ ಶಾಖೆಗಳನ್ನು ಸ್ಥಾಪಿಸಿದರು, ಹಾಗು ಯಾವ ಯಾವ ಭಾಷ್ಯಗಳನ್ನು ಬರೆದರು ಎಂಬದು ಮುಂದಿನ ಪಟ್ಟಿಯಿಂದ ಗೊತ್ತಾಗುವದು.

(೧) ಶ್ರೀಶಂಕರ ಭಗವತ್ಪಾದಾಚಾರ್ಯ, ಅಥವಾ ಆದಿ ಶಂಕರಾಚಾರ್ಯ ವಿರಚಿತ ಶಾರೀರಕ ಭಾಷ್ಯ: ಈ ಭಾಷ್ಯವು ಅದ್ವೈತ ಪರವಾಗಿದ್ದು ಇದು ಬ್ರಹ್ಮಸೂತ್ರದ ವಿವರಣೆಗೆ ಆಧಾರಭೂತವಾದದ್ದೆಂದು ಇಡೀ ಭರತಖಂಡದಲ್ಲೆಲ್ಲ ಇಂದಿಗೂ ತಿಳಿಯಲ್ಪಡುವದು. ಅದೇ ರೀತಿಯಾಗಿ ಶಂಕರಾಚಾರ್ಯರ ಕಾಲದಿಂದ ಇಂದಿನವರೆಗೂ ವೇದಾಂತ ವಿಷಯದ ಮೇಲೆ ಉತ್ತಮೋತ್ತಮ ಗ್ರಂಥಗಳನ್ನು ಬರೆದ ಬಹುಶಃ ಯಾವತ್ತು ಜನರು ಇದೇ ಶಾಖೆಯ (ಅದ್ವೈತ) ಅನುಯಾಯಿಗಳಾಗಿದ್ದರು.

(೨) ಭಗವತ್ ವಿಜ್ಞಾನಭಿಕ್ಷು, ಅಥವಾ ವಿಜ್ಞಾನಮಿತ್ರಕೃತ ಬ್ರಹ್ಮಸೂತ್ರ ಭಾಷ್ಯ: ಈ ಭಾಷ್ಯವು ವಿಶಿಷ್ಟಾದ್ವೈತ ಪರವಾದದ್ದಿದ್ದು ಅದು ಕೇವಲ ವಿಷ್ಣುವಿಗೇ ಆಗಲಿ, ಶಿವನಿಗೇ ಆಗಲಿ ಪ್ರಾಧಾನ್ಯವನ್ನು ಕೊಟ್ಟು ಬರೆಯಲ್ಪಡಲಿಲ್ಲ; ಅಂದರೆ ಅದರಲ್ಲಿ ಯಾವದಾದರೂ ಒಂದು ವಿಶಿಷ್ಟ ದೇವತೆಗೆ ಪ್ರಾಧಾನ್ಯವನ್ನು ಪ್ರತಿಪಾದಿಸಿಲ್ಲ.

(೩) ಶ್ರೀಕಂಠ ಶಿವಾಚಾರ್ಯಕೃತ ಬ್ರಹ್ಮಮೀಮಾಂಸಾಭಾಷ್ಯ: ಇದೂ ವಿಶಿಷ್ಟಾದ್ವೈತ ಪರವಾದದ್ದೇ ಸರಿ; ಆದರೆ ಇದರಲ್ಲಿ ಶಿವನಿಗೇ ಹೆಚ್ಚು ಪ್ರಾಧಾನ್ಯವು ಪ್ರತಿಪಾದಿಸಲ್ಪಟ್ಟಿರುವದರಿಂದ ಇದಕ್ಕೆ ಶೈವವಿಶಿಷ್ಟಾದ್ವೈತಪರಭಾಷ್ಯವೆಂದು ಹೇಳಬಹುದು.

(೪) ಭಗವತ್ ರಾಮಾನುಜಾಚಾರ್ಯರ ಶ್ರೀಭಾಷ್ಯ: ಇದೂ ವಿಶಿಷ್ಟಾದ್ವೈತಪರವಾದದ್ದೇ ಸರಿ. ಆದರೆ ಇದರಲ್ಲಿ ವಿಷ್ಣುವಿಗೇ ಹೆಚ್ಚು ಮುಖ್ಯತ್ವವು ಕೊಡಲ್ಪಟ್ಟಿರುವದರಿಂದ ಇದಕ್ಕೆ ವೈಷ್ಣವ ವಿಶಿಷ್ಟಾದ್ವೈತ ಪರಭಾಷ್ಯವೆಂದು ಹೇಳಬಹುದು

(೫) ಬಲದೇವಾಚಾರ್ಯಕೃತ ವೇದಾಂತಸೂತ್ರ ಭಾಷ್ಯ, ಅಥವಾ ಗೋವಿಂದ ಭಾಷ್ಯ: ಇದು ಶಂಕರಾಚಾರ್ಯಕೃತ ಅದ್ವೈತ ಸಾಂಪ್ರದಾಯದ್ದೂ ಅಲ್ಲ; ಅಥವಾ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಸಾಂಪ್ರದಾಯದ್ದೂ ಅಲ್ಲ; ಮಧ್ಯವರ್ತಿಯಾಗಿರುವದು.

(೬) ಶ್ರೀ ಭಾಸ್ಕರಾಚಾರ್ಯಕೃತ ಬ್ರಹ್ಮಸೂತ್ರ ಭಾಷ್ಯ: ಇದು ದ್ವೈತ ಪರವಾದದ್ದಿದ್ದು ಮೇಲೆ ಎರಡನೇ ಶಾಖೆಯ ವಿಷಯದಲ್ಲಿ ಹೇಳಿದಂತೆ ವಿಶಿಷ್ಟದೇವತಾ ಪ್ರಾಧಾನ್ಯ ಹೀನವಾದದ್ದಿರುವದು.

(೭) ಶ್ರೀಕಂಠಾಚಾರ್ಯ, ಅಥವಾ ಶ್ರೀಪತ್ಯಾಚಾರ್ಯಕೃತ ಬ್ರಹ್ಮಸೂತ್ರಭಾಷ್ಯ: ಇದಕ್ಕೆ ಶ್ರೀಭಾಷ್ಯವೆಂತಲೂ ಹೇಳುವರು. ಇದು ಶಿವ ಪ್ರಧಾನದ್ವೈತಪರಭಾಷ್ಯವಾಗಿರುವದು.

(೮) ಶ್ರೀಮಧ್ವಾಚಾರ್ಯಕೃತ ಬ್ರಹ್ಮಸೂತ್ರಭಾಷ್ಯ ಅಥವಾ ದ್ವೈತ ಭಾಷ್ಯ: ಇದು ವಿಷ್ಣುಪ್ರಧಾನ ದ್ವೈತಶಾಖೆಯದಾಗಿದೆ.

(೯) ಶ್ರೀವಲ್ಲಭಾಚಾರ್ಯಕೃತ ಅನುಭಾಷ್ಯ: ಇದು ಶುದ್ಧಾದ್ವೈತ ಸಾಂಪ್ರದಾಯವು.

(೧೦) ಶ್ರೀನಿಂಬಾರ್ಕಾಚಾರ್ಯಕೃತ ಬ್ರಹ್ಮಸೂತ್ರಭಾಷ್ಯ: ಇದಕ್ಕೆ 'ವೇದಾಂತ ಪಾರಿಜಾತ ಸೌರಭ" ಎಂದು ಮತ್ತೊಂದು ಹೆಸರಿರುವದು. ಇದು ದ್ವೈತಾದ್ವೈತ ಸಾಂಪ್ರದಾಯವು.

(೧೧) ಶ್ರೀಶುಕಭಗವತ್ಪಾದಾಚಾರ್ಯಕೃತ ಶುಕಭಾಷ್ಯ: ಇದಕ್ಕೇ ಸರ್ವವೇದಾಂತಸಾರ ಮೀಮಾಂಸಾಭಾಷ್ಯ' ಎಂತಲೂ ಹೇಳುವರು. ಈ ಭಾಷ್ಯದ ಧೋರಣವು ಶ್ರೀಭಾಗವತ ಪುರಾಣದಲ್ಲಿ ಪ್ರತಿಪಾದಿಸಲ್ಪಟ್ಟಿರುವ ಭಕ್ತಿಮಾರ್ಗವನ್ನು ಅನುಸರಿಸಿ ಇರುವದರಿಂದ ಇದಕ್ಕೆ 'ಭಾಗವತಧರ್ಮಪರ" ಎಂದು ಹೇಳಬಹುದು.

ಈ ರೀತಿಯಾಗಿ ಒಟ್ಟಿಗೆ ಹನ್ನೊಂದು ಶಾಖೆಗಳಿದ್ದರೂ ಅವುಗಳಲ್ಲಿ ೧ನೇ, ೩ನೇ, ೪ನೇ, ೭ನೇ, ೮ನೇ ಎಂಬ ೫ ಶಾಖೆಗಳು ಮಾತ್ರ ಮುಖ್ಯವಾಗಿರುವವು. ಇವುಗಳ ಪ್ರವರ್ತಕರಲ್ಲಿ ಶ್ರೀ ಶಂಕರಾಚಾರ್ಯರು ಕ್ರಿ. ಶ. ಪೂ. ೬ನೇ ಶತಮಾನದಲ್ಲಿ ಆಗಿಹೋದರು. (ಜನ್ಮ ಕ್ರಿ. ಶ. ಪೂ. ೫೦೯). ಶ್ರೀಕಂಠಾಚಾರ್ಯರು ಕ್ರಿ. ಶ. ದ ೮ನೇ ಶತಮಾನದಲ್ಲಿ ಇದ್ದರು. ಮೇಲೆ ಹೇಳಿದ ಆದಿ ಶಂಕರಾಚಾರ್ಯರಿಂದ ೩೮ನೇ ತಲೆಯವರಾದ ಅವರ ಗಾದಿಯಮೇಲೆ ಬಂದ ಎರಡನೇ ಶಂಕರಾಚಾರ್ಯರು ಇ. ಸ. ೭೮೮ರಲ್ಲಿ ಜನ್ಮಿಸಿದರು. ಇವರೂ ಒಳ್ಳೇ ವಿದ್ವಾಂಸರಿದ್ದರು. ಸಾಮಾನ್ಯವಾಗಿ ಜನರು ಇವರೇ ಆದಿ ಶಂಕರಾಚಾರ್ಯರೆಂದು ಪ್ರತಿಪಾದಿಸುವರು. ಆದರೆ ಇದು ಸರಿಯಲ್ಲ. ಶ್ರೀಕಂಠಾಚಾರ್ಯ (ಶಿವಾಚಾರ್ಯ)ರೂ ಈ ಎರಡನೇ ಶಂಕರಾಚಾರ್ಯರೂ ಸಮಕಾಲೀನರಾಗಿದ್ದರು. ಇರಲಿ. ರಾಮಾನುಜಾಚಾರ್ಯರು ಕ್ರಿ. ಶ. ದ ೧೧ನೇ ಶತಮಾನದಲ್ಲಿದ್ದರು. (ಜನ್ಮ ಇ. ಸ. ೧೧೦೭). ಹಾಗು ಶ್ರೀಕಂ

ರಾಚಾರ್ಯರು ಕ್ರಿ. ಶ. ೧೧ನೇ ಶತಮಾನದಲ್ಲಿಯೂ ಜನ್ಮ (ಇ. ಸ. ೧೦೭೦), ಶ್ರೀ ಮಧ್ವಾಚಾರ್ಯರು ಕ್ರಿ. ಶ. ೧೨ನೇ ಶತಮಾನದಲ್ಲಿಯೂ (ಜನ್ಮ ಇ. ಸ. ೧೧೯೯) ಇದ್ದರು.

ಸಾಮಾನ್ಯವಾಗಿ ಜನರು ಶಂಕರಾಚಾರ್ಯರು ೮ನೇ ಶತಮಾನ ದಲ್ಲಿ ಇದ್ದರೆಂದು ಹೇಳುವರು. ಆದರೆ ಶಾಸ್ತ್ರಿಯವರು ಹೇಳುವಂತೆ ನೋಡಿದರೆ, ಬ್ರಹ್ಮಸೂತ್ರದಮೇಲೆ ಶಾರೀರಕ ಭಾಷ್ಯವನ್ನು ಬರೆದ ಆದಿ ಶಂಕರಾಚಾರ್ಯರು ಕ್ರಿ. ಶ. ಪೂ. ೬ನೇ ಶತಮಾನದಲ್ಲಿ ಇದ್ದರೆಂತಲೂ ಅವರಿಂದ ೩೮ನೇ ತಲೆಯವರಾದ ೨ನೇ ಶಂಕರಾಚಾರ್ಯರು ೮ನೇ ಶತಮಾನದಲ್ಲಿ ಇದ್ದರೆಂತಲೂ ಕಂಡುಬರುವದು. ಇದಕ್ಕೆ ಆಧಾರವೇ ನೋ ತಿಳಿಯದು.

ಅಲಂಕಾರದರ್ಪಣ.

[ಅಗಸ್ಟತಿಂಗಳ ಸಂಚಿಕೆಯ ೩೨ನೆಯ ಪುಟದಿಂದ ಮುಂದೆ ಸಾಗಿದ್ದು.]

೧೧೩. ಶಬ್ದಪ್ರಮಾಣಾಲಂಕಾರವು:— (ಮುಂದೆ ಸಾಗಿದ್ದು)

ಇದಲ್ಲದೆ ಆಚಾರ-ಆತ್ಮತುಷ್ಟಿಗಳೂ, ಶ್ರುತಿ-ಲಿಂಗಾದಿಗಳೂ ಮೀ ಮಾಂಸಕರಿಂದ ಪ್ರಮಾಣಿಸಲಿಕ್ಕೆ ಯೋಗ್ಯವಾದವುಗಳಾದ್ದರಿಂದ ಅವಾ ದರೂ ಇಲ್ಲಿಯೇ ಸಂಗ್ರಹಿಸಲ್ಪಡುವವು. ಉದಾ:—

ಭಾಮಿನಿ || ಸತಿಯ ನಾಮವ ತನ್ನ ಸಾಮುವ |
ಪಿತನ ನಾಮುವ ತಾನೆ ನುಡಿಯಲು |
ಮತಿವಂತರೀಸಡತೆ ಸೇರುವದಿಲ್ಲವದರಿಂದೆ ||
ಯತಿಸದೆನ್ನಯ ಮನವು ಹೇಳಲು |
ಸ್ತುತಿಯು ಪಾಠಕರಿಂದೆ ತಿಳಿವುದು |
ಪೃಥ್ವಿಯಲಿ ನಿಂದಿಪರು ವಿಪರೀತಾಚರಣೆಯುವನ ||

ಇಲ್ಲಿ 'ಹೆಂಡತಿ ಮೊದಲಾದವರ ಹೆಸರನ್ನು ತಾನೇ ಹೇಳಬಾರದು, ಎಂಬ ಅರ್ಥಕ್ಕೆ ಮತಿವಂತ ಆಚಾರವು ಪ್ರಮಾಣವಾಗಿದೆ. ಮತ್ತೆ ಉದಾ-

ಭಾಮಿನಿ || ಅವನಿಪತಿ ರಾಜರ್ಷಿಯಾಗಿರು |
ವವನ ನನ್ನಯ ಮನವಧಿವಳಲಿ |
ಜನದೆ ಸೇರುತ ಬಹುಸ್ಥಿರದೆ ನಿಂತಿರುವದದರಿಂದೇ ||

ಇವಳು ನಿಶ್ಚಯವಾಗಿ ಕ್ಷತ್ರಿಯು ।
ಅವನಿಪನ ಸತಿತನಕೆ ಯೋಗ್ಯಳು ।
ಇವಳ ಸಂದೇಹದಲಿ ಮತಗಳು ಚಿತ್ತವೃತ್ತಿಗಳು ।।

ಇಲ್ಲಿ 'ಶಕುಂತಲೆಯು ಕ್ಷತ್ರಿಯಳು, ಕಾರಣ ಇವಳ ಪಾಣಿಗ್ರಹಣವನ್ನು ಮಾಡಲಿಕ್ಕೆ ಅಡ್ಡಿಯಿಲ್ಲ, ಎಂಬ ಅರ್ಥಕ್ಕೆ ರಾಜರ್ಷಿಯಾದ ದುಷ್ಯಂತನ ಆತ್ಮತುಷ್ಟಿಯು ಪ್ರಮಾಣವಾಗಿದೆ. ಶಕುಂತಲೆಯು ಕ್ಷತ್ರಿಯಳೆಂಬದನ್ನು ದುಷ್ಯಂತನು ಕೇಳಿಯೂ ನೋಡಿಯೂ ಇಲ್ಲವಾದ್ದರಿಂದ ಇದು ಸಂದೇಹದ ಪ್ರಸಂಗವಾಗಿದೆ.

ಶ್ರುತ್ಯಲಂಕಾರವು. ಲಕ್ಷಣಃ—ಪ್ರಕೃತದರ್ಥವನ್ನು ಸಮರ್ಥಿಸಲಿಕ್ಕೆ ಶಬ್ದವು ಪ್ರಮಾಣವಾಗಿರಲು, ಅಂದರೆ ಯಾವ ಶಬ್ದವನ್ನು ಕೇಳುವದರಿಂದಲೇ ಪ್ರಕೃತದ ಸಮರ್ಥನೆಯು ತೋರುವದೋ, ಅಲ್ಲಿ ಈ ಅಲಂಕಾರವಾಗುವದು. ಉದಾಃ—

ಕಂದ ।। ಕೇಶವನ ಭಕ್ತನಲ್ಲವೆ ।
ಕೇಶವನೂರಲ್ಲಿ ವಾಸವಾದವನೀಗ ।।
ದೇಶಕ್ಕೆ ಪ್ರಾಣನೆಂದೆಯೆ ।
ಘೋಷಿಸುವರು ನಮ್ಮ ಮುಖ್ಯ ಪ್ರಾಣೇಶನಿಗೆ ।।

ಇಲ್ಲಿ "ಕೇಶವನ ಭಕ್ತನು" ಎಂಬ ಅರ್ಥವನ್ನು ಸಮರ್ಥಿಸಲಿಕ್ಕೆ "ಕೇಶವನೂರವಾಸನು" ಎಂಬ ಶಬ್ದವೇ ಪ್ರಮಾಣವಾಗಿರುವದು. ಇದರಂತೆ "ದೇಶಕ್ಕೆ ಪ್ರಾಣನು" ಎಂಬ ಅರ್ಥವನ್ನು ಸಮರ್ಥಿಸಲಿಕ್ಕೆ "ನಮ್ಮ ಪ್ರಾಣೇಶನು" ಎಂಬ ಶಬ್ದವೇ ಪ್ರಮಾಣವಾಗಿರುವದು. (ಕೇಶವನೂರವಾಸನು=ಬಾಗಲಕೋಟ ತಾಲೂಕದ ಕೇಶವನೂರ ಗ್ರಾಮದ ಹನುಮಂತ ದೇವರು.) ನಮ್ಮ ಎಂಬ ಬಹುವಚನ ಪದದಲ್ಲಿ ಎಲ್ಲ ಜೀವಿಗಳು ಸಂಗ್ರಹಿಸಲ್ಪಡುವವು. ಕಾರಣ ಎಲ್ಲ ಜೀವಿಗಳ ಒಡೆಯನಾದವನು ದೇಶಕ್ಕೆ ಪ್ರಾಣನೆನಿಸುವನು. ('ಜಗತ್ಪ್ರಾಣ ಸಮೀರಣಾಃ' ಎಂದು ಅಮರವು). ಮತ್ತೆ ಉದಾ:—

ಭಾಮಿನಿ ।। ದೇವ ಯಲಗುರದೀಶಹನುಮನು ।
ಭಾವದಲಿ ನೆಲಸಿರುವ ಮನುಜಗೆ ।
ಕೋವಿದಗೆ ಸಾಹಿತ್ಯಶಾಸ್ತ್ರದ ಮರ್ಮವಂದವಗೆ ।।

ಆ ವಿನಾಯಕ ಪ್ರೇಮ ಪಾತ್ರಗೆ |
ಯಾವ ಕಾರ್ಯದೆ ವಿಘ್ನಬರುವದು |
ಭಾವಿಸಲು ತಿಳಿಯುವದು ಸರ್ವಕೆ ಗುರುವೆ ಸಾಧನವು ||

ಇಲ್ಲಿ "ಯಾವ ಕಾರ್ಯದಲ್ಲಿಯೂ ವಿಘ್ನಬರುವದಿಲ್ಲ" ಎಂಬ ಅರ್ಥವನ್ನು ಸಮರ್ಥಿಸಲು "ವಿನಾಯಕ ಪ್ರೇಮಪಾತ್ರನು" ಎಂಬ ಶಬ್ದವು ಪ್ರಮಾಣವಾಗಿರುವದು. (ವಿನಾಯಕೋ ವಿಘ್ನರಾಜಃ ಎಂದು ಅಮರವು). ಮತ್ತೆ ಉದಾ:—

ಭಾಮಿನಿ|| ನಾಮದಿಂದಲೆ ವರದನೈ ನಿನ |
ಗಾ ಮಹಾವರ ಮುದ್ರಿಯೇತಕೆ? |
ನಾಮಶ್ರುತಿ ಸಿದ್ಧಾರ್ಥವಿರೆ ಮನ್ನಿಪರೆ? ಲಿಂಗವನು ||

ಇಲ್ಲಿ "ವರದನು" ಎಂಬ ಕರಿಗಿರೀಶ್ವರನ ಹೆಸರನ್ನು ಕೇಳಿದ ಮಾತ್ರದಿಂದಲೇ "ಬೇಡಿದ್ದನ್ನು ಕೊಡುವವನು" ಎಂಬ ಅರ್ಥದ ಸಮರ್ಥನೆಯಾಗುವದು. ಕಾರಣ ಬೇರೆ ಗುರುತುಗಳ ಪ್ರಯೋಜನವಿಲ್ಲ. ಮತ್ತೆ ಉದಾ:—

ಭಾಮಿನಿ|| ಭರತರಿಗೆ ನೀ ಮಾಡಿದುಪಕೃತಿ |
ಯರಿಯದಿರುವದೆ ಧರೆಯೊಳೀಗಲು |
ತ್ವರದೆ ನಿನ್ನಯ ನಾಮವದು ಶ್ರುತಿಗಳಲಿ ಸೇರಿದರು ||
ಅರರೆ! ನಿನ್ನಯ ಸರಿಯ ಶೂರರು |
ಧರೆಯೊಳಗೆ ಪುಟ್ಟರು ಶಿವಾಜಿಯೆ! |
ಬರೆದ ಪುಸ್ತಕವೇಕೆ ನೋಳ್ಪರು ಸಹಜವರಿಯುತಿರೆ ||

ಆಜಿಯಲ್ಲಿ ಶಿವನಂತಿರುವವನು ಶಿವಾಜಿಯೆನಿಸುವನು. ಕಾರಣ ಇಲ್ಲಿ "ಶಿವಾಜಿ" ಎಂಬ ಹೆಸರು ಕಿವಿಗೆ ಬಿದ್ದ ಮಾತ್ರವೇ ಅವನ ಪರಾಕ್ರಮದ ಸಮರ್ಥನೆಯಾಗುವದು. (ಆಜಿ=ಕಾಳಗ)

ಲಿಂಗಾಲಂಕಾರವು:—ಲಕ್ಷಣ. ಲಿಂಗವೆಂದರೆ ಗುರುತು, ಅಥವಾ ಚಿಹ್ನವು ಪ್ರಕೃತದ ಅರ್ಥವನ್ನು ಸಮರ್ಥಿಸಲಿಕ್ಕೆ ಪ್ರಮಾಣವಾದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ|| ಯಾರಿಗು ತಿಳಿಯದ ತೆರದಿಂ |
ಮೂರೂ ಲೋಕದಲಿ ನಡೆವ ಕಾರ್ಯಗಳನ್ನು ||

ತೋರುವುದೀಶನು ನೇತ್ರದ ।
ಮೂರಿಂ ಪ್ರತ್ಯಕ್ಷವಾಗಿ ನೋಡುವನೆಂದು ॥

ಇಲ್ಲಿ "ಶಿವನು ಮೂರೂ ಲೋಕಗಳನ್ನು ಪ್ರತ್ಯಕ್ಷವಾಗಿ ನೋಡುವನು" ಎಂಬ ಅರ್ಥಕ್ಕೆ ಅವನ ಮೂರು ಕಣ್ಣಿನ ಚಿಹ್ನವು ಪ್ರಮಾಣವಾಗಿರುವದು. ಮತ್ತೆ ಉದಾ:—

ಭಾಮಿನಿ॥ ಎನಗಿಲ್ಲ ವೃತ್ತಿಗಳು ಸ್ವಾರ್ಥವು ।
ಜನರ ಹಿತಕಿದುವೆಲ್ಲವೆಂಬುದು ।
ನಿನಗೆ ಮನದೊಳಗರಿವುದೈ! ನನ್ನೆಂಟು ಮೂರ್ತಿಗಳಿಂ ॥

ಇಲ್ಲಿ "ಈಶ್ವರನು ಸರ್ವೋಪಕಾರಿಯಾಗಿರುವನು" ಎಂಬ ಅರ್ಥವನ್ನು ಸಮರ್ಥಿಸಲು "ಪೃಥಿವಿ, ಅಪ್ಪು ಮೊದಲಾದ ಎಂಟು ಮೂರ್ತಿಗಳ ಪರಿಗ್ರಹತ್ವವು ಪ್ರಮಾಣವಾಗಿರುವದು. (ಅಹಿರ್ಬುಧ್ನ್ಯೋಷ್ಟಮೂರ್ತಿಶ್ಚ ಎಂದು ಅಮರವು.)

ಇದಲ್ಲದೆ ಮುಸಲ್ಮಾನರಿಗೆ ಗಡ್ಡವಿರುವದು, ಲಿಂಗಾಯತರಿಗೆ ಲಿಂಗವಿರುವದು, ಬ್ರಾಹ್ಮಣರಿಗೆ ಜನಿವಾರವಿರುವದು, ಸಿಟ್ಟಾದವನ ಮೋರೆ ಕೆಂಪಾಗಿರುವದು, ಮೊದಲಾದ ಲೌಕಿಕ ಲಿಂಗಗಳಾದರೂ ಇಲ್ಲಿಯೇ ಸಂಗ್ರಹಿಸಲ್ಪಡುವವು.

---

೧೧೪. ಅರ್ಥಾಪತ್ಯಲಂಕಾರವು. ಲಕ್ಷಣ:—ಬೇರೊಂದು ರೀತಿಯಿಂದ ಅರ್ಥವನ್ನು ಸಿದ್ಧಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ॥ ಪ್ರತ್ಯಕ್ಷ ಗಂಗೆ! ಈಕೆಯು ।
ಮಿಥ್ಯರು ನಿಲ್ಲುವರೆ? ಸುಡದೆ ಬೆಂಕಿಯೊಳೀಗಳ್ ॥

ಇಲ್ಲಿ "ಇವಳು ಬೆಂಕಿಯಲ್ಲಿ ಸುಡುವದಿಲ್ಲ". ಆದ್ದರಿಂದ "ಈಕೆಯು ಗಂಗೆಗೆ ಸಮಾನಳು" ಎಂಬ ಅರ್ಥವು ಅಕ್ರಮಿಕ ರೀತಿಯಿಂದ ಸಿದ್ಧವಾಗುವದು. ಮತ್ತೆ ಉದಾ:—

ಕಂದ॥ ಇರುವುದು ನಡುವೆಂದೀಗಲು ।
ತರುಣಿಗೆ ನಿಶ್ಚಯಿಸಲೊಂದು ಕಾರಣವಿಹುದೈ ॥
ಇರದಿದ್ದರೀ ಪಯೋಧರ ।
ಭರವದು ನಿಲ್ಲುವದೆ ತೆಗ್ಗೆ, ನಿರಾಧಾರದಲಿ ॥

ಇಲ್ಲಿ "ಪಯೋಧರ ಭರವನ್ನು ಸಹಿಸಬೇಕಾದರೆ ಬುಡದಲ್ಲಿ ಆಧಾರವಿರಬೇಕು". ಆದ್ದರಿಂದ "ಇವಳಿಗೆ ಮಧ್ಯವು ಇರುವದು" ಎಂಬ ಅರ್ಥವು ಅಕ್ರಮಿಕರೀತಿಯಿಂದ ಸಿದ್ಧವಾಗುವದು. ಮತ್ತೆ ಉದಾ: —

ಭಾಮಿನಿ || ಕಟುಕರಲಿ ಬಹು ಕಟುಕರಲ್ಲವೆ? |
ದಿಟದೆ ತಮ್ಮಯ ಮಕ್ಕಳನು ಧನ |
ಘಟಕೆ ಮಾರುವರಕಟ! ಸಂಭ್ರಮದಿಂದ ಲಗ್ನದಲಿ ||
ಕಟುಕನಾ ಕುರಿಕೋಳಿ ಮಾಂಸವ |
ತಟಕು ಹಣದಲಿ ಮಾರಿ ಬಿಡುವನು |
ಶಠರು ನರಮಾಂಸವನು ಕೊಡುವರು ಶಕಟಧನಬರಲು ||

ಇಲ್ಲಿ "ಹಣಕ್ಕೆ ಮಕ್ಕಳನ್ನು ಮಾರುವವರು ಬಹಳ ನಿಷ್ಕರುಣಿಗಳು" ಎಂಬ ಅರ್ಥವು ಕಟುಕನ ದೃಷ್ಟಾಂತದಿಂದ, ಅಂದರೆ ಬೇರೊಂದು ಸಂಗತಿಯಿಂದ ಸಿದ್ಧವಾಗಿರುವದು.

(ಮುಂದೆ ಸಾಗುವದು.)

ಉಪೇಂದ್ರಶರ್ಮಾ ತೋಳಮಟ್ಟಿ.

ಕಾಲೇಜದ ವಿದ್ಯಾರ್ಥಿಗಳ ಲೇಖಗಳು.

ಐ ಕ ಮ ತ್ಯ.

ಭಾ. ಷ. ಒಂದು ಸಮಯದಿ ಶಬರನೋರ್ವನು |
ಬಂದು ಜಾಲವನಲ್ಲಿ ಪಸರಿಸಿ |
ನಿಂದನತಿಸಿತತಂಡುಲಂಗಳ ಚಲ್ಲಿ ಗೋಪ್ಯದಲಿ ||
ಅಂದದಿಂ ನೆಗೆದಾಡುತಿಹ ಖಗ |
ವೃಂದವವಲೋಕಿಸಲು ಭೋಂಕನೆ |
ಬಂದು ಬೀಳುವುವೆನುತ ಮನದೊಳ್ಪರಮಹರುಷದಲಿ ||೧||
ಅಪ್ರತಿಮ ಸುಕುಮಾರದೇಹದ |
ಸುಪ್ರಸನ್ನ ವಿಚಿತ್ರವರ್ಣದ |
ಸುಪ್ರಫುಲ್ಲಾನನದ ಪ್ರಿಯಪರಿವಾರ ಜನರಿಂದ ||
ಸುಪ್ರವೇಷ್ಟಿತನಾಗಿ ಚರಿಸುವ |
ಸುಪ್ರಭಾಯುತ ವರಕಪೋತವು |

ಸುಪ್ರಮೋದದಲೀಕ್ಷಿಸಿದುದಾ ತಂಡುಲಂಗಳನು ॥ ೨ ॥
ಮಾನಸದಿ ಸಂತುಷ್ಟಿಯಿಂ ಪವ- ।
ಮಾನವೇಗದಲಿಳಿದುವಾ ಯುಜ- ।
ಮಾನನನುಸಾರದಲಿದೇನಚ್ಚರಿಯೊ ಸಹಜಮುದು ॥
ಮಾನವನ ಕಾಪಟ್ಯ-ದುಷ್ಕೃತೆ ।
ಮಾನವಂಗೆಜ್ಞೀಯಮೆನೆ ಧೀ- ।
ಮಾನವಂತಿಕೆಯಿಲ್ಲದಾ ಪಕ್ಷಿಗಳ ಪಾಡೇನು ॥ ೩ ॥
ಸರಲಹೃದಯುದ ಕಪಟವರಿಯದ ।
ವರಕಪೋತಂಗಳು ಬುಭುಕ್ಷಾ- ।
ತುರದಿ ಪರಮಾದರದಿ ಭಕ್ಷಿಸಲುಜ್ಜುಗಿಸಿದುವು ಕೇಳ್ ॥
ಮರೆಯುಲಡಗಿಹ ಖರ ಪುಲಿಂದನು ।
ಭರದಿ ಕೊಲಲೈತರೆ ನಿರೀಕ್ಷಿಸಿ ।
ಯುರರೆ! ಸತ್ತೆವು ಸತ್ತೆವೆನ್ನುತ ಮರುಗಿ ಮನದೊಳಗೆ ॥ ೪ ॥
ಕೆಲವು ತಮ್ಮರ್ಧಾಂಗಿಯರುಮಂ ।
ಕೆಲವು ಪ್ರಿಯಶಾಬಂಗಳಂ ಮೇಣ್ ।
ಕೆಲವು ಬಾಂಧವಜನಗಳಂ ಮನೆಮಾರುಗಳ ಕೆಲವು ॥
ಹಲವು ತೆರದಿಂ ಸ್ಮರಿಸುತಾತ್ಮದ ।
ವಿಲಯಕತಿಭಯಪಡುತ ಮನದೊಳ ।
ಗೆಲೆಲೆ! ಬಿಡದಾ ಪಕ್ಷಿಗಳದೇಂ ಶೋಕವಮಾಡಿದುವೊ ॥ ೫ ॥

ವಚನ ॥ ಅಂತು ದುಃಖಾಧಿಕ್ಯದಿಂ ಕಾಂತಿವಿರಹಿತ ಮೊಗದಾಕಪೋತಂಗಳತ್ಯಧಿಕ-ಹೃದಯದ್ರಾವಕಮಪ್ಪಾ ಸ್ಥಿತಿಯಂ ನಿರೀಕ್ಷಿಪೆಂತಪ್ಪರ್ಗಮಾದೊಡಮೆರ್ದೆ ಕರಗುಗುಮೆನಲವನತಿಕ್ರೂರವಂಚಕಪುಲಿಂದನೇಂ ಮನುಜನೊ! ಪಶುವೊ! ರಾಕ್ಷಸನೊ! ಪೇಳಲರಿದೆಂಬಿನಂ ಬಳಿಕ,

ಭಾ. ಷ. ಚಿಂತಿಸುವುದನುಚಿತವು ಬರಿದೆಂ ।
ದಿಂತುಭಾವಿಸಿ ಸರ್ವಪಕ್ಷಿಗ ।
ಳಂತರಿಕ್ಷದಿ ನೆಗೆವಯೋಚನೆಗೈದು ತತ್ಕ್ಷಣಕೆ ॥
ಅಂತಕನವೊಲ್ ಕಾಂಬ ಶಬರನು ।

ಪಾಂತಕ್ಕೈತರುವನಿತರೊಳಗಾ- |
ಗಂತುಕಾಪದ ದಾಂಟಿ ಭರ್‍ರನೆ ಪಾರಿದುವು ನಭಕೆ || ೬ ||
ಲೀಲೆಯಿಂ ಪಕ್ಷಿಗಳು ಪೋಗಲ್ |
ಜಾಲದಿಂ ಮೇಣ್ ಪಾಶದಿಂ ಕ- |
ಲ್ಲೋಲಜನಿಸಲು ಮಾಂಸವಂತಿರಲೆನ್ನ ಗೃಹಜನರ ||
ಪಾಲನೆಯ ಸಾಧನವು ಪೋದುದು |
ಕಾಲಗತಿಯು ವಿಚಿತ್ರಮೆನುತ ಕ- |
ಪೋಲದೊಳ್ ಕೈಯಿಟ್ಟು ಶೋಕಂಗೆಯ್ದನಿರ್ಮೋಹಿ || ೭ ||
ಇದನರಿತು ವಿದ್ಯಾರ್ಥಿವರ್ಗವೆ |
ಸದಮಲರೆ ಶಿಕ್ಷಕರೆ ಪ್ರಜೆಗಳೆ |
ವಿಧವಿಧದ ವ್ಯವಸಾಯಪಟುಗಳೆ ಬಂಧುಭಗಿನಿಯರೆ ||
ಮದವನುಳಿದಾಲಸಿಗರಾಗದೆ |
ವಧಕನಂದದಿ ಕ್ರೂರರೆನಿಸದೆ |
ಸದಯಹೃದಯಂದಾಳ್ದು ನಡೆವುದು ಭೂತದಯೆಯಿಂದ || ೮ ||
ಏಕಮತದಿಂ ನಡೆಯೆ ಪಕ್ಷಿಗ- |
ಳೇಕಕಾಲಕಸಾಧ್ಯವಾಗಿಹ |
ಶೋಕಸಾಗರ ದಾಂಟಿದುವು ಬಲಹೀನರಾಗಲೊಡಂ ||
ಐಕಮತ್ಯಂದಾಳ್ದು ನಡೆಯೆ ಮ- |
ಹಾಕಠಿಣಕಾರ್ಯಂಗಳಂ ತ- |
ಳ್ಪೇಕವುಗಳಂ ಸಹಜದಿಂದಲೆ ಗೆಯ್ಯಲಾರ್ಪರು ಕೇಳ್ || ೯ ||
ಪರರೊಡನೆ ತಾ ಸರಲತನದಿಂ |
ಪರಮಪ್ರೇಮದಿ ನಡೆಯಲು ದಯಾ |
ಪರನು ಭೂತಂಗಳಲಿ ತಾನಾಗಿರ್ದೊಡಾತಂಗೆ |
ಪರರು ಪ್ರೀತಿಸದಿರ್ಪರೇ ಮೇಣ್ |
ಪರಗತಿಯು ಲಭಿಸದೆ ಮಹಾಪ್ರಭು |
ಪರಮಕರುಣಾಪಾಂಗನೊಲಿಯನೆ ಬಿಡದೆ ಬಲಭೀಮಂ || ೧೦ ||

ಶಿಕ್ಷಕ-ಶಿಕ್ಷಣಾಲಯ
ಧಾರವಾಡ.
ತಾ|| ೧೬-೯-೧೯೧೫.

ಆಜ್ಞಾಧಾರಕ ಶಿಷ್ಯ
ಭೀಮೋಜಿ ಜೀವಾಜಿ ಹುಲಿಕವಿ,
೨ ನೆಯ ವರ್ಷದ ವಿದ್ಯಾರ್ಥಿ.

ಪತ್ರವ್ಯವಹಾರ.

ಶ್ರೀಯುತ ಕನ್ನಡ ಶಾಲಾ ಪತ್ರಿಕೆಯ ಸಂಪಾದಕ, ಧಾರವಾಡ ಇವರ ಸನ್ನಿಧಿಗೆ:—

ಸಾ. ನ. ವಿನಂತಿ ಕೆಳಗೆ ಬರೆದ ನಾಲ್ಕು ಮಾತುಗಳನ್ನು ಅವುಗಳ ಮಹತ್ವವನ್ನು ಲಕ್ಷಿಸಿ, ತಮ್ಮ ವಿದ್ವನ್ಮಾನ್ಯವಾದ ಪತ್ರಿಕೆಯ ಇದೇ ತಿಂಗಳ ಸಂಚಿಕೆಯಲ್ಲಿ ಮುದ್ರಿಸಿ ಪ್ರಸಿದ್ಧಿಸಬೇಕೆಂದು ಬೇಡಿಕೊಳ್ಳುತ್ತೇನೆ:—

ನಡೆದ ತಿಂಗಳ ೯ನೇ ತಾರೀಖು ಮಂಗಳವಾರ ದಿವಸ ಇಲ್ಲಿಯ ಹೆಣ್ಣು ಮಕ್ಕಳ ಶಾಲೆಯಲ್ಲಿ ಒಂದು ಮಂಗಲಸೂಚಕವಾದ ಸಂಗತಿಯು ವರ್ತಿಸಿತು. ಸಿಂದಗಿಯಂಥ ಗ್ರಾಮದಲ್ಲಿ ಸ್ತ್ರೀಸಮ್ಮೇಲನವೆಂದರೆ, ಅದು ಇಲ್ಲಿಯ ಸ್ತ್ರೀಸಮಾಜಕ್ಕೆ ಒಳ್ಳೇ ಭೂಷಣಾಸ್ಪದವಾದದ್ದೆಂತಲೂ, ನಮ್ಮ ಜಿಲ್ಲೆಯಲ್ಲಿ ಸ್ತ್ರೀಶಿಕ್ಷಣದ ಸಂಬಂಧವಾಗಿ ಇದೊಂದು ಅಪೂರ್ವವಾದ ಸಂಗತಿಯೆಂತಲೂ ಹೇಳಲು ಅಡ್ಡಿ ಇಲ್ಲ. ಈ ಸಮ್ಮೇಲನವು ಕೇವಲ ಸ್ತ್ರೀಯರದೇ ಆಗಿತ್ತು; ಅದಕ್ಕೆ ಪುರುಷವರ್ಗದ ಪ್ರತ್ಯಕ್ಷ ಸಂಪರ್ಕವೇನೂ ಇರಲಿಲ್ಲ. ಇಲ್ಲಿಯ ಕನ್ನಡ ಶಾಲೆಗಳ ಪರೀಕ್ಷೆಗಾಗಿ ಬಂದ ಮೆ. ಜನೆಯ ಅಸಿ. ಡೆ. ಎ. ಇನ್‌ಸ್ಪೆಕ್ಟರ ಸಾಹೇಬರವರು ಈ ಸಂಬಂಧವಾಗಿ ತಮ್ಮ ಅಪೇಕ್ಷೆಯನ್ನು ವ್ಯಕ್ತ ಪಡಿಸಲು, ಮತ್ತು ಅವರ ಸೂಚನೆಯ ಮೇರೆಗೆ, ಇಲ್ಲಿಯ ಶಾಲಾಧ್ಯಾಪಕರು ಪ್ರಯತ್ನ ಮಾಡುತ್ತಿರಲು, ಇಲ್ಲಿಯ ಸುಶಿಕ್ಷಿತ ಸ್ತ್ರೀವರ್ಗವು ಅವರ ವಿನಂತಿಯನ್ನು ಮನ್ನಿಸಿದ್ದರಿಂದ ಅವರ ಯತ್ನವು ಸಫಲವಾಗಿ ಈ ಅಪೂರ್ವವಾದ ಸಮಾರಂಭವು ನೆರವೇರಿಸಲ್ಪಟ್ಟಿತು.

ಈ ಸಮಾರಂಭಕ್ಕಾಗಿ ಶಾಲಾಗೃಹವು ತೋರಣಪತಾಕಾದಿಗಳಿಂದ ಶೃಂಗರಿಸಲ್ಪಟ್ಟಿತ್ತು; ಗೊತ್ತು ಮಾಡಿಕೊಟ್ಟಂತೆ ಸಂಜೆಯ ನಾಲ್ಕು ಗಂಟೆಯ ಸುಮಾರಕ್ಕೆ ಎಲ್ಲ ಸುಶಿಕ್ಷಿತ ಸ್ತ್ರೀ ವರ್ಗವು ಶಾಲೆಯಲ್ಲಿ ಕೂಡಿತು. ಅವರಲ್ಲಿ ತಾಲೂಕಿನ ಶ್ರೇಷ್ಠಾಧಿಕಾರಿಗಳೇ ಮೊದಲ್ಗೊಂಡು ಎಲ್ಲ ಸರಕಾರೀ ನೌಕರರ ಮನೆಯ ಹೆಣ್ಣು ಮಕ್ಕಳೂ, ಊರೊಳಗಿನ

ಶೆಟ್ಟಿ ಸಾವುಕಾರರ ಮನೆಯ ಹೆಣ್ಣು ಮಕ್ಕಳೂ ಕೂಡಿ ಸುಮಾರು ೬೫ ರವರೆಗೆ ಸ್ತ್ರೀ ಸಮಾಜವು ಶೋಭಿಸುತ್ತಿತ್ತು.

ಸಮಾರಂಭದ ಕಾರ್ಯಕ್ರಮವನ್ನು ಗೊತ್ತು ಮಾಡಿಕೊಟ್ಟ ಮೇರೆಗೆ ಅಧ್ಯಕ್ಷರನ್ನು ನೇಮಿಸುವದು, ಅವರು ಬರೆದು ತಂದ ಭಾಷಣ ವನ್ನು ಓದುವದು, ಬಾಲಿಕೆಯರ ಸಂಭಾಷಣಗಳೂ ಹಾಡುಗಳೂ, ಹಾಗೆಯೇ ಕೆಲವು ಸಭ್ಯಸ್ತ್ರೀಯರ ಹಾಡುಗಳು, ಇವೆಲ್ಲ ಯಥಾ ಪ್ರಕಾರವಾಗಿ ನಡೆದವು. ತರುವಾಯ ಒಬ್ಬರು ಸ್ತ್ರೀಶಿಕ್ಷಣೋತ್ತೇಜ ನಪರವಾಗಿ ಒಂದೆರಡು ಮಾತುಗಳನ್ನು ಹೇಳಿದರು. ಇವೆಲ್ಲ ಸಂಗತಿ ಗಳು ನಡೆಯಲಿಕ್ಕೆ ಕೆಲವು ಸ್ತ್ರೀಯರ ಸಂಗಡ ಇದ್ದ ಸಣ್ಣ ಸಣ್ಣ ಅರ್ಭ ಕಗಳಿಂದ ವಿಘ್ನ ತಟ್ಟುವದೋ ಏನೋ ಎಂಬ ಅನುಮಾನವು ಬರು ತ್ತಿತ್ತು; ಆದರೆ ಹಾಗೇನು ಆಗದೆ ಆ ಅರ್ಭಕಗಳ ಮಂಜುಳವಾದ ಆಲಾಪಗಳಿಂದ ಸಮಾರಂಭಕ್ಕೆ ಒಂದು ಪ್ರಕಾರದ ವಿಶೇಷ ಶೋಭೆ ಯುಂಟಾಗಿತ್ತು.

ಕೂಡಿದ ಎಲ್ಲ ಸುವಾಸಿನಿಯರಿಗೆ ಕುಂಕುಮಾದಿ ಸೌಭಾಗ್ಯ ದ್ರವ್ಯಗಳೂ, ಪರಿಮಳ ದ್ರವ್ಯಗಳೂ, ತಾಂಬೂಲಾದಿಗಳೂ ಮುಡಿಯ ಲಿಕ್ಕೆ ಪೂಮಾಲೆಗಳೂ ಕೊಡಲ್ಪಟ್ಟು, ಎಲ್ಲರಿಗೆ ಮಿಠಾಯಿಯನ್ನು ಹಂಚಿ ದನಂತರ ಸಣ್ಣ ಮಕ್ಕಳ ಕಲಕಲಾಟವು ಶಾಂತವಾಗಿ ಸಮಾರಂಭವು ಮುಗಿದು ಎಲ್ಲರು ತಮ್ಮ ತಮ್ಮ ಮನೆಗೆ ಹೋದರು.

ಸಿಂದಗಿ
ತಾ|| ೧೦-೨-೧೯೧೪

ತಮ್ಮ ಸೇವಕ,
ಒಬ್ಬ ಸ್ತ್ರೀಶಿಕ್ಷಣಾಭಿಮಾನಿ ಗ್ರಾಮಸ್ಥ.

ಪತ್ರಗಳ ಸಾರಾಂಶ

ಮುದ್ದೇಬಿಹಾಳ ಉರ್ದುಶಾಲೆಗೆ ಅಲ್ಲಿಯ ಕನ್ನಡ ಶಾಲೆಯ ಇಮಾ ರತಿಯನ್ನು ಕೊಟ್ಟದ್ದರಿಂದ ಈ ಇಮಾರತಿಯಲ್ಲಿ ಪ್ರವೇಶ ಸಮಾರಂಭವು ಸ್ವಲ್ಪ ದಿವಸಗಳ ಹಿಂದೆ ನಡೆಯಿತು. ಆಗ ಅಲ್ಲಿಯ ಮಿ. ಮಕ್ತುಮ ಸಾಹೇಬ ಹಾಜೀಶೇಟಭಾಯಿ ಮಕ್ತೇದಾರ ಮತ್ತು ಉರ್ದು ಸ್ಕೂಲ ಕಮಿಟಿಯ ಮೆಂಬರ ಇವರು ಸಾಲೆಗೋಸ್ಕರ ೧೧ ರೂಪಾಯಿ ಬೆಲೆ

ಯುಳ ಒಂದು ದೊಡ್ಡ ಗಡಿಯಾರವನ್ನು ಉಚಿತವಾಗಿ ಕೊಟ್ಟರೆಂದು ಸದರೀ ಶಾಲೆಯ ಹೆಡ್‌ಮಾಸ್ತರರು ಬರೆಯುತ್ತಾರೆ. ಇದೇ ಊರ ಹೊಸ ಕನ್ನಡ ಶಾಲೆಯ ಪ್ರವೇಶ ಸಮಾರಂಭವೂ ಬಹಳ ಉತ್ಸಾಹದಿಂದ ನೆರವೇರಿಸಲ್ಪಟ್ಟಿತೆಂತಲೂ ಸದರೀ ಶಾಲೆಯ ಶಿಕ್ಷಕರಾದ ಮಿ. ಕೊರಬು ಇವರು ಮಾಡಿದ ನಕಾಶಗಳು, ಮಾಡೆಲಗಳು ಮುಂತಾದವುಗಳನ್ನು ನೋಡಿ ಸಭಿಕರು ಬಹಳ ಸಂತೋಷಪಟ್ಟರೆಂತಲೂ ವಿದ್ಯಾರ್ಥಿಗಳ ಗ್ರಂಥಾಲಯದ ವ್ಯವಸ್ಥಾಪಕರು ಬರೆಯುತ್ತಾರೆ.

ಕರ್ಜಗಿ ತಾಲೂಕ ಹಂದಿಗನೂರ ಶಾಲೆಯಲ್ಲಿ ಕಳೆದ ಎಪ್ರಿಲ ತಿಂಗಳಲ್ಲಿ ಅಲ್ಲಿಯ ದೇಸಾಯಿರಾದ ಶ್ರೀಮಂತ ಸಣ್ಣ ಮುರಿಗೆಪ್ಪನವರು ಅಧ್ಯಕ್ಷರಾಗಿರಲು, ಬಾಲಕಿಯರ ಸಮ್ಮೇಲನವು ಬಹಳ ಸಮಾರಂಭದಿಂದ ನೆರವೇರಿಸಲ್ಪಟ್ಟಿತೆಂತಲೂ ಆ ಸಮಯದಲ್ಲಿ ಅಧ್ಯಕ್ಷರು ೫ ರುಪಾಯಗಳನ್ನೂ ಅವರ ಪ್ರಯತ್ನದಿಂದ ಉಳಿದ ಸಭಿಕರು ೧೭|| ರೂಪಾಯಿಗಳನ್ನೂ ಸಾಲೆಗೋಸ್ಕರ ಗಡಿಯಾರ, ಉಪಕರಣಗಳು ಮುಂತಾದವುಗಳ ಬಗ್ಗೆ ಕೊಟ್ಟು, ಸ್ತುತ್ಯವಾದ ವಿದ್ಯಾಭಿಮಾನವನ್ನು ಪ್ರಕಟಿಸಿದರೆಂದು ಆ ಸಾಲೆಯ ಪಂಚರೊಬ್ಬರು ಬರೆಯುತ್ತಾರೆ.

ವಿದ್ಯಾಖಾತೆಯ ನೋಟೀಸು.

೧೯೧೪ನೆಯ ಇಸವಿಯ ನವ್ಹಂಬರ ತಿಂಗಳ ಶಾಲಾಪತ್ರಕದ ೩೦'೩೩ ನೆಯ ಪುಟಗಳಲ್ಲಿ ಪ್ರಸಿದ್ಧ ಮಾಡಿದ ವಿದ್ಯಾಖಾತೆಯ ನೋಟೀಸಿನಲ್ಲಿ ಅ. ನ. ೪ನೆಯ "ಬಹುಮೂಲ ಹಿಕಮತ" ಎಂಬ ಪುಸ್ತಕದ ಕ್ರಯವು ೧೦ ಆಣೆ ಇದ್ದದ್ದನ್ನು ಕಡಿಮೆ, ಅಂದರೆ ೮ ಆಣೆ ಮಾಡಿರುತ್ತದೆ.

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿಲ್ಲೆ ಧಾರವಾಡ.

ಶಾಲಾಪತ್ರ

ಪುಸ್ತಕ ೫೧. | ನವೆಂಬರ ೧೯೧೫. | ಸಂಚಿಕೆ ೧೧

ಸ್ಫುಟವಿಷಯಗಳು.

೧. ಕಣ್ಣೀರು.

ಒಬ್ಬ ಫ್ರೆಂಚ ವೈಜ್ಞಾನಿಕನು ಕಣ್ಣೀರಿನ ಸಂಬಂಧದಿಂದ ಕೆಲವು ಅದ್ಭುತವಾದ ಸಂಗತಿಗಳನ್ನು ಶೋಧಿಸಿರುವನು. ಅವನು ಹೇಳಿರುವದೇನಂದರೆ:— "ಮನುಷ್ಯನಿಗೆ ಯಾವದಾದರೂ ಒಂದು ದುಃಖದಾಯಕವಾದ ಪ್ರಸಂಗವು ಒದಗಿತೆಂದರೆ ಆಗ ಅವನ ತಲೆಯೊಳಗಿನ ರಕ್ತಪ್ರವಾಹದ ಕ್ರಮವು ಒಮ್ಮಿಂದೊಮ್ಮೆ ವಿಕಾರ ಹೊಂದುವದು; ಹಾಗು ಅದರಿಂದ ಅವನ ಮಿದುಳು ವಿಚಾರ ಶಕ್ತಿಯನ್ನು ಕಳೆಕೊಳ್ಳಲು, ಮನಸ್ಸು ಜಡವೂ ಉತ್ಸಾಹಹೀನವೂ ಆಗುವದು, ಮತ್ತು ಕಣ್ಣುಗಳಲ್ಲಿ ನೀರು ಸುರಿಯಹತ್ತುವದು. ಕಣ್ಣೀರೂ ರಕ್ತವೂ ಒಂದೇ ಪದಾರ್ಥವಾಗಿರುವವು. ರಕ್ತವು ಅಶ್ರುಗ್ರಂಥಿಗಳಲ್ಲಿ ಸೇರಿದೊಡನೆ ತನ್ನ ಕೆಂಪು ಬಣ್ಣವನ್ನು ಕಳೆದುಕೊಂಡು ನೀರಿನಂತಾಗುವದು. ಔಷಧಗಳೂ ಮಾದಕ ಪದಾರ್ಥಗಳೂ ಮನುಷ್ಯನ ಚೇತನಾಶಕ್ತಿಯನ್ನು ಕಳೆಯುತ್ತಿರುವಂತೆ ಕಣ್ಣೀರು ಮನಸ್ಸಿನೊಳಗಿನ ಚಿಂತಾಭಾರವನ್ನು ಕಳೆಯುವದು. ಬಾಲಕರ ಹಾಗು ಸ್ತ್ರೀಯರ ಸ್ನಾಯು ಸಂಸ್ಥೆಗಳು ಬಹಳ ಕೋಮಲವಾಗಿರುವದರಿಂದ ಮೇಲಿಂದಮೇಲೆ ಅಳುವದು ಅವರಿಗೆ ಒಂದು ರೀತಿಯಿಂದ ಹಿತಕರವೇ ಸರಿ. ಈ ರೀತಿಯಾಗಿ ಆಗಾಗ ಕಣ್ಣೀರಿಟ್ಟು ಅಳುವದರಿಂದ ಅವರ ಮನಸ್ಸಿನೊಳಗಿನ ಚಿಂತಾಭಾರವು ಕಡಿಮೆಯಾಗಿ ಮಿದುಳು ಯೋಗ್ಯ ಸ್ಥಿತಿಯಲ್ಲಿ ಇರಲು ಅನುಕೂಲವಾಗುವದು.

---

೨. ನೀರಿನ ಮೇಲಿನ ಬುರುಗು ಬೆಳ್ಳಗೆ ಯಾಕೆ?

ಜಲಾಶಯದ ಬಣ್ಣವು ಬೇಕಾದಷ್ಟು ನೀಲವಾಗಿದ್ದರೂ ಅದರ ಮೇಲಿನ ಬುರುಗು ಯಾವಾಗಲೂ ಬೆಳ್ಳಗೇ ಇರುವದು. ಘನಕೃಷ್ಣವರ್ಣದಿಂದ ತೋರುವ ಕಾಳೀನದಿಯ ನೀರಿನ ಮೇಲಿನ ಬುರುಗು ಹಾಲಿನ ನೊರೆಯಂತೆ ಬಿಳಿದಾಗಿರುವದು. ಇದಕ್ಕೆ ಕಾರಣವೇನಂದರೆ, ಪದಾರ್ಥಗಳ ಮೇಲೆ ಬಿದ್ದ ಪ್ರಕಾಶದ ಕಿರಣಗಳು ಪರಾವರ್ತನ ಹೊಂದಿ ನಮ್ಮ ಕಣ್ಣೊಳಗೆ ಬಂದು ಸೇರಿದಾಗ ಅವು ನಮಗೆ ಕಾಣಿಸುವವು. ಅದರಂತೆ ತನ್ನ

ಮೇಲೆ ಬಿದ್ದ ಯಾವತ್ತು ಪ್ರಕಾಶದ ಕಿರಣಗಳನ್ನು ತಿರುಗಿ ಕಳುಹಿಸುವಂಥ ಪದಾರ್ಥವು ಅಷ್ಟ ಬೆಳ್ಳಗಾಗಿಯೂ ತನ್ನ ಮೇಲೆ ಬೀಳುವ ಕಿರಣಗಳನ್ನೆಲ್ಲ ನುಂಗಿ ಬಿಡುವ ಪದಾರ್ಥವು ಕರಿದಾಗಿಯೂ ತೋರುವವು. ನೀರಿನ ಮೇಲಿನ ಬುರುಗು ಬಹುಶಃ ಎಲ್ಲ ಕಿರಣಗಳನ್ನು ಪರಾವರ್ತನಗೊಳಿಸುವದರಿಂದ ಅದು ಬಿಳಿದಾಗಿ ತೋರುವದು.

---

೩. ಭೀತಿಯು.

ಜಗತ್ತಿನಲ್ಲಿ ಒಬ್ಬರು ಇನ್ನೊಬ್ಬರಿಗೆ ಅಂಜೀ ಅಂಜುವರು. ಹುಲಿಯನ್ನು ನೋಡಿ ಮನುಷ್ಯನು ಅಂಜುವಂತೆ ಮನುಷ್ಯನನ್ನು ನೋಡಿ ಹುಲಿಯೂ ಅಂಜುವದು. ಇದರಿಂದ ಜಗತ್ತಿನ ಸ್ವಾಸ್ಥ್ಯರಕ್ಷಣೆಗೆ ಬಹು ಮಟ್ಟಿಗೆ ಅನುಕೂಲವಾಗಿರುವದು ಸರಿ. ಆದರೆ ಕೇವಲ ಕ್ಷುಲ್ಲಕ ಪ್ರಾಣಿಗಳನ್ನೂ ಇತರ ವಸ್ತುಗಳನ್ನೂ ನೋಡಿ ಹಲವರು ನಿಷ್ಕಾರಣ ಭೀತಿಗೊಳಗಾಗುವರು. ಇದೊಂದು ವಿಚಿತ್ರವೇ ಸರಿ. ಕೆಲವರು ಕಪ್ಪೆಯನ್ನು ನೋಡಿದೊಡನೆಯೇ ಅಂಜಿ ಚಿಟ್ಟನೆ ಚೀರುವರು; ಮತ್ತೆ ಕೆಲವರು ಮಳೆಯ ಹುಳವನ್ನು ನೋಡಿ ಬೆಚ್ಚಿ ಬೀಳುವರು. ನಿಜವಾಗಿ ನೋಡಿದರೆ ಜನರು ತಮಗೊದಗ ಬಹುದಾದ ಅಪಾಯದ ಕಲ್ಪನೆಯು ಮನಸ್ಸಿನಲ್ಲಿ ಬಂದರೆ ಮಾತ್ರ ಅಂಜತಕ್ಕದ್ದು. ಉದಾಹರಣಾರ್ಥವಾಗಿ ಯಾವದಾದರೊಂದು ಕ್ರೂರ ಇಲ್ಲವೆ ವಿಷಯುಕ್ತ ಪ್ರಾಣಿಯನ್ನು ನೋಡಿದರೆ ಅದು ತಮ್ಮನ್ನು ತಿನ್ನಬಹುದು, ಕಡಿಯಬಹುದು ಮುಂತಾದ ವಿಚಾರಗಳನ್ನು ಮನಸ್ಸಿನಲ್ಲಿ ತಂದುಕೊಂಡು ಅವರು ಭೀತಿಗೊಳಗಾಗಬೇಕು. ಹೀಗಿದ್ದರೂ ಕಪ್ಪೆಯನ್ನು ಇಲ್ಲವೆ ಮಳೆಯ ಹುಳವನ್ನು ನೋಡಿ ಮನುಷ್ಯರು ಅಂಜಲು ಕಾರಣವೇನು ? ಇದೊಂದು ವಿಚಾರಣೀಯವಾದ ಪ್ರಶ್ನವೇ ಸರಿ. ಇದಲ್ಲದೆ ಈ ವಿಷಯದಲ್ಲಿ ಇನ್ನೂ ಎಷ್ಟೋ ಚಮತ್ಕಾರವುಳ್ಳ ಉದಾಹರಣೆಗಳು ಲೋಕದಲ್ಲಿ ಕಂಡು ಬರುವವು. ಸುಪ್ರಸಿದ್ಧ ಡಾಕ್ಟರನಾಗಿದ್ದ "ಸೀಟ್ ಡೀ ಎಸ್ಪೋಲೋ" ಎಂಬವನಿಗೆ ಪನ್ನೀರಿನ ವಾಸನೆಯು ಎಷ್ಟು ಮಾತ್ರವೂ ಸಹನವಾಗುತ್ತಿದ್ದಿಲ್ಲ. ಯಾರಾದರೂ ಅರಿಯದೆ ಅವನ ಮುಂದೆ ಪನ್ನೀರನ್ನು ತಂದರೆ ಅವನು ಒಮ್ಮಿಂದೊಮ್ಮೆ ಎಚ್ಚರದಪ್ಪಿ ಬೀಳುತ್ತಿದ್ದನು. "ಮೊನೇಟನ" ಎಂಬವನು ಸಫರಚಂದ ಹಣ್ಣನ್ನು ಅಥವಾ ಶೇಬು ಹಣ್ಣನ್ನು ನೋಡಿದ ಕೂಡಲೆ ಅಂಜಿ ಓಡಿ ಹೋಗುವ ಎಷ್ಟೋ ಜನರನ್ನು ನೋಡಿರುವೆನೆಂದು ಹೇಳಿರುವನು. ಸೀಝರ್ ದಿ ಆಲ್ಬರ್ಟನೆಂಬ ಗೃಹಸ್ಥನು ಊಟಕ್ಕೆ ಕೂತಾಗ ಹಂದಿಯ ಮಾಂಸವನ್ನು ನೋಡಿದ ಕೂಡಲೆ ಎದ್ದು ಓಡಿ ಹೋಗುತ್ತಿದ್ದನು. ಒಬ್ಬ ಶಿಪಾಯಿಯು ಯಾರಾದರು ಅರಿವೆಯನ್ನು ಹರಿವದನ್ನು ನೋಡಿದ ಕೂಡಲೆ ಎಚರದಪ್ಪಿ ಬೀಳುತ್ತಿದ್ದನು. ಒಬ್ಬ ಸ್ತ್ರೀಯಳು ಮೆತ್ತಗಿನ ಅರಿವೆಯನ್ನು ಕೈಯಲ್ಲಿ ಹಿಡಿದ ಕೂಡಲೆ ಅಂಜಿ ನಡುಗಹತ್ತುತ್ತಿದ್ದಳು. ಟೋಮಸದೇವೀ ಎಂಬ ಗೃಹಸ್ಥನು ಮಳೆಯ ಹನಿಗಳು ಆಕಾ

ತಪ್ಪಿ ಮೈಮೇಲೆ ಬಿದ್ದ ಕೂಡಲೆ ಜೀವ ಹೋದಂತಾಗಿ ಬೀಳುತ್ತಿದ್ದನು. ಇರಾ ಸಮ್ಸನೆಂಬ ಗೃಹಸ್ಥನಿಗೆ ಮೀನದ ವಾಸನೆಯು ಬಂದ ಕೂಡಲೆ ಒಮ್ಮಿಂದೊಮ್ಮೆ ಜ್ವರವು ಬರುತ್ತಿತ್ತು. ಫ್ರಾನ್ಸದ ಅರಸನಾದ ಮೂರನೇ ಹೆನರಿಯು ಬೆಕ್ಕನ್ನು ನೋಡಿದ ಕೂಡಲೆ ಅಂಜುತ್ತಿದ್ದನು. ಹಾಗೂ ಮಾರ್ಶಲ್ ಡಿ. ಆಲ್ಬರ್ಟನು ಹಂದಿಯನ್ನು ನೋಡಿ ಭಯಭೀತನಾಗುತ್ತಿದ್ದನು. ಮನುಷ್ಯನಂಥ ಬುದ್ಧಿಶಾಲಿಯಾದ ಪ್ರಾಣಿಯು ಈ ರೀತಿಯಾಗಿ ನಿರುಪದ್ರವಿಗಳಾದ ಪ್ರಾಣಿಗಳನ್ನೂ ಇತರ ವಸ್ತುಗಳನ್ನೂ ನೋಡಿ ನಿಷ್ಕಾರಣ ಭೀತಿಗೊಳ್ಳುವದನ್ನು ನೋಡಿ ಆಶ್ಚರ್ಯವೆನಿಸುವದು.

---

೪. ಮಾನಸಿಕ ಶ್ರಮವು.

ಮಾನಸಿಕ ಶ್ರಮವನ್ನು ಮಾಡತಕ್ಕ ಪ್ರತಿಯೊಬ್ಬ ಮನುಷ್ಯನು ವಿಶ್ರಾಂತಿಯ ವೇಳೆಯಲ್ಲಿ ಯಾವದಾದರೂ ಒಂದು ತರದ ಶಾರೀರಿಕ ಶ್ರಮವನ್ನು ಮಾಡಲೇ ಬೇಕು. ಜರ್ಮನಿಯ ಬಾದಶಹನ ಕುಟುಂಬದಲ್ಲಿ ಪ್ರತಿಯೊಬ್ಬ ರಾಜಪುತ್ರನು ಯಾವದಾದರೂ ಒಂದು ತರದ ಶಾರೀರಿಕ ಶ್ರಮದ ಕೆಲಸವನ್ನು ಮಾಡಲೇ ಬೇಕೆಂದು ನಿರ್ಬಂಧವಿರುವದು. ಅವರಲ್ಲಿ ಕೆಲವರು ಛಾಪಿಸುವ ಕೆಲಸವನ್ನೂ ಮತ್ತೆ ಕೆಲವರು ಪುಸ್ತಕದ ಬಾಯಿಂಡಿಂಗ ಮಾಡುವ ಕೆಲಸವನ್ನೂ ಮಾಡುವರು. ಆದರೆ ಅವರಲ್ಲಿ ಕಮ್ಮಾರಿಕೆಯ ಕೆಲಸವನ್ನು ಮಾಡುವವರೇ ಬಹಳ. ಐವರಲ್ಲಿ ನಾಲ್ಕು ಜನರು ಕಮ್ಮಾರಿಕೆಯನ್ನು ಮಾಡುವರು. ಕಟ್ಟಿಗೆಯನ್ನು ಕೊರೆಯುವದು, ಘನವನ್ನು ಎತ್ತಿ ಬಡಿಯುವದು ಮುಂತಾದ ಕೆಲಸಗಳಲ್ಲಿ ಶರೀರದೊಳಗಿನ ಬಹುಶಃ ಯಾವತ್ತು ಸ್ನಾಯುಗಳಿಗೆ ವ್ಯಾಯಾಮವು ದೊರೆಯುವದು; ಹಾಗು ಅದರಿಂದ ಮನಸ್ಸಿಗೆ ಒಂದು ತರದ ವಿಶ್ರಾಂತಿಯು ದೊರೆಯುವದು.

ಸಣ್ಣಪುಟ್ಟ ಮೋಹವಿಕಾರಗಳು, ಕ್ಷುಬ್ಧಮನೋವೃತ್ತಿ, ಆಲಸ್ಯ, ಔದಾಸೀನ್ಯ ಮುಂತಾದ ಮನೋವಿಕಾರಗಳನ್ನು ಕಳೆದುಕೊಳ್ಳಲು, ಯಾವದಾದರೂ ಒಂದು ಶಾರೀರಿಕಶ್ರಮದ ಕೆಲಸವನ್ನು ಆರಂಭಿಸುವದು ಉತ್ತಮವಾದ ಉಪಾಯವು.

'ಆಲಿವ್ಹ' ಎಂಬ ಫಲವೃಕ್ಷವು.

ಈ ಗಿಡದ ಸಾಗುವಳಿಯು ಪ್ರಾಯಶಃ ಯುರೋಪಖಂಡದ ದಕ್ಷಿಣಕ್ಕೆ ಭೂಮಧ್ಯ ಸಮುದ್ರದ ದಂಡೆಯ ಪ್ರದೇಶದಲ್ಲಿ ಮಾಡಲ್ಪಡುವದು. ಇದರ ಎಲೆಗಳು ಉದ್ದಕ್ಕೆ ಕತ್ತಿಯ ಅಲಗಿನಂತೆ ಇದ್ದು ಹಣ್ಣುಗಳು ಸಾಧಾರಣಮಟ್ಟಿಗೆ ಬದಾಮುಗಳನ್ನು ಹೋಲುವವು. ಇದರ ಕಾಯಿಗಳಿಂದ ಹಲವು ತರದ ಉಪ್ಪಿನಕಾಯಿಗಳನ್ನು ಮಾಡುವರು. ಹಾಗು

ಎಣ್ಣೆಯನ್ನು ತೆಗೆಯುವರು. ಮೇಲೆ ಹೇಳಿದ ಪ್ರದೇಶಗಳಲ್ಲಿ ಈ ಗಿಡದ ಸಾಗುವಳಿಯು ಒಳ್ಳೇ ವಿಲಕ್ಷಣ ಪ್ರಮಾಣದಿಂದ ಆಗುವದು; ಎಣ್ಣೆಯೂ ಬಹು ದೊಡ್ಡ ಪ್ರಮಾಣದಿಂದ ಹೊರಡುವದು. ಈ ಸಂಬಂಧದಿಂದ ನಿಶ್ಚಿತವಾದ ಅಂಕೆಗಳು ಉಪಲಬ್ಧವಾಗಿಲ್ಲದಿದ್ದರೂ, ಪೂರ್ವಗೋಲಾರ್ಧದಲ್ಲಿ ೧ ಕೋಟಿ ೧೦ ಲಕ್ಷ ಎಕರೆ ಭೂಮಿಯಲ್ಲಿ ಈ ಗಿಡದ ಸಾಗುವಳಿಯು ಆಗುವದು. ಮತ್ತು ಅಲ್ಲಿ ಪ್ರತಿವರ್ಷ ೨೪ ಕೋಟಿ ಗ್ಯಾಲನ್ ಎಣ್ಣೆಯು ಹೊರಡುವದು.

ಈ ಗಿಡದ ಸಾಗುವಳಿಯಾಗುವ ಕ್ಷೇತ್ರದ ದೃಷ್ಟಿಯಿಂದಲೂ, ಎಣ್ಣೆಯಿಂದಾಗುವ ಉತ್ಪನ್ನದ ದೃಷ್ಟಿಯಿಂದಲೂ, ಎಲ್ಲ ದೇಶಗಳಲ್ಲಿ ಸ್ಪೇನವು ಅಗ್ರಸ್ಥಾನವನ್ನು ಪಡೆಯುವದು. ಸ್ಪೇನದ ತರುವಾಯ ಇಟಾಲಿಯಲ್ಲಿ ಈ ಗಿಡದ ಸಾಗುವಳಿಯಾಗುವದು. ಇಟಾಲಿಯ ತರುವಾಯ ಏಶಿಯಾ ಮೈನರ ದೇಶದ ನಂಬರು ಬರುವದು. ಈ ಮೂರು ದೇಶಗಳಲ್ಲದೆ ಗ್ರೀಸ, ಪೋರ್ತುಗಾಲ, ಟ್ಯೂನಿಸ, ಅಲ್ಜೀರಿಯಾ ಫ್ರಾನ್ಸ ಈ ದೇಶಗಳಲ್ಲಿಯೂ ಈ ಗಿಡದ ಸಾಗುವಳಿಯು ಹೆಚ್ಚು ಕಡಿಮೆ ಪ್ರಮಾಣದಿಂದ ಆಗುತ್ತಿರುವದು.

ಏಶಿಯಾಖಂಡದ ಪಶ್ಚಿಮ ಭಾಗದಲ್ಲಿಯೂ, ಯುರೋಪದ ದಕ್ಷಿಣಭಾಗದಲ್ಲಿಯೂ ಬಹು ಪ್ರಾಚೀನ ಕಾಲದಿಂದ ಈ ಗಿಡದ ಸಾಗುವಳಿಯನ್ನು ಮಾಡುತ್ತ ಬಂದಿರುವರು. ಆ ದೇಶಗಳಲ್ಲಿ ದ್ರಾಕ್ಷಿ, ಅಂಜೀರು ಈ ಹಣ್ಣುಗಳಿಗಿದ್ದಷ್ಟೇ ಗೌರವವು ಆಲಿವ್ಹ ಹಣ್ಣಿಗೂ ಇರುವದು. ಆದ ಕಾರಣ ಈ ಗಿಡಗಳ ಎಲ್ಲಕ್ಕೂ ದೊಡ್ಡ ತೋಟವು ಈ ಪ್ರದೇಶಗಳಲ್ಲಿ ಎಲ್ಲಿಯಾದರೂ ಒತ್ತಟ್ಟಿಗೆ ಇರಬಹುದೆಂದು ಯಾರಾದರೂ ಅನುಮಾನ ಮಾಡಬಹುದು. ಆದರೆ ವಸ್ತುಸ್ಥಿತಿಯು ಹಾಗಿಲ್ಲ. ಈ ಪ್ರದೇಶಗಳಲ್ಲಿ ಈ ಗಿಡದ ತೋಟಗಳು ಬಹು ಸಣ್ಣ ಪ್ರಮಾಣದಿಂದ ಇದ್ದು ತೋಟಗಳ ಸಂಖ್ಯೆಯು ಮಾತ್ರ ಬಹುದೊಡ್ಡದಿರುವದು. ಒಬ್ಬ ಮನುಷ್ಯನ ಒಡೆತನಕ್ಕೊಳಗಾದ ಅತಿ ದೊಡ್ಡ ತೋಟವು ಆಮೇರಿಕಾ ಖಂಡದಲ್ಲಿ ಯುನಾಯಿಟೆಡ್ ಸ್ಟೇಟ್ಸ ದೇಶದೊಳಗಿನ ಕ್ಯಾಲಿಫೋರ್ನಿಯಾ ದೇಶದಲ್ಲಿ ಇರುವದು.

ಜಗತ್ತಿನಲ್ಲಿ ಅತಿ ದೊಡ್ಡದಾದ ಈ ಆಲಿವ್ಹ ತೋಟವು ೨ ಸಾವಿರ ಎಕರೆ ಭೂಮಿಯನ್ನು ವ್ಯಾಪಿಸಿರುವದು. ಅದರಲ್ಲಿ ಸುಮಾರು ೧೩ ಲಕ್ಷ

ಗಿಡಗಳು ಇರುವವು. ಇವುಗಳಲ್ಲಿ ೧೪ ಲಕ್ಷ ಗಿಡಗಳಿಗೆ ಕಾಯಿಗಳಾಗಿ ರುವವು. ಇನ್ನೂ ಮುನ್ನೂರು ಎಕರೆ ಭೂಮಿಯಲ್ಲಿ ಈ ಗಿಡಗಳ ಸಾಗು ವಳಿಯು ಮಾಡಲ್ಪಡುತ್ತಿರುವದು. ಆದರಿಂದ ತುಸು ದಿವಸಗಳಲ್ಲಿ ಈ ಗಿಡಗಳ ಸಂಖ್ಯೆಯು ೨ ಲಕ್ಷವಾಗುವದು. ಈ ತೋಟವಲ್ಲಿ ಉತ್ಪನ್ನ ವಾಗುವ ಸರಕನ್ನು ಪರಸ್ಥಳಕ್ಕೆ ಕಳಿಸುವದಕ್ಕಾಗಿ ಉಗೆಬಂಡಿಯ ಒಂದು ಸ್ಟೇಶನು ಮಾಡಲ್ಪಟ್ಟಿರುವದು. ಅದಕ್ಕೆ ಸಿಲಮಾರ ಎಂಬ ಹೆಸರು ಇಡ ಲ್ಪಟ್ಟಿರುವದು. ಈ ಶಬ್ದದ ಅರ್ಥವಾದರೂ 'ವೃಕ್ಷಸಮುದ್ರ'ವೆಂದು ಇರುವದು.

ಏಶಿಯಾ ಯುರೋಪ ಖಂಡಗಳಲ್ಲಿ ಈ ಗಿಡದ ಸಾಗುವಳಿಯು ಚನ್ನಾಗಿ ಆಗುವದಿಲ್ಲ; ಮತ್ತು ಈಗಿದ್ದಷ್ಟಕ್ಕಿಂತ ಹೆಚ್ಚು ಗಿಡಗಳನ್ನು ಹಚ್ಚಿ ಬೆಳೆಯಿಸುವ ಅವಶ್ಯಕತೆಯು ಆ ಜನರಿಗೆ ತೋರುವದಿಲ್ಲ. ಆದರೆ ಕ್ಯಾಲೀಫೋರ್ನಿಯಾ ಪ್ರಾಂತದಲ್ಲಿ ಈ ಗಿಡದ ಸಾಗುವಳಿಯ ಸಂಬಂಧ ದಿಂದ ಅಲಕ್ಷವಿಲ್ಲ. ವ್ಯಾಪಾರದ ದೃಷ್ಟಿಯಿಂದ ಬೇರೆ ಹಣ್ಣುಹಂಪಲಗಳ ಗಿಡಗಳನ್ನು ಸರಿಯಾಗಿ ಬೆಳೆಯಿಸುವಂತೆಯೇ ಈ ಗಿಡಗಳನ್ನು ಬೆಳೆಯಿ ಸುವರು. ಗಿಡದ ಎತ್ತರವನ್ನು ನೆಲದಿಂದ ೧೮ ಫೂಟಗಿಂತ ಹೆಚ್ಚು ಎತ್ತರ ವಾಗಗೊಡುವದಿಲ್ಲ. ಎಲ್ಲ ಗಿಡಗಳ ಎತ್ತರವು ಸರಿಯಾದ ಪ್ರಮಾಣ ದಿಂದ ಆಗಿ ಉತ್ಪನ್ನದ ಕ್ಷೇತ್ರವು ಹೆಚ್ಚಾದಷ್ಟು ಒಳ್ಳೇದೆಂದು ಲಕ್ಷಪೂ ರ್ವಕವಾಗಿ ಆ ಗಿಡಗಳ ತುದಿಗಳನ್ನು ಕಡಿದು ಹಾಕುವರು. ಈ ತರದ ಸಾಗುವಳಿಯಿಂದ ಎರಡೂ ಗೋಲಾರ್ಧದೊಳಗಿನ ಉತ್ಪನ್ನದ ಪ್ರಮಾ ಣದಲ್ಲಿ ಬಹಳ ಹೆಚ್ಚು ಕಡಿಮೆಯಾಗಿರುವದು. ಪೂರ್ವಗೋಲಾರ್ಧ ದಲ್ಲಿ ಒಂದು ಎಕರೆಗೆ ½ ಟನ್ನಿಗಿಂತ ಹೆಚ್ಚು ಕಾಯಿಗಳಾಗುವದಿಲ್ಲ. ಆ ದರೆ ಕ್ಯಾಲಿಫೋರ್ನಿಯಾ ಪ್ರಾಂತದಲ್ಲಿ ಒಂದು ಎಕರೆಗೆ ೧ ಟನ್ನ ಕಾಯಿ ಗಳಾದರೂ ಇದು ಸಾಧಾರಣ ಉತ್ಪನ್ನವೆಂದು ತಿಳಿಯಲ್ಪಡುತ್ತದೆ. ಒ ಮ್ಮೊಮ್ಮೆ ಅಲ್ಲಿ ಒಂದೂವರೆ ಅಥವಾ ಎರಡು ಟನ್ನ ಕಾಯಿಗಳಾಗುವವು. ಯುರೋಪಖಂಡದಲ್ಲಿ ನೂರಕ್ಕೆ ೧೦ ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಎಣ್ಣೆಯು ಹೊರಡುವದು; ಆದರೆ ಕ್ಯಾಲಿಫೋರ್ನಿಯಾದಲ್ಲಿ ನೂರಕ್ಕೆ ೨೪ ರಿಂದ ೩೦ ರ ವರೆಗೆ ಹೊರಡುವದು.

ಯುರೋಪ ಅಮೇರಿಕಾ ಖಂಡಗಳಲ್ಲಿ ಜನರು ಈ ಗಿಡಗಳನ್ನು ಅನೇಕ ರೀತಿಯಿಂದ ಉಪಯೋಗಿಸಿಕೊಳ್ಳುವರು; ಒಣಗಿದ ಕಾಯಿಗ

ಳೂ ಉಪ್ಪಿನ ಕಾಯಿಗಳೂ ಊಟದಲ್ಲಿ ಉಪಯೋಗವಾಗುವವು. ಎಣ್ಣೆ
ಯು ಊಟದಲ್ಲಿಯೂ ಔಷಧದಲ್ಲಿಯೂ ಉಪಯೋಗವಾಗುವದು.
ಗ್ರೀಸದೇಶದಲ್ಲಿ ಯಾವನೊಬ್ಬ ಅಥೀನಿಯನ್ ಸದ್ಗೃಹಸ್ಥನಿಗೆ ಬಹಳ
ಸನ್ಮಾನ ಮಾಡುವದಿದ್ದಾಗ ಈ ಗಿಡದ ಟೊಂಗೆಯದೊಂದು ಮುಕುಟ
ವನ್ನು ಮಾಡಿ ಅರ್ಪಿಸುತ್ತಿದ್ದರು. ಈ ದೇಶದಲ್ಲಿ ಆಲಿಂಪಿಯಾ ಎಂಬ
ದೊಂದು ಪಟ್ಟಣವಿರುವದು. ಅಲ್ಲಿ ನಾಲ್ನಾಲ್ಕು ವರ್ಷಕ್ಕೊಮ್ಮೆ ದೊಡ್ಡ
ಜಾತ್ರೆಯು ನೆರೆಯುವದು. ಆ ಕಾಲಕ್ಕೆ ಶಾರೀರಿಕ ಆಟಗಳು ಆಗುವ
ವು. ಅವುಗಳಲ್ಲಿ ಜಯಶಾಲಿಯಾದವನಿಗೆ ಈ ಗಿಡದ ಎಲೆಯ ಮುಕು
ಟವನ್ನು ಎಲ್ಲಕ್ಕೂ ಹೆಚ್ಚಿನ ಬಹುಮಾನವೆಂದು ಕೊಡುವರು. ಇದಲ್ಲದೆ
ಆ ದೇಶದಲ್ಲಿ ಈ ಗಿಡದ ಟೊಂಗೆಯು ಶಾಂತತೆಯ ಹಾಗು ಪವಿತ್ರತೆ
ಯ ನಿದರ್ಶಕವೆಂದು ತಿಳಿಯಲ್ಪಡುತ್ತದೆ.

ಈ ಗಿಡಗಳಿಂದ ಬೇರೆ ಬೇರೆ ದೇಶಗಳಲ್ಲಿ ಉಪ್ಪಿನಕಾಯಿಯ
ಸಲುವಾಗಿಯೂ ಎಣ್ಣೆಯ ಸಲುವಾಗಿಯೂ ಎಷ್ಟು ಕಾಯಿಗಳು ಹೊ
ಟವೆಂಬ ಬಗ್ಗೆ ವಿಶ್ವಸನೀಯವಾದ ಅಂಕೆಗಳು ಪ್ರಸಿದ್ಧವಾಗಿಲ್ಲ. ಆದ
ಗ್ಯೂ ಈ ವಿಷಯದಲ್ಲಿ ಸ್ಪೇನದ ನಂಬರು ಮೊದಲನೇದು ಬರುವದ
ಎಣ್ಣೆಯ ಸಂಬಂಧದಿಂದ ವಿಚಾರ ಮಾಡಲು ಶುದ್ಧವಾದ ಎಣ್ಣೆ
ಗಿರಾಕಿಗಳಿಗೆ ಕ್ವಚಿತ್ತಾಗಿ ದೊರೆಯುವದು. ಒಮ್ಮೊಮ್ಮೆ ಅದರಲ್ಲಿ ೧
ಕ್ಕೆ ೯೦ ರಂತೆ ಹತ್ತೀಕಾಳುಗಳ ಎಣ್ಣೆಯು ಮಿಶ್ರವಾಗಿರುತ್ತದೆ. ಆ
ಕ್ಯಾಲಿಫೋರ್ನಿಯಾದೊಳಗಿನ ಡಬ್ಬಿಗಳನ್ನೇ ತೆಗೆದುಕೊಂಡರೆ ಶು
ವಾದ ಎಣ್ಣೆಯು ದೊರಕುವದು. ಇದಲ್ಲದೆ ಆ ಎಣ್ಣೆಯಾದರೂ ಸ್ವ
ವಾಗಿ ತೆಗೆಯಲ್ಪಡುತ್ತದೆ. ಭೂಮಧ್ಯ ಸಮುದ್ರದ ದಂಡೆಯ ಪ್ರದೇ
ಳಲ್ಲಿ ಈ ತರದ ಸ್ವಚ್ಛತೆಗೆ ಮಹತ್ವಕೊಡುವದಿಲ್ಲ.

ಈ ಗಿಡವು ಯಾವಾಗಲೂ ಹಚ್ಚಗೆ ಹಸರು ಮೆಯುತ್ತಿರ
ದು. ಮೇ ತಿಂಗಳಲ್ಲಿ ಅದಕ್ಕೆ ಹೂಬಿಡುವದು. ಹೂವುಗಳು ಬಿ
ಬಣ್ಣದವಿದ್ದು ತೀರ ಸಣ್ಣವಿರುವವು. ಹೂವಿನ ಮಧ್ಯದಲ್ಲಿ ಒ
ಕಾಣಿಸುವಂಥ ಹಳದೀ ಬಣ್ಣದ ಪರಾಗಕೋಶಗಳು ಇರುವವು. ಕ
ಫೋರ್ನಿಯಾ ಪ್ರಾಂತದೊಳಗಿನ ಹೆಚ್ಚು ಉಷ್ಣವಾದ ಕಂದರಗ
... ಈ ಗಿಡದ ಕಾಯಿಗಳು ಪಕ್ವ

ವಾಗಹತ್ತುವವು. ಈ ಗಿಡಗಳ ಅನೇಕ ಜಾತಿಗಳ ಸಾಗುವಳಿ ಇದ್ದಲ್ಲಿ ಈ ಹಣ್ಣಿನ ಸುಗ್ಗಿಯು ಜಾನೇವಾರಿ ಅಥವಾ ಫೆಬ್ರುವರಿ ತಿಂಗಳುಗಳ ವರೆಗೆ ಸಾಗುವದು. ಮೊದಲು ಹಸಿ ಕಾಯಿಗಳನ್ನು ಹರಿಯುವರು; ಬಹಳ ದೊಡ್ಡ ಕಾಯಿಗಳನ್ನು ಉಪ್ಪಿನಕಾಯಿಯ ಸಲುವಾಗಿ ಇಡುವರು. ತರುವಾಯ ಫಲಭಾರದಿಂದ ಬೊಗ್ಗಿದ ಗಿಡಗಳ ಜಂಡಾಡುವರು. ಆದರಿಂದ ಹಣ್ಣುಗಳು ದೊಡ್ಡವಾಗಿ ಬೆಳೆದು ರುಚಿಕರವಾಗುವವು. ಇಷ್ಟೇ ಅಲ್ಲ. ಅವು ಬೇಗ ಪಕ್ವವಾಗುವವು.

ಸಿಲಿಪೂರ ಎಂಬಲ್ಲಿಯ ತೋಟದಲ್ಲಿ ನೂರಾರು ಮಂದಿ ಚೀನೀ ಜಪಾನೀ ಕೂಲಿಕಾರರನ್ನು ಕೆಲಸಕ್ಕೆ ಹಚ್ಚಿರುತ್ತಾರೆ. ಗಿಡವನ್ನು ಹಚ್ಚಿದ ನಾಲ್ಕುವರ್ಷಗಳಿಗೆ ಕಾಯಿಗಳಾಗಹತ್ತುವವು. ಮುಂದೆ ಸುಮಾರು ಹತ್ತುವರ್ಷಗಳವರೆಗೆ ಪ್ರತಿವರ್ಷ ಕಾಯಿಗಳ ಬೆಳವಣಿಗೆಯು ಹೆಚ್ಚಾಗುತ್ತ ಹೋಗುವದು. ಉಪ್ಪಿನ ಕಾಯಿಯ ಸಲುವಾಗಿ ಹರಿದ ಕಾಯಿಗಳ ಬಗ್ಗೆ ಬಹಳ ಎಚ್ಚರ ಪಡಬೇಕಾಗುವದು. ಆದರೆ ಎಣ್ಣೆಯ ಸಲುವಾಗಿ ಹರಿದ ಕಾಯಿಗಳ ಬಗ್ಗೆ ಅಷ್ಟು ಲಕ್ಷ್ಯ ಕೊಡುವ ಕಾರಣವಿಲ್ಲ.

ಹಣ್ಣುಗಳ ರುಚಿಯೂ, ಊಟಧಲ್ಲಿ ಅವುಗಳ ಉಪಯೋಗವೂ ಜನರಿಗೆ ಹೆಚ್ಚು ಹೆಚ್ಚು ತಿಳಿಯಹತ್ತಿದಂತೆ ಕಾಯಿಗಳಿಗೆ ಗಿರಾಕಿಗಳು ಕಡಿಮೆಯಾಗ ಹತ್ತುವವು. ಕಾಯಿಗಳು ಕಟ್ಟಿಗೆಯಂತೆ ಬಿರಸಾಗಿದ್ದು, ರುಚಿಯ ಮೂಲಕವಾಗಿ ಅವುಗಳನ್ನು ಉಪಯೋಗಿಸಿಕೊಳ್ಳುವರು. ಹಣ್ಣುಗಳು ತಿಳಲಿನಿಂದ ತುಂಬಿಕೊಂಡಿರುವವು. ಅವು ಮೆತ್ತಗಿರದಿದ್ದರೂ ಪಚನಕ್ಕೆ ಹಗುರಾಗಿರುವದರಿಂದ ಊಟದ ಕೆಲಸದಲ್ಲಿ ಅವುಗಳ ಉಪಯೋಗವು ಬಹಳವಾಗುತ್ತದೆ. ಮತ್ತು ಅವುಗಳ ರುಚಿಯಾದರೂ ಕಾಯಿಗಳಿಗಿಂತ ಚನ್ನಾಗಿರುವದು.

ಸಣ್ಣ ಪುಟ್ಟ ಕಾಯಿಗಳೂ ಪೂರ್ಣ ಬೆಳವಣಿಗೆಯನ್ನು ಹೊಂದದ ಕಾಯಿಗಳೂ ಉಪ್ಪಿನ ಕಾಯಿಗೆ ಉಪಯೋಗವಾಗುವದಿಲ್ಲ. ಇಂಥ ಕಾಯಿಗಳನ್ನೆಲ್ಲ ಎಣ್ಣೆ ತೆಗೆಯಲಿಕ್ಕೆ ಉಪಯೋಗಿಸುವರು. ಎಣ್ಣೆಯನ್ನು ತೆಗೆಯತಕ್ಕ ಕಾಯಿಗಳೊಳಗಿನ ಎಲೆಗಳು, ಟೊಂಗೆಗಳು ಬೇರೆ ಕಸಕಡ್ಡಿಗಳು ಮುಂತಾದವುಗಳನ್ನು ಒಂದು ಗಾಳಿ ಹಾಕುವ ಯಂತ್ರದಿಂದ ತೆಗೆದು ಹಸನು ಮಾಡುವರು. ತರುವಾಯ ಒಂದು ಅಗಲಬಾಯಿಯ

ಪಾತ್ರೆಯಲ್ಲಿ ಈ ಕಾಯಿಗಳನ್ನು ಹಾಕಿ, ಅವುಗಳ ಮೇಲೆ ಕಬ್ಬಿಣದ ಅಥವಾ ಕಲ್ಲಿನ ಭಾರವಾದ ಉಳ್ಳಕವನ್ನು ಆಡಿಸಿ ಅವುಗಳನ್ನು ಜಜ್ಜುತ್ತಾರೆ. ಮೊದಲು ಒಳ್ಳೇ ಕಸುವು ಹಾಕಲ್ಪಡುವದಿಲ್ಲಾದ ಕಾರಣ ಬರಿಯ ನೀರೇ ಹೊರಬೀಳುವದು. ಈ ನೀರೇ ಉತ್ತಮ ಪ್ರತಿಯದೆಂದು ಜನರು ತಿಳಿಯುತ್ತಾರೆ. ಮತ್ತು ಇದಕ್ಕೆ ಕುಮಾರಿಕೆಯರ ಎಣ್ಣೆ ಎಂಬ ಅರ್ಥದ ಹೆಸರು ಕೊಡುವರು. ಎರಡನೇ ಸಾರೆ ಉಳಕವನ್ನು ಆಡಿಸುವಾಗ ತಿಳಲನ್ನು ಪುನಃ ಜಜ್ಜುತ್ತಾರೆ. ಮತ್ತು ಪ್ರತಿ ಚೌರಸ ಇಂಚಿನ ಮೇಲೆ ೨೦೦ ಟನ್ನಿನ ಭಾರವು ಬೀಳುವಂತೆ ಮಾಡುತ್ತಾರೆ. ಈ ಸಾರೆ ಆ ಕಾಯಿಗಳೊಳಗಿನ ಎಣ್ಣೆಯೆಲ್ಲ ಹೊರಟು ಹೋಗುವದು. ಮತ್ತು ಅದರಲ್ಲಿ ನೀರಿನ ಅಂಶವು ತೀರ ಕಡಿಮೆ ಇರುವದು. ಎಷ್ಟೋ ಕಾರಖಾನೆಗಳಲ್ಲಿ ತಿಳಲಿನ ಮೇಲೆ ಮೂರನೇ ಸಾರೆ ಉಳಕವನ್ನು ಅಡಿಸುತ್ತಾರೆ. ಈ ಕಾಲಕ್ಕೆ ಅದರ ಮೇಲೆ ತುಸು ನೀರು ಸಿಂಬಡಿಸುವರು. ಇಷ್ಟಾದ ಮೇಲೆ ತಿಳಲಿನಲ್ಲಿ ಒಂದು ಹನಿ ಸಹ ಎಣ್ಣೆಯು ಉಳಿಯುವದಿಲ್ಲ. ಈ ಕಡೆಗಾಣದ ಎಣ್ಣೆಯನ್ನು ಸಾಬಾಣದ ಕಾರಖಾನೆಗಳಲ್ಲಿ ಉಪಯೋಗಿಸುವರು.

ಕಾಯಿಗಳ ಮೇಲೆ ಉಳಕವನ್ನು ಆಡಿಸುವದರಿಂದ ನೀರು ಹಾಗು ಎಣ್ಣೆ ಕೂಡಿಯೇ ಹೊರಬೀಳುವವು. ಅವು ಬಾನಿಗಳಲ್ಲಿ ಹಿಡಿಯಲ್ಪಡುವವು. ಕೆಲಹೊತ್ತಿನ ಮೇಲೆ ಎಣ್ಣೆಯು ನೀರ ಮೇಲೆ ತೇಲಹತ್ತುವದು. ಬಳಿಕ ಎಣ್ಣೆಯನ್ನು ಸುರುವುತ್ತಾರೆ. ಸಿಲಪೂರ ಎಂಬಲ್ಲಿ ಎಣ್ಣೆಯನ್ನು ಸಂಗ್ರಹಿಸುವ ಟಾಕಿಗಳಲ್ಲಿ ಒಂದೊಂದರಲ್ಲಿ ೬೫ ಸಾವಿರ ಗ್ಯಾಲನ ಎಣ್ಣೆಯು ಹಿಡಿಸುವದು. ಈ ಮೇರೆಗೆ ಟಾಕಿಗಳಲ್ಲಿ ಸಂಗ್ರಹಿಸಲ್ಪಟ್ಟ ಎಣ್ಣೆಯನ್ನು ಹೆಚ್ಚುಕಡಿಮೆ ದಪ್ಪಾದ ಸಚ್ಛಿದ್ರ ಕಾಗದಗಳೊಳಗಿಂದ ಅನೇಕ ಸಾರೆ ಸೋಸಿ ಬಾಟಲಿಗಳಲ್ಲಿ ತುಂಬಿ ಮಾರಾಟಕ್ಕೆ ಕಳಿಸುವರು.

ಪ್ರಕೃತಿವಿಮರ್ಶೆಯ ಪಾಠಗಳು.

ಉಪೋದ್ಘಾತ.

ಈಗಿನ ವಿದ್ಯಾಭ್ಯಾಸಕ್ರಮದಲ್ಲಿ ಪದಾರ್ಥವಿಜ್ಞಾನಶಾಸ್ತ್ರಗಳಿಗೆ ಪ್ರಾಶಸ್ತ್ಯವನ್ನು ಕೊಡುತ್ತಿರುವದು ಒಂದು ವಿಶೇಷಾಂಶವಾಗಿರುತ್ತದೆ. ಪೂರ್ವದಲ್ಲಿ ಶಾಲೆಗಳಲ್ಲಿ ಭಾಷೆ, ಗಣಿತ, ಇತಿಹಾಸ ದರ್ಶನಪಾಠಗಳನ್ನು ಮಾತ್ರ ಕಲಿಸಿ ನಮ್ಮ ಸುತ್ತಲೂ ಇರುವ ಪ್ರಪಂಚದಲ್ಲಿ ಗೋಚರವಾಗುವ ಪದಾರ್ಥಗಳ ವಿಚಾರವು ಅನವಶ್ಯಕವೆಂದು ಭಾವಿಸಿದ್ದರು. ಕಾಲಸ್ಥಿತಿಯು ವ್ಯತ್ಯಾಸವನ್ನು ಹೊಂದಿ, ಕೈಗಾರಿಕೆಯು ದಿನೇ ದಿನೇ ಹೆಚ್ಚುತ್ತಿರುವದರಿಂದ ಪದಾರ್ಥಗಳ ಸಂಬಂಧವಾದ ವಿಷಯಗಳಿಗೆ ಜನಗಳು ಹೆಚ್ಚು ಗಮನ ಕೊಡುತ್ತಿರುವರು. ಮತ್ತು ಶಾಲೆಗಳಲ್ಲಿ ಇವುಗಳ ಸಂಬಂಧವಾದ ಪಾಠಗಳನ್ನು ಕಲಿಸುತ್ತಿರುವರು.

ರಾತ್ರಿಯಲ್ಲಿ ನಾವು ನಿದ್ರೆಮಾಡುವ ಕಾಲವನ್ನು ಬಿಟ್ಟು ಉಳಿದ ಕಾಲಗಳಲ್ಲೆಲ್ಲಾ ನಮ್ಮ ಸುತ್ತಲೂ ಇರುವ ಪದಾರ್ಥಗಳು ನಮ್ಮ ಇಂದ್ರಿಯಗಳ ಮೂಲಕ ನಮಗೆ ಗೋಚರವಾಗುತ್ತಿರುತ್ತವೆ. ಕೆಲವು ಪದಾರ್ಥಗಳು ತಮ್ಮಲ್ಲಿರುವ ಬಣ್ಣಗಳಿಂದಲೂ, ಕೆಲವು ತಮ್ಮ ಶಬ್ದಗಳಿಂದಲೂ, ಕೆಲವು ತಮ್ಮ ವಾಸನೆಗಳಿಂದಲೂ, ಕೆಲವು ತಮ್ಮ ರುಚಿಯಿಂದಲೂ, ಮತ್ತೆ ಕೆಲವು ನಮ್ಮ ಸ್ಪರ್ಶದಿಂದಲೂ ನಮ್ಮ ಮನಸ್ಸಿಗೆ ತಮ್ಮ ಸ್ಥಿತಿಯನ್ನು ತೋರ್ಪಡಿಸುತ್ತವೆ. ಹೀಗೆ ನಮ್ಮ ಅನುಭವಕ್ಕೆ ಬರುವ ವ್ಯಕ್ತಿಗಳಲ್ಲಿ ಅನೇಕ ವಸ್ತುಗಳು, ಅಂದರೆ ಮನೆ, ಬೆಂಚು, ಕುರ್ಚಿ, ಪೆಟ್ಟಿಗೆ. ಮೊದಲಾದವು ಮನುಷ್ಯರ ಕಲಾಕೌಶಲ್ಯದಿಂದ ಈಗ ಅವು ಹೊಂದಿರುವ ಆಕಾರಕ್ಕೆ ಬಂದಿರುತ್ತವೆ. ಈ ಪ್ರಪಂಚದಲ್ಲಿ ಕಾಣುವ ವ್ಯಕ್ತಿಗಳಲ್ಲಿ ಹೆಚ್ಚು ಭಾಗವು ಅಂದರೆ ಸಸ್ಯ, ಮೃಗ, ಪಕ್ಷಿ, ವಾಯು, ಮೇಘ ಕಲ್ಲು ಮೊದಲಾದವು ಮನುಷ್ಯನಿಂದ ನಿರ್ಮಿತವಾಗದೆ, ಅವನಿಂದ ಮಾಡಲಸಾಧ್ಯವಾದ ವಸ್ತುಗಳಿಂದಾಗಿವೆ. ಈ ಸಮುದಾಯಕ್ಕೆ ಸೇರಿದ ವ್ಯಕ್ತಿಗಳು ಮನುಷ್ಯರು ಹುಟ್ಟದೇ ಇದ್ದರೂ ಈಗ ಅವುಗಳಿರುವ ಹಾಗೆಯೇ ಇರುತ್ತಿದ್ದವು. ಯಾವ ಯಾವ ವಸ್ತುಗಳಿಗೆ ಈಗ ಇರುವ ಆಕಾರ ರಚನೆಗಳನ್ನು ಮನುಷ್ಯರು ಕೊಟ್ಟಿರುತ್ತಾರೋ ಅಂಥ ವಸ್ತುಗ

ಪಾತ್ರೆಯಲ್ಲಿ ಈ ಕಾಯಿಗಳನ್ನು ಹಾಕಿ, ಅವುಗಳ ಮೇಲೆ ಕಬ್ಬಿಣದ ಅಥವಾ ಕಲ್ಲಿನ ಭಾರವಾದ ಉಳ್ಳಕವನ್ನು ಆಡಿಸಿ ಅವುಗಳನ್ನು ಜಜ್ಜು ತ್ತಾರೆ. ಮೊದಲು ಒಳ್ಳೇ ಕಸವು ಹಾಕಲ್ಪಡುವದಿಲ್ಲಾದ ಕಾರಣ ಬರಿಯ ನೀರೇ ಹೊರಬೀಳುವದು. ಈ ನೀರೇ ಉತ್ತಮ ಪ್ರತಿಯದೆಂದು ಜನರು ತಿಳಿಯುತ್ತಾರೆ. ಮತ್ತು ಇದಕ್ಕೆ ಕುಮಾರಿಕೆಯರ ಎಣ್ಣೆ ಎಂಬ ಅರ್ಥದ ಹೆಸರು ಕೊಡುವರು. ಎರಡನೇ ಸಾರೆ ಉಳಕವನ್ನು ಆಡಿಸುವಾಗ ತಿಳಲನ್ನು ಪುನಃ ಜಜ್ಜುತ್ತಾರೆ. ಮತ್ತು ಪ್ರತಿ ಚೌರಸ ಇಂಚಿನ ಮೇಲೆ ೨೦೦ ಟನ್ನಿನ ಭಾರವು ಬೀಳುವಂತೆ ಮಾಡುತ್ತಾರೆ. ಈ ಸಾರೆ ಆ ಕಾಯಿ ಗಳೊಳಗಿನ ಎಣ್ಣೆಯೆಲ್ಲ ಹೊರಟು ಹೋಗುವದು. ಮತ್ತು ಅದರಲ್ಲಿ ನೀರಿನ ಅಂಶವು ತೀರ ಕಡಿಮೆ ಇರುವದು. ಎಷ್ಟೋ ಕಾರಖಾನೆಗಳಲ್ಲಿ ತಿಳಲಿನ ಮೇಲೆ ಮೂರನೇ ಸಾರೆ ಉಳಕವನ್ನು ಅಡಿಸುತ್ತಾರೆ. ಈ ಕಾಲಕ್ಕೆ ಅದರ ಮೇಲೆ ತುಸು ನೀರು ಸಿಂಬಡಿಸುವರು. ಇಷ್ಟಾದ ಮೇಲೆ ತಿಳಲಿನಲ್ಲಿ ಒಂದು ಹನಿ ಸಹ ಎಣ್ಣೆಯು ಉಳಿಯುವದಿಲ್ಲ. ಈ ಕಡೆಗಾಣದ ಎಣ್ಣೆಯನ್ನು ಸಾಬಾಣದ ಕಾರಖಾನೆಗಳಲ್ಲಿ ಉಪ ಯೋಗಿಸುವರು.

ಕಾಯಿಗಳ ಮೇಲೆ ಉಳಕವನ್ನು ಆಡಿಸುವದರಿಂದ ನೀರು ಹಾಗು ಎಣ್ಣೆ ಕೂಡಿಯೇ ಹೊರಬೀಳುವವು. ಅವು ಬಾನಿಗಳಲ್ಲಿ ಹಿಡಿ ಯಲ್ಪಡುವವು. ಕೆಲಹೊತ್ತಿನ ಮೇಲೆ ಎಣ್ಣೆಯು ನೀರ ಮೇಲೆ ತೇಲ ಹತ್ತುವದು. ಬಳಿಕ ಎಣ್ಣೆಯನ್ನು ಸುರುವುತ್ತಾರೆ. ಸಿಲಪೂರ ಎಂಬಲ್ಲಿ ಎಣ್ಣೆಯನ್ನು ಸಂಗ್ರಹಿಸುವ ಟಾಕಿಗಳಲ್ಲಿ ಒಂದೊಂದರಲ್ಲಿ ೬೫ ಸಾವಿರ ಗ್ಯಾಲನ ಎಣ್ಣೆಯು ಹಿಡಿಸುವದು. ಈ ಮೇರೆಗೆ ಟಾಕಿಗಳಲ್ಲಿ ಸಂಗ್ರ ಹಿಸಲ್ಪಟ್ಟ ಎಣ್ಣೆಯನ್ನು ಹೆಚ್ಚುಕಡಿಮೆ ದಪ್ಪಾದ ಸಚ್ಛಿದ್ರ ಕಾಗದಗಳೊಳ ಗಿಂದ ಅನೇಕ ಸಾರೆ ಸೋಸಿ ಬಾಟಲಿಗಳಲ್ಲಿ ತುಂಬಿ ಮಾರಾಟಕ್ಕೆ ಕಳಿಸುವರು.

ಪ್ರಕೃತಿವಿಮರ್ಶೆಯ ಪಾಠಗಳು.

ಉಪೋದ್ಘಾತ.

ಈಗಿನ ವಿದ್ಯಾಭ್ಯಾಸಕ್ರಮದಲ್ಲಿ ಪದಾರ್ಥವಿಜ್ಞಾನಶಾಸ್ತ್ರಗಳಿಗೆ ಪ್ರಾಶಸ್ತ್ಯವನ್ನು ಕೊಡುತ್ತಿರುವದು ಒಂದು ವಿಶೇಷಾಂಶವಾಗಿರುತ್ತದೆ. ಪೂರ್ವದಲ್ಲಿ ಶಾಲೆಗಳಲ್ಲಿ ಭಾಷೆ, ಗಣಿತ, ಇತಿಹಾಸ ದರ್ಶನಪಾಠಗಳನ್ನು ಮಾತ್ರ ಕಲಿಸಿ ನಮ್ಮ ಸುತ್ತಲೂ ಇರುವ ಪ್ರಪಂಚದಲ್ಲಿ ಗೋಚರವಾಗುವ ಪದಾರ್ಥಗಳ ವಿಚಾರವು ಅನವಶ್ಯಕವೆಂದು ಭಾವಿಸಿದ್ದರು. ಕಾಲಸ್ಥಿತಿಯು ವ್ಯತ್ಯಾಸವನ್ನು ಹೊಂದಿ, ಕೈಗಾರಿಕೆಯು ದಿನೇ ದಿನೇ ಹೆಚ್ಚುತ್ತಿರುವದರಿಂದ ಪದಾರ್ಥಗಳ ಸಂಬಂಧವಾದ ವಿಷಯಗಳಿಗೆ ಜನಗಳು ಹೆಚ್ಚು ಗಮನ ಕೊಡುತ್ತಿರುವರು. ಮತ್ತು ಶಾಲೆಗಳಲ್ಲಿ ಇವುಗಳ ಸಂಬಂಧವಾದ ಪಾಠಗಳನ್ನು ಕಲಿಸುತ್ತಿರುವರು.

ರಾತ್ರಿಯಲ್ಲಿ ನಾವು ನಿದ್ರೆಮಾಡುವ ಕಾಲವನ್ನು ಬಿಟ್ಟು ಉಳಿದ ಕಾಲಗಳಲ್ಲೆಲ್ಲಾ ನಮ್ಮ ಸುತ್ತಲೂ ಇರುವ ಪದಾರ್ಥಗಳು ನಮ್ಮ ಇಂದ್ರಿಯಗಳ ಮೂಲಕ ನಮಗೆ ಗೋಚರವಾಗುತ್ತಿರುತ್ತವೆ. ಕೆಲವು ಪದಾರ್ಥಗಳು ತಮ್ಮಲ್ಲಿರುವ ಬಣ್ಣಗಳಿಂದಲೂ, ಕೆಲವು ತಮ್ಮ ಶಬ್ದಗಳಿಂದಲೂ, ಕೆಲವು ತಮ್ಮ ವಾಸನೆಗಳಿಂದಲೂ, ಕೆಲವು ತಮ್ಮ ರುಚಿಯಿಂದಲೂ, ಮತ್ತೆ ಕೆಲವು ನಮ್ಮ ಸ್ಪರ್ಶದಿಂದಲೂ ನಮ್ಮ ಮನಸ್ಸಿಗೆ ತಮ್ಮ ಸ್ಥಿತಿಯನ್ನು ತೋರ್ಪಡಿಸುತ್ತವೆ. ಹೀಗೆ ನಮ್ಮ ಅನುಭವಕ್ಕೆ ಬರುವ ವ್ಯಕ್ತಿಗಳಲ್ಲಿ ಅನೇಕ ವಸ್ತುಗಳು, ಅಂದರೆ ಮನೆ, ಬೆಂಚು, ಕುರ್ಚಿ, ಪೆಟ್ಟಿಗೆ, ಮೊದಲಾದವು ಮನುಷ್ಯರ ಕಲಾಕೌಶಲ್ಯದಿಂದ ಈಗ ಅವು ಹೊಂದಿರುವ ಆಕಾರಕ್ಕೆ ಬಂದಿರುತ್ತವೆ. ಈ ಪ್ರಪಂಚದಲ್ಲಿ ಕಾಣುವ ವ್ಯಕ್ತಿಗಳಲ್ಲಿ ಹೆಚ್ಚು ಭಾಗವು ಅಂದರೆ ಸಸ್ಯ, ಮೃಗ, ಪಕ್ಷಿ, ವಾಯು, ಮೇಘ ಕಲ್ಲು ಮೊದಲಾದವು ಮನುಷ್ಯನಿಂದ ನಿರ್ಮಿತವಾಗದೆ, ಅವನಿಂದ ಮಾಡಲಸಾಧ್ಯವಾದ ವಸ್ತುಗಳಿಂದಾಗಿವೆ. ಈ ಸಮುದಾಯಕ್ಕೆ ಸೇರಿದ ವ್ಯಕ್ತಿಗಳು ಮನುಷ್ಯರು ಹುಟ್ಟದೇ ಇದ್ದರೂ ಈಗ ಅವುಗಳಿರುವ ಹಾಗೆಯೇ ಇರುತ್ತಿದ್ದವು. ಯಾವ ಯಾವ ವಸ್ತುಗಳಿಗೆ ಈಗ ಇರುವ ಆಕಾರರಚನೆಗಳನ್ನು ಮನುಷ್ಯರು ಕೊಟ್ಟಿರುತ್ತಾರೋ ಅಂಥ ವಸ್ತುಗ

ಳನ್ನು ಮನುಷ್ಯರು ನಿರ್ಮಾಣಮಾಡಿರುತ್ತಾರೆಂದು ತಿಳಿಯುತ್ತೇವೆ. ಮತ್ತು ಅವುಗಳನ್ನು ಕೃತಕ ಪದಾರ್ಥಗಳೆಂದು ಕರೆಯುತ್ತೇವೆ. ಮನುಷ್ಯನವಧಿಯಲ್ಲಿಲ್ಲದೆ ಸ್ವಾಭಾವಿಕವಾಗಿ ಉದ್ಭವಿಸಿ, ನಮ್ಮ ಸುತ್ತಲೂ ಸ್ಥಾವರ ಜಂಗಮಾದಿ ಲಕ್ಷಣಗಳೊಡನೆ ಕಾಣುವ ವ್ಯಕ್ತಿಗಳನ್ನು ಪ್ರಕೃತಿಪದಾರ್ಥಗಳೆಂತಲೂ, ಇವುಗಳ ಒಟ್ಟು ಸಮೂಹವನ್ನು ಪ್ರಕೃತಿಯೆಂತಲೂ ಕರೆಯುವದು ರೂಢಿಯಾಗಿರುತ್ತದೆ.

ನಮ್ಮ ಪಾಠವನ್ನು ಪ್ರಕೃತಿವಿಮರ್ಶೆಯೆಂದು ಕರೆಯುತ್ತೇವೆ. ನಮ್ಮನ್ನು ಆವರಿಸಿಕೊಂಡಿರುವ ಪ್ರಕೃತಿಯಲ್ಲಿ ಸ್ಥೂಲ ಮತ್ತು ಸೂಕ್ಷ್ಮರೂಪದಿಂದ ಗೋಚರ ಮತ್ತು ಅಗೋಚರ ಸ್ಥಿತಿಯಲ್ಲಿರುವ ಪದಾರ್ಥಗಳನ್ನು ನಿರೀಕ್ಷಣೆ ಮಾಡಿ ಅವುಗಳಲ್ಲಿ ಕಾಣುವ ಕಾರ್ಯಕಾರಣಗಳ ಭಾವಗಳನ್ನು ತಿಳಿಯುವದು ನಮ್ಮ ಉದ್ದೇಶ. ಈ ವಿಷಯವನ್ನು ಶಾಲೆಗಳಲ್ಲಿ ಕಲಿಸುವದಕ್ಕೆ ಮುಂಚೆ ಇದರ ಅಭ್ಯಾಸದಿಂದ ಮಕ್ಕಳ ವಿದ್ಯಾಭ್ಯಾಸಕ್ರಮದಲ್ಲಿ ಯಾವ ಹೆಚ್ಚು ಪ್ರಯೋಜನವು ದೊರೆಯುವದು, ಮತ್ತು ಮುಂದೆ ಇವರು ಪ್ರವರ್ಧಮಾನರಾದಾಗ ಇವರ ಜೀವನ ವ್ಯಾಪಾರಗಳಲ್ಲಿ ಈ ವಿಷಯವಾದ ಜ್ಞಾನವು ಹ್ಯಾಗೆ ಸಹಕಾರಿಯಾಗುವದು ಎಂಬ ಎರಡು ವಿಚಾರಗಳು ಹುಟ್ಟುವವು. ಶಾಲೆಯು ಅನೇಕ ಪಾಠಗಳಲ್ಲಿಲ್ಲದೆ ಇರುವ ಒಂದು ಪ್ರಯೋಜನವು ಆರಂಭದಲ್ಲಿಯೇ ಕಾಣಬರುವದು. ಮಗುವು ಕಲಿಯುವ ಒಂದೊಂದು ಅಂಶವನ್ನು ಸ್ವತಃ ಪದಾರ್ಥಗಳನ್ನು ವಿಮರ್ಶಿಸಿ ಕಲಿಯಬೇಕಾಗಿರುವದರಿಂದ ಮಕ್ಕಳ ನಿರೀಕ್ಷಣಶಕ್ತಿಯು ಹೆಚ್ಚುವದು; ಮತ್ತು ಹೆಚ್ಚು ವಿಷಯಗಳನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವು ಉಂಟಾಗುವದು. ಪ್ರಕೃತಿಯಲ್ಲಿ ಕಾಣುವ ಸೌಂದರ್ಯದಿಂದ ಮಕ್ಕಳಲ್ಲಿ ಸೌಂದರ್ಯಾಭಿನಿವೇಶವನ್ನುಂಟುಮಾಡಿ, ಅವರು ಮಾಡುವ ಕೆಲಸಗಳಲ್ಲಿ ಒಂದು ಕ್ರಮವಿರಬೇಕೆಂಬ ನಿಯಮವನ್ನು ಸ್ಪಷ್ಟಪಡಿಸಬಹುದು. ಮಕ್ಕಳಿಗೆ ಸ್ವಭಾವವಾಗಿರುವ ಚಟುವಟಿಕೆಯಿಂದ ಯಾವ ಉದ್ದೇಶವಿಲ್ಲದೆ ಅನೇಕ ಪದಾರ್ಥಗಳನ್ನು ನಾಶಮಾಡುತ್ತಿರುತ್ತಾರೆ. ಅವರಿಗೆ ಸರಿಯಾದ ತಿಳುವಳಿಕೆ ಇಲ್ಲದೆ ಇರುವದೇ ಇದಕ್ಕೆ ಕಾರಣ. ಉಪಾಧ್ಯಾಯರು ಮಕ್ಕಳ ಇಂಥಾ ದುಷ್ಕೃತ್ಯಗಳಿಂದ ಯಾವ ಹಾನಿಗಳಾಗುತ್ತವೆಯೆಂದು ತಿಳಿಸಿ ಅವರ ಆಟಗಳಿಗೆ

ಸರಿಯಾದ ಅವಕಾಶವನ್ನು ಕಲ್ಪಿಸಿದರೆ ಮಕ್ಕಳ ನೈತಿಕ ಶಿಕ್ಷಣದಲ್ಲಿ ಬಹಳ ಸಹಕಾರಿಯಾಗುವದು. ಈಗ ಬಹಳ ಉನ್ನತಸ್ಥಿತಿಗೆ ಬಂದಿರುವ ಜನಾಂಗಗಳು ಹ್ಯಾಗೆ ಇಷ್ಟು ಸಂಪತ್ತನ್ನು ಹೊಂದಿರುತ್ತಾರೆಂದು ವಿಚಾರ ಮಾಡಿದರೆ, ಅವರು ಸರಿಯಾದ ಕೃಷಿಕರ್ಮಗಳನ್ನರಿತು ಪ್ರಕೃತಿಯನ್ನು ಸಾಧ್ಯವಾದಷ್ಟು ಮಟ್ಟಿಗೆ ವಶಮಾಡಿಕೊಂಡಿರುವದೇ ಮುಖ್ಯಕಾರಣವೆಂದು ತಿಳಿಯಬರುವದು. ನಮ್ಮ ಮಕ್ಕಳಿಗೆ ಈ ಪ್ರಯೋಜನಗಳು ದೊರೆಯಬೇಕಾದರೆ ನಾವು ಹ್ಯಾಗೆ ಅಭ್ಯಾಸವನ್ನು ನಡೆಸಬೇಕು? ಆರಂಭದಲ್ಲಿ ನಾವು ಒಂದು ವಿಷಯವನ್ನು ಲಕ್ಷಿಸಬೇಕು. ಮನುಷ್ಯವರ್ಗಕ್ಕೆ ಸ್ವಭಾವವಾಗಿಯೆ ಪ್ರಕೃತಿಯ ವಿಶೇಷಾಂಶಗಳಲ್ಲಿ ಉತ್ಸಾಹವಿರುವದು. ಎತ್ತರವಾದ ಒಂದು ಪರ್ವತದ ಶಿಖರದ ಮೇಲೆ ಹೋದಾಗಲೂ, ನಿರಂತರವಾಗಿ ಹರಿಯುತ್ತಿರುವ ವಿಸ್ತಾರವಾದ ನದಿಯ ದಡದಲ್ಲೂ, ಹಾಗೆಯೆ ಗಂಭೀರವಾದ ಸಮುದ್ರದ ತೀರದಲ್ಲೂ, ನಮ್ಮ ಮನಸ್ಸಿನಲ್ಲಿ ಪ್ರಕೃತಿವಿಷಯದಲ್ಲಿ ಆಶ್ಚರ್ಯವು ಹುಟ್ಟುವದು. ಹಾಗೆಯೆ ಸೂರ್ಯಾಸ್ತಮಾನದಿಂದುಂಟಾದ ಸಂಧ್ಯಾರಾಗದಲ್ಲೂ, ವಸಂತಕಾಲದ ನವಪಲ್ಲವಗಳಲ್ಲಿಯೂ, ಮೃಗಪಕ್ಷಿಗಳ ಅಂದವಾದ ಗಮನಗಳಲ್ಲೂ ನಮಗೆ ಉಲ್ಲಾಸವಾಗುವದು ಸಹಜ. ಹೀಗೆ ಪ್ರಕೃತಿಯಲ್ಲಿ ಕಾಣುವ ವಿಶೇಷಾಂಶಗಳ ಸಹಾಯದಿಂದ ಪ್ರಕೃತಿಯಲ್ಲಿ ಸಾಮಾನ್ಯವಾಗಿರುವ ಆಕಾರ, ವರ್ಣ, ಚಲನೆಗಳನ್ನು ಮಕ್ಕಳಿಗೆ ತಿಳಿಸಲು ಉಪಾಧ್ಯಾಯರು ಪ್ರಯತ್ನಮಾಡಬೇಕು.

ಎಂಥ ಮೂಢರಿಗೂ ಕೂಡ ನಮ್ಮ ಸುತ್ತಲೂ ಇರುವ ಪ್ರಪಂಚದಲ್ಲಿ ಪದಾರ್ಥಗಳು ಸಜೀವ ಮತ್ತು ನಿರ್ಜೀವಗಳೆಂಬ ಎರಡು ಬಗೆಯಾಗಿರುವದು ವ್ಯಕ್ತವಾಗುವದು. ಹಾಗೆಯೆ ಸಜೀವಗಳಲ್ಲಿ ಜಂತುವರ್ಗ ಮತ್ತು ಸಸ್ಯವರ್ಗಗಳೆಂಬ ಎರಡು ಪಂಗಡಗಳಾಗಿರುವದು ಸ್ಪಷ್ಟವಾಗಿವೆ.

ಪ್ರಕೃತಿವಿಮರ್ಶೆಯನ್ನು ಸರಿಯಾಗಿ ನಡೆಸಬೇಕಾದರೆ, ಜಂತುಗಳ ಮತ್ತು ಸಸ್ಯಗಳ ಉತ್ಪತ್ತಿ ಮತ್ತು ಬೆಳವಳಿಕೆಯನ್ನೂ, ಅವುಗಳ ಆಕಾರ ಮತ್ತು ಅಂಗರಚನೆಯನ್ನೂ, ನಮ್ಮ ಗ್ರಾಮದ ಹತ್ತಿರ ಇರುವ ಶಿಲೆಗಳ ರಚನೆ ಮತ್ತು ಅವುಗಳ ವಸ್ತುಗಳನ್ನೂ, ನದಿ-ಪರ್ವತಗಳ ಆಕಾರಗಳನ್ನೂ, ಹವೆ, ಮೇಘಗಳ ರೂಪಾಂತರಗಳನ್ನೂ ವಿಚಾರಮಾಡಬೇಕು.

ಪ್ರಕೃತಿ ವಿಮರ್ಶೆಯ ಪಾಠಗಳು.

ಮೊದಲನೇ ಅಧ್ಯಾಯ.

ಸಸ್ಯವರ್ಗದ ಸಾಮಾನ್ಯ ಲಕ್ಷಣಗಳು.

ಪ್ರಕೃತಿ ಅಂದರೆ ಏನು ಮತ್ತು ಪ್ರಕೃತಿ ವಿಮರ್ಶೆಯ ಉದ್ದೇಶ ವೇನು? ಈ ಎರಡೂ ವಿಷಯಗಳನ್ನು ಹಿಂದಿನ ಭಾಗದಲ್ಲಿ ಸ್ವಲ್ಪಮಟ್ಟಿಗೆ ಉಪೋದ್ಘಾತದಲ್ಲಿ ವಿಚಾರ ಮಾಡಿದೆವು. ಪ್ರಕೃತಿ ಪಾಠಗಳನ್ನು ಬೋಧಿಸಲುಪಕ್ರಮಿಸುವಾಗ ಅವುಗಳಲ್ಲಿ ಯಾವ ಯಾವ ವಿಷಯಗ ಳನ್ನು ಸೇರಿಸಬೇಕೆಂದು ಉಪಾಧ್ಯಾಯರು ನಿರ್ಧಾರ ಮಾಡಿಕೊಳ್ಳಬೇ ಕಾದದ್ದು ಅವರ ಮೊದಲನೇ ಕರ್ತವ್ಯ. ನಮ್ಮ ಸುತ್ತಲೂ ಕಾಣುವ ಪ್ರಕೃತಿ ಪದಾರ್ಥಗಳಲ್ಲೆಲ್ಲಾ ಸಸ್ಯಗಳು ನಮ್ಮ ಪಾಠಗಳಿಗೆ ಬಹು ಮುಖ್ಯವಾದವುಗಳೆಂದು ಹೇಳಬಹುದು. ನಮ್ಮ ದೃಷ್ಟಿಯು ವ್ಯಾಪಿ ಸುವ ಎಲ್ಲಾ ಕಡೆಗಳಲ್ಲೂ ವಿಸ್ತಾರವಾಗಿ ಹರಡಿಕೊಂಡಿರುವದು ಮಾತ್ರ ವಲ್ಲದೆ ನಮ್ಮ ಜೀವಮಾನದಲ್ಲಿ ಪ್ರತಿನಿತ್ಯವೂ ಬೇಕಾದ ಆಹಾರ ಉಡಿ ಗೆಗಳಿಗೆ ಅವಶ್ಯಕವಾದ ಪದಾರ್ಥಗಳನ್ನು ಸಸ್ಯಗಳು ಕೊಡುವದರಿಂದ ನಮಗೂ ಅವುಗಳಿಗೂ ವಿಶೇಷವಾದ ಸಂಬಂಧವಿರುವದು ಸರ್ವರಿಗೂ ಸುಲಭವಾಗಿ ಗೋಚರವಾಗುವದು. ಇದಲ್ಲದೆ ನಮ್ಮ ಪಾಠಗಳಿಗೆ ಬೇಕಾ ದ ಸಸ್ಯಗಳು ಮತ್ತು ಅವುಗಳ ಭಾಗಗಳು ಎಲ್ಲೆಲ್ಲಿಯೂ ದೊರಕುತ್ತವೆ. ಮತ್ತು ನಮಗೆ ಬೇಕಾದ ಕಡೆಗಳಲ್ಲಿ ಇಷ್ಟಕ್ಕೆ ಬಂದ ಸಸ್ಯಗಳನ್ನು ಬೆಳೆಸಬಹುದು. ಸಸ್ಯಸಂಬಂಧವಾದ ಪಾಠಗಳನ್ನು ಸಣ್ಣ ಸಣ್ಣ ಮಕ್ಕ ಳಿಗೂ, ಸ್ವಲ್ಪ ವಯಸ್ಸಾದ ಹುಡುಗರಿಗೂ, ಹಾಗೆಯೆ ದೊಡ್ಡ ದೊಡ್ಡ ಶಾಲೆಗಳಲ್ಲಿ ಶಾಸ್ತ್ರೀಯ ವಿಚಾರಗಳನ್ನಭ್ಯಾಸ ಮಾಡುವ ಪ್ರೌಢ ವಿದ್ಯಾರ್ಥಿಗಳಿಗೂ ಅವರವರ ಮನಸ್ಸಿಗೂ ಯೋಗ್ಯತೆಗೂ ತಕ್ಕ ಹಾಗೆ ಸ್ಥೂಲವಾದ ಮತ್ತು ಸೂಕ್ಷ್ಮವಾದ ವಿಷಯಗಳನ್ನಾರಿಸಿ ಕಲಿಸಬಹುದು. ಮೇಲೆ ತಿಳಿಸಿದ ಗುಣಗಳಿಂದ ಪ್ರಕೃತಿಪಾಠಗಳಿಗೆ ಸಸ್ಯಗಳು ಅತ್ಯು ತ್ತಮವಾದ ವಿಷಯಗಳೆಂದು ಉಪಾಧ್ಯಾಯರು ನಿರ್ಧಾರವಾಗಿ ತಿಳಿಯ

ಬಹುದು. ಸಸ್ಯಗಳ ವಿಚಾರವನ್ನು ಪ್ರಾರಂಭಿಸುವಾಗ ಅವುಗಳ ಸಾಮಾನ್ಯಲಕ್ಷಣಗಳನ್ನು ತಿಳಿಯಬೇಕು. ಉಪೋದ್ಘಾತ ಭಾಗದಲ್ಲಿ ನಮ್ಮ ಸುತ್ತಲೂ ಕಾಣುವ ಪದಾರ್ಥಗಳನ್ನು ಪ್ರಕೃತಿ ಪದಾರ್ಥಗಳು ಮತ್ತು ಕೃತಕ (ಕೃತ್ರಿಮ) ಪದಾರ್ಥಗಳೆಂಬ ಎರಡು ಪಂಗಡಗಳನ್ನಾಗಿ ವಿಭಾಗ ಮಾಡಿ ಅವುಗಳ ಲಕ್ಷಣಗಳನ್ನು ಮತ್ತು ಪರಸ್ಪರ ವ್ಯತ್ಯಾಸಗಳನ್ನು ಹೇಳಿರುತ್ತದೆ. ಸಸ್ಯಗಳು ಪ್ರಕೃತಿ ಪದಾರ್ಥಗಳೆಂದು ಯಾರಿಗೆ ತಿಳಿಯುವದಿಲ್ಲ? ಪ್ರಪಂಚದಲ್ಲಿರುವ ವಸ್ತುಗಳನ್ನು ಮೇಲೆ ಹೇಳಿದ ವಿಧಗಳಲ್ಲಲ್ಲದೆ ಇತರ ವಿಧಗಳಲ್ಲಿಯೂ ವಿಭಾಗ ಮಾಡಬಹುದು.

ಜನಗಳು ತಮ್ಮ ಸುತ್ತಲೂ ಇರುವ ಪದಾರ್ಥಗಳಲ್ಲಿ ಕೆಲವು ಪ್ರಾಣವುಳ್ಳವುಗಳೆಂತಲೂ ಕೆಲವು ಪ್ರಾಣವಿಲ್ಲದವುಗಳೆಂತಲೂ ಒಂದು ವ್ಯಕ್ತಿಯಲ್ಲಿದ್ದ ಪ್ರಾಣವು ಹೊರಗೆ ಹೋಯಿತೆಂತಲೂ ಸಾಮಾನ್ಯವಾಗಿ ಮಾತನಾಡಿಕೊಳ್ಳುತ್ತಾರೆ. ಅವರನ್ನು ಯಾರಾದರೂ ಪ್ರಾಣವಿರುವ ವ್ಯಕ್ತಿಗಳನ್ನು ತೋರಿಸಬೇಕೆಂದು ಕೇಳಿದರೆ ಅವರು ವಿಶೇಷ ಪ್ರಯತ್ನವಿಲ್ಲದೆ ತೋರಿಸಲು ಬಹುದು. ಆದರೆ ಅವರನ್ನು ಯಾರಾದರೂ ಯಾವಕಾರಣಗಳಿಂದ ನೀವು ತೋರಿಸಿದ ವ್ಯಕ್ತಿಗಳಿಗೆ ಪ್ರಾಣವಿರುತ್ತೆಂದು ತಿಳಿಯುವಿರೆಂದು ಕೇಳಿದರೆ ಅವರಿಗೆ ಸರಿಯಾದ ಉತ್ತರವನ್ನು ಹೇಳುವ ಸಾಮರ್ಥ್ಯವಿರುವದಿಲ್ಲ. ತಮ್ಮ ಚಿಕ್ಕಂದಿನಿಂದಲೂ ಇತರರು ಹೇಳುವದನ್ನು ಕೇಳಿ ಬಂದ ಅನುಭವದಿಂದ ತಮಗೆ ಬಳಕೆಯಾದ ವಸ್ತುಗಳಲ್ಲಿ ಯಾವದಕ್ಕೆ ಪ್ರಾಣವಿರುತ್ತದೆ, ಯಾವದಕ್ಕೆ ಪ್ರಾಣವಿರುವದಿಲ್ಲವೆಂಬುದನ್ನು ತಿಳಿದುಕೊಂಡಿರುತ್ತಾರೆ. ಆದುದರಿಂದ ನಾವು ಮೊದಲು ಸಜೀವಿಗಳಿಗೂ ನಿರ್ಜೀವಿಗಳಿಗೂ ಇರುವ ವ್ಯತ್ಯಾಸಗಳನ್ನು ತಿಳಿದುಕೊಂಡು ನಂತರ ಸಸ್ಯಗಳ ವಿಚಾರವನ್ನು ನಡೆಸಬೇಕು. ಸಸ್ಯಗಳು ಸಜೀವ ವಸ್ತುಗಳೇ? ಅಲ್ಲವೆ? ಎಂಬುವ ವಿಚಾರದಲ್ಲಿ ಅನೇಕರಿಗೆ ದೃಢವಾದ ಅಭಿಪ್ರಾಯಗಳಿರುವದಿಲ್ಲ. ನಾಯಿ, ಬೆಕ್ಕು, ಎಮ್ಮೆ, ನೊಣ, ಇರುವೆ, ಇವುಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸ್ವೇಚ್ಛೆಯಾಗಿ ಸಂಚಾರ ಮಾಡುತ್ತಾ ನಮ್ಮ ಹಾಗೆಯೆ ಆಚರಿಸುವದರಿಂದ ಅವುಗಳನ್ನು ಜೀವವುಳ್ಳವುಗಳೆಂದು ಕರೆಯುತ್ತೇವೆ. ಮರಗಳಲ್ಲಿಯೂ ಔಷಧಿಗಳಲ್ಲಿಯೂ ಸಂಚಾರಶಕ್ತಿಯು ಇಲ್ಲದೆ ಇರುವದಲ್ಲದೆ, ಮೇಲೆ ಹೇಳಿದ ಪ್ರಾಣಿಗಳಲ್ಲಿ ಕಾಣುವ ಅನೇಕ ಲಕ್

ಣಗಳು ಸುಲಭವಾಗಿ ಗೋಚರವಾಗದೆ ಇರುವದರಿಂದ ಇವುಗಳನ್ನು ಪ್ರಾಣವಿಲ್ಲದವುಗಳೆಂದು ಭಾವಿಸುತ್ತಾರೆ. ನಾವು ಸರಿಯಾಗಿ ಪರಿಶೀಲಿಸಿ ಲಕ್ಷಿಸಿದರೆ ಗಿಡಗಳಿಗೆ ಪ್ರಾಣವಿರುತ್ತದೆ. ಮತ್ತು ಪದಾರ್ಥಗಳನ್ನು ಜೀವವುಳ್ಳವುಗಳೆಂದು ಹೇಳುವದಕ್ಕೆ ಈ ಸಂಚಾರಶಕ್ತಿಯನ್ನೇ ಮುಖ್ಯ ಕಾರಣವನ್ನಾಗಿ ಎಣಿಸುವದು ಸರಿಯಲ್ಲವೆಂದು ತಿಳಿಯಬರುವದು.

ಯಾವ ಲಕ್ಷಣಗಳಿಂದ ಒಂದು ಸಸ್ಯವನ್ನು ಸಜೀವ ವಸ್ತುವೆಂದು ತಿಳಿಯಬೇಕು ? ಇವುಗಳನ್ನು ತಿಳಿದುಕೊಳ್ಳಬೇಕಾದರೆ ಯಾವದಾದರೂ ಒಂದು ಗಿಡವನ್ನು ಮತ್ತು ಒಂದು ಕಲ್ಲಿನ ಚೂರನ್ನು ಲಕ್ಷಿಸಿ ಅವುಗ ಳಿಗೆ ಪರಸ್ಪರವಿರುವ ವ್ಯತ್ಯಾಸಗಳನ್ನು ಗಮನಿಸಬೇಕು.

ಇವೆರಡು ಒಂದೆಡೆಯಲ್ಲಿರುವಾಗ ನಾವು ಅವುಗಳನ್ನು ನೋಡಿ ದರೆ ನಮಗೆ ಸ್ಪಷ್ಟವಾಗುವದು ಏನಂದರೆ:—ಕಲ್ಲು ಎಲ್ಲಾ ಕಡೆಗಳಲ್ಲೂ ಒಂದೇ ತೆರನಾಗಿರುವದು. ಅದರಲ್ಲಿ ಒಂದು ಭಾಗಕ್ಕೂ ಮತ್ತೊಂದ ಭಾಗಕ್ಕೂ ಯಾವ ಭೇದವು ಕಾಣುವದಿಲ್ಲ. ಆದರೆ ಒಂದು ಗಿಡದಲ್ಲಿ ಭಾಗಗಳಿರುವವು. ಒಂದು ಭಾಗಕ್ಕೂ ಮತ್ತೊಂದು ಭಾಗಕ್ಕೂ ಇರು ಭೇದವು ಬಣ್ಣ ವ್ಯತ್ಯಾಸದಿಂದ ಗೋಚರವಾಗುವದು. (ಎಲೆ, ಪುಷ್ಪ ದಂಟು). ಕಲ್ಲಿನಲ್ಲಿ ಕಾಣದೆ ಇರುವ ಮತ್ತೊಂದು ಲಕ್ಷಣವು ಸಸ್ಯ ಇರುವದು. ಗಿಡಗಳಿಗೆ ಒಂದು ಬಗೆಯಾದ ಗೊತ್ತಾದ ಆಕಾರವಿ ವದು. ಇದರ ದೆಸೆಯಿಂದ ಆಯಾ ಜಾತಿಯ ಗಿಡಗಳು ಅವುಗಳ ಸ್ವಾಭಾವಿಕವಾದ ಆಕಾರವನ್ನೆ ಹೊಂದಿ ಕೆಲವು ಎತ್ತರವಾಗಿಯ ಕೆಲವು ಕುರುಚಲಾಗಿ ಒತ್ತಾಗಿಯೂ ಬೆಳೆಯುವವು. ಆದುದರಿ ಸಜೀವಿಗಳಲ್ಲಿ ಅಂಗರಚನೆಯ ಆಕಾರವಿಶೇಷವಿರುವದು ಒಂದು ಲ ಣವೆಂದು ಹೇಳಬಹುದು. ಒಂದು ಪ್ರಾಣಿಯ ಪ್ರತಿಯೊಂದು ಅಂಗವು ಒಂದು ನಿಯತವಾದ ಕೆಲಸವನ್ನು ಮಾಡುವಕ್ಕೆ ಏರ್ಪಟ್ಟಿರುವದು. ಈ ಅಂಗಗಳು ತಮ್ಮ ಕೆಲಸವನ್ನು ಸರಿಯಾಗಿ ಮಾಡುವದು ಮಾತ್ರವಲ್ಲದೆ ಅವು ಮಾಡುವ ಕೆಲಸಗಳಿಂದ ಪರಸ್ಪರ ಸಹಾಯವಾದರೆ ಪ್ರಾಣಿಯು ಬದುಕಿರುವದು. ಒಂದು ಪ್ರಾಣಿಯ ಮುಖ್ಯವಾದ ಅಂಗಗಳಲ್ಲಿ ಏನಾ ದರೂ ಅಪಾಯವಾದರೆ ಪ್ರಾಣಿಯ ಜೀವಕ್ಕೆ ತಡೆ ಬರುವದು. ಒಂದು ಸಸ್ಯದಲ್ಲಿ ಕಾಣುವ ಎಲೆಗಳೂ ಭೂಮಿಯಲ್ಲಿರುವ ಭಾಗವೂ ತಾವ

ಮಾಡಬೇಕಾದ ಕೆಲಸಗಳನ್ನು ಸರಿಯಾಗಿ ನಡೆಸಿದ ಹೊರತು ಸಸ್ಯವು ಬದುಕುವದಿಲ್ಲ.

ನಾವು ಅಂಗರಚನೆಯೇ ಸಜೀವಿಗಳಿಗೂ ನಿರ್ಜೀವಿಗಳಿಗೂ ಇರುವ ಮುಖ್ಯವಾದ ವ್ಯತ್ಯಾಸವೆಂದು ಹೇಳಲಾಗುವದಿಲ್ಲ. ಅನೇಕ ನಿರ್ಜೀವ ಪದಾರ್ಥಗಳಲ್ಲಿ ಒಂದು ಬಗೆಯ ಅಂಗರಚನೆಯಿರುವದಲ್ಲದೆ, ಆ ಅಂಗಗಳ ಕೆಲಸಗಳಿಂದ ಆ ಪದಾರ್ಥವು ಚಲನೆಯನ್ನು ಕೂಡ ಹೊಂದಿರುವದು; ಇದಕ್ಕೆ ನಿದರ್ಶನವಾಗಿ ರೈಲು ಮಾರ್ಗದಲ್ಲಿ ವೇಗವಾಗಿ ಓಡುವ ಹೊಗೆ ಬಂಡಿಯನ್ನು ಹೇಳಬಹುದು. ಹಾಗೆಯೆ ಕೆಲವು ನಿರ್ಜೀವ ಪದಾರ್ಥಗಳಿಗೆ ನಿಯುತವಾದ ಆಕಾರವು ಕೂಡ ಇರುವದು. ಸ್ಫಟಿಕ, ಉಪ್ಪು ಮೊದಲಾದ ವಸ್ತುಗಳು ದ್ರವ (ಪ್ರವಾಹ) ಪದಾರ್ಥವಾಗಿದ್ದು ಅವುಗಳಲ್ಲಿಯ ನೀರು ಹವೆಯಾಗಿ ಹೋದಾಗ ಘನರೂಪಕ್ಕೆ ಬರುವದು ಸರಿಯಷ್ಟೆ. ಅವು ಘನ ರೂಪಕ್ಕೆ ಬರುವಾಗ ಒಂದು ನಿರ್ಧರವಾದ ಆಕಾರವನ್ನೆ ಹೊಂದುವವು. ಇವುಗಳ ಆಕಾರದಲ್ಲಿ ಒಂದಂಶವನ್ನು ನಾವು ಲಕ್ಷಿಸಬಹುದು. ಇವೆಗಳಲ್ಲಿ ಕಾಣುವ ಮೂಲೆಗಳು, ಮೊನೆಗಳು ಬಹುಚೂಪಾಗಿಯೂ ಹರತವಾದವುಗಳಾಗಿಯೂ ಇರುತ್ತವೆ. ಆದುದರಿಂದ ನಾವು ಸಜೀವಿಗಳಿಗೂ ನಿರ್ಜೀವಿಗಳಿಗೂ ಇರುವ ವ್ಯತ್ಯಾಸಗಳಲ್ಲಿ ಅಂಗರಚನೆ ಮತ್ತು ಆಕಾರವನ್ನು ಮುಖ್ಯವಾದವೆಗಳೆಂದು ತಿಳಿಯಲಾಗುವದಿಲ್ಲ. ಅವುಗಳಿಗೆ ಪರಸ್ಪರವಿರುವ ನಿಸ್ಸಂಶಯವಾದ ಇತರ ವ್ಯತ್ಯಾಸಗಳನ್ನು ಲಕ್ಷಿಸಬೇಕು.

ಒಂದು ಕಲ್ಲಿನ ಚೂರನ್ನು ಒಂದು ಸ್ಥಳದಲ್ಲಿ ಹಾಕಿಟ್ಟರೆ, ಅದು ಎಷ್ಟು ದಿವಸಗಳಾದರೂ ಯಾವ ಬದಲಾವಣೆಯನ್ನು ಹೊಂದದೆ ಒಂದೇ ರೀತಿಯಲ್ಲಿರುವದು. ಇದನ್ನು ಯಾರಾದರೂ ಪ್ರಯತ್ನ ಪೂರ್ವಕವಾಗಿ ಒಡೆದು ತುಂಡುಗಳನ್ನಾಗಿ ಮಾಡಿದ ಹೊರತು, ಅಥವಾ ಹೆಚ್ಚಾದ ಮಳೆ ಬಿಸಿಲು, ವಾಯುತಗಳ ದಸೆಯಿಂದ ಕರಗಿದ ಹೊರತು ಯಾವ ವ್ಯತ್ಯಾಸವನ್ನು ಹೊಂದುವದಿಲ್ಲ.

ಗಿಡಗಳಾದರೋ, ಯಾವಾಗಲೂ ಒಂದೇ ರೀತಿಯಲ್ಲಿರದೆ, ಅಡಿಗಡಿಗೆ ಆಕಾರದಲ್ಲಿ ವ್ಯತ್ಯಾಸವನ್ನು ಹೊಂದಿ ಕಾಲಕಾಲಕ್ಕೂ ವೃದ್ಧಿಯಾಗಿ ಬೆಳೆಯುತ್ತಿರುವವು. ಅವುಗಳು ಬೆಳೆಯುವದಕ್ಕೆ ಆಧಾರವು ಯಾವ

ದೆಂದು ವಿಚಾರ ಮಾಡಿದರೆ ಅವುಗಳು ಭೂಮಿಯಿಂದಲೂ ಹವೆಯಿಂದಲೂ ತೆಗೆದುಕೊಳ್ಳುವ ಆಹಾರವೇ ಕಾರಣವೆಂದು ತಿಳಿಯುವದು. ಕೆಲವು ನಿರ್ಜೀವಿಗಳೂ ಕೂಡ ಒಂದು ವಿಧವಾದ ಬೆಳವಳಿಕೆಯನ್ನು ತೋರಿಸುತ್ತವೆ. ಮೇಲೆ ಹೇಳಿದ ಸ್ಫಟಿಕ, ಉಪ್ಪು ಮೊದಲಾದವುಗಳನ್ನು ನೀರಿನಲ್ಲಿ ಕರಗಿಸಿ ಶಾಕವಾದ ಒಂದು ಸ್ಥಳದಲ್ಲಿಟ್ಟಿದ್ದರೆ, ನೀರು ಸ್ವಲ್ಪ ಸ್ವಲ್ಪವಾಗಿ ಹವೆಯಾಗಿ ಹೋಗುತ್ತ, ಈ ಪದಾರ್ಥಗಳ ಅಣುಗಳು ಆಕಾರದಲ್ಲಿ ವೃದ್ಧಿ ಹೊಂದುತ್ತಾ ಬರುವವು. ಒಂದು ಪದರ ಮೇಲೆ ಮತ್ತೊಂದು ಪದರ ವಸ್ತುಗಳು ಸೇರುವದರಿಂದ ಈ ಪದಾರ್ಥಗಳ ವೃದ್ಧಿಯು ಹೊರಗೆ ನಡೆಯುವದು. ಸಜೀವಿಗಳ ಬೆಳವಳಿಕೆಯೋ ಎಂದರೆ, ಹೀಗೆ ಮೇಲೆ ಮೇಲೆ ವಸ್ತುಗಳು ಸೇರಿಸಲ್ಪಡುವದರಿಂದ ಉಂಟಾಗತಕ್ಕದ್ದಲ್ಲ. ಹೊಸ ವಸ್ತುಗಳು ಒಳಗೆ ಹೋಗಿ ಮೊದಲೇ ಒಳಗಿರುವ ವಸ್ತುಗಳಂತರಗಳಲ್ಲಿ ಸೇರಿಕೊಳ್ಳುವದರಿಂದ ಪ್ರಾಣಿಯು ವೃದ್ಧಿಯನ್ನು ಹೊಂದುವದು. ಆದುದುದರಿಂದ ಪ್ರಾಣಿಗಳ ಹೊರಗಿನ ಆಕಾರವು ದಿನೇ ದಿನೇ ವೃದ್ಧಿ ಹೊಂದಿದರೂ ಅದರ ಕ್ರಮವು ಮೊದಲಿನಿಂದ ಕೊನೆಯವರೆಗೂ ಒಂದೆ ಸಮನಾಗಿರುವದು. ಪ್ರಾಣಿಗಳು ಪ್ರತಿ ನಿಮಿಷದಲ್ಲಿ ಕೆಲಸ ಮಾಡುತ್ತಿರುವದರಿಂದ ಅವುಗಳ ದೇಹದ ವಸ್ತುಗಳು ಹವೆಯಲ್ಲಿರುವ ಆಮ್ಲ ಜನಕದೊಡನೆ ಸಂಯೋಗವಾಗಿ ಕ್ಷೀಣವಾಗುತ್ತಿರುವವು. ಈ ಕ್ಷಯವನ್ನು ಸರಿಮಾಡುವ ಉದ್ದೇಶದಿಂದ ಪ್ರಾಣಿಗಳು ಆಹಾರವನ್ನು ತೆಗೆದುಕೊಳ್ಳುತ್ತವೆ. ಅವು ತೆಗೆದುಕೊಳ್ಳುವ ಆಹಾರಪದಾರ್ಥಗಳು ಬದಲಾವಣೆಯನ್ನು ಹೊಂದಿ ಮಾಂಸರೂಪವಾಗಿ ಪರಿಣಮಿಸುವದರಿಂದ ಅವು ಬೆಳೆಯುವದಕ್ಕೆ ಅವಕಾಶವಾಗುವದು. ಒಂದು ಗಿಡವು ಪೂರ್ಣವಾಗಿ ಬೆಳೆದನಂತರ ಅದರಲ್ಲಿ ಮತ್ತೊಂದು ವಿಶೇಷವಾದ ಶಕ್ತಿಯು ಕಾಣುವದು. ಅದರಲ್ಲಿ ಪುಷ್ಪಗಳು ಬಿಟ್ಟು, ಇವು ಫಲಗಳಾಗಿ ಕೊನೆಗೆ ಬೀಜಗಳನ್ನು ಕೊಡುವವು. ಆ ಬೀಜಗಳನ್ನು ನಾವು ಸರಿಯಾದ ಕ್ಷೇತ್ರದಲ್ಲಿ ನಟ್ಟರೆ ಅನೇಕ ಗಿಡಗಳು ಹುಟ್ಟುವವು. ಅಂದರೆ, ಪ್ರಾಣಿಗಳು ತಮ್ಮಂತಿರುವ ವಸ್ತುಗಳನ್ನುತ್ಪತ್ತಿ ಮಾಡುವ ಶಕ್ತಿಯನ್ನು ಹೊಂದಿರುತ್ತವೆ. ಈ ಶಕ್ತಿಯು ನಿರ್ಜೀವಿಗಳಿಗೆ ಇರುವದಿಲ್ಲ.

ಮನುಷ್ಯರ ಸುಖದುಃಖಗಳು ಮನುಷ್ಯರ ಕೈಯ್ಯಲ್ಲಿಯೇ ಇರುವವು.

ಪ್ರಾರಬ್ಧವಾದಿಗಳು ಶಿರೋಲೇಖದಲ್ಲಿ ಹೇಳಿದ ವಿಚಾರವನ್ನು ಸಮ್ಮತಿಸುವದಿಲ್ಲ. ಅವರು ಹಲವು ಆಕ್ಷೇಪಗಳನ್ನು ತೋರಿಸುವರು. ಅವರು ಹೇಳುವದೇನಂದರೆ:—

ನಮ್ಮ ಸುಖದುಃಖಗಳು ನಮ್ಮ ಕೈಯ್ಯಲ್ಲಿಯೇ ಇರುತ್ತಿದ್ದರೆ ಜಗತ್ತಿನಲ್ಲಿ ಪ್ರಾಕ್ತನ, ಕರ್ಮ, ಕಾಲ, ಹಾಗು ಈಶ್ವರ ಇವೆಲ್ಲ ಏನು ಮಾಡುವವು? ಇವೆಲ್ಲ ಸುಳ್ಳೆಂದು ಹೇಳಬಹುದೇ? ಹಾಗೆ ಎಂದಿಗೂ ಆಗಲಾರದು. ಮೇಲೆ ಹೇಳಿದ ನಾಲ್ಕು ಶಕ್ತಿಗಳಿಂದಲೇ ಜಗಚ್ಚಕ್ರಕ್ಕೆ ಗತಿಯುಂಟಾಗುವದು. ಈಶ್ವರನ ಇಚ್ಛೆಯ ವಿರುದ್ಧವಾಗಿ ಈ ಜಗತ್ತಿನಲ್ಲಿ ಒಂದು ಕಡ್ಡಿಯು ಸಹ ಚಲಿಸಲಾರದು. ಪ್ರಾರಬ್ಧವಶದಿಂದ ಒದಗಬಹುದಾದ ಸುಖದುಃಖಗಳನ್ನು ಮನುಷ್ಯರು ಅನುಭವಿಸಲೇ ಬೇಕಾಗುವದು. ಅವುಗಳನ್ನು ತಪ್ಪಿಸಲು ಯಾರಿಗೂ ಸಾಧ್ಯವಿಲ್ಲ. ಈ ವಿಷಯದಲ್ಲಿ ಮನುಷ್ಯನು ಕೇವಲ ಪರತಂತ್ರನಾಗಿರುವನು. ಮನುಷ್ಯನು ಪ್ರಕೃತಿಗೆ ಅಧೀನನಾಗಿರುವನೆಂದು ಪೂರ್ವದ ಆಚಾರ್ಯರು ಹೇಳುತ್ತ ಬಂದಿರುವರು. ಆದರೆ ಸಾಂಪ್ರತದ ಸುಧಾರಣೆಯ ಕಾಲದೊಳಗಿನ ಮಾನಸಶಾಸ್ತ್ರಜ್ಞರೆಂಬ ಮಹಾಪಂಡಿತರು ನಮ್ಮ ಸುಖದುಃಖಗಳ ಮೂಲವು ನಮ್ಮಲ್ಲಿಯೇ ಇರುವದೆಂದು ಪ್ರತಿಪಾದಿಸುವರು; ಹಾಗು ಇಲ್ಲದ ಅಟ್ಟಹಾಸವನ್ನು ಮೆರೆಯಿಸುವರು. ಅವರು ಹೇಳುವಂತೆ ಸುಖದುಃಖಗಳನ್ನು ಒದಗಿಸಿಕೊಳ್ಳುವದು ನಮ್ಮ ಕೈಯ್ಯಲ್ಲಿಯೇ ಇದ್ದದ್ದಾದರೆ ಜಗತ್ತಿನಲ್ಲಿ ದುಃಖವೇ ಇರುತ್ತಿದ್ದಿಲ್ಲ. ಈ ಸಂಸಾರದಲ್ಲಿ ಕಷ್ಟವನ್ನು ಯಾರು ಬಯಸುವರು? ಆದರಂತೆ ತಮಗೊದಗಬಹುದಾದ ಸಂಕಟಗಳನ್ನು ಕಳೆದುಕೊಳ್ಳಲು ಯತ್ನಿಸದೆ ಸುಮ್ಮನೆ ಇರುವವರಾದರೂ ಯಾರು? ಹೀಗಿದ್ದು ಮನುಷ್ಯನ ಇಚ್ಛೆಯ ವಿರುದ್ಧವಾಗಿ, ಅವನ ಸಕಲಪ್ರಯತ್ನವನ್ನು ಮೀರಿ, ಸಂಕಟಗಳೂ ಅಪಯಶವೂ ಅವನನ್ನು ಆವರಿಸುವವು. ಇಂಥ ಸಾವಿರಾರು ಉದಾಹರಣೆಗಳನ್ನು ನಾವು ಕಣ್ಣಾರೆ ಕಂಡು ಕಂಡು ಇಚ್ಛಾ

ಶಕ್ತಿಯೂ ಮನುಷ್ಯಪ್ರಯತ್ನವೂ ಹೆಚ್ಚಿನವೆಂತಲೂ ಅದೃಷ್ಟಾದಿ ವಿಚಾರಗಳು ಕೇವಲ ಕಲ್ಪಿತವೆಂತಲೂ ನಂಬುವ ಬಗೆ ಹ್ಯಾಗೆ?

ಅದೃಷ್ಟವಾದಿಗಳ ಈ ವಿಚಾರಗಳಿಗೆ ಹೇಳಬಹುದಾದ ಉತ್ತರಗಳನ್ನು ಇನ್ನು ಮುಂದೆ ಸಂಕ್ಷಿಪ್ತವಾಗಿ ಹೇಳುವೆವು. ಪ್ರತಿಯೊಂದು ಮಾತನ್ನು ಸಾಧಾರಣವಾಗಿ ಸಾಧಿಸಿ ತೋರಿಸಲು ಸ್ಥಳಕಾಲಗಳ ಅನುಕೂಲತೆ ಇಲ್ಲದಿರುವದರಿಂದ ಮುಖ್ಯ ಶಾಸ್ತ್ರೀಯ ತತ್ವಗಳನ್ನಷ್ಟೇ ಇಲ್ಲಿ ವಿವೇಚಿಸುವೆವು.

ಜಗತ್ತಿನೊಳಗಿನ ಮಹಾಪುರುಷರು ಹೇಳಿರುವ ಹಾಗು ಹೇಳುತ್ತಿರುವ ಪ್ರಮಾಣವಾಕ್ಯಗಳು ಒಂದು ಕಿವಿಯಿಂದ ಕೇಳಿ ಮತ್ತೊಂದು ಕಿವಿಯಿಂದ ಬಿಟ್ಟುಬಿಡುವ ಜನರ ಸಲುವಾಗಿಯಲ್ಲ; ಅವುಗಳನ್ನು ಕೇಳಿ ತಿಳಿದುಕೊಂಡು ಅದರಂತೆ ಆಚರಿಸಲು ಯತ್ನಿಸುವಂಥ ಕರ್ತವ್ಯಪರರಾದ ಶ್ರೇಷ್ಠ ಜನರ ಸಲುವಾಗಿ ಇರುವವು. ಈ ಮಾತನ್ನು ಯಾವಾಗಲೂ ಲಕ್ಷದಲ್ಲಿಟ್ಟಿರಬೇಕು. ಆ ಮಹಾಪುರುಷರು ಬೇರೆ ಬೇರೆ ಯೋಗ್ಯತೆಯ ಜನರ ತಿಳುವಳಿಕೆಗಾಗಿ ಬೇರೆ ಬೇರೆ ಅಭ್ಯಸನಗಳನ್ನು ಕಲ್ಪಿಸಿ ಬೋಧಿಸಿದರೂ ಆ ಎಲ್ಲ ಅಭ್ಯಸನಗಳು ಒಂದೇ ಮೂಲ ಸಿದ್ಧಾಂತವನ್ನು ಆಶ್ರಯಿಸಿ ಇರುವವು. ಅದರಿಂದ ಒಂದು ತತ್ವದ ವಿಷಯವಾಗಿ ಬೇರೆಬೇರೆ ಸಾಧು ಪುರುಷರ ವಾಕ್ಯಗಳಲ್ಲಿ ಬಹಿರಂಗದಲ್ಲಿ ಭಿನ್ನತ್ವವು ಕಂಡು ಬಂದರೂ ಹೆಚ್ಚು ಸೂಕ್ಷ್ಮದೃಷ್ಟಿಯಿಂದ ನಿರೀಕ್ಷಿಸಿ ನೋಡಿದರೆ ಅಂತರಂಗದಲ್ಲಿ ಅವೆಲ್ಲ ಒಂದೇ ಆಗಿರುವವೆಂಬದು ಕಂಡುಬರುವದು.

"ಸರ್ವವೂ ಈಶ್ವರಾಧೀನವಾಗಿರುವದು" ಎಂಬ ಸಿದ್ಧಾಂತವು "ನಮ್ಮ ಸುಖದುಃಖಗಳು ನಮ್ಮ ಕೈಯ್ಯಲ್ಲಿಯೇ ಇರುವವು," ಎಂಬ ಸಾಧುವಾಕ್ಯದಿಂದ ಭಿನ್ನವಾಗಿಲ್ಲ. ಜೀವನೂ ಪರಮಾತ್ಮನೂ ಒಂದೇ —

"ईश्वरः सर्वभूतानां हृद्देशेऽर्जुनतिष्ठति"

ಎಂದು ಭಗವಂತನು ಹೇಳಿರುವನು. ಇಷ್ಟೇ ಅಲ್ಲ; ಈಶ್ವರ, ಪ್ರಾಕ್ತನ, ಕರ್ಮ, ಹಾಗು ಕಾಲ ಇವು ಮನುಷ್ಯನ ಅಭೀಷ್ಟಸಿದ್ಧಿಗಾಗಿಯೇ ಜಗತ್ತಿನಲ್ಲಿ ಉಂಟಾಗಿರುವವು.

ಈ ಎಲ್ಲ ವಿಚಾರಗಳನ್ನು ಸಾಧಿಸಿ ತೋರಿಸಲು ಪ್ರಕೃತಕ್ಕೆ ಅನುಕೂಲವಿಲ್ಲ. ಮಾನಸಶಾಸ್ತ್ರ, ಯೋಗಶಾಸ್ತ್ರ, ಹಾಗು ಅಧ್ಯಾತ್ಮಿಕ ಶಾಸ್ತ್ರ ಇವುಗಳನ್ನು ಅಭ್ಯಾಸಿಸಿದ ಮಹನೀಯರು ಈ ಶಾಸ್ತ್ರಗಳಿಗೆ ಸಂಬಂಧಿಸಿದ ಆಯಾ ಭಾಗಗಳನ್ನು ಸಮ್ಮತಿಸಿರುವರು. ಹಾಗು ಈ ಶಾಸ್ತ್ರಗಳ ಸಿದ್ಧಾಂತಗಳ ಆಧಾರದಿಂದಲೇ "ಮನುಷ್ಯನ ಸುಖದುಃಖಗಳು ಮನುಷ್ಯನ ಕೈಯ್ಯಲ್ಲಿಯೇ ಇರುವವು," ಎಂಬ ಪ್ರಕೃತ ಪ್ರಮೇಯವು ಸ್ಥಾಪಿತವಾಗುವದು. ಭಗವಾನ್ ವ್ಯಾಸರು ಹೇಳಿರುವದೇನಂದರೆ—

नायं जनोमे सुखदुःखहेतुर्नदेवतात्माग्रहकर्मकालाः । मनःपरं कारणमामनंति संसारचक्रं परिवर्तयेद्यत् ॥ १ ॥

ಶ್ರೀಮದ್ಭಾಗವತ.

[ಯಾವತ್ತು ಲೋಕ, ದೇವತೆಗಳು, ಗ್ರಹ, ಕರ್ಮ, ಹಾಗು ಕಾಲ ಇವು ಸುಖದುಃಖಗಳನ್ನು ಕೊಡಲಿಕ್ಕೆ ಎಷ್ಟುಮಾತ್ರವೂ ಕಾರಣವಲ್ಲ; ಈ ಸಂಸಾರಚಕ್ರದಲ್ಲಿ ನಮಗೆ ಸುಖದುಃಖಗಳನ್ನು ಕೊಡಲಿಕ್ಕೆ ನಮ್ಮ ಮನಸ್ಸೇ ಕಾರಣವು.]

ಇಂತಹ ಮನಸ್ಸನ್ನು ಪರಮಾತ್ಮನು ಅವರವರ ಇಚ್ಛೆಯ ಮೇರೆಗೆ ಸುಖದುಃಖಗಳನ್ನು ದೊರಕಿಸಿಕೊಳ್ಳುವದಕ್ಕಾಗಿಯೇ ನಿರ್ಮಿಸಿರುವನು. ಹೀಗಿದ್ದು ಪ್ರತಿಯೊಬ್ಬರೂ ಈ ಮನಸ್ಸಿನ ಸಹಾಯದಿಂದ ಕೇವಲ ಸುಖವನ್ನು ಬಯಸುತ್ತಿದ್ದರೂ, ಆ ಸುಖವನ್ನು ದೊರಕಿಸಿಕೊಳ್ಳುವ ಶಕ್ತಿಯು ಅವರಲ್ಲಿ ಇದ್ದರೂ, ಅವರ ಎಲ್ಲ ಇಚ್ಛೆಗಳೂ ಪೂರ್ಣವಾಗದೆ ಅವರು ಸಂಕಟಕ್ಕೂ ಅಪಯಶಕ್ಕೂ ಗುರಿಯಾಗಲು ಕಾರಣವೇನು? ಈ ಪ್ರಶ್ನೆಯನ್ನು ಮಾನಸಶಾಸ್ತ್ರದ ಸಿದ್ಧಾಂತಗಳ ಸಹಾಯದಿಂದ ಬಿಡಿಸಿದರೆ, ಮನುಷ್ಯನ ಇಚ್ಛೆಯು ಪೂರ್ಣವಾಗದೆ ಅಪಯಶಸ್ಸೂ ದುಃಖವೂ ಉಂಟಾಗಲಿಕ್ಕೆ ಅವನ ಅಜ್ಞಾನವು ಅಥವಾ ಅಪರಾಧವು ಕಾರಣವಾಗಿರುವದಲ್ಲದೆ ಬೇರೆ ಯಾವದೂ ಕಾರಣವಲ್ಲವೆಂಬ ಪ್ರಮೇಯವು ನಿಷ್ಪನ್ನವಾಗುವದು. ಇಂತಹ ಅಜ್ಞಾನಾಪರಾಧಗಳು ಯಾವವೆಂಬವನ್ನು ಯೋಚಿಸುವ.

(೧) ಈ ಸಂಸಾರದಲ್ಲಿ ವಾಸಿಸುವ ಪ್ರತಿಯೊಬ್ಬ ಮನುಷ್ಯನಿಗೂ ತಾನು ಸುಖವನ್ನು ಪಡೆಯಬೇಕೆಂಬ ಅಭಿಲಾಷೆಯು ಇದ್ದೇ ಇರುವದು. ಆದರೆ ಆ ಅಭಿಲಾಷೆಯನ್ನು ಹ್ಯಾಗೆ ಮಾಡಬೇಕೆಂಬದು ಮಾತ್ರ ಅವನಿಗೆ ಸರಿಯಾಗಿ ತಿಳಿದಿರುವದಿಲ್ಲ. ಅದರಿಂದ ಅವನಿಗೆ ಮೊದಲು ತನ್ನ ಇಷ್ಟಸಿದ್ಧಿಯ ಸರಿಯಾದ ಕಲ್ಪನೆಯೇ ಆಗುವದಿಲ್ಲ. ಹೀಗಾಗಿ ಅವನು ಹೊಂದಬೇಕಾಗಿರುದ ಧ್ಯೇಯದ ಸ್ವರೂಪವೂ ಆಕಾರವೂ ಅವನ ಮನಸಿನಲ್ಲಿ ಸ್ಪಷ್ಟವಾಗಿ ಬಿಂಬಿಸುವದಿಲ್ಲ. ಅರ್ಥಾತ್, ಅವನ ಧ್ಯೇಯವು ಅಸ್ಪಷ್ಟವೂ ಅನಿಶ್ಚಿತವೂ ಆಗುವದರಿಂದ ಆ ಇಚ್ಛೆಯ ವಿಷಯವಾಗಿ ಮಾನಸಿಕ ಶಕ್ತಿಯ ಕೇಂದ್ರೀಕರಣವು ಸರಿಯಾಗಿ ಆಗದಂತಾಗುವದು.

(೨) ಇಚ್ಛಾಶಕ್ತಿಯ ಪರಿಣಾಮವು ಸರಿಯಾಗಿ ನಡೆಯಲಿಕ್ಕೆ ಅವಶ್ಯವಾಗಿರುವ ಧ್ಯೇಯದ ಆಕಾರವೂ ಕಲ್ಪನೆಯೂ ಒಂದು ವೇಳೆ ಸಂಪೂರ್ಣವಾಗಿ ಉಂಟಾಗದೆ ಇದ್ದರೂ, ಅದರ ಅಂಶತ: ಕಲ್ಪನೆಗಳಾದರೂ ಮನಸಿನಲ್ಲಿ ಸ್ಥಿರವಾಗಿ ಉಳಿದಿದ್ದರೆ ಆ ಕಾರ್ಯವು ಕಾಲಾಂತರದಲ್ಲಿಯಾದರೂ ಸಾಧಿಸುವ ಸಂಭವವಿರುವದು. ಆದರೆ ಆ ಇಷ್ಟಸಿದ್ಧಿಯ ಅಸ್ಪಷ್ಟವಾದ ಕಲ್ಪನೆಯು ಸಹ ಮನಸ್ಸಿನಲ್ಲಿ ಸ್ಥಿರವಾಗಿ ಉಳಿಯುವದಿಲ್ಲ.

(೩) ಇಷ್ಟಸಿದ್ಧಿಯು ತೀವ್ರವಾಗಿ ಸಾಧಿಸುವದಕ್ಕಾಗಿ ತನ್ನ ಧ್ಯೇಯದ ಮೇಲೆ ಇಚ್ಛಾಶಕ್ತಿಯನ್ನು ಬಲವಾಗಿ ಪ್ರೇರೇಪಿಸಿ ಅದನ್ನು ತೀವ್ರವಾಗಿ ಆಕರ್ಷಿಸಿಕೊಳ್ಳುವದಕ್ಕೂ, ಧ್ಯೇಯದ ಅಸ್ಪಷ್ಟವಾದ ಆಕಾರ ಕಲ್ಪನೆಗಳನ್ನಾದರೂ ಮನಸ್ಸಿನಲ್ಲಿ ಸ್ಥಿರವಾಗಿಟ್ಟುಕೊಂಡು ಅದನ್ನು ಕಾಲಾಂತರದಲ್ಲಿ ಸಾಧಿಸಿಕೊಳ್ಳಲಿಕ್ಕೂ ಬಹು ಜನರಿಗೆ ಬರುತ್ತಿರುವದಿಲ್ಲ. ಇರಲಿ. ಹೀಗಿದ್ದರೂ ಒಂದು ವೇಳೆ ನಡೆದೀತು. ಕಾರ್ಯಪೂರ್ಣತೆಯ ಕಾಲ್ಪನಿಕ ಆಶೆಯಾದರೂ ಮನಸ್ಸಿನಲ್ಲಿ ಸರಿಯಾಗಿ ಉಳಿದಿದ್ದರೆ ಅದಕ್ಕೆ ಇಚ್ಛಾಶಕ್ತಿಯ ಸ್ವರೂಪವುಂಟಾಗಿ ಕಾರ್ಯದಲ್ಲಿ ಒಂದು ವೇಳೆ ಯಶವು ದೊರೆಯುವ ಸಂಭವವಿರುವದು. ಆದರೆ ಇಂತಹ ಯೋಗ್ಯ ಪ್ರಕಾರದ ಸಂಕಲ್ಪಸಿದ್ಧಿಯ ಸ್ಥಿರವೂ ನಿಶ್ಚಿತವೂ ಆದ ಆಶೆಯು ಸಹ ಮನಸಿನಲ್ಲಿ ಸ್ಥಿರವಾಗಿ ಉಳಿಯುವದಿಲ್ಲ.

ಈ ಮೂರು ಕಾರಣಗಳಿಂದ ಇಷ್ಟಸಿದ್ಧಿಯು ಸಾಧಿಸಲಿಕ್ಕೆ ಪ್ರತಿಬಂಧವಾಗುವದು. ಆದರೆ ಇವೆಲ್ಲಕ್ಕಿಂತ ಭಯಂಕರವಾದದ್ದೊಂದು ಅಪರಾಧವು ಮನಸಿನಲ್ಲಿ ಘಟಿಸಿ ಇಷ್ಟಸಿದ್ಧಿಯ ಅಂಕುರವನ್ನೇ ಕೊಂದು ಬಿಡುವದು.

(೪) ನಮಗೆ ನಮ್ಮ ಹೇತುವಿನ ಪೂರ್ಣಜ್ಞಾತೆಯ ವಿಷಯವಾಗಿ (೧) ಸರಿಯಾದ ಆಶೆಯು ಉಂಟಾಗದೆ ಇದ್ದರೂ, (೨) ಧ್ಯೇಯದ ಸ್ಪಷ್ಟವಾದ ಆಕಾರಕಲ್ಪನೆಗಳು ಮನಸಿನಲ್ಲಿ ಬಿಂಬಿಸದೆ ಇದ್ದರೂ, (೩) ಇಚ್ಛಾಶಕ್ತಿಯ ಪ್ರೇರಣೆಯು ಸತತವಾಗಿ ನಡೆಯದೆ ಇದ್ದರೂ, (೧) ಮೊದಲು ಉಂಟಾಗಿದ್ದ ಆಶೆಯ ಭಾವನೆಯಿಂದಲೂ (೨) ಆ ಆಶೆಯ ಅಸ್ಪಷ್ಟವಾದ ಆಕಾರಕಲ್ಪನೆಗಳಿಂದಲೂ (೩) ಇಚ್ಛಾಶಕ್ತಿಯ ಬಿಟ್ಟು ಬಿಟ್ಟು ಉಂಟಾಗುತ್ತಿರುವ ಕಾರ್ಯವನ್ನು ಮಾಡುವ ಆವೇಶದಿಂದಲೇ ಆದರೂ ನಮ್ಮ ಉದ್ದೇಶವು ಸಾಧಿಸುವ ಸಂಭವವಿರುವದು. ಆದರೆ ಮಾನಸಶಾಸ್ತ್ರದ ಜ್ಞಾನದ ಅಭಾವದ ಮೂಲಕವಾಗಿ ನಮ್ಮ ಮಾನಸಿಕ ಶಕ್ತಿಯು ಕಾರ್ಯದ ಸಾಧನೆಗೆ ಸಹಾಯಮಾಡುವದರ ಬದಲಾಗಿ ಅದಕ್ಕೆ ಮತ್ತಷ್ಟು ವಿಘ್ನವನ್ನೇ ಉಂಟುಮಾಡುವದು. ಅದು ಹ್ಯಾಗಂದರೆ:—

(ಅ) ಯಾವದಾದರೊಂದು ಸುಖದ, ಇಷ್ಟಪ್ರಸಂಗಪ್ರಾಪ್ತಿಯ ಪರಿಸ್ಥಿತಿಯು, ಅಥವಾ ವಸ್ತುಲಾಭದ ಆಶೆಯು ಉಂಟಾದಾಗ, ಅದರ ಬೆನ್ನ ಹಿಂದೆಯೇ, ಅಂದರೆ ಇಷ್ಟಸಿದ್ಧಿಕಾರಕವಾದ ಅಸ್ಪಷ್ಟವಾದ ಪ್ರಕಾಶದ ಕಿರಣಗಳ ಹಿಂದೆಯೇ ನಿರಾಶೆಯ ಘನಕೃಷ್ಣವರ್ಣದ ಮೋಡಗಳು ಒಂದರ ಹಿಂದೊಂದು ಸಾಲುಗಟ್ಟಿ ಮುಂದೆ ಬರುವವು. ಹಾಗು,

(ಬ) ಆ ಉಂಟಾದ ಧ್ಯೇಯದ ಆಕಾರಕಲ್ಪನೆಗಳನ್ನು ಅವು ಬೇಕು ಹಾಗೆ ಅವ್ಯವಸ್ಥಿತವಾಗಿಯೇ ಇರಲೊಲ್ಲವೇಕೆ? ಅವುಗಳನ್ನು ವ್ಯವಸ್ಥೆಗೊಳಿಸಿ ಹೆಚ್ಚು ಸ್ಪಷ್ಟ ಮಾಡಲಿಕ್ಕೆ ಯತ್ನಿಸುವದರ ಬದಲಾಗಿ, ನಾವು ಮನಸಿನಲ್ಲಿ ಕುಕಲ್ಪನೆಯೆಂಬ ಹೊಸದೊಂದು ರಾಕ್ಷಸೀ ಆಕೃತಿಯನ್ನು ಹುಟ್ಟಿಸಿಕೊಂಡು ಆ ಆಕೃತಿಯಿಂದ ಮೊದಲಿನ ಕಲ್ಪನೆಗಳನ್ನು ಮತ್ತಷ್ಟು ಕೆಡಿಸಿ ಬಿಡುವೆವು. ಹಾಗು,

(ಕ) ಅವ್ಯವಸ್ಥಿತವಾದ ಅಸ್ಪಷ್ಟವಾದ ಇಚ್ಛಾಶಕ್ತಿಯು ಕಟ್ಟುತ್ತಿರುವ ಭಾವೀ ಇಷ್ಟಸಿದ್ಧಿಮಂದಿರದ ರಚನೆಯು ಭದ್ರವಾಗುವಂತೆ ಮಾಡ

ಲು ಸಹಾಯ ಮಾಡುವದಕ್ಕಾಗಿ ಇಚ್ಛಾಶಕ್ತಿಯು ಹೊಸ ಹೊಸ ಪ್ರವಾಹಗಳನ್ನು ಕಳುಹಿಸುವದರ ಬದಲಾಗಿ, ಮೊದಲಿದ್ದ ಅಲ್ಪಸ್ವಲ್ಪ ಇಚ್ಛಾಶಕ್ತಿಯನ್ನೂ ಕುಕಲ್ಪನೆಯೆಂಬ ರಾಕ್ಷಸಿಯ ವಶಮಾಡಿ ಧ್ಯೇಯಮಂದಿರವನ್ನು ನಿರಾಶೆಯ ಅಂಧಕಾರದಲ್ಲಿ ತಳ್ಳಿಬಿಡುವೆವು; ಹಾಗು ಭಾವೀ ಸುಖದ ಅಥವಾ ಸುಖಮಯವಾದ ಪ್ರಸಂಗವನ್ನು ಸಮೂಲ ನಾಶ ಮಾಡಿಕೊಂಡು ದುಃಖದ ಹಾಗು ಚಿಂತೆಯ ಪರ್ವತವನ್ನು ನಾವೇ ನಮ್ಮ ಮೇಲೆ ಕೆಡವಿಕೊಳ್ಳುವೆವು.

ಈ ರೀತಿಯಾಗಿ ನಾವು ಸುಖವನ್ನು ಇಚ್ಛಿಸಿ ಒಂದು ಮಾರ್ಗದಿಂದ ಪ್ರಯತ್ನ ಮಾಡುತ್ತಿದ್ದಾಗ ಇನ್ನೊಂದು ಮಾರ್ಗದಿಂದ ಅದನ್ನು ಕೆಡಿಸುವ ಕಾರ್ಯವನ್ನು ನಡಿಸುತ್ತಿರುವೆವು. ಅದರಿಂದ ಮನಸ್ಸಿನ ಬಯಕೆಯು ಪೂರ್ಣವಾಗದೆ ಇರಲಿಕ್ಕೂ ಸಂಕಟವೆಂಬ ಶತ್ರುವು ನಮ್ಮ ಮೇಲೆ ಏರಿ ಬರುವದಕ್ಕೂ ನಾವೇ ಕಾರಣರಾಗುವೆವು.

ಆದ್ದರಿಂದ ಸುಖವನ್ನು ಬಯಸುವಂಥ ಪ್ರತಿಯೊಬ್ಬ ಮನುಷ್ಯನು ಮನಸಿನಲ್ಲಿ ಸುಖದ ಅಭಿಲಾಷೆಯು ಜಾಗ್ರತ ಹೊಂದಿದಾಗ, ಅದರಲ್ಲಿ ಕರ್ತೃತ್ವಶಕ್ತಿಯನ್ನು ಹುಟ್ಟಿಸುವದಕ್ಕಾಗಿ ಅದಕ್ಕೆ ಆ ಧ್ಯೇಯದ ಪೂರ್ಣತೆಯ ಸ್ವರೂಪವನ್ನು ಕೊಟ್ಟು, ಎರಡನೇ ಕಾರ್ಯಗಳ ಕಡೆಗೆ ವ್ಯರ್ಥವಾಗಿ ವ್ಯಯವಾಗುತ್ತಿರುವ ಮನಸಿನ ಶಕ್ತಿಗಳನ್ನು ಆ ಕಡೆಯಿಂದ ಬುದ್ಧಿಪೂರ್ವಕವಾಗಿ ತಿರುಗಿಸಿಕೊಂಡು, ಆ ಕಲ್ಪನಾಪೂರ್ಣವಾದ ಸುಖಾನುಭವದ ಸಂಗಡ ತಾದಾತ್ಮ್ಯವುಂಟಾಗುವಂತೆ ಮಾಡಬೇಕು. ಆಗ ಆ ಬಾಹ್ಯ ಮನಸ್ಸಿಗೂ ಶುದ್ಧ ಸತ್ವಗುಣಯುಕ್ತವಾದ ಅಂತರಾತ್ಮನಿಗೂ ಸಂಬಂಧವುಂಟಾಗಿ ಅದರ ಸಾಮರ್ಥ್ಯದಿಂದ ಸೂಕ್ಷ್ಮ ಜಗತ್ತಿನೊಳಗಿನ ಅವ್ಯಕ್ತವಾಗಿದ್ದ ಧ್ಯೇಯಕ್ಕೆ ಮೂರ್ತಸ್ವರೂಪವುಂಟಾಗುವದು; ಹಾಗು ಬಾಹ್ಯ ಸೃಷ್ಟಿಯೊಳಗಿನ ನಮ್ಮ ಧ್ಯೇಯವು ಪೂರ್ಣವಾಗುವದು.

ಈ ರೀತಿಯಾದ ಮಾನಸಶಾಸ್ತ್ರದ ಸಿದ್ಧಾಂತದ ಜ್ಞಾನದಿಂದ ನಮ್ಮ ಮೇಲೆ ಬರುವ ಸಂಕಟಗಳನ್ನು ತಪ್ಪಿಸಿಕೊಳ್ಳಲಿಕ್ಕೂ ನಮ್ಮ ಇಚ್ಛಿತಧ್ಯೇಯವನ್ನು ಸಾಧಿಸಿಕೊಳ್ಳಲಿಕ್ಕೂ ಬೇಕಾಗಿರುವ ಸಾಮರ್ಥ್ಯವು ನಮ್ಮಲ್ಲಿ ಇರುವದೆಂದು ಗೊತ್ತಾಗುವದು. ಇಂತಹ ಸಂಪೂರ್ಣವಾದ

ಸಾಮರ್ಥ್ಯವು ನಮ್ಮಲ್ಲಿ ಇರುವದೆಂಬ ದೃಢವಾದ ಆತ್ಮವಿಶ್ವಾಸವನ್ನು ಮನಸಿನಲ್ಲಿ ಯಾವಾಗಲೂ ಜಾಗ್ರತವಾಗಿಯೇ ಇಟ್ಟುಕೊಂಡಿರತಕ್ಕದ್ದು.

ರಾಮಾಯಣ ಮಹಾಭಾರತ ಕಾಲಗಳು.

(ಬರೆದು ಬಂದದ್ದು)

ನಮ್ಮ ಪುರಾಣಗಳಲ್ಲಿ ರಾಮಾಯಣಕಾಲವು ಮೊದಲಿನದೆಂದೂ, ಮಹಾಭಾರತಕಾಲವು ಹಿಂದುಗಡೆಯದೆಂದೂ ಹೇಳಿರುತ್ತದಷ್ಟೆ? ಇದಕ್ಕೆ ವಿಪರೀತವಾಗಿ ಈಗಿನ ಇತಿಹಾಸಗಳು ಮಹಾಭಾರತಕಾಲವು ಮೊದಲಿನದೆಂದೂ, ರಾಮಾಯಣಕಾಲವು ಈಚೆಗಿನದೆಂದೂ ಹೇಳುತ್ತಿರುವವು. ಹೀಗೆ ಇವೆರಡರಲ್ಲಿ ವಿರುದ್ಧ ಅಭಿಪ್ರಾಯಗಳು ಸೇರಲಿಕ್ಕೆ ಕಾರಣವೇನು? ಎಂಬ ಪ್ರಶ್ನೆಯು ನಮ್ಮ ಮನಸ್ಸಿನಲ್ಲಿ ಸಹಜವಾಗಿ ಉಂಟಾಗುತ್ತಿರುವದು. ಇದಕ್ಕೆ ಸಮರ್ಪಕವಾದ ಉತ್ತರವನ್ನು ಹೇಳುವದು ಬಹಳ ಕಠಿಣವು. ಯಾಕಂದರೆ, ಮಹಾಭಾರತವು ಮೊದಲಿನದೆಂದರೆ ಪುರಾಣಗಳ ಮೇಲೆ ಅತ್ಯಂತವಿಶ್ವಾಸವಿಟ್ಟ ಹಿಂದೂಜನವು ಸಮ್ಮತಿಸುವದಿಲ್ಲ; ಇದಕ್ಕಾಗಿ ಪಾಶ್ಚಾತ್ಯರು ಹೇಳುತ್ತಿರುವ ಕಾರಣಗಳಿಗೆ ಎಷ್ಟೋ ಆಕ್ಷೇಪಗಳನ್ನು ತೆಗೆಯುತ್ತಿರುವರು. ಇನ್ನು ರಾಮಾಯಣಕಾಲವು ಮೊದಲಿನದೆಂದರೆ, ಈಗಿನ ಇತಿಹಾಸಜ್ಞರು ಸಮ್ಮತಿಸುವದಿಲ್ಲ; ಅಲ್ಲದೆ, ಮಹಾಭಾರತಕಾಲವೇ ಮೊದಲಿನದೆಂಬದಕ್ಕೆ ಅನೇಕ ಸಬಲಕಾರಣಗಳನ್ನು ಹೇಳುತ್ತಿರುವರು. ಪ್ರಾಥಮಿಕಶಾಲೆಗಳ ಶಿಕ್ಷಕರಿಗಾದರೋ ಪಾಶ್ಚಾತ್ಯರ ಈ ವಿಷಯಕವಾದ ವಿಚಾರಗಳು ತಿಳಿಯಲಾರವು. ಯಾಕಂದರೆ, ಕನ್ನಡದಲ್ಲಿ ಗ್ರಂಥಗಳ ಕೊರತೆಯುಂಟು. ಆದಕ್ಕಾಗಿ ಶಿಕ್ಷಕರು ಪರಿಚಿತವಾದ ಪುರಾಣವನ್ನೇ ನಿಜವೆಂದು ನಂಬುತ್ತಿರುವರು. ಆದರೆ ಅವರು ಶಾಲೆಯಲ್ಲಿ ಮಹಾಭಾರತಕಾಲವೇ ಮೊದಲಿನದೆಂದೂ ಕಲಿಸಬೇಕಾಗುತ್ತಿರುವದು. ಈ ವಿಷಯವಾಗಿ ನಾವು ಯಾರನ್ನಾದರೂ ಪ್ರಶ್ನಮಾಡಿದರೆ ಅವರು "ಸ್ಥಾಣೋರ್ವಾ, ಪುರುಷೋವಾ" ಎಂಬ ಧರ್ಮರಾಯನ ವಚನವನ್ನು ಮರೆಹೊಗುವರು. ಕಾರಣ ಈ ವಿಷಯವಾಗಿ ವಿಚಾರಮಾಡುವದು ಅವಶ್ಯವಾದುದೆಂದು ತೋರುವದು. ಅನೇಕರು ತಮಗೆ ತಿಳಿದ ಸಂಗತಿಗಳಿಂದ ಇದ

ನ್ನು ನಿಷ್ಕರ್ಷಿಸಬಹುದೆಂದು ಆಶಿಸುವೆನು. ಮೊದಲು ನಾನು ನನಗೆ ತಿಳಿದ ಕೆಲವು ಸಂಗತಿಗಳನ್ನು ಇಲ್ಲಿ ಬರೆಯುವೆನು.

೧. ಅನೇಕ ವರ್ಷಗಳ ಹಿಂದೆ ಆರ್ಯರೆಂಬ ಜನಾಂಗದವರು ವಾಯವ್ಯಮಾರ್ಗವಾಗಿ ಹಿಂದುಸ್ಥಾನವನ್ನು ಪ್ರವೇಶಿಸಿದರಷ್ಟೇ. ಮೊದಲು ಆರ್ಯರ ವಸತಿಯು ಪಂಜಾಬದಲ್ಲಾಯಿತು. ಇವರು ಹಿಂಡು ಹಿಂಡಾಗಿ ಬಂದು ಹಿಂದುಸ್ಥಾನವನ್ನು ಹೊಕ್ಕರು. ಹಿಂದುಗಡೆಯಲ್ಲಿ ಬಂದ ತಂಡಗಳು ಮೊದಲಿನ ತಂಡಗಳನ್ನು ಸರಿಸುತ್ತ ಬಂದವು. ಇದರಿಂದ ಮೊದಲಿನ ತಂಡದವರು ಕ್ರಮವಾಗಿ ದಕ್ಷಿಣಕ್ಕೆ ವಸತಿಗಳನ್ನು ಮಾಡತೊಡಗಿದರು. ಮಹಾಭಾರತದಲ್ಲಿ ದಕ್ಷಿಣ ಹಿಂದುಸ್ತಾನದ ಬಗ್ಗೆಯೂ, ಅಲ್ಲಿಯ ಜನರ ಬಗ್ಗೆಯೂ, ಯಾವ ಸಂಗತಿಗಳೂ ಕಂಡು ಬರುವದಿಲ್ಲ. ರಾಮಾಯಣವಲ್ಲಾದರೂ ಚರಿತ್ರನಾಯಕನಾದ ರಾಮನು ಲಂಕೆಯವರೆಗೆ ಪ್ರವಾಸಮಾಡಿ ಅಲ್ಲಿಯ ಅರಸನೊಡನೆ ಯುದ್ಧ ಮಾಡಿರುವನು. ರಾಮನು ಈ ಯುದ್ಧಕ್ಕಾಗಿ ದಕ್ಷಿಣದೇಶದ ವಾನರರೆಂಬ ಜನರ ಸಹಾಯವನ್ನು ತೆಗೆದುಕೊಂಡಿರುವನು. ಇದರಿಂದ ರಾಮಾಯಣ ಕಾಲದಲ್ಲಿ ಉತ್ತರದವರಿಗೂ ದಕ್ಷಿಣದವರಿಗೂ ಕೆಲಮಟ್ಟಿಗೆ ವ್ಯವಹಾರವಿತ್ತೆಂದು ಹೇಳಬಹುದಾಗಿದೆ. ಅಲ್ಲದೆ, ಆರ್ಯರಲ್ಲಿ ತೀರ ಮೊದಲು ದಕ್ಷಿಣಕ್ಕೆ ಬಂದ ಅಗಸ್ತ್ಯಋಷಿಯ ವರ್ಣನೆಯು ರಾಮಾಯಣದಲ್ಲುಂಟು. ಈ ಕಾರಣದಿಂದ ರಾಮಾಯಣವು ಮಹಾಭಾರತಕ್ಕಿಂತ ಆಧುನಿಕವಾದದ್ದೆಂದು ಹೇಳಬಹುದಷ್ಟೇ.

೨. ರಾಮಾಯಣದ ಮುಖ್ಯ ಕಥಾಭಾಗವನ್ನು ನೋಡಿದರೆ, ರಾಮನು ಪಿತ್ರಾಜ್ಞಾಪಾಲನಕ್ಕೋಸುಗ ೧೪ ವರ್ಷ ವನವಾಸವನ್ನಂಗೀಕರಿಸಿದ್ದು ಮೊದಲಿನ ವಿಷಯವಾಗಿರುವದು. ಆ ಕಾಲದಲ್ಲಿ ಅನಾರ್ಯನೋರ್ವನು ರಾಮನ ಹೆಂಡತಿಯನ್ನು ಎತ್ತಿಕೊಂಡು ಹೋದದ್ದು, ರಾಮನು ಸ್ವದಾರಾರಕ್ಷಣೆಗೋಸ್ಕರ ಆ ಅನಾರ್ಯನೊಡನೆ ಹೋರಾಡಿದ್ದು, ಸೀತೆಯ ಪಾತಿವ್ರತ್ಯ, ಲಕ್ಷ್ಮಣ-ಭರತರು ಬಾಂಧವರ ರಾಜ್ಯಪ್ರಾಪ್ತಿಯ ಸಲುವಾಗಿ ಪ್ರಬಲವಾಗಿ ಹೋರಾಡಿದ್ದು, ದುರ್ಯೋಧನನ ಅಸೂಯೆ, ದ್ವೇಷ, ಧರ್ಮರಾಯನ ಶಾಂತಗುಣ, ದ್ರೌಪದಿಯ ಬಹುಪತಿತ್ವ ಮೊದಲಾದವು ಇತರ ವಿಷಯಗಳಾಗಿರುವವು. ಇದರಿಂದ ಮಹಾ

ಭಾರತದಲ್ಲಿ ನೀತಿಯ ತತ್ವಗಳೇ ಇಲ್ಲೆಂದು ತಿಳಿಯಲಾಗದು. ಜಗತ್ತಿನೊಳಗಿನ ಸರ್ವಜನರಿಂದಲೂ ಹೊಗಳಿಸಿಕೊಳ್ಳಲ್ಪಟ್ಟ ಭಗವದ್ಗೀತೆಯು ಮಹಾಭಾರತದ ಒಂದು ಅಂಗವಾಗಿರುವದು. ಆದರೇನು? ಮಹಾಭಾರತದಲ್ಲಿ ಸೇರಿಸಲ್ಪಟ್ಟ ನೀತಿಯ ಉಚ್ಚ ತತ್ವಗಳು ಈಚಿನ ಪಂಡಿತರಿಂದ ಸೇರಿಸಲ್ಪಟ್ಟವುಗಳೆಂದೆನ್ನುತ್ತಿರುವರು. ಮುಖ್ಯ ಕಥಾನಕದಲ್ಲಾದರೋ ರಾಮಾಯಣದಂತೆ ಹೆಚ್ಚು ಉಚ್ಚವಾದ ಸಂಗತಿಗಳಿಲ್ಲ.

ಪ್ರತಿಯೊಂದು ವಸ್ತುವು ಕ್ರಮವಾಗಿ ಸುಧಾರಣೆಯನ್ನು ಹೊಂದುತ್ತ ನಡೆಯುವದೆಂದು ಉತ್ಕ್ರಾಂತಿಯತತ್ವವಿರುತ್ತದಷ್ಟೇ, ಈ ತತ್ವದಂತೆ ಸುಧಾರಣೆಯಲ್ಲಿ ಮುಂದಡಿ ಇಟ್ಟ ರಾಮಾಯಣಕಾಲವು, ಹಿಂದುಳಿದ ಮಹಾಭಾರತ ಕಾಲಕ್ಕಿಂತ ಅರ್ವಾಚೀನವಾದುದೆಂದು ಹೇಳಬಹುದಲ್ಲವೇ?

೩. ರಾಮಾಯಣವು ರಾಮನು ಹುಟ್ಟುವದಕ್ಕಿಂತ ಅನಂತವರ್ಷ ಮೊದಲೇ ಕಲ್ಪಿಸಲ್ಪಟ್ಟಿತೆಂದು ಕೆಲವರು ಹೇಳುವದುಂಟು.* ಮಹಾಭಾರತವಾದರೋ ಕಥೆಯು ನಡೆದು ಎಷ್ಟೋ ವರ್ಷಗಳ ಮೇಲೆ ಬರೆಯಲ್ಪಟ್ಟಿತು. ಮುಖ್ಯವಾಗಿ ರಾಮಾಯಣವು ಮಹಾಭಾರತಕ್ಕಿಂತ ಮೊದಲೇ ಗ್ರಂಥಸ್ಥವಾಯಿತು. ಈ ಗ್ರಂಥಾಂತರವೇ ಕಾಲಾಂತರಕ್ಕೂ ಕಾರಣವಾಗಿರಬಹುದೆಂದು ಊಹಿಸಬಹುದಲ್ಲವೇ?

೪. "ಸೀತಾ" ಎಂದರೆ ನೇಗಿಲೆಯ ಸಾಲೆಂದರ್ಥ. ಒಕ್ಕಲತನದ ಸಾಹಿತ್ಯವೆಂದೂ ಇದಕ್ಕೆ ಲಾಕ್ಷಣಿಕಾರ್ಥವನ್ನು ಹೇಳಬಹುದಾಗಿದೆ. ಅನಾರ್ಯನೋರ್ವನು ಉತ್ತರ ದೇಶದಲ್ಲಿ ಒಕ್ಕಲತನದ ಅನೇಕ ಸಾಹಿತ್ಯಗಳನ್ನು ಮಾಡಿಕೊಂಡು ಸುಖದಿಂದ ಜೀವಿಸುತ್ತಿರುವದನ್ನು ನೋಡಿದನು. ತನ್ನಲ್ಲಿ ಆ ತರದ ಸಾಹಿತ್ಯಗಳಿಲ್ಲದ್ದರಿಂದಾಗುವ ಕಷ್ಟವನ್ನು ಸ್ಮರಿಸಿಕೊಂಡನು. ಆಗಲವನು ಉತ್ತರದವರ ಆ ಸಾಹಿತ್ಯಗಳನ್ನು ಕಳವು ಮಾಡಿ ತೆಗೆದುಕೊಂಡು ಬರಬೇಕೆಂದು ಯೋಚಿಸಿದನು. ಅನಾ

* ಎನ್ ರಾಜಗೋಪಾಲ ಕೃಷ್ಣರಾವ, ವಾಸುದೇವಾಚಾರ್ಯ ಕೆರೂರ, ಎಚ್ ಚಿದಂಬರಯ್ಯ ಈ ಮೂವರಿಂದ ಪ್ರತ್ಯೇಕವಾಗಿ ಕನ್ನಡಿಸಲ್ಪಟ್ಟ "ವಾಲ್ಮೀಕಿ ವಿಜಯ"ವೆಂಬ ಗ್ರಂಥವನ್ನು ನೋಡಿರಿ.

ನ್ನು ನಿಷ್ಕರ್ಷಿಸಬಹುದೆಂದು ಆಶಿಸುವೆನು. ಮೊದಲು ನಾನು ನನಗೆ ತಿಳಿದ ಕೆಲವು ಸಂಗತಿಗಳನ್ನು ಇಲ್ಲಿ ಬರೆಯುವೆನು.

೧. ಅನೇಕ ವರ್ಷಗಳ ಹಿಂದೆ ಆರ್ಯರೆಂಬ ಜನಾಂಗದವರು ವಾಯುವ್ಯಮಾರ್ಗವಾಗಿ ಹಿಂದುಸ್ಥಾನವನ್ನು ಪ್ರವೇಶಿಸಿದರಷ್ಟೇ. ಮೊದಲು ಆರ್ಯರ ವಸತಿಯು ಪಂಜಾಬದಲ್ಲಾಯಿತು. ಇವರು ಹಿಂಡು ಹಿಂಡಾಗಿ ಬಂದು ಹಿಂದುಸ್ಥಾನವನ್ನು ಹೊಕ್ಕರು. ಹಿಂದುಗಡೆಯಲ್ಲಿ ಬಂದ ತಂಡಗಳು ಮೊದಲಿನ ತಂಡಗಳನ್ನು ಸರಿಸುತ್ತ ಬಂದವು. ಇದರಿಂದ ಮೊದಲಿನ ತಂಡದವರು ಕ್ರಮವಾಗಿ ದಕ್ಷಿಣಕ್ಕೆ ವಸತಿಗಳನ್ನು ಮಾಡತೊಡಗಿದರು. ಮಹಾಭಾರತದಲ್ಲಿ ದಕ್ಷಿಣ ಹಿಂದುಸ್ಥಾನದ ಬಗ್ಗೆಯೂ, ಅಲ್ಲಿಯ ಜನರ ಬಗ್ಗೆಯೂ, ಯಾವ ಸಂಗತಿಗಳೂ ಕಂಡು ಬರುವದಿಲ್ಲ. ರಾಮಾಯಣವಲ್ಲಾದರೂ ಚರಿತ್ರನಾಯಕನಾದ ರಾಮನು ಲಂಕೆಯವರೆಗೆ ಪ್ರವಾಸಮಾಡಿ ಅಲ್ಲಿಯ ಅರಸನೊಡನೆ ಯುದ್ಧ ಮಾಡಿರುವನು. ರಾಮನು ಈ ಯುದ್ಧಕ್ಕಾಗಿ ದಕ್ಷಿಣದೇಶದ ವಾನರರೆಂಬ ಜನರ ಸಹಾಯವನ್ನು ತೆಗೆದುಕೊಂಡಿರುವನು. ಇದರಿಂದ ರಾಮಾಯಣ ಕಾಲದಲ್ಲಿ ಉತ್ತರದವರಿಗೂ ದಕ್ಷಿಣದವರಿಗೂ ಕೆಲಮಟ್ಟಿಗೆ ವ್ಯವಹಾರವಿತ್ತೆಂದು ಹೇಳಬಹುದಾಗಿದೆ. ಅಲ್ಲದೆ, ಆರ್ಯರಲ್ಲಿ ತೀರ ಮೊದಲು ದಕ್ಷಿಣಕ್ಕೆ ಬಂದ ಅಗಸ್ತ್ಯಋಷಿಯ ವರ್ಣನೆಯು ರಾಮಾಯಣದಲ್ಲುಂಟು. ಈ ಕಾರಣದಿಂದ ರಾಮಾಯಣವು ಮಹಾಭಾರತಕ್ಕಿಂತ ಆಧುನಿಕವಾದದ್ದೆಂದು ಹೇಳಬಹುದಷ್ಟೇ.

೨. ರಾಮಾಯಣದ ಮುಖ್ಯ ಕಥಾಭಾಗವನ್ನು ನೋಡಿದರೆ, ರಾಮನು ಪಿತ್ರಾಜ್ಞಾಪಾಲನಕ್ಕೋಸುಗ ೧೪ ವರ್ಷ ವನವಾಸವನ್ನಂಗೀಕರಿಸಿದ್ದು ಮೊದಲಿನ ವಿಷಯವಾಗಿರುವದು. ಆ ಕಾಲದಲ್ಲಿ ಅನಾರ್ಯನೋರ್ವನು ರಾಮನ ಹೆಂಡತಿಯನ್ನು ಎತ್ತಿಕೊಂಡು ಹೋದದ್ದು, ರಾಮನು ಸ್ವದಾರಾರಕ್ಷಣೆಗೋಸ್ಕರ ಆ ಅನಾರ್ಯನೊಡನೆ ಹೋರಾಡಿದ್ದು, ಸೀತೆಯ ಪಾತಿವ್ರತ್ಯ, ಲಕ್ಷ್ಮಣ-ಭರತರು ಬಾಂಧವರ ರಾಜ್ಯಪ್ರಾಪ್ತಿಯ ಸಲುವಾಗಿ ಪ್ರಬಲವಾಗಿ ಹೋರಾಡಿದ್ದು, ದುರ್ಯೋಧನನ ಅಸೂಯೆ, ದ್ವೇಷ, ಧರ್ಮರಾಯನ ಶಾಂತಗುಣ, ದ್ರೌಪದಿಯ ಬಹುಪತಿತ್ವ ಮೊದಲಾದವು ಇತರ ವಿಷಯಗಳಾಗಿರುವವು. ಇದರಿಂದ ಮಹಾ

ಭಾರತದಲ್ಲಿ ನೀತಿಯ ತತ್ವಗಳೇ ಇಲ್ಲೆಂದು ತಿಳಿಯಲಾಗದು. ಜಗತ್ತಿನೊಳಗಿನ ಸರ್ವಜನರಿಂದಲೂ ಹೊಗಳಿಸಿಕೊಳ್ಳಲ್ಪಟ್ಟ ಭಗವದ್ಗೀತೆಯು ಮಹಾಭಾರತದ ಒಂದು ಅಂಗವಾಗಿರುವದು. ಆದರೇನು? ಮಹಾಭಾರತದಲ್ಲಿ ಸೇರಿಸಲ್ಪಟ್ಟ ನೀತಿಯ ಉಚ್ಚ ತತ್ವಗಳು ಈಚಿನ ಪಂಡಿತರಿಂದ ಸೇರಿಸಲ್ಪಟ್ಟವುಗಳೆಂದೆನ್ನುತ್ತಿರುವರು. ಮುಖ್ಯ ಕಥಾನಕದಲ್ಲಾದರೋ ರಾಮಾಯಣದಂತೆ ಹೆಚ್ಚು ಉಚ್ಚವಾದ ಸಂಗತಿಗಳಿಲ್ಲ.

ಪ್ರತಿಯೊಂದು ವಸ್ತುವು ಕ್ರಮವಾಗಿ ಸುಧಾರಣೆಯನ್ನು ಹೊಂದುತ್ತ ನಡೆಯುವದೆಂದು ಉತ್ಕ್ರಾಂತಿಯತತ್ವವಿರುತ್ತದಷ್ಟೇ, ಈ ತತ್ವದಂತೆ ಸುಧಾರಣೆಯಲ್ಲಿ ಮುಂದಡಿ ಇಟ್ಟ ರಾಮಾಯಣಕಾಲವು, ಹಿಂದುಳಿದ ಮಹಾಭಾರತ ಕಾಲಕ್ಕಿಂತ ಅರ್ವಾಚೀನವಾದುದೆಂದು ಹೇಳಬಹುದಲ್ಲವೇ?

೩. ರಾಮಾಯಣವು ರಾಮನು ಹುಟ್ಟುವದಕ್ಕಿಂತ ಅನಂತವರ್ಷ ಮೊದಲೇ ಕಲ್ಪಿಸಲ್ಪಟ್ಟಿತೆಂದು ಕೆಲವರು ಹೇಳುವದುಂಟು.* ಮಹಾಭಾರತವಾದರೋ ಕಥೆಯು ನಡೆದು ಎಷ್ಟೋ ವರ್ಷಗಳ ಮೇಲೆ ಬರೆಯಲ್ಪಟ್ಟಿತು. ಮುಖ್ಯವಾಗಿ ರಾಮಾಯಣವು ಮಹಾಭಾರತಕ್ಕಿಂತ ಮೊದಲೇ ಗ್ರಂಥಸ್ಥವಾಯಿತು. ಈ ಗ್ರಂಥಾಂತರವೇ ಕಾಲಾಂತರಕ್ಕೂ ಕಾರಣವಾಗಿರಬಹುದೆಂದು ಊಹಿಸಬಹುದಲ್ಲವೇ?

೪. "ಸೀತಾ" ಎಂದರೆ ನೇಗಿಲೆಯ ಸಾಲೆಂದರ್ಥ. ಒಕ್ಕಲತನದ ಸಾಹಿತ್ಯವೆಂದೂ ಇದಕ್ಕೆ ಲಾಕ್ಷಣಿಕಾರ್ಥವನ್ನು ಹೇಳಬಹುದಾಗಿದೆ. ಅನಾರ್ಯನೋರ್ವನು ಉತ್ತರ ದೇಶದಲ್ಲಿ ಒಕ್ಕಲತನದ ಅನೇಕ ಸಾಹಿತ್ಯಗಳನ್ನು ಮಾಡಿಕೊಂಡು ಸುಖದಿಂದ ಜೀವಿಸುತ್ತಿರುವದನ್ನು ನೋಡಿದನು. ತನ್ನಲ್ಲಿ ಆ ತರದ ಸಾಹಿತ್ಯಗಳಿಲ್ಲದ್ದರಿಂದಾಗುವ ಕಷ್ಟವನ್ನು ಸ್ಮರಿಸಿಕೊಂಡನು. ಆಗಲವನು ಉತ್ತರದವರ ಆ ಸಾಹಿತ್ಯಗಳನ್ನು ಕಳವು ಮಾಡಿ ತೆಗೆದುಕೊಂಡು ಬರಬೇಕೆಂದು ಯೋಚಿಸಿದನು. ಅನಾ

---

* ಎನ್ ರಾಜಗೋಪಾಲ ಕೃಷ್ಣರಾವ, ವಾಸುದೇವಾಚಾರ್ಯ ಕೆರೂರ, ಎಚ್ ಚಿದಂಬರಯ್ಯ ಈ ಮೂವರಿಂದ ಪ್ರತ್ಯೇಕವಾಗಿ ಕನ್ನಡಿಸಲ್ಪಟ್ಟ "ವಾಲ್ಮೀಕಿ ವಿಜಯ"ವೆಂಬ ಗ್ರಂಥವನ್ನು ನೋಡಿರಿ.

ರ್ಯನವನು ಕಳವಿಗೆ ಹೆದರುವದೆಂತು? ತುಸು ದಿವಸಗಳಲ್ಲಿಯೇ ಉತ್ತರಕ್ಕೆ ಹೋಗಿ ಒಕ್ಕಲತನದ ಸಾಹಿತ್ಯ (ಸೀತೆ) ವನ್ನು ತೆಗೆದುಕೊಂಡು ಬಂದನು. ಉತ್ತರದಲ್ಲಿಯ ಪ್ರಬಲನಾದ ಅರಸನು ತಮ್ಮ ದೇಶದಲ್ಲಿಯ ಸಾಮಾನುಗಳನ್ನು ಕದ್ದುಕೊಂಡು ಹೋದ ಅನಾರ್ಯನನ್ನು ಶಿಕ್ಷಿಸದೆ ಬಿಡುವನೇ? ಅವನು ಆ ಅನಾರ್ಯನನ್ನು ಸಂಹರಿಸಿ ಕೃಷಿಯ ಸಾಹಿತ್ಯವನ್ನು ತೆಗೆದುಕೊಂಡು ಬಂದನು.

ಇದರಿಂದ ಆ ಕಾಲದಲ್ಲಿ ಉತ್ತರ ದೇಶದಲ್ಲಿ ಒಕ್ಕಲತನವು ಸುಧಾರಣೆಯನ್ನು ಹೊಂದಿತ್ತೆಂದು ಹೇಳಬಹುದಾಗಿದೆಯಷ್ಟೇ. ಅತ್ಯಲ್ಪ ಧನವಿದ್ದ ಮನುಷ್ಯನನ್ನು ನಾವು ಶ್ರೀಮಂತನೆಂದು ಕರೆಯಲಾರೆವು; ಇಂಥವನ ಮನೆಗೆ ಕಳ್ಳರೂ ಹೋಗಲಾರರು; ತೀರ ಪ್ರಯಾಸದಿಂದ ಕಳ್ಳರು ಪ್ರವೇಶಿಸಬೇಕಾದರೆ ಆ ಮನೆಯಲ್ಲಿ ಧನವು ಬಹಳವಾಗಿರಬೇಕಷ್ಟೇ. ಅಂತೆಯೇ, ತೀರ ದಕ್ಷಿಣದಲ್ಲಿದ್ದ ಅನಾರ್ಯನು ಮೋಹಿಸಿ ಉತ್ತರಕ್ಕೆ ಕಳವಿಗಾಗಿ ಬರಬೇಕಾದರೆ, ಆ ಕಾಲದಲ್ಲಿ ಉತ್ತರದ ಒಕ್ಕಲತನದ ಸ್ಥಿತಿಯು ಹೇಗಿರಬಹುದೆಂಬದನ್ನು ಯೋಚಿಸಿರಿ.

ಮಹಾಭಾರತದಲ್ಲಿ ಸುಧಾರಣೆಗಾಗಿ ಬಡೆದಾಡಿದ ಸಂಗತಿಗಳಿಲ್ಲ. ಆತ್ಮಕಲಹವೇ ಮುಖ್ಯ ಕಥಾನಕವಾಗಿದೆ. ಒಕ್ಕಲತನದ ಸುಧಾರಣೆಯ ಬಗ್ಗೆಯೂ ಉಲ್ಲೇಖಗಳಿಲ್ಲ. ಉತ್ಕ್ರಾಂತಿಯ ತತ್ವದಂತೆ, ಒಕ್ಕಲತನದ ದೃಷ್ಟಿಯಿಂದ ಅತ್ಯಂತ ಸುಧಾರಣೆಯನ್ನು ಹೊಂದಿದ ರಾಮಾಯಣ ಕಾವ್ಯವು ಈಚಿನದೆಂದು ಹೇಳಲವಕಾಶವುಂಟು.

೫. ಗ್ರೀಸ ದೇಶದಲ್ಲಿರುವ ಇಲಿಯಡ್ ಎಂಬ ಕಾವ್ಯಕ್ಕೂ ರಾಮಾಯಣವೂ ಒಂದನ್ನೊಂದು ಹೋಲುತ್ತಿರುವವು. ಆದುದರಿಂದ ಇವೆರಡು ಗ್ರಂಥಗಳು ಸಮಕಾಲೀನವಾಗಿರಬೇಕೆಂದು ತರ್ಕಿಸುತ್ತಿರುವರು. ಈ ದೃಷ್ಟಿಯಿಂದ ವಿಚಾರಿಸಿದರೂ ರಾಮಾಯಣವು ಮಹಾಭಾರತಕ್ಕಿಂತ ಆಧುನಿಕವಾದದ್ದೆಂದು ತಿಳಿಯುವದು.

ಈ ಮೇರೆಗೆ ರಾಮಾಯಣವು ಆಧುನಿಕವೆಂಬದಕ್ಕೆ ಇನ್ನೂ ಎಷ್ಟೋ ಕಾರಣಗಳನ್ನು ಹೇಳಬಹುದಾಗಿದೆ. ಮುಖ್ಯವಾದವುಗಳನ್ನು ಮೇಲೆ ಬರೆದಿದ್ದೇನೆ. ಇದರ ಸಿದ್ಧತೆಗೇ ಆಗಲಿ, ಇದರ ವಿರುದ್ಧ ಸಿ

ತೆಗೇ ಆಗಲಿ, ಪ್ರಬಲವಾದ ಕಾರಣಗಳಿದ್ದರೆ ಅವನ್ನು ತಿಳಿಸಿ ನಿಶ್ಚಯಾತ್ಮಕವಾದುದೊಂದು ಸಿದ್ಧಾಂತವನ್ನು ಗೊತ್ತು ಮಾಡುವರೆಂದು ಆಶಿಸುವೆನು.

ನರೇಗಲ್ | ತಮ್ಮ ವಿಧೇಯ ಶಿಷ್ಯ
೨೨—೧೦—೧೫ | ಶಂಕರಶಾಸ್ತ್ರಿ

ಪತ್ರವ್ಯವಹಾರ.

ರಾವಸಾಹೇಬ ಕನ್ನಡ ಶಾಲಾಪತ್ರಿಕದ ಎಡಿಟರ ಧಾರವಾಡ ದೊರೆಗಳ ಚರಣ ಸನ್ನಿಧಾನಕ್ಕೆ—

ಕೃತಾನೇಕ ಸಾ|| ನಮಸ್ಕಾರಗಳು. ವಿನಂತಿ ವಿಶೇಷ- ತಮ್ಮ ಶಾಲಾಪತ್ರಿಕದಲ್ಲಿ ಮೇಹರ್ಬಾನ ಪ್ರಿನ್ಸಿಪಾಲ ಸಾಹೇಬ ಧಾರವಾಡ ಟ್ರೇನಿಂಗ ಕಾಲೇಜ ಇವರ ಅಧ್ಯಕ್ಷತೆಯ ಕೆಳಗೆ ಬೆಳಗಾವಿಯ ಮ್ಯುನಿಸಿಪಲ್ ಕಚೇರಿಯಲ್ಲಿ ತಾ|| ೩೧ | ೧೦ |೧೫ ನೇ, ಹಾಗು ತಾ|| ೧|೧೧|೧೫ ನೇ ದಿವಸಗಳಲ್ಲಿ ಕೂಡಿದ ವ್ಹ. ಶಿಕ್ಷಕರ ಸಮ್ಮೇಲನದ ಮಾಹಿತಿಯನ್ನು ಪ್ರಸಿದ್ಧಪಡಿಸುವದಾದೀತೆಂದು ನಂಬಿದ್ದೇನೆ.

ಕಳೆದ ವರ್ಷದಿಂದಿತ್ತಲಾಗಿ ಮೇಹರ್ಬಾನ ಎಜ್ಯುಕೇಶನಲ್ ಇನಸ್ಪೆಕ್ಟರ ಸಾ|| ಬಾ|| ದಕ್ಷಿಣಭಾಗ ಇವರ ಹುಕುಮಿನಂತೆ ಈ ದಕ್ಷಿಣ ಭಾಗದಲ್ಲಿಯ ಮೇ|| ಡಿ. ಎ. ಇನಸ್ಪೆಕ್ಟರ ಸಾಹೇಬರವರು ತಮ್ಮ ತಮ್ಮ ಜಿಲ್ಲೆಗಳಲ್ಲಿ ಶಿಕ್ಷಕರ ಸಮ್ಮೇಲನಗಳನ್ನು ಕೂಡಿಸುತ್ತ ನಡೆದಿರುವದು ನನ್ನ ಬಂಧುವರ್ಗಕ್ಕೆಲ್ಲ ವಿದಿತವಿರುವದಷ್ಟೇ. ಅದಕ್ಕನುಸರಿಸಿ ನಮ್ಮ ದಕ್ಷಿಣಭಾಗದ ಮ್ಯುನಸಿಪಾಲಿಟಿಗಳಲ್ಲಿಯೂ ಶಿಕ್ಷಕರ ಸಮ್ಮೇಲನಗಳು ಕೂಡಿಸಲ್ಪಡುತ್ತಿರಬಹುದು. ಅದರಂತೆ ಬೆಳಗಾವಿಯ ಸ್ಕೂಲಬೋರ್ಡ ಚೇರಮನ್ನರಾದ ರಾವಸಾ|| ಗುಪ್ತಾಜಿಯವರು ತಮ್ಮ ಮ್ಯುನಿಸಿಪಲ್ ಮಾಸ್ತರರ ಸಮ್ಮೇಲನವನ್ನು ಇದೇ ಸಪ್ಟಂಬರದಲ್ಲಿ ಕೂಡಿಸುವದಕ್ಕಾಗಿ ಯತ್ನಿಸಿ, ಬೆಳಗಾವಿಯ ಅನುಭವಿಕ ಮಾಸ್ತರರಾದ ರಾ. ಗಣಪತರಾವ ಕುಲಕರ್ಣಿ ಹೆಡ್‌ಮಾಸ್ತರ, ಮರಾಠಿ ಶಾ. ನಂ. ೧, ಹಾಗು ವೆಂಕಟರಾವ ಕಲ್ಲಾಪುರ ಹೆಡ್‌ಮಾಸ್ತರ ಕನ್ನಡ ಶಾ. ನಂ. ೧ ಇವರಿಗೆ ಸೂಚಿಸಲು, ಇವರೀರ್ವರೂ ಆದಕ್ಕೆ ಬೆಂಬಲರಾದರು. ಆದರೆ ಅನುಭವಿಕರಾದ ಈ

ಮಾಸ್ತರರು ಈ ತಮ್ಮ ಮ್ಯುನಸಿಪಲ್ ಶಾಲಾಮಾಸ್ತರರ ಸಮ್ಮೇಲನದಿಂದಷ್ಟೇ ಸಂತುಷ್ಟರಾಗದೆ, ಬೆಳಗಾವಿಯು ಜಿಲ್ಲೆಯ ಮುಖ್ಯ ಸ್ಥಳವಾಗಿದ್ದು ಇಲ್ಲಿ ಲೋ. ಬೋ. ಮಾಸ್ತರರನ್ನು ಸಹ ಕೂಡಿಸಬೇಕೆಂದು ಇಚ್ಛಿಸಿ, ತಮ್ಮ ಸ್ಕೂಲಬೋರ್ಡ ಚೇರಮನ್ನರಿಗೆ ಈ ಆಲೋಚನೆಯನ್ನು ತಿಳಿಸಿದರು. ಅವರಾದರು ಇವರ ಸದಾಲೋಚನೆಗೆ ಲಕ್ಷ್ಯಗೊಟ್ಟು, ನಮ್ಮ ಜಿಲ್ಲೆಯ ಡೆ|| ಎ|| ಇನಸ್ಪೆಕ್ಟರಾದ ಖಾನಸಾಹೇಬರವರನ್ನು ವಿಚಾರಿಸಿದರು. ಶಿಕ್ಷಣಕಾರ್ಯಕ್ಕೆ ವಿಶೇಷ ಲಕ್ಷ ಕೊಡುವ ನಮ್ಮ ಮೇ. ಖಾನಸಾಹೇಬರವರು ಸಂತೋಷಭರಿತರಾಗಿ ಸಂಪೂರ್ಣ ಅನುಮತಿಯನ್ನು ಕೊಟ್ಟದ್ದಲ್ಲದೆ, ಲೋ. ಬೋ. ಮಾಸ್ತರರನ್ನು ಕರೆಯಿಸಲಿಕ್ಕೆ, ಬೆಳಗಾವಿಯ ಮಾಸ್ತರರಿಗೆ ತಿಳಿಸಲಿಕ್ಕೆ ಹೇಳಿದರು. ಹಾಗು ತಮ್ಮ ಜಿಲ್ಲೆಯಲ್ಲಾಗುವ ಈ ಸಮ್ಮೇಲನಕ್ಕೆ ಯೋಗ್ಯರಾದ ಅಧ್ಯಕ್ಷರನ್ನು ಆರಿಸುವದಕ್ಕಾಗಿ ರಾವಸಾ|| ಗುಣಾಜಿಯವರ ಕೂಡ ಆಲೋಚಿಸಿ, ನಮ್ಮ ಮುಂಬಯಿ ಕರ್ನಾಟಕದಲ್ಲಿ ಶಿಕ್ಷಣ ವಿಷಯದಲ್ಲಿ ಅನುಭವಿಕರೂ ಪ್ರಸಿದ್ಧರೂ ಆದ ಗುರುವರ್ಯ ಮಿ|| ವಿನಾಯಕರಾವ ಬಾಬಾಜಿ ಜೋಶಿ ಪ್ರಿನ್ಸಿಪಾಲ ಟ್ರೇ. ಕಾ. ಧಾರವಾಡ ಇವರನ್ನು ಆಮಂತ್ರಿಸುವದಕ್ಕಾಗಿ ಸೂಚಿಸಿದರು. ಅದರಂತೆ ಮ್ಯುನಸಿಪಾಲಿಟಿಯವರ ಆಮಂತ್ರಣವಿನಂತಿಯನ್ನು ಮಾನ್ಯಮಾಡಿ, ಗು. ಪ್ರಿನ್ಸಿಪಾಲ ಸಾ|| ರವರು ಅಧ್ಯಕ್ಷರಾಗಲಿಕ್ಕೆ ಸಂತೋಷದಿಂದ ಒಪ್ಪಿಕೊಂಡರು. ಆ ಮೇಲೆ ಗೊತ್ತಾದ ದಿವಸಗಳಲ್ಲಿ ಬೆಳಗಾವಿಯ ಮ್ಯುನಸಿಪಲ್ ಕಚೇರಿಯಲ್ಲಿ ಸಮ್ಮೇಲನ ಕಾರ್ಯವು ಕೆಳಗೆ ಬರೆದಂತೆ ಜರುಗಿತು.

ತಾ|| ೩೧-೧೦-೧೫ ನೇ ದಿವಸ ಮೊದಲೇ ಗೊತ್ತಾದಂತೆ ಬೆಳಗಾವಿಯ ಮ್ಯುನಸಿಪಲ್ ಕಚೇರಿಯ ಭವ್ಯವಾದ ಪಟಾಂಗಣದಲ್ಲಿ ಆಮಂತ್ರಿತ ಮಂಡಳಿಗೆ ಯೋಗ್ಯತೆಗನುಸರಿಸಿ ಕೊಡ್ರುವ ವ್ಯವಸ್ಥೆಯು ಮಾಡಲ್ಪಟ್ಟಿದ್ದು ಪಟಾಂಗಣದ ಮಧ್ಯದಲ್ಲಿ ಅಧ್ಯಕ್ಷರಿಗಾಗಿ ಉಚ್ಚಾಸನವು ಶೃಂಗರಿಸಲ್ಪಟ್ಟಿತ್ತು. ಮಧ್ಯಾಹ್ನದ ೧೧|| ಗಂಟೆಗೆ ಸರಿಯಾಗಿ ಯಾವತ್ತೂ ಜನರು ಕಾನ್ಫರನ್ಸಿಗೆ ಕೂಡಿದರು. ಮೊದಲು ರಾವಸಾಹೇಬ ಗುಣಾಜಿಯವರು ಸಾಂಪ್ರದಾಯದಂತೆ ಕಾನ್ಫರನ್ಸಿಗೆ ಗುರುವರ್ಯ ಪ್ರಿನ್ಸಿಪಾಲ ಸಾ|| ರು ಅಧ್ಯಕ್ಷರಾಗಬೇಕೆಂದು ಸೂಚಿಸಿದರು. ಸರ್ವಾನುಮತಿಯಿಂದ ಚಪ್ಪಾಳಿ

ಯ ಗಜರಿನೊಳಗೆ ಗುರುವರ್ಯರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಕೂಡಲೆ ಕಾರ್ಯಕ್ರಮದ ಮೇರೆಗೆ ಮರಾಠೀ ೧ನೇ ನಂಬರ ಶಾಲೆಯ ವಿದ್ಯಾರ್ಥಿಗಳು ಸುಸ್ವರದಿಂದ ಸ್ವಾಗತಪರವಾದ ಪದ್ಯವನ್ನು ಅಂದು ಎ ಲ್ಲರನ್ನು ಆನಂದಗೊಳಿಸಿದರು. ತರುವಾಯ ಮೊದಲೇ ಗೊತ್ತುಮಾಡಿ ಕೊಂಡ ಮೇರೆಗೆ ಮ್ಯುನಿಸಿಪಲ್ ಹಾಗು ಲೋಕಲ್‌ಬೋರ್ಡ ಶಿಕ್ಷಕರು ಕನ್ನಡ, ಮರಾಠಿ, ಉರ್ದು, ಭಾಷೆಗಳಲ್ಲಿ ತಾವು ಆರಿಸಿಕೊಂಡ ಕವಿತೆ, ಕಿಂಡರಗಾರ್ಟನ್, ಇತಿಹಾಸ, ಭೂಮಿತಿ, ವ್ಯಾಕರಣ, ಈ ಮೊದಲಾದ ವಿಷಯಗಳನ್ನು ತಮ್ಮ ಯಥಾಶಕ್ತಿ ಕಲಿಸಿ ತೋರಿಸಿದರು. ಹಾಗು ಮಧ್ಯಾಹ್ನದ ೨ರಿಂದ ೩ ವರೆಗೆ ೧ ತಾಸು ವಿಶ್ರಾಂತಿ ದೊರೆತು, ಶಿಕ್ಷಣ ಕಾರ್ಯವು ಈ ದಿವಸ ಸಂಜೆಯ ೫ ಗಂಟೆಯ ವರೆಗೆ ನಡೆಯಿತು.

ಇನ್ನು ಮೂರನೇ ದಿವಸ ಮುನ್ನಾದಿನದಂತೆ ನಿಯಮಿತ ವೇಳೆಗೆ ಸಭೆಯ ಕೆಲಸವು ಆರಂಭವಾಗಿ ೧೧|| ಘಂಟೆಯಿಂದ ೨ ಘಂಟೆಯ ವರೆಗೆ ಶಿಕ್ಷಕರು ಕಿಂಡರಗಾರ್ಟನ್, ಸೃಷ್ಟಿನಿರೀಕ್ಷಣ, ಅಕ್ಷರ ಕಲಿಸೋಣ ಮೊದಲಾದ ವಿಷಯಗಳನ್ನು ಕಲಿಸಿದರು. ಆ ಮೇಲೆ ಒಂದು ತಾಸು ವಿಶ್ರಾಂತಿಯು ದೊರೆದು, ೩ ಘಂಟೆಯ ಮೇಲೆ ಸದ್ಯದ ಶಿಕ್ಷಣಪದ್ಧತಿ ಯಲ್ಲಿ ಬರುವ ತೊಂದರೆಗಳ ವಿಷಯವಾಗಿ ಕನ್ನಡ ಮರಾಠಿ ಭಾಷೆಗ ಳಲ್ಲಿ ನಿಬಂಧವಾಚನಗಳಾದವು. ಆ ಮೇಲೆ ರಾವಸಾ|| ಗುಹಾಜಿಯವರು ವಿದ್ಯಾರ್ಥಿಗಳ ಶಾರೀರಿಕಸಂಪತ್ತಿಯ ವಿಷಯವಾಗಿ ಜನರಲ್ಲಿರುವ ದುರ್ಲಕ್ಷವನ್ನು ವ್ಯಕ್ತಪಡಿಸಿ, ಈ ಬಗ್ಗೆ ನಮ್ಮ ದಯಾಳು ಸರಕಾರ ದವರು ನಡಿಸಿರುವ ಏರ್ಪಾಡಿನ ಬಗ್ಗೆ ವಿಶದವಾಗಿ ಹೇಳಿದರು. ಹಾಗು ಆರೋಗ್ಯತೆಯ ಬಹಿರಂಗದ ಲಕ್ಷಣಗಳನ್ನೂ ವಿದ್ಯಾರ್ಥಿಗಳ ಆರೋಗ್ಯ ತೆಯನ್ನು ಕಾಯ್ದುಕೊಳ್ಳುವ ಕೆಲವು ಉಪಯುಕ್ತ ಸೂಚನೆಗಳನ್ನೂ ಹೇಳಿದರು.

ತರುವಾಯ ನಮ್ಮ ಪೂಜ್ಯ ಗುರುಗಳಾದ ಅಧ್ಯಕ್ಷಸಾಹೇಬರವರ ಉಪಸಂಹಾರಪರವಾದ ಮಾರ್ಮಿಕವೂ ಅಸ್ಖಲಿತವೂ ಆದ ಭಾಷಣವು ಆರಂಭವಾಯಿತು. ಅದರಲ್ಲಿ! ನೀತಿಪಾಠ, ನಿರೀಕ್ಷಣಪಾಠ, ವಸ್ತುಪಾಠ ಪ್ರಕೃತಿಪಾಠ, ಕಿಂಡರಗಾರ್ಟನಪಾಠ ಮೊದಲಾದವುಗಳನ್ನು ಕಲಿಸುವ ಬಗ್ಗೆ ಉಪಯುಕ್ತ ಸೂಚನೆಗಳನ್ನು ಹೇಳಿದರು. ಮುಖ್ಯವಾಗಿ ವಿದ್ಯಾ

ರ್ಥಿಗಳ ಮಾನಸಿಕ, ನೈತಿಕ, ಶಾರೀರಿಕ ಶಕ್ತಿಗಳನ್ನು ಬಲಪಡಿಸಿ ಅವರ ಬುದ್ಧಿ ವಿಕಾಸ ಮಾಡುವದೂ, ಯಾವದೊಂದು ಉಚ್ಚಧ್ಯೇಯವನ್ನು ಮುಂದಿಟ್ಟುಕೊಂಡು ಅದಕ್ಕೆ ತಕ್ಕಂತೆ ಶಿಕ್ಷಣಕಾರ್ಯವನ್ನು ನಡಿಸುವದೂ ಶಿಕ್ಷಕನ ಕರ್ತವ್ಯವೆಂಬವನ್ನು ಮನೋವೇಧಕವಾಗುವಂತೆ ಬೋಧಿಸಿದರು.

ಇಷ್ಟಾದ ಮೇಲೆ ಮ್ಯುನಸಿಪಾಲಟಿಯು ವತಿಯಿಂದ ಸ್ಕೂಲಬೋ. ಚೇರಮನ್ನರು ಅಧ್ಯಕ್ಷರ ಹಾಗು ಪರಸ್ಥಳದಿಂದ ಬಂದ ನೂರಾರು ಮಂದಿ ಲೋಕಲಬೋರ್ಡ ಮಾಸ್ತರರ ಮತ್ತು ನಿಮಂತ್ರಿತರಾದ ಸದ್ಗೃಹಸ್ಥರ ಆಭಾರ ಮನ್ನಿಸಿದರು. ತರುವಾಯ ಹಾರ, ತುರಾಯಿ, ಅತ್ತರ ಮುಂತಾದವು ಆದವು. ಅನಂತರ ರಾಷ್ಟ್ರಗೀತವಾಗಿ ನಮ್ಮ ಪರಮಪೂಜ್ಯ ಪಂಚಮಜಾರ್ಜ ಬಾದಶಹರವರ ಹೆಸರಿನಿಂದ ತ್ರಿವಾರ ಜಯಘೋಷವಾಗಿ ಸಭಾವಿಸರ್ಜನೆಯಾಯಿತು.

ಇದೇ ದಿವಸ ಸಾಯಂಕಾಲದ ೭॥ ಘಂಟೆಯಿಂದ ೮ ಘಂಟೆಯವರೆಗೆ ರಾ. ಹೊಂಡದ ಎಂಬವರ ಥಿಯೆಟರದಲ್ಲಿ, ಮ್ಯುನಸಿಪಾಲಿಟಿಯವರಿಂದ ಆಮಂತ್ರಿತರಾದಂಥ ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರವರ ಅಸಿಸ್ಟಂಟರಾದ ರಾವಸಾಹೇಬ ಘಾಟೆಯುವರು ಯುರೋಪಖಂಡದಲ್ಲಿ ಈಗ ನಡೆದ ಮಹಾಯುದ್ಧದ ವಿಷಯವಾಗಿ ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ತರುವಾಯ ಮ್ಯಾಜಿಕ್ ಲ್ಯಾಂಟರ್ನದಲ್ಲಿ ಸದ್ಯದಲ್ಲಿ ನಡೆದ ಯುದ್ಧದ ಚಿತ್ರಗಳು ಅವರಿಂದ ತೋರಿಸಲ್ಪಟ್ಟವು. ಹಾಗು ಆ ಚಿತ್ರಗಳಿಗೆ ಸಂಬಂಧಿಸಿದ ಮಾಹಿತಿಯು ಸದರೀ ರಾವಸಾಹೇಬರವರಿಂದ ಹೇಳಲ್ಪಟ್ಟಿತು.

ಆ ಮೇಲೆ ರಾವಸಾಹೇಬ ಗುಪಾಜಿಯವರು ರಾವಸಾಹೇಬ ಘಾಟೆಯುವರ ಆಭಾರ ಮನ್ನಿಸಿ ಅವರಿಗೆ ಹಾರ, ತುರಾಯಿ, ಮುಂತಾದ ಆದರವು ಆದ ಮೇಲೆ, ನಮ್ಮ ಬಾದಶಹ ಸರಕಾರಕ್ಕೆ ಜಯವಾಗಲೆಂದು ಪ್ರಾರ್ಥನೆಯು ಮಾಡಲ್ಪಟ್ಟಿತು.

ಮೂರನೇ ದಿವಸ, ಅಂದರೆ ತಾ॥ ೬-೧೧-೧೫ ನೇ ದಿವಸ ಮುಂಜಾನೆ ಹೊಸೂರ (ಬೆಳಗಾವಿಯ ಹತ್ತರ) ಸಾಲೆಯಲ್ಲಿ ಅಲ್ಲಿಯ ವಿದ್ಯಾರ್ಥಿ

ಗಳಿಂದ ರಾವಸಾಹೇಬ ಗುಣಾಜಿಯುವರ ನೂತನ ವ್ಯಾಯಾಮವೂ, ಕ್ಷಯರೋಗದ ನಾಟಕ ಪ್ರಯೋಗವೂ ಮಾಡಿತೋರಿಸಲ್ಪಟ್ಟವು. ಅದರಲ್ಲಿ ನೂತನ ವ್ಯಾಯಾಮವೂ ಹುಡುಗರ ವ್ಯವಸ್ಥೆಯೂ ಅನುಕರಣೀಯವಾಗಿದ್ದವು. ಹಾಗು ವಿದ್ಯಾರ್ಥಿಗಳ ಗಾಯನವು ಪ್ರೇಕ್ಷಕರ ಮನಸ್ಸನ್ನು ಆನಂದಗೊಳಿಸುವಂಥಾದ್ದಾಗಿತ್ತು. ಪ್ರಯೋಗದ ತರುವಾಯ ಆ ಸಾಲೆಯ ಹೆಡ್‌ಮಾಸ್ತರರು ಈ ಕೆಲಸಗಳಿಗೆ ಸಹಾಯ ಮತ್ತು ಉಪಯುಕ್ತ ಸೂಚನೆಗಳನ್ನು ಮಾಡಿದ ಖಾನಸಾಹೇಬ ಡಿ|| ಎ|| ಇ|| ರವರಿಗೂ ರಾವಸಾ|| ಗುಣಾಜಿಯುವರಿಗೂ ಡಾಕ್ಟರ-ಕಿತ್ತೂರ (ಬೆಳಗಾವ) ರವರಿಗೂ ತಮ್ಮ ಕೃತಜ್ಞತೆಯನ್ನು ತೋರಿಸಿದರು.

ಬಳಿಕ ರಾ. ರಾ. ಹುಬ್ಬಳ್ಳಿ (ಧಾರವಾಡ) ಸಾಲೆಯ ಹೆಡ್‌ಮಾಸ್ತರರು ಸದರಿ ನಾಟಕದ ವಿಷಯವಾಗಿ ತಮ್ಮ ಸದಭಿಪ್ರಾಯವನ್ನು ವ್ಯಕ್ತಪಡಿಸಿದರು. ಮತ್ತು ಮುಂಬಯಿ ಇಲಾಖೆಯಲ್ಲಿ ಬಾಯಿಜ್ ಕೋಆಪರೇಟಿವ್ಹ ಸೊಸಾಯಿಟಿಗಳು ಬೆಳಗಾವ ಜಿಲ್ಹೆಯಲ್ಲಿಯೇ ಮೊದಲು ಸುರುವಾಗಿದ್ದು ಅವುಗಳಿಂದ ವಿಶೇಷ ಪ್ರಯೋಜನವುಂಟೆಂದು ಕಂಡು ಬಂದದರಿಂದ ಇತರ ಜಿಲ್ಲೆಗಳು ಈ ಸೊಸಾಯಿಟಿಯ ಅನುಕರಣ ಮಾಡಹತ್ತಿರುವವೆಂದು ಹೇಳಿದರು. ಮತ್ತು ಕ್ಷಯರೋಗದ ನಾಟಕವಾದರೂ ಇಲ್ಲಿಯೇ ಮೊದಲಾದ್ದರಿಂದ ಈ ಎರಡೂ ಏರ್ಪಾಡುಗಳ ಶ್ರೇಯಸ್ಸು ನಮ್ಮ ಜಿಲ್ಲೆಯ ಖಾನಸಾಹೇಬ ಡಿ. ಎ. ಇ. ರವರಿಗೆ ಇರುತ್ತದೆಂದು ಹೇಳಿ ಅವರ ಅಭಿನಂದನ ಮಾಡಿದರು.

ತರುವಾಯ ಗುರುವರ್ಯ ಪ್ರಿನ್ಸಿಪಾಲ ಸಾಹೇಬರವರು ನಾಟಕದ ವಿಷಯವಾಗಿ ಮಹತ್ವದ ಅನೇಕ ಸೂಚನೆಗಳನ್ನು ಮಾಡಿದ ಮೇಲೆ ಹಾರ, ತುರಾಯಿ ಆದವು. ಅನಂತರ ರಾಷ್ಟ್ರಗೀತವಾಗಿ ಪ್ರೇಕ್ಷಕರು ತಮ್ಮ ಸ್ಥಾನಗಳಿಗೆ ತೆರಳಿದರು.

ಈ ಸಮ್ಮೇಲನದಲ್ಲಿ ಗುರುವರ್ಯ ಅಧ್ಯಕ್ಷ ಸಾಹೇಬರವರ ಭಾಷಣಬೋಧಾಮೃತವು ಸುಶ್ರಾವ್ಯವೂ ನಿತ್ಯದಲ್ಲಿ ಉಪಯೋಗಬೀಳುವದೂ ಆಗಿದ್ದು ಪ್ರತಿಯೊಬ್ಬ ಶಿಕ್ಷಕನೂ ಹುಡುಗರ ತಂದೆತಾಯಿಗಳೂ ಪದೇ ಪದೇ ನೆನಪಿನಲ್ಲಿಡುವ ಹಾಗಿದೆ. ಆದರಿಂದ ಇಂಥವರ

ಅಧ್ಯಕ್ಷತೆಯ ಕೆಳಗೆ ಈ ಪ್ರಕಾರದ ಸಮ್ಮೇಲನಗಳು ಮೇಲಿಂದ ಮೇಲೆ ಆಗಲೆಂದು ನಾವೆಲ್ಲರು ಆಶಿಸಬೇಕಾಗಿದೆ.

ಪತ್ರವಿಸ್ತಾರಕ್ಕೆ ಕ್ಷಮೆಯಿರಲೆಂದು ಅಪೇಕ್ಷಿಸುವ.

ಬೆಳಗಾವ.
ತಾ|| ೩-೧೧-೧೯೧೫.

ತಮ್ಮ ವಿಧೇಯ ಶಿಷ್ಯನಾದ
ನೀಲಕಂಠ ಬಸಪ್ಪಾ ಇಂಚಲ ಹೆ. ಮಾಸ್ತರ
ಕ. ಶಾ. ನಂ ೨ ಬೆಳಗಾವ.

ವಿದ್ಯಾಖಾತೆಯ ನೋಟೀಸುಗಳು.

೧೯೧೬ ಇಸವಿಯ ಎಪ್ರೆಲ್ ತಿಂಗಳಲ್ಲಿ ಆಗುವ ಮಿಡಲ್‌ಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಯ ಉಮೇದವಾರರ ವಯಸ್ಸಿನ ಬಗ್ಗೆ

ಸರಕಾರದ ವಿದ್ಯಾಖಾತೆಯ ಜಾಹೀರಾತು.

ನಂಬರ ೬೪೭೭ ತಾ|| ೧೩ನೇ ಸಪ್ಟಂಬರ ೧೯೧೫.

ಸರಕಾರದ ಜಾಹೀರಾತ ನಂ. ೧೧೩೪ ತಾರೀಖು ೮ನೇ ಎಪ್ರೆಲ್ ೧೯೧೫ ರಲ್ಲಿ ಮಿಡಲ್‌ಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಯು ಈಗ ನಡಿಯುವ ವರ್ಷದಲ್ಲಿ ಆಗುವದಿಲ್ಲೆಂತಲೂ ಸದರೀ ಪರೀಕ್ಷೆಯು ೧೯೧೬ ರಿಂದ ಸಪ್ಟಂಬರ ತಿಂಗಳಲ್ಲಿ ಆಗುವದಕ್ಕೆ ಬದಲಾಗಿ ಎಪ್ರೆಲ್ ತಿಂಗಳಲ್ಲಿ ಆಗುವದೆಂತಲೂ ಪ್ರಸಿದ್ಧಪಡಿಸಿರುತ್ತದಷ್ಟೇ. ಆ ಸಂಬಂಧದಿಂದ ನೇಕನಾಮದಾರ ಗವ್ಹರನರ ಇನ್‌ಕೌನ್ಸಿಲ್‌ರವರು ಅಪ್ಪಣೆ ಕೊಡಿಸಿದ್ದೇನಂದರೆ-ಈಗ ನಡಿಯುವ ವರ್ಷದ ಸಪ್ಟಂಬರ ತಿಂಗಳಲ್ಲಿ ಪರೀಕ್ಷೆ ಆಗಿದ್ದರೆ ಯಾವ ಉಮೇದವಾರರಿಗೆ ಪರೀಕ್ಷೆಗೆ ಕೂಡ್ರಲಿಕ್ಕೆ ಬರುವಂತೆ ಇದ್ದು ೧೯೧೬ನೆಯ ಇಸವಿಯ ಎಪ್ರೆಲ್ ತಿಂಗಳಲ್ಲಿ ಆಗುವ ಪರೀಕ್ಷೆಗೆ ವಯಸ್ಸಿನ ನಿಯಮದ ಪ್ರಕಾರ ಕೂಡ್ರಲಿಕ್ಕೆ ಬರುವಂತೆ ಇರುವದಿಲ್ಲವೋ, ಅಂಥ ಉಮೇದವಾರರು ೧೯೧೬ನೆಯ ಇಸವಿಯ ಎಪ್ರೆಲ ತಿಂಗಳಲ್ಲಿ ಆಗುವ ಪರೀಕ್ಷೆಗೆ ಕೂಡ್ರುವದಕ್ಕೆ ಲಾಯಖಿಯುಳ್ಳವರಿರುವರೆಂದು ತಿಳಿಯಲ್ಪಡಬೇಕು.

J. L. Rieu.
ಸರಕಾರದ ಸೆಕ್ರೆಟರಿಗಳು.

ಶಾಲಾಪತ್ರಕ.

ಪುಸ್ತಕ ೫೧. | ದಶಂಬರ ೧೯೧೫. | ಸಂಚಿಕೆ ೧೨.

ಸ್ಫುಟವಿಷಯಗಳು.

೧. ಬ್ರಿಟಿಶ್ ಹಿಂದುಸ್ತಾನದಲ್ಲಿ ಶಿಕ್ಷಣದ ಪ್ರಸಾರವು.

ಹಿಂದುಸ್ತಾನ ಸರಕಾರದವರು "ಬ್ರಿಟಿಶ್ ಹಿಂದುಸ್ತಾನದಲ್ಲಿ ೧೯೧೩-೧೪ನೇ ವರ್ಷಗಳಲ್ಲಿ ಶಿಕ್ಷಣ ಪ್ರಸಾರವು" ಎಂಬ ಒಂದು ಪುಸ್ತಕವನ್ನು ಪ್ರಸಿದ್ಧಿಸಿರುವರು. ಅದರಿಂದ ತಿಳಿದು ಬರುವದೇನಂದರೆ, ೧೯೧೧-೧೨, ೧೯೧೨-೧೩ ಹಾಗು ೧೯೧೩-೧೪ನೇ ವರ್ಷಗಳಲ್ಲಿ ಕ್ರಮವಾಗಿ ಬ್ರಿಟಿಶ್ ಇಂಡಿಯಾದ ಪ್ರಜೆಗಳಲ್ಲಿ ನೂರರಲ್ಲಿ ೨·೭, ೨·೮, ಹಾಗು ೩· ಜನರು ಶಿಕ್ಷಣವನ್ನು ಹೊಂದುತ್ತಿರುವರು. ಇದೇ ಪುಸ್ತಕದಿಂದ ತಿಳಿದು ಬರುವ ಇನ್ನೊಂದು ಸಂಗತಿಯೇನಂದರೆ, ಬ್ರಿಟಿಶ್ ಸಾಮ್ರಾಜ್ಯದ ಆಳಿಕೆಯಲ್ಲಿ ಹಿಂದುಸ್ತಾನದ ಶಿಕ್ಷಣಪ್ರಸಾರದ ಕಾರ್ಯವು ಒಳ್ಳೇ ಭರದಿಂದ ನಡೆದಿರುವದು. ಆದರಲ್ಲಿಯೂ ಕಳೆದ ಎರಡು ವರುಷಗಳಲ್ಲಿ ವಿದ್ಯೆ ಕಲಿಯುವವರ ಸಂಖ್ಯೆಯು ನೂರರಲ್ಲಿ ೨.೭ ದಿಂದ ೩. ಆಗಿರುವದು; ಅಂದರೆ ಪ್ರತಿವರ್ಷಕ್ಕೆ ಸುಮಾರು· ೧೫ ದಂತೆ ಅಭಿವೃದ್ಧಿಯಾಗಿರುವದು. ಈ ಪ್ರಕಾರ ಬ್ರಿಟಿಶ್ ಹಿಂದುಸ್ತಾನದ ಪ್ರಜಾಸಂಖ್ಯೆಯಲ್ಲಿ ನೂರರಲ್ಲಿ ೩ ಜನರು ಮಾತ್ರ ವಿದ್ಯೆಯನ್ನು ಕಲಿಯುವರು. ಆದರೆ ತ್ರಾವಣಕೋರದಲ್ಲಿ ಈ ಮಾನವು ೬.೮ ಇರುವದು; ಆದರಂತೆ ಬಡೋದಾ ಸಂಸ್ಥಾನದಲ್ಲಿ ೧೧·೩೧, ಜಪಾನದಲ್ಲಿ ೧೫, ಅಮೇರಿಕಾದೊಳಗಿನ ಸಂಯುಕ್ತ ಸಂಸ್ಥಾನಗಳಲ್ಲಿ ೨೧·೨೨, ಮಿಸಿಸಿಪೀ ದೇಶದಲ್ಲಿ ೨೭·೨೮· ಇರುವದು· ನಮ್ಮ ದೇಶದ ಪ್ರಜೆಗಳಲ್ಲಿ ವಿದ್ಯಾಪ್ರಸಾರಣೆಯ ಮಾನವು ಹಿಂದೆ ಹೇಳಿದಂತೆ ವರುಷಕ್ಕೆ ·೧೫ ದಂತೆ ಬೆಳೆಯುತ್ತ ನಡೆಯುವವದೆಂತ ಕಲ್ಪಿಸಿದರೆ ನಮ್ಮವರು ಸಾಂಪ್ರತಕಾಲದ ತ್ರಾವಣಕೋರ ಸಂಸ್ಥಾನದೊಳಗಿನ ಪ್ರಜೆಗಳ ಮಾನದಂತೆ ಸುಶಿಕ್ಷಿತರಾಗಬೇಕಾದರೆ

ಇನ್ನೂ ೨೫-೨೬ ವರುಷಗಳೂ ಬಡೋದಾ ಸಂಸ್ಥಾನದವರನ್ನು ಸರಿಗಟ್ಟ ಬೇಕಾದರೆ ೫೫-೫೬ ವರುಷಗಳೂ, ಜಪಾನದವರಿಗೆ ಸರಿಯಾಗಬೇಕಾದರೆ ೮೦ ವರುಷಗಳೂ ಅಮೇರಿಕಾದೊಳಗಿನ ಸಂಯುಕ್ತ ರಾಷ್ಟ್ರದ (U. S. A.) ವರ ಜೋಡಿಗೆ ಬರಬೇಕಾದರೆ ೧೨೦ ವತ್ಸರಗಳೂ, ಮಿಸಿಸಿಪೀ ದೇಶದವರಂತಾಗಬೇಕಾದರೆ ೧೬೪ ವರುಷಗಳೂ ಬೇಕಾಗುವವು.

ಇದರ ಮೇಲಿಂದ ತಿಳಿದು ಬರುವದೇನಂದರೆ, ನಾವು ನಮ್ಮವರ ಶಿಕ್ಷಣಪ್ರಸಾರಣಕ್ಕಾಗಿ ಕೇವಲ ಸರಕಾರವನ್ನೇ ಆಶ್ರಯಿಸಿ ಕೂಡ್ರುವದು ಸರಿಯಲ್ಲ. ನಮ್ಮನ್ನು ನಾವೇ ಉದ್ಧರಿಸಿ ಕೊಳ್ಳಲು ಯತ್ನಿಸಬೇಕಲ್ಲದೆ, ಪರಾವಲಂಬನವು ಅಷ್ಟೊಂದು ಶ್ರೇಯಸ್ಕರವೂ ತೀವ್ರ ಫಲಕಾರಿಯೂ ಆಗಲಾರದು. ಆದ್ದರಿಂದ ಧನವಂತರೂ ವಿದ್ಯಾವಂತರೂ ಆದ ಜನರು ತಮ್ಮ ಬಾಂಧವರ ಉದ್ಧಾರಕ್ಕಾಗಿ ಯತ್ನಿಸತಕ್ಕದ್ದು.

---

೨. ಬಿಸಿ ನೀರಿನ ಉಪಯೋಗವು.

ಬಿಸಿ ನೀರಿನಲ್ಲಿ ಅನ್ನಾಶಯವನ್ನು ಸ್ವಚ್ಛ ಮಾಡುವಂಥ ಹಾಗು ಪಾಚಕಾವಯವಗಳನ್ನು ಉತ್ತೇಜನಗೊಳಿಸುವಂಥ ಗುಣವಿರುವದು. ಊಟ ಮಾಡುವದಕ್ಕೆ ಸುಮಾರು ೨-೩ ಗಳಿಗೆಗಳಿರುವಾಗ ಎರಡು ಥಾಲಿ ಬಿಸಿ ನೀರನ್ನು ಕುಡಿಯಬೇಕು. ಅದರಿಂದ ಅನ್ನಾಶಯವು ಸ್ವಚ್ಛವಾಗುವದು. ಒಂದೆರಡು ತಿಂಗಳುಗಳ ವರೆಗೆ ಒಂದೇ ಸವನೆ ದಿನಾಲು ಮುಂಜಾನೆ ಎರಡು ಥಾಲಿ ಬಿಸಿ ನೀರನ್ನು ಕುಡಿಯುತ್ತ ಹೋದರೆ ಅನ್ನಾಶಯದ ಎಲ್ಲ ವ್ಯಾಪಾರಗಳು ಸರಿಯಾಗಿ ನಡೆದು ಅನ್ನಾಶಯವು ಸ್ವಚ್ಛವಾಗಿ ಉಂಡ ಅನ್ನವು ಚನ್ನಾಗಿ ಅರಗಹತ್ತುವದು.

ನಿರೋಗಿಯಾದವರು ದಿನಾಲು ಬಿಸಿ ನೀರನ್ನು ಕುಡಿಯುವದು ಒಳ್ಳೆಯದಲ್ಲ. ಬಿಸಿ ನೀರನ್ನು ಕುಡಿಯುವದರಿಂದ ಶರೀರವು ದುರ್ಬಲವಾಗುವದು. ನೀರನ್ನು ಕಾಸುವದರಿಂದ ಅದರೊಳಗಿನ ಪ್ರಾಣಶಕ್ತಿಯು ನಷ್ಟವಾಗುವದು; ಆದರೆ ಸ್ವಚ್ಛವಾದ ಝರಿಯ ನೀರು ಸಿಗದೆ ಇದ್ದ ಪ್ರಸಂಗದಲ್ಲಿಯೂ ಯಾವದಾದರೂ ಬೇನೆಯಿಂದ ಪೀಡಿತರಾದಾಗ ಬಿಸಿ ನೀರನ್ನು ಕುಡಿಯಬೇಕಾದಾಗಲೂ ಮಾತ್ರ ನೀರನ್ನು ಚನ್ನಾಗಿ ಕಾಸಿ ಆರಿಸಿ ಬಳಿಕ ಕುಡಿಯಬೇಕು. ಈ ರೀತಿಯಾಗಿ ಕಾಸಿದ ನೀರನ್ನು

ಒಂದು ಪಾತ್ರೆಯಿಂದ ಮತ್ತೊಂದು ಪಾತ್ರೆಗೆ ಎತ್ತಿ ಸುರುವಿ ತಣಿಸುವದರಿಂದ ಅದರಲ್ಲಿ ಪುನಃ ಪ್ರಾಣಶಕ್ತಿಯು ಸಂಚಿತವಾಗುವದು.

ಒಮ್ಮೊಮ್ಮೆ ಊಟವಾದ ಬಳಿಕ ೨-೩ ತಾಸುಗಳ ನಂತರ ಗಂಟಲದಲ್ಲಿ ಕುದಿಯಹತ್ತಿ ಒಂದು ತರದ ಹುಳಿ ಹುಳಿಯಾದ ಪದಾರ್ಥವು ಒಳಗಿನಿಂದ ಉಕ್ಕಿ ಬರುವಂತೆ ತೋರುವದು. ಇದಕ್ಕೆ ಹೊಟ್ಟೆಯೊಳಗೆ ಅಪಕ್ವವಾದ ಹಾಗು ಹುಳಿಯಾದ ಪದಾರ್ಥಗಳು ಹೆಚ್ಚಾಗಿ ಸಂಚಿತವಾಗಿರುವದೇ ಕಾರಣವು. ಆ ಸಮಯದಲ್ಲಿ ಒಂದು ಥಾಲಿ ಬಿಸಿ ನೀರನ್ನು ಕುಡಿದರೆ ಕೂಡಲೆ ಗಂಟಲದಲ್ಲಿ ಕುದಿಯುವದು ನಿಂತು ಹೋಗುವದು.

ವಾಂತಿಯಾಗುವದು, ಹೊಟ್ಟೆಯಲ್ಲಿ ಕಳವಳವುಂಟಾಗಿ ತಲೆ ತಿರುಗಿ ಬರುವದು, ಹೊಟ್ಟೆಯುಬ್ಬುವದು ಮುಂತಾದ ವಿಕಾರಗಳಾದಾಗಲೂ ಬಿಸಿ ನೀರನ್ನು ಕುಡಿದರೆ ಅವು ಶಾಂತವಾಗುವವು.

ಕುತ್ತಿಗೆಯ ಹಿಂಭಾಗ ಹಾಗು ಕಾಲು ಇವುಗಳನ್ನು ಒಮ್ಮೆಲೆ ಬಿಸಿ ನೀರಿನಲ್ಲಿ ತೊಯಿಸಿದರೆ ತಲೆನೋವು ತಟ್ಟನೆ ನಿಂತು ಹೋಗುವದು. ತಲೆನೋವು ಬಂದಾಗ ಬಿಸಿ ನೀರಿನ ಪಾತ್ರೆಯಲ್ಲಿ ಕಾಲಿಟ್ಟು ಮುಂದಕ್ಕೆ ಬಾಗಿ ಕುಳಿತುಕೊಂಡು ಕುತ್ತಿಗೆಯ ಹಿಂಭಾಗದ ಮೇಲೆ ಬಿಸಿ ನೀರಿನ ಪಟ್ಟಿಯನ್ನು ಹಾಕಿಕೊಳ್ಳಬೇಕು. ಇದರಿಂದ ತಲೆನೋವು ನಿಲ್ಲುವದು.

ದಾಹಯುಕ್ತವಾದ ವಿಕಾರಗಳಲ್ಲಿ ವೈದ್ಯರೊಗಿ [illegible] ಕಾಯ್ದು ಕೈಯು ಮರಗಟ್ಟುವದು. ಆಗ ಅರಿವೆಯನ್ನು ಬಿಸಿ ನೀರಿನಲ್ಲಿ ಅದ್ದಿ ಹಿಂಡಿಕೊಂಡು ರೋಗಿಯ ಸರ್ವಾಂಗವನ್ನೂ ಆದಷ್ಟು ಬೇಗನೆ ಒರಿಸಬೇಕು. ಇದರಿಂದ ರೋಗದ ವಿಕಾರವು ಕಡಿಮೆಯಾಗುವದು.

ವಿಷಮಜ್ವರದಂಥ ಭಯಂಕರ ವಿಕಾರಗಳಲ್ಲಿ ಜ್ವರದ ಜೋರಿನಿಂದ ರೋಗಿಯ ಮೈಯು ಸುಟ್ಟು ಸುಟ್ಟು ತೊಗಲೆಲ್ಲ ಒಣಗಿ ಸ್ಫೊಟ್ಟಾಗಿ ಹೋಗುವದು. ಹಾಗು ರೋಗಿಯು ಸ್ಮೃತಿ ತಪ್ಪಿ ಬಡಬಡಿಸಹತ್ತುವನು. ಆಗ ಶಕ್ಯವಿದ್ದರೆ ರೋಗಿಗೆ ಬಿಸಿ ನೀರಿನಿಂದ ಸ್ನಾನ ಮಾಡಿಸಬಹುದು; ಇಲ್ಲದಿದ್ದರೆ ಚನ್ನಾಗಿ ಕಾಸಿದ ಬಿಸಿ ನೀರಿನ ಪಾತ್ರೆಯನ್ನು ಹತ್ತಿರ ಇಟ್ಟುಕೊಂಡು ಅದರೊಳಗೆ ಅರಿವೆಯನ್ನು ತೊಯಿಸಿ ಹಿಂಡಿಕೊಂಡು ಆ ಅರಿವೆಯಿಂದ ರೋಗಿಯ ಸರ್ವಾಂಗವನ್ನೂ ಚನ್ನಾಗಿ ಒರಿಸ

ಬೇಕು. ಹೀಗೆ ಮಾಡುವದರಿಂದ ರೋಗಿಗೆ ಬೆವರು ಬಂದು ಸಮಾಧಾನವಾಗಿ ಚನ್ನಾಗಿ ನಿದ್ರೆ ಬರುವದು. ಹಾಗು ಜ್ವರದ ಪರಿಣಾಮವು ಕಡಿಮೆಯಾಗುವದು.

ಮೂತ್ರಾವರೋಧವಾದಾಗ ರೋಗಿಯನ್ನು ಒಂದು ಬಿಸಿ ನೀರು ತುಂಬಿದ ಪಾತ್ರೆಯಲ್ಲಿ ಸುಮಾರು ನಾಭಿಯ ವರೆಗೆ ನೀರು ಬರುವಂತೆ ಮಾಡಿ ಕೂಡ್ರಿಸಬೇಕು. ಇದರಿಂದ ಮೂತ್ರವು ಸರಿಯಾಗಿ ಹೋಗಬೀಳ ಹತ್ತಿ ರೋಗಿಯು ನೆಟ್ಟಗಾಗುವನು.

ಥಂಡಿಯಿಂದ ತಲೆ, ಮೂಗು ಮುಂತಾದವು ನೋಯಹತ್ತಿ ಕನಿಯಲಾರಂಭಿಸಿದಾಗ ಆ ಭಾಗಗಳನ್ನು ಮರಗೀ ಕಾವಿನಿಂದ ಕಾಸಿದರೆ ವಿಕಾರವು ಕಡಿಮೆಯಾಗುವದು.

ಒಂದು ಪಾತ್ರೆಯಲ್ಲಿ ಬಿಸಿನೀರು ಮಾಡಿಕೊಂಡು, ಅದರಲ್ಲಿ ಸಾಸಿವೆಯ ಹುಡಿಯನ್ನು ಹಾಕಿ ಅದರಲ್ಲಿ ಕಾಲಿಟ್ಟುಕೊಂಡು ಕೆಲವು ವೇಳೆಯ ವರೆಗೆ ಕೂಡ್ರಬೇಕು. ಮೂಗಿನಿಂದ ರಕ್ತವು ಬೀಳುತ್ತಿದ್ದರೆ ಇದರಿಂದ ಕಡಿಮೆಯಾಗುವದು. ಕೆಲಕೆಲವರು ತಲೆಯಲ್ಲಿ ರಕ್ತವು ಸಂಚಿತವಾಗಿ ಎಚ್ಚರದಪ್ಪಿ ಬೀಳುವರು. ಅಂಥವರು ಈ ಉಪಾಯವನ್ನು ಮಾಡಿದರೆ ಕೂಡಲೆ ಗುಣವಾಗುವದು.

ಸ್ತ್ರೀಯರಿಗೆ ಪ್ರತಿತಿಂಗಳಿಗೆ ರಜೋದರ್ಶನವಾಗುವಾಗ ಉಂಟಾಗುವ ವೇದನೆಯೂ ಗರ್ಭಾಶಯದ ದಾಹವೂ ಬಿಸಿನೀರಿನ ಸ್ನಾನದಿಂದಲೂ ಶಾಕದಿಂದಲೂ ಕಡಿಮೆಯಾಗುವವು; ಇಷ್ಟೇ ಅಲ್ಲ. ತಿಂಗಳು ತಿಂಗಳಿಗೆ ಸರಿಯಾಗಿ ರಜೋದರ್ಶನವಾಗದೆ ಇದ್ದ ಸ್ತ್ರೀಯರಿಗೆ ನಿಯಮಿತ ಕಾಲವು ಸಮೀಪಿಸಿದ ಕೂಡಲೆ, ಇನ್ನೂ ಎರಡು ಮೂರು ದಿವಸಗಳಿರುವಾಗ, ದಿನಾಲು ಸುಮಾರು ೨೦ ಮಿನ್ಯುಟುಗಳ ವರೆಗೆ ಬಿಸಿನೀರಿನಿಂದ ಕಟಿಸ್ನಾನವನ್ನು ಮಾಡಿಸಬೇಕು. ಇದರಿಂದ ವಿಕಾರವು ಕಡಿಮೆಯಾಗುವದು.

---

೩. ಸರ್ಪದಂಶದ ಮೇಲೆ ಉಪಾಯವು.

ಸರ್ಪದಂಶದ ಮೇಲೆ ಆಧುನಿಕ ಶಾಸ್ತ್ರಜ್ಞರು ಹೊಸದೊಂದು ಉಪಾಯವನ್ನು ಶೋಧಿಸಿರುವರು. ಇದರಿಂದ ಸರ್ಪದ ವಿಷವು ತಪ್ಪದೆ ಇಳಿಯುವದೆಂದು ಅನೇಕರು ಅಭಿಪ್ರಾಯ ಪಟ್ಟಿರುವರು. ಸರ್ಪವು ಕಡಿದ

ಕೊಡಲಿ ಗಾಯದ ಮೇಲ್ಗಡೆಗೆ ತುಸು ಸ್ಥಳವನ್ನು ಬಿಟ್ಟು ಸಣ್ಣ ಹುರಿಯಿಂದ ಬಿಗಿಯಾಗಿ ಕಟ್ಟಬೇಕು. ಇದರಿಂದ ವಿಷವು ಶರೀರದ ಉಳಿದ ಭಾಗಕ್ಕೆ ರಕ್ತದ ಸಂಗಡ ಹರಿದುಹೋಗಿ ವ್ಯಾಪಿಸಲು ತಕ್ಕಮಟ್ಟಿಗೆ ಪ್ರತಿಬಂಧವಾಗುವದು. ಆ ಮೇಲೆ ರೋಗಿಗೆ ಹತ್ತುಹತ್ತು ಮಿನೀಟಿಗೊಮ್ಮೆ ಬಾಳೆಯ ದಿಂಡಿನ ರಸವನ್ನು ಕುಡಿಸಬೇಕು. ಈ ಕ್ರಮವನ್ನು ಒಂದು ತಾಸಿನ ವರೆಗೆ ನಡೆಯಿಸಬೇಕು. ಹಾಗು ಪರಮೇಂಗ್ಯಾನೇಟ ಆಫ ಪೋಟ್ಯಾಶವನ್ನು ನೀರಿನಲ್ಲಿ ಹಾಕಿ ಆ ನೀರನ್ನು ಕಡಿದ ಗಾಯದ ಮೇಲೆ ಒಂದೇಸವನೆ ಸುರುವಬೇಕು. ಸಾಧ್ಯವಿದ್ದರೆ ಕಡಿದ ಗಾಯವನ್ನು ಆ ನೀರಿನಲ್ಲಿ ಮುಳುಗಿಸಿ ಹಿಡಿಯಬಹುದು. ಪರಮೇಂಗ್ಯಾನೇಟ ಆಫ ಪೋಟ್ಯಾಶವು ಸಿಗದಿದ್ದರೆ ಗಾಯವನ್ನು ಚಾಕುವಿನಿಂದ ಕೊಯಿದು ಅದರ ಮೇಲೆ ತಣ್ಣೀರನ್ನು ಒಂದೇಸವನೆ ಸುರುವಬೇಕು. ಇದರಿಂದಲೂ ವಿಷವು ಇಳಿಯುವದು.

---

೪. ತಂತಿಯಿಲ್ಲದ ಗುಪ್ತ ಸಂದೇಶವಾಹಕ ಯಂತ್ರವು.

ಫ್ರೆಂಚರ ಮದ್ದಿನ ಕಾರಖಾನೆಯೊಳಗಿನ "ಸಾಡಿನ" ಎಂಬ ಹೆಸರಿನ ಒಬ್ಬ ಶಾಸ್ತ್ರಜ್ಞನು ಆರು ವರುಷಗಳ ವರೆಗೆ ಶ್ರಮಬಟ್ಟು ಒಂದು ಸಂದೇಶವಾಹಕ ಯಂತ್ರವನ್ನು ಶೋಧಿಸಿರುವನು. ಈ ಯಂತ್ರಕ್ಕೆ ಉಳಿದ ತಾರಾಯಂತ್ರಗಳಂತೆ ತಂತಿಯು ಅವಶ್ಯಕತೆಯಂತೂ ಇಲ್ಲವೇ ಇಲ್ಲ; ಇಷ್ಟೇ ಅಲ್ಲ, ಇತರ ಬಿನ್ನತಾರಿನ ಸಂದೇಶಹಾರಕ ಯಂತ್ರಗಳಂತೆ ಎತ್ತರವಾದ ಗೋಪುರಗಳು ಕೂಡ ಬೇಕಾಗಿಲ್ಲ. ಈ ಯಂತ್ರವನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಬೇಕಾದಹಾಗೆ ಎತ್ತಿ ಒಯ್ಯಲಿಕ್ಕೆ ಬರುವದು; ಹಾಗು ಬೇಕಾದಲ್ಲಿ ಅಲ್ಪ ಅವಕಾಶದಲ್ಲಿ ಅಡಗಿಸಿ ಇಡಲಿಕ್ಕೆ ಬರುವದು; ಭೂಮಧ್ಯ ಸಮುದ್ರದೊಳಗಿನ ಫ್ರೆಂಚರ ಸೈನ್ಯದ ಅಧಿಕಾರಿಗಳ ಮುಂದೆ ಆ ಶೋಧಕನು ಈ ಯಂತ್ರದ ಪ್ರಯೋಗವನ್ನು ಮೊನ್ನೆ ಮೊನ್ನೆ ಮಾಡಿ ತೋರಿಸಿರುವನು. ಯುದ್ಧದ ಕಾಲದಲ್ಲಿ ಈ ಯಂತ್ರದ ಉಪಯೋಗವು ಚನ್ನಾಗಿ ಆಗುವದೆಂದು ಅವರು ಅಭಿಪ್ರಾಯಪಟ್ಟಿರುವರು.

---

೫. ಒಂದು ಅಕಲ್ಪಿತವಾದ ಶೋಧವು.

ದಟ್ಟಾಗಿ ಮಂಜು ಮುಸುಕಿಕೊಂಡಾಗ ಸರಿಯಾಗಿ ದಾರಿಯು ಕಾಣಿಸದೆ ಇದ್ದದರಿಂದ ಹಲವು ಅಪಘಾತಗಳು ಸಂಭವಿಸುವವು. ವಿಶೇಷವಾಗಿ ನಾವಿಕರಿಗೆ ಈ ತರದ ಸಂಕಟಗಳು ಮೇಲಿಂದಮೇಲೆ ಒದಗುವವು. ಅತಿಶಯ ದಟ್ಟಾಗಿ ಮಂಜುಮುಸುಕಿಕೊಂಡಾಗಲೂ ಸರಿಯಾಗಿ ದಾರಿಯನ್ನು ತೋರಿಸುವಂಥ ಉದ್ಯುತ್ತಿನ ದೀಪವನ್ನು ಶೋಧಿಸಬೇಕೆಂದು ಅನೇಕ ಶಾಸ್ತ್ರಜ್ಞರು ಬಹುದಿನಗಳಿಂದ ಯತ್ನಿಸುತ್ತಿದ್ದರು. ಆದರೆ ಅವರಿಗೆ ಅದು ಇನ್ನೂ ಸರಿಯಾಗಿ ಸಾಧಿಸಿದ್ದಿಲ್ಲ. ಕೆಲವು ದಿವಸಗಳ ಹಿಂದೆ ಇಂಥ ದೀಪದ ಶೋಧವು ಅಕಸ್ಮಾತ್ತಾಗಿ ಆಗಿರುವದು. ತುಸು ದಿನಗಳ ಮೊದಲು ಒಬ್ಬ ಶಾಸ್ತ್ರಜ್ಞನು ಮೋಟಾರಗಾಡಿಯ ಸಲುವಾಗಿ ನೋಡುವವರ ದೃಷ್ಟಿಯನ್ನು ಕುಕ್ಕದೆ ತಕ್ಕಷ್ಟು ಹೆಚ್ಚು ಪ್ರಕಾಶವನ್ನು ಕೊಡುವಂಥ ದೀಪವನ್ನು ರಚಿಸಲು ಯತ್ನಿಸುತ್ತಿದ್ದಾಗ ಒಮ್ಮಿಂದೊಮ್ಮೆ ಈ ತರದ ದೀಪವು ಸಿದ್ಧವಾಯಿತು. ಅವನ ಇಚ್ಛೆಯ ಮೇರೆಗೆ ಈ ದೀಪದಲ್ಲಿ ಕಣ್ಣನ್ನು ಕುಕ್ಕದೆ ತಕ್ಕಷ್ಟು ಪ್ರಕಾಶವನ್ನು ಕೊಡುವಂಥ ಗುಣವಂತೂ ಇದ್ದೇ ಇತ್ತು. ಮೇಲಾಗಿ ದಟ್ಟವಾದ ಮಂಜಿನ ರಾಶಿಯೊಳಗಿಂದಲೂ ಪಾರಾಗಿ ಹೋಗಿ ಮಾರ್ಗವನ್ನು ತೋರಿಸುವ ಗುಣವು ಈ ದೀಪದ ಪ್ರಕಾಶದ ಕಿರಣಗಳಲ್ಲಿ ಇರುವದೆಂಬದು ಕಂಡುಬಂದಿತು. ಈ ದೀಪದ ಪ್ರಕಾಶವು ಸ್ವಚ್ಛವೂ ಕಂಚಿತ್ ಹಸುರು ಛಾಯೆಯುಳ್ಳದ್ದೂ ಭೇದಕ ಗುಣವುಳ್ಳದ್ದೂ ಇದ್ದು, ಚಂದ್ರನ ಪ್ರಕಾಶದಂತೆ ಶೀತಲವಾಗಿರುವದು. ಈ ದೀಪದ ಪ್ರಕಾಶಕ ಶಕ್ತಿಯು ಅತಿಶಯವಾಗಿದ್ದರೂ ಅದರಿಂದ ಉಷ್ಣತೆಯು ಹುಟ್ಟುವದಿಲ್ಲ. ಶಸ್ತ್ರಕ್ರಿಯೆಯನ್ನು ನಡಿಸುವ ಡಾಕ್ಟರರಿಗೆ ಈ ದೀಪದ ಕಿರಣಗಳ ಉಪಯೋಗವು ಎಕ್ಸರೇಜ ಯಂತ್ರದ ಕಿರಣಗಳಂತೆ ಆಗಬಹುದೆಂದು ಕೆಲವರು ತರ್ಕಿಸಿರುವರು. ಈ ಉದ್ದೇಶವನ್ನು ಮುಂದಿಟ್ಟುಕೊಂಡು ಕೆಲವರು ಶಸ್ತ್ರವೈದ್ಯರು ಈ ಬಗ್ಗೆ ಪ್ರಯೋಗವನ್ನು ಮಾಡಿ ನೋಡಲಾರಂಭಿಸಿರುವರು.

---

೬. ಪಾರ್ಲಿಮೆಂಟಿನ ಸಭಾಸದರ ವೇತನವು.

ಯಾವದೊಂದು ದೇಶದ ಪಾರ್ಲಿಮೆಂಟವೆಂದರೆ, ಆ ದೇಶವನ್ನು ಅಪ್ರತ್ಯಕ್ಷವಾಗಿ ಆಳುವ ಸಭೆಯಾಗಿರುತ್ತದೆ. ಇಡೀ ರಾಜ್ಯದಲ್ಲಿ ನಡೆಯುವ ಕೆಲಸಗಳು ಈ ಪಾರ್ಲಿಮೆಂಟಿನಲ್ಲಿ ಪಾಸಾದ ಕಾಯಿದೆಗಳನ್ನು ಅವಲಂಬಿಸಿರುವವು. ಇಂಥ ಪಾರ್ಲಮೆಂಟಿನ ಸಭಾಸದರಾಗುವದಕ್ಕೆ ಶ್ರೀಮಂತರೂ, ರಾಜಕಾರಣಪಟುಗಳೂ ಆದ ಜನರು ಮೇಲಾಡುವದು ಸಹಜವೇ ಸರಿ. ಕೇವಲ ದೊಡ್ಡಸ್ತಿಕೆ, ದೇಶಕಾರ್ಯವನ್ನು ಮಾಡುವ ಬಗ್ಗೆ ಉತ್ಕಟವಾದ ಇಚ್ಛೆ, ರಾಜನಿಷ್ಠೆ ಇವೇ ಮುಂತಾದ ಉದ್ದೇಶಗಳಿಂದ ಜನರು ಮೆಂಬರರಾಗಲು ಹವಣಿಸುವರು. ಅವರು ಕೇವಲ ದುಡ್ಡಿನ ಆಶೆಗಾಗಿಯೇ ಪಾರ್ಲಿಮೆಂಟಿನಲ್ಲಿ ಸೇರಲಿಚ್ಛಿಸುವದಿಲ್ಲ. ಆದರೂ ಯುರೋಪದಲ್ಲಿ ಬೇರೆ ಬೇರೆ ದೇಶದ ಪಾರ್ಲಿಮೆಂಟಿನ ಸಭಾಸದರಿಗೆ ಬೇರೆ ಬೇರೆ ತರದ ಅನುಕೂಲತೆಗಳು ಮಾಡಿ ಕೊಡಲ್ಪಟ್ಟಿರುವವು. ಇವುಗಳನ್ನು ನಮ್ಮ ವಾಚಕರಿಗೋಸ್ಕರ ಇದರಡಿಯಲ್ಲಿ ಕಾಣಿಸುವೆವು:-

ಇತಾಲಿ, ಸ್ಪೇನ ಈ ದೇಶಗಳ ಸಭಾಸದರಿಗೆ ಯಾವ ಪ್ರಕಾರದ ವೇತನವೂ ಇಲ್ಲ; ಹಾಗು ಯಾವ ತರದ ಅನುಕೂಲತೆಗಳೂ ಮಾಡಿ ಕೊಡಲ್ಪಡುವದಿಲ್ಲ.

ಪೋರ್ತುಗಾಲ ದೇಶದ ಪಾರ್ಲಿಮೆಂಟಿನ ಮೆಂಬರ ಜನರಿಗೆ ನಿಯಮಿತ ವೇತನವು ಸಿಗುವದಿಲ್ಲ. ಆದರೆ ಪ್ರತಿ ಒಬ್ಬ ಮೆಂಬರನಿಗೆ ರೇಲ್ವೆಯ ಫ್ರೀಪಾಸು (Free pass) ಇರುವದು. ಇದರಿಂದ ಅವರು ಉಗೆಬಂಡಿಯ ಮಾರ್ಗವಾಗಿ ಬೇಕಾದಾಗ ಬೇಕಾದಲ್ಲಿಯ ವರೆಗೆ ಏನೂ ಬಾಡಿಗೆಯನ್ನು ಕೊಡದೆ ಪ್ರವಾಸ ಮಾಡಬಹುದು. ಮತ್ತು ಯಾವದೊಂದು ಪ್ರಾಂತದ ಜನರು, ತಮಗೆ ಅವಶ್ಯ ಕಂಡರೆ, ತಾವು ಆರಿಸಿ ಕಳಿಸಿದ ಮೆಂಬರನಿಗೆ, ಅವನು ಪಾರ್ಲಿಮೆಂಟಿನ ಕೆಲಸಕ್ಕೆ ಹಾಜರ ಇದ್ದ ಪ್ರತಿಯೊಂದು ದಿವಸಕ್ಕೆ ೧೦ ರೂಪಾಯಿಗಳಂತೆ ವೇತನವನ್ನು ಕೊಡಬಹುದು.

ಡೆನ್ಮಾರ್ಕ ದೇಶದಲ್ಲಿ ಪ್ರತಿ ಒಬ್ಬ ಮೆಂಬರನಿಗೆ ಅವನು ಪಾರ್ಲಮೆಂಟಿನ ಕೆಲಸಕ್ಕೆ ಹಾಜರ ಇದ್ದ ಪ್ರತಿದಿವಸದ ಬಗ್ಗೆ ೪॥ ರೂಪಾಯಿ

ಸಂಬಳ ದೊರೆಯುವದು; ಮತ್ತು ಪ್ರತಿ ಒಬ್ಬ ಮೆಂಬರನಿಗೆ ಅಲ್ಲಿಯ ಅರಸನ ನಾಟಕಗೃಹದಲ್ಲಿ ಬೇಕಾದಾಗ ಪ್ರಯೋಗಗಳನ್ನು ಪುಕ್ಕಟೆ ಯಾಗಿ ನೋಡಲಿಕ್ಕೆ ಒಂದು ಫ್ರೀ ಪಾಸು (Free pass) ಇರುವದು.

ನಾರ್ವೆ ದೇಶದಲ್ಲಿ ಪಾರ್ಲಮೆಂಟಿನ ಕೆಲಸಕ್ಕೆ ಹಾಜರ ಇದ್ದ ಪ್ರತಿ ದಿವಸಕ್ಕೆ ೯ ರೂಪಾಯಿಯಂತೆ ಮೆಂಬರರಿಗೆ ಸಂಬಳವಿರುವದು. ಆದರೆ ಅವರು ಗೈರಹಾಜರ ಇದ್ದ ಪ್ರತಿ ದಿವಸದ ಬಗ್ಗೆ ಅವರ ದಿನದ ಸಂಬಳದ ಎರಡಷ್ಟು ಹಣವು ಮುರಕೊಳ್ಳಲ್ಪಡುವದು.

ಸ್ವಿಟ್ಝರ್ಲಂಡದಲ್ಲಿಯೂ ಇದೇ ಪ್ರಕಾರದ ವ್ಯವಸ್ಥೆಯಿದೆ. ಅಲ್ಲಿಯ ಮೆಂಬರ ಜನರ ಪ್ರತಿದಿನದ ಸಂಬಳವು ಮಾತ್ರ ೧೦ ರೂಪಾಯಿಗಳಿರುವದು.

ರುಮಾನಿಯಾದಲ್ಲಿ ಪಾರ್ಲಮೆಂಟಗೆ ಹಾಜರ ಇದ್ದ ಪ್ರತಿದಿವಸಕ್ಕೆ ೧೫ ರೂಪಾಯಿಯಂತೆಯೂ, ಸರ್ವಿಯಾದಲ್ಲಿ ೧೦ ರೂಪಾಯಿಯಂತೆಯೂ ಇರುವದು. ಆದರೆ ಯಾವ ಮೆಂಬರ ಜನರು ರಾಜಧಾನಿಯ ಪಟ್ಟಣದಲ್ಲಿ ವಾಸಿಸುವರೋ ಅವರಿಗೆ ದಿನಾಲು ೯ ರೂಪಾಯಿಗಳು ಮಾತ್ರ ಕೊಡಲ್ಪಡುವವು. ಯಾಕೆಂದರೆ, ಅವರಿಗೆ ಪ್ರವಾಸ ಮಾಡಬೇಕಾಗುವದಿಲ್ಲ; ಹಾಗು ಇಳಕೊಳ್ಳುವ ಸ್ಥಳದ ಅನುಕೂಲತೆಯನ್ನು ಮಾಡಿಕೊಳ್ಳಬೇಕಾಗುವದಿಲ್ಲ.

ಹಂಗೇರಿ ದೇಶದಲ್ಲಿ ಪಾರ್ಲಮೆಂಟಿನ ಮೆಂಬರ ಜನರಿಗೆ ಪ್ರತಿ ವರ್ಷಕ್ಕೆ ನಗದು ೩೦೦೦ ರೂಪಾಯಿ ಸಂಬಳವನ್ನು ಕೊಡುವರು; ಮತ್ತು ಉಗೆಬಂಡಿಯ ಎರಡನೇ ವರ್ಗದ ತಿಕೀಟನ್ನು ಕೊಂಡು ಮೊದಲನೇ ವರ್ಗದಲ್ಲಿ ಪ್ರವಾಸ ಮಾಡುವ ಅನುಕೂಲತೆಯು ಅವರಿಗಿರುವದು. ಇದಲ್ಲದೆ ಅವರಿಗೆ ಮನೆಯ ಬಾಡಿಗೆ ಎಂದು ಕೆಲವು ಹಣ ಸಿಗುವದು.

ಇಂಗ್ಲಂಡದ ಪಾರ್ಲಮೆಂಟಿನ ಮೆಂಬರ ಜನರಿಗೆ ಇ. ಸ. ೧೯೧೧ರ ವರೆಗೆ ಏನೂ ಸಂಬಳವು ದೊರೆಯುತ್ತಿದ್ದಿಲ್ಲ. ಆದರೆ ಆ ವರ್ಷದಿಂದ ಪ್ರತಿ ಒಬ್ಬ ಮೆಂಬರನಿಗೆ ಪ್ರತಿ ವರ್ಷಕ್ಕೆ ೬೦೦೦ ರೂಪಾಯಿ ಸಂಬಳವು ಸಿಗುತ್ತ ಇದೆ.

ಪ್ರಕೃತಿವಿಮರ್ಶೆ.

(ಕಳೆದ ತಿಂಗಳ ಸಂಚಿಕೆಯ ೧೬೩ನೆಯ ಪುಟದಿಂದ ಮುಂದೆ ಸಾಗಿದ್ದು.)

ಇವಲ್ಲದೆ ಮತ್ತೊಂದು ಸ್ಥೂಲವಾದ ವ್ಯತ್ಯಾಸವೂ ಕೂಡ ಇರುವದು. ನಾವು ಒಂದು ಕಲ್ಲನ್ನಾಗಲಿ, ಒಂದು ಕಲ್ಲುಸಕ್ಕರೆಯ ಚೂರನ್ನಾಗಲಿ, ತಂದು ಒಂದು ಕೋಣೆಯಲ್ಲಿಟ್ಟರೆ, ಅದು ಎಷ್ಟು ದಿವಸಗಳಾದರೂ ವ್ಯತ್ಯಾಸಹೊಂದದೆ ಒಂದೇ ರೀತಿಯಲ್ಲಿರುವದು. ಇವುಗಳಿಗೆ ಬದಲಾಗಿ ಯಾವದಾದರೂ ಗಿಡದ ಹಣ್ಣನ್ನಾಗಲಿ ಒಂದು ಮಾಂಸದ ತುಂಡನ್ನಾಗಲಿ ಆ ಕೋಣೆಯಲ್ಲಿಟ್ಟರೆ ಸ್ವಲ್ಪ ಕಾಲವಾದ ಮೇಲೆ ಅದು ಕೊಳೆತು ಅದರಿಂದ ಒಂದು ಕೆಟ್ಟ ವಾಸನೆಯು ಹೊರಡುವದು; ಅಂದರೆ, ಆ ಪದಾರ್ಥದ ವಸ್ತುಗಳು ರೂಪಾಂತರವನ್ನು ಹೊಂದಲಾರಂಭಿಸುವವು. ಈ ಗುಣವು ಪ್ರಾಣಿಶರೀರದ ವಸ್ತುಗಳ ಒಂದು ವಿಶೇಷ ಲಕ್ಷಣವು. ನಿರ್ಜೀವ ಪದಾರ್ಥಗಳ ಮೂಲವಸ್ತುಗಳು ಎಷ್ಟು ಕಾಲವಾದರೂ ಒಂದೇ ರೀತಿಯಲ್ಲಿರುವವು. ಸಜೀವ ವ್ಯಕ್ತಿಗಳ ಮೂಲವಸ್ತುಗಳು ಆಗಿಂದಾಗ್ಗೆ ಬದಲಾವಣೆಗಳನ್ನು ಹೊಂದುತ್ತಿರುವವು. ಜೀವಶಾಸ್ತ್ರದಲ್ಲಿ ಪರಿಶ್ರಮ ಪಟ್ಟಿರುವವರು ಜಂತುಗಳು, ವನಸ್ಪತಿಗಳು ಮೊದಲಾದ ಜೀವವುಳ್ಳ ವ್ಯಕ್ತಿಗಳೆಲ್ಲವೂ ಬೆಳೆದು ಬದುಕುವದಕ್ಕೆ ಬೇಕಾದ ಮೂಲವಸ್ತುವು ಒಂದೇ ವಿಧವೆಂದು ನಿರ್ಣಯಿಸಿ, ಅದಕ್ಕೆ "ಪ್ರೋಟೋಪ್ಲಾಸಮ್" (ಅಂದರೆ ಜೀವಾಣು) ಎಂದು ಹೆಸರಿಟ್ಟಿರುವರು. ಈ ವಸ್ತುವೇ ಎಲ್ಲಾ ಪ್ರಾಣಿಗಳಲ್ಲಿದ್ದುಕೊಂಡು ಅವುಗಳಲ್ಲಿ ಎಲ್ಲಾ ವಿಧವಾದ ಬದಲಾವಣೆಗಳನ್ನು ನಡೆಸುತಿ ರುವದು. ಇದರ ವಿಶೇಷ ಗುಣದಿಂದಲೆ ಪದಾರ್ಥಗಳು ಕೊಳೆತು ರೂಪಾಂತರಗಳನ್ನು ಹೊಂದುವವು. ಇದು ಕೆಟ್ಟು ಹೋದರೆ, ಪ್ರಾಣಿಗಳಲ್ಲಿ ಯಾವದೊಂದು ಕೆಲಸವು ನಡೆಯುವದಿಲ್ಲ. ಅದರ ಪೂರ್ಣ ಸ್ವರೂಪವು ಇನ್ನು ಸರಿಯಾಗಿ ತಿಳಿದಿಲ್ಲ.

ಗಿಡಗಳ ಜೀವಮಾನವನ್ನು ನಿರೀಕ್ಷಿಸುವದರಿಂದ ಪ್ರಾಣಿಗಳಲ್ಲಿರುವ ಮತ್ತೊಂದು ವಿಶೇಷಾಂಶವನ್ನು ನಾವು ತಿಳಿಯಬಹುದು. ಒಂದು ಸಸ್ಯದ ಬೀಜವನ್ನು ಎಲ್ಲಾದರೂ ಬಿತ್ತಿದರೆ, ಅದರಿಂದ ಮೊಳೆ ಹೊರಟು ಅದು ಕಾಲಕ್ರಮದಲ್ಲಿ ಸಣ್ಣ ಸಸ್ಯದಿಂದ ದೊಡ್ಡ ಗಿಡವಾಗುವದು. ಅದು ಪೂರ್ಣವಾದ ಬೆಳೆಯನ್ನು ಹೊಂದಿದಾಗ ಅದರಲ್ಲಿ ಪುಷ್ಪಗಳು ಬಿಟ್ಟು ಅವು ಫಲಗಳಾಗಿ ಕೊನೆಗೆ ಬೀಜಗಳನ್ನು ಕೊಡುವವು. ಈ ಬೀಜಗ

ಳನ್ನು ಸಕಾಲದಲ್ಲಿ ಸರಿಯಾದ ಕ್ಷೇತ್ರದಲ್ಲಿ ನಟ್ಟರೆ, ಪುನಃ ಅದೇ ತೆರನಾದ ಗಿಡಗಳೇ ಹುಟ್ಟುವವು. ಅವು ಬೆಳೆದು ಬೀಜಗಳನ್ನು ಬಿಡುವವು. ಅಂದರೆ, ಅವುಗಳ ಬೆಳವಳಿಕೆಯ ಕ್ರಮವು ಮೊದಲಿನ ಗಿಡದ ಕ್ರಮದ ಹಾಗೆಯೇ ಇರುವದು. ಹೀಗೆ ಎಲ್ಲಾ ವರ್ಗದ ಪ್ರಾಣಿಗಳಲ್ಲಿಯೂ ಶಿಶುವಿನಿಂದ ಪ್ರಾರಂಭಿಸಿ ತಿರಿಗಿ ಶಿಶುವು ಹುಟ್ಟುವವರಿಗೂ ಇರತಕ್ಕ ಅವಸ್ಥೆಗಳು ಪುನಃ ಪುನಃ ಅದೇ ಕ್ರಮದಲ್ಲಿಯೇ ಸಾಗುತ್ತಿರುವವು. ಆದುದರಿಂದ ಪ್ರಾಣಿಗಳ ಜೀವಮಾನ ಮತ್ತು ಉತ್ಪತ್ತಿ ಕ್ರಮವು ಚಕ್ರ ಗತಿಯಾಗಿರುತ್ತದೆಂದು ಶಾಸ್ತ್ರಜ್ಞರು ಹೇಳುವರು.

ಈಗ ನಾವು ಗಿಡಗಳಲ್ಲಿ ನಿರೀಕ್ಷಿಸಬಹುದಾದ ಪ್ರಾಣಿಲಕ್ಷಣಗಳನ್ನು ಸಂಕ್ಷೇಪವಾಗಿ ಹೇಳಬೇಕಾದರೆ:— ಜೀವವುಳ್ಳವುಗಳಿಗೆ ಅಂಗ ರಚನೆಯೂ ಆಕಾರ ವಿಶೇಷವೂ ಇರುವವು. ಜೀವವುಳ್ಳವುಗಳು ಆಹಾರವನ್ನು ಒಳಗೊಂಡು ದೇಹದ ಒಳಗೆ ಬದಲಾವಣೆಗಳನ್ನು ಹೊಂದುತ್ತಲಿ ಇರುವವು. ಕಾಲಕ್ರಮದಲ್ಲಿ ತಮ್ಮಂತಿರುವವುಗಳನ್ನುಂಟು ಮಾಡುವವು. ಪ್ರಾಣಿಗಳ ಜೀವಮಾನ ಮತ್ತು ಉತ್ಪತಿ-ಯ ಕ್ರಮವು ಚಕ್ರ ಗತಿಯಾಗಿರುತ್ತದೆ.

ಎರಡನೇ ಅಧ್ಯಾಯ.

ಸಸ್ಯ ವರ್ಗದ ಸಾಮಾನ್ಯಲಕ್ಷಣಗಳು.

ಜೀವವುಳ್ಳವುಗಳಿಗೂ ಜೀವವಿಲ್ಲದೆ ಇರುವವುಗಳಿಗೂ ಪರಸ್ಪರವಿರುವ ವ್ಯತ್ಯಾಸಗಳನ್ನು ತಿಳಿದಿದ್ದರಿಂದ ಪ್ರಾಣಿಗಳ ಸಂಬಂಧವಾದ ವಿಷಯಗಳನ್ನೆಲ್ಲ ತಿಳಿದ ಹಾಗಾಗುವದಿಲ್ಲ. ಈ ಪ್ರಪಂಚದಲ್ಲಿ ಉತ್ಪತ್ತಿಯಾಗುತ್ತಿರುವ ಪ್ರಾಣಿಗಳನ್ನು ಕುರಿತು ವಿಚಾರಮಾಡುವಾಗ ಹಿಂದಿನ ಅಧ್ಯಾಯದಲ್ಲಿ ತಿಳಿಸಿದ ಅವುಗಳಿಗೂ ಜೀವವಿಲ್ಲದವುಗಳಿಗೂ ಇರುವ ವ್ಯತ್ಯಾಸಗಳಲ್ಲದೆ ಅನೇಕ ಇತರ ಅಂಶಗಳು ನಮ್ಮ ಗಮನಕ್ಕೆ ಬರುವವು. ಈ ಪ್ರಾಣಿಗಳು ಹ್ಯಾಗೆ ಉದ್ಭವಿಸಿದವು? ಅವು ಭೂಪೃಷ್ಠದ ಮೇಲೆ ಹ್ಯಾಗೆ ಹರಡಿಕೊಂಡಿರುತ್ತವೆ? ಅವು ಏತಕ್ಕೆ ಕಾಲಕ್ರಮದಲ್ಲಿ ಮುಪ್ಪನ್ನು ಹೊಂದಿ ಸಾಯುತ್ತವೆ? ಅವುಗಳಲ್ಲಿ ಕಾಣುವ ಚಟುವಟಿಕೆಗೂ ಸನ್ನಿವೇಶಕ್ಕೆ ತಕ್ಕ ಹಾಗೆ ಆಚರಿಸುವಂತೆ ಮಾಡುವ ಶಕ್ತಿಗೂ ಕಾರಣವು ಯಾವದು? ಇವೇ ಮೊದಲಾದ ಅನೇಕ ಪ್ರಶ್ನೆಗಳು ಹುಟ್ಟು

ನವು. ಇವುಗಳಲ್ಲಿ ಕೆಲವು ಪ್ರಶ್ನೆಗಳಿಗೆ ಸರಿಯಾದ ಉತ್ತರಗಳು ದೊರೆಯುವದಿಲ್ಲ. ಯಾವ ಯಾವ ವಿಷಯಗಳು ಸ್ಪಷ್ಟವಾಗಿ ತಿಳಿದಿಲ್ಲವೋ ಅಂಥವುಗಳನ್ನು ತಿಳಿಯಬೇಕೆಂಬ ಉದ್ದೇಶದಿಂದ ಜೀವಶಾಸ್ತ್ರದಲ್ಲಿ ಪಾರಂಗತರಾದವರು ಪ್ರಾಣಿಗಳನ್ನು ಅನೇಕ ವಿಧವಾದ ಪರೀಕ್ಷೆಗಳಿಗೆ ಗುರಿಮಾಡುತ್ತಿರುವರು.

ಪ್ರಾಣಿಗಳ ಉತ್ಪತ್ತಿಯ ವಿಷಯದಲ್ಲಿ ಸಾಮಾನ್ಯ ಜನರಲ್ಲಿ ರೂಢಿಯಾಗಿರುವ ಕೆಲವು ಅಭಿಪ್ರಾಯಗಳು ಶಾಸ್ತ್ರಜ್ಞರು ಹೇಳುವದಕ್ಕೆ ವಿರುದ್ಧವಾಗಿರುತ್ತವೆ. ಬಹುಕಾಲದಿಂದಲೂ ಜನರು ತಮ್ಮ ಸುತ್ತಲೂ ಇರುವ ಪ್ರಾಣಿಗಳಲ್ಲಿ ಕೆಲವು ನಿರ್ಜೀವ ಪದಾರ್ಥಗಳಿಂದ ಹುಟ್ಟುತ್ತವೆ, ಎಂದು ತಿಳಿದುಕೊಂಡಿರುತ್ತಾರೆ. ಕೆಲವು ಮಳೆಯಾದಾಗ ಉದ್ಭವಿಸುತ್ತವೆ, ಎಂತಲೂ ಕೆಲವು ಸೂರ್ಯನ ಉಷ್ಣದಿಂದ ಹುಟ್ಟುತ್ತವೆ ಎಂತಲೂ ಹೇಳುವರು. ಶಾಸ್ತ್ರಜ್ಞರು ಈ ವಿಷಯದಲ್ಲಿ ನಡೆಸಿರುವ ಪರಿಶೋಧನೆಗಳಿಂದ ಪ್ರಾಣಿಗಳು ಪ್ರಾಣಿಗಳಿಂದಲೇ ಉತ್ಪತ್ತಿಯಾಗುತ್ತವೆ; ಸಜೀವಿಗಳು ನಿರ್ಜೀವ ಪದಾರ್ಥಗಳಿಂದ ಹುಟ್ಟಲಾರವೆಂದು ಏರ್ಪಟ್ಟಿರುತ್ತದೆ. ನಮ್ಮ ತೋಟದಲ್ಲಿ ಅವರೆ, ಬೆಂಡೆ, ಮೊದಲಾದ ಗಿಡಗಳಿಗೆ ಹ್ಯಾಗೆ ಬೀಜಗಳು ಅವಶ್ಯಕವೋ, ಹಾಗೆಯೇ ಪ್ರತಿಯೊಂದು ಪ್ರಾಣಿಯ ಉತ್ಪತ್ತಿಗೂ ಅದರಬೀಜ, ಅಥವಾ ಅಂಡವಿದ್ದೇ ಇರಬೇಕು. ಸಾಮಾನ್ಯ ಜನಗಳು ಇಂಥ ಪ್ರಾಣಿಗಳ ಜೀವಮಾನದಲ್ಲಿ ಎಲ್ಲ ಅವಸ್ಥೆಗಳನ್ನು ನಿರೀಕ್ಷಿಸಲು ಶಕ್ತರಲ್ಲ. ಅವರಿಗೆ ಗೋಚರವಾಗತಕ್ಕ ಸ್ವಲ್ಪ ವಿಷಯಗಳಿಂದಲೇ ಅವರು ಕಾರ್ಯಕಾರಣಗಳನ್ನು ತಿಳಿಯುವದರಿಂದ ಅವರ ಅಭಿಪ್ರಾಯಗಳಲ್ಲಿ ತಪ್ಪುಗಳಿರುವದಕ್ಕೆ ಅವಕಾಶವಿರುವದು. ಸ್ವೇದಜಗಳೆಂದು ಕರೆಯಲ್ಪಡುವ ಪ್ರಾಣಿಗಳು ಕೇವಲ ಬೆವರಿನಿಂದ ಹುಟ್ಟತಕ್ಕವುಗಳಲ್ಲ. ಅವುಗಳ ಮೊಟ್ಟೆಗಳು (ಅಂಡಗಳು) ಸೂಕ್ಷ್ಮವಾಗಿಯೂ ಹಗುರವಾಗಿಯೂ ಇದ್ದು ಹವೆಯಲ್ಲಿ ತೇಲಾಡುತ್ತಿರುತ್ತವೆ.

ಹೀಗೆ ಸಂಚಾರ ಮಾಡುತ್ತ ಕೊನೆಗೆ ಯಾವದಾದರೂ ಒಂದು ಆಶ್ರಯಕ್ಕೆ ಬಂದು ಸೇರುವವು. ಅಲ್ಲಿ ಸರಿಯಾದ ಸನ್ನಿವೇಶಗಳು— ಅಂದರೆ, ಶಾಖ, ಮೊದಲಾದವು ದೊರೆತರೆ ಈ ಪ್ರಾಣಿಗಳು ಅಂಡಗಳಿಂದ ಹೊರಡಲು ಸಾಧ್ಯವಾಗುವದು.

ಈ ಲಕ್ಷಣವನ್ನನುಸರಿಸಿದ ಹಾಗೆ ಮತ್ತೊಂದು ಲಕ್ಷಣವು ಪ್ರಾಣಿಗಳಲ್ಲಿ ಕಾಣುವದು. ಒಂದು ಜಾತಿಯ ಪ್ರಾಣಿಯಿಂದ ಅದೇ ಜಾತಿಯ ಪ್ರಾಣಿಯು ಹುಟ್ಟುವದೇ ಹೊರತು ಅನ್ಯ ಜಾತಿಯ ಪ್ರಾಣಿಯು ಬರುವದಿಲ್ಲ. ಈ ವಿಷಯದಲ್ಲೂ ಸಾಮಾನ್ಯ ಜನಗಳಲ್ಲಿ ಅನೇಕ ತಪ್ಪು ಅಭಿಪ್ರಾಯಗಳಿರುತ್ತವೆ. ಚೆಂಡೆಯ ಗಿಡದಿಂದ ಅದೇ ಜಾತಿಯ ಸಸ್ಯಗಳಾಗುವ ಬೀಜಗಳು ಹೊರಡುವವು. ಅವರೇ ಗಿಡದಿಂದ ಅವರೆ ಗಿಡದ ಬೀಜಗಳು ಮೊಳೆಗಳು ಹೊರಡುವವು.

ನಾವು ಇಲ್ಲಿಯವರಿವಿಗೂ ವಿಚಾರ ಮಾಡಿದ ಲಕ್ಷಣಗಳನ್ನು ಹೊಂದಿರುವ ಸಜೀವಿಗಳು ನಮ್ಮ ಸುತ್ತಲು ಎಲ್ಲಾ ಕಡೆಗಳಲ್ಲಿಯೂ ಸಂಖ್ಯೆ ಮಾಡಲಸಾಧ್ಯವಾದಷ್ಟು ಇರುವವು. ನೆಲದ ಮೇಲೂ, ನೀರಿನಲ್ಲಿಯೂ, ಹಾಗೆಯೇ ವಾತಾವರಣದಲ್ಲಿಯೂ, ಕಣ್ಣಿಗೆ ಕಾಣದಷ್ಟು ಬಹಳ ಸೂಕ್ಷ್ಮವಾದ ಪ್ರಾಣಿಗಳು ನಿಮಿಷ ನಿಮಿಷದಲ್ಲಿಯೂ ಹುಟ್ಟುತ್ತಲೂ ಸಾಯುತ್ತಲೂ ಇರುತ್ತವೆ.

ಪ್ರಪಂಚದಲ್ಲಿಯ ಪ್ರಾಣಿಗಳನ್ನು ಜಂತುಗಳೆಂತಲೂ ಸಸ್ಯಗಳೆಂತಲೂ ಎರಡು ಪಂಗಡಗಳನ್ನಾಗಿ ವಿಭಾಗ ಮಾಡುವದು ರೂಢಿಯಾಗಿರುತ್ತದೆ. ಒಂದು ಸಸ್ಯವನ್ನು ಒಂದು ಜಂತುವಿನಿಂದ ನಾವು ಅನುಭವದಿಂದ ಸುಲಭವಾಗಿ ನಿರ್ದೇಶಿಸಿದರೂ, ಇವೆರಡು ವರ್ಗಗಳಿಗೂ ಪರಸ್ಪರವಿರುವ ವ್ಯತ್ಯಾಸಗಳನ್ನು ನಿಷ್ಕೃಷ್ಟವಾಗಿ ಹೇಳುವದು ಬಹಳ ಕಷ್ಟವಾಗುವದು. ಈ ಎರಡು ವರ್ಗಗಳ ಮೇಲು ಜಾತಿಗಳ ಪ್ರಾಣಿಗಳಲ್ಲಿರುವ ವ್ಯತ್ಯಾಸಗಳು ಎಂಥವರಿಗೂ ಸ್ಪಷ್ಟವಾಗಿ ಕಾಣುವವು. ನಿದರ್ಶನವಾಗಿ ಒಂದು ಎಮ್ಮೆಗೂ ಒಂದು ಆಲದ ಮರಕ್ಕೂ ಇರುವ ಭೇದಗಳನ್ನು ಹೇಳಬಹುದು. ಆದರೆ ಇವೆರಡು ವರ್ಗಗಳ ಕೀಳು ಜಾತಿಗಳ ವ್ಯಕ್ತಿಗಳಲ್ಲಿ ಈ ವ್ಯತ್ಯಾಸಗಳು ಚನ್ನಾಗಿ ವ್ಯಕ್ತಪಡದೇ ಇರುವದರಿಂದ, ಅನೇಕವೇಳೆಗಳಲ್ಲಿ ಅವುಗಳನ್ನು ಜಂತುಗಳೆಂದು ತಿಳಿಯಬೇಕೇ, ಅಥವಾ ಸಸ್ಯಗಳೆಂದು ತಿಳಿಯಬೇಕೇ ಎಂಬ ಸಂಶಯವು ಹುಟ್ಟುವದು.

ಜಂತುಗಳಿಗೂ ಸಸ್ಯಗಳಿಗೂ ಇರುವ ವ್ಯತ್ಯಾಸಗಳನ್ನು ಇವೆರಡು ವರ್ಗಗಳ ಉತ್ತಮ ಜಾತಿಯ ಪ್ರಾಣಿಗಳಲ್ಲಿ ಲಕ್ಷಿಸಬಹುದು.

(೧) ಸಸ್ಯಗಳು ಸಾಮಾನ್ಯವಾಗಿ ಒಂದೇ ಸ್ಥಳದಲ್ಲಿ ಹುಟ್ಟಿ ಬೆಳೆದು ತಮಗೆ ಬೇಕಾದ ಆಹಾರವನ್ನು ಅಲ್ಲಿ ಸಂಪಾದಿಸಿ ಕೊಳ್ಳುತ್ತವೆ. ಅವುಗಳಿಗೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸ್ವೇಚ್ಛೆಯಾಗಿ ಹೋಗುವ ಶಕ್ತಿಯಿಲ್ಲದೇ ಇರುವದರಿಂದ ಅವುಗಳನ್ನು ಸ್ಥಾವರಗಳೆಂದು ಕರೆಯುತ್ತಾರೆ.

ಜಂತುಗಳಾದರೋ ಸಸ್ಯಗಳ ಹಾಗೆ ಯಾವಾಗಲೂ ಒಂದೇ ಸ್ಥಳದಲ್ಲಿಯೇ ಇರದೆ ತಮಗೆ ಇಷ್ಟ ಬಂದ ಕಡೆ ಸಂಚಾರ ಮಾಡುತ್ತವೆ. ಈದುದರಿಂದ ಇವುಗಳನ್ನು ಜಂಗಮಗಳೆಂದು ಕರೆಯುವದು ರೂಢಿಯಾಗಿರುತ್ತದೆ. ನಾವು ವಿಚಾರ ಮಾಡಿದರೆ ಈ ಸಂಚಾರ ಶಕ್ತಿಯು ಅವು ಬದುಕಿ ಬಾಳುವದಕ್ಕೆ ಅವಶ್ಯಕವೆಂದು ಸ್ಪಷ್ಟವಾಗುವದು. ಜಂತುಗಳಅಹಾರವು ಅವು ಹುಟ್ಟಿದ ಸ್ಥಳದಲ್ಲಿಯೆ ದೊರಕುವದಿಲ್ಲ. ಅದು ಅಲ್ಲಲ್ಲಿ ಹರಡಿಕೊಂಡಿರುವದರಿಂದ ಜಂತುಗಳು ತಮಗೆ ಬೇಕಾದ ವಸ್ತುಗಳನ್ನು ಅವು ದೊರಕುವ ಸ್ಥಳಗಳಿಗೆ ಹೋಗಿ ಸಂಪಾದಿಸಿಕೊಳ್ಳಬೇಕು.

(೨) ಜಂತುಗಳಿಗೂ ಸಸ್ಯಗಳಿಗೂ ಆಹಾರ ವಿಷಯದಲ್ಲಿ ವ್ಯತ್ಯಾಸಗಳಿರುವವು. ಜಂತುಗಳು ಇತರ ಜಂತುಗಳನ್ನಾಗಲಿ, ಹುಲ್ಲು, ಗಡ್ಡೆ ಮೊದಲಾದವುಗಳನ್ನಾಗಲಿ, ಅಥವಾ ಇವುಗಳಿಂದ ಉಂಟಾಗುವ ವಸ್ತುಗಳನ್ನಾಗಲಿ ತಿಂದು ಜೀವಿಸುವವು. ಈ ಆಹಾರದ ಹೆಚ್ಚಿನ ಭಾಗವು ಘನರೂಪದಲ್ಲಿರುತ್ತದೆ. ಗಿಡಗಳಾದರೋ ನೀರು, ಲವಣಗಳು, ಇಂಗಾಲಾಮ್ಲವಾಯು ಇವುಗಳನ್ನು ತೆಗೆದುಕೊಂಡು ಅವುಗಳಿಂದ ತಮಗೆ ಬೇಕಾದ ಆಹಾರಗಳನ್ನು ಉಂಟು ಮಾಡಿಕೊಳ್ಳುವವು. ಅಂದರೆ ಗಿಡಗಳ ಆಹಾರವು ಹೆಚ್ಚಾಗಿ ಹವೆಯುರೂಪದಲ್ಲೂ, ಪ್ರವಾಹರೂಪದಲ್ಲೂ ಇರುವದು. ಜಂತುಗಳಲ್ಲೂ ಸಸ್ಯಗಳಲ್ಲೂ ಇರತಕ್ಕ ಮೂಲ ವಸ್ತುವು ಒಂದೇಯಾಗಿರುವದೆಂದು ಹಿಂದಿನ ಅಧ್ಯಾಯದಲ್ಲಿ ಹೇಳಿದೆ. ಪ್ರಾಣಿಗಳು ತಮ್ಮ ಶರೀರದಲ್ಲಿ ಪ್ರತಿ ನಿಮಿಷದಲ್ಲೂ ಉಂಟಾಗತಕ್ಕ ನಷ್ಟವನ್ನು ಸರಿಪಡಿಸುವ ಉದ್ದೇಶದಿಂದ ಆಹಾರವನ್ನು ತೆಗೆದು ಕೊಳ್ಳುತ್ತವೆ. ಜಂತುಗಳು ಸಸ್ಯಗಳು ತಾವು ತೆಗೆದುಕೊಳ್ಳುವ ಆಹಾರ ವಸ್ತುಗಳಿಂದ ಜೀವಾಣುಗಳನ್ನುಂಟು ಮಾಡಿಕೊಳ್ಳುತ್ತವೆ. ಅಂದರೆ ಜಂತುಗಳ ಆಹಾರದ ಪರಿಣಾಮವು, ಸಸ್ಯಗಳ ಆಹಾರದ ಪರಿಣಾಮವು ಒಂದೇ.

ಜಂತುಗಳ ಆಹಾರವು ಸಸ್ಯ ರೂಪವಾದದ್ದೆ ಆಗಲಿ ಅಥವಾ ಮಾಂಸ ರೂಪವಾದದ್ದೆ ಆಗಲಿ ಅದರಲ್ಲಿ ಸಜೀವ ಪದಾರ್ಥಗಳ ಸಂಬಂಧವಾದ ವಸ್ತುಗಳು ಇದ್ದೇ ಇರಬೇಕು. ಸಸ್ಯಗಳು ಭೂಮಿಯೊಳಗೆ ಸಿಕ್ಕುವ ನೀರು ಮತ್ತು ಲವಣಗಳಿಂದಲೂ, ವಾಯು ಮಂಡಲದಲ್ಲಿರುವ ಇಂಗಾಲಾಮ್ಲದಿಂದಲೂ ತಮಗೆ ಬೇಕಾದ ಆಹಾರಗಳನ್ನು ಒದಗಿಸಿಕೊಂಡು ತಮ್ಮ ಶರೀರವನ್ನು ಪೋಷಿಸಿ ಕೊಳ್ಳುತ್ತವೆ. ಜಂತುಗಳು ಇಷ್ಟು ಸುಲಭವಾದ ಪದಾರ್ಥಗಳಿಂದ ತಮ್ಮ ಆಹಾರವನ್ನು ಮಾಡಿ ಕೊಳ್ಳಲಾರವು. ಇದಲ್ಲದೆ ಜಂತುಗಳಲ್ಲಿ ಆಹಾರ ಪದಾರ್ಥಗಳನ್ನು ತೆಗೆದುಕೊಂಡು ಅವುಗಳನ್ನು ಜೀರ್ಣಿಸುವದಕ್ಕೂ ಹಾಗೆಯೆ ಜೀರ್ಣವಾಗದೇ ಇರುವ ಪದಾರ್ಥಗಳನ್ನು ಶರೀರದಿಂದ ಹೊರಗೆ ಕಳುಹಿಸುವದಕ್ಕೂ ಪ್ರತ್ಯೇಕವಾದ ಅಂಗಗಳು ಏರ್ಪಟ್ಟಿರುವವು. ಗಿಡಗಳಲ್ಲಿ ಹೀಗೆ ಆಹಾರವನ್ನು ತೆಗೆದುಕೊಳ್ಳುವದಕ್ಕೂ ಅದನ್ನು ಜೀರ್ಣಿಸುವದಕ್ಕೂ ಪ್ರತ್ಯೇಕವಾದ ಅಂಗಗಳು ಇರುವದಿಲ್ಲ. ಭೂಮಿಯಿಂದಲೂ ಹವೆಯಿಂದಲೂ ಬಂದ ವಸ್ತುಗಳಿಂದ ತಯಾರಾದ ಆಹಾರದ ಜೀರ್ಣವು ಮತ್ತು ಜೀರ್ಣವಾಗದೇ ಇರುವ ಪದಾರ್ಥಗಳ ಹೊರಗಟ್ಟುವಿಕೆಯು ಸಸ್ಯದ ಎಲ್ಲಾ ಭಾಗಗಳಲ್ಲೂ ಸಾಗುವದು.

ಜಂತುಗಳಿಗೂ ಸಸ್ಯಗಳಿಗೂ ಮುಖ್ಯವಾದ ಈ ಎರಡು ವ್ಯತ್ಯಾಸಗಳಲ್ಲದೆ ಇತರ ವ್ಯತ್ಯಾಸಗಳಿರುತ್ತವೆ. ಅವುಗಳಲ್ಲೊಂದನ್ನು ನಾವು ವಿಶೇಷ ಪ್ರಯತ್ನವಿಲ್ಲದೆ ನೋಡಬಹುದು. ಜಂತುಗಳಿಗೆ ಇತರ ಪದಾರ್ಥಗಳಿಂದ ಯಾವದಾದರೂ ಬಾಧೆಯಾದರೆ ಅದನ್ನು ತಕ್ಷಣದಲ್ಲಿಯೇ ಚಲನೆಯಿಂದಾಗಲಿ ಅಥವಾ ಇತರ ವಿಧವಾದ ಚಿಹ್ನೆಗಳಿಂದ ಸೂಚಿಸುತ್ತವೆ. ಸಸ್ಯಗಳು ತಮ್ಮಗೆ ಉಂಟಾಗುವ ಉಪಾಧಿಯನ್ನು ಇಷ್ಟು ಜಾಗ್ರತೆಯ ತಿಳಿಯಪಡಿಸಲಾರವು. ಜಂತುವರ್ಗಕ್ಕೂ ಸಸ್ಯವರ್ಗಕ್ಕೂ ಇರುವ ವ್ಯತ್ಯಾಸಗಳನ್ನು ವಿಮರ್ಶಿಸುವಾಗ ಜಂತುವರ್ಗದಲ್ಲಿ ಚಲನೆಯು ಪ್ರಧಾನವಾದ ಲಕ್ಷಣವಾಗಿ ಕಾಣುವದು. ಈ ಚಲನೆಯು ಬಹು ರೂಪವಾಗಿರುವದಲ್ಲದೆ ಜಂತುವಿಗೆ ಅಧೀನವಾದದ್ದಾಗಿರುವದು. ಸಸ್ಯಗಳಲ್ಲಿರುವ ಚಲನೆಯು ಸುಲಭವಾಗಿ ಗೋಚರವಾಗುವದಿಲ್ಲ. ಅವುಗಳ ಜೀವವ್ಯಾಪಾರಗಳಲ್ಲಿ ಅವು ಚಲನೆಯನ್ನುಳ್ಳವುಗಳಾಗಿದ್ದರೂ ಸಾಮಾನ್ಯವಾಗಿ ಸಸ್ಯ

ಗಳು ತಮ್ಮ ಸುತ್ತಲೂ ಇರುವ ನಿರ್ಜೀವ ಪದಾರ್ಥಗಳಂತೆ ಸ್ತಬ್ಧವಾಗಿ ರುವವು. ನಾವು ಚನ್ನಾಗಿ ಗಮನಿಸಿ ನೋಡಿದ ಹೊರತು ಸಸ್ಯಗಳು ಇತರ ಪ್ರಾಣಿಗಳಂತೆಯೇ ಎಲ್ಲಾ ವಿಧವಾದ ಜೀವ ವ್ಯಾಪಾರಗಳನ್ನು ನಡೆಸುತ್ತವೆ ಎಂದು ತಿಳಿಯಬರುವದಿಲ್ಲ. ಆದುದರಿಂದ ನಾವು ನೋಡುವ ಪ್ರತಿಯೊಂದು ಸಸ್ಯವು ಒಂದು ಪ್ರಾಣಿಯೆಂಬುವದನ್ನು ಮನಸ್ಸಿನಲ್ಲಿಟ್ಟು ಕೊಂಡು ಪ್ರಾಣಿಗಳಲ್ಲಿರುವ ಲಕ್ಷಣಗಳನ್ನು ಅದರಲ್ಲಿ ನಿರೀಕ್ಷಿಸಬೇಕು. ಪ್ರತಿಯೊಂದು ಸಸ್ಯವು ತಾನು ಬದುಕುವದಕ್ಕೆ ಆಧಾರವಾದ ವಸ್ತುಗ ಳನ್ನು ಸಂಪಾದಿಸಬೇಕಾದದ್ದು ಅವಶ್ಯಕ. ಈ ಉದ್ದೇಶವು ನೆರವೇರ ಬೇಕಾದರೆ ಈ ಸಸ್ಯವು ತನ್ನ ಸಮೀಪದಲ್ಲಿರುವ ಇತರ ಸಸ್ಯಗಳೊಡನೆ ಹೋರಾಡಬೇಕು, ಆಗಾಗ್ಗೆ ಜಂತುಗಳಿಂದಾಗತಕ್ಕ ಬಾಧೆಗಳಿಂದ ತನ್ನನ್ನು ರಕ್ಷಿಸಿಕೊಳ್ಳಬೇಕು, ಮತ್ತು ಕೆಲವು ಸಮಯಗಳಲ್ಲಿ ಜಂತು ಗಳ ಸಹಾಯವನ್ನಪೇಕ್ಷಿಸಬೇಕು. ಇವಲ್ಲದೆ ತನ್ನಂತಿರುವವುಗಳನ್ನು ಉತ್ಪತ್ತಿ ಮಾಡುವದಕ್ಕೆ ಬೇಕಾದ ಉಪಪತ್ತಿಗಳನ್ನು ಶೇಖರಿಸುವದು ಮಾತ್ರವಲ್ಲದೆ, ತನ್ನ ಸಂತಾನವು ಮುಂದೆ ವೃದ್ಧಿಯನ್ನು ಹೊಂದಲು ಸರಿಯಾದ ಸನ್ನಿವೇಶಗಳನ್ನು ಸೇರುವಹಾಗೆ ಸಾಹಸವನ್ನು ನಡೆಸುವದು. ಆದುದರಿಂದ ನಮ್ಮನ್ನು ಎಡೆಬಿಡದೆ ಇರುವ ವನಸ್ಪತಿಗಳಲ್ಲಿ ಪ್ರತಿ ಯೊಂದು ತನ್ನ ಸಂತಾನವನ್ನು ವೃದ್ಧಿಮಾಡಬೇಕೆಂಬ ಉದ್ದೇಶವನ್ನೇ ಪ್ರಧಾನವಾಗಿಟ್ಟುಕೊಂಡು ಸದಾ ಕೆಲಸ ಮಾಡುತ್ತಲೂ ಹೋರಾಡು ತ್ತಲೂ ಇರುವ ಒಂದು ಪ್ರಾಣಿಯೆಂದು ನಾವು ಲಕ್ಷಿಸಬಹುದು.

ಪ್ರತಿಯೊಂದು ಪ್ರಾಣಿಗೂ ಒಂದು ಜೀವಮಾನದ ಚರಿತ್ರೆಯಿ ರುವದು. ಅಂದರೆ, ಆರಂಭ, ಬೆಳವಳಿಕೆ, ಪುಷ್ಟಿ, ಕ್ಷೀಣತೆ, ಪರಿ ಣಾಮ ಎಂಬ ದಶೆಗಳಿರುತ್ತವೆ.

ಆ ಪ್ರಾಣಿಯು ಹುಟ್ಟಿದಾರಭ್ಯ ಸಾಯುವವರಿಗೂ ಹೊಂದಿರುವ ಅವಸ್ಥೆಗಳ ಪರಂಪರೆಯನ್ನು ಒಟ್ಟುಗೂಡಿಸಿದರೆ ಆ ಪ್ರಾಣಿಯ ಜೀವ ಮಾನದ ಚರಿತ್ರೆಯಾಗುವದು.

ಪುಷ್ಪಿಸುವ ಗಿಡಗಳ ಜೀವಮಾನವನ್ನು ಹೇಳಬೇಕಾದರೆ, ನಾವು ಭೂಮಿಯಲ್ಲಿ ಬಿತ್ತುವ ಬೀಜದಿಂದ ಪ್ರಾರಂಭಿಸಬೇಕು. ಈ ಬೀಜವು ಮೊಳೆಯಾಗಿ ಭೂಮಿಯ ಹೊರಗೆ ಅತಿ ಸಣ್ಣ ಸಸ್ಯವಾಗಿ ಕಾಣುವದು ಕಾಲಕ್ರಮದಲ್ಲಿ ಇದು ದೊಡ್ಡ ಗಿಡವಾಗಿ ಇದರಲ್ಲಿ ಅನೇಕ ಕವಲುಗಳ ಹೊರಡುವವು.

ಪ್ರಾಚೀನ ಆರ್ಯರ ಅಂಕಗಣಿತ ಜ್ಞಾನ.

ಪ್ರೊ. ಏ. ಏ. ಮ್ಯಾಕ್ಡೋನೆಲ್ ಎಂಬವರು "ಸಂಸ್ಕೃತ ವಾಙ್ಮಯ" ಎಂಬ ಪುಸ್ತಕದಲ್ಲಿ ಬರೆದದ್ದೇನಂದರೆ, "ಶಾಸ್ತ್ರಗಳ ಸಂಬಂಧದಿಂದ ಯುರೋಪಖಂಡವು ಹಿಂದುಸ್ತಾನಕ್ಕೆ ಋಣಿಯಾಗಿರುತ್ತದೆ. ಜಗತ್ತಿನಲ್ಲೆಲ್ಲ ಉಪಯೋಗವಾಗುತ್ತಿರುವ ಸಂಖ್ಯಾಚಿಹ್ನಗಳನ್ನು (ಅಂಕೆಗಳನ್ನು) ಹಿಂದೂ ಜನರೇ ಹುಡುಕಿ ತೆಗೆದರು. ದಶಾಂಶ ಪದ್ಧತಿಯನ್ನೂ ಇವರೇ ಹುಡುಕಿದರು. ಈ ಪದ್ಧತಿಯ ಪರಿಣಾಮವು ಕೇವಲ ಗಣಿತ ಶಾಸ್ತ್ರದ ಮೇಲೆಯೇ ಅಲ್ಲದೆ ಮಾನವ ಸಂಸ್ಕೃತಿಯ ಮೇಲೆಯೂ ಆಗಿರುತ್ತದೆ."

ಅಂಕೆಗಳು:-ಅಂಕೆಗಳ ಉಪಯೋಗವು ಮಾತ್ರ ಎಂದಿನಿಂದ ಆಯಿತೆಂಬದನ್ನು ನಿಶ್ಚಿತವಾಗಿ ಹೇಳಲಿಕ್ಕೆ ಬರುವಂತಿಲ್ಲ. ಇದರ ಬಗ್ಗೆ ಮತಭೇದವಿದೆ. ಆದರೂ ಕ್ರಿಸ್ತಶಕದ ಎರಡನೆಯ ಶತಮಾನದಲ್ಲಿ ಹಿಂದೂ ಜನರು ಅಂಕೆಗಳನ್ನು ಉಪಯೋಗಿಸುತ್ತಿದ್ದರೆಂಬದಕ್ಕೆ ಸಾಕಷ್ಟು ಆಧಾರಗಳಿವೆ. ನಾನಾಘಾಟದಲ್ಲಿ ದೊರೆತ ಶಿಲಾಲೇಖದ ಮೇಲಿಂದ ಆ ಕಾಲದಲ್ಲಿ, ಅಂದರೆ ಕ್ರಿ. ಶ. ಪೂ. ೩೦೦ ರಲ್ಲಿ ಹಿಂದೂ ಜನರಲ್ಲಿ ಅಂಕೆಗಳು ಪ್ರಚಾರದಲ್ಲಿದ್ದವೆಂದು ಹೇಳಬಹುದಾಗಿದೆ. ಅದರಂತೆ ಕ್ರಿ. ಶ. ಪೂ. ೨೫೬ನೆಯ ವರ್ಷದಲ್ಲಿ ಅಶೋಕನು "ಮಾಯನರ್‌ರಾಕ್"ದ ಮೇಲೆ ಕೊರಿಸಿದ ಅನುಶಾಸನದಲ್ಲಿಯೂ ಅಂಕೆಗಳನ್ನು ಉಪಯೋಗಿಸಿದು ಕಂಡು ಬರುತ್ತದೆ. ಪ್ರಾಚೀನ ಇಮಾರತುಗಳ ಶಿಲಾಲೇಖಗಳಲ್ಲಿ ಕ್ರಿ. ಶ. ಮೊದಲನೆಯ ಶತಮಾನದಲ್ಲಿ ಅಂಕೆಗಳನ್ನು ಉಪಯೋಗಿಸಿದ್ದು ಗೊತ್ತಾಗುತ್ತದೆ. ಇ. ಸ. ೩೪೫ ರಲ್ಲಿಯ ಕಲಾಭವಿ ಎಂಬಲ್ಲಿಯ ಶಿಲಾಲೇಖದಲ್ಲಿ ಆಗಿನ ಕಾಲವನ್ನು ಬರೆಯುವದರಲ್ಲಿ ಅಂಕೆಗಳಿಗೆ ಸ್ಥಾನಿಕ ಬೆಲೆಯನ್ನು ಕೊಟ್ಟಿದ್ದಾರೆ. ಡಬ್ಲ್ಯು. ಡಬ್ಲ್ಯು. ರಾವುಸ ಬಾಲ ಎಂಬವರು ತಮ್ಮ ಗಣಿತಶಾಸ್ತ್ರದ ಇತಿಹಾಸದಲ್ಲಿ ಅನ್ನುವದೇನಂದರೆ:- "ಅಂಕೆಗಳ ಸಹಾಯದಿಂದ ಸಂಖ್ಯೆಯನ್ನು ಬರೆಯುವ ಪದ್ಧತಿಯು ಹಿಂದುಸ್ತಾನದಲ್ಲಿ ಕ್ರಿ. ಶ. ದ ೫ ನೆಯ ಶತಮಾನದ ಕೊನೆಯಲ್ಲಿ ಪ್ರಚಾರದಲ್ಲಿ ಬಂದಿತೆ

ನ್ನುವದಕ್ಕೆ ಆಧಾರವುಂಟು." ಆದರೆ ಬೌಲ ಎಂಬವರು ಈ ಪದ್ಧತಿಯನ್ನು ಯಾರು ಪ್ರಚಾರದಲ್ಲಿ ತಂದರೆಂಬ ಬಗ್ಗೆಯಾಗಲಿ ತಾವು ಯಾವ ಆಧಾರದ ಮೇಲಿಂದ ಈ ಸಂಗತಿಯನ್ನು ಬರೆದರೆಂಬ ವಿಷಯದಲ್ಲಿಯಾಗಲಿ ಹೇಳಿಲ್ಲ.

ಶೂನ್ಯ:-ಅರಬರು ಸ್ವಲ್ಪ ಹೆಚ್ಚುಕಡಿಮೆ ಮಾಡಿ ದೇವನಾಗರಿ ಅಂಕೆಗಳನ್ನು ಉಪಯೋಗಿಸ ಹತ್ತಿದರು. ಸ್ಪ್ಯಾನಿಶ್ ಅರಬರು ಮೊದಮೊದಲು ಶೂನ್ಯವು ನಮಗೇತಕ್ಕೆಬೇಕು? ಎಂದು ಅದನ್ನು ತೆಗೆದುಕೊಳ್ಳಲಿಲ್ಲ. ಅದರಿಂದ ಅವರಿಗೆ ಬಹಳ ತೊಂದರೆಯಾಗಹತ್ತಿತು. ಕಡೆಗೆ ಅವರು ಶೂನ್ಯವನ್ನು ತೆಗೆದುಕೊಂಡು ಅದನ್ನು ಉಪಯೋಗಿಸಹತ್ತಿದರು. ಮುಂದೆ ಈ ಅರಬೀ ಅಂಕೆಗಳನ್ನು ಉಪಯೋಗಿಸುವ ಪದ್ಧತಿಯು ಸ್ಪೇನ ಮತ್ತು ಬಾರ್ಬರೀ ದೇಶಗಳೊಳಗಿಂದ ಪಶ್ಚಿಮ ಯುರೋಪಕ್ಕೆ ಹೋಯಿತು.

ದಶಕ ಪದ್ಧತಿ:-ದಶಕ ಪದ್ಧತಿಯಿಂದ ಸಂಖ್ಯೆಗಳನ್ನು ಬರೆಯುವ ಕ್ರಮವು ಹಿಂದುಸ್ತಾನದಲ್ಲಿಯೇ ಹುಟ್ಟಿತು. ಮತ್ತು ಗಣಿತಶಾಸ್ತ್ರದ ಎಲ್ಲ ಶೋಧಗಳಲ್ಲಿ ಮನುಷ್ಯನ ಜ್ಞಾನದ ಪ್ರಗತಿಗೆ ಈ ದಶಕ ಪದ್ಧತಿಯ ಉಪಯೋಗವೇ ವಿಶೇಷವಾಗಿ ಆಗಿರುತ್ತದೆ. ಡಬ್ಲ್ಯು. ಆರ್. ಸ್ಮಿಥ್ ಎಂಬವರು "ಎನ್‌ಸಾಯಕ್ಲೋಪೀಡಿಯಾ ಬ್ರಿಟ್ಯಾನಿಕಾ" ಎಂಬ ಕೋಶದಲ್ಲಿ ಬರೆದದ್ದೇನಂದರೆ, "ಸದ್ಯದ ದಶಾಂಶ ಪದ್ಧತಿಯು ನಿಜವಾಗಿ ಹಿಂದುಸ್ತಾನದಲ್ಲಿಯೇ ಉಗಮ ಹೊಂದಿತೆಂದು ನಿಃಸಂಶಯವಾಗಿ ಹೇಳಲಿಕ್ಕೆ ಬರುವಂತೆ ಅದೆ." ಕ್ರಿ. ಶ. ೪೭೬ ರಲ್ಲಿ ಜನಿಸಿದ ಆರ್ಯಭಟ್ಟನಿಗೆ ದಶಾಂಶ ಪದ್ಧತಿಯು ಗೊತ್ತಿತ್ತು, ಎಂಬ ಮಾತನ್ನು ಅವನು ಹೇಳಿದ ವರ್ಗಮೂಲ ತೆಗೆಯುವ ನಿಯಮದ ಮೇಲಿಂದ ಸ್ಪಷ್ಟವಾಗಿ ಹೇಳಬಹುದು. ಇದಲ್ಲದೆ ರೋಡೆಟ್, ಟೇಲರ, ಕೋಲಬ್ರೂಕ, ಕಜೋರಿ ಮೊದಲಾದ ಪ್ರಾಚ್ಯವಿದ್ಯಾಪ್ರವೀಣರು ಮೇಲಿನ ಮಾತಿಗೆ ಒಡಂಬಡುತ್ತಾರೆ. ಆರ್ಯಭಟ್ಟನು ಹತ್ತೊಂಭತ್ತು ಸಂಖ್ಯಾಸ್ಥಾನಗಳನ್ನು ಉಲ್ಲೇಖಿಸಿದ್ದಾನೆ. ಹತ್ತೊಂಭತ್ತು ಸ್ಥಾನಗಳೆಂದರೆ ಈಗ ನಮ್ಮಲ್ಲಿ ಪ್ರಚಾರದಲ್ಲಿರುವ ಸಂಖ್ಯೆಯ ಕೊನೆಯ ಸ್ಥಾನವಾಗಿದ್ದ ಪ್ರಾರ್ಧಕ್ಕಿಂತ ಒಂದು ಹೆಚ್ಚು.

ಇ. ಸ. ೫೯೮-೬೬೦ ರ ವರೆಗೆ ಇದ್ದ ಬ್ರಹ್ಮಗುಪ್ತನು ತನಗೆ ಈ ಅಂಕೆಗಳೂ ದಶಾಂಶ ಪದ್ಧತಿಯೂ ಗೊತ್ತಿದ್ದವು, ಎಂದು ಬರೆಯುತ್ತಾನೆ. ಮದ್ರಾಸದಲ್ಲಿಯ ಪೌರ್ವಾತ್ಯ ಹಸ್ತಲೇಖಸಂಗ್ರಹಾಲಯದಲ್ಲಿ ಬ್ರಹ್ಮಸಿದ್ಧಾಂತದ ಒಂದು ಪ್ರತಿಯುಂಟು. ಅದರಲ್ಲಿ ದಶಾಂಶ ಪದ್ಧತಿಯಿಂದಲೇ ಸಂಖ್ಯೆಗಳನ್ನು ಬರೆದಿದ್ದಾರೆ.

ಭಾಸ್ಕರಾಚಾರ್ಯಕೃತ ಲೀಲಾವತಿಯಲ್ಲಿ ದಶಾಂಶ ಪದ್ಧತಿಯ ವಿವರಣೆಯ ಬಗ್ಗೆ ಒಂದು ಸ್ವತಂತ್ರ ಅಧ್ಯಾಯವೇ ಇರುವದು. ಮಿ. ಬಾಲ ಇವರು ಲೀಲಾವತಿಯ ವಿಷಯವಾಗಿ ತಮ್ಮ ಗ್ರಂಥದಲ್ಲಿ ಅನ್ನುವದೇನಂದರೆ, "ಈ ಲೀಲಾವತಿಯಲ್ಲಿ ದಶಾಂಶ ಪದ್ಧತಿಯ ಬಗ್ಗೆ ಕ್ರಮಬದ್ಧವಾದ ವಿವೇಚನೆ ಇರುವದು. ಈ ಪ್ರಕಾರ ಪದ್ಧತಿಯಿಂದ ವಿವೇಚನೆ ಮಾಡಿದ ಪ್ರಾಚೀನ ಗ್ರಂಥಗಳಲ್ಲಿ ಇದೇ ಮೊದಲನೆಯದು."

ಅಂಕೆಗಳ ಮೂಲ ಬೆಲೆಯೂ ಅವುಗಳ ಸ್ಥಾನದ ಬೆಲೆಯೂ ಬೇರೆ ಬೇರೆಯಾಗಿರುತ್ತವೆ, ಎಂದು ತಿಳಿದ ಕೂಡಲೆ ಸಹಜವಾಗಿಯೇ ಶೂನ್ಯದ ಕಲ್ಪನೆಯು ಹುಟ್ಟುವದು. ಶೂನ್ಯವೆಂಬ ಶಬ್ದವು ಸಂಸ್ಕೃತ ಭಾಷೆಯದು. ಅಲ್ಲಿ ಅದರ ಅರ್ಥವು ಅಭಾವ (ಏನೂ ಇಲ್ಲ) ಎಂದು ಆಗುತ್ತದೆ. ಕೆಲವು ಪ್ರಸಂಗಗಳಲ್ಲಿ ಯಾವದೊಂದು ಸಂಖ್ಯೆಯ ಒಂದು ಸ್ಥಾನದಲ್ಲಿ ಯಾವ ಅಂಕೆಯನ್ನೂ ಇಡಲಿಕ್ಕೆ ಬರುವಂತಿರುವದಿಲ್ಲ. ಅದರಂತೆ ಆ ಸ್ಥಳವನ್ನು ತೆರವು ಇಡಲಿಕ್ಕೂ ಬರುವದಿಲ್ಲ. ಇಂಥ ಪ್ರಸಂಗದಲ್ಲಿ ಹೇಗೆ ಮಾಡಬೇಕು, ಎಂಬ ವಿಚಾರ ಮಾಡುವಾಗ ಸಹಜವಾಗಿಯೇ ಶೂನ್ಯದ ಕಲ್ಪನೆಯು ಹುಟ್ಟಿತು. ಈ ಜಾತಿಯ ಉದಾಹರಣೆಗಳಲ್ಲಿ ಶೂನ್ಯವನ್ನು ಇಡದಿದ್ದರೂ ಆ ತೆರವಾದ ಸ್ಥಳದಲ್ಲಿ ಮಾತ್ರ ಏನಾದರೊಂದು ತರದ ಚಿಹ್ನವನ್ನು ಉಪಯೋಗಿಸಲೇಬೇಕಾಗುತ್ತದೆ. ಇದರಿಂದಲೂ ಮೇಲೆ ಹೇಳಿದ ಶೂನ್ಯದ ಅನುಮಾನವು ಹೆಚ್ಚು ದೃಢವಾಗುವದು. ಮಹಾವೀರನ ಗಣಿತಸಾರ ಸಂಗ್ರಹದಲ್ಲಿಯೂ ಭಾಸ್ಕರಾಚಾರ್ಯಕೃತ ಲೀಲಾವತಿಯ ಮೊದಲನೆಯ ಪ್ರಕರಣದಲ್ಲಿಯೂ ಅದರಂತೆ ಬ್ರಹ್ಮಗುಪ್ತನ ಗ್ರಂಥದಲ್ಲಿಯೂ ಶೂನ್ಯದ ಬಗ್ಗೆ ಅಂಕಗಣಿತದ ಕೋಷ್ಟಕಗಳು ಇರುವವು, ಅವುಗಳ ಮೇಲಿಂದಲೂ ಮೇಲಿನ ಅನುಮಾನವೇ ಹುಟ್ಟುತ್ತದೆ.

ಉಳಿದ ಸಂಗತಿಗಳು:--ಸ್ಥಾನದ ಬೆಲೆಯ ಪದ್ಧತಿಯನ್ನು ಅರಬರು ಹಿಂದೂ ಜನರಿಂದ ತೆಗೆದುಕೊಂಡರು. ಇವರು ಇ. ಸ. ೭೭೩ ರಲ್ಲಿ ಈ ಪದ್ಧತಿಯನ್ನು ಉಪಯೋಗಿಸಹತ್ತಿದರು. ಇದೇ ವರ್ಷ ಒಬ್ಬ ಹಿಂದೂ ವಕೀಲನು ಜ್ಯೋತಿಷಶಾಸ್ತ್ರದ ಕೆಲವು ಕೋಷ್ಟಕಗಳನ್ನು ಬಗದಾದಕ್ಕೆ ಒಯ್ದನು. ಖಲೀಫವಾಲಿದಾ ಎಂಬವನ (ಇ. ಸ. ೭೦೫-೭೧೫) ಕಾಲದಲ್ಲಿ ಅರಬರಿಗೆ ಸ್ವತಂತ್ರವಾದ ಅಂಕೆಗಳು ಗೊತ್ತಿದ್ದಿಲ್ಲ.

ಕಲೀಫ ಅಲ್‌ಮಾನೂನ ಎಂಬ ಗ್ರಂಥಸಂಗ್ರಹಾಲಯದ ಚಿಟಣೀಸನೂ ಖುರಾಸಾನದ ಸುಪ್ರಸಿದ್ಧ ಗಣಿತಜ್ಞನೂ ಆದ ಮಹಮ್ಮದ ಇಬ್ನ ಮುಸಾ ಅಬೂಜಾಫರ ಅಲ್ ಖ್ವಾರೀಝುಮಿಯು (ಇ. ಸ. ೮೧೩-೮೩೩) "ಅಲಜೀಬ್ರವೀ ಈ ಮುಕಾಬಲಾ" ಎಂಬ ಹೆಸರಿನ ಬೀಜಗಣಿತ ಪುಸ್ತಕವನ್ನು ಬರೆದನು. ಈ ಪುಸ್ತಕದ ಮೇಲಿಂದಲೇ ಯುರೋಪಖಂಡದಲ್ಲಿ ಬೀಜಗಣಿತವು ಮೊದಲು ಪ್ರಚಾರದಲ್ಲಿ ಬಂದಿತು. ಇವನು ಅಫಗಾಣಿಸ್ತಾನಕ್ಕೂ ಹಿಂದುಸ್ತಾನಕ್ಕೂ ಬಂದಿದ್ದನಂತೆ. ಹಾಗೂ ಸ್ವದೇಶಕ್ಕೆ ತಿರುಗಿ ಹೋದನಂತರ (ಇ. ಸ. ೮೩೦) ಅಲ್ಲಿ ಬ್ರಹ್ಮಗುಪ್ತನ ಪುಸ್ತಕದ ಆಧಾರದಿಂದ ಬೀಜಗಣಿತದ ಮೇಲೆ ಒಂದು, ಅಂಕಗಣಿತದ ಮೇಲೆ ಒಂದು ಹೀಗೆ ಎರಡು ಪುಸ್ತಕಗಳನ್ನು ಬರೆದನಂತೆ. ಇವನು ಬರೆದ ಅಲಜೀಬ್ರವೀ ಈ ಮುಕಾಬಲಾ ಎಂಬ ಪುಸ್ತಕದ ಮೇಲಿಂದಲೇ ಮುಂದೆ ಅರಬರೂ ಮಧ್ಯಯುಗದ ಯುರೋಪಿಯನ್ನರೂ ಬೀಜಗಣಿತದ ಮೇಲೆ ಎಷ್ಟೋ ಪುಸ್ತಕಗಳನ್ನು ಬರೆದರು.

ದಶಾಂಶಪದ್ಧತಿ:--ಇದು ಕಿ. ಶ. ದ ೧೧-೧೨ ನೆಯ ಶತಮಾನಗಳಲ್ಲಿ ಸ್ಪೇನದೇಶದ ಮೂರ ಜನರಿಂದ ಯುರೋಪಿಯನ್ನರಿಗೆ ಗೊತ್ತಾಯಿತು. ಸ್ಪೇನದೇಶದಿಂದಲೇ ಯುರೋಪದ ಬೇರೆ ಬೇರೆ ಭಾಗಗಳಲ್ಲಿ ಈ ದಶಾಂಶಪದ್ಧತಿಯ ಜ್ಞಾನವು ಹಬ್ಬಿತು. ಆದರೂ ಅದು ಆ ಕಾಲಕ್ಕೆ ಪೂರ್ಣವಾಗಿ ಹಬ್ಬಲಿಲ್ಲ. ಇ. ಸ. ೧೨೦೨ ರಲ್ಲಿ ಲಿಓನಾರ್ಡೋ ಎಂಬ ಇತಾಲಿಯ ವ್ಯಾಪಾರಸ್ಥನು "ಅಲಜಿಬ್ರ ಆಟ್ ಅಲ್ ಮುಕಾಬಿಲಾ" ಎಂಬ ಬೀಜಗಣಿತ ಪುಸ್ತಕವನ್ನು ಬರೆದು ಅರಬೀ ಅಂಕೆಗಳನ್ನೂ ಹಿಂದೂ ಜನರ ಎಣಿಕೆಯ ಪದ್ಧತಿಯನ್ನೂ ಯುರೋಪದಲ್ಲಿ ಪ್ರಾರಂಭಮಾಡಿದನು. ಇವನ ಶಿಕ್ಷಣವು ಬಾರ್ಬರಿಯಲ್ಲಿ ಆಯಿತು. ಮತ್ತು ಅಲ್ಲಿಯೇ ಅರಬೀ ಸಂಖ್ಯಾ

ಪದ್ಧತಿಯನ್ನೂ ಮುಹಮ್ಮದ ಮುಸಾನ ಬೀಜಗಣಿತ ಪುಸ್ತಕವನ್ನೂ ಕಲಿತುಕೊಂಡನು. ೧೪ನೆಯ ಶತಮಾನದ ಆರಂಭದಲ್ಲಿ ಅಥವಾ ಮಧ್ಯದಲ್ಲಿ ಗಣಿತಶಾಸ್ತ್ರಜ್ಞರಿಗೂ ಇತಾಲಿಯ ವ್ಯಾಪಾರಸ್ಥರಿಗೂ ಈ ಪದ್ಧತಿಯಜ್ಞಾನವು ವಿಶೇಷವಾಗಿ ಆಗಿತ್ತು.

ಒಬ್ಬ ಇಂಗ್ಲೀಷ ಲೇಖಕನು ಅನ್ನುವದೇನಂದರೆ, "ಅಂಕೆಗಳ ಸ್ಥಾನದ ಬೆಲೆಯ ಪದ್ಧತಿಯನ್ನು ಅರಬರು ಹಿಂದೂ ಜನರಿಂದಲೇ ಕಲಿತರೆನ್ನುವದು ತಪ್ಪು. ಸ್ಥಾನಿಕ ಬೆಲೆಯ ಪದ್ಧತಿಯ ದೆಸೆಯಿಂದ ಕಾಲಗಣನೆ ಮಾಡಿದ ಹತ್ತನೆಯ ಶತಮಾನದ ಪೂರ್ವದಲ್ಲಿಯ ಶಿಲಾಲೇಖಗಳೇ ಸುಳ್ಳು ಇರುತ್ತವೆ. ಅದರಿಂದ ಅರಬರು ಹಿಂದೂ ಜನರಿಂದ ಏನೂ ಕಲಿತಿಲ್ಲ." ಇವನ ಅಭಿಪ್ರಾಯದ ವಿರುದ್ಧವಾಗಿ ಎಷ್ಟೋ ಅರಬರೂ ಯುರೋಪಿಯನ್ನರೂ ಅಭಿಪ್ರಾಯಗಳನ್ನು ಕೊಡುತ್ತಿದ್ದರೂ, ಈ ೨೦ನೆಯ ಶತಮಾನದಲ್ಲಿ ಈ ಇಂಗ್ಲೀಷ ಲೇಖಕನು ಈ ಪ್ರಕಾರ ಬರೆಯುವ ಸಾಹಸವನ್ನು ನೋಡಿ ಆಶ್ಚರ್ಯವೆನಿಸುತ್ತದೆ. ಪ್ರಖ್ಯಾತ ಇತಿಹಾಸಕಾರನಾದ ಎಲ್-ಮುಸೂದಿಯು ಅನ್ನುವದೇನಂದರೆ, 'ಮೊದಲಿನ ಒಂಭತ್ತು ಅಂಕೆಗಳನ್ನು ಹಿಂದೂ ಜನರೇ ಶೋಧಿಸಿ ತೆಗೆದರು.' ಅಲ್ ಬಿರುನಿಯು ಅನ್ನುವದೇನಂದರೆ, "ನಾವು ಈಗ ಉಪಯೋಗಿಸುತ್ತಿರುವ ಅಂಕೆಗಳು ಹಿಂದೂ ಜನರ ಸುಂದರವಾದ ಅಂಕೆಗಳಿಂದಲೇ ಉಂಟಾಗಿರುತ್ತವೆ." ಬೇಲಿ ಎಂಬವನು ಅನ್ನುವದೇನಂದರೆ, "ತೀರ ಪ್ರಾಚೀನ ಕಾಲದ ಎಲ್ಲ ಗ್ರಂಥಕಾರರು- ದಶಾಂಶ ಪದ್ಧತಿಯನ್ನೂ ಅದಕ್ಕೆ ಸಂಬಂಧಿಸಿದ ಚಿಹ್ನಗಳನ್ನೂ ಹಿಂದೂ ಜನರೇ ಹುಡುಕಿದರು, ಎಂದು ಅನ್ನುತ್ತಬಂದಿರುತ್ತಾರೆ. ಡಾಕ್ಟರ ಆಫ್ ಲಿಟರೇಚರ ಮತ್ತು ಅಲಹಾಬಾದದ ಸೆಂಟ್ರಲ್ ಮೂರ ಕಾಲೇಜದ ಹಿಂದಿನ ಅಧ್ಯಾಪಕರಾದ ಮೌಲವಿ ಮುಹಮ್ಮದ ಝುಕಉಲ್ಲಾ ಎಂಬವರು ಅಜ್ಜೈಬುಲ ಹಿಸಾಬ ಎಂಬ ಪುಸ್ತಕದಲ್ಲಿ ಬರೆದದ್ದೇನಂದರೆ "ಅರಬಸ್ತಾನದ ಖಲಿಫಾ ಮನ್ಸೂರ, ಮಹಮ್ಮದ ಬಿನ್ ಇಬ್ರಾಹಿಮ್ ಉಲಫಿರೋಜಿ, ಮುಹಮ್ಮದ ಬಿನ್ ಮುಸಾ ಅಲ್ ಖ್ವಾರಿಝುಮಿ ಮತ್ತು ಮಾಸುದಿ ಮೊದಲಾದ ಪ್ರಸಿದ್ಧ ವಿದ್ವಾಂಸರೂ, ಅದರಂತೆ ಎಲ್ಲ ಇತಿಹಾಸಕಾರರೂ ಐಕಮತ್ಯದಿಂದ ಗಣಿತ ಶಾಸ್ತ್ರದಲ್ಲಿಯ ಅಂಕೆಗಳನ್ನು ಹಿಂದೂ ಜನರೇ ಹುಡುಕಿದರೆಂದೂ ತಾವು ಅವರಿಂದಲೇ

ಕಲಿತೆವೆಂದೂ ಹೇಳುತ್ತಾರೆ. ಅರಬರು ತಾವೇ ಮೊದಲಿನಿಂದ ಅಂಕೆಗಳನ್ನು ಕಲಿತವರಾಗಿದ್ದರೆ, ಅವರು ಹಿಂದೂ ಜನರು ತಮಗೆ ಗಣಿತದ ಗುರುಗಳೆಂದು ಕೃತಜ್ಞತಾಬುದ್ಧಿಯಿಂದ ಯಾಕೆ ಒಪ್ಪಿಕೊಳ್ಳುತ್ತಿದ್ದರು? ಇದರಲ್ಲಿ ಇನ್ನೊಂದು ಆಕ್ಷೇಪವು ಹೊರಡುವದು ಅದೇನಂದರೆ, ಅರಬರಿಗೆ ಮೊದಲು ಅಂಕೆಗಳು ಗೊತ್ತಿದ್ದವು; ಮುಂದೆ ಅವು ಮರೆತು ಹೋದವು. ಈ ಆಕ್ಷೇಪವು ಸರಿಯಾದದ್ದಲ್ಲ. ಯಾಕಂದರೆ ಅತ್ಯಂತ ಉಪಯುಕ್ತವಾದ ಅಂಕೆಗಳನ್ನು ಮರೆಯುವದು ಎಂದಿಗೂ ಆಗದ ಮಾತು. ಸುವಿಖ್ಯಾತ ಇತಿಹಾಸಕಾರನೂ ಕಾದಂಬರಿಕಾರನೂ ವೃತ್ತಪತ್ರಕಾರನೂ, ಕಾಯರೋ ಪಟ್ಟಣದಲ್ಲಿಯ ಅಲ್ ಹಿಲಾಲ ಪತ್ರದ ಸಂಪಾದಕನೂ, 'ಅರಬೀಭಾಷೆಯ ಇತಿಹಾಸ,' ಮುಸಲ್ಮಾನೀ ಸಂಸ್ಕೃತಿಯ ಇತಿಹಾಸ, ಮೊದಲಾದ ಗ್ರಂಥಗಳನ್ನು ಬರೆದವನೂ ಆದ ಪ. ವಾ. ಜೀ. ಝೈದಾನ ಎಂಬವನು ತನ್ನ "ಅಲ್‌ಫಿಲಾಸಫಟ್ ಅಲ್ ಲುಗುವಯತ್ ವಲಲಫಜ್" ಎಂಬ ಪುಸ್ತಕದ (೧೧೭-೧೧೮) ಪುಟಗಳಲ್ಲಿ ಬರೆದಿರುವದೇನಂದರೆ, "ಎಲ್ಲ ಸುಧಾರಿಸಿದ ಜನಾಂಗದವರು ಈ ಅಂಕೆಗಳನ್ನು ಉಪಯೋಗಿಸುತ್ತಾರೆ. ಇವುಗಳಿಗೆ ಅರಬೀ ಅಂಕೆಗಳೆನ್ನುತ್ತಾರೆ. ಯಾಕಂದರೆ, ಅರಬರು ಪ್ರಾಚೀನ ಕಾಲದಲ್ಲಿ ಹಿಂದು ಜನರಿಂದ ಇವುಗಳನ್ನು ಕಲಿತುಕೊಂಡರು. ಇದರ ವಿಶಿಷ್ಟ ಗುರುತು ಏನೆಂದರೆ ಶೂನ್ಯವೇ. ಒಂದರಿಂದ ಒಂಭತ್ತರ ವರೆಗೆ ಪ್ರತಿಯೊಂದು ಅಂಕೆಗೂ ವಿಶಿಷ್ಟವಾದ ಒಂದು ಚಿಹ್ನವು ಅದೆ. ಆದರೆ ಹತ್ತು ಮಾಡಬೇಕಾದರೆ ಒಂದರ ಮುಂದೆ ಶೂನ್ಯವನ್ನು ಇಟ್ಟರೆ ಸಾಕು. ನೂರು ಮಾಡಬೇಕಾದರೆ ಒಂದರ ಮುಂದೆ ಎರಡು ಶೂನ್ಯಗಳನ್ನಿಟ್ಟರೆ ಆಯಿತು. ಈ ಪ್ರಕಾರ ಅಗಣಿತ ಸಂಖ್ಯೆಗಳನ್ನು ರಚಿಸಲಿಕ್ಕೆ ಬರುತ್ತದೆ. ಹಿಜರೀ ಶಕದ ಎರಡನೆಯ ಶತಮಾನದಲ್ಲಿ 'ಅರಬರು ಹಿಂದೂ ಜನರಿಂದ ಖಗೋಲವಿದ್ಯೆ, ಫಲಜ್ಯೋತಿಷ ಮೊದಲಾದ ವಿಷಯಗಳನ್ನು ಕಲಿತಂತೆ ಈ ಅಂಕೆಗಳನ್ನು ಕಲಿತುಕೊಂಡರು. ಇ. ಸ. ೭೭೩ ರಲ್ಲಿ ಕೆಲವು ಹಿಂದೂ ಜನರು ಬಗದಾದಕ್ಕೆ ಹೋದಾಗ ಸಂಗಡ ಜ್ಯೋತಿಃಶಾಸ್ತ್ರದ ಕೋಷ್ಟಕಗಳನ್ನೂ ಒಯ್ದಿದ್ದರು, ಎಂದು ಕೆಲವು ವಿದ್ವಾಂಸರ ಅಭಿಪ್ರಾಯವಿದೆ. ಗಣಿತಶಾಸ್ತ್ರದ ಮೊದಲನೇ ಇತಿಹಾಸಕಾರನು ೯ ನೆಯ ಶತ

ಮಾನದಲ್ಲಿದ್ದ ಅಬೂಜಾಫರ ಮುಹಮ್ಮದ ಅಲ್ ಖ್ವಾರಿ ಝುಮಿ ಎಂಬವನು. ಇವನ ತರುವಾಯ ಈ ಗಣಿತ ಶಾಸ್ತ್ರದ ಪ್ರಸಾರವು ಮುಸಲ್ಮಾನರ ಸ್ವಾಯುಸೀಕದಿಂದ ಆಯಿತು. ಅವನು ರಚಿಸಿದ ಗ್ರಂಥಕ್ಕೆ ಅವನ ಹೆಸರೇ ಬಿತ್ತು. ಈ ಅಲ್ ಖ್ವಾರಿ ಝುಮಿ ಎಂಬ ಗ್ರಂಥದ ಮೇಲಿಂದಲೇ ಯುರೋಪಿಯನ್ನರು ಅರಬರಿಂದ ೧೨ ನೆಯ ಶತಮಾನದಲ್ಲಿ ಗಣಿತ ವಿಷಯವನ್ನು ಕಲಿತರು. ಈ ರೀತಿಯಿಂದ ಹಿಂದೂ ಜನರ ಈ ಅಂಕೆಗಳು ಯುರೋಪದ ತುಂಬ ಹಬ್ಬಿದವು. ಯುರೋಪಿಯನ್ನರು ಇವುಗಳನ್ನು ತಾವು ಅರಬರಿಂದ ಕಲಿತ ಕಾರಣ ಇವುಗಳಿಗೆ ಅರಬೀ ಅಂಕೆಗಳೆನ್ನುತ್ತಾರೆ. ಸದ್ಯಕ್ಕೆ ಯುರೋಪದಲ್ಲಿ ಪ್ರಚಾರದಲ್ಲಿರುವ ಎಲ್ಲ ಅಂಕೆಗಳು ಅರಬರಿಂದಲೇ ತೆಗೆದುಕೊಳ್ಳಲ್ಪಟ್ಟವೆ, ಎಂದೂ ಈ ಅಂಕೆಗಳನ್ನು ಈ ಅರಬೀ ಜನರು ಹಿಂದೂ ಜನರಿಂದ ತೆಗೆದುಕೊಂಡರೆಂದೂ ಎಲ್ಲ ಇತಿಹಾಸಕಾರರು ಒಪ್ಪಿಕೊಳ್ಳುತ್ತಾರೆ."

ಹಿಂದೂ ಜನರು ಗ್ರೀಕಜನರ ಹಾಗೆ ಗಣಿತದ ಉಪಯೋಗವನ್ನು ಜ್ಞೇಯ ಸಂಖ್ಯೆಗಳ ಪೂರ್ತಿ ಮಾತ್ರ ಮಾಡಿಕೊಳ್ಳಲಿಲ್ಲ, ಎಂದು ಹೆಂಕೇಲನು ಅನ್ನುತ್ತಾನೆ. ಇದು ಮಹತ್ವವುಳ್ಳದ್ದು. ಯಾಕಂದರೆ ಇದರಿಂದ ಗಣಿತಶಾಸ್ತ್ರದ ಪ್ರಗತಿಗೆ ಬಹಳ ಉಪಯೋಗ ಉಂಟಾಗಿದೆ. ಡಿ. ಮಾರ್ಗನ್ ಎಂಬವರು ಅನ್ನುವದೇನಂದರೆ, "ಹಿಂದೂ ಜನರ ಅಂಕೆಗಳನ್ನು ಎಣಿಸುವ ಪದ್ಧತಿಯು ಗ್ರೀಕಜನರ ಪದ್ಧತಿಗಿಂತ ಮೇಲ್ತರದ್ದಾಗಿರುತ್ತದೆ."

ಹಿಂದೂ ಜನರ ಅಂಕಗಣಿತದ ವಿಷಯವಾಗಿ ಇನ್ನೂ ಒಬ್ಬಿಬ್ಬ ವಿದ್ವಾಂಸರ ಅಭಿಪ್ರಾಯಗಳನ್ನು ಕೆಳಗೆ ಕೊಡುತ್ತೇವೆ:—

"ಜಗತ್ತಿನಲ್ಲೆಲ್ಲ ಪ್ರಚಾರದಲ್ಲಿರುವ ಅಂಕೆಗಳ ಹಾಗೂ ದಶಾಂಶ ಪದ್ಧತಿಯ ಶೋಧಕರಾದ ಹಿಂದೂ ಜನರು ತೀರ ಪ್ರಾಚೀನಕಾಲದಲ್ಲಿ ಉತ್ತಮರಾದ ಗಣಿತಿಗಳಾಗಿದ್ದರು, ಎಂಬದಕ್ಕೆ ಸಂದೇಹವಿಲ್ಲ. ಯಾವದೊಂದು ಸಂಖ್ಯೆಯ ಬೇಕಾದಷ್ಟು ಪಟ್ಟು ಮಾಡುವದೂ ವರ್ಗಮೂಲ ಘನಮೂಲಗಳನ್ನು ಹುಡುಕಿ ತೆಗೆಯುವದೂ ಅವರಿಗೆ ತೀರ ಸಾಧಾರಣ ಸಂಗತಿಯಾಗಿತ್ತು." (ಇ. ಗ್ಯಾ. ಆಫ್ ಇಂಡಿಯಾ, ಭಾ. ೨. ಪು. ೨೬೧).

"ನಾವು ಸದ್ಯದಲ್ಲಿ ಉಪಯೋಗಮಾಡುವದು ಹಿಂದೂ ಜನರ ಅಂಕಗಣಿತವು. ಇದನ್ನು ಹಿಂದೂ ಜನರಿಂದ ಅರಬರು ಕಲಿತರು. ಆಮೇಲೆ ಅರಬರಿಂದ ಯುರೋಪಕ್ಕೆ ಹೋಯಿತು." (ಡೀ ಮಾರ್ಗನ್)

ಮೇಲಿನ ವಿವರಣೆಯಿಂದ ಕೆಳಗೆ ಬರೆದ ಮಾತುಗಳು ಸಿದ್ಧವಾಗುವವು:–ತೀರ ಪ್ರಾಚೀನ ಕಾಲದಲ್ಲಿಯೇ ಹಿಂದೂ ಜನರು ಅಂಕೆಗಳನ್ನು ಉಪಯೋಗಿಸುತ್ತಿದ್ದರು. ದಶಕ ಪದ್ಧತಿಯು ಹಿಂದುಸ್ಥಾನದಲ್ಲಿಯೇ ಹುಟ್ಟಿತು; ಅರಬರು ಹಿಂದೂ ಜನರಿಂದ ಖಗೋಲವಿದ್ಯೆ ಫಲಜ್ಯೋತಿಷ ಮೊದಲಾದ ವಿಷಯಗಳನ್ನು ಕಲಿತಂತೆ ಅಂಕೆಗಳನ್ನೂ ಶೂನ್ಯವನ್ನೂ, ದಶಕ ಪದ್ಧತಿಯನ್ನೂ ಕಲಿತುಕೊಂಡರು; ಹಾಗೂ ತಾವು ಕಲಿತದ್ದನ್ನು ಯುರೋಪಿಯನ್ನರಿಗೆ ಕಲಿಸಿದರು. ಈ ಮೇರೆಗೆ ಈಗ ಸುಧಾರಿಸಿದ ಜಗತ್ತಿನಲ್ಲೆಲ್ಲ ಪ್ರಾಚೀನ ಆರ್ಯರ ಅಂಕಗಣಿತದ ಉಪಯೋಗವು ಆಗಹತ್ತಿದೆ.

ಕ್ಷುಧೆಯೂ ಅನ್ನಲಾಲಸೆಯೂ.

ವಸ್ತುತಃ ಕ್ಷುಧೆ ಹಾಗು ಅನ್ನಲಾಲಸೆ ಎಂಬ ಎರಡು ಶಬ್ದಗಳ ವ್ಯಾಖ್ಯೆಗಳು ಬೇರೆ ಬೇರೆಯಾಗಿದ್ದರೂ ಸಾಮಾನ್ಯರು ಇವೆರಡನ್ನು ಒಂದೇ ಅರ್ಥದಲ್ಲಿ ಉಪಯೋಗಿಸುವರು. ವಿಚಾರಮಾಡಿ ನೋಡಿದರೆ ನಿಜವಾದ ತೃಷ್ಣೆ ಹಾಗು ಕಲ್ಪಿತ ತೃಷ್ಣೆ ಇವುಗಳಲ್ಲಿರುವ ಭೇದವೇ ನಿಜವಾದ ಹಸಿವೆ (ಕ್ಷುಧೆ) ಹಾಗು ಕಲ್ಪಿತ ಹಸಿವೆ (ಅನ್ನಲಾಲಸೆ) ಇವುಗಳಲ್ಲಿರುವದೆಂಬದು ತಿಳಿದು ಬರುವದು. ಆಧುನಿಕ ಸುಧಾರಣೆಯ ಕಾಲದಲ್ಲಿ ಬಹು ಜನರು ತಮ್ಮ ತೃಷ್ಣೆಯನ್ನು ಚಹಾ, ಕಾಫಿ, ಸೋಡಾ ವಾಟರ, ಲಿಮೋನೇಡ, ಕೋಲ್ಡ್ರಿಂಕ, ಆಯ್‌ಸ್ಕ್ರೀಮ ಮುಂತಾದ ಕೃತ್ರಿಮ ಪೇಯ-ಪದಾರ್ಥಗಳನ್ನು ಸೇವಿಸಿ ಹಿಂಗಿಸಿಕೊಳ್ಳುತ್ತಿರುವರು. ಕೆಲಕೆಲವರ ತೃಷ್ಣೆಯಂತೂ ನೆರೆಯನ್ನು ಕುಡಿದ ಹೊರತು ಹಿಂಗುತ್ತಿರುವದೇ ಇಲ್ಲ! ಇಂಥ ಜನರಿಗೆ ಉಂಟಾಗುವ ತೃಷ್ಣೆಗೆ ಕಲ್ಪಿತ ತೃಷ್ಣೆಯೆಂದು ಹೆಸರು. ಇದು ಅಸ್ವಾಭಾವಿಕವೂ ಅಪಾಯಕರವೂ ಆಗಿರು

ವದು. ಈ ಕಲ್ಪಿತ ತೃಷ್ಣೆಯು ತಿಳಿಯಾದ ತಣ್ಣೀರನ್ನು ಕುಡಿಯುವದರಿಂದ ಎಂದೂ ಹಿಂಗಲಾರದು. ಮನುಷ್ಯನು ಒಮ್ಮೆ ಈ ತೃಷ್ಣೆಗೆ ಅಧೀನನಾದನೆಂದರೆ ಅವನ ಸ್ವಾಭಾವಿಕವಾದ ತೃಷ್ಣೆಯು ಪೂರಾ ಇಲ್ಲದಂತಾಗುವದು. ಅವನಿಗೆ ಈ ತರದ ಕೃತ್ರಿಮಪೇಯಗಳ ಚಟವು ಹತ್ತಿತೆಂದರೆ ಅವು ಅನ್ನಪಾನಗಳಿಗಿಂತಲೂ ಹೆಚ್ಚು ಪ್ರಿಯಕರವೂ ಅವಶ್ಯಕ ವಸ್ತುಗಳೂ ಆಗಿ ತೋರುವವು.

ಇರಲಿ. ಮೇಲೆ ಹೇಳಿದಂಥ ಕೆಲಕೆಲವು ಕೃತ್ರಿಮ ಪದಾರ್ಥಗಳ ಚಟದ ಯೋಗದಿಂದ ನಮ್ಮ ನಾಲಿಗೆಯೇ ಮೊದಲಾದ ಅವಯವಗಳಲ್ಲಿ ಕಂಡು ಬರುವ ಲಾಲಸೆಯೇ ಹಸಿವೆಯೆಂಬ ಶರೀರಧರ್ಮದ ದ್ಯೋತಕವೆಂದು ಬಹು ಜನರು ತಿಳಿದುಕೊಳ್ಳುವರು. ಆದರೆ ಸ್ವಾಭಾವಿಕವಾದ ಹಸಿವೆಯು, ಅಂದರೆ ಕ್ಷುಧೆಯು ಮನುಷ್ಯೇತರ ಪ್ರಾಣಿಗಳಲ್ಲಿ ಮಾತ್ರ ಕಂಡುಬರುವದು. ಯಾಕಂದರೆ, ಮನುಷ್ಯನ ಕೃತ್ರಿಮವಾದ ಆಹಾರಸೇವನೆಯ ಪದ್ಧತಿಯಿಂದ ನಿಜವಾದ ಹಸಿವೆಯು ಅವನ ಅನುಭವಕ್ಕೆ ಬರದಂತಾಗಿರುವದು. ಪ್ರಾಣಿಗಳಂತೆ ಚಿಕ್ಕ ಬಾಲಕರಿಗೂ ನಿಜವಾದ ಹಸಿವೆಯು ಅನುಭವಕ್ಕೆ ಬರುವದುಂಟು. ಆದರೆ ತಾಯಿತಂದೆಗಳು ತಮ್ಮ ಮಕ್ಕಳಿಗೆ ಸವಿಸವಿಯಾದ ಕೃತ್ರಿಮ ಪದಾರ್ಥಗಳನ್ನು ಆಹಾರದಂತೆ ಕೊಡುವದರಿಂದಲೂ, ನಿಜವಾದ ಹಸಿವೆಯು ಅನುಭವಕ್ಕೆ ಬರುವದಕ್ಕಿಂತ ಮೊದಲೇ ಮೇಲಿಂದ ಮೇಲೆ ಆಹಾರವನ್ನು ಹಾಕುವದರಿಂದಲೂ ಆ ಬಾಲಕರು ಸಹ ಬರಬರುತ್ತ ನಿಜವಾದ ಹಸಿವೆಯ ಅನುಭವವನ್ನು ಕಳೆದುಕೊಳ್ಳುವರು. ತಂದೆತಾಯಿಗಳು ಹೆಚ್ಚು ಹೆಚ್ಚು ಶ್ರೀಮಂತರಿದ್ದಂತೆ ಹುಡುಗರಿಗೆ ಹೆಚ್ಚು ಹೆಚ್ಚು ಸವಿಯಾದ ಪದಾರ್ಥಗಳನ್ನು ಸೇವಿಸುವ ಚಟವು ಹತ್ತುವದು. ಕೆಲವು ಹುಡುಗರಿಗೆ ಸಕ್ಕರೆಯನ್ನು ಹಾಕಿದ ಹೊರತು ಹಾಲೇ ಸೇರುವದಿಲ್ಲ. ಈ ರೀತಿಯಾಗಿ ಶ್ರೀಮಂತರ ಮಕ್ಕಳಿಗೆ ಕಡೆತನಕ ನಿಜವಾದ ಹಸಿವೆಯು ಅನುಭವಕ್ಕೆ ಬರುತ್ತಿರುವದಿಲ್ಲ.

ಮನೆಯಲ್ಲಿ ನಿಯಮಿತ ವೇಳೆಗೆ ಅಡಿಗೆಯಾಗಿ ಅಡಿಗೆಯವರು ಊಟಕ್ಕೆ ಕರೆದ ಕೂಡಲೆ ಹಸಿವೆಯಾಗಲಿ ಆಗದಿರಲಿ ಜನರು ಊಟಕ್ಕೆ ಹೋಗುವರು. ಸೆರೆಗುಡಕರಿಗೆ ಸೆರೆಯನ್ನು ಕುಡಿಯುವ

ಹೊತ್ತಿಗೆ ಸರಿಯು ಸಿಗದಿದ್ದರೆ ಆಗ ಅವರ ಮನಸಿನಲ್ಲಿ ಅದರ ಪ್ರಬಲವಾದ ಇಚ್ಛೆಯು ಉಂಟಾಗುವದು. ಅದೇ ರೀತಿಯಾಗಿ ದಿನಾಲು ಊಟ ಮಾಡುವ ವೇಳೆಯು ಬಂದ ಕೂಡಲೆ ನಮಗೆ ಅನ್ನದ ವಿಷಯವಾಗಿ ಒಂದು ತರದ ಹಂಬಲವು ಬರುವದು; ಹಾಗು ಹಸಿವೆಯು ಆಭಾಸವಾಗುವದು. ಆಗ ನಾವು ಕೆಲವು ಕೃತ್ರಿಮ ಆಹಾರಗಳನ್ನು ಸೇವಿಸುವೆವು. ಈ ರೀತಿಯಾಗಿ ಹಸಿವೆಯ ಆಭಾಸಮಾತ್ರದಿಂದ ಕೆಲವೊಂದು ಗೊತ್ತಾದ ವೇಳೆಯಲ್ಲಿ ಗೊತ್ತಾದ ಆಹಾರವನ್ನು ಸೇವಿಸಿ ಸಮಾಧಾನಬಡುವೆವು.

ಈ ತರದ ಆಹಾರಸೇವನೆಯ ಪದ್ಧತಿಯಿಂದ ಅಗ್ನಿಮಾಂದ್ಯವನ್ನು ಹೊಂದಿದ ಜನರು ಯಾವದಾದರೂ ದೀರ್ಘವಾದ ಪ್ರವಾಸಕ್ಕೆ ಹೊರಟರೆಂದರೆ ಮಾರ್ಗದಲ್ಲಿ ಅವರಿಗೆ ನಿಜವಾದ ಹಸಿವೆಯು ಅನುಭವಕ್ಕೆ ಬರುವದುಂಟು. ಇಲ್ಲಿ ಒಂದು ವಿಶೇಷ ಪ್ರಕಾರದ ಉದಾಹರಣೆಯನ್ನು ಹೇಳುವೆವು. ಒಮ್ಮೆ ಕೆಲವರು ಶ್ರೀಮಂತರು ಹಡಗದಲ್ಲಿ ಕುಳಿತು ಪ್ರವಾಸ ಮಾಡಹತ್ತಿದಾಗ ದೈವಯೋಗದಿಂದ ಅವರ ಹಡಗವು ದೊಡ್ಡದೊಂದು ಬಂಡೆಗಲ್ಲಿಗೆ ಅಪ್ಪಳಿಸಿ ಒಡೆದು ಹೋಯಿತು. ಈ ರೀತಿಯಾಗಿ ಸಮುದ್ರದ ಪಾಲಾದ ಜನರಲ್ಲಿ ಕೆಲವರು ಹಾಗೂ ಹೀಗೂ ಈಸಿ ಪಾರಾಗಿ ನೆರೆಯಲ್ಲಿದ್ದ ಸಣ್ಣದೊಂದು ದ್ವೀಪಕ್ಕೆ ಹೋಗಿ ಮುಟ್ಟಿದರು. ಆದರೆ ಅವರಿಗೆ ಬೇಗನೆ ಸಹಾಯವು ದೊರೆಯದೆ ಇದ್ದದರಿಂದ ಆ ನಿರ್ಜನವಾದ ದ್ವೀಪದಲ್ಲಿ ಅವರು ಹತ್ತು ಹದಿನೈದು ದಿನಗಳನ್ನು ನಿರಾಹಾರದಿಂದ ಕಳೆಯಬೇಕಾಯಿತು. ಆದರೆ ಆಶ್ಚರ್ಯವೇನಂದರೆ, ಈ ತರದ ದೀರ್ಘವಾದ ಉಪವಾಸದಿಂದ ಅವರೆಲ್ಲರು ಸತ್ತುಹೋಗುವದರ ಬದಲಾಗಿ ಇನ್ನಷ್ಟು ಸದೃಢರೂ ನಿರೋಗಿಗಳೂ ಆದರು. ಹಾಗು ಅವರೊಳಗಿನ ಕೆಲವರಿಗಿದ್ದ ಕ್ಷಯರೋಗ, ಮಧುಮೇಹ, ಮಲಬದ್ಧತೆ ಮುಂತಾದ ಬಹು ದಿನಗಳ ಅಸಾಧ್ಯ ರೋಗಗಳು ಅನಾಯಾಸವಾಗಿ ಪರಿಹಾರವಾದವು! ಈ ವಿಷಯವನ್ನು ಮುಂದೆ "ಲಂಘನಮೀಮಾಂಸೆ"ಯೆಂಬ ಬೇರೊಂದು ಲೇಖದಲ್ಲಿ ವಿವೇಚಿಸುವೆವು.

ಮನುಷ್ಯರಿಗೆ ನಿಜವಾದ ಹಸಿವೆಯುಂಟಾದ ಕೂಡಲೆ ಬಾಯಿಯಿಂದ ಲೋಳೆಯು ಸುರಿಯಹತ್ತುವದು. ಹಾಗು ಮುಖದಲ್ಲಿಯೂ ಗಂಟಲದಲ್ಲಿಯೂ ಒಂದು ಪ್ರಕಾರದ ಚೇತನೆಯು ಉತ್ಪನ್ನವಾಗುವದು. ಈ ಸಮ

ಯದಲ್ಲಿ ಯಾರಾದರೂ ಆಹಾರದ ಪದಾರ್ಥಗಳ ಹೆಸರನ್ನು ಹೇಳಿದ್ದನ್ನು ಕೇಳಿದ ಕೂಡಲೆ ಬಾಯಿಯಲ್ಲಿ ನೀರೊಡೆಯುವದು. ಮತ್ತು ಈ ವೇಳೆಯಲ್ಲಿ ಊಟಮಾಡಿದ ಅನ್ನವು ಅತಿಶಯ ರುಚಿಕರವಾಗುವದು. ಸಾಂಪ್ರತಕಾಲದಲ್ಲಿ ಬಹುಜನರಿಗೆ ನಿಜವಾದ ಹಸಿವೆಯು ಅನುಭವಕ್ಕೆ ಬರುವದಿಲ್ಲ. ಬಹುತರವಾಗಿ ಅಲ್ಪ ಹಸಿವೆಯಾದ ಕೂಡಲೆ ಹೊಟ್ಟೆಯೊಳಗೆ ಕಳವಳವುಂಟಾಗಿ ತಲೆತಿರುಗಿ ಬರುವದು. ಹಾಗು ಆಗ ಆಹಾರವು ಹೊಟ್ಟೆಯೊಳಗೆ ಹೋದ ಹೊರತು ಯಾವ ಕೆಲಸದಲ್ಲಿಯೂ ಮನಸು ತೊಡಗದಂತಾಗುವದು.

ಕೆಲವರು "ನಮ್ಮ ಅಮ್ಮನು ಮಾಡಿದ ಅಡಿಗೆಯು ಅತಿಶಯ ರುಚಿಕರವಾಗುತ್ತಿತ್ತು. ಆದರೆ ಈಗ ಯಾರ ಅಡಿಗೆಯಲ್ಲಿಯೂ ಅಂಥ ಸ್ವಾದವು ಕಂಡುಬರುವದಿಲ್ಲ" ಎಂದು ಹೇಳುವರು. ಈ ಮಾತಿನಿಂದ ಅವರು ಪಾಚಕಶಕ್ತಿಯನ್ನು ಕಳೆದುಕೊಂಡಿರುವರೆಂತಲೂ ಅವರಿಗೆ ನಿಜವಾದ ಹಸಿವೆಯ ಅನುಭವವು ಬರದಂತಾಗಿರುವದೆಂತಲೂ ವ್ಯಕ್ತವಾಗುವದು. ನಿಜವಾಗಿ ಹಸಿವೆಯಾಗಿದ್ದರೆ ಅಡಿಗೆಯನ್ನು ಬೇಕಾದವರು ಮಾಡಿದ್ದರೂ ಅದು ಅತಿಶಯ ರುಚಿಕರವಾಗಿಯೇ ತೋರುವದು ಅಡಿಗೆಯನ್ನು ಮಾಡಿದ ವ್ಯಕ್ತಿಗೂ ಅದರ ರುಚಿಗೂ ಯಾವ ಪ್ರಕಾರದ ಸಂಬಂಧವಿರದೆ ಅದರ ರುಚಿಯು ಊಟಮಾಡುವವನ ಹಸಿವೆಯ ನಿಜತ್ವವನ್ನು ಅವಲಂಬಿಸಿರುವದು ಹೊಟ್ಟೆತುಂಬಿದ ಮೇಲೆ ಶಾವಿಗೆಯು ಮುಳ್ಳು ಮುಳ್ಳಾಗಿ ತೋರುವದಂತೆ!

ಒಟ್ಟಿನ ಮೇಲೆ ಹೇಳತಕ್ಕದ್ದೇನಂದರೆ, ಆರೋಗ್ಯದಿಂದ ಬಾಳಬೇಕೆಂದು ಬಯಸುವ ಪ್ರತಿಯೊಬ್ಬ ಮನುಷ್ಯನು ತಕ್ಕಷ್ಟು ಹಸಿವೆಯಾದ ಹೊರತು ಎಂದೂ ಊಟಮಾಡಬಾರದು; ಹಾಗು ಮೇಲೆ ಹೇಳಿದ ನಿಜವಾದ ಹಸಿವೆಯ ಲಕ್ಷಣಗಳನ್ನು ಲಕ್ಷದಲ್ಲಿಟ್ಟುಕೊಂಡಿರಬೇಕು.

ಕಾಲೇಜದ ವಿದ್ಯಾರ್ಥಿಗಳ ಲೇಖಗಳು.

ಈ ಸೋ ೧ ೩ .

ಶರೀರದ ಬೇರೆ ಬೇರೆ ಭಾಗಗಳಿಗೆ ಶ್ರಮವನ್ನುಂಟು ಮಾಡಿ, ಕ್ರಮಕ್ರಮದಿಂದ ಆಯಾ ಭಾಗಗಳನ್ನು ಪರಿಪುಷ್ಟವಾಗಿ ಮಾಡುವ

ಅನೇಕ ತರದ ವ್ಯಾಯಾಮಗಳಲ್ಲಿ ಈಸೋಣವು ಒಂದಾಗಿದೆ. ಇದರಿಂದ ಮನಸ್ಸಿನ ಸಂತಾಪ ನಿವಾರಣೆಯಾಗಿ ಅದು ಸುಪ್ರಸನ್ನವಾಗುವದಲ್ಲದೆ, ಶರೀರದ ಯಾವತ್ತು ಅವಯವಗಳಿಗೆ ಸಂಪೂರ್ಣವಾದ ಶ್ರಮವು ಬೀಳುತ್ತದೆ; ಆದ್ದರಿಂದ ಈಸೋಣವು ಅತ್ಯಂತ ಶ್ರೇಷ್ಠವಾದ ವ್ಯಾಯಾಮಗಳಲ್ಲಿ ಎಣಿಸಲ್ಪಡುತ್ತದೆ.

ನಮ್ಮ ವೈದ್ಯಶಾಸ್ತ್ರದಲ್ಲಿ ಶೀತಲೋದಕಸ್ನಾನವು ಆರೋಗ್ಯದಾಯಕವೂ, ಬಲವರ್ಧಕವೂ ಎಂದು ಹೇಳಲ್ಪಟ್ಟಿದೆ; ಆದರೆ ಎಲ್ಲ ಜನರ ಪ್ರಕೃತಿಗೆ ಅದು ತಡೆಯುತ್ತಿರುವದಿಲ್ಲ. ಆದರೆ ಈಸುವ ಕಲೆಯನ್ನು ಕಲಿಯುವದರಿಂದ ಯಾರಿಗೂ ಹಾನಿಯಾಗುವದಿಲ್ಲ. ಇದರಿಂದ ಬಾಹುಗಳೂ, ತೊಡೆಗಳೂ ಸರಿಯಾಗಿ (ಒಂದೇ ಕಾಲಕ್ಕೆ) ಪುಷ್ಟತೆಯನ್ನು ಹೊಂದುತ್ತವೆ; ಶ್ವಾಸೋಚ್ಛ್ವಾಸನಕ್ರಿಯೆಯು ನಿಯಮಿತವಾಗಿ ನಡೆದು, ಫುಪ್ಪುಸಗಳೂ ವಕ್ಷಸ್ಥಲವೂ ಬಲಿಷ್ಠವಾಗುತ್ತವೆ; ಮಾಲಿನ್ಯದಿಂದ ಮುಚ್ಚಿಕೊಂಡ ರೋಮರಂಧ್ರಗಳು ಶುದ್ಧವಾಗಿ ತ್ವಚೆಯು ನಿರ್ಮಲವಾಗುತ್ತದೆ; ಶಾರೀರಿಕ ಕಂಪ (ಗಾಬರಿಯಾಗೋಣ) ವೇ ಮೊದಲಾದ ಜ್ಞಾನತಂತುವಿಷಯಕ ವಿಕಾರಗಳು ನಾಶವಾಗುತ್ತವೆ. ಮನುಷ್ಯನು ಯಾವದೊಂದು ಶ್ರಮದ ಕೆಲಸವನ್ನು ಮಾಡಿದ ನಂತರ, ಅವನ ಅವಯವಗಳು ಶಿಥಿಲವಾಗಿ, ಅವನ ಮುಖದ ಮೇಲೆ ಒಂದು ತರದ ಬಾಡಿದ ಚಿಹ್ನವು ಕಂಗೊಳಿಸುವದು. ಆದರೆ ಈಸುವದರಿಂದ ಶರೀರದ ಎಲ್ಲ ಅವಯವಗಳಿಗೆ ಚಲನೆಯುಂಟಾದರೂ ಅದರಿಂದ ಆ ಪ್ರಕಾರದ ಪರಿಣಾಮವುಂಟಾಗುವದಿಲ್ಲ. ಯಾಕಂದರೆ, ಕೈಕಾಲುಗಳ ಪ್ರತಿಯೊಂದು ವ್ಯಾಪಾರದ ಸಂಗಡಲೇ ಈಸುವವನ ಮನಸ್ಸಿನಲ್ಲಿ ಒಂದು ತರದ ಸ್ವಾನಂದಕೌತುಕವು ಉತ್ಪನ್ನವಾಗುತ್ತದೆ. ಆ ಕೌತುಕದ ಭರದಲ್ಲಿ ಈಸುವದರಿಂದಾದ ಶ್ರಮವನ್ನು ಅವನು ಮರೆತು ಬಿಡುವನು. ಆದ್ದರಿಂದ ಅವನು ದಂಡೆಗೆ ಮುಟ್ಟಿದ ಕೂಡಲೆ ಶ್ರಮಸೂಚಕವಾದ ನಿಟ್ಟುಸುರು ಬಿಡುವದಕ್ಕೆ ಬದಲಾಗಿ ಉತ್ಸುಕತಾಯುಕ್ತವಾದ ಮುಖದಿಂದ ಒಪ್ಪುತ್ತಿರುತ್ತಾನೆ

ಮೇಲೆ ಹೇಳಿದಂತೆ ಈಸೋಣವು ಮನಸ್ಸಿಗೆ ಆನಂದವನ್ನೂ ಶರೀರಕ್ಕೆ ವ್ಯಾಯಾಮವನ್ನೂ ಉಂಟುಮಾಡುವದೆಂಬವಿಷ್ಟೇ ಅಲ್ಲ; ಸ್ವಲ್ಪ

ವಿಚಾರಿಸಿದರೆ, ಇದು ಕೇವಲ ಸ್ವಾರ್ಥಕ್ಕಾಗಿ ಇರದೆ ಇದರಿಂದ ಪರಹಿತ ವೆನ್ನೂ ಸಾಧಿಸಬಹುದೆಂಬದು ಗೊತ್ತಾಗುವದು. ಎಷ್ಟೋ ಪ್ರಸಂಗ ಗಳಲ್ಲಿ ಪರರ ಪ್ರಾಣವನ್ನುಳಿಸಿದ ಅತಿ ಪುಣ್ಯಕಾರಕ ಶ್ರೇಯಸ್ಸು ಈ ಕಲೆಯಿಂದ ಪ್ರಾಪ್ತವಾಗುವದು. ಇಂತಹ ಉದಾಹರಣೆಗಳನ್ನು ನಮ್ಮ ಎಷ್ಟೋ ವಾಚಕರು ಕಣ್ಣಾರೆ ಕಂಡಿರಬಹುದು.

ಕೆಲವರು ಈಸುವದು ಸಣ್ಣ ಹುಡುಗರ ಕೆಲಸವೆಂತಲೂ, ದೊಡ್ಡ ವರು ಹುಡುಗರಂತೆ ಆಚರಿಸಿದರೆ ತಮ್ಮ ಕೀಳುತನವನ್ನು ವ್ಯಕ್ತಪಡಿಸಿ ದಂತಾಗುವದೆಂತಲೂ ಭಾವಿಸುವರು. ಅವರ ಈ ಭಾವನೆಯು ತೀರ ತಪ್ಪಿನದು. ಅಂತಹರು ಜಗತ್ತಿನೊಳಗಿನ ಎಷ್ಟೋ ದೊಡ್ಡ ದೊಡ್ಡ ಪುರುಷರು ಉತ್ತಮವಾದ ಈಸಾಳುಗಳಾಗಿದ್ದರೆಂಬದನ್ನು ಲಕ್ಷದಲ್ಲಿಡ ಬೇಕು. ಮೊಗಲರಾಜ್ಯ ಸಂಸ್ಥಾಪಕನಾದ ಬಾಬರನು ಉತ್ತಮವಾಗಿ ಈಸುತ್ತಿದ್ದನು. ಅವನು ಮಾರ್ಗಕ್ರಮಣ ಮಾಡುವಾಗ ದಾರಿಯಲ್ಲಿ ಹತ್ತುವ ಯಾವ ಹೊಳೆಯನ್ನೂ ಈಸದೆ ಬಿಡಲಿಲ್ಲವಂತೆ! ಅಮೇರಿಕದ ಪ್ರಖ್ಯಾತ ಮುತ್ಸದ್ದಿಯಾದ ಬೆಂಜಾಮಿನ್ ಫ್ರಾಂಕಲಿನನು ಬಾಲ್ಯದಿಂ ದಲೇ ಈಸುವ ಕಲೆಯಲ್ಲಿ ಬಲ್ಲಿದನಾಗಿದ್ದನು! ಬಾಯರನೆಂಬ ಪ್ರಸಿದ್ಧ ಕವಿಯು ಕಾನಸ್ಟಾಂಟಿನೋಪಲದ ಹತ್ತರಿರುವ ಹೇಲೆಸ್ಪಾಂಟ ಎಂಬ ಒತ್ತನ್ನು (ಇದು ಸುಮಾರು ಒಂದು ಒಂದೂವರೆ ಮೈಲು ಅಗಲವಾಗಿದೆ.) ಒಂದು ತಾಸಿನಲ್ಲಿ ಈಸಿ ಹೋದನು! ಅಥಿನಿಯನ್ ಜನರಲ್ಲಿ ಯಾವ ನೊಬ್ಬನನ್ನು ದಡ್ಡನೆಂದು ಹಳಿಯುವಾಗ "ಇವನಿಗೆ ಈಸಲಿಕ್ಕೂ ಬರು ವದಿಲ್ಲ; ಓದಬರಹಗಳೂ ಬರುವದಿಲ್ಲ" ಎನ್ನುವ ಪ್ರಘಾತವಿದೆ. ಮಹಾರಾಷ್ಟ್ರರ ಆಧಿಪತ್ಯದ ಕಾಲಕ್ಕೆ ಈಸುವ ಕಲೆಯು ಅತ್ಯಂತ ಅವ ಶ್ಯಕವೆಂದು ತಿಳಿಯುತ್ತಿದ್ದರು. ಪ್ರಸಿದ್ಧ ವೀರನಾದ ಬಾಪು ಗೋಖ ಲೇನ ಕಕ್ಕನಾದ ಧೋಂಡೋಪಂತನು ಯೋಗ್ಯರಾದ ಸೈನಿಕರೊಡನೆ ಕೃಷ್ಣಾನದಿಯಲ್ಲಿ ಈಸಿ ಹೋಗಿ ಆಚೆಯ ತೀರದಲ್ಲಿರುವ ಟೀಪುವಿನ ಕಡೆಯ ಪೆಂಡಾರಿಗಳನ್ನು ಸೋಲಿಸಿದ್ದು ಇತಿಹಾಸಪ್ರಸಿದ್ಧವದೆ!

ಇಂಗ್ಲಂಡದಲ್ಲಿ ಬೇರೆ ಬೇರೆ ಪ್ರಕಾರದ ಸಂಸ್ಥೆಗಳಿರುವಂತೆ, ಈಸುವ ಕಲೆಯ ಸಂಬಂಧದ ಸಂಸ್ಥೆಗಳಾದರೂ ಇರುತ್ತವೆ. ಇಚ್ಛೆಯು ಳ್ಳವರು ಅಲ್ಲಿ ಹೋಗಿ ಆ ಕಲೆಯನ್ನು ಸಂಪಾದಿಸಬಹುದು. ಈ

ಸಂಬಂಧದ ಶರ್ಯತ್ತುಗಳಾದರೂ ಅಲ್ಲಿ ಮೇಲಿಂದ ಮೇಲೆ ನಡೆಯು ವವು. ಪಾಠಶಾಲೆಗಳಲ್ಲಾದರೂ ಹುಡುಗರಲ್ಲಿ ಇಂತಹ ಶರ್ಯತ್ತು ಗಳು ಆಗುತ್ತಿರುತ್ತವೆ. ಈಸುವವರ ವಯಸ್ಸಿನ ಮಾನದಿಂದ ಅಂತರ ವನ್ನು ಗೊತ್ತುಪಡಿಸುವರು. ಪ್ರೊಫೆಸರ ಬೇಕವ್ಹಯಿಥ ಎಂಬವನು ತೇಮ್ಸ ನದಿಯಲ್ಲಿ ೧೫ ಮೈಲುಗಳ ಶರ್ಯತವನ್ನು ೧೬ ಮಿ. ೪೨ ಸೇ. ಗಳಲ್ಲಿ ಗೆದ್ದನು!! ಅವನ ಮಗಳು ಒಮ್ಮೆ ವೆಸ್ಟಮಿನಿಸ್ಟರದಿಂದ ರಿಚ ಮಂಡದ ವರೆಗೆ ಈಸಿದಳಂತೆ!!

ಪ್ರಥಮತಃ ಈ ಕಲೆಯು ಕಠಿಣವಾಗಿಯೂ, ಅಪಾಯಕಾರಕ ವಾಗಿಯೂ ತೋರುತ್ತದೆ. ಆದರೆ ನಿಜವಾಗಿ ಅದು ಬಹಳ ಸುಲಭವಾ ಗಿಯೂ, ಆನಂದಜನಕವಾಗಿಯೂ ಇರುತ್ತದೆ. ಎಲ್ಲರಿಗೆ ಈ ಕಲೆಯು ಸುಲಭವಾಗಿ ಬರಬೇಕೆಂದು ಪರಮೇಶ್ವರನು ಬಹುಮಟ್ಟಿಗೆ ಮನುಷ್ಯ ಶರೀರವನ್ನು ನೀರಿಗಿಂತ ಕಡಿಮೆಭಾರವುಳ್ಳದ್ದಾಗಿ ಮಾಡಿದ್ದಾನೆ. ಎಷ್ಟೋ ಪರಿಶ್ರಮದಿಂದ ಕಲಿತ ಕಲೆಗಳಾದರೂ ಕಾಲಾಂತರದಲ್ಲಿ ಒಮ್ಮೆಲ್ಲೊಮ್ಮೆ ಮರೆತು ಹೋಗುವ ಸಂಭವವುಂಟು. ಆದರೆ ಈ ಕಲೆಯನ್ನು ಒಮ್ಮೆ ಕಲಿತರೆ ಅದು ಎಂದಿಗೂ ಮರೆತು ಹೋಗುವದಿಲ್ಲ; ಮತ್ತು ಇದನ್ನು ಕಲಿಯಲಿಕ್ಕೆ ಸ್ವಲ್ಪಾದರೂ ಖರ್ಚು ಮಾಡಬೇಕಾಗಿಲ್ಲ. ಇಂತಹ ಸುಸಾಧ್ಯವಾದ ಮತ್ತು ಅತ್ಯುಪಯುಕ್ತವಾದ ಕಲೆಯನ್ನು ಕೇವಲ ಅಲ ಕ್ಷ್ಯದಿಂದಲೂ, ಆಲಸ್ಯದಿಂದಲೂ ಕಲಿಯದಿರುವದು ಲಾಂಛನಾಸ್ಪದ ವಾದ ಸಂಗತಿಯಲ್ಲವೇ?

ನಮ್ಮ ಜನರು, ವಿಶೇಷವಾಗಿ ಹಳ್ಳಿವಾಡದವರು ಹುಡುಗರು ಊರ ಸಮೀಪದಲ್ಲಿರುವ ಕೆರೆ, ಹಳ್ಳ, ಇಲ್ಲವೆ ಹೊಳೆಗೆ ಹೋಗು ತ್ತೇವೆಂದ ಕೂಡಲೆ ಅವರ ಮೇಲೆ ಒಮ್ಮೆಂದೊಮ್ಮೆಲೆ ಸಿಟ್ಟಿಗೆದ್ದು, ಬೈದು, ಹೊಡೆದು ಮನೆಯಲ್ಲಿ ಕೂಡ್ರಿಸುವರು. ಪ್ರತಿಯೊಂದು ಸಂಗತಿ ಯಲ್ಲಿ ಇದೇ ಪ್ರಕಾರ ವರ್ತಿಸಿ ಅವರನ್ನು ಕೇವಲ ಕೂಪಮಂಡೂಕದ ಸ್ಥಿತಿಗೆ ತಂದಿಡುವರು. ಇದರಲ್ಲಿ ತಂದೆ-ತಾಯಿಗಳ ಭ್ರಾಮಕಸದ್ಧೇತು ವಿರಬಹುದು; ಆದರೆ ಇದರಿಂದ ಆ ಬಾಲಕರ ಭಾವೀ ಸ್ಥಿತಿಯ ಮೇಲೆ ವಿಶೇಷ ಹಾನಿಕಾರಕ ಪರಿಣಾಮವುಂಟಾಗುವದು. ಬೇರೆ ಸಂಗತಿಗಳು ಒತ್ತಟ್ಟಿಗಿರಲಿ; ಪ್ರಕೃತಕ್ಕೆ ಈಸುವ ಸಂಬಂಧದಿಂದ ನೋಡಿದರೆ,

ಹುಡುಗರು ನೀರಲ್ಲಿ ಬಿದ್ದು ಚಲ್ಲಾಟವಾಡುವದಕ್ಕೂ, ಈಸುವ ಕಲೆಯನ್ನು ಕಲಿಯುವದಕ್ಕೂ ಬಹಳೇ ಅಪೇಕ್ಷಿಸುತ್ತಾರೆ. ಅವರ ಈ ಸ್ವಾಭಾವಿಕ ಚಿತ್ತವೃತ್ತಿಯನ್ನು ತಡೆಯುವದರಿಂದ ಯಾವ ಪರಿಣಾಮವಾಗುವದೆಂಬದನ್ನು ವಾಚಕರೇ ತರ್ಕಿಸಬಹುದು. ಆದುದರಿಂದ ಹೀಗೆ ಮಾಡದೆ ಹುಡುಗರನ್ನು ಸ್ವತಃ ಹೊಳೆ-ಹಳ್ಳಗಳಿಗೆ ಕರೆದುಕೊಂಡು ಹೋಗಿ, ಅವರು ಈ ಕಲೆಯನ್ನು ಕಲಿಯುವಂತೆ ಮಾಡಬೇಕು. ಹುಡುಗರಲ್ಲಿ ಸಾರಾಸಾರ ವಿಚಾರವು ಬಹುಮಟ್ಟಿಗೆ ಇರುವದಿಲ್ಲಾದ್ದರಿಂದ, ನೀರಲ್ಲಿ ಬಹಳ ಹೊತ್ತು ಸುಮ್ಮನೆ ಬಿದ್ದುಕೊಳ್ಳುವದರಿಂದ ಯಾವ ಪರಿಣಾಮವಾಗುತ್ತದೆಂಬದನ್ನು ಸವಿನುಡಿಗಳಿಂದ ಅವರಿಗೆ ತಿಳಿಹೇಳಿದರೆ ಅವರು ಆ ಪ್ರಕಾರ ಎಂದೂ ಆಚರಿಸುವದಿಲ್ಲ.

ಈ ಪ್ರಕಾರ ಅತ್ಯುತ್ತಮವಾದ ಈ ಕಲೆಯನ್ನು ಪ್ರತಿಯೊಬ್ಬನು ಪ್ರಯತ್ನಪೂರ್ವಕವಾಗಿ ಕಲಿಯಬೇಕಲ್ಲದೆ, ತನ್ನ ಮಕ್ಕಳಿಗೂ, ಬಾಲಕರಿಗೂ ಕಲಿಸುವ ಪ್ರಯತ್ನ ಮಾಡಬೇಕು.

ಭೀಮಾಜಿ ಜೀವಾಜಿ ಹುಲಿಕವಿ.
೩ ನೆಯ ವರ್ಷದ ವಿದ್ಯಾರ್ಥಿ

ಪತ್ರವ್ಯವಹಾರ.

ಮಾ|| ರಾ|| ರಾ|| ಕನ್ನಡ ಶಾಲಾಪತ್ರಿಕದ ಎಡಿಟರವರ ಚರಣಸನ್ನಿಧಿಗೆ:- ವಿನಂತಿ ವಿಶೇಷ. ಮುಂದೆ ಕೊಟ್ಟ "ಸಂಖ್ಯಾವಿಭಾಗಕೌತುಕ"ವನ್ನು ತಮ್ಮ ಅಂದವಾದ ಶಾಲಾಪತ್ರಿಕದಲ್ಲಿ ದಯಮಾಡಿ ಪ್ರಕಟಿಸೋಣವಾಗಬೇಕು. ಅದೇ ಮಾಸಿಕ ಪತ್ರದ್ವಾರಾ ಯಾರಾದರೂ ಅದಕ್ಕೊಂದು ರೀತಿಯನ್ನು ಕಲ್ಪಿಸಿ ಬರುವ ತಿಂಗಳೊಳಗಾಗಿ ತಿಳಿಸುವರೆಂದು ಪೂರ್ಣ ನಂಬಿದ್ದೇನೆ. ಯಾರೂ ತಿಳಿಸದ ಪಕ್ಷದಲ್ಲಿ ಪ್ರಸ್ತುವಿನಿಂದಲೇ ತಿಳಿಸಲ್ಪಡುವದು:—

೧೦೫	೫೦೦	೫೦೦	೫೦೦	೫೦೦	೦೦೫
೫೦೦	೫೩	೫೬	೬೨	೩೨೯	೫೦೦
೫೦೦	೩೩೨	೫೯	೫೭	೫೨	೫೦೦
೫೦೦	೫೫	೫೪	೩೩೦	೬೧	೫೦೦
೫೦೦	೬೦	೩೩೧	೫೧	೫೮	೫೦೦
೦೦೫	೫೦೦	೫೦೦	೫೦೦	೫೦೦	೧೦೫

ಮೇಲೆ ತೋರಿಸಿದ ಹದಿನಾರು ಕೋಷ್ಟಕಗಳುಳ್ಳ ಚೌಕಸಿನಲ್ಲಿ ೫೦೦ ಈ ಸಂಖ್ಯೆಯನ್ನು ವಿಭಾಗಿಸಿದೆ. ಇದರಲ್ಲಿ, ಬಂದ ಅಂಕಿಗಳು ಬಂದಿರುವದಿಲ್ಲ. ಹ್ಯಾಗೆ ಎಣಿಸಿದರೂ (೫೦೦) ಆಗುತ್ತದೆ. ಈ ೫೦೦ ಕ್ಕೆ "ಅಭೀಷ್ಟ" ಸಂಖ್ಯೆ ಎಂದು ಕಲ್ಪಿಸಿರುತ್ತೇನೆ. ಯಾರಾದರೂ ರೀತಿಯನ್ನು ತಿಳಿಸಬೇಕಾದರೆ ಬೇಕಾದಂಥ ಅಭೀಷ್ಟ ಸಂಖ್ಯೆಯು ತಮ್ಮಿಂದ ಹೇಳಲ್ಪಡುವ ರೀತಿಯಿಂದ ವಿಭಾಗಿಸಲಿಕ್ಕೆ ಬರಬೇಕೆಂಬದನ್ನು ಸಂಪೂರ್ಣ ಸ್ಮರಣದಲ್ಲಿಡಬೇಕು.

ತಾರೀಖು ೨೩-–-೧೯೧೫ } ನಾರಾಯಣಾಚಾರ್ಯ ತಮಣಾಚಾರ್ಯ ದಂಡಾಪೂರ
ಅ|| ಮಾ|| ಕನ್ನಡ ೧ನೇ ನಂ|| ಶಾಲಾ ನರಗುಂದ.

ಆರ್ಯರ ಉದಾರ ವಿಚಾರ.

ಮುನ್ನು ಬರೆದಿಟ್ಟುದೆಲ್ಲ ಹೊನ್ನೆಂದಾಗಲಿ ಹೊಸದಾಗಿ ಬರೆದುದೆಲ್ಲ ಕಸವೆಂದಾಗಲಿ ನನ್ನ ಭಾವನೆಯಿಲ್ಲ. ಗುಣಪೂರ್ಣ ವಚನಗಳು ಆವ ಕಾಲದವೇ ಆಗಲಿ ಗ್ರಾಹ್ಯವಾದವುಗಳೇ. ಈ ಕೆಳಗಿನ ಎರಡು ಪದ್ಯಗಳಲ್ಲಿ ಆರ್ಯ ಕವಿಗಳ ಪರಮಾವಧಿಯ ವಿಚಾರೌದಾರ್ಯವು ವಾಚಕ ಮಹಾಶಯರಿಗೆ ತೋರದಿರದು:—

मान्निदया यदिजनः परितोषमेति । नन्वप्रयत्नसुलभोऽयमनुग्रहो मे ॥ श्रेयोर्थिनोऽपि पुरुषाः परतुष्टिहेतोर्दुःखार्जितान्यपि धनानि परित्यजंति ॥१॥

"ಪರೋಪಕಾರವೇ ಪುಣ್ಯವೆಂದು ಗಣಿಸುವದು ಸರ್ವಮಾನ್ಯವಾದ ಮಾತು. ಇದನ್ನನುಸರಿಸಿ ಕಲ್ಯಾಣಕಾಂಕ್ಷಿಗಳಾದ ಜನರು, ಕಷ್ಟದಿಂದ ಗಳಿಸಿಟ್ಟ ಬಹಿಃಪ್ರಾಣವೆನಿಸುವ ಧನವನ್ನು ಕೂಡ ಅನ್ಯರ ಸಂತೋಷಾರ್ಥವಾಗಿ ಪರಿತ್ಯಾಗ ಮಾಡುವರು. ಇಂಥ ಸ್ವಾರ್ಥತ್ಯಾಗದಿಂದ ಜನರನ್ನು ಸಂತೋಷಪಡಿಸುವವರು ಪಡಿಸುತ್ತಾರೆ. ಏನೂ ಶ್ರಮವಾಗದೆ ನಮ್ಮಿಂದ ಜನರಿಗೆ ಸಂತೋಷವಾಗುವಂತಿದ್ದರೆ ಯಾಕೆ ಯಾರು ಒಲ್ಲೆಂದಾರು? ಕೆಲವರಿಗೆ ನಮ್ಮನ್ನು ನಿಂದಿಸುವದರಿಂದ ಸಂತೋಷವಾಗುತ್ತಿರುತ್ತದೆ. ಅದನ್ನು ತಿಳಿದು ನಾವು ಸಮಾಧಾನದಿಂದಿರುವದು ಲೇಸು ಏಕೆಂದರೆ ಅವರು ನಮ್ಮ ಹತ್ತರ ಏನನ್ನೂ ಬೇಡದೆ ಕಾಡದೆ ಒಂದೆರಡು ನುಡಿಗಳನ್ನಾಡಿ ಸಂತೋಷಬಡುತ್ತಾರೆ. ಇದೊಂದು ಪರಿಯಿಂದ ಅವರು ನಮ್ಮನ್ನು ಅನುಗ್ರಹಿಸುವರೆಂದೇ ಭಾವಿಸುವಾ."

शय्या शाद्वलमासनं शुचि शिला सद्मद्रुमाणामधः ।
शीतान्निर्झरवारिपानमशनं कन्दाः सहायामृगाः ॥
इत्यप्रार्थितलभ्य सर्वं विभवे दोषोऽयमेकोवने ।
दुष्प्रापार्थिनियत्परार्थ घटनावंध्यैर्वृथास्थीयते ॥२॥

" ಉತ್ತಮವಾದ ಮನೆಮಾರು ಆಹಾರ ವಿಹಾರಾದಿಗಳನ್ನು ಬಿಟ್ಟು ವನದಲ್ಲಿರುವದು ಕಷ್ಟವೆಂದು ಕೆಲ ಸಾಧುಗಳೂ ವನವಾಸವನ್ನು ಬಿಟ್ಟಿರುವರೋ? ಎಂಬ ಪ್ರಶ್ನೆಗೆ ಉತ್ತರರೂಪವಾಗಿ ಹೇಳಿದ ಪದ್ಯಾಭಿಪ್ರಾಯವು. ವನದಲ್ಲೇನು ಕೊರತೆ? ಹಚ್ಚಗೆ ಹಸಿರಾದ ಸಮನೆಲವೇ ಹಾಸುಗೆ, ನಿರ್ಮಲವಾದ ಹರಸುಗಲ್ಲೇ ಆಸನವು, ಮರದ ಬುಡವೇ ಮನೆ, ತಂಪಾದ ಝರಿಯ ನೀರೇ ಪಾನಕ, ಕಂದ ಮೂಲಗಳೇ ಅನ್ನ ಮೃಗಗಳೇ ಸಹಕಾರಿ ಮಿತ್ರರು, ಹೀಗೆ ಶ್ರಮವಿಲ್ಲದೆ ಪಡೆಯಬಹುದಾದ ಸರ್ವ ಸೌಖ್ಯವೂ ವನದಲ್ಲಿದೆ. ಆದರೆ ಒಂದು ಮಾತ್ರ ದೋಷವು ಕಾಣುತ್ತದೆ. ಅದೇನೆಂದರೆ, ಅಲ್ಲಿ ಬೇಡುವವರು ಯಾರೂ ಬೆಟ್ಟಿಯಾಗುವದಿಲ್ಲ, ಪರೋಪಕಾರವು ಘಟಿಸದೆ ವನವಾಸಿಯಾದವನು ನಿತ್ಯವೂ ನಿರರ್ಥಕವಾಗಿ ಕಾಲಹರಣ ಮಾಡಬೇಕಾಗುತ್ತದೆ!

ಕಾರ್ತಿಕ ಶು|| ೧ }
ಶ|| ೧೮೩೭

ನರಸಿಂಹಾಚಾರ್ಯ ಪುಣೇಕರ
ಶ|| ಶಿ|| ಟ್ರೆ|| ಹಾಯಸ್ಕೂಲ ಧಾರವಾಡ.

The

Dharwar District Sanitary Association

QUARTERLY.

Vol. III] SEPT 1915. [No. 1.

ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನ್ನದ

ತ್ರೈಮಾಸಿಕವು.

ಸಂಪುಟ ೩. } ಸಪ್ಟೆಂಬರ ೧೯೧೫. { ಸಂಚಿಕೆ ೧.

ವಿಷಯಾನುಕ್ರಮಣಿಕೆ.

೧. ಧಾರವಾಡ ಡಿಸ್ಟ್ರಿಕ್ಟಸ್ಯಾನಿಟರಿ ಅಸೋಸಿಯೇಶನ್ನದ
೩ನೇವರ್ಷದ ರಿಪೋರ್ಟು ೧-೧೬
೨. ಅಧ್ಯಕ್ಷರ ಭಾಷಣವು. ೧೭-೧೯
೩. ಪರಿಶಿಷ್ಟ. ೨೦-೪೨

Printed by **K. H. Mudvedkar**, at the K.P. Works, Dharwar
and published by Mr. **G. R. Balekundri**, Hon. Secretary,
DISTRICT SANITARY ASSOCIATION, DHAR

1915.

ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರೀ ಅಸೋಸಿಯೇಶನ್.

ಅಧ್ಯಕ್ಷರು:—ಮೆ|| ಏ. ಈ. ಎಲ್. ಇಮ್ಯಾನ್ಯುಅಲ್ ಸಾ|| ಬಾ||
ಕಲೆಕ್ಟರ ಧಾರವಾಡ (ಎಕ್ಸ್ ಆಫೀಸಿಯೊ)

ವ್ಯವಸ್ಥಾಪಕ ಸಭೆಯು.

ಚೇರಮನ್ನರು.

೧ ಲೆ. ಕ. ಜಿ. ಈ. ಫೊರ್ಸ್ ಆಯ್. ಎಮ್. ಎಸ್., ಸಿವ್ಹಿಲ ಸರ್ಜನ್, ಧಾರವಾಡ, (ಎಕ್ಸ್ ಆಫೀಸಿಯೊ)

ಮೆಂಬರರು.

೨ ನಾ. ರಾ. ಬಿ. ಶ್ರೀನಿವಾಸ ಕೊನೇರ ರೊದ್ದ, ಧಾರವಾಡ.
೩ ಮಿ. ವ್ಹಿ. ಬಿ. ಜೋಶೀ, ಧಾರವಾಡ, ಖಜೀನದಾರರು
೪ ಮಿ. ಜಿ. ಆರ್. ಬಾಳೇಕುಂದ್ರಿ, ಧಾರವಾಡ, ಆನರರೀ ಸೆಕ್ರೆಟರಿಗಳು
೫ ಮಿ. ಆರ್. ಬಿ. ಕಿತ್ತೂರ, ಧಾರವಾಡ, ಆನರರೀ ಸೆಕ್ರೆಟರಿಗಳು (ಎಕ್ಸ ಆಫೀಸಿಯೊ
೬ ಮಿ. ಎಸ್. ಎಸ್. ಕಾಮುಲಾಪೂರ, ಧಾರವಾಡ, ಆನ್. ಆಡಿಟರರು
೭ ಮಿ. ಬಿ. ಜೆ. ಮೋಹಿತೆ, ಧಾರವಾಡ, ಆನರರೀ ಆಡಿಟರರು
೮ ಡಾ. ಆರ್. ಎಚ್. ಶಿರಹಟ್ಟಿ, ಧಾರವಾಡ
೯ ಡಾ. ಎ. ಎಸ್. ಶಿರೂರ ,,
೧೦ ಮಿ. ಎಮ್. ಎಸ್. ಕರಾಕರ ,,
೧೧ ಮಿ. ಜಿ. ಎಚ್. ಹೊನ್ನಾಪುರಮಠ ,,
೧೨ ಮಿ. ಕೆ. ಎಚ್. ಮುದವೇಡಕರ ,,
೧೩ ರಾ. ಸಾ. ಎಸ್. ಎಸ್. ಕುಲಕರ್ಣಿ, ಡಾಕ್ತರ, ಹುಬ್ಬಳ್ಳಿ.
೧೪ ಡಾ. ಎಸ್. ಪಿ. ಕುಂಭಕೋಣಮ್, ಹುಬ್ಬಳ್ಳಿ
೧೫ ಡಾ. ವ್ಹಿ. ಎಸ್. ಉಸುಚಗ್ಗಿ, ಗದಗ
೧೬ ಡಾ. ಎಮ್. ಎಸ್. ಮುದ್ಲಿಯಾರ ಧಾರವಾಡ (ಎಕ್ಸ ಆಫೀಸಿಯೊ)
೧೭ ಮಿ. ಆರ್. ಕೆ. ಪರ್ವತೀಕರ ,, ,,
೧೮ ಮಿ. ಆರ್. ಎಸ್. ಕುಲಕರ್ಣಿ ,, ,,
೧೯ ಮಿ. ವ್ಹಿ. ಪಿ. ವಾಗಳೆ, ಹುಬ್ಬಳ್ಳಿ ,,

[ಕವರಿನ ಮೂರನೇ ಪುಟದಮೇಲೆ ಮುಂದೆಸಾಗಿದ್ದು.]

ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನ್ನದ

ತ್ರೈಮಾಸಿಕವು.

Dharwar District Sanitary Association

QUARTERLY.

ಸಂಪುಟ. ೩. | ಸಪ್ಟಂಬರ ೧೯೧೫. | ಸಂಚಿಕೆ ೧.

ಧಾರವಾಡ ಡಿಸ್ಟ್ರಿಕ್ಟಸ್ಯಾನಿಟರಿ ಅಸೋಸಿಯೇಶನ್ನದ

೩ನೇವರ್ಷದ ರಿಪೋರ್ಟು.

ಉಪೋದ್ಘಾತ.

ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನದಿಂದ ೩ನೇ ವರ್ಷದಲ್ಲಿ ಅಂದರೆ ಸನ್ ೧೯೧೫ನೇ ಇಸ್ವಿಯ ಜುಲೈ ೩೧ನೇ ತಾರೀಖಿಗೆ ಮುಗಿಯುವ ೧೩ ತಿಂಗಳುಗಳಲ್ಲಿ ಆದ ಕೆಲಸದ ರಿಪೋರ್ಟನ್ನು ತಮಗೆ ಸಮರ್ಪಿಸಲು ನನಗೆ ಪರಮಾನಂದವಾಗುತ್ತದೆ. ಅಸೋಸಿಯೇಶನದ ನಿಯಮಗಳ ೮ನೇ ನಿಯಮದ ಪ್ರಕಾರ ಜೂನ ೩೦ನೇ ತಾರೀಖಿಗೆ ವರ್ಷವು ಮುಗಿಯಬೇಕಾಗಿತ್ತು; ಆದರೆ ಆ ಕಾಲವು ತುಂಬಾ ಅನಾನುಕೂಲವಾದದ್ದಾಗಿ ಕಂಡು ಬಂದದರಿಂದ ೧೯೧೫ನೇ ಇಸ್ವಿಯ ಜೂನ ತಿಂಗಳ ೧ನೇ ತಾರೀಖಿನ ದಿವಸ ಕೂಡಿದ ವ್ಯವಸ್ಥಾಪಕ ಸಭೆಯವರು ತಮ್ಮ ೪ನೇ ಠರಾವಿನಲ್ಲಿ ಅಸೋಸಿಯೇಶನದ ವರ್ಷಾರಂಭವು ಅಗಸ್ಟ ೧ನೇ ತಾರೀಖಿನಿಂದ ಗಣಿಸಲ್ಪಡಬೇಕೆಂದು ಗೊತ್ತುಮಾಡಿದರೆಂಬುದನ್ನು ಇಲ್ಲಿ ಉಲ್ಲೇಖಿಸಬೇಕಾಗಿದೆ. ಆದದರಿಂದ ಈ ರಿಪೋರ್ಟು ೧೯೧೪ನೇ ಇಸ್ವಿಯ ಜುಲೈ ೧ನೇ ತಾರೀಖಿನಿಂದ ೧೯೧೫ನೇ ಇಸ್ವಿಯ ಜುಲೈ ೩೧ನೇ ತಾರೀಖಿನ ವರೆಗಿನ ೧೩ ತಿಂಗಳುಗಳದ್ದಾಗಿದೆ.

ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರೀ ಅಸೋಸಿಯೇಶನ್.

ಅಧ್ಯಕ್ಷರು:—ಮೆ|| ಏ. ಈ. ಎಲ್. ಇಮ್ಯಾನ್ಯುಅಲ್ ಸಾ|| ಬಾ||
ಕಲೆಕ್ಟರ ಧಾರವಾಡ (ಎಕ್ಸ್ ಆಫೀಸಿಯೊ.)

ವ್ಯವಸ್ಥಾಪಕ ಸಭೆಯು.

ಚೇರಮನ್ನರು.

೧ ಲೆ. ಕ. ಜಿ. ಈ. ಫೊರ್ತ್ಸ್ ಆಯ್.ಎಮ್. ಎಸ್., ಸಿವ್ಹಿಲ್ ಸರ್ಜನ್, ಧಾರವಾಡ, (ಎಕ್ಸ್ ಆಫೀಸಿಯೊ)

ಮೆಂಬರರು.

೨ ಸಾ. ರಾ. ಬ. ಶ್ರೀನಿವಾಸ ಕೊನೇರ ರೊದ್ದ, ಧಾರವಾಡ.
೩ ಮಿ. ವ್ಹಿ. ಬಿ. ಜೋಶೀ, ಧಾರವಾಡ, ಖಜೀನದಾರರು
೪ ಮಿ. ಜಿ. ಆರ್. ಬಾಳೇಕುಂದ್ರಿ, ಧಾರವಾಡ, ಆನರರೀ ಸೆಕ್ರೆಟರಿಗಳು
೫ ಮಿ. ಆರ್. ಬಿ. ಕಿತ್ತೂರ, ಧಾರವಾಡ, ಆನರರೀ ಸೆಕ್ರೆಟರಿಗಳು (ಎಕ್ಸ ಆಫೀಸಿಯೊ)
೬ ಮಿ. ಎಸ್. ಎಸ್. ಕಾಮಲಾಪೂರ, ಧಾರವಾಡ, ಆನ್. ಆಡಿಟರರು
೭ ಮಿ. ಬಿ. ಜೆ. ಪೋಹಿತೆ, ಧಾರವಾಡ, ಆನರರೀ ಆಡಿಟರರು
೮ ಡಾ. ಆರ್. ಎಚ್. ಶಿರಹಟ್ಟಿ, ಧಾರವಾಡ
೯ ಡಾ. ಎ. ಎಸ್. ಶಿರೂರ ,,
೧೦ ಮಿ. ಎಮ್. ಎಸ್. ಕಠಾಳಾ ,,
೧೧ ಮಿ. ಜಿ. ಎಚ್. ಹೊನ್ನಾಪುರಮಠ ,,
೧೨ ಮಿ. ಕೆ. ಎಚ್. ಮುದವೇಡಕರ ,,
೧೩ ರಾ. ಸಾ ಎಸ್. ಎಸ್. ಕುಲಕರ್ಣಿ, ಡಾಕ್ತರ, ಹುಬ್ಬಳ್ಳಿ.
೧೪ ಡಾ. ಎಸ್. ಪಿ. ಕುಂಭಕೋಣಮ್, ಹುಬ್ಬಳ್ಳಿ
೧೫ ಡಾ. ವ್ಹಿ. ಎಸ್. ಉಸುಬಗ್ಗಿ ಗದಗ
೧೬ ಡಾ. ಎಮ್. ಎಸ್. ಮುದ್ಲಿಯಾರ ಧಾರವಾಡ (ಎಕ್ಸ ಆಫೀಸಿಯೊ)
೧೭ ಮಿ. ಆರ್. ಕೆ. ಪರ್ವತೀಕರ ,, ,,
೧೮ ಮಿ. ಆರ್. ಎಸ್. ಕುಲಕರ್ಣಿ ,, ,,
೧೯ ಮಿ. ವ್ಹಿ. ಪಿ. ವಾಗಳೆ, ಹುಬ್ಬಳ್ಳಿ ,,

[ಕವರಿನ ಮೂರನೇ ಪುಟವನ್ನು ನೋಡಿ ಮುಂದೆಸಾಗಿದ್ದು.]

ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನ್ನದ

ತ್ರೈಮಾಸಿಕವು.

Dharwar District Sanitary Association

QUARTERLY.

ಸಂಪುಟ. ೩. | ಸಪ್ಟಂಬರ ೧೯೧೫. | ಸಂಚಿಕೆ ೧.

ಧಾರವಾಡ ಡಿಸ್ಟ್ರಿಕ್ಟಸ್ಯಾನಿಟರಿ ಅಸೋಸಿಯೇಶನ್ನದ

೩ನೇ ವರ್ಷದ ರಿಪೋರ್ಟು.

ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನದಿಂದ ೩ನೇ ವರ್ಷದಲ್ಲಿ ಅಂದರೆ ಸನ್ ೧೯೧೫ನೇ ಇಸ್ವಿಯ ಜುಲೈ ೩೧ನೇ ತಾರೀಖಿಗೆ ಮುಗಿಯುವ ೧೩ ತಿಂಗಳುಗಳಲ್ಲಿ ಆದ ಕೆಲಸದ ರಿಪೋರ್ಟನ್ನು ತಮಗೆ ಸಮರ್ಪಿಸಲು ನನಗೆ ಪರಮಾನಂದವಾಗುತ್ತದೆ.

ಉಪೋದ್ಘಾತ.

ಅಸೋಸಿಯೇಶನದ ನಿಯಮಗಳ ೮ನೇ ನಿಯಮದ ಪ್ರಕಾರ ಜೂನ ೩೦ನೇ ತಾರೀಖಿಗೆ ವರ್ಷವು ಮುಗಿಯಬೇಕಾಗಿತ್ತು; ಆದರೆ ಆ ಕಾಲವು ತುಂಬಾ ಅನಾನುಕೂಲವಾದದ್ದಾಗಿ ಕಂಡು ಬಂದದರಿಂದ ೧೯೧೫ನೇ ಇಸ್ವಿಯ ಜೂನ ತಿಂಗಳ ೧ನೇ ತಾರೀಖಿನ ದಿವಸ ಕೂಡಿದ ವ್ಯವಸ್ಥಾಪಕ ಸಭೆಯವರು ತಮ್ಮ ೪ನೇ ಠರಾವಿನಲ್ಲಿ ಅಸೋಸಿಯೇಶನದ ವರ್ಷಾರಂಭವು ಅಗಸ್ಟ ೧ನೇ ತಾರೀಖಿನಿಂದ ಗಣಿಸಲ್ಪಡಬೇಕೆಂದು ಗೊತ್ತುಮಾಡಿದರೆಂಬದನ್ನು ಇಲ್ಲಿ ಉಲ್ಲೇಖಿಸಬೇಕಾಗಿದೆ. ಆದದರಿಂದ ಈ ರಿಪೋರ್ಟು ೧೯೧೪ನೇ ಇಸ್ವಿಯ ಜುಲೈ ೧ನೇ ತಾರೀಖಿನಿಂದ ೧೯೧೫ನೇ ಇಸ್ವಿಯ ಜುಲೈ ೩೧ನೇ ತಾರೀಖಿನ ವರೆಗಿನ ೧೩ ತಿಂಗಳುಗಳದ್ದಾಗಿದೆ.

ಉದ್ದೇಶಗಳು.

೨. ಅಸೋಸಿಯೇಶನದ ಉದ್ದೇಶಗಳು ಈ ರಿಪೋರ್ಟಿಗೆ ಜೋಡಿಸಿರುವ "ಈ" ಪರಿಶಿಷ್ಟದಲ್ಲಿ ಮುದ್ರಿತವಾದ ನಿಯಮಗಳಲ್ಲಿ ನಿರ್ದಿಷ್ಟವಾದಂತೆ ಇರುತ್ತವೆ. ಅಸೋಸಿಯೇಶನವು ಅಸ್ತಿತ್ವದಲ್ಲಿದ್ದ ಈ ಮೂರು ವರ್ಷಗಳ ಅನುಭವದ ಮೇಲಿಂದಲೂ ಸಾರ್ವಜನಿಕದವರಿಂದ ಬಂದ ಸೂಚನೆಗಳ ವಿಚಾರ ಮಾಡಿಯೂ ನಿಯಮಗಳಲ್ಲಿ ಹೆಚ್ಚು ಕಡಿಮೆ ಮಾಡಲ್ಪಟ್ಟಿದೆ.

ಸ್ಥಾಪನೆ.

೩. ಮುಂಬಯಿ ಸ್ಯಾನಿಟರೀ ಅಸೋಸಿಯೇಶನದ ಪದ್ಧತಿಯನ್ನನುಸರಿಸಿ ಬೇರೆ ಕಡಿಗೆ ಸ್ಥಾಪಿತವಾದ ಅಸೋಸಿಯೇಶನಗಳಲ್ಲಿ ಇದೇ ಮೊದಲನೆಯದಾಗಿದೆ. ಇದು ನಮ್ಮೆಲ್ಲರ ಪೂಜ್ಯಭಾವ ಯುಕ್ತವಾದ ಹಾಗು ಕೃತಜ್ಞತಾಪೂರ್ವಕವಾದ ಸ್ಮರಣೆಗೆ ಇಂದಿಗೂ ಪಾತ್ರರಾಗಿರುವ ಈ ಜಿಲ್ಹೆಯ ಕಲೆಕ್ಟರರಾಗಿದ್ದ ಮೆ|| ಇ. ಮೆಕಾನಕೀ ಸಾಹೇಬ ಬಾಹಾದ್ದೂರರವರಿಂದ ಆಗಿನ ಕಾಲಕ್ಕೆ ಧಾರವಾಡದ ಸಿವ್ಹಿಲ್ ಸರ್ಜನ್‌ರಾಗಿದ್ದ ಮೇಜರ ಎಚ್. ಬೆನೆಟ್ ಸಾಹೇಬ ಬಾಹಾದ್ದೂರವರ ಸೂಚನೆಯ ಮೇರೆಗೆ ಸನ್ ೧೯೧೨ನೇ ಇಸ್ವಿಯ ಜುಲೈ ೧ನೇ ತಾರೀಖಿನ ದಿವಸ ಸ್ಥಾಪಿತವಾಯಿತು. ಸನ್ ೧೯೧೨ನೇ ಇಸ್ವಿಯ ಎಪ್ರಿಲ್ ತಿಂಗಳಲ್ಲಿ ಮೆ|| ಮೆಕಾನಕೀ ಸಾಹೇಬರವರು ಸರಕಾರಕ್ಕೆ ಕಳಿಸಿದ ಒಂದು ವಿಸ್ತೃತವಾದ ರಿಪೋರ್ಟಿನಲ್ಲಿ ಈ ಅಸೋಸಿಯೇಶನ ವಿಷಯಕವಾದ ಸಾಮಾನ್ಯ ಸಂಗತಿಗಳ ದಿಗ್ದರ್ಶನ ಮಾಡಿರುತ್ತಾರೆ. ಈ ರಿಪೋರ್ಟು ಸರಕಾರ ಠರಾವ ನಂಬರ ೫೩, ಜನರಲ್ ಡಿಪಾರ್ಟಮೆಂಟ್, ತಾರೀಖು ೬ನೇ ಜನವರಿ ೧೯೧೩ನೇದರೊಂದಿಗೆ ಮುದ್ರಿತವಾಗಿದೆ. ಇಂಥ ಅಸೋಸಿಯೇಶನವನ್ನು ಸ್ಥಾಪಿಸುವ ವಿಚಾರವು ೧೯೧೨ನೇ ಇಸ್ವಿಯ ಜುಲೈ ೨೫ನೇ ತಾರೀಖಿನ ದಿವಸ ಎಲ್ಲ ಜಾತಿಗಳ ಹಾಗು ಉದ್ಯೋಗಗಳ ಪ್ರಾತಿನಿಧಿಕ ಸ್ವರೂಪವನ್ನು ಹೊಂದಿದ್ದಾಗಿ ಬಹುಜನಸಮೂಹದಿಂದ ಕೂಡಿದ ಸಾರ್ವಜನಿಕ ಸಭೆಯಲ್ಲಿ ಸ್ಪಷ್ಟವಾಗಿ ವಿವರಿಸಲ್ಪಟ್ಟಿತು. ಇದು ಕೂಡಲೆ ಗ್ರಾಹ್ಯವಾಗಿ ಸರಕಾರೀ ಅಧಿಕಾರಿಗಳು, ಅಧಿಕಾರಿಗಳಲ್ಲದವರು, ವೈದ್ಯಕ, ಕಾಯದೆ, ವಿದ್ಯಾವಿಷಯಕ ಸುಶಿಕ್ಷಣವನ್ನು ಹೊಂದಿದವರು ನಿಯಂತ್ರಣಕಾರ್ಯದ ಯೋಗ್ಯತೆಯೂ ಅನುಭವವೂ ಉಳ್ಳವರು ಆಗಿದ ೧೫ ಜನ ಮೆಂಬರದೊಂದು ಕಮೀಟಿಯು ಅಸೋಸಿ

ಯೇಶನದ ಕಾರ್ಯವನ್ನು ಸಾಗಿಸುವದಕ್ಕೆ ಏರ್ಪಡಿಸಲ್ಪಟ್ಟಿತು. ಸರಕಾರದವರೂ ತಮ್ಮ ೧೨ನೇ ಅಗಸ್ಟ ೧೯೧೨ನೇ ಇಸ್ವಿಯ ೫೪೧೧ನೇ ನಂಬರಿನ ಠರಾವಿನಲ್ಲಿ ಈ ಅಸೋಸಿಯೇಶನದಲ್ಲಿ ಸರಕಾರೀ ಅಧಿಕಾರಿಗಳು ಸೇರಿಕೊಂಡು ಕೆಲಸಮಾಡುವದಕ್ಕೆ ಏನೂ ಪ್ರತ್ಯವಾಯವಿಲ್ಲವೆಂಬದನ್ನು ದಯಮಾಡಿ ಪ್ರಸಿದ್ಧ ಪಡಿಸಿದರು. ಈ ಅಸೋಸಿಯೇಶನವು ಸನ್ ೧೮೬೦ನೇ ಇಸ್ವಿಯ ೨೧ನೇ ಇಂಡಿಯಾ ಆಕ್ಟಿನನ್ವಯ ರಜಿಸ್ಟರ ಮಾಡಲ್ಪಟ್ಟಿತು.

೪. ಜಿಲ್ಹೆಯ ಕಲೆಕ್ಟರರು ಅಸೋಸಿಯೇಶನದ ಎಕ್ಸ ಅಫೀಸಿಯೋ ಪ್ರೆಸಿಡೆಂಟರಾಗಿರುತ್ತಾರೆ ಮತ್ತು ಸಿವಿಲ್ ಸರ್ಜನ್‌ರು ವ್ಯವಸ್ಥಾಪಕ ಸಭೆಯ ಎಕ್ಸ ಅಫೀಸಿಯೋ ಚೇರಮನ್‌ರಾಗಿರುತ್ತಾರೆ. ವ್ಯವಸ್ಥಾಪಕ ಸಭೆ

ಕಾರ್ಯನಿರ್ವಾಹ.

ಯವರು ಮಾಡಿದ ನಿಯಮಗಳಿಗೂ ನಿಬಂಧನೆಗಳಿಗೂ ಅನುಸಾರವಾಗಿ ಅಸೋಸಿಯೇಶನದ ಕೆಲಸವು ಸಾಗುತ್ತದೆ; ಮತ್ತು ಬಹುಮತಾನುಸಾರವಾಗಿ ವಿಷಯಗಳ ನಿರ್ಣಯವಾಗುತ್ತದೆ. ಆಡಿಟರರಾಗಿ ನೇಮಿಸಲ್ಪಟ್ಟ ಇಬ್ಬರು ಮೆಂಬರರು ಮೂರು ತಿಂಗಳಿಗೊಂದು ಸಾರೆ ಲೆಖ್ಖಪತ್ರಗಳನ್ನು ಪರಿಶೋಧಿಸಿ ಅವು ಸರಿಯಾಗಿದ್ದ ಬಗ್ಗೆ ನಿರ್ದೇಶಮಾಡುತ್ತಾರೆ. ಅಸೋಸಿಯೇಶನದ ಖಜೀನೆದಾರರ ಹೆಸರಿನಿಂದ ಪೋಷ್ಟ ಅಫೀಸ ಸೇವಿಂಗ್ಸ ಬ್ಯಾಂಕಿನಲ್ಲಿ ಒಂದು ಖಾತೆಯನ್ನು ಪ್ರಾರಂಭಿಸಿದ್ದು ಹೆಚ್ಚಿನ ಹಣವೆಲ್ಲ ಅಲ್ಲಿ ಶೇಖರಿಸಲ್ಪಡುತ್ತದೆ. ಪ್ಯಾಂಫ್ಲೆಟ್ ಕಮೀಟಿ ಮತ್ತು ಟ್ರಾನ್ಸಲೇಶನ್ ಕಮೀಟಿಯೆಂಬ ಎರಡು ಉಪಸಭೆಗಳು ವ್ಯವಸ್ಥಾಪಕ ಸಭೆಯ ಮೆಂಬರರೊಳಗಿಂದ ನೇಮಿಸಲ್ಪಟ್ಟಿರುತ್ತವೆ. ಅಸೋಸಿಯೇಶನದಿಂದ ಪ್ರಸಿದ್ಧವಾಗತಕ್ಕ ಪತ್ರಿಕೆಗಳನ್ನು ಪರೀಕ್ಷಿಸಿ ಅವುಗಳ ಯುಕ್ತಾಯುಕ್ತತೆಯನ್ನು ಗೊತ್ತುಪಡಿಸುವದು ಮೊದಲನೇದರ ಹಾಗು ಪ್ರಕಟನೆಗೆ ಯೋಗ್ಯವಾದವುಗಳೆಂದು ಗೊತ್ತಾದ ಪತ್ರಿಕೆಗಳನ್ನು ಭಾಷಾಂತರಿಸುವದು ಎರಡನೆಯದರ ಕರ್ತವ್ಯವೆಂದು ವಿಧಾಯಕವಾಗಿದೆ. ಸನ್ಮಾನಿತ ಕಾರ್ಯದರ್ಶಿಗಳಿಗೆ ಕಾರ್ಯನಿರ್ವಾಹದಲ್ಲಿ ಸಹಾಯಕರಾಗಿ ಒಬ್ಬ ಕಾರಕೂನನೂ ಒಬ ಸಿಪಾಯಿಯೂ ನೇಮಿಸಲ್ಪಟ್ಟಿದ್ದಾರೆ.

೫. ಈ ಜಿಲ್ಹೆಯ ರೂಢಭಾಷೆಯಾದ ಕನ್ನಡದಲ್ಲಿ ಒಂದು ತ್ರೈ

ಉದ್ದೇಶಗಳು.

೨. ಅಸೋೀಸಿಯೇಶನದ ಉದ್ದೇಶಗಳು ಈ ರಿಪೋರ್ಟಿಗೆ ಜೋಡಿಸಿರುವ "ಈ" ಪರಿಶಿಷ್ಟದಲ್ಲಿ ಮುದ್ರಿತವಾದ ನಿಯಮಗಳಲ್ಲಿ ನಿರ್ದಿಷ್ಟವಾದಂತೆ ಇರುತ್ತವೆ. ಅಸೋೀಸಿಯೇಶನವು ಅಸ್ತಿತ್ವದಲ್ಲಿದ್ದ ಈ ಮೂರು ವರ್ಷಗಳ ಅನುಭವದ ಮೇಲಿಂದಲೂ ಸಾರ್ವಜನಿಕದವರಿಂದ ಬಂದ ಸೂಚನೆಗಳ ವಿಚಾರ ಮಾಡಿಯೂ ನಿಯಮಗಳಲ್ಲಿ ಹೆಚ್ಚು ಕಡಿಮೆ ಮಾಡಲ್ಪಟ್ಟಿದೆ.

ಸ್ಥಾಪನೆ.

೩. ಮುಂಬಯಿ ಸ್ಯಾನಿಟರೀ ಅಸೋೀಸಿಯೇಶನದ ಪದ್ಧತಿಯನ್ನನುಸರಿಸಿ ಬೇರೆ ಕಡಿಗೆ ಸ್ಥಾಪಿತವಾದ ಅಸೋೀಸಿಯೇಶನಗಳಲ್ಲಿ ಇದೇ ಮೊದಲನೆಯದಾಗಿದೆ. ಇದು ನಮ್ಮೆಲ್ಲರ ಪೂಜ್ಯಭಾವ ಯುಕ್ತವಾದ ಹಾಗು ಕೃತಜ್ಞತಾಪೂರ್ವಕವಾದ ಸ್ಮರಣೆಗೆ ಇಂದಿಗೂ ಪಾತ್ರರಾಗಿರುವ ಈ ಜಿಲ್ಹೆಯ ಕಲೆಕ್ಟರರಾಗಿದ್ದ ಮೆ|| ಇ. ಮೆಕಾನಕೀ ಸಾಹೇಬ ಬಾಹಾದ್ದೂರರವರಿಂದ ಆಗಿನ ಕಾಲಕ್ಕೆ ಧಾರವಾಡದ ಸಿವ್ಹಿಲ್ ಸರ್ಜನ್‌ರಾಗಿದ್ದ ಮೇಜರ ಎಚ್. ಬೆನೆಟ್ ಸಾಹೇಬ ಬಾಹಾದ್ದೂರವರ ಸೂಚನೆಯ ಮೇರೆಗೆ ಸನ್ ೧೯೧೨ನೇ ಇಸ್ವಿಯ ಜುಲೈ ೧ನೇ ತಾರೀಖಿನ ದಿವಸ ಸ್ಥಾಪಿತವಾಯಿತು. ಸನ್ ೧೯೧೨ನೇ ಇಸ್ವಿಯ ಎಪ್ರಿಲ್ ತಿಂಗಳಲ್ಲಿ ಮೆ|| ಮೆಕಾನಕೀ ಸಾಹೇಬರವರು ಸರಕಾರಕ್ಕೆ ಕಳಿಸಿದ ಒಂದು ವಿಸ್ತೃತವಾದ ರಿಪೋರ್ಟಿನಲ್ಲಿ ಈ ಅಸೋೀಸಿಯೇಶನ ವಿಷಯಕವಾದ ಸಾಮಾನ್ಯ ಸಂಗತಿಗಳ ದಿಗ್ದರ್ಶನ ಮಾಡಿರುತ್ತಾರೆ. ಈ ರಿಪೋರ್ಟು ಸರಕಾರ ಠರಾವ ನಂಬರ ೭೩, ಜನರಲ್ ಡಿಪಾರ್ಟಮೆಂಟ್, ತಾರೀಖು ೬ನೇ ಜನವರಿ ೧೯೧೩ನೇದರೊಂದಿಗೆ ಮುದ್ರಿತವಾಗಿದೆ. ಇಂಥ ಅಸೋೀಸಿಯೇಶನವನ್ನು ಸ್ಥಾಪಿಸುವ ವಿಚಾರವು ೧೯೧೨ನೇ ಇಸ್ವಿಯ ಜುಲೈ ೨೭ನೇ ತಾರೀಖಿನ ದಿವಸ ಎಲ್ಲ ಜಾತಿಗಳ ಹಾಗು ಉದ್ಯೋಗಗಳ ಪ್ರಾತಿನಿಧಿಕ ಸ್ವರೂಪವನ್ನು ಹೊಂದಿದ್ದಾಗಿ ಬಹುಜನಸಮೂಹದಿಂದ ಕೂಡಿದ ಸಾರ್ವಜನಿಕ ಸಭೆಯಲ್ಲಿ ಸ್ಪಷ್ಟವಾಗಿ ವಿವರಿಸಲ್ಪಟ್ಟಿತು. ಇದು ಕೂಡಲೆ ಗ್ರಾಹ್ಯವಾಗಿ ಸರಕಾರೀ ಅಧಿಕಾರಿಗಳು, ಅಧಿಕಾರಿಗಳಲ್ಲದವರು, ವೈದ್ಯಕ, ಕಾಯದೆ, ವಿದ್ಯಾವಿಷಯಕ ಸುಶಿಕ್ಷಣವನ್ನು ಹೊಂದಿದವರು ನಿಯಂತ್ರಣಕಾರ್ಯದ ಯೋಗ್ಯತೆಯೂ ಅನುಭವವೂ ಉಳ್ಳವರು ಆಗಿದ್ದ ೧೫ ಜನ ಮೆಂಬರರೊಂದು ಕಮಿಟಿಯು ಅಸೋೀಸಿ

ಯೇಶನದ ಕಾರ್ಯವನ್ನು ಸಾಗಿಸುವದಕ್ಕೆ ಏರ್ಪಡಿಸಲ್ಪಟ್ಟಿತು. ಸರಕಾರದವರೂ ತಮ್ಮ ೧೨ನೇ ಅಗಸ್ಟ ೧೯೧೨ನೇ ಇಸ್ವಿಯ ೫೪೧೧ನೇ ನಂಬರಿನ ಠರಾವಿನಲ್ಲಿ ಈ ಅಸೋಸಿಯೇಶನದಲ್ಲಿ ಸರಕಾರೀ ಅಧಿಕಾರಿಗಳು ಸೇರಿಕೊಂಡು ಕೆಲಸಮಾಡುವದಕ್ಕೆ ಏನೂ ಪ್ರತ್ಯವಾಯವಿಲ್ಲವೆಂಬದನ್ನು ದಯಮಾಡಿ ಪ್ರಸಿದ್ಧ ಪಡಿಸಿದರು. ಈ ಅಸೋಸಿಯೇಶನವು ಸನ್ ೧೮೬೦ನೇ ಇಸ್ವಿಯ ೨೧ನೇ ಇಂಡಿಯಾ ಆಕ್ಟನ್ವಯ ರಜಿಸ್ಟರ ಮಾಡಲ್ಪಟ್ಟಿತು.

೪. ಜಿಲ್ಲೆಯ ಕಲೆಕ್ಟರರು ಅಸೋಸಿಯೇಶನದ ಎಕ್ಸ ಆಫೀಸಿಯೋ ಪ್ರೆಸಿಡೆಂಟರಾಗಿರುತ್ತಾರೆ ಮತ್ತು ಸಿವಿಲ್ ಸರ್ಜನ್‌ರು ವ್ಯವಸ್ಥಾಪಕ ಸಭೆಯ ಎಕ್ಸ ಆಫೀಸಿಯೋ ಚೇರಮನ್‌ರಾಗಿರುತ್ತಾರೆ. ವ್ಯವಸ್ಥಾಪಕ ಸಭೆಯವರು ಮಾಡಿದ ನಿಯಮಗಳಿಗೂ ನಿಬಂಧನೆಗಳಿಗೂ ಅನುಸಾರವಾಗಿ ಅಸೋಸಿಯೇಶನದ ಕೆಲಸವು ಸಾಗುತ್ತದೆ; ಮತ್ತು ಬಹುಮತಾನುಸಾರವಾಗಿ ವಿಷಯಗಳ ನಿರ್ಣಯವಾಗುತ್ತದೆ. ಆಡಿಟರರಾಗಿ ನೇಮಿಸಲ್ಪಟ್ಟ ಇಬ್ಬರು ಮೆಂಬರರು ಮೂರು ತಿಂಗಳಿಗೊಂದು ಸಾರೆ ಲೆಖ್ಖಪತ್ರಗಳನ್ನು ಪರಿಶೋಧಿಸಿ ಅವು ಸರಿಯಾಗಿದ್ದ ಬಗ್ಗೆ ನಿರ್ದೇಶಮಾಡುತ್ತಾರೆ. ಅಸೋಸಿಯೇಶನದ ಖಜೀನದಾರರ ಹೆಸರಿನಿಂದ ಪೋಷ್ಟ ಆಫೀಸ ಸೇವ್ಹಿಂಗ್ಸ ಬ್ಯಾಂಕಿನಲ್ಲಿ ಒಂದು ಖಾತೆಯನ್ನು ಪ್ರಾರಂಭಿಸಿದ್ದು ಹೆಚ್ಚಿನ ಹಣವೆಲ್ಲ ಅಲ್ಲಿ ಶೇಖರಿಸಲ್ಪಡುತ್ತದೆ. ಪ್ಯಾಂಫ್ಲೆಟ್ ಕಮೀಟಿ ಮತ್ತು ಟ್ರಾನ್ಸಲೇಶನ್ ಕಮೀಟಿಯೆಂಬ ಎರಡು ಉಪಸಭೆಗಳು ವ್ಯವಸ್ಥಾಪಕ ಸಭೆಯ ಮೆಂಬರರೊಳಗಿಂದ ನೇಮಿಸಲ್ಪಟ್ಟಿರುತ್ತವೆ. ಅಸೋಸಿಯೇಶನದಿಂದ ಪ್ರಸಿದ್ಧವಾಗತಕ್ಕ ಪತ್ರಿಕೆಗಳನ್ನು ಪರೀಕ್ಷಿಸಿ ಅವುಗಳ ಯುಕ್ತಾಯುಕ್ತತೆಯನ್ನು ಗೊತ್ತುಪಡಿಸುವದು ಮೊದಲನೇದರ ಹಾಗು ಪ್ರಕಟನೆಗೆ ಯೋಗ್ಯವಾದವುಗಳೆಂದು ಗೊತ್ತಾದ ಪತ್ರಿಕೆಗಳನ್ನು ಭಾಷಾಂತರಿಸುವದು ಎರಡನೆಯದರ ಕರ್ತವ್ಯವೆಂದು ವಿಧಾಯಕವಾಗಿದೆ. ಸನ್ಮಾನಿತ ಕಾರ್ಯದರ್ಶಿಗಳಿಗೆ ಕಾರ್ಯನಿರ್ವಾಹದಲ್ಲಿ ಸಹಾಯಕರಾಗಿ ಒಬ್ಬ ಕಾರಕೂನನೂ ಒಬ ಸಿಪಾಯಿಯೂ ನೇಮಿಸಲ್ಪಟ್ಟಿದ್ದಾರೆ.

ಕಾರ್ಯನಿರ್ವಾಹ.

೫. ಈ ಜಿಲ್ಲೆಯ ರೂಢಭಾಷೆಯಾದ ಕನ್ನಡದಲ್ಲಿ ಒಂದು ತ್ರೈ

ಮಾಸಿಕ ಪತ್ರಿಕೆಯನ್ನು ಪ್ರಸಿದ್ಧ ಮಾಡುವ ವ್ಯವಸ್ಥೆಯಾಗಿದೆ. ಇದರಲ್ಲಿ ಬೇರೆ ಬೇರೆ ರೋಗಗಳ ಮೇಲೆಯೂ, ಆರೋಗ್ಯ ಶಾಸ್ತ್ರದ ಮೇಲೆಯೂ,

ಜ್ಞಾನಪ್ರಸಾರದ ವ್ಯವಸ್ಥೆ

ಹಳ್ಳಿಗಾಡ ಜನರಿಗೆ ಉಪಯೋಗವಾಗುವಂಥ ಬೇರೆ ವಿಷಯಗಳ ಮೇಲೆಯೂ ವೈದ್ಯವಿದ್ಯಾಪರಿಣತರಿಂದಲೂ ಬೇರೆ ಜನರಿಂದಲೂ ಬರೆಯಲ್ಪಟ್ಟ ಚಿಕ್ಕ ಚಿಕ್ಕ ಲೇಖಗಳು ಪ್ರಕಟಿಸಲ್ಪಡುತ್ತವೆ. ವರ್ಷಕ್ಕೆ ೮ ಆಣೆಯಿಂದ ೫ ರುಪಾಯಿಗಳವರೆಗೆ ವರ್ಗಣಿಯನ್ನು ಕೊಟ್ಟು ಅಸೋಸಿಯೇಶನದ ಮೆಂಬರರಾಗುವ ಪ್ರತಿಯೊಬ್ಬರಿಗೆ ಈ ತ್ರೈಮಾಸಿಕದ ಒಂದು ಪ್ರತಿಯು ಪುಕ್ಕಟೆಯಾಗಿ ಕಳಿಸಲ್ಪಡುತ್ತದೆ. ಜಿಲ್ಹೆಯೊಳಗಿನ ಎಲ್ಲ ಹಳ್ಳಿಯ ಸಾಲೆಗಳಿಗೂ ಇದರ ಪ್ರತಿಗಳು ಪುಕ್ಕಟೆಯಾಗಿ ಕಳಿಸಲ್ಪಡುತ್ತವೆ. ಆ ಶಾಲೆಗಳ ಮಾಸ್ತರರು, ಮೆಹರ್ಬಾನ ಡೆಪ್ಯೂಟೀ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬರವರು ದಯಮಾಡಿ ಅಪ್ಪಣೆ ಕೊಟ್ಟ ಮೇರೆಗೆ, ತಮ್ಮ ಸಾಲೆಯ ಹುಡುಗರಿಗೂ ಮತ್ತು ಸಂಜೆಯ ಮುಂದೆ ಸಾಲೆಯಲ್ಲಿ ಅಥವಾ ಗುಡಿಯಲ್ಲಿ ಅಥವಾ ಚಾವಡಿಯಲ್ಲಿ ಸ್ವಾಭಾವಿಕವಾಗಿ ಕಲೆತು ತಮ್ಮ ವಿರಾಮ ಕಾಲವನ್ನು ಕಳೆಯಬಯಸುವ ಅಶಿಕ್ಷಿತ ಜನರಿಗೂ ಈ ತ್ರೈಮಾಸಿಕದೊಳಗಿನ ಲೇಖಗಳನ್ನು ಓದಿ ತಿಳಿಸಿಹೇಳಬೇಕಾಗುತ್ತದೆ. ಸ್ಥಾನಿಕ ಅಭಿಮಾನಭಾವನೆಯನ್ನು ಜಾಗೃತಪಡಿಸಿ ಅದು ಸ್ಥಿರವಾಗಿ ನಿಲ್ಲುವಂತೆ ಮಾಡಬೇಕೆಂದು ಐದಾರು ಮೈಲುಗಳ ಪರಿಘದಲ್ಲಿರುವ ಹಳ್ಳಿಗಳ ಒಂದು ಗ್ರೂಪಿನಂತೆ ಇಡೀ ಜಿಲ್ಹೆಯು ವಿಭಾಗಿಸಲ್ಪಟ್ಟಿದ್ದು ಪ್ರತಿಯೊಂದು ಗ್ರೂಪಿಗೆ ಒಬ್ಬ ಸನ್ಮಾನಿತ ಲೋಕಲ್ ಸೆಕ್ರೆಟರಿಯು ನೇಮಿಸಲ್ಪಟ್ಟಿದ್ದಾನೆ. ಅವನ ಕರ್ತವ್ಯಗಳು ನಿಬಂಧನೆಗಳಿಂದ ನಿಷ್ಕರ್ಷಿಸಲ್ಪಟ್ಟವೆ. ತಮ್ಮ ಹಳ್ಳಿಯ ಆರೋಗ್ಯ ವಿಷಯಕವಾದ ಕೊರತೆಗಳನ್ನು ತಿಳಿದು ನೋಡಿ ಅವುಗಳ ನಿವಾರಣೆಗೆ ಅವಶ್ಯಕವಾದ ಉಪಾಯಗಳನ್ನು ಕೈಕೊಳ್ಳುವ ಕುರಿತು ಆ ಹಳ್ಳಿಯಲ್ಲಿಯ ೫ ಕ್ಕಿಂತ ಕಡಿಮೆ ಇಲ್ಲದಷ್ಟು ಜನರದೊಂದು ಶಾಖಾ ಕಮಿಟಿಯನ್ನು ಅಲ್ಲಿಯವರು ಮಾಡಿಕೊಂಡು ತಮ್ಮ ಹಳ್ಳಿಯು ಯಾವ ಗ್ರೂಪಿನೊಳಗಿರುವದೋ ಆ ಗ್ರೂಪಿನ ಲೋಕಲ್ ಸೆಕ್ರೆಟರಿಯ ವಿಚಾರದಿಂದ ತಮ್ಮ ಕೆಲಸಗಳನ್ನು ಸಾಗಿಸಬೇಕೆಂಬ ಏರ್ಪಾಡು ಮಾಡಿದೆ. ಈ ಗ್ರಾಮ ಕಮಿಟಿಗೆ

ಅಲ್ಲಿಯ ಗೌಡನು ಚೇರಮನ್‌ನಾಗಿರತಕ್ಕದ್ದು. ತನ್ನ ಗ್ರೂಪಿನೊಳಗಿನ ಪ್ರತಿಯೊಂದು ಹಳ್ಳಿಯ ಕೊಂಕುಕೊರತೆಗಳು ಮತ್ತು ಅಲ್ಲಿ ನಡೆಯುವ ಕೆಲಸವು ಪ್ರತಿಯೊಬ್ಬ ಲೋಕಲ್ ಸೆಕ್ರೆಟರಿಗೆ ತಿಳಿಯಬೇಕೆಂದು ಅವನು ತನ್ನ ಪ್ರತಿಯೊಂದು ಗ್ರಾಮ ಕಮಿಟಿಯೊಳಗಿಂದ ಒಬ್ಬೊಬ್ಬ ಮೆಂಬರನನ್ನು ಆರಿಸಿಕೊಂಡು ತನ್ನ ಗ್ರೂಪಿನ ಕಮಿಟಿಯೊಂದನ್ನು ಮಾಡಿಕೊಳ್ಳುತ್ತಾನೆ. ಎಲ್ಲ ಲೋಕಲ್ ಸೆಕ್ರೆಟರಿಗಳಿಗೆ ಮಾರ್ಗದರ್ಶಕನಾಗುವಂತೆ ಅವರೊಳಗಿನವನೊಬ್ಬನು ಆ ತಾಲೂಕಿನ ಅಥವಾ ಮಹಾಲಿನ ಚೇರಮನ್‌ನಾಗಿ ನೇಮಿಸಲ್ಪಡುತ್ತಾನೆ. ಇವನ ಕರ್ತವ್ಯಗಳೂ "ಈ" ಪರಿಶಿಷ್ಟದಲ್ಲಿ ಮುದ್ರಿತವಾದ ನಿಬಂಧನೆಗಳಲ್ಲಿ ಗೊತ್ತುಮಾಡಲ್ಪಟ್ಟವೆ. ತಾಲೂಕಿನ ಅಥವಾ ಮಹಾಲಿನ ಚೇರಮನ್ನನು ತನ್ನ ಕಾರ್ಯಕ್ಷೇತ್ರದಲ್ಲಿ ನಡೆದ ಯಾವತ್ತು ಸಂಗತಿಗಳ ರಿಪೋರ್ಟನ್ನು ಪ್ರತಿ ಮೂರು ತಿಂಗಳಿಗೆ ವ್ಯವಸ್ಥಾಪಕ ಸಭೆಯವರಿಗೆ ಒಪ್ಪಿಸುತ್ತಾನೆ. ಮತ್ತು ವ್ಯವಸ್ಥಾಪಕ ಸಭೆಯವರು ಇಡೀ ಜಿಲ್ಹೆಯಲ್ಲಿ ಆ ತ್ರೈಮಾಸಿಕದಲ್ಲಾದ ಕೆಲಸದ ರಿಪೋರ್ಟನ್ನು ಅಸೋಸಿಯೇಶನದ ತ್ರೈಮಾಸಿಕದಲ್ಲಿ ಜಮಾ ಖರ್ಚಿನ ಪತ್ರಿಕೆಯೊಂದಿಗೆ ಪ್ರಸಿದ್ಧ ಮಾಡುತ್ತಾರೆ. ಇದರ ಹೊರ್ತು ಸರಕಾರದವರು ಅಸೋಸಿಯೇಶನದ ಪ್ರಾರ್ಥನೆಯನ್ನು ಮನ್ನಿಸಿ ಒಬ್ಬ ಅಸಿಸ್ಟಂಟ ಸರ್ಜನರನ್ನು ಅಸೋಸಿಯೇಶನದ ಕೆಲಸಕ್ಕಾಗಿ ಅನುಗ್ರಹಪೂರ್ವಕ ಕೊಟ್ಟಿರುತ್ತಾರೆ. ಈ ಅಸಿಸ್ಟಂಟ ಸರ್ಜನ್ನರ ಸಂಬಳವನ್ನು ಸರಕಾರದವರೇ ಕೊಡುತ್ತಾರೆ. ಇವರ ಡೆಪ್ಯುಟೇಶನ್ ಅಲಾವನ್ಸವನ್ನೂ ಪ್ರವಾಸಭತ್ಯೆಯನ್ನೂ ಮಾತ್ರ ಅಸೋಸಿಯೇಶನವು ಕೊಡುತ್ತದೆ. ಇವರು ಇಡೀ ಜಿಲ್ಹೆಯ ಎಲ್ಲ ಭಾಗಗಳಲ್ಲಿ ಸಂಚಾರಮಾಡಿ ಜನರಲ್ಲಿ ಆರೋಗ್ಯವಿಷಯಕವಾದ ಜ್ಞಾನಾಭಿವೃದ್ಧಿಯಾಗುವಂತೆ ವ್ಯಾಖ್ಯಾನಗಳನ್ನು ಕೊಡುತ್ತಾರೆ. ಮತ್ತು ಈ ಅವರ ವ್ಯಾಖ್ಯಾನಗಳು ಸಪ್ರಯೋಗವಾಗಿ ಜನರಿಗೆ ಹೆಚ್ಚು ಪ್ರಿಯವಾಗಬೇಕೆಂಬ ಉದ್ದೇಶದಿಂದ ಎರಡು ಮ್ಯಾಜಿಕ್ ಲ್ಯಾಂಟರ್ನಗಳೂ ಬೇರೆ ಬೇರೆ ರೋಗಗಳ ಮೂಲವನ್ನು ತೋರಿಸುವ ಹಾಗು ಸಾಮಾನ್ಯ ಜ್ಞಾನವನ್ನುಂಟುಮಾಡಿಕೊಟ್ಟು ಮನೋರಂಜನವಾಗುವಂತೆ ಮಾಡುವ ಸುಮಾರು ೨೦೦ ಪ್ರಕಾಶ ಚಿತ್ರಗಳೂ ಅಸೋಸಿಯೇಶನದಿಂದ ಇವರಿಗೆ ಕೊಡಲ್ಪಟ್ಟವೆ. ಅಶಿಕ್ಷಿತರಾದ ಹಳ್ಳಿಗಾಡ ಜನರ ಮನೋರಂಜನವಾಗಿ ಅವರು ತಮ

ವ್ಯಾಖ್ಯಾನಗಳನ್ನು ಕೇಳುವದಕ್ಕೆ ಕಲೆಯುವಂತೆ ಮಾಡಬೇಕೆಂದು ಇವರಿಗೆ ಒಂದು ಗ್ರಾಮೋಫೋನವನ್ನೂ ಕೊಂಡು ಕೊಟ್ಟದೆ. ಇವರ ವ್ಯಾಖ್ಯಾನದ ಕಾಲಕ್ಕೆ ಮ್ಯಾಜಿಕ್ ಲಾಂಟರ್ನದ ಪ್ರಯೋಗವನ್ನು ಮಾಡಿ ತೋರಿಸುವದಕ್ಕೆ ಒಬ್ಬ ಆಪರೇಟರನನ್ನೂ ಒಬ್ಬ ಸಿಪಾಯಿಯನ್ನೂ ಈ ಅಸಿಸ್ಟಂಟ ಸರ್ಜನ್ನರ ಸಹಾಯಕ್ಕಾಗಿ ಕೊಟ್ಟದೆ. ವೈದ್ಯವಿದ್ಯಾಜೀವಿಗಳಲ್ಲದ ಗೃಹಸ್ಥರೂ, ಲೋಕಲ್ ಸೆಕ್ರೆಟರಿಗಳೂ ಮುಂತಾದವರು ಕೂಡ ಹಲಕೆಲವು ವ್ಯಾಖ್ಯಾನಗಳನ್ನು ಅಲ್ಲಲ್ಲಿ ಆಗಾಗ್ಗೆ ಕೊಡುತ್ತಾರೆ. ಮಲೇರಿಯಾ ಎಂಬ ಸೀತ ಜ್ವರಕ್ಕೆ ಕ್ವಿನಾಯಿನದ ಚಿಕಿತ್ಸೆ, ಮಾರಿಕಾಬೇನೆಗೆ ಪರಮ್ಯಾಂಗನೇಟ ಆಫ್ ಪೋಟ್ಯಾಶ್‌ದ ವಡೆಗಳ ತಾತ್ಕಾಲಿಕ ಉಪಯೋಗ, ನೀರು ಸ್ವಚ್ಛ ಮಾಡುವದಕ್ಕೆ ಪರಮ್ಯಾಂಗನೇಟ ಆಫ್ ಪೋಟ್ಯಾಶದ ಉಪಯೋಗ, ಇವುಗಳ ಸಂಬಂಧದಿಂದ ಜನರಲ್ಲಿ ವಿಶ್ವಾಸವುಂಟಾಗುವಂತೆ ಮಾಡುವದಕ್ಕೆಂದು ಮಧ್ಯವರ್ತಿಗಳಾದ ಹಳ್ಳಿಗಳಲ್ಲಿ ಕೆಲವು ಲೋಕಲ್ ಸೆಕ್ರೆಟರಿಗಳ ಹತ್ತರ ಹಾಗೂ ಬೇರೆ ಸದ್ಗೃಹಸ್ಥರ ಹತ್ತರ ವಡೆಗಳನ್ನೂ ಪುಡಿಯನ್ನೂ ಇಟ್ಟು ಶಕ್ಯವಾದ ಮಟ್ಟಿಗೆ ಪ್ರಯತ್ನ ಮಾಡಿದೆ. ಕ್ವಿನಾಯಿನದ ವಡೆಗಳು ಮೂಲಬೆಲೆಗೆ ಮಾರಲ್ಪಡುತ್ತವೆ. ಮತ್ತು ಪರಮ್ಯಾಂಗನೇಟ ಆಫ್ ಪೋಟ್ಯಾಶದ ವಡೆಗಳೂ ಪುಡಿಗಳೂ ಬೆಲೆಯಿಲ್ಲದೆ ಕೊಡಲ್ಪಡುತ್ತವೆ.

೬. ಅಸೋಸಿಯೇಶನದ ಕಾರ್ಯನಿರ್ವಾಹ ಪದ್ಧತಿಯು ಹೀಗೆ ಇರುತ್ತದೆ. ಇನ್ನು ಅಸೋಸಿಯೇಶನದ ಸ್ಥಿತಿಯು ಹ್ಯಾಗಿರುವದೆಂದರೆ:—

ಅಸೋಸಿಯೇಶನದ ಸ್ಥಿತಿಯು.

ಇಂದಿಗೆ ಅಸೋಸಿಯೇಶನದಲ್ಲಿ ೫ ಜನ ಲಾಯಿಫ್ ಮೆಂಬರರೂ ೫೬೮೩ ಜನ ಆರ್ಡಿನರೀ ಮೆಂಬರರೂ ಇರುತ್ತಾರೆ. ೧೯೧೪ನೇ ಇಸ್ವಿಯ ಜೂನ ತಿಂಗಳ ೩೦ನೇ ತಾರೀಖಿನ ದಿವಸ ಇಷ್ಟೇ ಜನ ಲಾಯಿಫ್ ಮೆಂಬರರೂ ೫೨೩೬ ಜನ ಆರ್ಡಿನರೀ ಮೆಂಬರರೂ ಇದ್ದರು. ಅಂದರೆ ಈ ವರ್ಷದಲ್ಲಿ ಅಸೋಸಿಯೇಶನಕ್ಕೆ ೪೫೧ ಜನ ಮೆಂಬರರು ಹೆಚ್ಚಿಗೆ ದೊರೆತಂತಾಯಿತು. ಈ ಸಾರೆಯ ಒಟ್ಟು ಉತ್ಪನ್ನವು ೫೧೩೩ ರುಪಾಯಿ; ಹೋದ ಸಾರೆ ೫೬೫೩ ರುಪಾಯಿ; ಈ ಸಾರೆಯು ಖರ್ಚು ೪೬೯೮ ರುಪಾಯಿ; ಹೋದ ಸಾರೆ ೪೨೧೯ ರುಪಾಯಿ. ಈ ಅಂಕಿಗಳ ಮೇಲಿಂದ ನೋಡಿ

ದರೆ ಹೋದಸಾರೆಗಿಂತ ಈ ಸಾರೆ ೪೮೦ ರೂಪಾಯಿ ಉತ್ಪನ್ನವು ಕಡಿಮೆ ಯಾಗಿ ವೆಚ್ಚವು ಮಾತ್ರ ೬೭೯ ರುಪಾಯಿಗಳಿಂದ ಹೆಚ್ಚಾಗಿರುವದೆಂದು ಕಂಡು ಬರುವದು. ಹೋದ ಸಾರೆಯ ಉತ್ಪನ್ನದಲ್ಲಿ ಒಬ್ಬ ಲಾಯಿಫ್ ಮೆಂಬರರಿಂದ ಬಂದ ೧೫೦ ರುಪಾಯಿಗಳು ಕೂಡಿರುವವು. ಈ ಸಾರೆ ಆ ಉತ್ಪನ್ನವಿಲ್ಲದ್ದರಿಂದಲೂ ಸದ್ಯಕ್ಕೆ ನಡೆದಿರುವ ಪ್ರಚಂಡ ಯುದ್ಧದ ಅನೇಕ ಅಪ್ರತ್ಯಕ್ಷ ಪರಿಣಾಮಗಳು ತುಸುಮಟ್ಟಿಗೆ ಅಸೋಸಿಯೇಶನವನ್ನು ಬಾಧಿಸಿದ್ದರಿಂದಲೂ ಉತ್ಪನ್ನವು ಕಡಿಮೆಯಾಗಿದೆಯೆಂದು ಹೇಳಬಹುದು. ಮ್ಯಾಜಿಕ್ ಲ್ಯಾಂಟರ್ನದ ವ್ಯಾಖ್ಯಾನಗಳ ಕೆಲಸದ ಮೇಲಿದ್ದ ಅಸಿಸ್ಟಂಟ ಸರ್ಜನರು ಹೋದ ಸಾರೆ ಇಡೀ ವರ್ಷ ಕೆಲಸಕ್ಕೆ ದೊರೆಯದೆ ಕೆಲವು ತಿಂಗಳುಗಳ ವರೆಗೆ ಮಾತ್ರ ದೊರೆತಿದ್ದರು. ಆದರೆ ಈ ಸಾರೆ ಇಡೀ ವರ್ಷ ಕೆಲಸ ಮಾಡಿದ್ದಾರೆ; ಮತ್ತು ಅವರ ಡೆಪ್ಯೂಟೇಶನ್ ಭತ್ತೆಯು ಹೋದ ಸಾರೆ ತಿಂಗಳಿಗೆ ೬೦ ರುಪಾಯಿ ಇದ್ದದ್ದು ಈ ಸಾರೆ ೮೦ ರುಪಾಯಿ ಮಾಡಲ್ಪಟ್ಟಿತು. ಆದದರಿಂದ ಅವರ ಡೆಪ್ಯೂಟೇಶನ್ ಅಲಾವನ್ಸ ಮತ್ತು ಪ್ರವಾಸ ಭತ್ತೆ ಇವುಗಳ ಖರ್ಚು ಹೆಚ್ಚು ಬಂದದರಿಂದ ಖರ್ಚಿನ ರಕಮು ೬೭೯ ರುಪಾಯಿಗಳಿಂದ ಹೆಚ್ಚಾಗಿದೆ. ಇಷ್ಟಾದರೂ ಈ ಸಾರೆಯ ವರ್ಷದ ಕೊನೆಯ ಶಿಲ್ಕು ೬೫೬೫ ರುಪಾಯಿ ಅಂದರೆ ಹೋದ ಸಾರೆಯ ೬೩೮೭ ರುಪಾಯಿಗಳ ಕೊನೆಯ ಶಿಲ್ಕಿಗಿಂತ ೧೭೮ ರುಪಾಯಿಗಳಿಂದ ಹೆಚ್ಚಿಗೆ ಇರುವದು. ಈ ನಗದು ಶಿಲ್ಕಿನ ಹೊರ್ತು ಅಸೋಸಿಯೇಶನದ ಆಸ್ತಿಯ ಬೆಲೆಯು ಹೋದ ಸಾರೆ ೯೯೩ ರುಪಾಯಿ ಇದ್ದದ್ದು ಈ ಸಾರೆ ೧೪೯೩ ರುಪಾಯಿ ಆಗಿದೆ. ಇದರಿಂದ ಅಸೋಸಿಯೇಶನದ ಒಟ್ಟು ಆಸ್ತಿಯು ಹೋದ ವರ್ಷದ ಕೊನೆಗೆ ೭೩೮೦ ರುಪಾಯಿ ಬೆಲೆಯುದಿದ್ದದ್ದು ಈ ಸಾರೆ ೮೦೫೮ ರುಪಾಯಿಗಳದಾಗಿ ೭೭೮ ರುಪಾಯಿಗಳಿಂದ ಬೆಳೆದಿರುವದೆಂಬದು ಸ್ಪಷ್ಟವಾಗುತ್ತದೆ. ಜಮಾ ಖರ್ಚಿನ ತಪಶೀಲು ತೋರಿಸುವ ವಿಸ್ತೃತವಾದ ಪಟ್ಟಿಯು "ಅ" ಪರಿಶಿಷ್ಟದಲ್ಲಿಯೂ ಮುಂದಿನ ವರ್ಷದ ಜಮಾ ಖರ್ಚಿನ ಅಂದಾಜು ಪತ್ರಿಕೆಯು "ಬ" ಪರಿಶಿಷ್ಟದಲ್ಲಿಯೂ ಕೊನೆಗೆ ಜೋಡಿಸಲ್ಪಟ್ಟಿವೆ. ಒಟ್ಟಿನ ಮೇಲೆ ಮೆಂಬರರ ಸಂಖ್ಯೆಯ ವಿಚಾರದಿಂದಲೂ ಸಾಂಪತ್ತಿಕ ಪರಿಸ್ಥಿತಿಯ ವಿಚಾರದಿಂದಲೂ ಅಸೋಸಿಯೇಶನವು ಸಮಾಧಾನಕರವಾದ ಪ್ರಗತಿಯನ್ನು ಹೊಂದಿರುವದೆಂದು ಸಂತೋಷ ಪೂರ್ವಕವಾಗಿ ಇಲ್ಲಿ ಉಲ್ಲೇಖಿಸಬಹುದಾಗಿದೆ.

೭. ವ್ಯವಸ್ಥಾಪಕ ಸಭೆಯು ನಾಲ್ಕು ಸಾರೆ ಕೂಡಿ ಒಟ್ಟಿಗೆ ನಾಲ್ವತ್ತೈದು ವಿಷಯಗಳು ಚರ್ಚಿಸಲ್ಪಟ್ಟವು. ಸಭೆಗೆ ಬಂದಿದ್ದ ಮೆಂಬರ ಜನರ ಸರಾಸರೀ ಸಂಖ್ಯೆಯು ೮ ಇತ್ತು. ಪ್ಯಾಂಫ್ಲೆಟ ಕಮೀಟಿಯವರು ೧೮ ಪತ್ರಿಕೆಗಳನ್ನು ಪರೀಕ್ಷಿಸಿದರು. ಮತ್ತು ಟ್ರಾನ್ಸಲೇಶನ್ ಕಮೀಟಿಯವರು ೮ ಪತ್ರಿಕೆಗಳ ಭಾಷಾಂತರ ಮಾಡಿದರು. ಹೋದ ಸಾರೆ ಪ್ರತಿಯೊಂದು ಕಮೀಟಿಯು ಇಪ್ಪತ್ತುಮೂರು ಪತ್ರಿಕೆಗಳ ಕೆಲಸವನ್ನು ಮಾಡಿತ್ತು. ಪ್ಲೇಗು, ಮಲೇರಿಯಾ, ಕ್ಷಯ, ಮಕ್ಕಳ ಬೇನೆ, ಇಲಿಗಳನಾಶ, ನೊಣಗಳು, ಗ್ರಾಮ ಸ್ವಚ್ಛತೆ ಮತ್ತು ಆರೋಗ್ಯ ಮುಂತಾದ ಬೇರೆ ಬೇರೆ ವಿಷಯಗಳ ಮೇಲೆ ೧೮ ಪತ್ರಿಕೆಗಳು ಪ್ರಸಿದ್ಧ ಮಾಡಲ್ಪಟ್ಟವು. ಹೋದ ವರ್ಷ ಇವು ೧೪ ಆಗಿದ್ದವು. ಅಸೋಸಿಯೇಶನನ ಪತ್ರಿಕೆಗಳಿಗೆ ಲೇಖ ಬರೆದವರಲ್ಲಿ ಲೆಫ್ಟಿನಂಟ ಕರ್ನಲ್ ಹಡ್ಸನ್. ಲೆ. ಕ. ಫಾಕ್ಸ, ಡಾಕ್ಟರ ಆರ್. ಎಚ್. ಶಿರಹಟ್ಟಿ, ಮಿ. ಮೊಡ್ಲಿಯಾರ ಮುಂತಾದ ಗೃಹಸ್ಥರಿರುತ್ತಾರೆ. ಮುಂಬಯಿ ಸ್ಯಾನಿಟರೀ ಅಸೋಸಿಯೇಶನದ ಕೆಲವು ಪತ್ರಿಕೆಗಳ ಉಪಯೋಗವೂ ಅಸೋಸಿಯೇಶನಕ್ಕಾಗಿದೆ. ಮತ್ತು ವೈದ್ಯಶಾಸ್ತ್ರವನ್ನರಿಯದ ಅನೇಕ ಜನ ಸದ್ಗೃಹಸರೂ ಕೆಲವು ಪತ್ರಿಕೆಗಳನ್ನು ಬರೆದು ಕೊಟ್ಟಿರುತ್ತಾರೆ.

ವ್ಯವಸ್ಥಾಪಕ ಸಭೆಯ ಕೆಲಸಗಳು.

೮. ಮೇಲೆ ನಿರ್ದಿಷ್ಟವಾದ ಪತ್ರಿಕೆಗಳನ್ನು ಪ್ರಸಿದ್ಧಪಡಿಸಿದ್ದಲ್ಲದೆ ಬೆಳಗಾವಿಯ ಡಾಕ್ತರ ಸವಣೂರ ಇವರು ಬರೆದ ಪ್ಲೇಗಿನ ಮೇಲಿನ ಲೇಖದ ೪೦೦ ಪ್ರತಿಗಳನ್ನು ಕೊಂಡುಕೊಂಡು ಪ್ಲೇಗು ಪ್ರಾರಂಭವಾದ ಅಥವಾ ಪ್ರಾರಂಭವಾಗುವ ಸಂಭವವಿದ್ದ ಹಳ್ಳಿಗಳಲ್ಲಿ ಹಂಚಿತು. ಈ ಸಾರೆ ಪ್ಲೇಗ ಬೇನೆಯು ಹೋದಸಾರೆಯಷ್ಟು ಭಯಂಕರ ಸ್ವರೂಪದ್ದಾಗಿದ್ದಿಲ್ಲ. ಅದು ಪ್ರಾರಂಭವಾದಲ್ಲೆಲ್ಲ ಜನರು ತಾವಾಗಿಯೇ ಮುಂದೆ ಬಂದು ಇನಾಕ್ಯೂಲೇಶನ್ ಮಾಡಿಸಿಕೊಳ್ಳುವ ಆತುರತೆಯನ್ನು ತೋರಿಸಿದರು.

ಪ್ಲೇಗು.

೯. ಮಲ್ಲಾಡ ತಾಲೂಕುಗಳಲ್ಲಿ ಮಲೇರಿಯಾ ಜ್ವರವು ಪದತಿಯ ಪ್ರಕಾರ ಪ್ರಾರಂಭವಾಯಿತು. ಮತ್ತು ಕ್ವಿನಾಯಿನದ ಚಿಕಿತ್ಸೆಯು ಪ

ಉಪಕಾರಿಯಾಗಿ ಕಂಡು ಬಂತು. ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನಿಂದ ದೊರೆತ ೧೩೭೬ ಕ್ವಿನಾಯಿನ ಪಡೆಗಳ ಕೊಳವೆಗಳು ಲೋಕಲ್ ಸೆಕ್ರೆಟರಿಗಳ ಮುಖಾಂತರ ಮಾರಲ್ಪಟ್ಟವು. ಹೋದ ವರ್ಷ ೧೬೦೮ ಕೊಳವೆಗಳು ಮಾರಿದ್ದವು. ಈ ಪಡೆಗಳು ಇನ್ನಿಷ್ಟು ಬೇಕಾಗಿದ್ದವು. ಆದರೆ ಈಗಿನ ಯುದ್ಧದ ಪರಿಸ್ಥಿತಿಯ ಮೂಲಕವಾಗಿ ಒಮ್ಮೆ ಕಡಿಮೆ ಬಿದ್ದವುಗಳನ್ನು ಪೂರೈಸುವದಾಗದೆ ಉಳಿದು ಹೋಯಿತು.

"ಮಲೇರಿಯಾ" ಸೀತ ಜ್ವರ.

೧೦. ಈ ಸಾರೆ ಮಾರಿಕಾ ಬೇನೆಯು ಬಹಳವಾಗಿ ಎಲ್ಲಿಯೂ ಹಬ್ಬಲಿಲ್ಲ. ೩೩ ಮುಖ್ಯ ಮುಖ್ಯ ಹಳ್ಳಿಗಳಲ್ಲಿಟ್ಟಿದ್ದ ಪರಮ್ಯಾಂಗನೇಟ ಆಫ್ ಪೋಟ್ಯಾಶ್‌ದ ಕೊಳವೆಗಳಲ್ಲಿ ಒಂದು ಸಾವಿರಕ್ಕಿಂತ ಹೆಚ್ಚು ಹಾಗೇ ಉಳಿದಿರುತ್ತವೆ. ಅವುಗಳ ಉಪಯೋಗವು ಮುಂದೆ ಮತ್ತೆ ಎಂದಾದರೂ ಪ್ರಸಂಗ ಬಂದರೆ ಮಾಡಲಾಗುವದು.

ಮಾರಿಕಾ ಬೇನೆ.

೧೧. ಈ ಸಾರೆ ಇಡೀ ಜಿಲ್ಹೆಯ ಬೇರೆ ಬೇರೆ ಭಾಗಗಳಲ್ಲಿ ಮ್ಯಾಜಿಕ್‌ಲ್ಯಾಂಟರ್ನದ ಪ್ರಯೋಗದಿಂದೊಡಗೂಡಿದ ೯೧ ವ್ಯಾಖ್ಯಾನಗಳು ಆದವು. ಹೋದ ವರ್ಷ ಇವು ೪೦ ಆಗಿದ್ದವು. ಈ ಸಾರೆಯ ವ್ಯಾಖ್ಯಾನಗಳಲ್ಲಿ ೪ ವ್ಯಾಖ್ಯಾನಗಳು ವಿಶೇಷವಾಗಿ ಹೆಣ್ಣು ಮಕ್ಕಳಿಗಾಗಿಯೇ ಏರ್ಪಡಿಸಲ್ಪಟ್ಟಿದ್ದವು. ಈ ಸಪ್ರಯೋಗ ವ್ಯಾಖ್ಯಾನಗಳ ಪದ್ಧತಿಯು ಜನರಿಗೆ ಬಹಳವಾಗಿ ರುಚಿಸಿದೆ. ದಕ್ಷಿಣ ಭಾಗದ ಕಮೀಶನರರಾದ ನಾಮದಾರ ಎಚ್. ಎಸ್. ಲಾರೆನ್ಸಸಾಹೇಬ ಬಾಹದ್ದೂರರವರು ಇಂಥ ಎರಡು ವ್ಯಾಖ್ಯಾನಗಳ ಕಾಲಕ್ಕೆ ಸ್ವತಃ ಬಂದು ಅಸೋಸಿಯೇಶನಕ್ಕೆ ಉತ್ತೇಜನ ಕೊಟ್ಟಿರುತ್ತಾರೆ. ಇವುಗಳೊಳಗಿನ ಒಂದಂತೂ ಅವರ ಸೂಚನೆಯ ಮೇರೆಗೆ ಹಳ್ಳಿಗಾಡ ಜನರ ಮನಸ್ಸಿನ ಮೇಲೆ ಇದರ ಪರಿಣಾಮವೇನಾಗುತ್ತದೆಂಬದನ್ನು ಅವರು ಸ್ವತಃ ನೋಡಿಕೊಂಡು ಮನಗಾಣುವದಕ್ಕೆಂದು ಏರ್ಪಡಿಸಲ್ಪಟ್ಟಿತ್ತು. ಇಂಥ ಸಪ್ರಯೋಗ ವ್ಯಾಖ್ಯಾನಗಳು ಅಶಿಕ್ಷಿತರಾದ ಹಳ್ಳಿಗಾಡ ಜನರಿಗೆ ವಿಶೇಷವಾಗಿ ಉಪಯೋಗ ಬೀಳುವಂತಾಗುವದಕ್ಕೆ

ಮ್ಯಾಜಿಕ್‌ಲ್ಯಾಂಟರ್ನದ ಪ್ರಯೋಗಗಳು.

ಏನು ಮಾಡಬೇಕೆಂಬ ವಿಷಯದಲ್ಲಿ ನಾಮದಾರರವರು ಬಹು ಬೆಲೆಯುಳ್ಳ ಸೂಚನೆಗಳನ್ನು ಮಾಡಿರುತ್ತಾರೆ. ಈ ಕೆಲಸದ ಮೇಲಿರುವ ಡಾಕ್ತರ ಟೆಂಬೆಯವರು ತಮ್ಮ ರಿಪೋರ್ಟಿನಲ್ಲಿ ತಮ್ಮ ಪ್ರಯೋಗಗಳನ್ನು ನೋಡ ಲಿಕ್ಕೆ ಬಂದವರ ಮನಸ್ಸಿನ ಮೇಲೆ ಅವುಗಳಿಂದ ಉತ್ಕೃಷ್ಟವಾದ ಮತ್ತು ಚಿರಕಾಲ ಬಾಳುವಂಥ ಪರಿಣಾಮವಾಗಿರುವದೆಂದು ಬರೆದು, ರಾಣೆಬೆನ್ನೂರ ಉದಾಹರಣೆಯನ್ನು ಕೊಟ್ಟು ಹೀಗೆ ತಿಳಿಸುತ್ತಾರೆ.

"ಅಲ್ಲಿ ಪ್ಲೇಗಿನ ಮೈಲಿಯನ್ನು ಚುಚ್ಚಿಕೊಳ್ಳುವದು ಕೆಳಪ್ರತಿಯ ಜನರಲ್ಲಿ ಅಷ್ಟು ಪ್ರಸಾರ ಹೊಂದಿದ್ದಿಲ್ಲ. ರಾಣೆಬೆನ್ನೂರಲ್ಲಿ ಇವರೆದುರಿಗೆ ಮಾಡಿ ತೋರಿಸಿದ ಎರಡು ಪ್ರಯೋಗಗಳು ಜನರಿಗೆ ಬಹಳ ರುಚಿಸಿದವು ಮತ್ತು ಕೂಡಲೆ ಅವರಲ್ಲಿ ಬಹು ಜನರು ಮೈಲೀ ಚುಚ್ಚಿಸಿಕೊಂಡರು."

ಈ ಜಿಲ್ಹೆಯ ಜನರ ರೀತಿ ನಡತಿಗಳಿಗೂ ಸ್ಥಾನಿಕ ಪರಿಸ್ಥಿತಿಗೂ ಅನುಕೂಲವಾಗುವಂತೆ ಮಾರಿಕಾ ಬೇನೆಯ ಸಂಬಂಧದ ೩ ಜೋಡು ಪ್ರಕಾಶ ಚಿತ್ರಗಳನ್ನು (ಮ್ಯಾಜಿಕ್ ಲ್ಯಾಂಟರ್ನದ ಸ್ಲಾಯಿಡುಗಳನ್ನು) ಇಲ್ಲಿಯೇ ಮಾಡಿಸಿತು. ಡಾಕ್ಟರ ಟೇಂಬೆ ಇವರು ಪ್ರವಾಸದಲ್ಲಿದ್ದಾಗ್ಗೆ ಜನರ ಚಿಕ್ಕ ಸಟ್ಟ ಬೇನೆಗಳಿಗೆ ಔಷಧೋಪಚಾರ ಮಾಡುವದಕ್ಕೆ ಅವ ರಿಗೆ ಅನುಕೂಲವಾಗಬೇಕೆಂದು ೧೫೦ ರುಪಾಯಿ ಬೆಲೆ ಬಾಳುವ ಒಂದು ಚಿಕ್ಕ ಔಷಧದ ಪೆಟ್ಟಿಗೆಯನ್ನು ಅವರಿಗೆ ಮೊದಲನೇ ಸಾರೆ ಕೊಂಡು ಕೊಟ್ಟಿತು. ಇದರಿಂದ ಜನರಿಗೆ ತಮ್ಮ ಪರಿಚಯವಾಗಲಿಕ್ಕೆ ತುಸು ಹೆಚ್ಚಿಗೆ ಅನುಕೂಲವಾಯಿತೆಂದು ಅವರು ಬರೆಯುತ್ತಾರೆ. ಡಾಕ್ಟರ ಟೆಂಬೆಯವರು ಅಸೋಸಿಯೇಶನದ ಕೆಲಸಿಕ್ಕೆ ಬಂದ ಅವಧಿಯು ಬೇಗನೆ ಮುಗಿಯುವದರಿಂದಲೂ ಅಸೋಸಿಯೇಶನಕ್ಕೆ ಇವರಿಂದ ಅತ್ಯಂತ ಉಪ ಯೋಗವಾಗಿರುವದರಿಂದಲೂ ಇವರು ಇಲ್ಲಿಯೇ ಕೆಲಸಮಾಡುವಂತೆ ಅವ ಧಿಯನ್ನು ಬೆಳಿಸಬೇಕೆಂದು ಸರಕಾರದವರನ್ನು ಪ್ರಾರ್ಥಿಸಬೇಕಾಗಿದೆ.

೧೩. ಸಂಚಾರಿಗಳಾದ ಅಧಿಕಾರಿಗಳು ಲೋಕಲ ಸೆಕ್ರೆಟರಿಗಳಿಗೆ ಉಪದೇಶ ಮಾಡಿ, ಉತ್ತೇಜನ ಕೊಟ್ಟು, ವ್ಯಾಖ್ಯಾನ ಸಭೆಗಳಿಗೆ ಅಧ್ಯಕ್ಷ

ರಾಗಿ ಅಸೋಸಿಯೇಶನಕ್ಕೆ ಪದ್ಧತಿಯ ಪ್ರಕಾರ ಬಹಳ ಸಹಾಯ ಮಾಡಿ ರುತ್ತಾರೆ. ಇಂಥ ವ್ಯಾಖ್ಯಾನಗಳ ಮತ್ತು ಸಂಭಾಷಣೆಗಳ ಸಂಖ್ಯೆಯು ೩೨೦ ಇರುತ್ತದೆ. ಈ ಸಂಖ್ಯೆಯಲ್ಲಿ ೯೧ ಮ್ಯಾಜಿಕ್‌ಲ್ಯಾಂಟರ್ನದ ಸಪ್ರಯೋಗ ವ್ಯಾಖ್ಯಾನಗಳ ಸಮಾವೇಶವಾಗಿರುವದಿಲ್ಲವೆಂಬದನ್ನು ಧ್ಯಾನದಲ್ಲಿ ಡತಕ್ಕದ್ದು. ಗೃಹಾರೋಗ್ಯದ ಸಂಬಂಧವಾದ ಹಲ ಕೆಲವು ಸಂಗತಿಗಳನ್ನು ವಿಶೇಷವಾಗಿ ಹೆಣ್ಣುಮಕ್ಕಳ ಶಾಲೆಯಲ್ಲಿ ಸ್ತ್ರೀಯರ ಸಭೆಗಳನ್ನೇ ಕೂಡಿಸಿ ಸ್ತ್ರೀಯರಿಗಾಗಿಯೇ ತಿಳಿಸಿ ಹೇಳುವ ವ್ಯವಸ್ಥೆಯೂ ಮೊದಲನೇ ಸಾರಿಗೆ ಮಾಡಲ್ಪಟ್ಟಿತು. ಲೋಕಲ್ ಸೆಕ್ರೆಟರಿಗಳು ಒಟ್ಟಿಗೆ ೯೩೫ ಸಾರೆ ಅಸೋಸಿಯೇಶನದ ಕೆಲಸಕ್ಕಾಗಿ ತಮ್ಮ ತಮ್ಮ ಹಳ್ಳಿಯ ಜನರನ್ನು ಕಂಡು ಬಂದಿ ರುತ್ತಾರೆ.

ವ್ಯಾಖ್ಯಾನಗಳೂ, ಪ್ರಯೋಗಗಳೂ.

೧೩. “ ಬಾಳೆಕುಂದ್ರಿ ಪದ್ಧತಿ ” ಎಂಬದಾಗಿ ವಾಡಿಕೆಯು ಹೆಸರನ್ನು ಹೊಂದಿರುವ ಸುಲಭವಾದ ಸ್ವಾವಲಂಬನ ಪದ್ಧತಿಯನ್ನನುಸರಿಸಿ ಹಳ್ಳಿಗಳ ಆರೋಗ್ಯವನ್ನು ಸುಧಾರಿಸುವ ವಿಷಯವು ಹೋದಸಾರೆಯ ರಿಪೋರ್ಟಿನಲ್ಲಿ ಉಲ್ಲೇಖಿತವಾಗಿದೆ. ಈ ವಿಷಯವಾಗಿ ಹೆಚ್ಚು ಲಕ್ಷ್ಯವು ಕೊಡಲಾಯಿತು. ಇಂದಿಗೆ ೧೯೫ ಹಳ್ಳಿಗಳಲ್ಲಿ ಗ್ರಾಮ ಶಾಖೆಗಳು ಸ್ಥಾಪಿಸಲ್ಪಟ್ಟಿರುವವು; ಈ ಶಾಖೆಗಳ ಕೆಲಸವು ವಸ್ತುತಃ ಹ್ಯಾಗೆ ನಡೆದಿರುವದೆಂಬದು ಅಸೋಸಿಯೇಶನಕ್ಕೆ ವಿಶ್ವಸನೀಯವಾಗಿ ತಿಳಿಯದಿದ್ದರೂ ಹೋದ ವರ್ಷ ಎರಡುನೂರಾ ಒಂಭತ್ತೇ ಹಳ್ಳಿಗಳಲ್ಲಿ ನಡೆದ ಗ್ರಾಮಸ್ವಚ್ಛತಾರಕ್ಷಣೆಯ ಕೆಲಸವು ಈ ಸಾರೆ ೪೦೨ ಹಳ್ಳಿಗಳಲ್ಲಿ ನಡೆದಿರುವದು ಮತ್ತು ಹಲಕೆಲವುಗಳಲ್ಲಿಯಂತೂ ಅತ್ಯುತ್ಕೃಷ್ಟವಾಗಿ ಸಾಗಿರುವದೆಂದು ಹೇಳಬಹುದು.

ಗ್ರಾಮಾರೋಗ್ಯ ರಕ್ಷಣೆ.

ಆರೋಗ್ಯಶಾಸ್ತ್ರ ಧುರೀಣರಾದ ಸರ ಎಡ್‌ವಿನ್ ಚಾಡ್‌ವಿಕ್ (೧೮೦೦–೧೮೯೦) ರವರು ಬಹುವರ್ಷಗಳ ಹಿಂದೆ ಬರೆದಿಟ್ಟದ್ದೇನಂದರೆ:– “ನೈರುಲಿಯ ಬೇನೆ, ವಿಷಮಜ್ವರ, ಮತ್ತು ಬೇರೆ ತರದ ಸಾಂಸರ್ಗಿಕ ರೋಗಗಳು, ವಿಶೇಷವಾಗಿ ಕೆಟ್ಟಹವೆ, ಕೊಳೆತು ನಿಂತ ಹೊಲಸು, ಮನೆಯ ಕೆಟ್ಟ ಕೊಳಚಿ ಹರಿಗಳು, ಅಲ್ಲಲ್ಲಿ ಕೂಡಿ ಬಿದ್ದಿರುವ ಗೊಬ್ಬರಗುಣಿಗಳು, ತಿಪ್ಪಿಗಳು, ಮಲ ಕೊಳೆತು ಅಲ್ಲಲ್ಲಿ ಉಂಟಾಗುವ ಹೊಲಸು, ಮೇಲ್ಭಾಗದಲ್ಲಿ

ಕಶ್ಮಲ ಮಯವಾದ ದಾರಿಗಳು, ಅಸ್ವಚ್ಛವಾದ ನೀರು, ಕೆಟ್ಟ ಮನೆಗಳಲ್ಲಿ ದಟ್ಟವಾಗಿ ವಾಸಮಾಡೋಣ ಮುಂತಾದವುಗಳ ಮೂಲಕವಾಗಿಯೇ ಉದ್ಭವಿಸುತ್ತವೆ. ಆದದರಿಂದ ಇಂಥ ಎಲ್ಲ ಬಗೆಯ ಹೊಲಸನ್ನು ದೂರ ಮಾಡಿ ಸಂಪೂರ್ಣವಾದ ಸ್ವಚ್ಛತೆಯನ್ನು ನಾಲ್ಕುಕಡೆಗೆ ಉಂಟು ಮಾಡುವದರಿಂದಲೂ ಸುಧಾರಿಸಿದ ಪದ್ಧತಿಯ ಸ್ವಚ್ಛ ಹವೆಯಾಡುವ ಮನೆಗಳಲ್ಲಿ ವಾಸವಾಗಿರುವದರಿಂದಲೂ ಇವೆಲ್ಲ ರೋಗಗಳು ಅಥವಾ ಇವಕ್ಕೂ ಹೆಚ್ಚಿನ ಸಾಂಸರ್ಗಿಕ ರೋಗಗಳು ಹೇಳ ಹೆಸರಿಲ್ಲದೆಹೋಗುವವು*." ಸರ್ ಎಡ್ವಿನ್ ಚಾಡ್‌ವಿಕ್‌ರವರ ಈ ಅಭಿಪ್ರಾಯವು ಈಗ ಸಾಮಾನ್ಯ ಜನರ ತಿಳುವಳಿಕೆಗೂ ನಿಲುಕಿದ್ದಾಗಿದೆ. ಆದದರಿಂದ ಇದೇ ಕ್ರಮವನ್ನನುಸರಿಸಿ ನಡೆದಿರುವ ಅಸೋಸಿಯೇಶನದ ಕಾರ್ಯಕರ್ತೃತ್ವವು, ಸದ್ಯಕ್ಕೆ ಬಹುಮಟ್ಟಿಗೆ ಅಲ್ಪವಾಗಿಯೂ ಅಪರಿಪಕ್ವವಾಗಿಯೂ ಇದ್ದರೂ, ಮುಂದೆ ಶುಭಕರವಾದ ಪರಿಣಾಮವನ್ನುಂಟು ಮಾಡದಿರಲಾರದು.

೧೪. ಅಸೋಸಿಯೇಶನ್‌ವು ಸ್ಥಾಪಿತವಾದಾಗಿನಿಂದ ಸರಕಾರದವರು ಅದಕ್ಕೆ ಆಗಿಂದಾಗ್ಗೆ ಕೊಡುತ್ತ ಬಂದಿರುವ ಉತ್ತೇಜನಕ್ಕೆ ಮಿಗಿಲಾಗಿಯೂ ವಿಶೇಷವಾದ ಸಹಾಯವನ್ನು ಮಾಡಿದ್ದಕ್ಕಾಗಿ ಅದು ಅವರಿಗೆ ಸದಾ ಕೃತಜ್ಞವಾಗಿರುವದು.

ಸರಕಾರದ ಸಹಾಯ.

ಒಬ್ಬ ಅಸಿಸ್ಟಂಟ ಸರ್ಜನರನ್ನು ಅಸೋಸಿಯೇಶನದ ಕೆಲಸಕ್ಕೆ ಕೊಟ್ಟು, ಈಗಿನ ಯುದ್ಧದ ಕಾಲದಲ್ಲಿ ಡಾಕ್ಟರ ಜನರ ಕೊರತೆಯು ಬಹಳವಾಗಿ ಇದ್ದಾಗ್ಯೂ ಅವರನ್ನು ಇಲ್ಲಿಯೇ ಅಸೋಸಿಯೇಶನದ ಕೆಲಸಕ್ಕೆ ಬಿಟ್ಟದ್ದರಿಂದ ಜನರ ಕಲ್ಯಾಣವನ್ನೂ ಹಿತವನ್ನೂ ಪ್ರತ್ಯಕ್ಷವಾಗಿ ಸಂಬಂಧಿಸಿರುವ ಸಂಗತಿಗಳಲ್ಲಿ ಸರಕಾರದವರು ಹ್ಯಾಗೆ ಮನಮುಟ್ಟಿ ಸಹಾಯ ಮಾಡುತ್ತಾರೆಂಬದು ಸ್ಪಷ್ಟವಾಗಿ ಕಂಡು ಬರುತ್ತದೆ. ಹೀಗೆ ಅಸಿಸ್ಟಂಟ ಸರ್ಜನರ ಸಂಬಳದ ಸ್ವರೂಪದಿಂದ ಅಸೋಸಿಯೇಶಕ್ಕೆ ಸರಕಾರದವರಿಂದ ಪ್ರತಿವರ್ಷ ೧೨೦೦ ರೂಪಾಯಿಗಳ ಗ್ರ್ಯಾಂಟು ದೊರೆಯುತ್ತದೆ. ಜಿಲ್ಹೆಯಲ್ಲಿರುವ ಅನೇಕ ದವಾಖಾನೆಗಳ ಸಬ್ ಅಸಿಸ್ಟಂಟ ಸರ್ಜನರನ್ನು ಇನಾಕ್ಯುಲೇಶನದ ಕೆಲಸಕ್ಕೆ ಕರೆಯಬಹುದೆಂದೂ ಪ್ಲೇಗಿನ ಮೂಲಕವಾಗಿ

---

* "ತಾ|| ೧೪ನೇ ದಸಂಬರ ೧೮೮೧ರಲ್ಲಿ ಬ್ರ್ಯಾಯಿಟನ್ನದ ಆರೋಗ್ಯ ಪರಿಷತ್ತಿನ ಮುಂದೆ ಓದಿದ ನಿಬಂಧದ ೨೨ನೇ ಪುಟದಲ್ಲಿ-ನಿರ್ದಿಷ್ಟವಾದ ಸಾಂಸರ್ಗಿಕ ರೋಗಗಳ ಪ್ರತೀಕಾರವು"

ಮುಚ್ಚಲ್ಪಟ್ಟಿದ್ದ ಸಾಲೆಗಳ ಶಿಕ್ಷಕರನ್ನು ಇನಾಕ್ಯುಲೇಶನ್ ಮುಂತಾದವು ಗಳಿಂದಾಗುವ ಲಾಭಗಳನ್ನು ಜನರಿಗೆ ತಿಳಿಸಿ ಹೇಳುವದಕ್ಕೆ ಕರೆಯಬಹು ದೆಂದೂ ಸರಕಾರದವರು ಮಂಜೂರಿಯನ್ನು ಕೊಟ್ಟಿದ್ದಾರೆ. ಪರಮ್ಯಾಂಗ ನೇಟ ಆಫ ಪೊಟ್ಯಾಶದ ಗುಳಿಗೆಗಳನ್ನು ಬೆಲೆಯಿಲ್ಲದೆ ಜನರಿಗೆ ಹಂಚುವ ದಕ್ಕಾಗಿಯೂ ಸರಕಾರದವರು ಅನುಗ್ರಹಪೂರ್ವಕವಾಗಿ ಕೊಟ್ಟಿರು ತ್ತಾರೆ. ನಾಮದಾರ ಗವ್ಹರ್ನರಸಾಹೇಬರವರು ಹಿಂದಕ್ಕೆ ಧಾರವಾಡಕ್ಕೆ ಬಂದಾಗ್ಗೆ ಅಸೋಸಿಯೇಶನದ ಆನರರೀ ಸೆಕ್ರೆಟರಿಯವರಿಗೆ ಖಾಸಗೀ ಭೆಟ್ಟಿ ಯನ್ನುಕೊಟ್ಟು ಅಸೋಸಿಯೇಶನದ ವೃತ್ತಾಂತವನ್ನೆಲ್ಲ ಸಹಾನುಭೂತ ಪೂರ್ಣ ಮನಸ್ಸಿನಿಂದ ಕೇಳಿಕೊಳ್ಳುವ ಅನುಗ್ರಹವನ್ನು ಮಾಡಿರುತ್ತಾರೆ. " ದಕ್ಷಿಣಭಾಗದ ಮೂರು ಜಿಲ್ಹೆಗಳಲ್ಲಿ ಸ್ಥಾಪಿತವಾಗಿರುವ ಸ್ಯಾನಿಟರೀ ಅಸೋಸಿಯೇಶನಗಳಂಥ ಸಂಸ್ಥೆಗಳನ್ನು ಸ್ಥಾಪಿಸುವದರಿಂದ ಅರ್ವಾ ಚೀನ ಶಿಕ್ಷಣ ಪದ್ಧತಿಯ ಗಂಧವೂ ಇಲ್ಲದಂಥ ಹಳ್ಳಿಗಾಡಿನಲ್ಲಿಯೂ ಆರೋಗ್ಯ ವಿಷಯಕ ಮೂಲತತ್ವಗಳ ಪ್ರಸಾರವಾಗುವದಕ್ಕೆ ಸಹಾಯವಾ ಗುವದು " ಎಂಬದಾಗಿ ಸರಕಾರದವರು ತಮ್ಮ ಅಭಿಪ್ರಾಯವನ್ನು ನಿರ್ದೇ ಶಮಾಡಿ ಈ ಅಸೋಸಿಯೇಶನದ ಕೆಲಸದ ವಿಷಯವಾಗಿ ಆನಂದವನ್ನು ವ್ಯಕ್ತಪಡಿಸಿರುತ್ತಾರೆ. ದಕ್ಷಿಣಭಾಗದ ಕಮಿಶನರರಾದ ನಾಮದಾರ ಮಿ. ಲಾರೆನ್ಸ ದೊರೆಗಳೂ ಅಸೋಸಿಯೇಶನದ ಕೆಲಸವನ್ನು ನೋಡಿ " ವ್ಯವ ಹಾರ್ಯವಾದ ಕಾರ್ಯವನ್ನು ಮಾಡುತ್ತದೆ " ಎಂದು ಉಲ್ಲೇಖ ಮಾಡಿ ರುವರಲ್ಲದೆ " ಈ ಕಠಿಣ ಕಾರ್ಯಕ್ಕೆ ತಮ್ಮ ವಿರಾಮ ಕಾಲವನ್ನು ವಿನಿ ಯೋಗಿಸುತ್ತಿರುವ ಮೆಂಬರ ಜನರ ಸಾರ್ವಜನಿಕ ಹಿತಬುದ್ಧಿಯನ್ನು " ಕೊಂಡಾಡಿರುತ್ತಾರೆ. ಮೇಲೆ ಹೇಳಿದಂತೆ ನಾಮದಾರರವರು ಮ್ಯಾಜಿಕ್ ಲ್ಯಾಂಟರ್ನದ ಎರಡು ಪ್ರಯೋಗಗಳ ಕಾಲಕ್ಕೆ ಸ್ವತಃ ಇದ್ದದ್ದು ಹೆಚ್ಚಿನ ಉತ್ತೇಜನಕ್ಕೆ ಕಾರಣವಾಯಿತು. ಜಿಲ್ಹೆಯ ಮುಖ್ಯಾಧಿಕಾರಿಗಳು ಅಧ್ಯಕ್ಷ ರಾಗಿರುವದೂ ಮತ್ತು ಸಿವ್ಹಿಲ್ ಸರ್ಜನರು ವ್ಯವಸ್ಥಾಪಕ ಸಭೆಯ ಚೇರ ಮನ್ನರಾಗಿರುವದೂ ಅಸೋಸಿಯೇಶನದ ಭಾಗ್ಯವೆಂದೇ ತಿಳಿಯಬೇಕಲ್ಲದೆ ಈ ಇಬ್ಬರು ಅಧಿಕಾರಿಗಳಿಂದ ಆಗಾಗ್ಗೆ ದೊರೆಯುವ ಉಪದೇಶವೂ ಸಹಾಯವೂ ಮಾರ್ಗದರ್ಶಿತ್ವವೂ ಇವುಗಳು ನಿಜವಾಗಿಯೂ ಅಮೌಲಿಕ ವಾಗಿರುತ್ತವೆ.

ಸಾರ್ವಜನಿಕ ಸಹಾಯವು ಮತ್ತು ಕೃತಜ್ಞತಾ ಸಮರ್ಪಣೆ.

೧೫. ಸನ್ನ ೧೯೧೫ನೇ ಇಸ್ವಿಯ ಜುಲೈ ೩೧ನೇ ತಾರೀಖಿಗೆ ಅಸೋಸಿಯೇಶನವು ತನ್ನ ಮೂರು ವರ್ಷಗಳನ್ನು ಪೂರ್ಣ ಮಾಡಿತು. ಈ ಅವಧಿಯಲ್ಲಿ ಅದು ತನ್ನ ಸಂಖ್ಯಾಬಲವನ್ನೂ ಸಾಂಪತ್ತಿಕ ಸಾಮರ್ಥ್ಯವನ್ನೂ ಕಾಯ್ದುಕೊಂಡಿರುವದಿಷ್ಟೇ ಅಲ್ಲದೆ ಪ್ರತಿವರ್ಷ ಇವುಗಳನ್ನು ಹೆಚ್ಚಿಸುತ್ತ ತನ್ನ ಅಸ್ತಿತ್ವವನ್ನು ಸ್ಥಿರಗೊಳಿಸುತ್ತ ನಡೆದಿದೆ. ಮೊದಲನೇ ವರ್ಷ ೪೯ ಜನ ಲೋಕಲ್ ಸೆಕ್ರೆಟರಿಗಳನ್ನು ನೇಮಿಸಿಕೊಂಡು ಕೆಲಸ ಮಾಡಿ, ಎರಡನೇ ವರ್ಷ ಅಂದರೆ ೧೯೧೩–೧೪ ರಲ್ಲಿ ೮೪ ಜನರನ್ನು ನೇಮಿಸಿತು. ಈ ವರ್ಷ ೧೯೭ ಸಾರ್ವಜನಿಕ ಹಿತ ಬುದ್ಧಿಯುಳ್ಳ ಗೃಹಸ್ಥರು ಈ ಲೋಕೋಪಕಾರಕ ಕೆಲಸದಲ್ಲಿ ಸನ್ಮಾನಿತ ಲೋಕಲ್ ಸೆಕ್ರೆಟರಿಗಳಾಗಿ ಕೆಲಸ ಮಾಡುತ್ತಿರುವರು. ಇವರುಗಳಲ್ಲಿ ಎಷ್ಟೋ ಜನರು ತಾಲೂಕು ಮತ್ತು ಡಿಸ್ಟ್ರಿಕ್ಟ ಲೋಕಲ್ ಬೋರ್ಡುಗಳ ಹಾಗು ಮ್ಯುನಿಸಿಪಾಲಿಟಿಗಳ ಮೆಂಬರರೂ, ಆನರರೀ ಮ್ಯಾಜಿಸ್ಟ್ರೇಟರೂ, ಪೆನಶನ್‌ಪಡೆದ ಅಧಿಕಾರಿಗಳೂ, ಪದವೀಧರರೂ, ಮತ್ತು ಧನವಂತರಾದ ಬೇರೆ ಸದ್ಗೃಹಸ್ಥರೂ ಇರುವರು. ಈ ಅಸೋಸಿಯೇಶನವು ಸಂಪಾದಿಸಿದ ಲೋಕಪ್ರೀತಿಯನ್ನೂ ಅದರ ಉಪಯುಕ್ತತೆಯನ್ನೂ ತೋರಿಸಿಕೊಡುವದಕ್ಕೆ ಇದೊಂದೇ ಸಂಗತಿಯು ಸಾಕಾಗಬಹುದೆಂದು ತೋರುತ್ತದೆ. ಮೆಂಬರ ಜನರ ಸಂಖ್ಯೆಯು ಮೊದಲನೇ ವರ್ಷ ೪೭೬೦ ಇದ್ದದ್ದು ಎರಡನೇ ವರ್ಷ ೫೨೩೭ ಆಯಿತು. ಮತ್ತು ಈ ೩ನೇ ವರ್ಷದಲ್ಲಿ ೫೬೯ ಆಗಿರುತ್ತದೆ. ಅಸೋಸಿಯೇಶನದಿಂದ ೬೭ ಪತ್ರಿಕೆಗಳು ಪ್ರಸಿದ್ಧವಾದವು; ೮೬೨ ವ್ಯಾಖ್ಯಾನಗಳಾದವು; ೧೯೫ ಗ್ರಾಮಸಂಸ್ಥೆಗಳನ್ನು ಸ್ಥಾಪಿಸಿತು. ಮತ್ತು ಇಡೀ ಜಿಲ್ಲೆಯೊಳಗಿನ ಒಂದುಮೂರಾಂಶ ಊರುಗಳಲ್ಲಿ ಗ್ರಾಮಾರೋಗ್ಯ ರಕ್ಷಣೆಯ ಉಪಾಯವನ್ನು ಪ್ರಾರಂಭಿಸಿತು. ಪ್ಲೇಗಪ್ರತಿಬಂಧಕ ಉಪಾಯವಾದ ಇನಾಕ್ಯುಲೇಶನವನ್ನು ಮತ್ತು ಕ್ವಿನಾಯಿನದ ಚಿಕಿತ್ಸೆಯನ್ನು ಇದು ಲೋಕಪ್ರಿಯಮಾಡಿತು. ಸಾರ್ವಜನಿಕದವರಲ್ಲಿ ಆರೋಗ್ಯದ ಅಭಿರುಚಿಯು ಹುಟ್ಟುವಂತೆಯೂ ಅಸೋಸಿಯೇಶನವು ದಿನದಿನಕ್ಕೆ ಅಭಿವೃದ್ಧಿಯನ್ನು ಹೊಂದಿ ಅದರ ಉಪಯುಕ್ತತೆಯು ಹೆಚ್ಚಾಗಬೇಕೆಂಬ ಆಕಾಂಕ್ಷೆಯು ನೆಲೆಗೊಳ್ಳುವಂತೆಯೂ ಅವರಲ್ಲಿ ಜ್ಞಾನಪ್ರಸಾರವನ್ನು

ಮಾಡುವದೇ ಅಸೋಸಿಯೇಶನದ ಮೂಲ ಉದ್ದೇಶವಾಗಿದೆ. ಈ ಧ್ಯೇಯವು ತಕ್ಕಮಟ್ಟಿಗಾದರೂ ಸಾಧ್ಯವಾಗಿರುವದು ಅಸೋಸಿಯೇಶನದ ಕಾರ್ಯಕರ್ತೃತ್ವದ ಅಪ್ರತ್ಯಕ್ಷವಾದ ಪರಂತು ಅತ್ಯಂತ ಮಹತ್ವದ್ದಾದ ಪರಿಣಾಮವಾಗಿದೆ. ಅಸೋಸಿಯೇಶನಕ್ಕೆ ಸಂಬಂಧಿಸಿದ ಅನೇಕ ಉಪಯುಕ್ತ ಸೂಚನೆಗಳು (ಕ ಪರಿಶಿಷ್ಟವನ್ನು ನೋಡಬೇಕು.) ಬುದ್ಧಿವಂತರಾದ ಬಹು ಜನರಿಂದ ನಮ್ಮ ಕಡೆಗೆ ಬಂದಿರುವವರ ಮೇಲಿಂದ ಈ ಸಂಗತಿಯು ಸ್ಪಷ್ಟವಾಗಿ ತಿಳಿದು ಬರುತ್ತದೆ. ಅಲ್ಲಲ್ಲಿ ಸ್ಯಾನಿಟರೀ ಕಮೀಟಿಗಳು ಸ್ಥಾಪನವಾಗಿರುವದೂ, ಅಸೋಸಿಯೇಶನದಿಂದ ಏರ್ಪಡಿಸಲ್ಪಟ್ಟ ವ್ಯಾಖ್ಯಾನಗಳಿಗೂ ಸಭೆಗಳಿಗೂ ಬಹು ಜನರು ಕೂಡುವದು, ಹುಬ್ಬಳ್ಳಿ ಮುಂಡರಿಗಿಯಂಥ ತಾಲೂಕು ಮತ್ತು ಮಹಾಲಿನ ಸ್ಥಳಗಳಲ್ಲಿ ವಾರ್ಷಿಕ ಸಭೆಗಳಾಗಿ ಇಡೀ ವರ್ಷ ಮಾಡಿದ ಕೆಲಸದ ಸಿಂಹಾವಲೋಕನ ಮಾಡುವದೂ, ಇವೆಲ್ಲವುಗಳು ನಿಜವಾಗಿಯೂ ಆರೋಗ್ಯ ರಕ್ಷಣೆಯ ಕಡೆಗೆ ಜನರ ಚಿತ್ತವು ಹೊರಳಿರುವದೆಂಬುದನ್ನು ತೋರಿಸಿ ಕೊಡುವ ಲಕ್ಷಣವಾಗಿವೆ. ಸದ್ಗೃಹಸ್ಥರೇ, ಈ ಪರಿಣಾಮವು ತಮ್ಮಿಂದ ಉಂಟಾಗಿದೆ. ತಮ್ಮ ಅಂತಃಕರಣ ಪೂರ್ವಕವಾದ ಸ್ವಾರ್ಥವಿರಹಿತ ಪರಿಶ್ರಮದಿಂದಲ್ಲದೆ ಅಸೋಸಿಯೇಶನಕ್ಕೆ ಇಷ್ಟು ಯಶಸ್ಸು ದೊರೆಯುತ್ತಿದ್ದಿಲ್ಲ. ಮತ್ತು ತನಗಾಗಿ ಮಾಡಿದ ಉತ್ತಮ ಕೆಲಸವನ್ನು ಕೃತಜ್ಞತಾ ಪೂರ್ವಕವಾಗಿ ಒಪ್ಪಿಕೊಳ್ಳುವದರಲ್ಲಿ ಅಸೋಸಿಯೇಶನವು ಯಾವಾಗಲೂ ತತ್ಪರವಾಗಿರದಿದ್ದರೆ ಅದಕ್ಕೆ ಕರ್ತವ್ಯ ಪರಾಂಙ್ಮುಖತೆಯ ದೋಷವು ತಟ್ಟದಿರದು. ಇದೇ ಉದ್ದೇಶದಿಂದ ಕಳೆದ ಎರಡು ವರ್ಷಗಳಲ್ಲಿ ೨೩ ಬೆಳ್ಳಿಯ ಪದಕಗಳನ್ನೂ ೩೯ ಸರಟಿಫಿಕೇಟುಗಳನ್ನೂ ಎರಡು ರುಮಾಲುಗಳನ್ನೂ ಬಹುಮಾನವಾಗಿ ಕೊಟ್ಟಿರುವದಲ್ಲದೆ ಈ ಸಾರೆಯೂ ಕೆಲವು ಜನರಿಗೆ ಪದಕಗಳನ್ನೂ ಸರಟೀಫಿಕೇಟುಗಳನ್ನೂ ಬೇರೆ ಇನಾಮುಗಳನ್ನೂ ಕೊಡುವದನ್ನು ಗೊತ್ತುಪಡಿಸಿದೆ. ಈ ಬಗೆಯ ಪಾರಿತೋಷಕಗಳನ್ನು ಹೊಂದುವವರ ಅಭಿನಂದನವನ್ನು ಮಾಡುವದಲ್ಲದೆ, ಅಸೋಸಿಯೇಶನದ ಕಾರ್ಯ ಸಾಧನಲ್ಲಿ ಇದೇ ಪ್ರಕಾರ ಮನಮುಟ್ಟಿ ಉದ್ಯೋಗ ಮಾಡಿ, ಈ ಮಾದರಿಯ ಸನ್ಮಾನವನ್ನು ಪಡೆಯಬೇಕೆಂಬ ಲವಲವಿಕೆಯು ಬೇರೆಯವರಲ್ಲಿಯೂ ಹುಟ್ಟುವಂತೆ ಎಲ್ಲರೂ ಪ್ರಯತ್ನಿಸುವರೆಂಬ ಆಶೆಯನ್ನು ಕಳೆದ ವರ್ಷದಂತೆಯೇ ಈಗಾ

ದರೂ ಅಸೋಸಿಯೇಶನವು ವ್ಯಕ್ತಪಡಿಸುತ್ತದೆ. ಇಂಥ ಬಹುಮಾನಗಳಿಗೆ ಯೋಗ್ಯರಾಗುವಂತೆ ವಿಶೇಷವಾಗಿ ಉತ್ತಮ ಕೆಲಸ ಮಾಡಿದವರು ಇನ್ನೂ ಅನೇಕರಿರುವರೆಂಬದನ್ನು ಅಸೋಸಿಯೇಶನವು ಬಲ್ಲದು. ಆದರೆ ಅಸೋಸಿಯೇಶನದ ಈಗಿನ ಬಾಲ್ಯಾವಸ್ಥೆಯಲ್ಲಿ ಅದರ ಸಾಂಪತ್ತಿಕ ಪರಿಘವನ್ನು ಬೆಳಿಸುವದು ಶಕ್ಯವಾಗಿಲ್ಲದ ಮೂಲಕ ಹಣವೆಚ್ಚವಾಗುವಂಥ ಯಾವ ಸನ್ಮಾನವನ್ನಾದರೂ ಮುಂದಿನ ಪ್ರಸಂಗಗಳಿಗೆ ಹಿಂದಿಡಬೇಕಾಗುತ್ತದೆ.

೧೬. ಈಗಿನ ವ್ಯವಸ್ಥಾಪಕ ಸಭೆಯು ೧೫ ಜನ ಮೆಂಬರರ ಮತ್ತು ಕಾರ್ಯಕಾರಿ ಅಧಿಕಾರಿಗಳ ಕಾರ್ಯನಿರ್ವಾಹದ ಅವಧಿಯು ಅಸೋಸಿಯೇಶನದ ನಿಯಮಗಳ ೧೨ ನೇ ನಿಯಮಾನುಸಾರ ಮೂರು ವರ್ಷಗಳದಾಗಿದೆ. ಈ ಅವಧಿಯು ಮುಗಿದದರಿಂದ ಈಗ ಅವರು ನಿವೃತ್ತರಾಗುತ್ತಾರೆ. ವ್ಯವಸ್ಥಾಪಕ ಸಭೆಯು ಮೆಂಬರರ ಸಂಖ್ಯೆಯನ್ನು ಈಗ ೩೦ ಮಾಡಿರುತ್ತದೆ; ಮತ್ತು ತಾವೆಲ್ಲರೂ ಈಗ ತಮ್ಮೊಳಗಿನ ಜನರನ್ನು ಆರಿಸಿ ಬೇರೆ ವ್ಯವಸ್ಥಾಪಕ ಸಭೆಯನ್ನು ಗೊತ್ತುಪಡಿಸಬೇಕಾಗಿದೆ. ಯಾವದಾದರೊಂದು ಹೊಸಕಾರ್ಯವನ್ನು ಸ್ವಾಭಾವಿಕವಾಗಿಯೇ ಆವರಿಸಿರುವ ಬಹುಬಗೆಯ ಅನಾನುಕೂಲತೆಗಳಿದ್ದರೂ ಈಗ ಅಸೋಸಿಯೇಶನವು ಇರುವ ಪರಿಸ್ಥಿತಿಗೆ ಅದನ್ನು ತಂದು ಮುಟ್ಟಿಸುವದಕ್ಕೆ ಅವಶ್ಯಕವಾದ ಯಾವ ಪರಿಶ್ರಮದಲ್ಲಿಯೂ ಏನೂ ಕೊರತೆಯುಂಟಾಗಲಿಲ್ಲವೆಂಬದಾಗಿ ಈಗಿನ ವ್ಯವಸ್ಥಾಪಕ ಸಭೆಗೆ ಆತ್ಮವಿಶ್ವಾಸಪೂರ್ವಕವಾದ ಸಮಾಧಾನವುಂಟಾಗಿದೆ. ತಮ್ಮೆಲ್ಲರಿಂದ ದೊರೆತ ಅಂತಃಕರಣಪೂರ್ವಕವಾದ ಸಹಾಯಕ್ಕಾಗಿ ವ್ಯವಸ್ಥಾಪಕ ಸಭೆಯವರು ತಮಗೆ ಕೃತಜ್ಞತೆಗಳನ್ನು ಸಮರ್ಪಿಸುವದಲ್ಲದೆ, ಈ ಚಿಕ್ಕ ಮಗುವನ್ನು ತಮ್ಮ ದಯಾರ್ದ್ರ ಪೋಷಣೆಗೆ ಸಮರ್ಪಿಸಿ, ಅದಕ್ಕೆ ದೀರ್ಘಾಯುಷ್ಯವೂ, ಅತ್ಯಂತ ಮಹತ್ವದ ಲೋಕಕಲ್ಯಾಣವನ್ನೊಳಗೊಂಡಿರುವ ಅದರ ಕಾರ್ಯ ನಿರ್ವಾಹದಲ್ಲಿ ಸಂಪೂರ್ಣವಾದ ಯಶಸ್ಸು ದೊರೆಯುವಂಥ ಉರ್ಜಿತ ಪರಿಸ್ಥಿತಿಯೂ ಉಂಟಾಗಲೆಂಬ ಅಭಿಲಾಷೆಯನ್ನು ವ್ಯಕ್ತಪಡಿಸುತ್ತಾರೆ.

ಧಾರವಾಡ.
೧೨ ಅಕ್ಟೋಬರ ೧೯೧೫.

ಗೋಪಾಳ ರಾಮಚಂದ್ರ ಬಾಳೇಕುಂದ್ರಿ.
ಆನರರೀ ಸೆಕ್ರೆಟರೀ,
ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರೀ ಅಸೋಸಿಯೇಶನ್.

ಅಧ್ಯಕ್ಷರ ಭಾಷಣವು.

ಕಳೆದ ಎರಡು ದಿವಸಗಳಲ್ಲಿ ನಾವು ಸಭೆಗಳ ಮಾಲಿಕೆಯಲ್ಲಿಯೇ ತೊಡಗಿರುವೆವೆಂದು ಹೇಳಬಹುದು; ಆದದರಿಂದ ನಾನು ನಿಮ್ಮನ್ನು ಬಹಳ ಹೊತ್ತು ಕೂಡಿಸಬಯಸುವದಿಲ್ಲ. ಈ ಅಸೋಸಿಯೇಶನವು ಇಲಾಖೆಯೊಳಗಿನ ಈ ಮಾದರಿಯ ಸಂಸ್ಥೆಗಳಿಗೆ ಮಾರ್ಗದರ್ಶಕವಾಗಿದೆ ಮತ್ತು ಇದು ತನ್ನ ಕಾರ್ಯನಿರ್ವಾಹದಲ್ಲಿ ಅಭೂತಪೂರ್ವವಾದ ಪ್ರಗತಿಯನ್ನು ಹೊಂದಿರುವದೆಂಬದು ಹೆಚ್ಚಿನ ಸಂತೋಷಕ್ಕೆ ಕಾರಣವಾಗಿದೆ. ಇದರ ರಿಪೋರ್ಟುಗಳ ಮೇಲಿಂದಂತೂ ಅರ್ವಾಚೀನ ಆರೋಗ್ಯರಕ್ಷಣೆಯ ವಿಷಯದಲ್ಲಿ ಜನರನ್ನು ಸುಶಿಕ್ಷಿತ ಮಾಡುವ ಕಾರ್ಯದಲ್ಲಿ ಇದು ಸರ್ವೋತ್ಕೃಷ್ಟವಾಗಿ ಕೆಲಸ ನಡಿಸಿರುವದೆಂಬದು ಸ್ಪಷ್ಟವಾಗುತ್ತದೆ. ವೈದ್ಯಕಿಯ ವ್ಯವಸಾಯುವನ್ನೇ ಅನವಶ್ಯಕವಾಗಿ ಮಾಡುವದಕ್ಕಾಗಿ ಈ ಅಸೋಸಿಯೇಶನವು ವಿಶ್ವಪ್ರಯತ್ನ ನಡಿಸಿರುವದಾದರೂ ಸಿವ್ಹಿಲ್‌ಸರ್ಜನರಿಂದ ಆರಂಭ ಮಾಡಿ ಅನೇಕ ಮಂದಿ ಡಾಕ್ಟರರು ಇದರ ವ್ಯವಸ್ಥಾಪಕ ಸಭೆಯ ಮೆಂಬರರಾಗಿ ಕೆಲಸ ಮಾಡುತ್ತಿರುವದು ಸಮಾಧಾನಕರವಾಗಿದೆ.

೨. ಇನಾಕ್ಯೂಲೇಶನದ ಪ್ರಸಾರವನ್ನು ಬೆಳೆಸುವ ಕೆಲಸದಲ್ಲಿ ಅಸೋಸಿಯೇಶನವು ಪ್ರಚಂಡವಾದ ಉದ್ಯೋಗ ಮಾಡಿದೆ. ಪ್ಲೇಗಿನ ಹಾವಳಿಯು ನಿಃಸಂದೇಹವಾಗಿ ಭೀಕರವಾಗಿರುವದು. ಆದರೂ ಇನಾಕ್ಯೂಲೇಶನ್ ಮಾಡಿಸಿಕೊಳ್ಳುವದು ನಮಗೆ ಸಾಧ್ಯವಾಗಿದ್ದ ಬಳಿಕ ಪ್ಲೇಗಿನಿಂದ ಜನರು ಸಾಯುವ ಪ್ರಸಂಗವೇ ಉಳಿಯುವದಿಲ್ಲ. ಈಗಿನ ಕಾಲಕ್ಕೆ ಪ್ಲೇಗಿನಿಂದ ಸಾಯುವ ಮನುಷ್ಯನು ಆತ್ಮಘಾತ ಮಾಡಿಕೊಳ್ಳುತ್ತಾನೆ. ಮನುಷ್ಯ ಜಾತಿಯ ಭಯಂಕರ ವೈರಿಗಳಾದ ಮಲೇರಿಯಾ, ಮಾರಿಕಾ, ನಾರು ಮುಂತಾದ ಸಾಮಾನ್ಯ ರೋಗಗಳ ವಿಷಯವೂ ತುಸು ಮಟ್ಟಿಗೆ ಇದರಂತೆಯೇ ಇರುತ್ತದೆ. ಸುಧಾರಿಸಿದ ಆರೋಗ್ಯರಕ್ಷಣೆಯ ಉಪಾಯಗಳು ಇವೆಲ್ಲವುಗಳಿಗೆ ಪ್ರತಿಬಂಧಕವಾಗಿವೆ. ಈ ಸಾಮಾನ್ಯ ರೋಗಗಳಿಂದ ಹ್ಯಾಗೆ ದೂರ ಇರಬಹುದೆಂಬದನ್ನು ಜಿಲ್ಹೆಯ ಜನರಿಗೆ ತಿಳಿಸಿ ಕೊಡುವದೇ ಅಸೋಸಿಯೇಶನದ ಮುಖ್ಯ ಕೆಲಸವಾಗಿದೆ.

೩. ಜನರ ಎಲ್ಲ ಸಾಧಾರಣ ಉದ್ಯೋಗ ವ್ಯವಸಾಯಗಳು ಆರೋಗ್ಯವನ್ನೇ ಅವಲಂಬಿಸಿರುವವೆಂಬ ಸಂಗತಿಯಿಂದ ನಮ್ಮ ಕೆಲಸದ ಮಹ

ತ್ರವು ಎಷ್ಟು ಉಂಟೆಂಬದು ಸ್ಪಷ್ಟವಾಗುತ್ತದೆ. ಅನಾರೋಗ್ಯ ಪರಿಸ್ಥಿತಿಯ ಮೂಲಕವಾಗಿ ನಾವು ಯಾವಾಗಲೂ ಬೇನೆ ಬೀಳುತ್ತ ಹೋದರೆ, ನಮ್ಮ ಹುಡುಗರನ್ನು ಸಾಲೆಗೆ ಕಳಿಸಲಾರೆವು, ನಮ್ಮ ಹೊಲಗೆಲಸವು ಸಾಗಲಾರದು, ನಮ್ಮ ಬೇರೆ ಬೇಸಾಯುಗಳೆಲ್ಲ ಮುಗ್ಗಿ ಹೋಗುವವು. ಆದದರಿಂದ ಆರೋಗ್ಯರಕ್ಷಣೆಯ ಮಹತ್ವವನ್ನು ಬೆಳಸಿ ಹೇಳುವದು ಶಕ್ಯವಾಗಿಲ್ಲ. ಔಷಧೋಪಚಾರದಿಂದ ಬೇನೆಗಳು ಗುಣವಾಗಬಹುದು ಪರಂತು ಆರೋಗ್ಯರಕ್ಷಣೋಪಾಯದಿಂದ ಅವುಗಳ ಪ್ರತಿಬಂಧವಾಗುತ್ತದೆ.

೪. ನಾನು ನಮ್ಮ ಮುಖ್ಯ ಶತ್ರುಗಳ ವಿಷಯವಾಗಿ ಹುಬ್ಬಳ್ಳಿಯಲ್ಲಿ ಹೇಳಿದ ಕೆಲವು ಸಂಗತಿಗಳನ್ನು ಇಲ್ಲಿ ಮತ್ತೆ ಹೇಳಬೇಕೆನ್ನುತ್ತೇನೆ; ಇದಕ್ಕಾಗಿ ನೀವು ನನ್ನನ್ನು ಕ್ಷಮಿಸಬಹುದು. ನಾವು ಮುಖ್ಯವಾಗಿ ಆರು ಪದಾರ್ಥಗಳೊಡನೆ ಹೋರಾಡಬೇಕಾಗುತ್ತದೆ. ಅವುಗಳ್ಯಾವವೆಂದರೆ:— ನೊಣಗಳು, ಚಿಕ್ಕಾಡಗಳು, ಧೂಳ, ದುರ್ವಾಸನೆ, ಅಸ್ವಚ್ಛ ಹವೆ, ಮತ್ತು ಕೊಳಚಿ ನೀರು. ಮಾರಿಕಾ, ಕ್ಷಯ, ವಿಷಮ ಮುಂತಾದ ಬೇನೆಗಳು ನೊಣಗಳಿಂದ ಹ್ಯಾಗೆ ಹುಟ್ಟುತ್ತವೆ ಮತ್ತು ಹಬ್ಬುತ್ತವೆಂಬದು ಈಗ ಸಿದ್ಧವಾಗಿ ಹೋಗಿದೆ. ಪ್ಲೇಗ ಬೇನೆಯು ಇಲಿಗಳ ಮೈಮೇಲಿನ ಚಿಕ್ಕಾಡಗಳಿಂದ ಪ್ರಸಾರ ಹೊಂದುತ್ತದೆಂಬದನ್ನು ನಾವು ಈಗ ಕಂಡು ಹಿಡಿದಿದ್ದೇವೆ. ಧೂಳದಲ್ಲಿ ಪ್ರಾಣಹಾರಕ ಜಂತುಗಳು ಯಾವಾಗಲೂ ತುಂಬಿರುತ್ತವಾದರೂ ಕೆಳವರ್ಗದವರು ಇದು ಹೊಲಸು ಎಂದು ತಿಳಿಯುವದೇ ಇಲ್ಲ. ಕೆಟ್ಟ ವಾಸನೆಯು ಸುತ್ತುಮುತ್ತಿನ ಭಯಂಕರ ಹೊಲಸಿನ ಲಕ್ಷಣವೇ ಆಗಿದೆ. ಅಸ್ವಚ್ಛ ಹವೆಯಿಂದ ಎಲ್ಲ ಬಗೆಯ ಕ್ಷಯರೋಗವು ಉಂಟಾಗುತ್ತದೆ. ಕೊಳಚಿನೀರು ಮಲೇರಿಯಾ ಜ್ವರಕ್ಕೆ ತವರುಮನೆಯಾಗಿದೆ. ಇಂಥ ಕೆಲವು ಮಹತ್ವದ ಸಂಗತಿಗಳ ಕಡೆಗೆ ನಾವು ಲಕ್ಷ್ಯ ಕೊಟ್ಟರೆ ಹಳ್ಳಿಗಳನ್ನು ಸುಧಾರಿಸುವ ನಮ್ಮ ಪ್ರಯತ್ನವು ವಿಶೇಷ ಫಲಕಾರಿಯಾಗಬಹುದು.

ಅಸೋಸಿಯೇಶನದ ಮತ್ತು ಅದಕ್ಕೆ ಕೇವಲ ಆತ್ಮಸ್ವರೂಪರಾಗಿರುವರೆನ್ನಬಹುದಾದ ಆನರರೀ ಸೆಕ್ರೆಟರಿ ಮಿ|| ಬಾಳೆಕುಂದ್ರಿಯವರ ಮತ್ತು ಇವರೊಂದಿಗೆ ಸೇರಿಕೊಂಡು ಬಹುಪರಿಶ್ರಮಮಾಡುವ ಬೇರೆ ಸದ್ಗೃಹಸ್ಥರ ಸಮೂಹದ ಅವಿಶ್ರಾಂತ ಪರಿಶ್ರಮದ ಉಲ್ಲೇಖ ಮಾಡಿ

ನಾನು ನನ್ನ ಭಾಷಣವನ್ನು ಮುಗಿಸಬೇಕೆನ್ನುತ್ತೇನೆ. ಈ ಸಭೆಗೆ ಬಹುಸಂಖ್ಯಾಕ ಜನರು ಕೂಡಿರುವದು ನಮ್ಮ ಮುಂದಿನ ಮಹತ್ವದ ಅಭಿಯೋಗಕ್ಕೆ ಯಶಸ್ಕರವಾದ ಶುಭಶಕುನವೆಂದು ತಿಳಿದು ನಿಮ್ಮೆಲ್ಲರಿಗೂ ಬಹಳವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಧಾರವಾಡ.
೧೨ನೇ ಅಕ್ಟೋಬರ ೧೯೧೫ ಇಸ್ವಿ.

ಏ. ಈ. ಎಲ್. ಇಮ್ಯಾನ್ಯುಅಲ್,
ಕಲೆಕ್ಟರ ಮತ್ತು ಪ್ರೆಸಿಡೆಂಟ,
ಧಾ. ಡಿ|| ಸ್ವಾ. ಅಸೋಸಿಯೇಶನ್.

ತ್ವವು ಎಷ್ಟು ಉಂಟೆಂಬದು ಸ್ಪಷ್ಟವಾಗುತ್ತದೆ. ಅನಾರೋಗ್ಯ ಪರಿಸ್ಥಿತಿಯ ಮೂಲಕವಾಗಿ ನಾವು ಯಾವಾಗಲೂ ಬೇನೆ ಬೀಳುತ್ತ ಹೋದರೆ, ನಮ್ಮ ಹುಡುಗರನ್ನು ಸಾಲೆಗೆ ಕಳಿಸಲಾರೆವು, ನಮ್ಮ ಹೊಲಗೆಲಸವು ಸಾಗಲಾರದು, ನಮ್ಮ ಬೇರೆ ಬೇಸಾಯಗಳೆಲ್ಲ ಮುಗ್ಗಿ ಹೋಗುವವು. ಆದದರಿಂದ ಆರೋಗ್ಯರಕ್ಷಣೆಯ ಮಹತ್ವವನ್ನು ಬೆಳಸಿ ಹೇಳುವದು ಶಕ್ಯವಿಲ್ಲ. ಔಷಧೋಪಚಾರದಿಂದ ಬೇನೆಗಳು ಗುಣವಾಗಬಹುದು ಪರಂತು ಆರೋಗ್ಯರಕ್ಷಣೋಪಾಯದಿಂದ ಅವುಗಳ ಪ್ರತಿಬಂಧವಾಗುತ್ತದೆ.

೪. ನಾನು ನಮ್ಮ ಮುಖ್ಯ ಶತ್ರುಗಳ ವಿಷಯವಾಗಿ ಹುಬ್ಬಳ್ಳಿಯಲ್ಲಿ ಹೇಳಿದ ಕೆಲವು ಸಂಗತಿಗಳನ್ನು ಇಲ್ಲಿ ಮತ್ತೆ ಹೇಳಬೇಕೆನ್ನುತ್ತೇನೆ; ಇದಕ್ಕಾಗಿ ನೀವು ನನ್ನನ್ನು ಕ್ಷಮಿಸಬಹುದು. ನಾವು ಮುಖ್ಯವಾಗಿ ಆರು ಪದಾರ್ಥಗಳೊಡನೆ ಹೋರಾಡಬೇಕಾಗುತ್ತದೆ. ಅವುಗಳ್ಯಾವವೆಂದರೆ:— ನೊಣಗಳು, ಚಿಕ್ಕಾಡಗಳು, ಧೂಳ, ದುರ್ವಾಸನೆ, ಅಸ್ವಚ್ಛ ಹವೆ, ಮತ್ತು ಕೊಳಚಿ ನೀರು. ಮಾರಿಕಾ, ಕ್ಷಯ, ವಿಷಮ ಮುಂತಾದ ಬೇನೆಗಳು ನೊಣಗಳಿಂದ ಹ್ಯಾಗೆ ಹುಟ್ಟುತ್ತವೆ ಮತ್ತು ಹಬ್ಬುತ್ತವೆಂಬದು ಈಗ ಸಿದ್ಧವಾಗಿ ಹೋಗಿದೆ. ಪ್ಲೇಗ ಬೇನೆಯು ಇಲಿಗಳ ಮೈಮೇಲಿನ ಚಿಕ್ಕಾಡಗಳಿಂದ ಪ್ರಸಾರ ಹೊಂದುತ್ತದೆಂಬದನ್ನು ನಾವು ಈಗ ಕಂಡು ಹಿಡಿದಿದ್ದೇವೆ. ಧೂಳದಲ್ಲಿ ಪ್ರಾಣಹಾರಕ ಜಂತುಗಳು ಯಾವಾಗಲೂ ತುಂಬಿರುತ್ತವಾದರೂ ಕೆಳವರ್ಗದವರು ಇದು ಹೊಲಸು ಎಂದು ತಿಳಿಯುವದೇ ಇಲ್ಲ. ಕೆಟ್ಟ ವಾಸನೆಯು ಸುತ್ತುಮುತ್ತಿನ ಭಯಂಕರ ಹೊಲಸಿನ ಲಕ್ಷಣವೇ ಆಗಿದೆ. ಅಸ್ವಚ್ಛ ಹವೆಯಿಂದ ಎಲ್ಲ ಬಗೆಯ ಕ್ಷಯರೋಗವು ಉಂಟಾಗುತ್ತದೆ. ಕೊಳಚಿನೀರು ಮಲೇರಿಯಾ ಜ್ವರಕ್ಕೆ ತವರುಮನೆಯಾಗಿದೆ. ಇಂಥ ಕೆಲವು ಮಹತ್ವದ ಸಂಗತಿಗಳ ಕಡೆಗೆ ನಾವು ಲಕ್ಷ್ಯ ಕೊಟ್ಟರೆ ಹಳ್ಳಿಗಳನ್ನು ಸುಧಾರಿಸುವ ನಮ್ಮ ಪ್ರಯತ್ನವು ವಿಶೇಷ ಫಲಕಾರಿಯಾಗಬಹುದು.

ಅಸೋಸಿಯೇಶನದ ಮತ್ತು ಅದಕ್ಕೆ ಕೇವಲ ಆತ್ಮಸ್ವರೂಪರಾಗಿರುವರೆನ್ನಬಹುದಾದ ಆನರರೀ ಸೆಕ್ರೆಟರಿ ಮಿ|| ಬಾಳೆಕುಂದ್ರಿಯವರ ಮತ್ತು ಇವರೊಂದಿಗೆ ಸೇರಿಕೊಂಡು ಬಹುಪರಿಶ್ರಮಮಾಡುವ ಬೇರೆ ಸದ್ಗೃಹಸ್ಥರ ಸಮೂಹದ ಅವಿಶ್ರಾಂತ ಪರಿಶ್ರಮದ ಉಲ್ಲೇಖ ಮಾಡಿ

ನಾನು ನನ್ನ ಭಾಷಣವನ್ನು ಮುಗಿಸಬೇಕೆನ್ನುತ್ತೇನೆ. ಈ ಸಭೆಗೆ ಬಹು ಸಂಖ್ಯಾಕ ಜನರು ಕೂಡಿರುವದು ನಮ್ಮ ಮುಂದಿನ ಮಹತ್ವದ ಅಭಿಯೋಗಕ್ಕೆ ಯಶಸ್ಕರವಾದ ಶುಭಶಕುನವೆಂದು ತಿಳಿದು ನಿಮ್ಮೆಲ್ಲರಿಗೂ ಬಹಳವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಧಾರವಾಡ.
೧೨ನೇ ಅಕ್ಟೋಬರ ೧೯೧೫ ಇಸ್ವಿ.

ಎ. ಈ. ಎಲ್. ಇಮ್ಯಾನ್ಯುಅಲ್,
ಕಲೆಕ್ಟರ ಮತ್ತು ಪ್ರೆಸಿಡೆಂಟ,
ಧಾ. ಡಿ|| ಸ್ವಾ. ಅಸೋಸಿಯೇಶನ್.

ಅ. ಪರಿಶಿಷ್ಟ

ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರೀ ಅಸೋಸಿಯೇಶನದ ೧೯೧೫ನೇ ಇಸ್ವಿಯ ಜುಲೈ ತಿಂಗಳ ೩೧ನೇ ತಾರೀಖಿಗೆ ಮುಗಿಯುವ ವರ್ಷದ ಬಾಬತು ಲೆಖ್ಖ ಪತ್ರದ ಗೋಷವಾರೆಯು.

ಆದಾಯ.				ವ್ಯಯ.						
ತಪಸೀಲು.	ರಕಮು.			ತಪಸೀಲು.				ರಕಮು.		
	ರು.	ಆ.	ಪೈ.		ರು.	ಆ.	ಪೈ.	ರು.	ಆ.	ಪೈ.
೧೯೧೪ನೇ ಜುಲಯಿ ತಿಂಗಳ ೧ನೇ ತಾರೀಖಿನ ಶಿಲ್ಕು ...	೬೨೮೭	೬	೩	**ಆಫೀಸಿನ ಖರ್ಚು.**						
				ಪಗಾರ ಮುಂತಾದ್ದು :— ರು. ಆ. ಪೈ						
ಈ ವರ್ಷದಲ್ಲಿ ಜಮಾ:—				ಕಾರಕೂನನ ಕಾಯಂ ಪಗಾರ ೩೦೫ ೦ ೦						
ಕಾಣಿಕೆಗಳು:—				ಕಾರಕೂರನನ ಪ್ರವಾಸ ಭತ್ತೆ ೧೫ ೧ ೦						
ವರ್ಗಣಿ:—				ಶಿಪಾಯಿಯ ಪಗಾರ ೮ ರೂಪಾಯಿಯಂತೆ ೧೦೪ ೦ ೦						
				ಹಂಗಾಮಿ ಕಾರಕೂನನ ಪಗಾರ						
೫೬೮೭ ಸಾಧಾರಣ ಸಭಾಸದರಿಂದ ...	೫೦೨೩	೧೪	೦	೧೫ ರೂಪಾಯಿಯಂತೆ ೪೯ ೦ ೦						
ಪೋಸ್ಟ ಆಫೀಸ ಸೇವ್ಹಿಂಗ್ಸ ಬ್ಯಾಂಕಿನಲ್ಲಿದ್ದ				ಸಾದಿಲವಾರ :—	೪೭೩	೧	೦			
ರಕಮಿನ ಮೇಲಿನ ಬಡ್ಡಿಯು ...	೧೫೨	೧೦	೮	ಆಫೀಸ ಸಾದಿಲವಾರ	೯೩	೦	೯			
ಟೀಪು:— ಅಸೋಶಿಯೇಶನಕ್ಕೆ ಆದ ಉತ್ಪನ್ನ				ಪೋಸ್ಟೇಜ ಖರ್ಚು (ಮನಿ						
ದಲ್ಲಿ ಕೆಳಗೆ ಕಾಣಿಸಿದ ರಕಮಿನ				ಯಾರ್ಡರ ಚಾರ್ಜ ಸಹಿತ)	೭೮೭	೦	೩			
ಸಮಾವೇಶವಾಗಿಲ :—				ಛಾಪಣಾವಳ ಖರ್ಚು	೧೩೧೩	೪	೦			

ರು. ಆ. ಪೈ.

೬ ೮ ೦ ಕಳೆದು ಹೋದ ಮೆಡಲು ಜೀರೆ ಮಾಡಿಸಿ ಕೊಟ್ಟದ್ದಕ್ಕಾಗಿ ಬಂದ ರಕಮು.

೧೫ ೦ ೦ ತಪ್ಪಿ ಜಮಾ ಆದದ್ದು ಆದರೆ ಹಿಂದಿನಿಂದ ಅಗ್ರಿಕಲ್ಚರಲ್ ಅಸೋಸಿಯೇಶನಕ್ಕೆ ಕೊಟ್ಟದ್ದು.

೨೧ ೮ ೦ ಅಂತೂ.

೫೦ ೦ ೦ ಅಡವಾನ್ಸ ವಸೂಲ ಬಂದದ್ದು.

೭೧ ೮ ೦ ಅಂತೂ.

ಟೀಪು:— ಅಸೋಸಿಯೇಶನ್ನದ ಸ್ವಾ....ತ್ತಿದ ಕೆಳಗೆ ಕಾಣಿಸಿದ ಸಾಮಾನಗಳ ಬೆಲೆಯು:—

೧ ಕಪಾಟು	೫೫	೦	೦
೧ ಮೇಜು ಮತ್ತು ಪೆಟ್ಟಿಗೆ	೨೨	೦	೦
೨ ಖುರ್ಚಿಗಳು	೧೦	೦	೦
ಪುಸ್ತಕಗಳು	೧೨೫	೧೧	೦
೨೧ ಬೆಳ್ಳಿಪದಕಗಳು	೧೩೯	೮	೦
೨ ಮ್ಯಾಜಿಕ್‌ಲ್ಯಾಂಟರ್ನಗಳು ೧೯೬ ಸ್ಲಾಯಿಡ್ಸ ಸಹಿತಾ	೫೭೮	೧೫	೦
ಬೇರೀಜು ಮುಂ|| ಸಾ||	೯೩೧	೨	೦

ಬೇರೀಜು ಮುಂ|| ಸಾ|| ೯೩೧ ೨ ೦ | ೫೧೭೬ ೮ ೮

ಪುಸ್ತಕದ ಖರೀದಿ				೫೨	೩	೦			
ಔಷಧದ ಪೆಟ್ಟಿಗೆಯ ಖರೀದಿ				೧೯೪	೬	೦			
ಕಿರಕೋಳ ಖರ್ಚು:—									
ಗಾಡೀಬಾಡಿಗೆ ವಗೈರೆ	೪೦	೧೦	೦						
ಹೆಚ್ಚಿಗೆ ವಸೂಲ ಬಂದದ್ದು ಪರತ ಕೊಟ್ಟದ್ದು	೨	೦	೦						
ವಾರ್ಷಿಕ ಜನರಲ್ ಮೀಟಿಂಗದ ಖರ್ಚು	೧೦	೦	೦						
				೫೨	೧೦	*			
ಇನಾಮಿನ ಬಾ|| ಖರ್ಚು:—									
೨೦ ಬೆಳ್ಳಿಯ ಪದಕಗಳ ಕ್ರಯವು				೧೨೩	೮	೦			
ಮ್ಯಾಜಿಕ್ ಲ್ಯಾಂಟರ್ನದ ಬಾ|| ಖರ್ಚು							೩೦೮೯	೧	೦
ಎಸ್ಟ್ಯಾಬ್ಲಿಶ್‌ಮೆಂಟ:—									
ವ್ಯಾಖ್ಯಾನಗಳನ್ನು ಕೊಡುವ ಅಸಿಸ್ಟೆಂಟ ಸರ್ಜನ್‌ರಿಗೆ ಡೆಪ್ಯೂಟೇಶನ್ ಅಲಾವನ್ಸ	೭೫೦	೦	೦						
ವ್ಯಾಖ್ಯಾತರ ಪ್ರವಾಸ ಭತ್ತೆ	೪೭೭	೧೨	೦						
ಶಿಪಾಯಿಯ ಪಗಾರ ೮ ರು. ಯಂತೆ	೯೬	೦	೦						
ಸದರಿಯವನ ಪ್ರವಾಸ ಭತ್ತೆ	೨೪	೧೧	೯						
ಬೇರೀಜು ಮುಂ. ಸಾ||	೧೩೪೭	೭	೯				೩೦೮೯	೧	೦

ಆದಾಯ.							ವ್ಯಯ.									
ತಪಸೀಲು.				ರಕಮು.			ತಪಸೀಲು.				ರಕಮು.					
ಹಿಂ|| ಪಾ|| ಬೇರೀಜು	೯೩೧	೨	೦	೫೧೭೬	೮	೮	ಹಿಂದಿನ ಪಾನಿನ ಬೇರೀಜು	೧೩೭೮	೭	೯				೩೦೮೯	೧	೦
೧ ಗ್ರಾಮೋಫೋನು ೩೦ ರಿಕಾರ್ಡುಗಳು ಸಹಿತ	೨೩೭	೮	೦				ಆಪರೇಟರನ ಪಗಾರ ೧೦ ರು. ಯುತ	೧೨೮	೧	೦						
೧ ಬಕೇಟು	೦	೧೩	೦				ಸದರ ಪ್ರವಾಸ ಭತ್ತೆ	೩೬	೨	೩						
೧ ಕಂದೀಲು	೨	೧೨	೦								೧೫೪೨	೧೧	೦			
೨ ರಬ್ಬರಸ್ಟಾಂಪಗಳು	೪	೮	೦				**ಮ್ಯಾಜಿಕ್ ಲ್ಯಾಂಟರ್ನದ ಉಪಕರಣಗಳು ವಗೈರೆ:—**									
೨ ಹಿತ್ತಾಳಿಯ ಬಿಲ್ಲೆಗಳು	೩	೮	೦													
೩ ಕಟ್ಟಿಗೆಯ ಬ್ಲಾಕ್‌ಗಳು	೩೨	೦	೦													
೧ ಹೆಚ್ಚಿನ ಫೋರಜಟ್ ಬರ್ನರ	೨೪	೦	೦				೪೨ ಸ್ಲಾಯಿಡಗಳ ಖರೀದಿ				೬೧	೮	೦			
೧ ಸದರ ಸ್ಕ್ರೀನು	೨೦	೦	೦				**ಕಿರಕೂಳ ಬಾಬು:—**									
೪ ಕೀಲಿಗಳು	೪	೦	೦													
೧ ಔಷಧದ ಪೆಟ್ಟಿಗೆ	೧೯೪	೬	೦				ಕ್ಯಾಲ್‌ಸಿಯಮ್ ಕಾರಬಾಯಿಡ	೫೪	೧೪	೦						
೩ ತೇಗಿನ ಪೆಟ್ಟಿಗೆಗಳು							ರಿಪೇರಿ	೩	೧೨	೦						
೧ ಜಾಜಿಪೆಟ್ಟಿಗೆ ಮ್ಯಾಜಿಕ್ ಲ್ಯಾಂಟರ್ನ ಇವೋದು	೩೮	೬	೦				ಸ್ಟೇಶನರೀ	೦	೧೫	೦						
							೧ ಫೋರಜಟ್ ಬರ್ನರ	೨೫	೦	೦						
							೧ ಸ್ಕ್ರೀನ್	೨೦	೦	೦						
							ಹೆಚ್ಚಿಗಿದ್ದ ಬರ್ನರಗಳು	೨	೦	೦						
ಅಂತೂ	೧೪೯೨	೧೫	೦				ಗಾಡೀ ಬಾಡಿಗಿ	೧೦೯	೦	೩	೨೦೫	೬	೦	೧೮೦೯	೯	೦

ರೋಖ ಶಿಲ್ಕು	೬೫೬೫ ೪ ೧೧				ಅಂತೂ ಖರ್ಚು	೪೮೯೮	೧೦	೦
ಅಸೋಸಿಯೇಶನದ ವಟ್ಟ ಆಸ್ತಿಯು	೮೦೫೮ ೩ ೧೧				೧೯೧೫ ಇಸ್ವಿಯ ಜುಲಯಿ ತಿಂಗಳ ೩೧ ನೇಕ್ಕೆ ಶಿಲ್ಕು ...	೬೫೬೫	೪	೧೧
ಹೋದ ವರ್ಷದ ಕೊನೆಗೆ ಆಸ್ತಿ ಬೆಲೆ	೨೩೮೦ ೬ ೩							
ಒಟ್ಟು ಆದಾಯ ರೂ. ...		೫೧೨೬	೮	೮				
ಹಿಂದಿನ ಶಿಲ್ಕು ಸಹಿತ ಬೇರೀಜು. ...		೧೧೪೬೩	೧೪	೧೧	ಅಂತೂ ಬೇರೀಜು ...	೧೧೪೬೩	೧೪	೧೧
ಅಂತೂ ಹನ್ನೊಂದುಸಾವಿರದಾ ನಾಲ್ಕನೂರಾ ಅರವತ್ತಮೂರು ರೂಪಾಯಿ ಹದಿನಾಲ್ಕು ಆಣೆ ಹನ್ನೊಂದು ಪೈ ...					ಅಂತೂ ಹನ್ನೊಂದುಸಾವಿರದಾ ನಾಲ್ಕನೂರಾ ಅರವತ್ತಮೂರು ರೂಪಾಯಿ ಹದಿನಾಲ್ಕು ಆಣೆ ಹನ್ನೊಂದು ಪೈ.			

ಲೆಖ್ಖವನ್ನು ತಯಾರ ಮಾಡಿದವರು.

ಬಿ. ಭುಜಂಗ,

ಕಾರಕೂನ.

ತಪಾಸ ಮಾಡಿತು. G. R. BALEKUNDRI,

R. B. KITTUR,

ಆನರರಿ ಸೆಕ್ರೆಟರಿಗಳು,

ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನ್, ಧಾರವಾಡ.

ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನದ ೨೧ ನೇ ನಿಯಮದ ಪ್ರಕಾರ ಸಂಸ್ಥೆಗೆ ಬರತಕ್ಕಂಥ ಮತ್ತು ಬಂದಂಥ ರಕಮುಗಳು ಲೆಖ್ಖಕ್ಕೆ ಹತ್ತಿರುತ್ತವೆಂದು ತಪಾಸು ಮಾಡಿ, ಇವು ಬರೋಬರೀ ಇದ್ದ ಬಗ್ಗೆ ಸರಟಿಫಿಕೇಟು ಕೊಟ್ಟಿರುತ್ತೇವೆ.

(ಸಹಿ.) S. S. KAMALAPUR,

B. J. MOHITE,

ಆನರರಿ ಆಡಿಟರ್‍ಸ,

ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನ್.

ಬ. ಫರಿ

ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನದ

ಜಮಾ.	೧೯೧೫-೧೬ ಸಾಲಿನ ಬಗ್ಗೆ ಅಂದಾಜು.	೧೯೧೪-೧೫ ದಲ್ಲಿ ಆದ ಜಮಾ.	೧೯೧೩-೧೪ ಸಾಲಿನಲ್ಲಿ ಆದ ಜಮಾ.
ವರ್ಗಣಿ ಮತ್ತು ವೇಣಿಗಿ	೫೦೦೦	೫೦೨೪	೫೪೬೫
ಪೋಸ್ಟಲ್ ಸೇವ್ಹಿಂಗ್ಸ ಬ್ಯಾಂಕಿನಲ್ಲಿಟ್ಟ ಡಿಪಾಜಿಟನ ಮೇಲೆ ಬಡ್ಡಿ	೧೫೦	೧೫೩	೧೯೨
ಕಿರುಕಳ	೧೦	೦	೧
ಅಂತೂ ಅಜಮೂಸ ಜಮಾ ರುಪಾಯಿ ...	೫೧೬೦	೫೧೭೭	೫೬೫೮
ಹಿಂದಿನ ವರ್ಷದ ಶಿಲ್ಕು	೬೫೬೫	....	...
ಒಟ್ಟು ಬೇರೀಜು...	೧೧೭೨೫	...	...

ಶ್ರಿಷಃ

ಸನ್ನ ೧೯೧೫-೧೬ ನೇ ವರ್ಷದ ಬಾಬತು ಅಂದಾಜು ಪತ್ರಿಕೆಯು.

ಖರ್ಚು.	೧೯೧೫-೧೬ ನೇ ಸಾಲಿನ ಅಂದಾಜು.	೧೯೧೪-೧೫ ನೇ ಸಾಲಿನ ಖರ್ಚು.	೧೯೧೩-೧೪ ನೇ ಸಾಲಿನ ಖರ್ಚು.
ಅಫೀಸ ಬಾ|| ಖರ್ಚು.			
ಸಂಬಳ ಮುಂತಾದ್ದು.			
೨೫ ರುಪಾಯಿಯ ಒಬ್ಬ ಕಾರಕೂನ ...	೩೦೦	೩೦೫	೨೪೦
೧೫ ರುಪಾಯಿಯ ಒಬ್ಬ ಹಂಗಾಮೀ ಕಾರಕೂನ (೩ ತಿಂಗಳ ಮುಟ್ಟಿಗೆ) ...	೪೫	೪೯	...
೮ ರುಪಾಯಿಯ ಒಬ್ಬ ಶಿಪಾಯಿ ...	೯೬	೧೦೪	೮೯
ಪ್ರವಾಸಭತ್ತೆ	೩೦	೧೫	೩೭
ಆಫೀಸಿನ ಸಾದಿಲವಾರು	೧೦೦	೮೩	೭೭
ಮನಿಆರ್ಡರ ಕಮಿಶನ್ ಸಹಿತ ಟಪಾಲ ಹಾಸಲು...	೯೦೦	೭೮೭	೫೯೪
ಛಾಪಣಾವಳಿ	೧೪೦೦	೧೩೧೩	೧೦೯೪
ಪುಸ್ತಕ ಮತ್ತು ಡೆಡಸ್ಟಾಕ ಸಾ|| ಖರೀದಿ ...	೧೦೦	೨೪೮	೧೯೦
ಇನಾಮಿನ ಬಾಬತ ಖರ್ಚು	೧೨೫	೧೩೦	೨೨೮
ವಾರ್ಷಿಕ ಸಭೆಯ ಖರ್ಚು	೨೫	೧೦	೨೫
ಮ್ಯಾಜಿಕ್ ಲ್ಯಾಂಟರ್ನದ ಬಾ|| ಖರ್ಚು ...	೩೦೦	೩೧೫	೮೧೩
ವ್ಯಾಖ್ಯಾನಕಾರರ ನೇಮಣೂಕು.			
ಡೆಪ್ಯೂಟೇಶನ್ ಅಲಾವನ್ಸ		೭೮೦	೨೮೩
ವ್ಯಾಖ್ಯಾನಕಾರರ ಪ್ರವಾಸ ಭತ್ತೆ ...		೪೭೮	೩೫೩
೮ ರುಪಾಯಿಯ ಒಬ್ಬ ಶಿಪಾಯಿ ...	೨೦೦೦	೯೬	೨೭
ಶಿಪಾಯಿಯ ಪ್ರವಾಸ ಭತ್ತೆ		೨೫	೧೩
ಆಪರೇಟರ		೧೨೮	೨೬
ಆಪರೇಟರನ ಪ್ರವಾಸ ಭತ್ತೆ		೩೬	೮
ಆಕಸ್ಮಿಕ ಖರ್ಚು	೧೦೦	೫೭	೪೨
ಅಂತೂ ಖರ್ಚು ...	೫೫೨೧	೪೯೫೯	೪೧೩೯
ವರ್ಷದ ಕೊನೆಗೆ ಉಳಿಯಬಹುದಾದ ಅಜಮಾಸ ಶಿಲ್ಕು ...	೬೨೦೪	......	......
ಅಂತೂ ರುಪಾಯಿ	೧೧೭೨೫	......	......

G. R. BALEKUNDRI

R. B. KITTUR

Hon. Secretaries

ಕ. ಪರಿಶಿಷ್ಟ

ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರೀ ಅಸೋಸಿಯೇಶನದ ಕಾರ್ಯನಿರ್ವಾಹ ಪದ್ಧತಿಯಲ್ಲಿ ಮಾಡಬೇಕಾದ ತಿದ್ದುಪಡಿಗಳ ವಿಷಯದಲ್ಲಿ ಸಾರ್ವಜನಿಕದವರಿಂದ ಬಂದ ಮಹತ್ವದ ಸೂಚನೆಗಳೂ ಅವುಗಳಿಗೆ ಕೊಟ್ಟ ಉತ್ತರಗಳು.

ಸೂಚನೆಗಳು.	ಉತ್ತರಗಳು.
ಪ್ಲೇಗು, ಮಾರಿಕಾ, ಮಲೇರಿಯಾ ಮುಂತಾದ ಬೇನೆಗಳ ಮೇಲೆ ಕೊಡಬೇಕಾದ ಔಷಧಗಳನ್ನು ಧರ್ಮಾರ್ಥ ಹಂಚುವದಕ್ಕಾಗಿ ಪ್ರತಿಯೊಂದು ಹಳ್ಳಿಯಲ್ಲಿ ಇಡಬೇಕು.	ಮಾರಿಕಾ ಬೇನೆಯ ಮೇಲಿನ ಔಷಧವಾದ ಪರಮ್ಯಾಂಗನೇಟ ಆಫ ಪೋಟ್ಯಾಶವನ್ನು ಧರ್ಮಾರ್ಥ ಹಂಚ.ವದಕ್ಕೆ ಮತ್ತು ದೊರೆತಷ್ಟರ ಮಟ್ಟಿಗೆ ಕ್ವಿನಾಯಿನವನ್ನು ಮಾರಲಿಕ್ಕೆ ಇಟ್ಟದೆ. ಇದಕ್ಕೂ ಹೆಚ್ಚಿಗೆ ಏನೂ ಮಾಡುವದು ಸದ್ಯಕ್ಕೆ ಶಕ್ಯವಾಗಿಲ್ಲ.
ಸದ್ಯಕ್ಕೆ ಗ್ರಾಮಸ್ಥರು ಕ್ವಿನಾಯಿನವನ್ನು ಹಂಚುತ್ತಾರೆ. ಇದಕ್ಕೆ ಬದಲಾಗಿ ಅಸೋಸಿಯೇಶನದ ಲೋಕಲ್ ಸೆಕ್ರೆಟರಿಗಳು ಇದನ್ನು ಹಂಚುವಂತೆ ಮಾಡಬೇಕು.	ಮಾಮಲೇದಾರರು ಇದರಂತೆ ವ್ಯವಸ್ಥೆ ಮಾಡುವಂತೆ ಏರ್ಪಾಡಾಗಬೇಕೆಂದು ಮೆ|| ಕಲೆಕ್ಟರ ಸಾಹೇಬರವರನ್ನು ವಿಜ್ಞಾಪಿಸುವದರಲ್ಲಿ ಬರುವದು.

ತಾಲೂಕ ಅಧಿಕಾರಿಗಳೂ ಗ್ರಾಮಸ್ಥರೂ ಅಸೋಸಿಯೇಶನದ ಕೆಲಸದಲ್ಲಿ ಮನಸ್ಸು ಹಾಕಬೇಕು.	ಈಗ ಅವರು ಮನಸು ಹಾಕುತ್ತಾರೆ. ಆದರೂ ಈ ವಿಷಯವಾಗಿ ಒಂದು ಒಟ್ಟು ಹುಕುಮು ಕೊಡಬೇಕೆಂದು ಮೆ॥ ಕಲೆಕ್ಟರ ಸಾಹೇಬರವರನ್ನು ವಿಜ್ಞಾಪಿಸಬೇಕಾಗಿ ಅಸೋಸಿಯೇಶನವು ಗೊತ್ತುಪಡಿಸಿದೆ.
ವರ್ಗಣಿಯನ್ನು ಗ್ರಾಮಸ್ಥರ ಮುಖಾಂತರ ವಸೂಲ ಮಾಡಬೇಕು. ಮತ್ತು ಈ ಕೆಲಸದಲ್ಲಿ ತಾಲೂಕ ಶಿಪಾಯರ ಸಹಾಯವನ್ನು ಕೊಡಬೇಕು.	ಅಸೋಸಿಯೇಶನವು ಸರಕಾರೀ ಅಲ್ಲವಾದ್ದರಿಂದ ಹೀಗೆ ಮಾಡುವದಕ್ಕೆ ಬರುವದಿಲ್ಲ.
ತಾಲೂಕಿನ ಮಾಮಲೇದಾರರು ಚೇರಮನ್ನರಾಗಿರಬೇಕು.	ಆದಷ್ಟುಮಟ್ಟಿಗೆ ಅಸೋಸಿಯೇಶನಕ್ಕೆ ಸರಕಾರೀ ಸ್ವರೂಪ ಬರದಂತೆ ಮಾಡಬೇಕೆಂದು ಸಾಧಾರಣವಾಗಿ ಲೋಕಾಭಿಪ್ರಾಯವಿರುವದು.
ತಾಲೂಕಿನ ಅಥವಾ ಮಹಾಲಿನ ಚೇರಮನ್ನನು ಮ್ಯಾನೇಜಿಂಗ ಕಮಿಟಿಯ ಎಕ್ಸ ಆಫೀಸಿಯೋ ಮೆಂಬರನಾಗಿರಬೇಕು,	ಈ ಸೂಚನೆಗೆ ಒಪ್ಪಿಕೊಂಡು ನಿಯಮಗಳಲ್ಲಿ ಜಜ್ಜು ಕಡಿಮೆ ಮಾಡಿದೆ.
ಸಬ್ಬಡಿವ್ಹಿಜನಲ್ ಆಫೀಸರರನ್ನು ವ್ಹಾಯಿಸ್ ಪ್ರೆಸಿಡೆಂಟರಾಗಿ ಮಾಡತಕ್ಕದ್ದು. ಮತ್ತು ಸರಕಾರೀ ಕಾಮದಾರರಲ್ಲದವರನ್ನು ಅವರ ಸಹಾಯಕ್ಕೆ ಕೊಡಬೇಕು.	ಸಬ್ಬಡಿವ್ಹಿಜನಲ್ ಆಫೀಸರರು ಈಗ ಎಕ್ಸ ಆಫೀಸಿಯೋ ಮೆಂಬರರಾಗಿ ಮಾಡಲ್ಪಟ್ಟಿರುವರು. ಮತ್ತು ತಾಲೂಕಿನ ಚೇರಮನ್ನನು ತನ್ನ ೩ ತಿಂಗಳ ರಿಪೋರ್ಟನ್ನು ಇವರಿಗೆ

ಕ ಪರಿಶಿಷ್ಟ (ಮುಂದೆ ಸಾಗಿದ್ದು.)

ಸೂಚನೆಗಳು.	ಉತ್ತರಗಳು.
	ಕಳಿಸಿ ತನ್ನ ತಾಲೂಕಿನ ಕೆಲಸದ ಮಾಹಿತಿಯನ್ನು ಕೊಡಬೇಕಾಗುತ್ತದೆ. ಈ ಸೂಚನೆಯ ಉದ್ದೇಶವು ಇಷ್ಟರಿಂದಲೇ ಸಫಲವಾಗುತ್ತದೆ. ಇಲ್ಲದಿದ್ದರೆ ಅಸೋಸಿಯೇಶನಕ್ಕೆ ತುಂಬಾ ಸರಕಾರೀ ಸ್ವರೂಪವು ಬರುವದು.
ಪ್ರತಿಪ್ರೊಂದು ಸರ್ಕಲ್ಲಿನೊಳಗಿನ ಹಳ್ಳಿಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು.	ಆ ಆ ತಾಲೂಕಿನ ಅಥವಾ ಮಹಾಲಿನ ಚೇರಮನ್ನರನ್ನೂ ಅಧಿಕಾರಿಗಳನ್ನೂ ವಿಚಾರಿಸಿ ಈ ಏರ್ಪಾಡು ಮಾಡಲಾಗುವದು.
ಪ್ರತಿಪ್ರೊಂದು ತಾಲೂಕಿಗೆ ಸಬ್ಬ್ಯಾನಿಟರೀ ಇನ್‌ಸ್ಪೆಕ್ಟರನನ್ನು ನೇಮಿಸಬೇಕು. ವ್ಯಾಖ್ಯಾನ ಕೊಡುವದಕ್ಕಾಗಿ ಜನರಿಗೆ ಶಿಕ್ಷಣ ಕೊಟ್ಟ ವ್ಯಾಖ್ಯಾನಕಾರರನ್ನು ನೇಮಿಸಬೇಕು.	ಶಿಕ್ಷಣ ಹೊಂದಿದ ವೈದ್ಯಶಾಸ್ತ್ರಜ್ಞರ ಕೊರತೆ ಇರುವದರಿಂದ ಸದ್ಯಕ್ಕೆ ಇವು ಶಕ್ಯವಾಗಿಲ್ಲ.
ಸ್ಯಾನಿಟರೀ ಕಮೀಟಿಗಳಿದ್ದಲ್ಲಿ ಜನರಿಂದ ವರ್ಗಣಿಯನ್ನು ವಸೂಲು ಮಾಡುವದರ ಬದಲು ಕಮೀಟಿಯಿಂದಲೇ ಒಂದು ರಕಮನ್ನು ವಸೂಲು ಮಾಡಬೇಕು.	ಮೆಂಬರನಾಗುವಾಗ್ಗೆ ತುಂಬಿಕೊಡುವ ಪತ್ರಿಕೆಯ ಪ್ರಕಾರ ಪ್ರತಿಪ್ರೊಬ್ಬ ವರ್ಗಣಿದಾರನು ಒಂದು ಬಗೆಯ ಜವಾಬದಾರಿಯನ್ನು ಮೈಮೇಲೆ ತೆಗೆದುಕೊಳ್ಳಬೇಕಾಗು

	ತ್ತದೆ. ಕಮೀಟಿಯ ಕಡೆಯಿಂದ ಒಂದೇ ರಕಮು ವಸೂಲು ಮಾಡಿದರೆ ಪ್ರತಿಪ್ರೊಂದು ವ್ಯಕ್ತಿಯ ಜವಾಬದಾರಿಯನ್ನು ಕಮೀಟಿಯು ಹೊರಲಾರದು. ಆದದರಿಂದ ಈಗ ಇದ್ದ ಪದ್ಧತಿಯೇ ಮುಂದೆ ನಡಿಯುವದು.
ಲ್ಯಾಂಟರ್ನದ ವ್ಯಾಖ್ಯಾನಕಾರರು ಸರತಿಯ ಮೇಲೆ ಪ್ರತಿಪ್ರೊಂದು ತಾಲೂಕಿಗೆ ಹೋಗುವಂತೆ ವ್ಯವಸ್ಥೆಯಾಗಬೇಕು.	ಇದು ಶಕ್ಯವಿಲ್ಲ. ಆದರೂ ಲೋಕಲ್ ಸೆಕ್ರೆಟರಿಗಳು ಬರೆದರೆ ಅವರನ್ನು ಕಳಿಸುವದಕ್ಕೆ ಆದಷ್ಟು ಪ್ರಯತ್ನ ಮಾಡಲಾಗುವದು.
ಪ್ರತಿಪ್ರೊಂದು ಗ್ರಾಮದಲ್ಲಿ ಒಂದು ಕಮೀಟಿಯು ಇರಬೇಕು. ಮತ್ತು ಅದಕ್ಕೆ ಸರ್ಕಲ್ ಇನ್‌ಸ್ಪೆಕ್ಟರನಾಗಲೀ ಆ ಗ್ರಾಮದ ಪಾಟೀಲನಾಗಲೀ ಚೇರಮನ್‌ನಾಗಿರಬೇಕು.	ಈಗಿನ ಪದ್ಧತಿಯು ಹೀಗೇ ಅದೆ. ನಿಬಂಧನೆಗಳಲ್ಲಿ ಇದನ್ನು ಸೇರಿಸಿದೆ. ಪಾಟೀಲನು ಚೇರಮನ್‌ನಾಗಿರುತ್ತಾನೆ.
ಚೇರಮನ್ನನ ಸಹಾಯಕ್ಕಾಗಿ ಒಬ್ಬ ಕಾರಕೂನನನ್ನು ಕೊಡಬೇಕು. ಮತ್ತು ಹಳ್ಳಿಗಳ ಕಮೀಟಿಯ ಬರಿಯುವ ಕೆಲಸವನ್ನು ಗ್ರಾಮಸ್ಥರು ಮಾಡುವಂತೆ ಗೊತ್ತುಪಡಿಸಬೇಕು.	ಸದ್ಯಕ್ಕೆ ಇದರ ಅಗತ್ಯವಿಲ್ಲ. ಗ್ರಾಮಸ್ಥರಿಗೆ ಸರಕಾರೀ ರೀತಿಯಿಂದ ಹುಕುಮು ಕೊಡಲಿಕ್ಕೆ ಬರುವದಿಲ್ಲ. ಅವರ ಮನಸಿಗೆ ಒಪ್ಪಿಗೆಯಾದರೆ ಅವರು ಸಹಾಯ ಮಾಡಬಹುದು.
ವ್ಯವಸ್ಥಾಪಕ ಸಭೆಯ ಮೆಂಬರರಲ್ಲಿ ವೈದ್ಯಶಾಸ್ತ್ರ ಬಲ್ಲವರ ಸಂಖ್ಯೆಯನ್ನು ಹೆಚ್ಚಿಸಬೇಕು.	ಸೂಚನೆಯು ಮಾನ್ಯವಾಗಿದೆ. ಮೊದಲು ಮೂವರಿದ್ದರು. ಈಗ ೬ ಜನರು ಇರುತ್ತಾರೆ.

ಕ ಪರಿಶಿಷ್ಟ (ಮುಂದೆ ಸಾಗಿದ್ದು.)

ಸೂಚನೆಗಳು.	ಉತ್ತರಗಳು.
ತಾಲೂಕು ಹಾಗು ಮಹಾಲುಗಳಲ್ಲಿರುವ ಸಬ್ ಅಸಿಸ್ಟಂಟ ಸರ್ಜನ್‌ರನ್ನು ಎಕ್ಸ್ ಆಫೀಸಿಯೋ ಮೆಂಬರರಾಗಿ ನೇಮಿಸಬೇಕು.	ಸೂಚನೆಯು ಮಾನ್ಯವಾಗಿದೆ. ಅವರನ್ನು ಸನ್ಮಾನಿತ ಮೆಂಬರರಾಗಿ ಮಾಡಿದೆ.
ತಾಲೂಕಿನ ಚೇರಮನ್ನರನ್ನು ಲೋಕಲ್ ಸೆಕ್ರೆಟರಿಗಳು ಆರಿಸಿಕೊಳ್ಳಬೇಕು. (Elect).	ಸದ್ಯಕ್ಕೆ ಆರಿಸಿ (Select) ನೇಮಿಸುವ ಪದ್ಧತಿಯಿದೆ. ಇದೇ ಈಗಿನ ಮಟ್ಟಿಗಾದರೂ ನಡೆಯುವದು.
ಸರಕಾರೀ ಅಧಿಕಾರಿಗಳಲ್ಲದ ಒಬ್ಬರನ್ನು ಅಸಿಸ್ಟಂಟ ಸೆಕ್ರೆಟರಿಗಳಾಗಿ ನೇಮಿಸಬೇಕು.	ಮುಂದೆ ಈ ವಿಷಯದ ವಿಚಾರ ಮಾಡಬಹುದು.
ದೊಡ್ಡ ಹಳ್ಳಿಗಳೊಳಗಿನ ಶಾಲಾಮಾಸ್ತರರು ಹಳ್ಳಿಗಳ ಕಮೀಟಿಯ ಮೆಂಬರರಾಗಿರಬೇಕು.	ಸೂಚನೆಯು ಗ್ರಾಹ್ಯವಾಗಿ ನಿಬಂಧನೆಗಳಲ್ಲಿ ಸೇರಿಸಲ್ಪಟ್ಟದೆ.
ಡೆಪ್ಯೂಟೀ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು ವ್ಯವಸ್ಥಾಪಕ ಕಮೀಟಿಯ ಎಕ್ಸ್ ಆಫೀಸಿಯೋ ಮೆಂಬರರಾಗಿರಬೇಕು.	ಸೂಚನೆಯು ಮಾನ್ಯವಾಗಿ ಅದಕ್ಕನುಸರಿಸಿ ನಿಯಮದಲ್ಲಿ ಹೆಚ್ಚುಕಡಿಮೆ ಮಾಡಿದೆ.

ಲೋಕಲ್‌ಫಂಡ ಕರಕ್ಕೆ ಸರಿಯಾದ ಒಂದು ಕರವನ್ನು ಎತ್ತಿ (ಗುಂಪಿನೊಳಗಿನ ಹಳ್ಳಿಗಳ ಆರೋಗ್ಯರಕ್ಷಣೋಪಾಯಕ್ಕಾಗಿ ಈ ಹಣವನ್ನು ವೆಚ್ಚಮಾಡಬೇಕು.	ಇದು ಅಸೋಸಿಯೇಶನದಿಂದಾಗತಕ್ಕ ಕೆಲಸವಲ್ಲ.
ಪ್ರತಿಪ್ರೊಂದು ತಾಲೂಕಿನಿಂದ ಒಬ್ಬೊಬ್ಬರು ಮ್ಯಾನೇಜಿಂಗ ಕಮೀಟಿಯ ಮೆಂಬರರಾಗಿರಬೇಕು.	ಸೂಚನೆಯು ಯೋಗ್ಯವಾಗಿದೆ. ಚೇರಮನ್ನರನ್ನು ವ್ಯವಸ್ಥಾಪಕ ಸಭೆಯ ಎಕ್ಸ ಅಫೀಸಿಯೋ ಮೆಂಬರನಾಗಿ ಮಾಡಿದ್ದರಿಂದ ಇದರ ಕೆಲಸವಾದಂತಾಯಿತು.
ವ್ಯವಸ್ಥಾಪಕ ಸಭೆಯ ಮೆಂಬರರ ಸಂಖ್ಯೆಯನ್ನು ೨೫ ಮಾಡಬೇಕು.	ಸೂಚನೆಯು ಮಾನ್ಯವಾಗಿ ಈಗ ಮೆಂಬರರ ಸಂಖ್ಯೆಯು ೩೦ ಮಾಡಲಾಗಿದೆ.
ಮುಖ್ಯ ಮುಖ್ಯ ಸ್ಯಾನಿಟರಿ ಕಮೀಟಿಯೊಳಗಿನ ಚೇರಮನ್ನರನ್ನು ವ್ಯವಸ್ಥಾಪಕ ಸಭೆಯ ಮೆಂಬರರಾಗಿ ಮಾಡಬೇಕು.	ಇಡೀ ತಾಲೂಕಿನ ಅಥವಾ ಮಹಾಲಿನ ಪ್ರತಿನಿಧಿಯಾದ ಚೇರಮನ್ನರನ್ನು ವ್ಯವಸ್ಥಾಪಕ ಸಭೆಯ ಮೆಂಬರನಾಗಿ ಮಾಡಿರುವದರಿಂದ ಹೀಗೆ ಮಾಡುವ ಕಾರಣವಿಲ್ಲ; ಸ್ಯಾನಿಟರೀ ಕಮೀಟಿಯು ಒಂದೇ ಗ್ರಾಮದ್ದಿರುವದಲ್ಲದೆ ಇಡೀ ತಾಲೂಕಿನ ಪ್ರತಿನಿಧಿಯಾಗಿರುವದಿಲ್ಲ.
ವ್ಯವಸ್ಥಾಪಕ ಸಭೆಯ ಮೆಂಬರರ ಅವಧಿಯನ್ನು ಮೂರು ವರ್ಷದ್ದಾಗಿ ಗೊತ್ತುಪಡಿಸುವದಕ್ಕಿಂತ ಪ್ರತಿವರ್ಷ ಕೆಲವು ಮೆಂಬರರು ಬದಲಾಗುವಂತೆ ವ್ಯವಸ್ಥೆ ಮಾಡಬೇಕು.	ಈಗಿನ ವ್ಯವಸ್ಥೆಯಲ್ಲಿ ಸದ್ಯಕ್ಕೆ ಏನಾದರೂ ಹೆಚ್ಚು ಕಡಿಮೆ ಮಾಡುವ ಅವಶ್ಯಕತೆ ತೋರುವದಿಲ್ಲ.

ಕ ಪರಿಶಿಷ್ಟ (ಮುಂದೆ ಸಾಗುವದು.)

ಸೂಚನೆಗಳು.	ಉತ್ತರಗಳು.
ಅಸೋಸಿಯೇಶನದ ಅಧಿಕಾರಸ್ಥರ ಅವಧಿಯು ಈಗ ೩ ವರ್ಷವಾಗಿದೆ; ಅದನ್ನು ೫ ವರ್ಷ ಮಾಡಬೇಕು.	ಈಗಿನ ಮೂರು ವರ್ಷದ ಅವಧಿಯು ಸಾಕಷ್ಟು ಹೆಚ್ಚಿನದಿರುವದು. ಕೆಲಸ ಬಿಡುವ ಅಧಿಕಾರಿಗಳನ್ನೇ ಪುನಃ ಆರಿಸುವದಕ್ಕೆ ಮೆಂಬರರಿಗೆ ಅವಕಾಶವುಂಟು.
ಸ್ಯಾನಿಟರೀ ಕಮೀಟಿಗಳು ಅಸೋಸಿಯೇಶನದ ಶಾಖೆಗಳೆಂದು ಮನ್ನಿಸಲ್ಪಡಬೇಕು.	ಸ್ಯಾನಿಟರೀ ಕಮೀಟಿಗಳಿಂದ ಈ ಬಗ್ಗೆ ಅರ್ಜಿಗಳು ಬರುವ ವರೆಗೆ ಇದರ ಅವಶ್ಯಕತೆಯಿಲ್ಲ.
ಪ್ರತಿಯೊಂದು ಸಬ್ ಡಿವ್ಹಿಜನದಲ್ಲಿ ಒಬ್ಬೊಬ್ಬ ಸಬ್ ಅಸಿಸ್ಟಂಟ ಸರ್ಜನ್‌ನು ವ್ಯಾಖ್ಯಾನ ಕೊಡುವ ಕೆಲಸಕ್ಕೆ ನೇಮಿಸಲ್ಪಡಬೇಕು.	ಈ ವ್ಯವಸ್ಥೆಯನ್ನು ಮಾಡಬೇಕೆಂದು ಸರಕಾರದವರನ್ನು ಕೇಳಿಕೊಂಡಿತ್ತು. ಆದರೆ ಸದ್ಯಕ್ಕೆ ಜನರು ದೊರೆಯುವದಿಲ್ಲ.
ಅಸಿಸ್ಟಂಟ ಸರ್ಜನ್ನರು ಮತ್ತು ಸಬ್ ಅಸಿಸ್ಟಂಟ ಸರ್ಜನ್ನರು ವ್ಯಾಖ್ಯಾನಗಳನ್ನು ಕೊಡುವಂತೆ ಅವರ ಮನಸ್ಸೊಲಿಸಬೇಕು.	ಸೂಚನೆಯು ಯೋಗ್ಯವಾಗಿದೆ. ತಾಲೂಕಿನ ಅಥವಾ ಮಹಾಲಿನ ಚೇರಮನ್ನರು ತಮ್ಮ ಭಿಡೆ ಖರ್ಚು ಮಾಡಿ ವ್ಯವಸ್ಥೆ ಮಾಡಬೇಕೆಂದು ತಿಳಿಸಲಾಗುವದು.
ಜಾತ್ರೆಗಳಾಗುವಲ್ಲಿ ಅಸೋಸಿಯೇಶನದ ವ್ಯಾಖ್ಯಾನಗಳಾಗಬೇಕು. . . .	ಸೂಚನೆಯು ಮಾನ್ಯವಾಗಿದೆ. ಜಾತ್ರೆಗಳು ಕೂಡುವ ತಾಲೂಕುಗಳ ಅಥವಾ ಮಹಾಲುಗಳ ಚೇರಮನ್‌ರ ಕರ್ತವ್ಯಗಳಲ್ಲಿ ಇದರ ಸಮಾವೇಶವಾಗಿದೆ.

ಅಸೋಸಿಯೇಶನಕ್ಕೆ ಒಂದು ಆರೋಗ್ಯರಕ್ಷಣೆಯ ಸಂಬಂಧದ ಪುಸ್ತಕಾಲಯವೂ ಒಂದು ವಸ್ತು ಸಂಗ್ರಹಾಲಯವೂ ಇರಬೇಕು.	ಸೂಚನೆಯು ನೆಟ್ಟಗದೆ. ಆದರೆ ಇದು ಸಾಧವಾಗಲಿಕ್ಕೆ ಕಾಲಾವಧಿಯು ಬೇಕು.
೧೮[illegible]ನೇ ಇಸ್ವಿಯ ೧ನೇ ಆಕ್ಟನನ್ವಯ ಸ್ಯಾನಿಟರೀ ಕಮೀಟಿಗಳನ್ನು ಸ್ಥಾಪಿಸಲಿಕ್ಕೆ ಅಸೋಸಿಯೇಶನವು ಪ್ರಯತ್ನಿಸತಕ್ಕದ್ದು.	ಶಕ್ಯವಾದಲ್ಲಿ ಈ ಪ್ರಯತ್ನವು ನಡೆದದೆ. ಉದಾಹರಣೆ: — ಡಂಬಳದಲ್ಲಿ ಆಗಿದೆ. ಸೂರಟೂರು, ಹಳ್ಳಿಕೇರಿಗಳ ಬಗ್ಗೆ ವ್ಯವಸ್ಥೆ ನಡೆದದೆ.

ಧಾರವಾಡ.
೧೨–೧೦–೧೯೧೫.

ಜಿ. ಆರ್. ಬಾಳೆಕುಂದ್ರಿ
ಆನರರೀ ಸೆಕ್ರೆಟರಿ,
ಧಾರವಾಡ ಡಿ|| ಸ್ಯಾ|| ಅಸೋಸಿಯೇಶನ್.

ಡ ಪರಿಶಿಷ್ಟ.

ಅಸೋಸಿಯೇಶನಕ್ಕಾಗಿ ಚಲೋ ಕೆಲಸ ಮಾಡಿದ್ದರಿಂದ ಬೆಳ್ಳಿಯ ಪದಕಗಳನ್ನೂ, ಸರಟೀಫಿಕೇಟು ಗಳನ್ನೂ ಇತರ ಇನಾಮುಗಳನ್ನೂ ಬಹುಮಾನವಾಗಿ ಪಡೆದ ಗೃಹಸರ ಪಟ್ಟಿಯು.

ಬೆಳ್ಳಿಯ ಪದಕಗಳನ್ನು ಪಡೆದವರು.	ಸರಟೀಫಿಕೇಟು ಪಡೆದವರು.	ಇತರ ಇನಾಮು ಪಡೆದವರು.
೧೯೧೨—೧೩.	೧೯೧೨—೧೩.	೧೯೧೨—೧೩.
ಮಿ. ಜಿ. ಆರ್. ಬಾಳೀಕುಂದ್ರಿ, ಆನರರೀ ಸೇಕ್ರೆಟರಿ, ಧಾರವಾಡ.	ಮಿ. ಕೆ. ಆರ್. ಬೆಟಗೇರಿ, ಮಾಹಾಲಕರಿ, ನರಗುಂದ,	ಮೆ. ಗಫರಸಾಹೇಬ ಕಮರುದ್ದೀನಸಾಹೇಬ ಬಂಗಡೀವಾಲಾ, ಹುಬ್ಬಳ್ಳಿ.
,, ಟಿ. ಎಸ್. ಕುಲಕರ್ಣಿ, ಚೀಫ ಆಫೀಸರ, ಧಾರವಾಡ.	,, ವ್ಹಿ. ಬಿ. ಕುಲಕರ್ಣಿ, ಲೊ ಸೆ. ರೊಟ್ಟಿಗವಾಡ.	,, ಕಲೀಲಸಾಬ ವ. ಗಯಬುದ್ದೀನಸಾಹೇಬ, ಹುಬ್ಬಳ್ಳಿ.
,, ವ್ಹಿ. ಬಿ. ಜೋಸಿ, ಧಾರವಾಡ.	,, ದೇವಜಿ ನಾರಾಯಣ ಸಾಡಗೇರ ಲೊ. ಸೆ. ಮಾಸೂರ.	
,, ಜಿ. ಎಚ್ ಹೊನ್ನಾಪೂರಮಠ, ವಕೀಲ, ಧಾರವಾಡ.	,, ಎನ್. ಎಸ್, ದೇಸಾಯಿ, ಲೊ. ಸೆ. ಕಲ್ಲಾಪೂರ.	ಟೀಪು:—ಇಬ್ಬರಿಗೂ ರುಮಾಲಗಳನ್ನು ಇನಾಮು ಕೊಟ್ಟದೆ.
,, ಎನ್. ಎಸ್. ಕುಲಕರ್ಣಿ, ಲೊ. ಸೆ. ಹುಬ್ಬಳ್ಳಿ.	,, ಸೈಯದ, ನೈಝಾಮುದ್ದೀನ, ಲೊ. ಸೆ. ರಾಣೇಬೆನ್ನೂರ.	
,, ಪಿ. ಪಿ. ಫರ್ನಾಂಡಿಸ, ಗದಗ.	,, ಆರ್. ಬಿ. ಕುಲಕರ್ಣಿ, ಲೊ. ಸೆ. ಮುಂಡರಗಿ.	
,, ಆರ್. ಎಚ್. ಶಿರಹಟ್ಟಿ, ಧಾರವಾಡ.		

ಕೈ. ವಾ. ಕಿತ್ತೂರಕರ ಇವರ ಕುಟುಂಬದವರು, ನವಲಗುಂದ.

ಮಿ. ಎಮ್. ಎಸ್. ಕುಮತಾ, ಮಾಮಲೇದಾರ, ಹುಬ್ಬಳ್ಳಿ.

,, ಶೇಖ ಬುಡಣ ಅಪ್ಪಾಭಾಯಿ, ಮಾಮಲೇದಾರ, ರೋಣ.

,, ಆರ್. ಕೆ. ಇನಾಮತಿ, ಲೊ. ಸೆ. ಅಣ್ಣಿಗೇರಿ.

ಮೆ|| ಅಪ್ಪಾಸಾಹೇಬ ಘೋರಪಡೆ, ಗಜೆಂದ್ರಗಡ.

ಮಿ. ಕೃಷ್ಣಾಜೀ ಬಾಳಾಜಿ, ಸ್ಕೂಲ ಮಾಸ್ತರ, ಹುಬ್ಬಳ್ಳಿ.

,, ಕ್ಯಾತನಗೌಡಾ ಭೀಮನಗೌಡಾ ಪಾಟೀಲ, ಮುದೇನಗುಡಿ.

,, ವೆಂಕಟೇಶ, ಆರ್. ಕುಲಕರ್ಣಿ, ಲೊ. ಸೆ. ಹರ್ಲಾಪೂರ.

ಮಿ. ವ್ಹಿ. ವ್ಹಿ. ಕುಲಕರ್ಣಿ, ಲೊ. ಸೆ. ತಿರ್ಲಾಪೂರ.

,, ಭರಮಗೌಡಾ ಪಾಟೀಲ ಲೊ. ಸೆ. ಬೆನಕನಕೊಪ್ಪ.

,, ಶಿವನಗೌಡಾ ಪಾಟೀಲ ಕೋಳಿವಾಡ.

,, ಶಂಕರೆಪ್ಪಾ ರಾವುತಪ್ಪಾ ಹುಬ್ಬಳ್ಳಿ.

,, ಕೃಷ್ಣಾಜಿ ಎ. ಎರಗಟ್ಟಿ, ಕೊಂಡಿಕೊಪ್ಪ.

,, ಶಿ. ಜಿ. ಶಿದ್ಧಾಂತಿ, ನವಲಗುಂದ.

,, ವಲ್ಲಭ ಮಹಾಲಿಂಗ ತಟ್ಟಿ, ನವಲಗುಂದ.

,, ಎಸ್. ಪಿ. ಗುಡಿ, ಕಾರಕೂನ, ರೋಣ.

,, ಮಲ್ಲಪ್ಪಾ ಗಂಗಾಧರಪ್ಪಾ ದಿವಟಿ.

,, ಶಾಮಾಚಾರ್ಯ ಎ. ಹೇಮಾದ್ರಿ, ಭದ್ರಾಪೂರ.

,, ಕೆ. ಎಚ್. ಮುದವೇಡಕರ, ಎಡಿಟರ ಕರ್ನಾಟಕವೃತ್ತ, ಧಾರವಾಡ.

,, ದೇವಜೀ ನಾಗೇಶ ಗೋತೇಕರ, ಹುಬ್ಬಳ್ಳಿ.

,, ಶಿದ್ದನಗೌಡಾ ಭರಮಗೌಡಾ, ಕೋಟವುಮಚಗಿ.

,, ಗುರನಗೌಡಾ ಪಾಟೀಲ, ಬಮ್ಮಾಪೂರ.

,, ಗೋವಿಂದ ಗುರುರಾವ ಪಾಟೀಲ, ಮಜ್ಜಿಗುಡ್ಡ.

,, ಮಲ್ಲನಗೌಡಾ ಕಲ್ಲನಗೌಡಾ ಪಾಟೀಲ ನಿಡಗುಂದಿ.

,, ಶ್ರೀಪಾದ ಆರ್. ಕುಲಕರ್ಣಿ, ಸೈದಾಪೂರ.

೭. ಪರಿಶಿಷ್ಟ (ಮುಂದೆ ಸಾಗಿದ್ದು.)

ಬೆಳ್ಳಿಯ ಪದಕಗಳನ್ನು ಪಡೆದವರು.	ಸರಟೀಫಿಕೇಟು ಪಡೆದವರು.	ಇತರ ಇನಾಮು ಪಡೆದವರು.
೧೯೧೩ – ೧೪	೧೯೧೩—೧೪	೧೯೧೩—೧೪
ಮಿ. ಆರ್. ಬಿ. ಕಿತ್ತೂರ, ಜಾಯಿಂಟ ಆನರರಿ ಸೆಕ್ರೆಟರಿ, ಧಾರವಾಡ.	ಮಿ. ಹುತ್ತಪ್ಪಾ ಗೂಳಪ್ಪಾ ತಲಾಟಿ ಲೊ. ಸೆ. ಧುಂಡಸಿ.	ಮಿ. ಜೀವಾಜಿ ಮಾರ್ತಂಡ ಕುಲಕರ್ಣಿ, ಗೌರವಾಡ.
,, ಟಿ ಎಸ್. ಕಡಕೋಳ ಲೊ. ಸೆ. ಧಾರವಾಡ.	,, ವೆಂಕಟೇಶ ಅಣ್ಣಾಜಿ ಕುಲಕರ್ಣಿ, ಸರಕಲ್ ಇನಸ್ಪೆಕ್ಟರ, ಕಳಸ.	,, ಕೆರಡೆಪ್ಪಗೌಡಾ ಪಾಟೀಲ, ಸೊರಟೂರ.
,, ವ್ಹಿ. ಪಿ. ವಾಗಳೆ, ವಕೀಲ, ಲೊ. ಸೆ. ಹುಬ್ಬಳ್ಳಿ.	,, ಸ್ವಾಮಿ ಗೋವಿಂದ ಕುಲಕರ್ಣಿ, ಶಾಳಾಮಾಸ್ತರ, ಗಳಗನಾಥ.	,, ಭುಜಂಗ ಬಾಳಾಜಿ ಕುಲಕರ್ಣಿ, ಹಾರೋಗೇರಿ.
,, ಆರ್. ಎನ್. ಕಿಣಿ, ಮಾಮಲೇದಾರ, ಸಿಗ್ಗಾಂವ.	,, ರಾಮಚಂದ್ರ ವೆಂಕಟೇಶ ಕಾಮಶಾಪೂರ, ಕಾರಕೂನ, ಸಿಗ್ಗಾವ.	,, ಶಿದ್ದನಗೌಡಾ ಪೋಲೀಸಪಾಟೀಲ, ಡಂಬಳ.
,, ಜಿ. ಸಿ. ಟಂಗಿನಕಾಯಿ, ಲೊ. ಸೆ. ಗದಗ.	,, ಗಣೇಶ ಬಾಬುರಾವ ಶೆವಡೇ ಲೊ. ಸೆ. ಕಲಘಟಗಿ	,, ಮಾರ್ತಂಡಗೌಡಾ ಮಾಲಿಪಾಟೀಲ ,,
,, ಬಿ. ಎನ್. ಕಾನಡೇ, ಮಾಹಾಲಕರಿ, ಮುಂಡರಗಿ	,, ಶಾಂತಪ್ಪಾ ಪಾಯಪ್ಪಾ ಮಲ್ಲಪ್ಪನವರ, ಕಲಘಟಗಿ.	,, ಬಸನಗೌಡಾ ಪಾಟೀಲ, ಅಮರಗೋಳ.
,, ಆರ್. ಎನ್. ಜಾಹಾಗೀರದಾರ ಲೊ. ಸೆ. ಆಲೂರ.	,, ಶಂಕರಶಾಸ್ತ್ರಿ ನರಸಿಂಹಶಾಸ್ತ್ರಿ ಜ್ಯೋತಿಷಿ, ಲೊ. ಸೆ. ಹೊಸರಿತ್ತಿ.	,, ಮುದಕನಗೌಡಾ ಪಾಟೀಲ, ಸಂಭಾಪೂರ.
,, ಚಿದಂಬರ, ಜಿ. ಸಿದ್ಧಾಂತಿ, ಹುಬ್ಬಳ್ಳಿ.		ಟೀಪು:—ಗ್ರಾಮಸ್ಥರೆಂದು ಅಸೋಸಿಯೇಶನದ ಕೆಲಸವನ್ನು ನೆಟ್ಟಗೆ ಮಾಡಿದ್ದರಿಂದ ಇವರಿಗೆ ರುಮಾಲುಗಳನ್ನು ಇನಾಮು ಕೊಟ್ಟಿದೆ.

ಮ. ಮಣಿಬಸನಗೌಡಾ ಸಿದ್ದನಗೌಡಾ ಪಾಟೀಲ, ಲೊ. ಸೆ. ಸಿಡೇನೂರ.

„ ಕೃಷ್ಣಾಜಿ ವಾಸುದೇವ ಪಂಢರಿ, ಶಾಲಾಮಾಸ್ತರ, ನರೇಗಲ್ಲ (ಹಾನಗಲ್ಲ ತಾಲೂಕ.)

„ ಸುಬ್ಬಾಜಿ ಸೀತಾರಾಮ ಪಾಟೀಲ, ಹಾರೋಗೊಪ್ಪ.

„ ಅಣ್ಣಾಚಾರ್ಯ ಸ್ವಾಮಿರಾಯಾಚಾರ್ಯ, ಮಸ್ಟರಿಂಗ ಕ್ಲಾರ್ಕ, ಡಂಬಳ.

„ ರಾಮಚಂದ್ರ ಬಾಬುರಾವ ಕುಲಕರ್ಣಿ, ಲೊ. ಸೆ. ನಾಗರಹಳ್ಳಿ.

„ ರುದ್ರಗೌಡಾ ಪಾಟೀಲ, ಸೈದಾಪೂರ.

„ ಪಟದಯ್ಯಾ ಅಯ್ಯಪ್ಪಾ ಕುಲಕರ್ಣಿ, ಅಮರಗೋಳ.

„ ಪರಪ್ಪಾ ಪರಪ್ಪಾ ಗದಗ, ಲೊ. ಸೆ. ಸವಡಿ.

„ ಕೇಶವ ಅಣ್ಣಾಜಿ ಛಬ್ಬಿ, ಕಾರಕೂನ, ಮಾಮಲೇದಾರ ಕಚೇರಿ, ರೋಣ.

ಡ. ಪರಿಶಿಷ್ಟ (ಮುಂದೆ ಸಾಗಿದ್ದು).

ಬೆಳ್ಳಿಯ ಪದಕಗಳನು ಪಡೆದವರು	ಸರಟೀಫಿಕೇಟು ಪಡೆದವರು	ಇತರ ಇನಾಮು ಪಡೆದವರು
೧೯೧೪—೧೫.	೧೯೧೪—೧೫	೧೯೧೪—೧೫
ಮಿ. ಎಸ್. ಎಸ್. ಚಿಟಗುಪ್ಪಿ, ಲೊ. ಸೆ., ಹುಬ್ಬಳ್ಳಿ.	ಮಿ. ಎ. ಬಿ. ಕೌಜಲಗಿ, ಲೊ. ಸೆ ತೇಗೂರ.	ಮಿ. ಕರೀಮಸಾಬ ಮಖ್ತುಂಸಾಬ ದಾಡಿವಾಲಾ ಧಾರವಾಡ.
ಮಿ. ಆರ್. ಆರ್. ಕುಲಕರ್ಣಿ, ಮಾಮಲೇದಾರ, ರಾಣೇಬೆನ್ನೂರ.	,, ಯಲ್ಲಪ್ಪಗೌಡಾ ಬಸನಗೌಡಾ ಪಾಟೀಲ, ಲೊ. ಸೆ. ಬಮ್ಮಸಮುದ್ರ.	ಮಿ. ಹುತ್ತಪ್ಪಾ ಗೂಳಪ್ಪಾ ತಲಾರಿ, ಲೊ. ಸೆ. ಧುಂಡಸಿ.
ನಾ. ರಾ. ಸಾ. ವೆ. ಶ್ರೀ. ನಾಯಿಕ, ಲೊ. ಸೆ., ರಾಣೇಬಿನ್ನೂರ.	,, ಗುರುನಾಥ ತಮ್ಮಾಜಿ ಜಾವೂರ, ಲೊ. ಸೆ. ಚಾಕಲಬ್ಬಿ.	ಇವರಿಗೆ ರುಮಾಲುಗಳು ಇನಾಮಾಗಿ ಕೊಡಲ್ಪಟ್ಟವೆ.
ಮಿ. ಕೆ. ಆರ್. ಚಿಟಗೇರಿ, ಮಾಮಲೇದಾರ, ಹಿರೇಕೆರೂರ.	,, ಬಿಂದೋ ಅಪಣಾಚಾರ್ಯ ಕೊಲ್ಲಾರ, ಕಾರಕೂನ, ಮಾಮಲೇದಾರ ಕಚೇರಿ, ಹುಬ್ಬಳ್ಳಿ	ಲಕ್ಷ್ಮವ್ವಾ ಕೋಂ| ಫಕೀರಪ್ಪಾ ಪೂಜಾರಿ.
ಮಿ. ಎಸ್. ಎಸ್. ದೇಸಾಯಿ, ಲೊ. ಸೆ., ಕಲ್ಲಾಪೂರ (ಹಾನಗಲ್ಲ)	,, ಹಣಮಂತಗೌಡಾ ವೀರನಗೌಡಾ ಪಾಟೀಲ, ಲೊ. ಸೆ. ಕುನ್ನೂರ.	ಇವರಿಗೆ ಶೀರೆಯೂ ಖಣವೂ ಇನಾಮಾಗಿ ಕೊಡಲ್ಪಟ್ಟವೆ.
ಮಿ. ಎಸ್. ಕೆ. ನಾಡಗೌಡಾ, ಚೇರಮನ್, ಮುಂಡರಗಿ.	,, ಜಿ. ಕೆ. ಹಿರೇಮಠ ಲೊ. ಸೆ. ಶಿಗ್ಗಾವ.	ಮಿ. ಗುರುನಾಥ ಅಮೃತ ಕುಲಕರ್ಣಿ ಮಜ್ಜಿಗ್ಗುಡ್ಡ.
ಮಿ. ಎಸ್. ಎಸ್. ಕಾಮಲಾಪೂರ ಧಾರವಾಡ. } ಆನರರೀ ಆಡಿಟರರು.	,, ವ್ಹಿ. ಬಿ. ದೇಶಪಾಂಡೆ, ಕಾರಕೂನ, ಶಿಗ್ಗಾವ.	ಮಿ. ನಾಗೇಶಭಟ್ಟ ಕುಲಕರ್ಣಿ ಮಲ್ಲಿಕಾರ್ಜುನಪೂರ.
ಮಿ. ಬಿ. ಜಿ. ಮೋಹಿತೆ ಧಾರವಾಡ. } ಆನರರೀ ಆಡಿಟರರು.	,, ಹಣಮಂತಗೌಡಾ ಪಾಟೀಲ, ಲೊ. ಸೆ. ಮಿಶ್ರಿಕೋಟ	ಮಿ. ಬಸನಗೌಡಾ ಪಾಟೀಲ ಚಿಕ್ಕನರಗುಂದ.
		ಮಿ. ಚರಮಗೌಡಾ ಪಾಟೀಲ ಬೆನಕನಕೊಪ್ಪ

... ಪಾಟೀಲ, ಲೊ. ಸೆ. ಕೊಡಲಗಿ.

,, ದ್ಯಾಮನಗೌಡಾ ಪಾಟೀಲ, ಲೊ. ಸೆ. ಹುಲಗನಕೊಪ್ಪ.

,, ಶ್ಯಾಮನಗೌಡಾ ಚನಬಸನಗೌಡಾ ಪಾಟೀಲ, ಲೊ. ಸೆ. ಕುರಬಗೊಂಡ.

,, ಶ್ರೀಪತ ಹಣಮಂತ ಪಾಟೀಲ, ಲೊ. ಸೆ. ಹಾವನೂರ.

,, ಕೃಷ್ಣಪ್ಪನಾಯಿಕ ಕುಪ್ಪೇಲೂರ, ಲೊ. ಸೆ. ಕುಪ್ಪೇಲೂರ.

,, ನಿಂಗಪ್ಪಾ ಯಲ್ಲಪ್ಪಾ ರಡ್ಡಿ, ಲೊ. ಸೆ. ಕುಸಕೂರ

,, ವೀರಪ್ಪಾ ಹುಚ್ಚಪ್ಪಾ ಮುಂಡಾಸದ, ಲೊ. ಸೆ. ಮೆಡ್ಲೇರಿ.

,, ನಾಗನಗೌಡಾ ಪಾಟೀಲ, ಲೊ. ಸೆ. ಸೂಡಂಬಿ.

,, ಭೀಮರಾವ ಗೋಪಾಳರಾವ ದೇಸಾಯಿ, ಲೊ. ಸೆ. ಹಾನಗಲ್ಲ.

,, ಹಣಮಂತ ವೆಂಕಾಜಿ ಕುಲಕರ್ಣಿ, ಲೊ. ಸೆ. ಹೆರೂರ.

... ಗೋಣಪ್ಪಗೌಡಾ ಪಾಟೀಲ ಕೊರ್ಲಹಳ್ಳಿ.

ಟೀಪು:—ಇವರು ಗ್ರಾಮಸ್ಥರೆಂದು ಅಸೋಸಿಯೇಶನದ ಕೆಲಸವನ್ನು ನೆಟ್ಟಗೆ ಮಾಡಿದ್ದರಿಂದ ಇವರಿಗೆ ರುಮಾಲಗಳನ್ನು ಇನಾಮಾಗಿ ಕೊಟ್ಟಿದೆ.

ಡ. ಪರಿಶಿಷ್ಟ (ಮುಂದೆ ಸಾಗಿದ್ದು)

ಬೆಳ್ಳಿಯ ಪದಕಗಳನ್ನು ಪಡೆದವರು.	ಸರಟೀಫಿಕೇಟು ಪಡೆದವರು.	ಇತರ ಇನಾಮು ಪಡೆದವರು.
	ಮಿ. ಮಹದೇವ ಶಿವಾಜಿ ಕುಲಕರ್ಣಿ, ಲೊ. ಸೆ. ಮಲಸಮುದ್ರ.	
	,, ಕರಡೆಪ್ಪಗೌಡಾ ಶಿದ್ದನಗೌಡಾ ಪಾಟೀಲ, ಲೊ. ಸೆ. ಸೊರಟೂರ.	
	,, ನಾರಾಯಣ ರುದ್ರೋ ಕುಲಕರ್ಣಿ, ಲೊ. ಸೆ. ಕೊಟುಮಚಿಗಿ.	
	,, ಭವಾನಸಾ ಧರ್ಮಸಾ ಕಬಾಡಿ, ಲೊ. ಸೆ. ಬಿಟಗೇರಿ (ಗದಗ).	
	,, ಗೋವಿಂದ ಕೃಷ್ಣ ಗೋಖಲೆ, ಲೊ. ಸೆ. ಗದಗ.	
	,, ವಿಶ್ವನಾಥಭಟ್ಟ ನರಶಿಂಹಭಟ್ಟ ಕುಲಕರ್ಣಿ, ಲೊ. ಸೆ. ಆಲೂರ (ಮುಂಡರಗಿ).	
	,, ರಾಮಚಂದ್ರ ಬಾಳಾಜಿ ಕುಲಕರ್ಣಿ, ಲೊ. ಸೆ. ಮೇವುಂಡಿ.	
	,, ಕೃಷ್ಣಪ್ಪನಾಯಿಕ ಮುಂಡರಗಿ, ಲೊ. ಸೆ. ಮುಂಡರಗಿ.	

,, ಮಹಾದೇವ ಮಲ್ಹಾರ ಕುಲಕರ್ಣಿ, ಲೊ. ಸೆ.
ದಂಡಾಪೂರ

,, ಕೆ. ಯಸ್. ಮೊರಬ, ಲೊ ಸೆ. ಸರಗುಂದ.

,, ವೆಂಕಟೇಶ ಲಕ್ಷ್ಮಣ ಜಕಾತಿ, ಲೊ. ಸೆ. ನೊರ

,, ತಮ್ಮಾಜಿ ಶ್ರೀನಿವಾಸ ಕುಲಕರ್ಣಿ, ಲೊ. ಸೆ.
ನವಲಗುಂದ

,, ಬಸನಗೌಡಾ ಪಾಟೀಲ, ಲೊ. ಸೆ. ಅಮರಗೋಳ

,, ಪರ್ವತಗೌಡಾ ಕೆಲ್ಲನಗೌಡಾ ಪಾಟೀಲ,
ಲೊ ಸೆ ತುಪ್ಪದಕುರಹಟ್ಟಿ.

,, ಕೃಷ್ಣಾಜಿ ದಾಸೋ ಕುಲಕರ್ಣಿ ಲೋ. ಸೇ
ನರೇಗಲ್ಲ (ರೋಣ)

,, ರಾ. ಸಾ. ಶಿ. ಪಿ. ಅಂಗಡಿ ಲೋ. ಸೇ. ಸೂಡಿ

,, ಆರ್ ಜಿ. ಅರಳಿಕಟ್ಟಿ ಕಾರಕೂನ ಮಾಮಲೇ
ದಾರ ಆಫೀಸ ರೋಣ.

,, ಚನ್ನಪ್ಪಾ ವೀರಭದ್ರಪ್ಪಾ ಶಾಲಾ ಮಾಸ್ತರ
ಜೊಯಿಸರ ಹರಳಹಳ್ಳಿ

,, ಚನ್ನಪ್ಪಗೌಡಾ ಅಯ್ಯನಗವಡಾ ಸ್ಕೂಲ ಮಾ
ಸ್ತರ ಹೊಸಹಳ್ಳಿ. (ರೋಣ)

ಡ. ಪರಿಶಿಷ್ಟ (ಮುಂದೆ ಸಾಗಿದ್ದು.)

ಬೆಳ್ಳಿಯ ಪದಕಗಳನ್ನು ಪಡೆದವರು	ಸರಟೀಫಿಕೇಟು ಪಡೆದವರು,	ಇತರ ಇನಾಮು ಪಡೆದವರು,
	,, ಶ್ರೀನಿವಾಸ ಭೀಮರಾವ ಭುಜಂಗ ಕಾರಕೂನ ಶ್ಯಾನಿಟರಿ ಅಸೋಸಿಯೇಶನ್ ಧಾರವಾಡ	
	,, ಜಿ. ಏ. ನಾಡಕರ್ಣಿ ಸಬ್ಬ ಅಸಿಸ್ಟಂಟ ಸರ್ಜನ್ ಧಾರವಾಡ.	
	,, ಆರ. ಜಿ. ಕೊಪ್ಪೀಕರ ಸಬ್ಬ ಅಸಿಸ್ಟಂಟ ಸರ್ಜನ್ ನವಲಗುಂದ	

ಮಹದೇವ ಮಲ್ಹಾರ ಕುಲಕರ್ಣಿ